ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಗಳು: ಚಾರಿತ್ರಿಕ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ತಿಪ್ಪಣ್ಣ

ಮಾರ್ಗದರ್ಶಕರು
ಡಾ. ಕೆ. ಮೋಹನ್‌ಕೃಷ್ಣ ರೈ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೭

ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಗಳು: ಚಾರಿತ್ರಿಕ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ತಿಪ್ಪಣ್ಣ

ಮಾರ್ಗದರ್ಶಕರು

ಡಾ. ಕೆ. ಮೋಹನ್‌ಕೃಷ್ಣ ರೈ

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ತಿಪ್ಪಣ್ಣ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಗಳು: ಚಾರಿತ್ರಿಕ ವಿಶ್ಲೇಷಣೆ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಚರಿತ್ರೆ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಕೆ. ಮೋಹನ್‌ಕೃಷ್ಣ ರೈ
ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೮.೧೧.೨೦೧೨

ಸಂಶೋಧಕರ ಘೋಷಣಾ ಪತ್ರ

ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಗಳು: ಚಾರಿತ್ರಿಕ ವಿಶ್ಲೇಷಣೆ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಚರಿತ್ರೆ ವಿಭಾಗದ, ಪ್ರಾಧ್ಯಾಪಕರಾದ **ಡಾ. ಕೆ. ಮೋಹನ್‌ಕೃಷ್ಣ ರೈ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

[signature]

ತಿಪ್ಪಣ್ಣ
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ

ದಿನಾಂಕ : 28-11-2017

ಪರಿವಿಡಿ

ಅಧ್ಯಾಯ: ಒಂದು

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ
೧.೨. ಅಧ್ಯಯನದ ವ್ಯಾಪ್ತಿ
೧.೩. ಅಧ್ಯಯನದ ಸಮೀಕ್ಷೆ
೧.೪. ಅಧ್ಯಯನದ ವಿಧಾನ
೧.೫. ಅಧ್ಯಯನದ ಸ್ವರೂಪ

ಅಧ್ಯಾಯ ಒಂದು

ಪ್ರಸ್ತಾವನೆ

ಭಾರತದ ಚರಿತ್ರೆಯಲ್ಲಿ ಹೈದರಾಬಾದ್ ನಿಜಾಮರ ಚರಿತ್ರೆಯನ್ನು ಗಮನಿಸುವಾಗ ಅವರನ್ನು ಏಕಮುಖವಾಗಿ ಅಧ್ಯಯನ ಮಾಡಿರುವ ಸಂಖ್ಯೆಯೇ ಹೆಚ್ಚಾಗಿ ಕಂಡುಬರುತ್ತದೆ. ಅದರಲ್ಲೂ ನಿಜಾಮ್ ಆಳ್ವಿಕೆಯ ಪ್ರದೇಶವಾದ ತೆಲಂಗಾಣ, ಮರಾಠವಾಡ ಮತ್ತು ಕರ್ನಾಟಕ ಪ್ರದೇಶಗಳಲ್ಲಿ ಕೂಡ ಬಿಡಿ ಬಿಡಿಯಾಗಿ ಅಧ್ಯಯನಗಳು ನಡೆದಿವೆ. ತೆಲಂಗಾಣದಲ್ಲಿ ನಿಜಾಮರ ಚರಿತ್ರೆಯನ್ನು ಒಂದು ಹಂತದವರೆಗೆ ಏಕಮುಖವಾಗಿ ಅಧ್ಯಯನ ನಡೆಸಲಾಯಿತು. ಅದರಲ್ಲಿ ನಿಜಾಮ್ ಆಳ್ವಿಕೆಯ ಕೊನೆಯ ಅವಧಿಯ ಘಟನೆಗಳನ್ನಿಟ್ಟುಕೊಂಡು ಇಡೀ ನಿಜಾಮರ ಆಳ್ವಿಕೆಯನ್ನು ನಿರ್ಧರಿಸಲಾಗಿತ್ತು. ಇದರಿಂದ ಯಾವುದೇ ವಸ್ತುನಿಷ್ಠವಾದ ಚರಿತ್ರೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಮರಾಠವಾಡ ಪ್ರದೇಶದಲ್ಲಿಯೂ ಇದೇ ಅಧ್ಯಯನ ಮಾದರಿಯನ್ನು ಅನುಸರಿಸಲಾಯಿತು. ಇತ್ತೀಚಿನ ಬದಲಾದ ಚರಿತ್ರೆ ಅಧ್ಯಯನ ಕ್ರಮದಿಂದಾಗಿ ಈ ಎರಡೂ ಪ್ರದೇಶಗಳಲ್ಲಿ ನಿಜಾಮರ ರಾಜಕೀಯ ಚರಿತ್ರೆಯ ಜೊತೆಗೆ ಆರ್ಥಿಕ ಮತ್ತು ಸಾಮಾಜಿಕ ಚರಿತ್ರೆ ಕುರಿತಾದ ಅಧ್ಯಯನಗಳು ನಡೆಯಲಾರಂಭಿಸಿವೆ. ಆದರೆ ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಿಜಾಮರನ್ನು ಕೇವಲ ಸ್ವಾತಂತ್ರ್ಯ ಚಳವಳಿ, ರಜಾಕಾರರ ದಬ್ಬಾಳಿಕೆ ಹಾಗೂ ಭಾರತದಲ್ಲಿ ವಿಲೀನ ಪ್ರಕ್ರಿಯೆಗಳನ್ನು ಇಟ್ಟುಕೊಂಡು ಇದೇ ನಿಜಾಮರ ಚರಿತ್ರೆ ಎನ್ನುವ ರೀತಿಯಲ್ಲಿ ಬಿಂಬಿಸಲಾಯಿತು. ಈ ರೀತಿಯಾದ ಅಧ್ಯಯನಗಳಿಂದ ನಿಜಾಮರ ೨೨೫ ವರ್ಷಗಳ ದೀರ್ಘ ಆಳ್ವಿಕೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶದ ರಾಜಕೀಯದ ಜೊತೆಗೆ ಆಡಳಿತ, ಆರ್ಥಿಕತೆ ಹಾಗೂ ಸಾಮಾಜಿಕ ನೆಲೆಗಳ ಚರಿತ್ರೆಯೂ ರಚನೆಗೊಂಡರೆ ಮಾತ್ರ ನಿಜಾಮರ ವಾಸ್ತವ ಚರಿತ್ರೆಯನ್ನು ಅರ್ಥೈಸಿಕೊಳ್ಳಲು ಸಾಧ್ಯ.

ಕರ್ನಾಟಕದ ಚರಿತ್ರೆ ಬರವಣಿಗೆಯು ಬಹುತೇಕ ಮೈಸೂರುಕೇಂದ್ರಿತವಾಗಿಯೇ ರಚನೆಗೊಂಡಿತು. ಅದರೊಳಗೆ ಹೈದರಾಬಾದ್ ಕರ್ನಾಟಕ ಹಾಗೂ ಬಾಂಬೆ ಮತ್ತು ಮದರಾಸು

ಪ್ರೆಸಿಡೆನ್ಸಿಗಳಿಗೆ ಒಳಪಟ್ಟಿದ್ದ ಪ್ರದೇಶಗಳು ಸ್ಥಾನವನ್ನು ಪಡೆದುಕೊಂಡಿರಲಿಲ್ಲ. ಅದರಲ್ಲೂ ಬಹಮನಿ, ಆದಿಲ್‌ಶಾಹಿ ಹಾಗೂ ನಿಜಾಮ್ ಆಳ್ವಿಕೆಯ ಕುರಿತಾದ ಅಧ್ಯಯನಗಳು ದೂರವೇ ಉಳಿದವು. ಇದಕ್ಕೆ ಅವು ಮುಸ್ಲಿಂ ಮನೆತನಗಳು ಎನ್ನುವ ಕೋಮುವಾದಿ ನೆಲೆ ಒಂದು ಕಾರಣವಾದರೆ, ಬಹುತೇಕ ಆಕರಗಳು ಉರ್ದು ಭಾಷೆಯಲ್ಲಿರುವುದು ಇನ್ನೊಂದು ಕಾರಣ. ರಾಷ್ಟ್ರೀಯವಾದಿ ಹಾಗೂ ಸಾಮ್ರಾಜ್ಯಶಾಹಿ ವಾದ–ಪ್ರತಿವಾದದ ಸುಳಿಯಲ್ಲಿಯೇ ಸಿಲುಕಿದ್ದ ಚರಿತ್ರೆಕಾರರು ಅದರಿಂದ ಹೊರಬಂದು ನೈಜ ಚರಿತ್ರೆಯನ್ನು ನಿರ್ಮಿಸುವ ಪ್ರಯತ್ನಕ್ಕೂ ಮುಂದಾಗಲಿಲ್ಲ. ಕೊನೆಯ ನಿಜಾಮನನ್ನು ಕೇಂದ್ರವಾಗಿಟ್ಟುಕೊಂಡು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಒಂದಷ್ಟು ಅಧ್ಯಯನಗಳು ನಡೆದವು. ಇದರಿಂದ ಒಟ್ಟು ನಿಜಾಮ್ ಆಳ್ವಿಕೆಯ ಸ್ವರೂಪವನ್ನು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ.

ಭಾರತವು ಬಹು ಸಂಸ್ಕೃತಿಯ ನಾಡಾಗಿದ್ದುದರಿಂದ ಬ್ರಿಟಿಶರು ಭಾರತವನ್ನು ಅರ್ಥೈಸಿ ಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಭಾರತದ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳದೆ, ಅವರು ಇಲ್ಲಿ ಯಾವುದೇ ವ್ಯಾಪಾರ, ವಹಿವಾಟು ಮತ್ತು ರಾಜ್ಯಾಡಳಿತ ನಡೆಸುವುದು ಕಷ್ಟದ ವಿಷಯವಾಗಿತ್ತು. ಇದನ್ನರಿತ ವಸಾಹತುಶಾಹಿ ಆಡಳಿತಗಾರರು ಸಾಮ್ರಾಜ್ಯಶಾಹಿ ಧೋರಣೆಯಂತೆ ಭಾರತದ ಚರಿತ್ರೆಯನ್ನು ಕಟ್ಟುವ ಪ್ರಯತ್ನ ಮಾಡಿದರು. ಅದಕ್ಕೆ ಅನುಗುಣವಾಗಿ ಪೌರ್ವಾತ್ಯವಾದಿಗಳು ಆರಂಭದಲ್ಲಿ ಪೂರ್ವದ ದೇಶಗಳನ್ನು ತಮ್ಮ ವಸಾಹತು ಚಟುವಟಿಕೆಗಳಿಂದ ರಾಜಕೀಯ, ಆರ್ಥಿಕ ಹಿತಾಸಕ್ತಿಗಳಿಂದ ಶೋಧಿಸುವ ಪ್ರಕ್ರಿಯೆಯನ್ನು ಆರಂಭಿಸಿದರು. ಪೂರ್ವದ ದೇಶಗಳನ್ನು ವಸಾಹತುಗೆ ಒಳಪಡಿಸಿದ ನಂತರ ಅವುಗಳ ಸಂಪನ್ಮೂಲಗಳನ್ನು ಅರಿಯಲು ವಸಾಹತು ಸರ್ಕಾರಕ್ಕೆ ಪ್ರೋತ್ಸಾಹಿಸಿದರು. ಹೀಗೆ ಮುಂದುವರೆದು ವಸಾಹತುಶಾಹಿಗಳು ಈ ಪೌರ್ವಾತ್ಯವಾದಿಗಳ ಸಂಪ್ರದಾಯವನ್ನು ಯಥಾವತ್ತಾಗಿ ಅಳವಡಿಸಿಕೊಂಡು ಭಾರತದ ಚರಿತ್ರೆಯನ್ನು ಬರೆಯುತ್ತಾ ಭಾರತೀಯರು ಸ್ವಯಂ ಆಡಳಿತ ಅನುಭವವಿಲ್ಲದವರು, ಸ್ವಾತಂತ್ರ್ಯಕ್ಕೆ ಅನರ್ಹರು ಎಂಬುದಾಗಿ ಹೇಳಿ ಬ್ರಿಟಿಶ್ ಆಡಳಿತವನ್ನು ಎತ್ತಿ ಹಿಡಿಯುವ ಅಥವಾ ಬಲಪಡಿಸುವ ಕೆಲಸವನ್ನು ಮಾಡಿದರು. ಅಂತಹ ಚರಿತ್ರೆಕಾರರೆಂದರೆ ವಿ.ಎಸ್.ಸ್ಮಿತ್, ಜೇಮ್ಸ್ ಮಿಲ್, ಲೇನಪೋಲ್, ಮಾರ್ಕ್‌ವಿಲ್ಕ್ಸ್ ಮುಂತಾದವರು. ಈ ಹಿನ್ನೆಲೆಯನ್ನಿಟ್ಟುಕೊಂಡು ನೂರಾರು ಕೃತಿಗಳು ರಚನೆಗೊಂಡವು. ಹಾಗೇ ಈ ವಸಾಹತುಶಾಹಿಗಳು ಮುಂದುವರೆದು ಭಾರತದ ಚರಿತ್ರೆಯನ್ನು ಹಿಂದೂ, ಮುಸ್ಲಿಮ್, ಬ್ರಿಟಿಶ್(ಆಧುನಿಕ) ಎಂಬ ವಿಂಗಡಣೆಯ ಮೂಲಕ ಕೋಮುವಾದ ಭಾವನೆಯನ್ನು ಮೂಡಿಸುವ ಕೆಲಸವನ್ನು ವಸಾಹತುಶಾಹಿ ಚರಿತ್ರೆಕಾರರು ವ್ಯವಸ್ಥಿತವಾಗಿ ಮಾಡಿದರು. ಹೀಗೆ ಮಾಡುವ ಮೂಲಕ ಭಾರತೀಯರಲ್ಲಿ ಕೋಮುವಾದವನ್ನು ಹುಟ್ಟುಹಾಕುತ್ತಾ ತಮ್ಮ ವಸಾಹತುಶಾಹಿ

ಆಳ್ವಿಕೆಯನ್ನು ಮುಂದುವರೆಸಿದರು. ವಸಾಹತುಶಾಹಿ ಪ್ರಭುತ್ವ ನಿರ್ಮಾಣಕ್ಕೆ ಈ ರೀತಿಯ ಚರಿತ್ರೆಯ ನಿರ್ಮಾಣದ ಅವಶ್ಯಕತೆ ಇತ್ತು. ಅದಲ್ಲದೆ ಭಾರತದಲ್ಲಿನ ಮಧ್ಯಕಾಲೀನ ಮುಸ್ಲಿಮ್ ಆಳ್ವಿಕೆಯನ್ನು ಅಂಧಕಾರದ ಯುಗವೆಂದು ಬಿಂಬಿಸುವಂತೆ ಮಾಡಿ ಕತ್ತಲೆ ಯುಗಕ್ಕೆ ಹೋಲಿಸಿದರು. ಹೀಗೆ ಪೌರ್ವಾತ್ಯವಾದಿಗಳು ಹಾಗೂ ಸಾಮ್ರಾಜ್ಯಶಾಹಿ ಚರಿತ್ರೆಕಾರರು ತಮ್ಮ ಪಾಶ್ಚಿಮಾತ್ಯ ಗ್ರಹಿಕೆಯನ್ನು ಪೂರ್ವದ ಮೇಲೆ ಹೇರುವುದಕ್ಕೆ ಚರಿತ್ರೆಯನ್ನು ಮಾಧ್ಯಮವನ್ನಾಗಿ ಬಳಸಿಕೊಂಡರು.

ವಸಾಹತುಶಾಹಿ ಹಿನ್ನೆಲೆಯಿಂದ ರಚನೆಗೊಂಡ ಕೃತಿಗಳು ಮತ್ತು ಮೂಡಿ ಬಂದ ಭಾವನೆಗಳನ್ನು ಸಮರ್ಥವಾಗಿ ಎದುರಿಸುವುದಕ್ಕಾಗಿ ಹುಟ್ಟಿಕೊಂಡ ರಾಷ್ಟ್ರೀಯವಾದಿ ಚರಿತ್ರೆಕಾರರು ವಸಾಹತುಶಾಹಿ ಚರಿತ್ರೆಕಾರರ ಚಿಂತನೆಗಳನ್ನು ವಿರೋಧಿಸುವ ನೆಪದಲ್ಲಿ ಅವರ ಹಲವಾರು ಅಭಿಪ್ರಾಯಗಳನ್ನು ತಮ್ಮ ಸಿದ್ಧಾಂತದೊಳಗೆ ಸೇರಿಸಿಕೊಂಡರು. ಅಷ್ಟೇ ಅಲ್ಲದೆ ವಸಾಹತುಶಾಹಿಗಳ ಧೋರಣೆಯಾದ ಹಿಂದೂ-ಮುಸ್ಲಿಮ್ ಎನ್ನುವ ವರ್ಗೀಕರಣವನ್ನು ರಾಷ್ಟ್ರೀಯವಾದಿ ಚರಿತ್ರಕಾರರು ಒಪ್ಪಿಕೊಂಡು ಭಾರತದ ಚರಿತ್ರೆಯನ್ನು ಕೋಮುವಾದದ ನೆಲೆಯಲ್ಲಿ ಚಿತ್ರಿಸುತ್ತಾ ಹೋದರು. ಈ ರಾಷ್ಟ್ರೀಯವಾದಿ ಚರಿತ್ರಕಾರರು ಹೆಚ್ಚಾಗಿ ಪ್ರಭುತ್ವ ಕೇಂದ್ರಿತ ಹಾಗೂ ಧಾರ್ಮಿಕ ಕೇಂದ್ರಿತ ಚರಿತ್ರೆಗೆ ಹೆಚ್ಚಿನ ಒತ್ತನ್ನು ನೀಡುತ್ತಾ ಚರಿತ್ರೆಯನ್ನು ರಚನೆ ಮಾಡಿದರು. ಹೀಗೆ ಈ ಎರಡು ಅಂಶಗಳ ಮೂಲಕ ನಿರ್ಮಾಣವಾದ ಚರಿತ್ರೆಯನ್ನು ಭಾರತದ ಚರಿತ್ರೆ ಎಂಬ ರೀತಿಯಲ್ಲಿ ಬಿಂಬಿಸಿದರು. ಅಂತಹ ಪ್ರಮುಖ ರಾಷ್ಟ್ರೀಯವಾದಿ ಚರಿತ್ರೆಕಾರರೆಂದರೆ ಆರ್.ಸಿ.ಮುಜುಮದಾರ್, ಆರ್.ಜಿ.ಭಂಡಾರಕರ್, ಕೆ.ಎ.ನೀಲಕಂಠಶಾಸ್ತ್ರಿ, ಕೆ.ಪಿ.ಜಯಸ್ವಾಲ್, ಎ.ಎಸ್.ಅಲ್ಟೇಕರ್ ಜಾದುನಾಥ ಸರ್ಕಾರ್‌ಮುಂತಾದವರು.

ಹೀಗೆ ಈ ರಾಷ್ಟ್ರೀಯವಾದಿ ಚರಿತ್ರಕಾರರು ಚರಿತ್ರೆಯನ್ನು ಅರಸುಮನೆತನಗಳ ರಾಜಕೀಯಕ್ಕಷ್ಟೇ ಸೀಮಿತಗೊಳಿಸಿಕೊಂಡರು. ಹೆಚ್ಚೆಂದರೆ ಅರಸುಮನೆತನಗಳೊಂದಿಗೆ ಆಯಾ ಕಾಲದಲ್ಲಿ ಪ್ರಚಾರದಲ್ಲಿದ್ದ ಧರ್ಮಗಳ ಅಧ್ಯಯನವನ್ನು ನಡೆಸಿದರು. ಆದರೆ ಸಮಾಜದಲ್ಲಿನ ಅಲಕ್ಷಿತ ಜನರ ಬದುಕು ಸಂಸ್ಕೃತಿ, ಹೋರಾಟಗಳು ವಸಾಹತುಶಾಹಿಗಳ ಕೈಯಲ್ಲಿ ಹೇಗೆ ಗೌಣವಾಗಿದ್ದವೋ, ಅದೇ ರೀತಿಯಲ್ಲಿ ರಾಷ್ಟ್ರೀಯವಾದಿ ಚರಿತ್ರಕಾರರಲ್ಲಿ ಕೂಡ ಮುಂದುವರೆಯಿತು.

ನಂತರ ಬಂದ ಮಾರ್ಕ್ಸ್‌ವಾದಿ ಚರಿತ್ರೆಕಾರರು ವಸಾಹತುಶಾಹಿ ಮತ್ತು ರಾಷ್ಟ್ರೀಯವಾದಿ ಚರಿತ್ರೆಕಾರರಲ್ಲಿ ಗೌಣವಾಗಿದ್ದ ಜನರನ್ನು ಜನಕೇಂದ್ರಿತ ಅಧ್ಯಯನವನ್ನು ಕೇಂದ್ರವಾಗಿಟ್ಟುಕೊಂಡು ಭಾರತದ ಚರಿತ್ರೆಯನ್ನು ಭಿನ್ನ ರೀತಿಯಲ್ಲಿ ವಿಶ್ಲೇಷಿಸಿದರು. ಹೀಗೆ ಏಕಮುಖವಾಗಿ ಸಾಗುತ್ತಿದ್ದ ಭಾರತದ ಚರಿತ್ರೆ ಬರವಣಿಗೆಯ ದಿಕ್ಕನ್ನು ಬದಲಾಯಿಸಿ ರಾಜಕೀಯದಿಂದ ದೂರವಾದ

ಚರಿತ್ರೆಯತ್ತ ಒಲವನ್ನು ತೋರಿಸಿದವರಲ್ಲಿ ಡಿ.ಡಿ.ಕೊಸಾಂಬಿ, ಆರ್.ಎಸ್.ಶರ್ಮಾ, ರೋಮಿಲಾ ಥಾಪರ್, ಡಿ.ಎನ್.ಝಾ, ಇರ್ಫಾನ್ ಹಬೀಬ್, ಬಿಪನ್ ಚಂದ್ರ, ಸುಮಿತ್ ಸರ್ಕಾರ್ ಮುಂತಾದವರು ಪ್ರಮುಖರು. ಜನರ ಅಧ್ಯಯನ ನಿಜವಾದ ಅರ್ಥದಲ್ಲಿ ಆರಂಭಗೊಂಡಿರುವುದು ಇವರ ಬರವಣಿಗೆಗಳಿಂದ. ರಾಜ್ಯದ ಚರಿತ್ರೆಯೆಂದರೆ ಅದು ಅರಸರ ಚರಿತ್ರೆ, ಮೇಲ್ವರ್ಗದ ಜನರ ಚರಿತ್ರೆ ಎನ್ನುವ ಪೂರ್ವಗ್ರಹಪೀಡಿತ ಸಿದ್ಧಾಂತಗಳನ್ನು ಒಡೆಯುವುದರಲ್ಲಿ ಇವರ ಬರವಣಿಗೆಗಳು ಯಶಸ್ವಿಯಾದವು.

೧.೧. ಅಧ್ಯಯನದ ಉದ್ದೇಶ

ಪ್ರಸ್ತುತ ಕಾಲದಲ್ಲಿ ಚರಿತ್ರೆಯ ಗ್ರಹಿಕೆಗಳು ಬದಲಾಗುತ್ತಿವೆ. ಹೊಸ ವಿಚಾರಗಳು ಹರಿದುಬರುತ್ತಿವೆ. ಸ್ಥಳೀಯ ಪ್ರದೇಶಗಳ ಚರಿತ್ರೆಯನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಇದು ಸ್ಥಳೀಯ ಚರಿತ್ರೆ ಅಧ್ಯಯನ ಎಂದು ಜನಪ್ರಿಯವಾಗುತ್ತಿದೆ. ಅಂದರೆ ಪ್ರತಿಯೊಂದು ಪ್ರದೇಶಕ್ಕೂ, ವಿಷಯಕ್ಕೂ ತನ್ನದೇ ಆದಂತಹ ಚರಿತ್ರೆ ಇದ್ದೇ ಇರುತ್ತದೆ. ಸ್ಥಳೀಯ ಪ್ರದೇಶಗಳ ಚರಿತ್ರೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಉತ್ತಮ ಫಲಿತಾಂಶ ವ್ಯಕ್ತವಾಗುವುದಲ್ಲದೆ ಸಾಮಾಜಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಅಂಶಗಳು ಕಂಡುಬರುತ್ತವೆ. ಸ್ಥಳೀಯ ಚರಿತ್ರೆ ಅಧ್ಯಯನ ಕೈಕೊಳ್ಳುವಾಗ ಚಾರಿತ್ರಿಕ ದೃಷ್ಟಿಯಿಂದ ಪರಿಶೀಲಿಸುವುದು ಅತ್ಯಂತ ಉಪಯುಕ್ತವಾದುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನು ಒಳಗೊಂಡಿದೆ.

ನಿಜಾಮ್ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶಗಳ ಭೌಗೋಳಿಕತೆ ಯಾವ ರೀತಿಯಾಗಿತ್ತು. ಈ ಭೌಗೋಳಿಕತೆಯು ಇಲ್ಲಿನ ಜನಜೀವನ ಹಾಗೂ ಸಾಮಾಜಿಕ ರಚನೆಯಲ್ಲಿ ಯಾವ ರೀತಿಯಾದ ಪಾತ್ರ ವಹಿಸಿತ್ತು ಎನ್ನುವ, ಪ್ರಕೃತಿ ಮತ್ತು ಮಾನವ ಕೇಂದ್ರಿತವಾದ ಚರ್ಚೆಯನ್ನು ನಡೆಸುವ ಉದ್ದೇಶವನ್ನು ಹೊಂದಿದೆ. ಹೈದರಾಬಾದ್ ಕರ್ನಾಟಕ ಪ್ರದೇಶವು ನಿಜಾಮ್ ಆಳ್ವಿಕೆ ಪೂರ್ವದಲ್ಲಿ ಯಾವ ಮನೆತನದ ಅಧೀನದಲ್ಲಿತ್ತು. ಆ ಮನೆತನಗಳ ಕಾಲದ ಆರ್ಥಿಕತೆ ಮತ್ತು ಸಾಮಾಜಿಕತೆಯನ್ನು ಚರ್ಚೆ ಮಾಡುವ ಉದ್ದೇಶವನ್ನು ಹೊಂದಿದೆ. ನಿಜಾಮರು ಆಡಳಿತವನ್ನು ಅನೇಕ ವಿಭಾಗಗಳನ್ನು ಮಾಡಿಕೊಂಡು, ಪ್ರತಿಯೊಂದು ವಿಭಾಗಕ್ಕೆ ಪ್ರತ್ಯೇಕವಾದ ಅಧಿಕಾರಿಯನ್ನು ನೇಮಿಸಿ, ಆ ಅಧಿಕಾರಿಗಳ ಮೂಲಕ ತಮ್ಮ ಉದ್ದೇಶವನ್ನು ಈಡೇರಿಸಿಕೊಂಡ ಬಗ್ಗೆ ಚರ್ಚಿಸುವ ಉದ್ದೇಶ ಹೊಂದಿದೆ. ಆಡಳಿತದಲ್ಲಿನ ಬದಲಾವಣೆಗಳು, ನ್ಯಾಯ ತೀರ್ಮಾನ, ಸ್ಥಳೀಯ ವ್ಯವಸ್ಥೆಯ ಉದ್ದೇಶ ಹೊಂದಿದೆ. ಸಾಮಾಜಿಕ ರಚನೆ ಊಳಿಗಮಾನ್ಯತೆ, ಸಾಮಾಜಿಕ ಸಂಬಂಧಗಳು ಮತ್ತು ವಿವಿಧ ಧರ್ಮಗಳು ಪರಸ್ಪರ ಹೊಂದಿರುವ ಸಂಬಂಧಗಳನ್ನು ವಿಶ್ಲೇಷಿಸುವ

ಉದ್ದೇಶ ಪ್ರಸ್ತುತ ಅಧ್ಯಯನಕ್ಕಿದೆ. ಆರಾಧನೆ ಮತ್ತು ಸಂಪ್ರದಾಯಗಳ ಮೂಲಕ ಕೆಳವರ್ಗವನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳುವ ಉದ್ದೇಶದಿಂದ ಪುರೋಹಿತಶಾಹಿ ವರ್ಗ ಮಾಡಿರುವ ಧಾರ್ಮಿಕ ರಾಜಕಾರಣವನ್ನು ಚರ್ಚಿಸುವ ಉದ್ದೇಶ ಹೊಂದಿದೆ. ಭಾಷಿಕ ಯಜಮಾನಿಕೆಗೆ ಸಂಬಂಧಪಟ್ಟ ವಿಚಾರ ಮತ್ತು ಉರ್ದು ಭಾಷೆ ಕುರಿತು ವಿಶ್ಲೇಷಿಸುವ ಉದ್ದೇಶ ಹೊಂದಿದೆ. ನಿಜಾಮರು ಸಂಸ್ಥಾನದ ಆರ್ಥಿಕತೆಯನ್ನು ವೃದ್ಧಿಸುವ ಉದ್ದೇಶದಿಂದ ಕೈಗೊಂಡ ಯೋಜನೆಗಳನ್ನು ವಿಶ್ಲೇಷಿಸುತ್ತಾ ಸಂತೆ ಮತ್ತು ಮಾರುಕಟ್ಟೆಗಳು ಆರ್ಥಿಕ ಪರಿವರ್ತನೆಯಲ್ಲಿ ವಹಿಸಿದ ಪಾತ್ರ, ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಸ್ಥಾಪಿಸುವುದಕೋಸ್ಕರ ಬ್ರಿಟಿಷರಿಗೆ ಅನುಕೂಲವಾಗುವಂತೆ ಜಾರಿಗೆ ತಂದ ವ್ಯಾಪಾರ ನೀತಿಗಳನ್ನು ಚರ್ಚಿಸುವ ಉದ್ದೇಶ ಹೊಂದಿದೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ ಹಾಗೂ ಅನಾಭಿವೃದ್ಧಿ ಕುರಿತಾದ ವಾದ ವಿವಾದಗಳು ನಿಜಾಮ್ ಆಳ್ವಿಕೆಯನ್ನು ಕೇಂದ್ರೀಕರಿಸಿಕೊಂಡು ನೋಡುವ ಉದ್ದೇಶವಾಗಿದೆ. ನಿಜಾಮರ ಆಡಳಿತದಲ್ಲಿನ ಅಸಮಾನತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡುವ ಉದ್ದೇಶದಿಂದ ಜಾರಿಗೆ ತಂದ ಮುಲ್ಕಿ ಮೀಸಲಾತಿಯನ್ನು ~~ಕುರಿತು~~ ಚರ್ಚಿಸುವ ಉದ್ದೇಶ ಹೊಂದಿದೆ. ಹಾಗೆ ಸ್ವಾತಂತ್ರ್ಯ ನಂತರ ಈ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದ ಕಾಯಿದೆ ಮತ್ತು ಯೋಜನೆಗಳನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರತಿಯೊಂದು ಜ್ಞಾನಶಿಸ್ತಿಗೆ ಅದರದೇ ಮೇರುಗಳಿರುತ್ತವೆ. ಇದರಿಂದ ವಿಷಯವನ್ನು ಸಮಗ್ರವಾಗಿ ವಿವರಿಸಲು ಸಾಧ್ಯ ಮತ್ತು ಅರ್ಥೈಸಿಕೊಳ್ಳಲು ಸುಲಭವಾಗುತ್ತದೆ. ಪ್ರಸ್ತುತ ಮಹಾಪ್ರಬಂಧವು ಕಾಲ ಮತ್ತು ಪ್ರದೇಶದ ಚೌಕಟ್ಟಿಗೆ ಒಳಪಟ್ಟಿದೆ. ಪ್ರಸ್ತುತ ಮಹಾಪ್ರಬಂಧವನ್ನು ನಿಜಾಮ್ ಕಾಲವೆಂದು ಪರಿಗಣಿಸಲ್ಪಡುವ ೧೭೨೪ರಿಂದ ೧೯೪೮ರವರೆಗೆ ಸೀಮಿತಗೊಳಿಸಲಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶವನನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ನಿಜಾಮರ ಅಧಿಕಾರ ಸ್ಥಾಪನೆ, ಉತ್ತರಾಧಿಕಾರತ್ವಕ್ಕಾಗಿ ನಡೆದ ಕದನದ ಲಾಭವನ್ನು ಪಡೆದು ದಕ್ಷಿಣ ಭಾರತದಲ್ಲಿ ಪ್ರಭುತ್ವದ ಸ್ಥಾಪನೆಗಾಗಿ ಬ್ರಿಟಿಶರು ಮತ್ತು ಫ್ರೆಂಚರ ನಡುವಿನ ಪೈಪೋಟಿ, ದಖನ್ ಸಾರ್ವಭೌಮತ್ವಕ್ಕಾಗಿ ನಡೆದ ಕರ್ನಾಟಕ ಯುದ್ಧಗಳು; ಈ ಸಂದರ್ಭದಲ್ಲಿ ನಿಜಾಮನ ಪಾತ್ರ; ಜೊತೆಗೆ ತನ್ನ ಅಸ್ತಿತ್ವಕ್ಕಾಗಿ ಬ್ರಿಟಿಶರ ಸಹಾಯಕ ಸೈನ ಪದ್ಧತಿಗೆ ಸಹಿ ಹಾಕುವುದರ ಮೂಲಕ ಬ್ರಿಟಿಶ್ ಆಶ್ರಿತ ರಾಜ್ಯವಾಯಿತು. ಆಡಳಿತ ಆರಂಭಿಸಿದ ಆರಂಭದಲ್ಲಿ ಮೊಗಲ

ನೀತಿಯ ಜೊತೆಗೆ ಬ್ರಿಟಿಶರ ಆಡಳಿತ ನೀತಿಗೆ ಪ್ರಭಾವಿತ ಆಗುವುದರೊಂದಿಗೆ ತನ್ನದೇಯಾದ ಸಮ್ಮಿಶ್ರ ಆಡಳಿತ ನೀತಿಯನ್ನು ಪ್ರಚಾರಪಡಿಸಿರುವುದು ಅಧ್ಯಯನದ ವ್ಯಾಪ್ತಿಯೊಳಗೆ ಸೇರಿದೆ.

ನಿಜಾಮರು ತಮ್ಮ ಆಡಳಿತವನ್ನು ವ್ಯವಸ್ಥಿತವಾದ ರೀತಿಯಲ್ಲಿ ಕೇಂದ್ರೀಕರಿಸುವುದರ ಜೊತೆಗೆ ಸ್ಥಳೀಯ ಪ್ರಬಲ ಸಮುದಾಯದವರನ್ನು ಆಡಳಿತ ಅಧಿಕಾರಿಯನ್ನಾಗಿ ನೇಮಿಸುವುದು. ಹೀಗೆ ನೇಮಕವಾದ ಈ ವರ್ಗದವರು ಭೂಮಾಲೀಕರಾಗಿ ರೂಪುಗೊಳ್ಳುವುದರ ಜೊತೆಗೆ ಸ್ಥಳೀಯ ಮಟ್ಟದಲ್ಲಿ ನಾಡಗೌಡ, ದೇಸಾಯಿ, ದೇಶಮುಖ ಎಂಬ ಸಾಮಂತ ಮನೆತನಗಳು ಉಗಮವಾಗಿರುವುದು ಅಧ್ಯಯನದ ವ್ಯಾಪ್ತಿಯಲ್ಲಿದೆ. ಈ ಭೂಮಾಲೀಕ ವರ್ಗವು ಮಧ್ಯಮ ವರ್ಗದವರಿಗೆ ಭೂಮಿಯನ್ನು ಗೇಣಿ ನೀಡುವುದರ ಮೂಲಕ ಹೊಸ ಭೂಮಾಲೀಕ ವರ್ಗದ ಉದಯಕ್ಕೆ ಕಾರಣವಾಗಿರುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿವೆ.

ನಿಜಾಮರು ಸಂಸ್ಥಾನದ ಪ್ರಗತಿಗಾಗಿ ಬದಲಾವಣೆಗೆ ತಕ್ಕಂತೆ ಆಡಳಿತದಲ್ಲಿ ಜಾರಿಗೆ ತಂದ ಹೊಸ ಆಡಳಿತಾತ್ಮಕ ನೀತಿಗಳು, ಆರ್ಥಿಕವಾಗಿ ಸದೃಢವಾಗಲು ಅಳವಡಿಸಿಕೊಂಡ ಆರ್ಥಿಕ ಮಾರ್ಗಗಳು, ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಭುತ್ವವು ಕೈಗೊಂಡ ಅಭಿವೃದ್ಧಿಗೆ ಕಾರ್ಯಗಳ ಜೊತೆಗೆ ಅನಭಿವೃದ್ಧಿಗೆ ಕಾರಣಗಳನ್ನು ಕುರಿತು ವಿವರಿಸಲಾಗಿದೆ. ನಿಜಾಮರು ಉರ್ದು ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತಂದು ಭಾಷಾ ಯಜಮಾನಿಕೆಯನ್ನು ಸ್ಥಾಪಿಸುವಲ್ಲಿ ನಿಜಾಮರ ತೀರ್ಮಾನಗಳು ಅಧ್ಯಯನ ವ್ಯಾಪ್ತಿಗೆ ಒಳಪಟ್ಟಿವೆ.

ನಿಜಾಮ್ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದ ಹಿಂದುಳುವಿಕೆಯಲ್ಲಿ ಭೌಗೋಳಿಕತ್ವ ಅಭಿವೃದ್ಧಿಗೆ ಪೂರಕವಾಗಿ ಇಲ್ಲದಿರುವುದು. ಪ್ರಭುತ್ವವು ಅಭಿವೃದ್ಧಿಗಾಗಿ ಕೈಗೊಂಡ ಯೋಜನೆಗಳನ್ನು ಅಧ್ಯಯನದ ವ್ಯಾಪ್ತಿಗೆ ಸೇರಿಸಲಾಗಿದೆ. ಜೊತೆಗೆ ಅಭಿವೃದ್ಧಿ ನೆಪಕ್ಕಾಗಿ ಜಾರಿಗೆ ತಂದ ಮುಲ್ಕಿ ಮೀಸಲಾತಿ ಕಾಯಿದೆಯಿಂದ ಆಧುನಿಕ ಪ್ರಜಾಪ್ರಭುತ್ವ ಸರ್ಕಾರವು ಜಾರಿಗೆ ತಂದೆ ೩೭೧(ಜೆ)ಕಲಮ್ ಅಧ್ಯಯನದ ವ್ಯಾಪ್ತಿಗೆ ಸೇರಿಸಿ ಅಧ್ಯಯನ ನಡೆಸಲಾಗಿದೆ.

೧.೩. ಅಧ್ಯಯನಗಳ ಸಮೀಕ್ಷೆ

ಹೈದರಾಬಾದ್ ನಿಜಾಮರ ಕಾಲದ ಹೈದರಾಬಾದ್ ಕರ್ನಾಟಕ ಪ್ರದೇಶದ ಆಡಳಿತ, ಆರ್ಥಿಕ ಮತ್ತು ಸಮಾಜ ಬಗೆಗೆ ಕೆಲವು ಅಧ್ಯಯನಗಳು ನಡೆದಿವೆ. ಆ ಅಧ್ಯಯನಗಳ ಸಮೀಕ್ಷೆಯು ಒಂದು ವಿಷಯದ ಬಗೆಗೆ ಪ್ರಮುಖವಾಗಿ ಕಂಡುಬರುತ್ತವೆ. ಈ ಕೆಳಗೆ ಅಂತಹ ಅಧ್ಯಯನಗಳ ಕುರಿತು ಚರ್ಚಿಸಲು ಪ್ರಯತ್ನಿಸಲಾಗಿದೆ. ಈ ಅಧ್ಯಯನಗಳೇ ವಿವಿಧ ಬಗೆಯ ಆಕರಗಳು ಸಹ ಆಗಿವೆ ಎಂಬುದು ಗಮನಾರ್ಹ. ಈ ಆಕರಗಳಲ್ಲಿ ಸರ್ಕಾರದ ದಾಖಲೆಗಳು

ಮತ್ತು ವಿವಿಧ ಬಗೆಯ ಅಧ್ಯಯನಗಳನ್ನು ಕಾಣಬಹುದು. ಪ್ರಸ್ತುತ ಅಧ್ಯಯನಕ್ಕೆ ಜನಗಣತಿಯ ವರದಿಗಳು, ಹೈದರಾಬಾದ್ ಸಂಸ್ಥಾನದ ಆಡಳಿತ ವರದಿಗಳು ಮತ್ತು ದಾಖಲೆಗಳು ಪ್ರಮುಖವಾದ ಆಕರಗಳಾಗಿವೆ. ಇದರೊಂದಿಗೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಿಜಾಮರ ಆಳ್ವಿಕೆಯನ್ನು ಕುರಿತ ವಿವಿಧ ಬಗೆಯ ಅಧ್ಯಯನಗಳಲ್ಲಿ ಪಿಎಚ್.ಡಿ ಮಹಾಪ್ರಬಂಧಗಳು, ಕೃತಿಗಳು, ಸ್ಮರಣೆ ಸಂಚಿಕೆಗಳು, ಪತ್ರಿಕಾ ವರದಿಗಳು, ಲೇಖನಗಳು ಮತ್ತು ಅಂತರ್ಜಾಲಗಳಲ್ಲಿರುವ ದಾಖಲೆಗಳು ಮುಖ್ಯವಾದ ಆಕರಗಳಾಗಿವೆ. ಇವುಗಳನ್ನು ಪ್ರಸ್ತುತ ಸಂಶೋಧನೆಗೆ ಬಳಸಿಕೊಳ್ಳಲಾಗಿದೆ. ಅಂತೆಯೇ ಕ್ಷೇತ್ರಕಾರ್ಯ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ಈ ಮಹಾಪ್ರಬಂಧ ರಚನೆಯಲ್ಲಿ ಬಳಸಲಾಗಿದೆ. ಹೀಗೆ ಲಭ್ಯವಿರುವ ಎಲ್ಲ ಬಗೆಯ ದಾಖಲೆಗಳ ಬಳಕೆ ಮಾಡಿಕೊಂಡು ಮಹಾ ಪ್ರಬಂಧವನ್ನು ವಸ್ತುನಿಷ್ಠವಾಗಿ ರೂಪಿಸಲಾಗಿದೆ.

ಪ್ರಾಥಮಿಕ ಆಕರಗಳು

ಹೈದರಾಬಾದ್ ಆರ್ಕೈವ್ಸ್‌ನಲ್ಲಿದ್ದ ನಿಜಾಮ್ ಕಾಲದ ಪ್ರಾಥಮಿಕ ಆಕರಗಳು ಈ ಕೆಳಗಿನಂತಿವೆ. ನಿಜಾಮ್ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ರಿಫೋರ್ಟ್, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ರಿಪೋರ್ಟ್, ದಿ ಪ್ರಿವೆಂಶೇನ್ ಆಫ್ ಅಗ್ರಿಕಲ್ಚರಲ್ ಲ್ಯಾಂಡ್ ಏಲಿಯೇನೇಶನ್ ಆಕ್ಟ್, ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯಲ್ ಅಡ್‌ಮಿನಿಸ್ಟ್ರೇಶನ್ ರಿಫೋರ್ಟ್, ಅಗ್ರಿಕಲ್ಚರ್ ಮಾರ್ಕೆಟ್ ಆಕ್ಟ್, ಕಾನ್ಸ್‌ಸ್ಟೇಷನಲ್ ರೂಲ್ ಆಫ್ ಹೈದಾರಾಬಾದ್, ನಿಜಾಮ್ ಗೌರ್ನಮೆಂಟ್ ಟೂರ್ ರಿಫೋರ್ಟ್, ನಿಜಾಮ್ ಗೌರ್ನಮೆಂಟ್ ಫಾರೆಸ್ಟ್ ರಿಫೋರ್ಟ್ಸ್, ಮುಲ್ಕಿ ರೂಲ್ ಆಕ್ಟ್, ಹೈದಾರಾಬಾದ್ ರೆಸಿಡೆನ್ಸಿ ಫೈಲ್, ನಿಜಾಮ್‌ನ ಖಾಸಗಿ ಪತ್ರ, ನಿಜಾಮ್ ಸರ್ಕಾರ ಹೊರಡಿಸಿರುವ ಫರ್ಮಾನುಗಳು ಪ್ರಧಾನ ಆಕರವಾಗಿ ಕಂಡುಬರುತ್ತವೆ. ಜನಗಣತಿ ವರದಿಯ ಆಧಾರದ ಮೇಲೆ ಹೈದರಾಬಾದ್ ಕರ್ನಾಟಕ ಪ್ರದೇಶಗಳಾದ ಗುಲಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲಾ ಪ್ರದೇಶಗಳ ಜನಸಂಖ್ಯೆ ಸಂಬಂಧಿಸಿದ ಅಂಕಿ–ಸಂಖ್ಯೆಗಳು ದಾಖಲಿಸಿದೆ. ಇದು ಪ್ರಮುಖವಾಗಿ ಈ ಪ್ರದೇಶದಲ್ಲಿನ ಸಮುದಾಯ ಮತ್ತು ಅವುಗಳ ಅಂಕಿ–ಸಂಖ್ಯೆ, ಉದ್ಯೋಗ ಮತ್ತು ಅವುಗಳ ಪಾತ್ರವನ್ನು ಗುರುತಿಸಲು ಸಹಾಯಕವಾಗಿದೆ. ಜನಗಣತಿಗಳಲ್ಲಿ ಭಿನ್ನತೆ ಇರುವುದು ವಿಶೇಷವಾಗಿದೆ. ಅಂದರೆ ಒಂದು ಅವಧಿಯಿಂದ ಮುಂದಿನ ಅವಧಿಯ ಜನಗಣತಿಯಲ್ಲಿ ಹಿಂದೆ ಉಲ್ಲೇಖಿಸಿರುವ ಹಲವಾರು ಸಮುದಾಯಗಳ ಅಂಕಿಸಂಖ್ಯೆ ದ್ವಿಗುಣ ಹೊಂದಿರುವುದು ಸ್ಪಷ್ಟವಾಗುತ್ತದೆ. ನಿಜಾಮರ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದ ಉರುಸ್, ಮೆಲ್ಸಾ, ಜಾತ್ರಾಗಳ ಆಕರಗಳ ಮೇಲೆ ಈ ಪ್ರದೇಶದಲ್ಲಿ ನಡೆಯುವ ಜಾತ್ರೆಗಳ ವಿವರಣೆಯನ್ನು ತಿಳಿಯಲು ಸಹಾಯಕಾರಿಯಾಗಿದೆ.

ಈ ಜಾತ್ರೆಗಳ ಅಂಕಿಸಂಖ್ಯೆಗಳನ್ನು ಪ್ರಧಾನವಾಗಿಟ್ಟುಕೊಂಡು ಸಮಾಜದಲ್ಲಿ ಸೌಹಾರ್ದತೆ ಮೂಡಿಸುವಲ್ಲಿ ಇವುಗಳ ಪಾತ್ರವನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಇನ್ನುಳಿದ ಆಡಳಿತ ವರದಿ ಇನ್ನಿತರ ದಾಖಲೆ, ಕಡತಗಳಲ್ಲಿನ ಮಾಹಿತಿಗಳು ಮುಖ್ಯವಾಗುತ್ತವೆ.

ಆನುಷಂಗಿಕ ಆಕರಗಳು

ಹೈದರಾಬಾದ್ ನಿಜಾಮರ ಆಡಳಿತ, ಆರ್ಥಿಕ ಮತ್ತು ಸಮಾಜ ಬಗೆಗೆ ಅಧ್ಯಯನಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಈ ನಿಟ್ಟಿನಲ್ಲಿ ಕಂಡುಬರುವ ಅಧ್ಯಯನಗಳಲ್ಲಿ ಪ್ರಮುಖವಾಗಿ ಭಾನುಮತಿ ರಂಗರಾವ್ ಎಸ್ ಅವರ "ಲ್ಯಾಂಡ್ ರೆವೆನ್ಯೂ ಅಡ್‌ಮಿನಿಸ್ಟ್ರೇಶನ್ ಇನ್ ದಿ ನಿಜಾಮ್ ಡೋಮಿನಿಯನ್ಸ್ ೧೮೫೩-೧೯೪೮", ವಸಂತಕುಮಾರ ಬಾವಾ ಅವರ ಹೈದರಾಬಾದ್ ಅಂಡರ್ ಸಾಲಾರಜಂಗ್ I, ಕಾಟೆ ಪಿ.ವಿ., ಅವರ ಮರಾಠವಾಡ ಅಂಡರ್ ದಿ ನಿಜಾಮ್ಸ್ ೧೭೨೪-೧೯೪೮, ಶೀಲಾರಾಜ ಅವರ "ಮೆಡೀವಲಿಸಂ ಟು ಮಾಡರ್ನ್‌ನಿಸಂ ಸೋಶಿಯೋ ಇಕನಾಮಿಕ್ ಆ್ಯಂಡ್ ಕಲ್ಚರಲ್ ಹಿಸ್ಟರಿ ಆಫ್ ಹೈದರಾಬಾದ್ ೧೮೬೯-೧೯೧೧" ಮುತ್ತಾಲಿಬ್ ಎಮ್ ಎ ಅವರ 'ಅಡ್‌ಮಿನಿಸ್ಟ್ರೇಶನ್ ಆಫ್ ಜಸ್ಟಿಸ್ ಅಂಡರ್ ದಿ ನಿಜಾಮ್ಸ್ ೧೭೨೪-೧೯೪೮", ಮೈಕುಂಠಮ್ ವಿ ಅವರ "ಸ್ಟೇಟ್ ಇಕನಾಮಿ ಆ್ಯಂಡ್ ಸೋಶ್ಯಲ್ ಟ್ರಾನ್ಸ್‌ಫಾರ್ಮೇಶನ್ ಹೈದರಾಬಾದ್ ಸ್ಟೇಟ್ ೧೭೨೪-೧೯೪೮", ಯುಸೂಫ್ ಹುಸೇನ್ ಅವರ "ದಿ ನಿಜಾಮ್ ಫಸ್ಟ್ ನಿಜಾಮ್ ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ನಿಜಾಮುಲ್-ಮುಲ್ಕ ಆಸಫ್ ಜಹಾ", ಬಾವಾ ವಿ.ಕೆ., ಅವರ "ದಿ ಲಾಸ್ಟ್ ನಿಜಾಮ್ ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಮೀರ್ ಉಸ್ಮಾನ್ ಅಲಿಖಾನ್" ಸರೋಜಿನಿ ರೇಗಾನಿ ಅವರ "ನಿಜಾಮ್ ಬ್ರಿಟಿಶ್ ರಿಲೇಶನ್‌ಶಿಫ್", ಫಾತುಲ್ಲಾ ಖಾನ್ ಅವರ "ಎ ಹಿಸ್ಟರಿ ಆಫ್ ಅಡ್‌ಮಿನಿಸ್ಟ್ರೇಶನ್ ರಿಫಾರ್ಮ್ಸ್ ಇನ್ ಹೈದರಾಬಾದ್", ಜಾನ ಲಾ ಅವರ "ಮಾಡರ್ನ್ ಹೈದರಾಬಾದ್", ಮುನ್ಸಿ ಕೆ ಎಮ್ ಅವರ "ದಿ ಎಂಡ್ ಆಫ್ ಆನ್ ಎರಾ ಹೈದರಾಬಾದ್ ಮೆಮೋರಿಸ್" ಬಷೀರ್ ಅಹಮ್ಮದ್ ಅವರ "ದಿ ಅಡ್‌ಮಿನಿಸ್ಟ್ರೇಶನ್ ಆಫ್ ಜಸ್ಟಿಸ್ ಇನ್ ಮೆಡೀವಲ್ ಇಂಡಿಯಾ", ಚಿರಾಗ್ ಅಲಿ ಅವರ "ಹೈದಾರಾಬಾದ್ ಅಂಡರ್ ಸರ್ ಸಾಲಾರ್‌ಜಂಗ್", ಗ್ರಿಬೆಲ್ಲ್ ಅವರ "ಎ ಹಿಸ್ಟರಿ ಆಫ್ ದಿ ಡೆಕ್ಕನ್", ಕ್ಯಾಂಬೆಲ್ ಎ.ಸಿ. ಅವರ "ಗ್ಲಿಂಪ್ಸ್ ಆಫ್ ದಿ ನಿಜಾಮ್ಸ್ ಡೋಮಿನಿಯನ್", ಚೌಧರಿ ಎನ್.ಜಿ. ಅವರ "ಬ್ರಿಟಿಶ್ ರಿಲೆಶನ್‌ಶಿಪ್ ವಿಥ್ ಹೈದರಾಬಾದ್", ಅಬೀದ್ ಅಲಿ ಹಸನ್ ಸೈಯದ್ ಅವರ "ವೇದರ್ ಹೈದರಾಬಾದ್", ಬರೋಘಾ ಎಸ್.ಎಂ. ಅವರ "ಅಗ್ರಿಕಲ್ಚರ್ ಇಂಡಿಪೆಂಡೆನ್ಸ್ ಇನ್ ದಿ ನಿಜಾಮ್ ಡೋಮಿನಿಯನ್ಸ್", ಬಸವ ಪುವಯ್ಯ ಅವರ "ತೆಲಂಗಾಣ ಅರ್ಮ್ಡ್ ಸ್ಟ್ರಗಲ್

ರಿಲೆಟೇಶ್", ಹುಸೇನ್ ಸೂಫ್ ಡಿ. ಅವರ "ನಿಜಾಮ್-ಉಲ್-ಮುಲ್ಕ ಅಸಫ್ ಜಾ", ಹೊಲಿಂಗ್‌ಬೆರಾಗ್ ಅವರ "ಹಿಸ್ಟರಿ ಆಫ್ ನಿಜಾಮ್ ಆಲಿಖಾನ್", ಹನುಮಂತ ರಾವ್ ಮಠಪತಿ ಅವರ "ತೆಲಂಗಾಣ ಟು ಆಂದ್ರೊದ್ಯಾಯಮು", ಖುಷ್ರೊ ಎ.ಎಂ. ಅವರ "ಇಕಾನಮಿಕ್ ಆ್ಯಂಡ್ ಸೋಶ್ಯಲ್ ಎಫೆಕ್ಟ್ ಆಫ್ ಜಾಹಗೀರದಾರಿ ಅಬೋಲೇಷನ್ ಆ್ಯಂಡ್ ಲ್ಯಾಂಡ್ ರಿಫಾರ್ಮ್ಸ್ ಇನ್ ಹೈದರಾಬಾದ್", ಕುಲಕರ್ಣಿ ಎ.ಬಿ. ಅವರ "ಬ್ರಿಟಿಶ್ ಡೋಮಿನಿಯನ್ಸ್ ಇನ್ ಇಂಡಿಯಾ ಆ್ಯಂಡ್ ಆಫ್ಟರ್", ನಾರಾಯಣ ಬಿ.ಕೆ. ಅವರ "ಅಗ್ರಿಕಲ್ಚರ್ ಡೆವಲ್ಪ್‌ಮೆಂಟ್ ಇನ್ ಹೈದರಾಬಾದ್ ಸ್ಟೇಟ್ ೧೯೦೦-೧೯೫೬", ನಿಹಾಲ್ ಸಿಂಗ್ ಅವರ "ದಿ ನಿಜಾಮ್ ಆ್ಯಂಡ್ ದಿ ಬ್ರಿಟಿಶ್ ಎಂಪೈರ್", ನರಸಿಂಗರಾವ್ ಮಂದುಮುಲು ಅವರ "ಫಿಫ್ಟಿ ಇಯರ್ ಆಫ್ ಹೈದರಾಬಾದ್", ದಿವಾನ್ ಜರ್ಮನಿ ದಾಸ್ ಅವರ "ಮಹಾರಾಜಾ", ಕರಕ ಡಿ.ಎಫ್. ಅವರ "ಫಾಬುಲೂಸ್ಸ್", ನೂರಾನಿ ಎ.ಜಿ.ಅವರ "ದಿ ಡಿಸ್ಟ್ರೇಕಷನ್ ಆಫ್ ಹೈದರಾಬಾದ್", ಭಾಸ್ಕರರಾವ್ ವಿ.ಅವರ "ಅಗ್ರೇರಿಯನ್ ಆ್ಯಂಡ್ ಇಂಡಸ್ಟ್ರಿಯಲ್ ರಿಲೇಶನ್ಸ್ ಇನ್ ಹೈದರಾಬಾದ್ ಸ್ಟೇಟ್", ಗುಲಾಮ್ ಆಲಿ ಮಹಮ್ಮದ್ ಅವರ "ಹ್ಯಾಂಡ್‌ಕ್ರಾಫ್ಟ್ ಇಂಡಸ್ಟ್ರೀಯಲ್ ಇನ್ ಹೈದರಾಬಾದ್ ನಿಜಾಮ್ ಡೊಮಿನಿಯನ್ಸ್", ನಾಗರಾಜ ಎ. ಅವರ "ನ್ಯಾಶನಲೈಯಸ್ಟ್ ರೋಡ್ ಟ್ರಾನ್ಸ್‌ಪೋರ್ಟ್ ಇನ್ ಹೈದರಾಬಾದ್ ಸ್ಟೇಟ್", ಖಯನಾಮಖಾನ್ ಅಬ್ದುಲ್ ಅವರ 'ಇರಿಗೇಶನ್ ಇನ್ ಹೈದರಾಬಾದ್ ಸ್ಟೇಟ್", ವಿರೂಪಾಕ್ಷಪ್ಪ ಬಿ. ಅವರ "ನಿಜಾಂ ಕಾಲದ ಶಿಕ್ಷಣ ಪದ್ಧತಿ, ವೀರೇಂದ್ರ ಸಿಂಪಿ ಅವರ "ಬೀದರ್ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು", ರಹಮತ್ ತರೀಕೆರೆ ಅವರ "ಕರ್ನಾಟಕದ ಸೂಫಿಗಳು", ಅಮರೇಶ ನುಗಡೋಣಿ ಅವರ "ರಾಯಚೂರು ಜಿಲ್ಲೆಯಲ್ಲಿ ಹೈದಾರಾಬಾದ್ ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮ", ಶಿವಶರಣಪ್ಪ ಧಾಬಾ ಹೆಚ್ ಅವರ "ಹೈದರಾಬಾದ್ ಕರ್ನಾಟಕದಲ್ಲಿ ಕೃಷಿ ಕಾರ್ಮಿಕರು".

ಹೀಗೆ ಹೈದರಾಬಾದ್ ನಿಜಾಮರ ಕಾಲದ ಬಗೆಗಿನ ರಾಜಕೀಯ, ಆಡಳಿತ ಮತ್ತು ಸಮಾಜಕ್ಕೆ ಸಂಬಂಧಿಸಿದ ವಿಷಯದ ಮೇಲೆ ಅಧ್ಯಯನ ನಡೆಸಲಾಗಿದೆ. ಆದರೂ ಸಹ ನಿಜಾಮರ ಕಾಲದ ಆರ್ಥಿಕ ಮತ್ತು ಸಾಮಾಜಿಕ ಚರಿತ್ರೆಯನ್ನು ಕುರಿತು ನಡೆದಿರುವ ಅಧ್ಯಯನಗಳು ಅತ್ಯಲ್ಪವಾಗಿದೆ. ಈ ನಿಟ್ಟಿನಲ್ಲಿ ನಿಜಾಮ ಕಾಲದ ಸಮಗ್ರ ಅಧ್ಯಯನಗಳ ಅವಶ್ಯಕವಿದೆ. ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ ಕೆಲವೇ ಅಧ್ಯಯನಗಳು ನಡೆದಿವೆ ಮತ್ತು ನಡೆಯುತ್ತಿವೆ. ಅದರಲ್ಲೂ ಹೈದರಾಬಾದ್ ಕರ್ನಾಟಕ ಪ್ರದೇಶದ ನಿಜಾಮರ ಕಾಲಾವಧಿಯಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಬಗೆಗಿನ ವಿಚಾರವನ್ನು

ಅಲ್ಪ ಪ್ರಮಾಣವನ್ನು ಗಮನಿಸಲಾಗಿದೆ. ಈ ದಿಸೆಯಲ್ಲಿ ಕಂಡುಬರುವ ಪ್ರಮುಖವಾದ ದಾಖಲೆಗಳು ಮತ್ತು ಕೃತಿಗಳನ್ನು ಈ ಕೆಳಗಿನಂತೆ ದಾಖಲಿಸಲಾಗಿದೆ.

ಮಹಾಬಲೇಶ್ವರಪ್ಪ ಬಿ.ಸಿ. ಅವರ "ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು", ಜಾಗೀರದಾರ ಆರ್.ಜಿ., ಲಿಂಗಸೂಗೂರ ವಿಠಲರಾವ್ ಅವರ "ಹೈದರಾಬಾದ್ ಕರ್ನಾಟಕ", ಬಸವರಾಜ ಪೊಲೀಸ್ ಪಾಟೀಲ್ ಅವರ "ಬಿಡುಗಡೆ", ಮಂಜುಳಾ ಬಿ. ಬೆಂಚೋಳಿ ಅವರ "ಡಿಪ್ರೆಸ್ಡ್ ಕ್ಲಾಸೇಸ್ ಇನ್ ಹೈದರಾಬಾದ್ ಕರ್ನಾಟಕ ಏರಿಯಾ ಅಂಡರ್ ನಿಜಾಮ್ಸ್ ಡೋಮಿನಿಯನ್ಸ್ ೧೭೨೪-೧೯೪೮, ಅಮರೇಶ ನುಗಡೋಣಿ, ಅವರ "ಹೈದರಾಬಾದ್ ಕರ್ನಾಟಕದ ಹಾಡು-ಪಾಡು" ಗೋಪಲರಾವ್ ಹೇಜೀಬ ಅವರ "ಹೈದರಾಬಾದ್ ಕರ್ನಾಟಕದ ಮುಕ್ತಿ ಸಂಘರ್ಷ", ಧ್ರುವನಾರಾಯಣ ಎಂ. ಅವರ "ರಾಯಚೂರು ಜಿಲ್ಲೆಯ ಸ್ವಾತಂತ್ರ್ಯ ಆಂದೋಲನ, ರಾಮಣ ಹವಳೆ ಅವರ "ಹೈದರಾಬಾದ್ ಸಂಸ್ಥಾನ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆಯ ಹೋರಾಟ, ವೆಂಕಟೇಶ ಕೆ., ಸರೋಜಾ ಬಿ. ಅವರ ಹೈದರಾಬಾದ್ ಕರ್ನಾಟಕದ ವರ್ತಮಾನದ ತಲ್ಲಣಗಳು", ಕಪಟರಾಳ ಕೃಷ್ಣರಾವ್ ಅವರ "ಸುರಪುರ ಸಂಸ್ಥಾನದ ಇತಿಹಾಸ, ನಲವಡಿ ಶ್ರೀಕಂಠಶಾಸ್ತ್ರಿ ಅವರ "ಹೈದರಾಬಾದ್ ಕರ್ನಾಟಕ ರಜಾಕರರ ಲಾವಣಿಗಳು, ರಝಾಕ ಉಸ್ತಾದ ಅವರ "ಹೈದರಾಬಾದ್ ಕರ್ನಾಟಕ ಕಥೆ-ವ್ಯಥೆ", ವೀರಭದ್ರಪ್ಪ ಕುಂ. ಅವರ "ಜಮೀನ್ದಾರಿ ವ್ಯವಸ್ಥೆ ಮತ್ತು ತೆಲುಗು ಸಾಹಿತ್ಯ", ಜೋಶಿ ರಾ.ಗು. ಅವರ "ನಿಜಾಂ ಕರ್ನಾಟಕ", ಧ್ರುವನಾರಾಯಣ ಎಂ. ಅವರ "ಹೈದರಾಬಾದ್ ಕರ್ನಾಟಕದಲ್ಲಿನ ಖಾದಿ ಇತಿಹಾಸ", ಬಸವರಾಜ ಕುಮ್ನೂರ ಅವರ "ಡಾ.ಡಿ.ನಂಜುಂಡಪ್ಪ ವರದಿ ಮತ್ತು ಅನುಷ್ಠಾನ, ಬಸವರಾಜ ನಾಗೂರ ಅವರ 'ಹದಗೆಟ್ಟ ಹೈದರಾಬಾದ್' ಚೆನ್ನಣ್ಣ ವಾಲಿಕಾರ ಅವರ "ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ಅಲ್ಲಪ್ರಭು ಬೆಟ್ಟದೂರು, ಪಾಟೀಲ ಎಚ್.ಎಸ್. ಅವರ "ವಿಮೋಚನೆ", ಬಸವಲಿಂಗಪ್ಪ ಸೊಪ್ಪಿಮಠ ಅವರ 'ಕೊಡೆಕಲ್ಲ ಬಸವಣ ಒಂದು ಅಧ್ಯಯನ", ಬಾಲಚಂದ್ರ ಜಯಶೆಟ್ಟಿ ಅವರ "ಹೈದರಾಬಾದ್ ಕರ್ನಾಟಕದ ವಿಮೋಚನೆ ಚಳುವಳಿ, ಪಾಟೀಲ ಎಸ್.ಎ. ಅವರ "ಹೈದರಾಬಾದ್ ಕರ್ನಾಟಕದ ಕೃಷಿ ಬೆಳೆಗಳು", ಇಂದುಮತಿ ಪಾಟೀಲ್ ಅವರ "ಬೀದರ ಜಿಲ್ಲೆಯ ಅರಸು ಮನೆತನಗಳು", ದೇಸಾಯಿ ವಿ.ಹೆಚ್. ಅವರ "ವಂದೇ ಮಾತರಂದಿಂದ ಜನಗಣಮನದವರೆಗೆ" ಇತ್ಯಾದಿ.

ಕರ್ನಾಟಕ ಹಿಸ್ಟರಿ ಕಾಂಗ್ರೆಸ್, ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಪ್ರೊಸೀಡಿಂಗ್ಸ್, ಕರ್ನಾಟಕ ಇತಿಹಾಸ ಅಕಾಡೆಮಿ ವಾರ್ಷಿಕ ಸಂಚಿಕೆಗಳು, ಪಂಡಿಗಮ್ಸ್ ಇನ್ ಇಂಡಿಯನ್ ಹಿಸ್ಟರಿ, ಸ್ಟಡೀಸ್ ಇನ್ ಇಂಡಿಯನ್ ಹಿಸ್ಟರಿ ಆ್ಯಂಡ್ ಕಲ್ಚರ್, ಜರ್ನಲ್ ಆಫ್ ಹಿಸ್ಟಾರಿಕಲ್

ರಿಸರ್ಚ್ ಕ್ವಾರ್ಟಲಿ, ಜನರಲ್ ಆಫ್ ಮಿಥಿಕ್ ಸೊಸೈಟಿ, ಹೊಸತು, ಪ್ರಜಾವಾಣಿ, ವಿಜಯ ಕರ್ನಾಟಕ ಇತ್ಯಾದಿ ನಿಯತಕಾಲಿಕೆಗಳನ್ನು ಅಧ್ಯಯನ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ.

ಮಹಾಪ್ರಬಂಧಗಳು

ನಿಜಾಮ್ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಕುರಿತಾಗಿ ಅನೇಕ ಅಧ್ಯಯನಗಳಾಗಿವೆ. ಈ ದಿಸೆಯಲ್ಲಿ ಕಂಡುಬರುವ ಪ್ರಮುಖ ಮಹಾಪ್ರಬಂಧಗಳನ್ನು ಇಲ್ಲಿ ಅವಲೋಕಿಸುವ ಪ್ರಯತ್ನ ಮಾಡಲಾಗಿದೆ. ದೇವರಾಜು ಸಿ.ಬಿ. ಅವರ "ಹೈದರಾಬಾದ್ ರಾಜ್ಯದ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು ಬೀದರ್ ಜಿಲ್ಲೆಯ ಒಂದು ಅಧ್ಯಯನ ೧೯೦೫-೧೯೫೬", ಅಮರೇಶ ಎನ್ ಅವರ "ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ", ಸಂತೋಷಕುಮಾರ ಹೆಚ್.ವಿ. ಅವರ "ಹೈದರಾಬಾದ್ ಕರ್ನಾಟಕದಲ್ಲಿ ಸಾಮಾಜಿಕ ಚಳುವಳಿಗಳು", ಬಸವರಾಜ ಸಬರದ ಅವರ "ಬೀದರ್ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ", ಅಮರೇಶ ಹನುಮಂತ ಅವರ "ರಾಯಚೂರು ದೋ-ಅಬ್ ಪ್ರದೇಶ: ಅಧಿಕಾರ ಮತ್ತು ಹೋರಾಟ", ಸುಮಾ ನಿರ್ಣಿ ಅವರ ವುಮ್ಯಾನ್ಸ ರೂಲ್ ಇನ್ ಹೈದರಾಬಾದ್ ಕರ್ನಾಟಕ ಫ್ರಿಡಮ್ ಸ್ಟ್ರಗಲ್ಸ್" ಭೀಮಾಶಂಕರ ಅವರ "ದಿ ರೂಲ್ ಆಫ್ ದಲಿತ ಫ್ರಿಡಮ್ ಸ್ಟ್ರಗಲ್ಸ್ ಇನ್ ಹೈದರಾಬಾದ್" ಅಜ್ಜಯ್ಯ ಸಿ ಅವರ ಹೈದರಾಬಾದ್ ಕರ್ನಾಟಕ ಅಲೆಮಾರಿಗಳ ಸಮಾಜೋ ಆರ್ಥಿಕ ವ್ಯವಸ್ಥೆ ಮೊದಲಾದ ಮಹಾಪ್ರಬಂಧಗಳನ್ನು ಕಾಣಬಹುದು. ಇದರಲ್ಲಿ ದೇವರಾಜು ಸಿ.ಬಿ.ಅವರ ಮಹಾಪ್ರಬಂಧವು ನಿಜಾಮರ ಆಳ್ವಿಕೆಯಲ್ಲಿ ಬೀದರ್ ಜಿಲ್ಲೆಯ ಆರ್ಥಿಕ-ಸಾಮಾಜಿಕ ನೆಲೆಗಳನ್ನು ಇಟ್ಟುಕೊಂಡು ಚರ್ಚಿಸಿರುವುದಲ್ಲದೆ, ನಿಜಾಮರ ಕಾಲದಲ್ಲಿನ ಶೈಕ್ಷಣಿಕ ಮತ್ತು ಧಾರ್ಮಿಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ.

೧.೪. ಅಧ್ಯಯನದ ವಿಧಾನ

ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಚಾರಿತ್ರಿಕ ವಿಶ್ಲೇಷಣೆ ಎಂಬ ಶೀರ್ಷಿಕೆಯ ಪ್ರಸ್ತುತ ಅಧ್ಯಯನವು ಚರಿತ್ರೆ ಸಂಶೋಧನೆಯ ವಿಧಿ ವಿಧಾನಗಳನ್ನು ಒಳಗೊಂಡಿದೆ. ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ವಿಧಾನದ ಮೂಲಕ ನಿಜಾಮರ ಆರ್ಥಿಕ, ಸಾಮಾಜಿಕ ಚರಿತ್ರೆಯನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ಆಕರಗಳನ್ನು ವಿಶ್ಲೇಷಣೆ ಮಾಡುವ ವಿಧಾನವನ್ನು ಅನುಸರಿಸಲಾಗಿದೆ ಹಾಗೂ ಬಹುರೂಪಿ ಆಕರಗಳ ಹುಡುಕಾಟವಿದೆ. ಹೀಗೆ ಸಂಗ್ರಹಿಸಿದ ಆಕರಗಳ ವ್ಯಾಖ್ಯಾನದ ಜೊತೆಗೆ ವಿಶ್ಲೇಷಣೆ ಮಾಡುವ ವಿಧಾನದ ಮೂಲಕ ನಿಜಾಮರ ಚರಿತ್ರೆಯನ್ನು ವಸ್ತುನಿಷ್ಠವಾಗಿ ಅಧ್ಯಯನ ನಡೆಸಲಾಗಿದೆ.

ಚರಿತ್ರೆ ಬರವಣಿಗೆಯು ಇತ್ತೀಚೆಗೆ ಹೊಸ ಆಯಾಮಗಳಿಂದ ರಚನೆಯಾಗುತ್ತಿದೆ. ಬಹುಮನಿ ಮತ್ತು ಆದಿಲ್‌ಶಾಹಿಗಳ ಚರಿತ್ರೆಯನ್ನು ನೋಡುವ ಕ್ರಮದ ಹಾಗೆಯೇ ವಿಜಯನಗರದ ಚರಿತ್ರೆಯನ್ನು ನೋಡುವ ಕ್ರಮದಲ್ಲಿನ ವೈರುಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ನಿಜಾಮರ ಚರಿತ್ರೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಒಂದು ಮನೆತನದ ಅಥವಾ ರಾಜವಂಶದ ಚರಿತ್ರೆಯನ್ನು ನೋಡುವುದು, ಅದೇ ರೀತಿಯಾಗಿ ನಿಜಾಮರ ಚರಿತ್ರೆಯನ್ನು ಒಂದು ಘಟನೆಯನ್ನಾಗಿಟ್ಟುಕೊಂಡು ಇಡೀ ಚರಿತ್ರೆಯನ್ನು ನೋಡಲಾಯಿತು. ಏಕೆಂದರೆ ಆ ಚರಿತ್ರೆಯ ಹಿಂದೆ ರಾಷ್ಟ್ರೀಯವಾದ ಮತ್ತು ಸಾಮ್ರಾಜ್ಯಶಾಹಿ ಧೋರಣೆಗಳು, ಹಿತಾಸಕ್ತಿಗಳು ಹಾಗೂ ಅಜೆಂಡಗಳು ನಿರ್ಣಾಯಕವಾಗಿದ್ದವು. ಇವುಗಳನ್ನು ಮೀರಿರುವ ರೀತಿಯಲ್ಲಿ ಈ ಪ್ರದೇಶದ ಭೌಗೋಳಿಕ ಹಿನ್ನೆಲೆ ಯನ್ನಿಟ್ಟುಕೊಂಡು ಅಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯನ್ನು ರಚಿಸುವ ಪ್ರಯತ್ನ ಮಾಡಲಾಗಿದೆ.

ಸಾಮ್ರಾಜ್ಯಶಾಹಿ ಮತ್ತು ರಾಷ್ಟ್ರೀಯವಾದಕ್ಕೆ ಪೂರಕವಾದ ಚರಿತ್ರೆಯನ್ನು ಬಿಟ್ಟು ಅದರಾಚೆಗೆ ಚರಿತ್ರೆಯನ್ನು ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯನ್ನಾಗಿ ನೋಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಮಾರ್ಕ್ಸ್‌ವಾದ ಮತ್ತು ಮಾರ್ಕ್ಸ್‌ಯೇತರ ವಾದದ ಚಿಂತನೆಗಳು ನೋಡಿರುವ ಬಗೆಗೆ ಮತ್ತು ಅವುಗಳು ನಿರೂಪಿಸಿರುವ ಆರ್ಥಿಕ ಚರಿತ್ರೆಯ ವೈಧಾನಿಕತೆಯನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಅದೇ ರೀತಿಯಲ್ಲಿ ಇಂದು ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಒಳಗಾಗಿರುವ ನವ ವಸಾಹತುಶಾಹಿ ಚಿಂತನೆಯನ್ನು ಬಹಳ ಎಚ್ಚರಿಕೆಯಿಂದ ವಿಶ್ಲೇಷಿಸಲಾಗಿದೆ.

ಪ್ರಸ್ತುತ ಅಧ್ಯಯನವು ಆರ್ಥಿಕ ಮತ್ತು ಸಾಮಾಜಿಕ ಚರಿತ್ರೆಗೆ ಸಂಬಂಧಪಟ್ಟಂತೆ ಕೃಷಿ, ಕೈಗಾರಿಕೆ, ವ್ಯಾಪಾರ, ನಗರ, ಪೇಟೆ–ಪಟ್ಟಣ, ಸಮುದಾಯ, ಆಚರಣೆಗಳ ಮೂಲಕ ಹೈದರಾಬಾದ್ ಕರ್ನಾಟಕ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಚರಿತ್ರೆಯನ್ನು ಅಧ್ಯಯನ ಮಾಡಲಾಗಿದೆ. ಇದನ್ನು ವಿಶ್ಲೇಷಣೆ ಮಾಡುವಾಗ ಸೈದ್ಧಾಂತಿಕ ಹಿನ್ನೆಲೆಯನ್ನು ಬಳಸಿಕೊಳ್ಳಲಾಗಿದೆ.

ಪ್ರಧಾನವಾಗಿ ನಿಜಾಮರ ಕಾಲಘಟ್ಟವನ್ನು ಅಧ್ಯಯನದ ವ್ಯಾಪ್ತಿಯನ್ನಾಗಿ ಮಾಡಿಕೊಂಡು ಹೈದರಾಬಾದ್ ಕರ್ನಾಟಕ ಪ್ರದೇಶದ ಆರ್ಥಿಕ, ಸಾಮಾಜಿಕ ಚರಿತ್ರೆ ತಿಳಿಯುವ, ಚರ್ಚಿಸುವ, ವಿಶ್ಲೇಷಿಸುವುದು ಮಹಾಪ್ರಬಂಧದ ಉದ್ದೇಶ. ಮಹಾಪ್ರಬಂಧದ ಅಧ್ಯಯನಕ್ಕೆ ಚರಿತ್ರೆಯ ಬದಲಾದ ವೈಧಾನಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ. ಮಾಹಿತಿ ಸಂಗ್ರಹಣೆ, ಆಂತರಿಕ ಮತ್ತು ಬಾಹ್ಯ ವಿಮರ್ಶೆ, ವಿಶ್ಲೇಷಣೆ, ಕಾರ್ಯ ಸೂತ್ರಗಳನ್ನು ಸಂಶೋಧನೆಗೆ ಅಳವಡಿಸಿಕೊಳ್ಳಲಾಗಿದೆ.

ನಿಜಾಮರನ್ನು ಕೇವಲ ಹೈದರಾಬಾದ್ ರಾಜ್ಯಕ್ಕೆ ಮತ್ತು ರಾಜಕಾರಣಕ್ಕೆ ಸೀಮಿತಗೊಳಿಸದೆ ಇಡೀ ದಕ್ಷಿಣ ಭಾರತದ ರಾಜಕಾರಣದಲ್ಲಿ ಅವರು ನಿರ್ವಹಿಸಿದ ಪಾತ್ರವನ್ನು ಧರ್ಮಾತೀತ ನೆಲೆಯಲ್ಲಿ ನಿಜಾಮರನ್ನು ಹೇಗೆ ನೋಡಬಹುದು ಎನ್ನುವ ಹಿನ್ನೆಲೆಯನ್ನು ಇಟ್ಟುಕೊಂಡು ಮಹಾಪ್ರಬಂಧವನ್ನು ರಚಿಸಲಾಗಿದೆ.

೧.೫. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ನಿಜಾಮರ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶಗಳ ಚಾರಿತ್ರಿಕ ವಿಶ್ಲೇಷಣೆ ಕುರಿತದ್ದಾಗಿದೆ. ಈ ಮಹಾಪ್ರಬಂಧವನ್ನು ಅಧ್ಯಯನದ ಉದ್ದೇಶದ ಪ್ರಕಾರ ಎಂಟು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ.

ಮೊದಲನೆಯ ಅಧ್ಯಾಯವು ಪ್ರವೇಶಿಕೆಯ ರೂಪದಲ್ಲಿದೆ. ಇದು ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಈವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ಒಳಗೊಂಡಿದೆ. ಜೊತೆಗೆ ಪ್ರಸ್ತುತ ಅಧ್ಯಯನದ ಸ್ವರೂಪವನ್ನು ಇಲ್ಲಿ ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಭೌಗೋಳಿಕತೆಯ ಮುಖ್ಯ ಲಕ್ಷಣಗಳಾದ ಭೂಮಿ, ನದಿ, ನೈಸರ್ಗಿಕ ಸಂಪನ್ಮೂಲಗಳು ಹಾಗೂ ಈ ಭೌಗೋಳಿಕ ಲಕ್ಷಣಗಳು ಅಭಿವೃದ್ಧಿಗೆ ಹೇಗೆ ಹಿನ್ನಡೆಯನ್ನು ಉಂಟುಮಾಡಿವೆ ಎಂಬುದನ್ನು ಚರ್ಚಿಸಲಾಗಿದೆ. ಆ ಮೂಲಕ ಪ್ರಕೃತಿ ಹಾಗೂ ಮಾನವನ ನಡುವಿನ ಸಂಬಂಧದ ವಿಶ್ಲೇಷಣೆಯನ್ನು ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಈ ಪ್ರದೇಶದ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಲಾಗಿದೆ. ಹೈದರಾಬಾದ್ ಕರ್ನಾಟಕವು ಸುಮಾರು ೨೦೦೦ ವರ್ಷಗಳಷ್ಟು ಪ್ರಾಚೀನತೆಯನ್ನು ಹೊಂದಿದೆ. ಈ ಪ್ರದೇಶದ ಚರಿತ್ರೆ ಪೂರ್ವ ಸಂಸ್ಕೃತಿಯನ್ನು ಲಭ್ಯ ಆಧಾರದ ಮೂಲಕ ವಿವರಿಸಲಾಗಿದೆ. ಎರಡನೆಯ ಶತಮಾನದಿಂದ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಆಳಿದ ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ವಿಜಯನಗರ ಅರಸರು ಹಾಗೂ ಸ್ಥಳೀಯ ಅರಸು ಮನೆತನಗಳು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಆಡಳಿತಾತ್ಮಕವಾಗಿ ತಮ್ಮದೇ ಆದ ರೀತಿಯಿಂದ ಪ್ರಭಾವ ಬೀರಿದ್ದಾರೆ. ಕಲಚೂರಿಗಳ ಆಸ್ಥಾನದ ಪ್ರಧಾನ ಮಂತ್ರಿಯಾದ ಬಸವೇಶ್ವರರು ೧೨ನೇ ಶತಮಾನದಲ್ಲಿ ಅಸಮಾನ ಸಾಮಾಜಿಕ ವ್ಯವಸ್ಥೆಯ ವಿರುದ್ಧ ನಡೆಸಿದ ಹೋರಾಟದ ಸ್ವರೂಪ, ಪರಿಣಾಮ ಹಾಗೂ ಮಿತಿಗಳನ್ನು ಚರ್ಚಿಸಲಾಗಿದೆ. ಮುಂದೆ ಈ ಪ್ರದೇಶದಲ್ಲಿ ಹುಟ್ಟಿ ಬೆಳೆದ ಬಹುಮನಿ ಮನೆತನವು ಜಾರಿಗೆ ತಂದ ಆಡಳಿತ ನೀತಿಗಳು ನಿಜಾಮ್ ಆಡಳಿತದವರೆಗೆ ಮುಂದುವರೆದಿರುವ ವಿಷಯವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ನಿಜಾಮರ ಆಳ್ವಿಕೆಯ ಸ್ವರೂಪದ ಕುರಿತಾಗಿ ಚರ್ಚಿಸಲಾಗಿದೆ. ನಿಜಾಮರು ಮೊಗಲ್ ಆಡಳಿತದಿಂದ ಮುಕ್ತಿ ಹೊಂದಿ ಸ್ವಾತಂತ್ರ್ಯ ಘೋಷಿಸಿಕೊಂಡು ತಮ್ಮದೇ ಆದ ನೀತಿ ನಿಯಮಗಳಿಂದ ಹೈದರಾಬಾದ್ ಸಂಸ್ಥಾನವನ್ನು, ಬೃಹತ್ ಪ್ರಮಾಣದಲ್ಲಿ ಬೆಳೆಸಿದರು. ಈ ಸಂಸ್ಥಾನದಲ್ಲಿ ಒಟ್ಟು ಏಳು ಜನ ನಿಜಾಮರು ಆಳ್ವಿಕೆ ನಡೆಸಿದ್ದಾರೆ. ರಾಜಕೀಯವಾಗಿ ಇವರು ಸ್ವತಂತ್ರರಾಗಿದ್ದರೂ, ಬ್ರಿಟಿಶರ ವಿರುದ್ಧ ಹೋರಾಡದೆ ಅವರ ಅಧೀನದಲ್ಲಿ ಉಳಿದುಕೊಂಡು ತಮ್ಮ ಏಳಿಗೆಗಾಗಿ ಬ್ರಿಟಿಶ್ ಸಹಾಯಕ ಸೈನ್ಯ ಪದ್ಧತಿಯನ್ನು ಸ್ವೀಕರಿಸಿ ಸಂಸ್ಥಾನದಲ್ಲಿ ಒಬ್ಬ ರೆಸಿಡೆಂಟ್‌ನನ್ನು ನೇಮಿಸಿಕೊಂಡು ಆಡಳಿತ ನಡೆಸಿದರು. ನಿಜಾಮರು ತಮ್ಮ ಸುತ್ತಮುತ್ತಲಿನ ಪ್ರದೇಶಗಳ ಅರಸರೊಂದಿಗೆ ಹಾಗೂ ಯುರೋಪಿನ ರಾಜಕೀಯ ಶಕ್ತಿಗಳೊಂದಿಗೆ ಹೊಂದಿದ್ದ ಸಂಬಂಧಗಳ ಸ್ವರೂಪವನ್ನು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ನಿಜಾಮರ ಆಡಳಿತ ಕುರಿತು ವಿಶ್ಲೇಷಿಸಲಾಗಿದೆ. ಆಡಳಿತದ ಅನುಕೂಲಕ್ಕಾಗಿ ಸಂಸ್ಥಾನವನ್ನು ವಿಭಾಗಗಳಾಗಿ ವಿಭಜಿಸಲಾಯಿತು. ಈ ಘಟಕಗಳಿಗೆ ಪ್ರತ್ಯೇಕವಾದ ಅಧಿಕಾರಿಗಳನ್ನು ನೇಮಿಸುವ ಮೂಲಕ ಸ್ಥಳೀಯ ಆಡಳಿತವನ್ನು ವ್ಯವಸ್ಥಿತಗೊಳಿಸುವ ಪ್ರಯತ್ನ ಮಾಡಲಾಯಿತು. ಗ್ರಾಮೀಣ ಮಟ್ಟದಲ್ಲಿ ನಿಜಾಮರ ಆಪ್ತರಾಗಿರುತ್ತಿದ್ದ ದೇಶಪಾಂಡೆ ಅಥವಾ ದೇಶಮುಖರು ಆಡಳಿತ ನೋಡಿಕೊಳ್ಳುತ್ತಿದ್ದರು. ಈ ದೇಶಮುಖರು ಗ್ರಾಮಗಳಲ್ಲಿ ಕರ ವಸೂಲಿ ಮಾಡುವುದು, ನಿಜಾಮರ ಫರ್ಮಾನುಗಳನ್ನು ಚಾಚೂ ತಪ್ಪದೇ ಜಾರಿಗೆ ತರುವುದು ಮುಂತಾದ ಕಾರ್ಯಗಳನ್ನು ಮಾಡುತ್ತಿದ್ದರು. ನ್ಯಾಯ ತೀರ್ಮಾನ ವ್ಯವಸ್ಥೆಯಲ್ಲಿ ನಿಜಾಮರು ಸ್ಥಳೀಯ ಮಟ್ಟದಲ್ಲಿ ಗ್ರಾಮದ ಪಂಚರ ನೆರವನ್ನು ಪಡೆಯುತ್ತಿದ್ದರು. ದೇಶಮುಖ, ಸಾಹುಕಾರ, ದೇಶಪಾಂಡೆ, ಪಟೇಲ ಮತ್ತು ಪ್ರಮುಖ ಜಮೀನ್ದಾರರನ್ನು ಒಳಗೊಂಡ ಪಂಚರು ನ್ಯಾಯ ತೀರ್ಮಾನ ಮಾಡುತ್ತಿದ್ದ ವ್ಯವಸ್ಥೆಯನ್ನು ವಿಶ್ಲೇಷಿಸಲಾಗಿದೆ.

ನಿಜಾಮರ ಆಳ್ವಿಕೆಯ ಅವಧಿಯ ಸಮಾಜದ ಒಟ್ಟು ರಚನೆಯನ್ನು ಕುರಿತು ಆರನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಸಾಮಾಜಿಕ ರಚನೆಯನ್ನು ನಿರ್ಧರಿಸುವ ಅಂಶಗಳಾದ ಜಾತಿ, ಕುಟುಂಬ, ಶಿಕ್ಷಣ ಮತ್ತು ಆಡಳಿತ ಇವು ಸಮಾಜದಲ್ಲಿ ವಹಿಸುತ್ತಿದ್ದ ಪಾತ್ರ ಹಾಗೂ ಅದರ ಪರಿಣಾಮಗಳನ್ನು ಚರ್ಚಿಸಲಾಗಿದೆ. ಸಮಾಜದಲ್ಲಿನ ವಿವಿಧ ಸ್ತರಗಳು ತಮ್ಮ ಅನುಕೂಲಕ್ಕಾಗಿ ಸಂಘ ಸಂಸ್ಥೆಗಳನ್ನು ರಚನೆ ಮಾಡಿಕೊಂಡಿರುವುದು, ಈ ಸ್ತರಗಳ ಮಧ್ಯೆ ಇರುವ ಸಾಮಾಜಿಕ ಸಂಬಂಧಗಳ ಬಗ್ಗೆ ನಿಜಾಮರ ವರ್ತನೆಗಳು, ಪ್ರಬಲ ಸಮುದಾಯಗಳು ನಿಜಾಮನ ಆಡಳಿತದಲ್ಲಿ ನೀಡಿದ ಸಹಕಾರ, ರೈತ, ಬುಡಕಟ್ಟು, ಹಿಂದುಳಿದ ವರ್ಗಗಳ ಬದುಕಿನಲ್ಲಾಗುತ್ತಿದ್ದ ಪಲ್ಲಟ ಮುಂತಾದ ಸಾಮಾಜಿಕ ಸಂಬಂಧಗಳ ಪ್ರಶ್ನೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬರುವವಲ್ಲಿಯವರೆಗೂ ಸಾಮಾಜಿಕ ಅಸಮಾನತೆಯೇ ಪ್ರಧಾನವಾದ ಸಮಾಜ

ಅಸ್ತಿತ್ವದಲ್ಲಿತ್ತು. ನೇರ ಪ್ರತಿಭಟನೆ ಅಥವಾ ಚಳವಳಿಗೆ ಅವಕಾಶಗಳಿರಲಿಲ್ಲ. ನಂಬಿಕೆ ಮತ್ತು ಆಚರಣೆಯಲ್ಲಿ ನಿಜಾಮನ ಪ್ರಭಾವ ಎದ್ದು ಕಾಣುವಂತಿತ್ತು. ಈ ಪ್ರದೇಶದಲ್ಲಿನ ಮಠಗಳು, ದೇವಾಲಯಗಳು, ಸಮಾಜದ ಮೇಲೆ ಬೀರಿದ ಪ್ರಭಾವ ಹಾಗೂ ವಿವಿಧ ಧರ್ಮಗಳು ಪರಸ್ಪರ ಹೊಂದಿದ್ದ ಸಂಬಂಧಗಳ ಸ್ವರೂಪ ಹಾಗೂ ಸ್ಥಳೀಯ ಜನಪದ ದೇವತೆಗಳ ಆಚರಣೆ ಮುಂತಾದ ಧಾರ್ಮಿಕ ವಿಚಾರಗಳು. ನಿಜಾಮ್ ಸರ್ಕಾರ ಆಡಳಿತದಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು ಜಾರಿಗೆ ತಂದ ಮುಲ್ಕಿ ಕಾನೂನು ಬಗ್ಗೆ ವಿಶ್ಲೇಷಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ನಿಜಾಮರ ಆರ್ಥಿಕತೆಯ ಕುರಿತು ಚರ್ಚಿಸಲಾಗಿದೆ. ಆರ್ಥಿಕ ವ್ಯವಸ್ಥೆಯ ಕುರಿತು ಚರ್ಚಿಸುವಾಗ ಜನರ ಬದುಕು, ಆರ್ಥಿಕ ರೂಪಾಂತರಗಳು, ವ್ಯಾಪಾರ-ವಾಣಿಜ್ಯ, ಕುಶಲಕರ್ಮಿಗಳು ಮತ್ತು ಕೈಗಾರಿಕೆ, ವರ್ತಕ ಸಂಘಗಳ ಕಾರ್ಯ ಚಟುವಟಿಕೆಗಳು ಮುಂತಾದ ವಿಚಾರಗಳು ಪ್ರಮುಖವೆನಿಸುತ್ತವೆ. ಸಂತೆ ಮತ್ತು ಮಾರುಕಟ್ಟೆಗಳು ಆರ್ಥಿಕ ಪರಿವರ್ತನೆಯಲ್ಲಿ ವಹಿಸಿದ ಪಾತ್ರ, ಹೈದರಾಬಾದ್ ಸಂಸ್ಥಾನದಾಚೆಯ ಸಂಪರ್ಕಗಳು, ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಸ್ಥಾಪಿಸುವುದಕ್ಕೋಸ್ಕರ ಮತ್ತು ಬ್ರಿಟಿಷರ ಸಹಾಯ ಪಡೆಯಲು ಅನುಕೂಲವಾಗುವಂತೆ ಜಾರಿಗೆ ತಂದ ವ್ಯಾಪಾರ ನೀತಿಗಳು, ಸಾರಿಗೆ ಸಂಪರ್ಕ ಮುಂತಾದ ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದ ಚರ್ಚೆಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗಿದ್ದು, ನಿಜಾಮರು ಕೃಷಿ ವ್ಯವಸ್ಥೆಯಲ್ಲಿ ಜಾರಿಗೆ ತಂದ ಹೊಸ ಯೋಜನೆಗಳು, ಕೃಷಿ ಮಾರುಕಟ್ಟೆಗಳು ನಿರ್ವಹಿಸುತ್ತಿದ್ದ ಪಾತ್ರಗಳು, ಪೇಟೆ, ಪಟ್ಟಣಗಳು ಅಸ್ತಿತ್ವಕ್ಕೆ ಬಂದ ಮೇಲೆ ಹಾಗೂ ಅವು ವಿಸ್ತಾರವಾಗಿ ಬೆಳೆದಂತೆ ನಗರ ಯೋಜನೆಯ ಅನಿವಾರ್ಯತೆ ಉಂಟಾದಾಗ ನಗರ ವ್ಯವಸ್ಥೆಯ ಬಗ್ಗೆ ನಿಜಾಮರು ತೋರಿದ ಒಲವು, ಅವುಗಳ ಅಭಿವೃದ್ಧಿಗೆ ಕೈಗೊಂಡ ಕಾರ್ಯಗಳು ಹೀಗೆ ನಿಜಾಮರು ಕೈಗೊಂಡ ಅಭಿವೃದ್ಧಿ ಕಾರ್ಯಗಳ ವಿಶ್ಲೇಷಣೆ ಮಾಡಲಾಗಿದೆ. ಹೈದರಾಬಾದ್ ಕರ್ನಾಟಕದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದವಾದರೂ, ಅಭಿವೃದ್ಧಿಯೇ ಅಲ್ಲಿನ ಸ್ಥಿತಿಯಾಗಿ ಅಥವಾ ಲಕ್ಷಣವಾಗಿ ನಿರ್ಮಾಣಗೊಂಡಿತ್ತು. ಇದಕ್ಕಿರುವ ಕಾರಣಗಳನ್ನು ದಾಖಲೆಗಳೊಂದಿಗೆ ಉದಾಹರಣೆ ಸಹಿತ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎಂಟನೇ ಹಾಗೂ ಕೊನೆಯ ಅಧ್ಯಾಯದಲ್ಲಿ ಅಧ್ಯಯನದ ಒಟ್ಟಾರೆ ಫಲಿತಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ. ನಿಜಾಮ್ ಆಳ್ವಿಕೆ ಸಂದರ್ಭದ ವಿದ್ಯಮಾನಗಳು, ಅದರ ವಿವಿಧ ಆಯಾಮಗಳು ಹಾಗೂ ಅವುಗಳಿಂದಾದ ಪರಿಣಾಮಗಳ ಬಗೆಗೆ ಚರ್ಚಿಸುತ್ತಾ, ನಿಜಾಮ್ ಆಡಳಿತದ ಬದಲಾವಣೆಯಲ್ಲಿ ಮೊಗಲ್, ಬಹಮನಿ, ಆದಿಲ್‌ಶಾಹಿ ಮತ್ತು ಬ್ರಿಟಿಶರ ಪ್ರಭಾವವನ್ನು ಒಟ್ಟಾರೆ ಅಧ್ಯಯನದ ಫಲಿತಗಳ ನೆಲೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎರಡು

ಭೌಗೋಳಿಕತೆ

೨.೧. ಹೈದರಾಬಾದ್ ಕರ್ನಾಟಕದ ಪ್ರಾಕೃತಿಕ ಸ್ವರೂಪ
೨.೨. ಪ್ರಕೃತಿ ಹಾಗೂ ಪ್ರಭುತ್ವ
೨.೩. ಹೈದರಾಬಾದ್ ಕರ್ನಾಟಕದ ಜಿಲ್ಲಾವಾರು ಭೌಗೋಳಿಕತೆ

ಅಧ್ಯಾಯ ಎರಡು

ಭೌಗೋಳಿಕತೆ

ಹೈದರಾಬಾದ್ ಕರ್ನಾಟಕ ಪ್ರದೇಶದ್ ಚರಿತ್ರೆ ರಚನೆಯಲ್ಲಿ ಭೌಗೋಳಿಕತೆಯು ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಆ ಪ್ರದಶದ ಚರಿತ್ರೆ ಅಧ್ಯಯನಕ್ಕೆ ತೊಡಗುವ ಮೊದಲು ಭೌಗೋಳಿಕ ವಿವರಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ ಭೌಗೋಳಿಕವಾಗಿ ಪ್ರದೇಶವು ಹೊಂದಿರುವ ಪ್ರಾದೇಶಿಕ ಮೇರೆಗಳು, ವಾಯುಗುಣ, ಪ್ರಾಕೃತಿಕ ಲಕ್ಷಣ, ಜನಸಾಂದ್ರತೆ, ರಸ್ತೆ ಸಾರಿಗೆ ಹಾಗೂ ಸಂಪನ್ಮೂಲಗಳು ಅಲ್ಲಿಯ ಚರಿತ್ರೆಯ ಮೇಲೆ ಪ್ರಭಾವ ಬೀರುತ್ತವೆ. ಹೈದರಾಬಾದ್ ಕರ್ನಾಟಕದ ಭೌಗೋಳಿಕ ಸನ್ನಿವೇಶಗಳು ಅಲ್ಲಿನ ಕೃಷಿ ಹಾಗೂ ನಗರ ವ್ಯವಸ್ಥೆಗಳು ಬದಲಾಗುತ್ತಿದ್ದಂತೆ ತಮ್ಮ ಸ್ವರೂಪದಲ್ಲಿ ಬದಲಾವಣೆಯನ್ನು ಕಾಣಬೇಕಾಯಿತು. ಉತ್ತಮ ಭೌಗೋಳಿಕ ಲಕ್ಷಣಗಳು ಇದ್ದಾಗ ಮಾನವನ ವಿಕಾಸದ ಹಾದಿ ಇನ್ನಷ್ಟು ಸುಗಮವಾಗುತ್ತದೆ. ಮಾನವನನ್ನು ಪ್ರಕೃತಿಯಿಂದ ಬೇರ್ಪಡಿಸಿ ನೋಡಲು ಸಾಧ್ಯವಾಗುವುದಿಲ್ಲ. ಮಾನವನ ಬದುಕು ರೂಪುಗೊಳ್ಳುವುದೇ ಪ್ರಕೃತಿಯೊಂದಿಗೆ ನಡೆಸುವ ಒಪ್ಪಂದ, ಹೊಂದಾಣಿಕೆ ಹಾಗೂ ಒಡಂಬಡಿಕೆಯ ಮೂಲಕ ಹೈದರಾಬಾದ್ ಕರ್ನಾಟಕವು ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಭಾಷಿಕವಾಗಿ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಿಗಿಂತ ಭಿನ್ನವಾಗಿ ಗುರುತಿಸಿ ಕೊಂಡಿರುವ ಭೂ ಪ್ರದೇಶ ಪ್ರಸ್ತುತ ಅಧ್ಯಾಯದಲ್ಲಿ ಹೈದರಾಬಾದ್ ಕರ್ನಾಟಕದ ಭೌಗೋಳಿಕತೆಯನ್ನು ಅಲ್ಲಿನ ರಾಜಕಾರಣ, ಸಮಾಜ ಹಾಗೂ ಆರ್ಥಿಕತೆಯ ಹಿನ್ನೆಲೆಯಿಂದ ಅಧ್ಯಯನ ನಡೆಸಲಾಗಿದೆ. ನೈಸರ್ಗಿಕ ಪರಿಸರ ಹಾಗೂ ಮಾನ ಪರಿಸರದೊಂದಿಗೆ ಇರುವ ಸಂಬಂಧ ಹಾಗೂ ಅಲ್ಲಿನ ಜನತೆ ನಿಸರ್ಗದತ್ತವಾಗಿ ಒದಗಿರುವ ಸಂಪನ್ಮೂಲಗಳನ್ನು ತಮ್ಮ ಅಭಿವೃದ್ಧಿಗೆ ಬಳಸಿಕೊಂಡ ಬಗ್ಗೆ, ಮಳೆಯ ಅಭಾವದಿಂದ ತಮ್ಮ ಉಪಜೀವನಕ್ಕಾಗಿ ಗೂಳೆ ಹೋಗುವ ಜನರ ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ. ಪ್ರಕೃತಿಯೊಂದಿಗೆ ಮಾನವ ಸಂಬಂಧ, ನದಿಜಾಲ ಹಾಗೂ ಜನಜೀವನ, ಆರ್ಥಿಕ ಬದುಕು ಹಾಗೂ ಸಮಕಾಲೀನ ನೋಟ ಎನ್ನುವ

ವಿಚಾರಗಳ ಮೂಲಕ ಹೈದರಾಬಾದ್ ಕರ್ನಾಟಕ ಪ್ರದೇಶದ ಭೌಗೋಳಿಕತೆಯನ್ನು ಅಧ್ಯೈಸಿಕೊಳ್ಳುವ ಪ್ರಯತ್ನ ಈ ಅಧ್ಯಾಯದಲ್ಲಿ ಮಾಡಲಾಗಿದೆ.

೨.೧. ಹೈದರಾಬಾದ್ ಕರ್ನಾಟಕದ ಪ್ರಾಕೃತಿಕ ಸ್ವರೂಪ

ಹೈದರಾಬಾದ ಕರ್ನಾಟಕದ ಪ್ರಾಕೃತಿಕ ಸ್ವರೂಪದ ಲಕ್ಷಣಗಳು ಈ ಕೆಳಗಿನಂತಿವೆ.

೨.೧.೧. ಸ್ಥಳ ನಿರ್ದೇಶನ ಮತ್ತು ಗಡಿಗಳು: ಇಂದಿನ ಕರ್ನಾಟಕದ ರಾಜ್ಯದ ಈಶಾನ್ಯ ಭಾಗದಲ್ಲಿರುವ ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲಾ ಪ್ರದೇಶಗಳು ಹೈದರಾಬಾದ ನಿಜಾಮ್ ಮನೆತನದ ಆಳ್ವಿಕೆಗೆ ಒಳಗಾದ ಕಾಲದಿಂದಲೂ ಈ ಪ್ರದೇಶವನ್ನು ಹೈದರಾಬಾದ್ ಕರ್ನಾಟಕ ಪ್ರದೇಶಗಳೆಂದು ಕರೆಯಲಾಗುತ್ತಿದೆ. ಕರ್ನಾಟಕ ಸರ್ಕಾರದ ಕಂದಾಯ ವಿಭಾಗವಾದ ಗುಲಬರ್ಗಾ ವಿಭಾಗದ ಆಡಳಿತಕ್ಕೆ ಒಳಪಟ್ಟಿದ ಬಳ್ಳಾರಿ ಜಿಲ್ಲೆಯನ್ನು ಹೈದರಾಬಾದ ಕರ್ನಾಟಕವೆಂದು ಕರೆಯಲಾಗುತ್ತಿದೆ. ಆದರೆ ನನ್ನ ಅಧ್ಯಯನವು ನಿಜಾಮ್ ಆಳ್ವಿಕೆಯಲ್ಲಿದ ಪ್ರದೇಶಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡುತ್ತಿರುವುದರಿಂದ, ಬಳ್ಳಾರಿಯ ಮದ್ರಾಸ್ ಪ್ರಾಂತದಲ್ಲಿದರಿಂದ ಈ ಜಿಲ್ಲೆಯನ್ನು ನನ್ನ ಅಧ್ಯಯನದ ಚೌಕಟ್ಟಿನಲ್ಲಿ ಪರಿಗಣಿಸದೆ ಉಳಿದ ಜಿಲ್ಲೆಗಳನ್ನು ಹೈದರಾಬಾದ ಕರ್ನಾಟಕವೆಂದು ಕರೆಯುತ ಅಧ್ಯಯನ ಕೈಗೊಂಡಿದೇನೆ. ಪೂರ್ವಕ್ಕೆ ಇಂದಿನ ಹೊಸ ರಾಜ್ಯವಾದ ತೆಲಂಗಾಣ, ಪಶ್ಚಿಮಕ್ಕೆ ಕರ್ನಾಟಕದ ಬಿಜಾಪುರ ಜಿಲ್ಲೆ, ಉತ್ತರಕ್ಕೆ ಮಹಾರಾಷ್ಟ್ರವು ಹಾಗೂ ದಕ್ಷಿಣಕ್ಕೆ ಬಳ್ಳಾರಿ ಜಿಲ್ಲೆಯು ಗಡಿಗಳಾಗಿರುವುದು ಕಂಡುಬರುತ್ತದೆ.

೨.೧.೨. ಭೂಸ್ವರೂಪ: ದಖನ್ ಪ್ರಸ್ಥಭೂಮಿಯು ಉತ್ತರ ಭಾಗದಿಮದ ದಕ್ಷಿಣ ಭಾಗಕ್ಕೆ ಇಳಿಜಾರಿ ಮುಖವಾಗಿದರಿಂದ ಭೂಸ್ವರೂಪದ ಲಕ್ಷಣಗಳು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತವೆ. ಅಂತಹಾ ಬದಲಾವಣೆಯಲ್ಲಿ ಕೂಡ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಆಶ್ಚರ್ಯ ಪಡುವಷ್ಟು ವಿಭಿನ್ನಮಯವಾದ ಭೂಸ್ವರೂಪದ ಆವಿಷ್ಕಾರಗಳು ಕಂಡುಬರುತ್ತವೆ. ಎತ್ತರವಾದ ಬೆಟ್ಟಗುಡ್ಡಗಳು ಈ ಪ್ರದೇಶದ ವಾಯುವ್ಯದಿಂದ ಚಿಕ್ಕ ಚಿಕ್ಕ ಬೆಟ್ಟಗಳ ಶ್ರೇಣಿಯೊಂದಿಗೆ ಆಗ್ನೇಯ ಮುಖವಾಗಿ ಸುಮಾರು ೯೬ ಕಿ.ಮೀವರೆಗೆ ಸಾಗಿಕೊಂಡು ಬಂದಿರುವುದು ಗಮನಿಸಬಹುದು. ಬಾಲಾಘಾಟ್ ಪರ್ವತ ಶ್ರೇಣಿಯು ಇಂದಿನ ತೆಲಂಗಾಣ ರಾಜ್ಯದ ಶ್ರೀಶೈಲದಿಂದ ಹೊರಟ ಈ ಶ್ರೇಣಿಯು ಹೈದರಾಬಾದ ಕರ್ನಾಟಕದ ಚಿಂಚೋಳಿ ಮಾರ್ಗವಾಗಿ ಬೀದರ ಜಿಲ್ಲೆಯ ಲಾಲಧರಿಗೆ ಬಂದು ತಲುಪುತ್ತದೆ. ಹಾಗೇ ಶಹಾಪುರ ತಾಲೂಕಿನ ಬದಿಯಲ್ಲಿರುವ ಬೆಟ್ಟವನ್ನು ಸಗರನಾಡು ಬೆಟ್ಟವೆಂದು ಕರೆಯುತ್ತಾರೆ. ಈ ಬೆಟ್ಟವು ಬುದ್ಧ ಮಲಗಿರುವ ದೃಶ್ಯದಂತೆ ಕಾಣುವುದರಿಂದ ಈ ಬೆಟ್ಟಕ್ಕೆ ಬುದ್ಧ ಮಲಗಿದ ಬೆಟ್ಟವೆಂದು ಕರೆಯುತ್ತಾರೆ.

ಹೈದರಾಬಾದ ಕರ್ನಾಟಕ ಪ್ರದೇಶವು ಪ್ರಸ್ಥಭೂಮಿ ಎಂದು ಬಣ್ಣಿಸಲ್ಪಟ್ಟರೂ ಅದರ ಭೂಮಿಯ ಮೇಲ್ಮೆ ಸಮತಟ್ಟಾಗಿಲ್ಲ. ಈ ಭೂಪ್ರದೇಶದಲ್ಲಿ ಸಣ್ಣ ಸಣ್ಣ ಹಳ್ಳಗಳು ಹರಿಯುವುದರಿಂದ ಕಣಿವೆ, ಕಂದರಗಳನ್ನು ಇರುವುದು ಗಮನಿಸಬಹುದು. ಜೊತೆಗೆ ಕೆಲವು ನದಿಗಳು ಹರಿಯುವುದರಿಂದ ನದಿಯ ದಡದಲ್ಲಿ ಫಲವತ್ತಾದ ಮಣ್ಣಿನಿಮದ ನಿರ್ಮಾಣಗೊಂಡ ಭೂಪ್ರದೇಶ ಕಂಡುಬರುತ್ತದೆ. ಅಂತಹ ಪ್ರದೇಶಕ್ಕೆ ದೋ-ಅಪ್ ಭೂಪ್ರದೇಶವೆಂದು ಕರೆಯುವರು. ಹೈದರಾಬಾದ ಕರ್ನಾಟಕದಲ್ಲಿ ಇಂತಹ ಭೂಪ್ರದೇಶ ಹೊಂದಿರುವ ಸಾಗರ ನಾಡು ಪ್ರದೇಶವು ಪ್ರದೇಶವು ಭೀಮಾ ನದಿ ಮತ್ತು ಕೃಷ್ಣಾ ನದಿಯ ನಡುವೆ ಇರುವ ದೋ-ಅಬ್ ಪ್ರದೇಶವಾಗಿದೆ. ಹಾಗೆ ರಾಯಚೂರು ದೋ-ಅಬ್ ಪ್ರದೇಶವು ಕೂಡ ಕೃಷ್ಣಾ ಮತ್ತು ತುಂಗಭದ್ರ ನದಿಯ ನಡೆವೆ ಇರುವಾ ಭೂಪ್ರದೇಶವು ಫಲವತ್ತಾದ ಭೂಮಿಯಿಂದ ಕೂಡಿದೆ. ಈ ದೋ-ಅಬ್ ಭೂಪ್ರದೇಶವು ಉತ್ತಮವಾದ ಭೌಗೋಲಿಕ ಸನ್ನಿವೇಶ, ಹೇರಳವಾದ ಖನಿಜ ಸಂಪತ್ತು, ನದಿಗಳಿಂದ ಆವೃತ್ತವಾಗಿ ಫಲವತ್ತಾದ ಮೂಲಕ ಗುರುತಿಸಿಕೊಂಡಿತು. ಇಂತಹ ಭೂಪ್ರದೇಶದ ಮೇಲೆ ಯಜಮಾನಿಕೆಯನ್ನು ಸಾಧಿಸಲು ಅನೇಕ ಅರಸು ಮನೆತನಗಳು ಹೋರಾಟ ಮಾಡಿರುವುದು ಚರಿತ್ರೆ ಬರವಣಿಗೆಗಳಿಂದ ತಿಳಿದುಬರುತ್ತದೆ.

೨.೧.೩. ಭೂಶಿಲಾ ಲಕ್ಷಣ: ಹೈದರಾಬಾದ್ ಕರ್ನಾಟಕ ಪ್ರದೇಶವು ಕರ್ನಾಟಕ ರಾಜ್ಯದ ಇತರ ಜಿಲ್ಲೆಗಳಿಗಿಂತ ವಿಶೇಷವಾಗಿರುವುದು ಗಮನಿಸಬಹುದು. ಏಕೆಂದರೆ ದಕ್ಷಿಣ ಕರ್ನಾಟಕ ಪ್ರಸ್ಥಭೂಮಿಯಲ್ಲಿ ಆರ್ಕಿಯನ್ ಯುಗಕ್ಕೆ ಸೇರಿದ ಹಸಿರುಕಲ್ಲು ಗ್ರಾನೈಟ್ ಶಿಲೆಗಳು ಹೇರಳವಾಗಿ ಸಿಗುತ್ತವೆ. ಆದರೆ ಆರ್ಶಿಯನ್ ಯುಗದ ಗ್ರಾನೈಟ್ ಪದರು ಶಿಲೆಗಳಿಂದ ಆರಂಭಿಸಿ ಕ್ರಿಚೇಶಿಯನ್ ಯುಗಕ್ಕೆ ಸೇರಿದ ಡೆಕ್ಕನ್ ಟ್ರ್ಯಾಪ, ಅಂತರ ಟ್ರ್ಯಾಪ ಜಲಜಶಿಲೆಗಳು ಹೈದರಾಬಾದ ಕರ್ನಾಟಕದಲ್ಲಿ ಹೇರಳವಾಗಿ ಸಿಗುತ್ತವೆ. ಅಷ್ಟೆ ಅಲ್ಲದೆ ಈ ಭಾಗದಲ್ಲಿ ಪೆನಿನ್‌ಸುಲಾರ್ ನೈಸ್ ಕಣಶಿಲೆಗಳು ಸುರಪುರ, ಶಹಾಪುರ ಮತ್ತು ಯಾದಗಿರಿಯಲ್ಲಿ ಲಭ್ಯವಾಗುತ್ತವೆ.

ಹೈದರಾಬಾದ ಕರ್ನಾಟಕದಲ್ಲಿ ಕಂಡುಬರುವ ಜಲಜ-ಶಿಲೆಯು ಭೀಮಾ ನದಿಯ ಸುಳಿಗಳಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಇದಕ್ಕೆ ಭೀಮಾ ವರ್ಗ ಶಿಲೆಯಂದು ಹೆಸರು ಬಂದಿದೆ. ಈ ಶಿಲೆಯು ಒಟ್ಟು ನಾಲ್ಕು ವಿಧಗಳಲ್ಲಿ ಕಂಡುಬರುತ್ತದೆ. ಅದರಲ್ಲಿ ಅತಿ ಹೆಚ್ಚು ಉಪಯುಕ್ತವಾದ ಶಿಲೆಯೆಂದರೆ ಸುಣ್ಣದ ಕಲ್ಲು, ಈ ಸುಣ್ಣದ ಕಲ್ಲು ಸಿಮೆಂಟ್ ತಯಾರಿಸಲು ಉಪಯೋಗಕ್ಕೆ ಬರುತ್ತದೆ. ಇದನ್ನು ಮನಗಂಡ ಉದ್ದಿಮೆದಾರರು, ಸಿಮೆಂಟ್ ತಯಾರಿಸುವ ಕಾರ್ಖಾನೆಗಳನ್ನು ವಾಡಿ, ಸೇಡಂ, ಶಹಾಬಾದ್ ಮತ್ತು ಚಿಂಚೋಳ್ಳಿಯಲ್ಲಿ ಆರಂಭಿಸಿರುವುದು ಗಮನಿಸಬಹುದು. ಹಾಗೆ ಶಹಾಬಾದ ಸುಣ್ಣದಲ್ಲಿ ಕಲ್ಲಿನಿಂದ ಕಲ್ಲಿನ ಗಣಿಗಾರಿಕೆಯು ಬಹು ಕಾಲದಿಂದಲೂ ಆರಂಭವಾಗಿರುವುದು ಕಂಡುಬರುತ್ತದೆ. ಈ ಉದ್ದಿಮೆಯು ಇವತ್ತಿಗೂ ಕೂಡ ಮುಂದುವರಿಸಿಕೊಂಡು

ಬದಲಾಗಿದೆ. ಇಲ್ಲಿನ ಸುಣ್ಣದ ಕಲ್ಲು ಮಹಾರಾಷ್ಟ್ರ, ಗುಜರಾತ ಮತ್ತು ಮಧ್ಯಪ್ರದೇಶ ರಾಜ್ಯಗಳಿಗೆ ರಫ್ತಾಗುತ್ತಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಡೆಕ್ಕನ ಟ್ರ್ಯಾಪಶಿಲೆ ಅತ್ಯಂತ ಗಮನಿಯ ಪ್ರಮಾಣದಲ್ಲಿ ಸಿಗುತ್ತದೆ. ಈ ಶಿಲೆಯು ದ್ರವರೂಪದ ಶಿಲಾರಸವನ್ನು ಉಕ್ಕಿ ಒಂದು ಗಟ್ಟಿಯಾದ ರೂಪದಲ್ಲಿ ಗುಡ್ಡಗಳ ತಳ ಭಾಗದಲ್ಲಿ ಶೇಖರಣೆಗೊಂಡಿದರಿಂದ ಟ್ರ್ಯಾಪಗಳು ವಾತಾವರಣ ಹೊಡೆತದಿಂದ ವರ್ತುಲ ಶಿಥಿಲೀಕರಣ ಹೊಂದಿವೆ. ಡೆಕ್ಕನ್ ಟ್ರ್ಯಾಪಗಳನ್ನು ಮುಚ್ಚಿರುವ ಮಣ್ಣು ಜೈವಿಕ ವಸ್ತುಗಳಿಂದ ಕೂಡಿ ಫಲವತ್ತಾಗಿದ್ದು ಹತ್ತು ಮತ್ತು ಬೆಳೆಕಾಳು ಬೆಳೆಗಳಿಗೆ ಉಪಯುಕ್ತವಾಗಿದೆ. ಇಂತಹ ಉಪಯುಕ್ತ ಫಲವತ್ತಾದ ಭೂಮಿಯು ಮೇಲವರ್ಗದ ಜಮೀನ್ದಾರರ ವಶದಲ್ಲಿರುವುದರಿಂದ ಹೆಚ್ಚಿನ ಪ್ರಮಾಣದ ಲಾಭ ಪಡೆದು ಆರ್ಥಿಕವಾಗಿ ಬಲಿಷ್ಠರಾಗಿದ್ದಾರೆ. ಹೀಗೆ ಸಂಪನ್ಮೂಲ ಒಂದೇ ಕಡೆ ಕೇಂದ್ರೀಕರಣಗೊಂಡು ಆರ್ಥಿಕ ಅಸಮಾನತೋಲನ ನಿರ್ಮಾಣವಾಗುತ್ತದೆ.

ಹೀಗೆ ಈ ಪ್ರದೇಶದಲ್ಲಿ ಗಟ್ಟಿಯಾಗಿ ಶಿಲೆಗಳಿಂದಾಗಿ ಭೂಮಿಯು ಮೃದುವಾಗಿರದೆ ಗಡುಸಾಗಿರುವುದರಿಂದಾಗಿ ಭೂಕಂಪ ಸಂಭವಿಸಿದಾಗ ಯಾವುದೇ ಹೆಚ್ಚಿನ ಪ್ರಮಾಣದ ಹಾನಿಯಾಗುವುದಿಲ್ಲ. ಆದರೆ ದಕ್ಷಿಣ ಕರ್ನಾಟಕದ ಭಾಗದಲ್ಲಿ ಕರಾವಳಿ ಪ್ರದೇಶ ಹತ್ತಿರವಿರುವುದರಿಂದ ಅಲ್ಲಿನ ಭೂಮಿಯು ಮೃದುವಾಗಿದರಿಂದ ಆ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭೂಕಂಪ ಸಂಭವಿಸುತ್ತದೆ. ಹೀಗಾಗಿ ಹೈದರಾಬಾದ್ ಕರ್ನಾಟಕಕ್ಕೆ ಗಟ್ಟಿಯಾದ ಶಿಲೆಗಳಿಂದಾಗಿ ಗಡುಸಾದ ಭೂಪ್ರದೇಶ ಹೊಂದಿದರಿಂದ ಇಲ್ಲಿ ಯಾವುದೇ ವಾಣಿಜ್ಯ ಬೆಳೆಯನ್ನು ಬೆಳೆಯಲು ಸಾಧ್ಯವಾಗುವುದಿಲ್ಲ. ಹಾಗೇ ಗಟ್ಟಿಯಾದ ಶಿಲೆಗಳು ಭೂಮಿಯಲ್ಲಿ ಇರುವುದರಿಂದ ಅಂತರ್ಜಲ ಸಂಪನ್ಮೂಲ ಕೂಡ ತುಂಬಾ ಅಲ್ಪ ಪ್ರಮಾಣದಲ್ಲಿ ಸಿಗುತ್ತದೆ. ಇದರಿಂದ ಈ ಭಾಗದ ರೈತರು ಕೇವಲ ಮಳೆಯನ್ನೆ ನಂಬಿಕೊಂಡು ವಾಣಿಜ್ಯವಲ್ಲದ ಬೆಳೆಯನ್ನು ಬೆಳೆದು ಕಡಿಮೆ ಬೆಲೆಗೆ ಮಾರಾಟ ಮಾಡಿ ಕೃಷಿಗಾಗಿ ಮಾಡಿದ ಸಾಲವನ್ನು ತಿರಿಸಲಾಗದೆ ಬಡತನದಿಂದ ಬಳಲುತ್ತಿದ್ದಾರೆ. ಇನ್ನೂ ಭೂಮಿಯಿಲ್ಲದ ಕೂಲಿ ಕಾರ್ಮಿಕರು ಕೆಲಸವಿಲ್ಲದಕ್ಕಾಗಿ ತಮ್ಮ ಉಪಜೀವನ ನಡೆಸಲು ಕೆಲಸವನ್ನು ವರೆಸಿಕೊಂಡು ಗೂಳೆ ಹೋಗುತ್ತಿರುವುದು ಇಂದಿಗೂ ಗಮನಿಸಬಹುದಾಗಿದೆ.

೨.೧.೪. ಪ್ರಾಕೃತಿಕ ವಿಭಾಗ : ಕರ್ನಾಟಕ ರಾಜ್ಯದ ಭಾರತದ ಪರ್ಯಾಯ ದ್ವೀಪದ ಒಂದು ಭಾಗ ವಾಗಿದ್ದು, ವೈವಿಧ್ಯಮಯ ಪ್ರಾಕೃತಿಕ ಲಕ್ಷಣಗಳು ಹೊಂದಿದೆ. ಇದರ ದಕ್ಷಿಣಭಾಗವು ಏರು-ತಗ್ಗುಗಳುಳ್ಳ ಭೂಸ್ವರೂಪಗಳನ್ನು ಹೊಂದಿದರೆ ಉತ್ತರ ಭಾಗವು ವಿಶಾಲವಾದ ಬಯಲು ಸೀಮೆಯಾಗಿದೆ. ಕರಾವಳಿ ಮತ್ತು ಮಲೆನಾಡುಗಳಲ್ಲಿ ವಿರುದ್ಧ ಸ್ವರೂಪಗಳಾಗಿವೆ. ಪೂರ್ವದ ಕಡೆಗೆ ಸಾಧಾರಣ ಇಳಿಜಾರು ಮತ್ತು ಪಶ್ಚಿಮಕ್ಕೆ ಕಡಿದಾದ ಇಳಿಜಾರಾಗಿದೆ. ಅಲಲ್ಲಿ ಬೆಟ್ಟ ಸಾಲುಗಳಿದ್ದು, ನಡುವೆ

ಕಣಿವೆ ಕಂದರುಗಳು ಕಂಡು ಬರುವವು. ರಾಜ್ಯದ ಬಹಳಷ್ಟು ಭಾಗವು ಸಮುದ್ರಮಟ್ಟಕ್ಕೆ ೪೫೦ ರಿಂದ ೯೦೦ ಮೀಟರ ಉತ್ತರದಲ್ಲಿದೆ. ಕರ್ನಾಟಕ ರಾಜ್ಯದ ಭೂರಚನೆ ಮತ್ತು ಮೇಲ್ಮೈ ಲಕ್ಷಣಗಳನ್ನಾಧರಿಸಿ ಕರ್ನಾಟಕವನ್ನು ಮೂರು ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಕರಾವಳಿ ಮೈದಾನ, ಮಲೆನಾಡು ಮತ್ತು ಮೈದಾನ ಪ್ರದೇಶವಾಗಿ ಈ ಮೈದಾನ ಪ್ರದೇಶದಲ್ಲಿ ಮತ್ತೆ ಎರಡು ವಿಭಾಗಗಳಾಗಿ ಮಾಡಿಕೊಳ್ಳಲಾಗಿದೆ. ಒಂದು ಉತ್ತರ ಮೈದಾನ ಮತ್ತು ದಕ್ಷಿಣ ಮೈದಾನವೆಂದು ಈ ಉತ್ತರ ಮೈದಾನದಲ್ಲಿಯೇ ಬರುವ ಹೈದರಾಬಾದ ಕರ್ನಾಟಕ ಪ್ರದೇಶ ಸಾಧಾರಣ ಏರು ತಗ್ಗುಗಳಿಂದ ಕೂಡಿದೆ ಕಪ್ಪು ಮಣ್ಣಿನ ವಿಶಾಲ ಬಯಲು ಪ್ರದೇಶವಾಗಿದೆ. ಅಲ್ಲೊಂದಿಲೊಂದು ಬೆಟ್ಟ ಗುಡ್ಡ ಸವೆದು ಹೋಗಿ ಉಳಿದಿರುವ ಬೆಟ್ಟಗಳ ಸಾಲುಗಳು ಬೇಸರಿಕೆಯನ್ನು ನಿಗೀಸುತ್ತವೆ. ಕರ್ನಾಟಕದ ದಕ್ಷಿಣ ಮೈದಾನದಂತೆ ತೆಂಗು, ಭತ್ತ ಮತ್ತು ರಾಗಿ ಮುಂತಾದ ಆರ್ಥಿಕವಾಗಿರುವ ವಾಣಿಜ್ಯ ಬೆಳೆಗಳಿರದೆ ಜೋಳ, ಗೋಧಿ, ಸಜ್ಜೆ, ನವಣೆ, ತೊಗರಿ ಮುಂತಾದ ಬೆಳೆಗಳ ಮೇಲೆ ಅವಲಂಬಿಸಿದ ಪ್ರದೇಶವಾಗಿದೆ. ಈ ಮೈದಾನದಲ್ಲಿ ಹರಿಯುವ ಕೃಷ್ಣಾ, ಭೀಮಾ ಮತ್ತು ತುಂಗಭದ್ರ ನದಿಗಳು ಹರಿಯುತ್ತಿದ್ದರು ಕೂಡ ಈ ನದಿಗಳ ಬಳಕೆ ಸರಿಯಾದ ಪ್ರಮಾಣದಲ್ಲಿ ಆಗದೆ ಇರುವುದಕ್ಕೆ ನೀರಾವರಿಯಲ್ಲಿ ಇನ್ನೂ ಹಿಂದುಳಿದಿರುವುದು ಕಂಡುಬರುತ್ತದೆ. ನದಿಗಳ ದಡದಲ್ಲಿರುವ ಫಲವತ್ತಾದ ದೋ-ಅಬ್ ಪ್ರದೇಶಗಳಂತೆ ಭೂಪ್ರದೇಶವು ಮಾತ್ರ ಫಲವತ್ತಾಗಿದರಿಂದ ಈ ಭೂ ಪ್ರದೇಶಕ್ಕಾಗಿ ಅನೇಕ ಯುದ್ಧಗಳು ನಡೆದಿರುವುದು ಗಮನಿಸಬಹುದು. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಇಂತಹ ಫಲವತ್ತಾದ ಪ್ರದೇಶ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಉಳಿದ ಭೂಪ್ರದೇಶವು ಒಣ ಹವೆಯಿಂದ ಕೂಡಿದಾಗಿದೆ. ಅದಕ್ಕಾಗಿ ಈ ಪ್ರದೇಶವು ಆರ್ಥಿಕವಾಗಿ ಹಿಂದೂಳಿಯುವುದಕ್ಕೆ ಭೌಗೋಳಿಕತೆಯನ್ನು ಹೊಂದಿರುವ ಕರ್ನಾಟಕ ಮಲೆನಾಡು ಮತ್ತು ಕರಾವಳಿ ಪ್ರದೇಶಗಳ ಆರ್ಥಿಕವಾಗಿ ಮುಂದುವರೆದಕ್ಕೆ ಅಲ್ಲಿ ಸಿಗುವ ಹೇರಳವಾದ ನೈಸರ್ಗಿಕ ಸಂಪನ್ಮೂಲ, ಅರಣ್ಯ ಸಂಪತ್ತು, ವಾಯುಗುಣ ಮುಂತಾದ ಅಂಶಗಳಿಂದ ಅವುಗಳು ಆರ್ಥಿಕವಾಗಿ ಉತ್ತಮ ರೀತಿಯಲ್ಲಿ ಇರುವುದು ಕಂಡುಬರುತ್ತದೆ.

೨.೧.೫. ನದಿಜಾಲ ಮತ್ತು ಜನಜೀವನ: ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹರಿಯುವ ನದಿಗಳು ಪೌರಾಣಿಕವಾಗಿ ತಮ್ಮ ಬಗ್ಗೆ ಪುರಾಣಗಳನ್ನು ಹೊಂದಿದರು ಕೂಡ, ಸಾಂಸ್ಕೃತಿಕವಾಗಿ ಅವು ಈ ಪ್ರದೇಶದ ಜನರಿಗೆ ತೀರಾ ಹತ್ತಿರದಲ್ಲಿವೆ. ಪುರಾಣಗಳು ಭಾರತದಲ್ಲಿ ಹರಿಯುವ ಪ್ರತಿಯೊಂದು ನದಿಗೂ ಇದೆಯಾದರೂ, ಜನಪದ ನೆಲೆಯಲ್ಲಿ ಅವು ಗುರುತಿಸಿಕೊಳ್ಳುವ ಬಗೆಯೇ ಬೆರೆಯದು ಈ ಪ್ರದೇಶದಲ್ಲಿ ಹರಿಯುವ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ. ಅನಂತರ ಅನೇಕ ನದಿಗಳು ತೀರ ಸೂರಗಿ ಹೋಗುತ್ತವೆ. ಇನ್ನೂ ಕೆಲವು ನದಿಗಳು ಸಾಮಾನ್ಯವಾಗಿ ಒಣಗಿರುತ್ತವೆ.

ಈ ನದಿಗಳು ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಕೃಷಿ ಮತ್ತು ಜನಜೀವನಕ್ಕೆ ಕುಡಿಯುವ ನೀರಿಗಾಗಿ ಬಳಕೆಯಾಗುತ್ತಿವೆ. ಇತ್ತಿಚೆಗೆ ಅಭಿವೃದ್ಧಿ ಎಂಬ ಹೆಸರನ್ನು ಹೇಳಿಕೊಂಡು ಸ್ಥಾಪನೆಯಾಗುತ್ತಿರುವ ಕೈಗಾರಿಕೆಗಳಿಗೆ ಸರ್ಕಾರವು ಈ ನದಿಗಳ ನೀರನ್ನ ಉಪಯೋಗಿಸಿಕೊಳ್ಳಲು ಅನುಮತಿ ನೀಡಿದೆ. ಇದರಿಂದ ಅಲ್ಪ ಪ್ರಮಾಣದಲ್ಲಿ ಹರಿಯುವ ನದಿಗಳು ಉದ್ದಿಮಿಗಳ ಪಾಲಾಗಿ, ಕೃಷಿ ಅವಶ್ಯಕತೆಗೆ ಅನುಗುಣವಾಗಿ ನೀರು ಸಿಗದೆ ಸಂಪೂರ್ಣವಾಗಿ ಕೃಷಿಯು ಹಿನ್ನಡೆ ಸಾಗುತ್ತಿದೆ. ಹೀಗೆ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಹರಿಯುವ ನದಿಗಳು ಈ ಕೆಳಗಿನಂತಿವೆ.

೧. ಕೃಷ್ಣಾ ನದಿ : ಕೃಷ್ಣಾ ನದಿಯು ಮಹಾರಾಷ್ಟ್ರದಲ್ಲಿ ಜನಿಸಿ ದ್ವೀಪದ ಮೂಲಕ ಪಶ್ಚಿಮದಿಂದ ಪೂರ್ವಕ್ಕೆ ಮಹಾರಾಷ್ಟ್ರ-ಕರ್ನಾಟಕ ಮತ್ತು ಆಂಧ್ರಪ್ರದೇಶದ ಮಾರ್ಗವಾಗಿ ಹರಿಯುತ್ತದೆ. ಕರ್ನಾಟಕದ ಜೀವನದಿಗಳಲ್ಲಿ ಒಂದಾಗಿರುವ ಕೃಷ್ಣಾ ನದಿಯು ಧೂದಗಂಗಾ ಸಂಗಮದಲ್ಲಿ ಕರ್ನಾಟಕವನ್ನು ಪ್ರವೇಶಿಸುತ್ತದೆ. ಕೃಷ್ಣಾ ನದಿಯು ಉತ್ತರ ಕರ್ನಾಟಕದ ಭಾಗಕ್ಕೆ ಅತಿ ಉಪಯುಕ್ತ ನದಿಯಾಗಿದೆ. ಸ್ಥಳೀಯರು ಇದಕ್ಕೆ ಹಿರೇ ಹೊಳೆ ಎಂಬ ಹೆಸರಿನಿಂದ ಕೂಡ ಕರೆಯುತ್ತಾರೆ. ಮಲಪ್ರಭಾ ಸಂಗಮದ ಮುಂದೆ ಸ್ವಲ್ಪ ದೂರದಲ್ಲಿ ಕೃಷ್ಣಾ ನದಿಯು ದಖನ್ ಪ್ರಸ್ಥ ಭೂಮಿಯ ಉತ್ತರ ಪ್ರದೇಶವಾದ ಗುಲಬರ್ಗಾಮ ಯಾದಗಿರಿ ಮತ್ತು ರಾಯಚೂರಿನಲ್ಲಿ ಹರಿಯುವ ಬುಡದಿಪಾಡು ಗ್ರಾಮದ ಬಳಿ ರಾಜ್ಯದ ಗಡಿಯನ್ನು ದಾಟುತ್ತದೆ. ಈ ನದಿಯು ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ನಾರಾಯಣಪುರ ಗ್ರಾಮದ ಬಳಿ ೬೦ ಮೀಟರಗಳಷ್ಟು ಕೆಳಕ್ಕೆ ದುಮುಕಿ ಜಲದುರ್ಗ ಜಲಪಾತವನ್ನು ನಿರ್ಮಿಸಿದೆ. ಈ ನದಿಗೆ ಮಳೆಯ ನೀರು ಪ್ರಧಾನ ಆಸರೆಯಾಗಿರುವುದರಿಂದ ಜೂನ್‌ನಿಂದ ಡಿಸೆಂಬರ್‌ವರೆಗೆ ಇದರ ಪ್ರವಾಹ ಅಧಿಕವಾಗಿರುತ್ತದೆ. ಬೇಸಿಗೆಯ ದಿನಗಳಲ್ಲಿ ಇದು ತೀರ ಕೆಳಮಟ್ಟದಲ್ಲಿ ಹರಿಯುತ್ತದೆ. ಕೃಷ್ಣಾ ನದಿಗೆ ನಾರಾಯಣಪುರ ನೀರಾವರಿ ಯೋಜನೆಯ ಮುಖಾಂತರ ಬಿಜಾಪುರ, ಗುಲಬರ್ಗಾ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಒದಗಿಸುತ್ತದೆ.

೨. ಭೀಮಾ ನದಿ : ಭೀಮಾ ನದಿಯು ಕೃಷ್ಣಾ ನದಿಯು ಉಪನದಿಯಾಗಿದೆ, ಇದು ಮಹಾರಾಷ್ಟ್ರದ ಪಶ್ಚಿಮ ಘಟ್ಟಗಳ ಭೀಮಾಶಂಕರದಲ್ಲಿ ಉಗಮಿಸುತ್ತದೆ. ಈ ನದಿಯು ವಿಜಾಪುರ ಜಿಲ್ಲೆಯ ಮುಖಾಂತರ ಕರ್ನಾಟಕದ ಗಡಿಯನ್ನು ಪ್ರವೇಶಿಸಿ ಅಫಜಲಪುರ ಮಾರ್ಗವಾಗಿ ಗುಲಬರ್ಗಾ ಜಿಲ್ಲೆಯನ್ನು ಪ್ರವೇಶಿಸುತ್ತಾ ಈಶಾನ್ಯಾಭಿಮುಖವಾಗಿ ಹರಿದು ಅಲ್ಲಿಂದ ಇದಕ್ಕಿದಂತೆ ನೈಋುತ್ಯಕ್ಕೆ ತಿರುಗಿ ಚಿತ್ತಾಪುರ ತಾಲೂಕಿನ ಸನ್ನತಿಯವರೆಗೂ ಬರುತ್ತದೆ. ಹೀಗೆ ಈ ನದಿಯು ಗುಲಬರ್ಗಾ ಮತ್ತು ಯಾದಗಿರಿಯಲ್ಲಿ ಸುಮಾರು ೨೪೦೦ ಕಿ.ಮೀರಷ್ಟು ದೀರ್ಘವಾಗಿ ಹರಿಯುತ್ತದೆ.

ಭೀಮಾ ನದಿ ಹರಿಯುವ ಪ್ರದೇಶ ಬಹುಪಾಲು ಡಕ್ಕನ್ ಟ್ರ್ಯಾಪಹೊಂದಿದು ಇಲ್ಲೆಲ್ಲ ಕರಿಕಲ್ಲು ಹೆಚ್ಚಾಗಿದ್ದು, ಅದರ ಮೇಲೆ ದಪ್ಪನೆಯ ಫಲವತ್ತಾದ ಕಪ್ಪು ಮಣ್ಣಿನ ಪದರ ಇರುವುದು.

ಪ್ರತಿವರ್ಷ ಪ್ರವಾಹ ಕಾಲದಲ್ಲಿ ನದಿ ಹೊತ್ತು ತಂದ ಫಲವತ್ತಾದ ಮಣ್ಣು ಕೆಲವು ಕಡೆ ನದಿಯ ಇಕ್ಕೆಲಗಳಲ್ಲಿ ಹರಡುತ್ತಿರುತ್ತದೆ. ಈ ಪ್ರದೇಶದ ಮಣ್ಣು ಫಲವತ್ತಾಗಿರುವುದಲ್ಲದೆ ನೀರಿನ ಅಂಶವನ್ನು ಬಹುಕಾಲ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಆದರಿಂದ ಸಕಾಲದಲ್ಲಿ ಸ್ವಲ್ಪ ಮಳೆಯಾದರೂ ಕೂಡ ಬೆಳೆ ಚೆನ್ನಾಗಿ ಬರುತ್ತದೆ. ಹೀಗೆ ಭೀಮಾ ನದಿಯು ಹರಿಯುತ್ತಿದ್ದರು, ನೀರಾವರಿಗೆ ಈ ನದಿಯನ್ನು ಸರಿಯಾಗಿ ಬಳಸಿಕೊಳ್ಳುವಲ್ಲಿ ಹಿಂದೆ ಬಿದ್ದಿರುವುದು ಕಂಡುಬರುತ್ತದೆ.

೩. **ತುಂಗಭದ್ರಾ ನದಿ :** ಪಶ್ಚಿಮ ಘಟ್ಟಗಳ ಗಂಗಾ ಮೂಲದಲ್ಲಿ ಜೊತೆಯಾಗಿ ಜನಿಸುವ ತುಂಗಾ ಭದ್ರಾ ಅವಳಿ ನದಿಗಳು ಶಿವಮೊಗ್ಗದ ಉತ್ತರದಲ್ಲಿ ಸಂಧಿಸಿ ತುಂಗಭದ್ರಾ ಎನಿಸುತ್ತದೆ. ಈ ನದಿಗೆ ಹೈದರಾಬಾದ್ ಕರ್ನಾಟಕದ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಎಂಬಲ್ಲಿ ಮೇಲ ಸೇತುವೆ ಕಟ್ಟುವ ಮೂಲಕ ನೀರಾವರಿಗೆ ಹಾಗೂ ಕುಡಿಯುವ ನೀರಿಗಾಗಿ ಉಪಯೋಗಿಸುತ್ತಿದ್ದಾರೆ. ತುಂಗಭದ್ರಾ ನದಿಯು ರಾಯಚೂರ ಗಡಿಭಾಗದಲ್ಲಿ ಹರಿದು ಹೋಗುವುದು, ಹಾಗೆ ಇನ್ನೊಂದು ಕಡೆ ಕೃಷ್ಣಾ ನದಿಯು ಹರಿಯುವುದರಿಂದ ಈ ಎರಡು ನದಿಗಳ ಮಧ್ಯ ಇರುವ ರಾಯಚೂರು ಪ್ರದೇಶವು ಫಲವತ್ತಾದ ಭೂಪ್ರದೇಶವನು ಹೊಂದಿದೆ. ಇದಕ್ಕೆ ರಾಯಚೂರು ದೋ–ಅಬ್ ಪ್ರದೇಶ ಎಂದು ಕರೆಯುತ್ತಾರೆ. ಹೀಗೆ ಈ ನದಿಯು ತೆಲಂಗಾಣ ಮೂಲಕ ಬಂಗಾಳಕೊಲ್ಲಿ ಸೇರುತ್ತದೆ.

೪. **ಅಮರ್ಜಾ ನದಿ :** ಈ ನದಿಯು ಭೀಮಾ ನದಿಯ ಉಪನದಿಗಳಲ್ಲಿ ಒಂದು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯ ಉಮರ್ಗಾ ತಾಲೂಕಿನ ಆಲೂರ ಗ್ರಾಮದ ಹತ್ತಿರ ಹುಟ್ಟಿ ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ನಿರ್ಗುಂಚಿ ಗ್ರಾಮದ ಹತ್ತಿರ ಪ್ರವೇಶಿಸುತ್ತದೆ. ನಂತರ ಅಫಜಲಪುರದ ದೇವಲಗಾಣಾಪುರ ಬಳಿ ಭೀಮಾನದಿಯನ್ನು ಸೇರುತ್ತದೆ. ಈ ನದಿಯ ಉದ್ದ ೧೦೦ ಕಿ.ಮೀ ಹರಿವಾಗಿದೆ. ಅದರಲ್ಲಿ ಉಮರ್ಗಾ ತಾಲೂಕಿನಲ್ಲಿ ೮ ರಿಂದ ೧೦ ಕಿ.ಮೀ ಹರಿಯುವುದು ಬಿಟ್ಟರೆ ಉಳಿದಷ್ಟು ಗುಲಬರ್ಗಾ ಜಿಲ್ಲೆಯಲ್ಲಿಯೇ ಹರಿಯುತ್ತದೆ. ಈ ನದಿಯಿಂದ ಅಫಜಲಪುರ ಮತ್ತು ಆಳಂದ ತಾಲೂಕಿನ ಕೃಷಿಗೆ ಅನುಕೂಲವಾಗಿದೆ.

೫. **ಮುಲ್ಲಾಮರಿ ನದಿ :** ಬೀದರ ಜಿಲ್ಲೆಯ ಹುಮನಾಬಾದ್ ತಾಲೂಕಿನ ಮಚಾಲ ಬಳಿ ಹುಟ್ಟುವ ಮುಲ್ಲಾಮರಿ ಆಗ್ನೇಯ ದಿಕ್ಕಿನಡೆ ಸುಮಾರು ೫೦ ಕಿ.ಮೀ ಹರಿದು ಗುಲಬರ್ಗಾ ಜಿಲ್ಲೆಯನ್ನು ಕಿನ್ನಿ ಗ್ರಾಮದ ಬಳಿ ಪ್ರವೇಶಿಸುತ್ತದೆ. ಅಲ್ಲಿಂದ ಗೋಬರವಾಡ ಗ್ರಾಮದವರೆಗೆ ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳ ಗಡಿಯಾಗಿ ಹರಿಯುತ್ತದೆ. ನಂತರ ಚಿಂಚೋಳಿ ಪಟ್ಟಣದಿಂದ ದಕ್ಷಿಣದ ಕಡೆಗೆ ಪ್ರವಹಿಸುವ ಈ ನದಿಯು ಜಟ್ಟೂರು ಗ್ರಾಮದ ಬಳಿ ಕಾಗೀಣಾ ನದಿಯನ್ನು ಸೇರಿಕೊಳ್ಳುತ್ತದೆ.

೬. **ಕಾರಂಜಾ ನದಿ :** ಬೀದರ ಜಿಲ್ಲೆಯಲ್ಲಿ ಹರಿಯುವ ಕಾರಂಜಾ ನದಿಯು ಮಂಜ್ರಾದ ಉಪ ನದಿಗಳಲ್ಲಿ ಒಂದು. ಇದು ತೆಲಂಗಾಣದ ಮೇಡಕ್ ಜಿಲ್ಲೆಯ ಖೀರ ಹಳ್ಳಿಯ ಸಮೀಪದಲ್ಲಿ

ಜನಿಸುತ್ತದೆ. ಮುಂದೆ ಕರ್ನಾಟಕದಲ್ಲಿ ಹರಿದು ನಾರದ ಸಂಗಮದ ಬಳಿ ಮಂಜ್ರಾವನ್ನು ಸಾರುತ್ತದೆ. ಈ ನದಿಯು ಬೀದರ ಜಿಲ್ಲೆಗೆ ಕೃಷಿಗೆ ಅನುಕೂಲಕರವಾಗಿದೆ.

೭. **ಬೆಣ್ಣೆತೊರಿ ನದಿ :** ಕಾಗಿಣಾ ನದಿಯ ಉಪನದಿಯಾದ ಬೆಣೆತೊರೆ ನದಿಯು ಮಹಾರಾಷ್ಟ್ರದ ಮಾತಿಗಾಂವ ಗ್ರಾಮದ ಬಳಿ ಹುಟ್ಟಿ ಆಳಂದ ತಾಲೂಕಿನ ಹಿಪ್ಪರಾಗಿ ಗ್ರಾಮದ ಬಳಿ ಗುಲಬರ್ಗಾ ಜಿಲ್ಲೆಯನ್ನು ಪ್ರವೇಶಿಸುತ್ತದೆ., ಹೀಗೆ ಗುಲಬರ್ಗಾ ಜಿಲ್ಲೆಯಲ್ಲಿಯ ಈ ನದಿಯು ಹೆಚ್ಚಿನ ಪ್ರಮಾಣದಲ್ಲಿ ಹರಿಯುತ್ತದೆ. ಇದರಿಂದ ಕರ್ನಾಟಕ ಸರ್ಕಾರವು ಬೆಣ್ಣೆತೊರಿ ನೀರಾವರಿ ಯೋಜನೆ ಹಾಕಿಕೊಂಡು ಈ ಭಾಗದ ಅನೇಕ ಹೆಕ್ಟರ ಭೂಮಿಗೆ ನೀರಾವರಿಯನ್ನು ಒದಗಿಸುತ್ತದೆ.

೨.೧.೬. ನೈಸರ್ಗಿಕ ಸಂಪನ್ಮೂಲ

ಖನಿಜ ಸಂಪತ್ತು: ಹೈದರಾಬಾದ್ ಕರ್ನಾಟಕ ಪ್ರದೇಶದ ಹಲವೆಡೆಗಳಲ್ಲಿ ಸಾಕಷ್ಟು ಖನಿಜ ನಿಕ್ಷೇಪಗಳು ದೊರಕುತ್ತವೆ. ಒಂದು ಪ್ರದೇಶವು ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿನ ಸಂಪನ್ಮೂಲಗಳ ಪಾತ್ರ ಮಹತ್ವದಾಗಿರುತ್ತದೆ. ಎಲ್ಲಿ ಹೇರಳವಾದ ನೈಸರ್ಗಿಕ ಸಂಪನ್ಮೂಲಗಳಿರುತ್ತವೆಯೋ ಆ ಪ್ರದೇಶವು ಅಭಿವೃದ್ಧಿಯಾಗುತ್ತದೆ. ಉದಾಹರಣೆಗೆ ಕರಾವಳಿ ಹಾಗೂ ಮಧ್ಯ ಕರ್ನಾಟಕ ಪ್ರದೇಶದಲ್ಲಿ ಹೇರಳವಾಗಿ ಸಂಪನ್ಮೂಲ ಇರುವುದರಿಂದ ಅಲ್ಲಿ ವಿವಿಧ ಕಾರ್ಖಾನೆಗಳು, ಯೋಜನೆಗಳು ಹಾಕಿಕೊಳ್ಳುವುದರ ಮೂಲಕ ಈ ಪ್ರದೇಶದ ಜನರಿಗೆ ದುಡಿಲಿಕ್ಕೆ ಕೆಲಸ ಸಿಗುತ್ತದೆ. ಇದರಿಂದ ಅಲ್ಲಿನ ಕಾರ್ಮಿಕರು ಆರ್ಥಿಕವಾಗಿ ಯಾರ ಮೇಲೆ ಅವಲಂಬನೆಯಾಗದೆ ಸ್ವತಂತ್ರ ಜೀವನ ಸಾಗಿಸುತ್ತಾರೆ. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಡಿಮೆ ಪ್ರಮಾಣದ ನೈಸರ್ಗಿಕ ಸಂಪನ್ಮೂಲ ಇರುವುದರಿಂದ ಇಲ್ಲಿನ ಜನ ಸಾಮಾನ್ಯರು ತಮ್ಮ ಉಪಜೀವನ ಮಾಡುವುದಕ್ಕಾಗಿ ಕೆಸಲ ಹುಡುಕಿಕೊಂಡು ಬೇರೆ ಬೇರೆ ಪ್ರದೇಶಕ್ಕೆ ಹೋಗಿ ದುಡಿಯುತ್ತಾರೆ. ಹಾಗಾಗಿ ಇಲ್ಲಿನ ಜನರು ಕೆಲಸ ಮಾಡುವ ಮನಸ್ಸಿದರು ಕೆಲಸವಿಲ್ಲದೆ ಇರುವುದರಿಂದ ಇವರು ಆರ್ಥಿಕವಾಗಿ ಹಿಂದುಳಿಯಲು ನೈಸರ್ಗಿಕ ಸಂಪನ್ಮೂಲವು ಒಂದು ಕಾರಣವೆಂದು ಇದರಿಂದ ತಿಳಿದುಬರುತ್ತದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಿಗುವ ನೈಸರ್ಗಿಕ ಸಂಪನ್ಮೂಲಗಳ ವಿವರಣೆ ಈ ಕೆಳಗಿನಂತಿದೆ.

೧. **ಚಿನ್ನ :** ಪ್ರಾಚೀನ ಕಾಲದಿಂದಲೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಚಿನ್ನದ ನಿಕ್ಷೇಪಗಳಿದುದ್ದು ಕಂಡುಬರುತ್ತದೆ. ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಯು ೧೯೦೫ರಲ್ಲಿ ಡೆಕ್ಕನ್ ಬಂಗಾರದ ಗಣಿ ಕಂಪನಿಯೊಂದಿಗೆ ಗಣಿ ಉದ್ದಿಮೆಯನ್ನು ಆರಂಭಿಸಿತು. ೧೯೧೪ರ ಜಾಗತಿಕ ಯುದ್ಧದ ಪರಿಣಾಮವಾಗಿ ಗಣಿ ಉದ್ದಿಮೆಯು ಸ್ಥಗಿತವಾಯಿತು. ೧೮೮೭ ರಿಂದ ೧೯೫೭ರ ವರ್ಷಗಳಲ್ಲಿ ಪೆಕ್ಕಿನ್ ಕಂಪನಿಯು ಹೈದರಾಬಾದ್ ಕರ್ನಾಟಕದ ದೇವದುರ್ಗ ತಾಲೂಕಿನಲ್ಲಿ ಪ್ರಾಚೀನ ಕಾಲದಲ್ಲಿದ ಚಿನ್ನದ ಗಣಿಗಳ ಅನ್ವೇಷಣೆಯನ್ನು ಕೈಗೊಂಡಿತು. ಈ ಅನ್ವೇಷಣೆಯಲ್ಲಿ ವಂದಲ್ಲಿ ಗ್ರಾಮದ ಅಕ್ಕ

ಪಕ್ಕದಲ್ಲಿ ಚಿನ್ನದ ಗಣಿಗಾರಿಕೆ ಇರುವುದು ಕಂಡು ಬಂದಿದೆ. ರಾಯಚೂರ ಚಿನ್ನದ ಗಣಿಯು ಸ್ವಾತಂತ್ರ್ಯ ನಂತರ ಹಲವಾರು ಕಾಲ ಚಿನ್ನವನು ಆದರೆ ಚಿನ್ನದ ನಿಕ್ಷೇಪ ಹೊರತೆಗೆಯುವ ವೆಚ್ಚ ಹೆಚ್ಚಾಗುತಿದರಿಂದ ಗಣಿಗಾರಿಕೆ ಸ್ಥಗಿತಗೊಂಡಿರುವುದು ಕಂಡುಬರುತ್ತದೆ.

೨. **ತಾಮ್ರ** : ತಂತಿ ಮತ್ತು ಶಿಲೀಂದ್ರ ನಾಶಕಗಳ ತಯಾರಿಕೆಯಲ್ಲಿ ಈ ಲೋಹ ವ್ಯಪಕವಾಗಿ ಉಪಯೋಗವಾಗುತ್ತದೆ. ಯಾದಗಿರಿ ಜಿಲ್ಲೆಯ ತಿಂಥಿಣಿಯಲ್ಲಿ ತಾಮ್ರದ ನಿಕ್ಷೇಪವನ್ನು ಪತ್ತೆ ಮಾಡಲಾಗಿದೆ. ತಿಂಥಣಿ ನಿಕ್ಷೇಪವನ್ನು ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಸಂಸ್ಥೆ ರೂಪಿಸಿಕೊಂಡಿದ್ದು ಅಲ್ಲಿ ತಾಮ್ರಸಾರ ಸ್ಥಾವರವನ್ನು ಸ್ಥಾಪಿಸಲಾಗಿತ್ತು. ಈ ಗಣಿಗಾರಿಕೆಯು ಲಾಭದಾಯಕವಲ್ಲವೆಂದು ಕಂಡುಕೊಂಡು ಸ್ಥಾವರವನ್ನು ಮುಚ್ಚಲಾಯಿತು.

ತಿಂಥಣಿಯ ಹಳೆಯ ತಾಮ್ರದ ಗಣಿಗಳು ಸುರಪುರದ ನೈಋತ್ಯ ದಿಕ್ಕಿನಲ್ಲಿ ತಿಂಥಿಣಿ ಗ್ರಾಮಕ್ಕೆ ಸುಮಾರು ಒಂದು ಕಿ.ಮೀ ಪಶ್ಚಿಮದಲ್ಲಿವೆ ಹಾಗೂ ಹಟ್ಟಿ ಚಿನ್ನದ ಗಣಿಯ ಸಮೀಪದಲ್ಲಿರುವುದು ಅನ್ವೇಷಣೆಯಿಂದ ಬೆಳೆದುಬಂದಿದೆ. ೧೯೪೯ರಲ್ಲಿ "ಡೆಕ್ಕನ್ ವೈನಿಂಗ್" ಕಂಪನಿಯವರು ತಿಂಥಣಿ ಪ್ರದೇಶವನ್ನು ಪರೀಕ್ಷಿಸಿ ಅವು ತಾಮ್ರದ ಅದುರಿಗಾಗಿ ತೊಡಿದ ಗಣಿಗಳೆಂದು ಭೂಗೋಳಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

೩. **ಜಿಪ್ಸಮ್** : ರಾಸಾಯನಿಕ ಗೊಬ್ಬರ, ಸಿಮೆಂಟ್ ತಯಾರಿಕೆ ಮತ್ತು ಪ್ಲಾಸ್ಟರ್ ಕೈಗಾರಿಕೆಯಲ್ಲಿ ಜಿಪ್ಸಾಮನ್ಸ್ ಮುಖ್ಯವಾಗಿ ಉಪಯೋಗಿಸುತ್ತಾರೆ. ಜಿಪ್ಸಮ್ ಇದು ಗುಲಬರ್ಗಾ ಜಿಲ್ಲೆಯು ಗುಂಡಗುರ್ತಿ, ಪೀರಿಶಿರೂರ ಮತ್ತು ಮರತೂರಗಳಲ್ಲಿ ದೊರೆಯುತ್ತದೆ. ಆದರೆ ಆರ್ಥಿಕ ದೃಷ್ಟಿಯಿಂದ ಈ ಸಂಪತ್ತು ಲಾಭದಾಯಕ ಅಲ್ಲವೆಂದು ಯಾವುದೇ ಉದ್ದಿಮೆಯನ್ನು ಸ್ಥಾಪಿಸಲು ಸಾಧ್ಯವಾಗಿಲ್ಲಾ ಹೀಗೆ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಸಿಗುವ ಜಿಪ್ಸಮನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವಲ್ಲಿ ವಿಫಲರಾಗಿದೇವೆ.

೪. **ಸುಣ್ಣದ ಶಿಲೆ** : ಸುಣ್ಣದ ಕಲ್ಲು ಖನಿಜ ಸಂಪನ್ಮೂಲವು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತಿ ಹೆರಳವಾಗಿ ದೊರೆಯುತ್ತದೆ. ಇದನ್ನು ಸಿಮೆಂಟ್ ತಯಾರಿಸಲು, ಕಬ್ಬಿಣ ಮತ್ತು ಉಕ್ಕು, ರಾಸಾಯನಿಕ ಕೈಗಾರಿಕೆಯಲ್ಲಿ ಸುಣ್ಣದ ಕಲ್ಲನು ಧ್ರುವೀಕರಣ ವಸ್ತುವನ್ನಾಗಿ ಬಳಸಲಾಗುತ್ತದೆ. ಅದಕ್ಕಾಗಿ ಸುಣ್ಣದ ಕಲ್ಲು ಅತಿ ಹೆಚ್ಚಿನ ಪ್ರಮಾಣದಲ್ಲಿ ಈ ಪ್ರದೇಶದಲ್ಲಿ ಸಿಗುವುದರಿಂದ ಸಿಮೆಂಟ್ ಕೈಗಾರಿಕೆಗಳು ಸ್ಥಾಪನೆಯಾಗಿವೆ. ಇನ್ನೂ ಹೊಸ ಹೊಸ ಉದ್ದಿಮೆಗಳನ್ನು ಸ್ಥಾಪಿಸಲು ಉದ್ದಿಮೆದಾರರು ಮುಂದೆ ಬರುತ್ತಿದ್ದಾರೆ. ಆದರೆ ಕೈಗಾರಿಕೆಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಹಿಂದೇಟು ಹಾಕುತ್ತಿರುವುದು ಗಮನಿಸಬಹುದು.

೫. **ಯುರೇನಿಯಂ :** ಬಾಬಾ ಅಣುಶಕ್ತಿ ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳು ಯುರೇನಿಯಂ ಇರುವ ನಿಕ್ಷೇಪಗಳನ್ನು ಪತ್ತೆ ಹಚ್ಚಲು ಸರ್ವೆ ನಡೆಸಿದರು. ಈ ಸರ್ವೆಯು ಹೈದರಾಬಾದ್ ಕರ್ನಾಟಕ ಪ್ರದೇಶವಾದ ದೇವದುರ್ಗ ಮತ್ತು ಗೋಗಿಯಲ್ಲಿ ೧೯೯೨ರಲ್ಲಿ ಭಾರತ ಸರ್ವೇಕ್ಷಣ ಇಲಾಖೆಯಿಂದ ನಡೆಸಿದರು. ಈ ಸಂದರ್ಭದಲ್ಲಿ ಬೇಡರ್ ಗಣಿಕಲ್, ಮಲ್ಲಿಪುರ ಹಾಗೂ ಭೂಮನಗುಂಡ ಗ್ರಾಮಗಳಲ್ಲಿ ಯುರೇನಿಯಂ ನಿಕ್ಷೇಪವಿರುವುದನ್ನು ಗುರುತಿಸಲಾಗಿದೆ. ಹಾಗೆ ಶಹಾಪುರ ತಾಲೂಕಿನ ಗೋಗಿಯಲ್ಲಿ ಕೂಡ ಯುರೇನಿಯಂ ನಿಕ್ಷೇಪ ದೊರೆಯುತ್ತದೆ. ಇಂತಹ ಅಪರೂಪವಾಗಿ ದೊರೆಯುವ ಈ ಯುರೇನಿಯಂ ನಿಕ್ಷೇಪಗಳು ಹೈದರಾಬಾದ್ ಕರ್ನಾಟಕದಲ್ಲಿ ಇರುವುದು ಗಮನಾರ್ಹವಾಗಿದೆ.

೬. **ಗ್ರಾನೈಟ್ ಶಿಲೆಗಳು:** ನಾಗರೀಕತೆ ಬೆಳೆದಂತೆ ಮಾನವನ ಅಂತ್ಯಗಳನ್ನು ಪೂರೈಸಲು ಈ ಕಲ್ಲುಗಳು ವಿಶೇಷವಾಗಿರುವ ಬೇಡಿಕೆಯನ್ನು ಹೊಂದಿವೆ. ಅಂತಹ ಬೇಡಿಕೆ ಹೊಂದಿರುವ ಗ್ರಾನೈಟ್ ಶಿಲೆಯು ಹೈದರಾಬಾದ್ ಕರ್ನಾಟಕ ಪ್ರದೇಶವಾದ ರಾಯಚೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಗ್ರಾನೈಟ್ ಉದ್ದಿಮಕ್ಕೆ ಹೈದರಾಬಾದ ಕರ್ನಾಟಕ ಪ್ರದೇಶವು ರಾಜ್ಯ ವಾಪ್ತಿ ಹೆಸರು ಮಾಡಿರುವುದು ಗಮನಿಸಬಹುದು.

೨.೨. ಪ್ರಕೃತಿ ಮತ್ತು ಪ್ರಭುತ್ವ

ಪ್ರಭುತ್ವ ಕುರಿತು ಚರಿತ್ರೆ ರಚನೆಗೊಳ್ಳುವ ಸಂದರ್ಭದಲ್ಲಿ ಪ್ರಭುತ್ವವು ಸ್ಥಾಪನೆಯಾಗುವಾಗ ಭೌಗೋಳಿಕತೆ ಅತ್ಯಂತ ಮುಖ್ಯವಾಗುತ್ತದೆ. ಏಕೆಂದರೆ ಪ್ರಭುತ್ವವು ತನ್ನ ರಾಜಧಾನಿ ಕೇಂದ್ರವನ್ನು ಆಯ್ಕೆ ಮಾಡುವಾಗ ಆ ಪ್ರದೇಶದ ಭೌಗೋಳಿಕತೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತಿತ್ತು. ಪ್ರಾಕೃತಿಕವಾಗಿ ನಿರ್ಮಾಣಗೊಂಡಿರುವ ಬೆಟ್ಟಗುಡ್ಡಗಳ ತುತ್ತ ತುದಿಯಲ್ಲಿ ನಿರ್ಮಾಣಗೊಂಡಿರುವ ಕೋಟೆಗಳನ್ನು ಇಂದಿಗೂ ಕಾಣಬಹುದಾಗಿದೆ. ಶತ್ರುಗಳಿಂದ ರಕ್ಷಣೆ ಪಡೆಯಲು ಈ ಕೋಟಗಳು ಅನಿವಾರ್ಯ ವಾಗುತ್ತಿದ್ದವು. ಶತ್ರುಪಡೆ ಸುಲಭವಾಗಿ ಪ್ರವೇಶ ಪಡೆಯದಂತೆ ಕೋಟೆಗಳು ಕಡಿದಾದ ಬೆಟ್ಟದ ಮೇಲೆ ದಟ್ಟ ಅರಣ್ಯದ ಮಧ್ಯದಲ್ಲಿ ಹಾಗೂ ನದಿಯ ದಂಡೆಯ ಮೇಲೆ ನಿರ್ಮಿಸಲಾಗುತ್ತಿತ್ತು. ಆ ರೀತಿ ನಿರ್ಮಿಸಲ್ಪಟ್ಟ ಕೋಟೆಗಳನ್ನು ಗಿರಿದುರ್ಗ, ವನದುರ್ಗ ಹಾಗೂ ಜಲದುರ್ಗ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಹೀಗೆ ರಾಜ್ಯ ನಿರ್ಮಾಣ ಹಾಗೂ ವಿಸ್ತರಣೆಯಲ್ಲಿ ಭೌಗೋಳಿಕ ಲಕ್ಷಣಗಳ ಪಾತ್ರ ಮಹತ್ವದಾಗಿ ಕಂಡುಬರುತ್ತದೆ. ಭೂಮಿಯ ಮೇಲೆ ಒಡೆತನ ಸಾಧಿಸುವುದು, ಹೆಚ್ಚೆಚು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು, ಗಡಿಗಳನ್ನು ವಿಸ್ತರಿಸುವುದು, ನೈಸರ್ಗಿಕ ಸಂಪನ್ಮೂಲಗಳು ರಾಜ್ಯದ ಅಭಿವೃದ್ಧಿಗಾಗಿ ಬಳಸುವುದು ಮುಂತಾದ ಉದ್ದೇಶಗಳಿಗೆ ಪ್ರಕೃತಿಯು ಹೊಂದಾಣಿಕೆಗಾಗಿ ಕೆಲವೊಂದು ಸಾರು ಪ್ರಭುತ್ವ ಬಲಪ್ರಯೋಗ ಮಾಡಿರುವುದು ಉದಾಹರಣೆಗಳಿವೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಫಲವತ್ತತೆ ಹಾಗೂ ಪ್ರಭುತ್ವಕ್ಕೆ ಬೇಕಾದ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿರುವ ಭೂಪ್ರದೇಶಕ್ಕಾಗಿ ಯುದ್ಧಗಳಾಗಿರುವುದು ಚರಿತ್ರೆಯಿಂದ ತಿಳಿದುಬರುವ ಸತ್ಯವಾಗಿದೆ. ಉದಾಹರಣೆಗೆ ರಾಯಚೂರಿನ ದೋ-ಅಬ್ ಪ್ರದೇಶವು ಕೃಷ್ಣಾ ನದಿಯ ಮುಖಜ ಭೂಮಿಯಾಗಿರುವ ಈ ಪ್ರದೇಶವು ಅತ್ಯಂತ ಫಲವತ್ತಾದ ಭೂಮಿ ಹೊಂದಿದರಿಂದ ಇದನ್ನು ವಶಪಡಿಸಿಕೊಳ್ಳಲು ವಿಜಯ ನಗರ ಬಹಮನಿ ಮತ್ತು ಆದಿಲ್‌ಶಾಹಿಗಳ ನಡುವೆ ಅನೇಕ ಯುದ್ಧಗಳು ಸಂಭವಿಸಿದವು. ಅಷ್ಟೆ ಅಲ್ಲದೆ ಸ್ಥಳೀಯ ಸಣ್ಣ ಪುಟ್ಟ ಅರಸು ಮನೆತನಗಳು ಕೂಡ ರಾಜ್ಯ ವಿಸ್ತರಣೆಗಾಗಿ ಹೋರಾಡಿದವು. ಹಾಗೇ ಈ ಫಲವತ್ತಾದ ಭೂಪ್ರದೇಶ ಪಡೆಯಲು ಭಾರತದಲ್ಲಿ ಆಳ್ವಿಕೆ ಮಾಡುತ್ತಿದ್ದ ವಸಾಹತುಶಾಹಿಗಳಾದ ಬ್ರಿಟಿಶರು ಕೂಡ ರಾಯಚೂರಿನ ದೋ-ಅಬ್ ಪ್ರದೇಶದ ಫಲವತ್ತತೆಯನ್ನು ಮನಗಂಡು ಆ ಪ್ರದೇಶದಲ್ಲಿ ತಮಗೆ ಬೇಕಾದ ಹತ್ತಿಯನ್ನು ಬೆಳೆಯಲು ಉಪಯುಕ್ತವಾಗುವುದು ಎಂಬುದನ್ನು ಖಚಿತ ಪಡಿಸಿಕೊಂಡ ನಂತರ ತಮ್ಮ ವಸಾಹತುಶಾಹಿ ನೀತಿಯಂತೆ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ನಿಜಾಮ್ ಸರ್ಕಾರದ ಮೇಲೆ ಒತ್ತಡ ಹಾಕುವುದರ ಮೂಲಕ ತಮ್ಮ ಆಳ್ವಿಕೆಯನ್ನು ಇಡೇರಿಸಿಕೊಂಡರು. ಹೀಗೆ ಬ್ರಿಟಿಶರು ರಾಯಚೂರು ದೋ-ಅಬ್ ಪ್ರದೇಶವನ್ನು ಪಡೆದು ಅಮೇರಿಕಾದ ಈ ಭೂಪ್ರದೇಶದಲ್ಲಿ ಬಿತ್ತನೆ ಮಾಡುವ ಮೂಲಕ ಹೊಸ ಪ್ರಯೋಗವನು ಮಾಡಿದ್ದರು.

ರಾಯಚೂರ ದೋ-ಅಬ್ ಪ್ರದೇಶವಲ್ಲದೆ ಈ ಪ್ರದೇಶದಲ್ಲಿ ಕೃಷ್ಣಾ ಮತ್ತು ಭೀಮ ನದಿಗಳ ನಡುವಿನ ಫಲವತ್ತತೆ ಭೂಮಿಯನ್ನು ಸಾಗರನಾಡು ಗುಡ್ಡ ಅಥವಾ ಸಾಗರ ದೋ-ಅಬ್ ಪ್ರದೇಶವೆಂದು ಕರೆಯುತ್ತಾರೆ. ಈ ಪ್ರದೇವು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲಾ ಪ್ರದೇಶದಲ್ಲಿರುವುದು ಗಮನಾರ್ಹವಾಗಿದೆ. ಅದು ಸುರಪುರ ಜೇವರ್ಗಿ ಮತ್ತು ಶಹಾಪುರ ತಾಲೂಕಗಳನ್ನು ಒಳಗೊಂಡ ಭೂಪ್ರದೇಶವು ಚರಿತ್ರೆ ಉದ್ದಕ್ಕೂ ಈ ಪ್ರಾದೇಶಕ್ಕಾಗಿ ದೆಹಲಿ ಸುಲ್ತಾನರು, ಮೊಗಲರು ಬಹಮನಿ, ವಿಜಯನಗರ, ನಿಜಾಮ್ ಮತ್ತು ಸುರಪುರದ ಸಂಸ್ಥಾನಗಳ ಮಧ್ಯ ಕಲಹಗಳು ಸಂಭವಿಸಿದು ಗಮನಿಸಬಹುದು. ಇಂತಹ ಭೂಪ್ರದೇಶವನ್ನು ಪಡೆಯಲು ಪ್ರಭುತ್ವಗಳು ನಿರಂತರವಾಗಿ ಕಾದಾಡಿರುವುದು ಅಲ್ಲದೆ ಒಪ್ಪಂದಕ್ಕೆ ಮೂಲಕವಾದರು ತಮ್ಮ ಪ್ರಭುತ್ವದ ಗಡಿಯಲ್ಲಿ ಸೇರಿಸಿಕೊಂಡಿರುವುದು ಕಂಡುಬರುತ್ತದೆ. ಹೀಗೆ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಪ್ರಭುತ್ವಕ್ಕೆ ಪೂರಕವಾದ ಭೌಗೋಳಿಕತೆಯನ್ನು ಹೊಂದಿರುವ ಭೂಪ್ರದೇಶದಲ್ಲಿ ಪ್ರಭುತ್ವಗಳು ಸ್ಥಾಪನೆ ಮಾಡಿರುವುದು ಗಮನಿಸಬಹುದು. ಕೆಲವು ಸಂದರ್ಭದಲ್ಲಿ ಪ್ರಭುತ್ವಗಳು ಫಲವತ್ತಾದ ಭೂಪ್ರದೇಶ ಹೊಂದಿದ್ದರು ತಮಗೆ ರಕ್ಷಣಾತ್ಮಕವಾದ ವಾತಾವರಣ ಹೊಂದಿದರು ಕೂಡ ಪ್ರಭುತ್ವ ಸ್ಥಾಪನೆಗೊಂಡಿರುವುದು ಕಂಡುಬರುತ್ತದೆ.

೨.೨.೧. ಹೈದರಾಬಾದ್ ಕರ್ನಾಟಕದ ಆರ್ಥಿಕತೆ : ಕರಾವಳಿ, ಮಲೆನಾಡು ಹಾಗೂ ಬಯಲುನಾಡು ಪ್ರಸ್ಥಭೂಮಿಗೂ ಅನೇಕ ರೀತಿಯ ವ್ಯತ್ಯಾಸಗಳು ಕಂಡುಬರುತ್ತವೆ. ಕರಾವಳಿ ಪ್ರದೇಶದಲ್ಲಿರುವ ಸಮುದ್ರವು ಹಲವಾರು ಕಾರಣಗಳಿಂದ ಅಲ್ಲಿನ ಜನರಿಗೆ ವರದಾನವಾಗಿ ಪರಿಣಮಿಸುತ್ತದೆ. ಈ ಪ್ರದೇಶವು ಅನೇಕ ಬಂದರು, ಪಟ್ಟಣಗಳ ಹುಟ್ಟಿಗೆ ಕಾರಣವಾಯಿತು. ಇವು ವ್ಯಾಪಾರಿ ವಾಣಿಜ್ಯದ ದೃಷ್ಟಿಯಿಂದ ಆರ್ಥಿಕತೆಯ ಮೇಲೆ ಮಹತ್ವದ ಪರಿಣಾಮಗಳನ್ನು ಬೀರಿದೆ. ಮಲೆನಾಡು ಪ್ರದೇಶವು ಅತಿಯಾ ಮಳೆ ಸರಿಯುವುದಲ್ಲದೆ, ದಟ್ಟವಾದ ಕಾಡುಗಳಿಂದ ಕೂಡಿರುವ ಭೂ ಭಾಗವು ಹೇರಳವಾದ ನೈಸರ್ಗಿಕ ಸಂಪನ್ಮೂಲಗಳು ಕೇಂದ್ರಿಕರಣ ಗೊಂಡಿದರಿಂದ ಇದು ಕೂಡ ಆರ್ಥಿಕವಾಗಿ ಉತ್ತಮ ರೀತಿಯಲ್ಲಿರುವುದು ಗಮನಿಸಬಹುದಾಗಿದೆ. ಮಲೆನಾಡು ಕಾಡುಗಳಲ್ಲಿ ಹೆಚ್ಚು ಬೆಲೆಬಾಳುವ ಮರಗಳನ್ನು ನೆಡುವುದು, ಬೆಳೆಸುವುದು, ಬೆಳೆದ ಮೇಲೆ ಕಡಿದು ಪೇಟೆಗೆ ಸಿದ್ಧಮಾಡುವುದು ಅಲ್ಲದೆ ಸ್ಥಳೀಯವಾಗಿ ದೊರೆಯುವ ಖನಿಜಗಳನ್ನು ಹಾಗೂ ಅರಣ್ಯೋತ್ಪಾದನೆಗಳನ್ನು ಉಪಯೋಗಿಸಿಕೊಂಡು ಹೊಸ ಹೊಸ ಉದ್ದಿಮೆಗಳನ್ನು ಸ್ಥಾಪನೆಗೊಂಡು ಮಲೆನಾಡು ಕೂಡ ಆರ್ಥಿಕವಾಗಿ ಸಬಲವಾಗಿರುವುದು ಕಂಡುಬರುತ್ತದೆ. ಆದರೆ ಬಯಲು ನಾಡಾದ ಹೈದರಾಬಾದ ಕರ್ನಾಟಕ ಪ್ರದೇಶವು ಈ ಮೇಲಿನ ಭೌಗೋಳಿಕ ಲಕ್ಷಣವಿಲ್ಲದೆ ಉಪಯುಕ್ತವಲ್ಲದ ನೈಸರ್ಗಿಕ ಸಂಪನ್ಮೂಲಗಳು, ಕೆಳಮಟ್ಟದ ಅರಣ್ಯ ಸಂಪತ್ತು ಇದು ಹೊಂದಿದೆ.

ಈ ಪ್ರದೇಶದಲ್ಲಿ ಸಿಗುವ ಖನಿಜ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವಲ್ಲಿ ವಿಫಲರಾಗಿದ್ದೇವೆ. ಹಾಗೇ ಹೊಸ ಹೊಸ ಯಾವುದೇ ಲಾಭದಾಯಕವಾದ ಕೈಗಾರಿಕೆಗಳು ಸ್ಥಾಪನೆ ಮಾಡಲು ಉದ್ದಿಮೆಗಳು ಮುಂದೆ ಬರದಿರುವುದು ಸರ್ಕಾರವು ಕೂಡ ಯಾವುದೇ ಆರ್ಥಿಕ ವಲಯಕ್ಕೆ ಸಹಾಯಕಾರಿ ಯಾಗುವ ಯೋಜನೆಗಳನು ಅನುಷ್ಠಾನಗೊಳಿಸದೆ ಇರುವುದರಿಂದ ಆರ್ಥಿಕ ಮಟ್ಟವು ಕಡಿಮೆಮಟ್ಟದಾಗಿದೆ. ಈ ಪ್ರದೇಶದಲ್ಲಿ ತಲಾತಲಾಂತರಗಳಿಂದ ಬೆಳೆಯುವ ಸಾಂಪ್ರದಾಯಿಕ ಬೆಳೆಗಳನು ಮಾತ್ರ ನಂಬಿಕೊಂಡು ವಾಣಿಜ್ಯ ಬೆಳೆಗಳನ್ನು ಬೆಳೆಯದೆ ಇರುವುದಲ್ಲದೆ ಬೆಳೆದ ಬೆಳೆಗಳಿಗೆ ಸರಿಯಾದ ಅಂತಾರಾಷ್ಟ್ರೀಯ ಮಾರುಕಟ್ಟೆ, ರಸ್ತೆ ಮತ್ತು ವಾಹನಗಳ ಸೌಕರ್ಯದಿಂದ ವಂಚಿತರಾದ ರೈತರು ಸ್ಥಳೀಯ ದಲ್ಲಾಳಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಿ ರೈತಾಪಿ ವರ್ಗ ಇನ್ನೂ ಆರ್ಥಿಕವಾಗಿ ಕುಗ್ಗಿ ಹೋಗಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಹರಿಯುವ ನದಿಗಳನ್ನು ಬಳಸಿಕೊಳ್ಳುವಲ್ಲಿ ವಿಫಲರಾಗಿದ್ದೇವೆ. ಹೊಸ ಹೊಸ ನೀರಾವರಿ ಯೋಜನೆ ಹಾಕಿಕೊಂಡು ಅದಕ್ಕೆ ಆಧುನಿಕ ತಂತ್ರಜ್ಞಾನದ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ನೀರನು ಶೇಖರಿಸಿ ಇಡದೆ ಇದರಿಂದ ನೀರಾವರಿ ಅಲ್ಲದೆ ಬೇಸಿಗೆಯ ಕಾಲದಲ್ಲಿ ಕುಡಿಯುವ ನೀರಿಗಾಗಿ ಆಹಾಕಾರ ಕಂಡುಬರುತ್ತಿದೆ. ಹೀಗೆ ಹೈದರಾಬಾದ ಕರ್ನಾಟಕ

ಪ್ರದೇಶವು ನಾನಾ ಸಮಸ್ಯೆಗಳಿಂದಾಗಿ ಕರ್ನಾಟಕದ ಇತರ ಜಿಲ್ಲೆಗಳಿಗಿಂತ ಹಿಂದುಳಿಯಲು ಇಲ್ಲಿನ ನೈಸರ್ಗಿಕ ಸಂಪನ್ಮೂಲ ಮತ್ತು ಭೌಗೋಳಿಕ ಲಕ್ಷಣವು ಒಂದು ಕಾರಣವಾಗಿದೆ.

೨.೨.೨. ಸಮಕಾಲೀನ ನೋಟ : ಹೈದರಾಬಾದ್ ಕರ್ನಾಟಕ ಭೌಗೋಳಿಕ ಲಕ್ಷಣಗಳು ಮೇಲೆ ವಿವರಿಸಿದಂತೆ ಹಲವಾರು ಬಗೆಯ ವೈಶಿಷ್ಟ್ಯತೆಗಳಿಂದ ಕೂಡಿವೆಯಾದರು ಅವು ಇತ್ತೀಚೆಗೆ ತಮ್ಮ ಮೂಲ ಸ್ವರೂಪದಲ್ಲಿ ಬದಲಾವಣೆಯನ್ನು ಕಾಣುತ್ತೇವೆ. ಆಧುನಿಕತೆ, ಅಭಿವೃದ್ಧಿ, ಬದಲಾವಣೆ ಎಂಬ ಹೆಸರಿನಲ್ಲಿ ಹೈದರಾಬಾದ ಕರ್ನಾಟಕದ ಬೆಟ್ಟಗುಡ್ಡಗಳು, ಬಯಲು ಪ್ರದೇಶಗಳು ಹಾಗೂ ನದಿಗಳು ಹಲವಾರು ಬಗೆಯ ಪರಿವರ್ತನೆಗೆ ಒಳಗಾಗುತ್ತವೆ. ಈ ಪ್ರದೇಶದಲ್ಲಿ ದಿನೆ ದಿನೆ ನಗರೀಕರಣ ಹಾಗೂ ಕೈಗಾರಿಕರಣ ಪ್ರಕ್ರಿಯೆಗಳು ಚುರುಕುಗೊಳುತ್ತಿರುವದರಿಂದ, ನಗರ ಪ್ರದೇಶಗಳು ವಿಸ್ತಾರವಾಗಿ ಬೆಳೆಯಲಾರಂಭಿಸಿವೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಅಸ್ಥಿತ್ವಕೆ ಬರುತ್ತವೆ. ರಾಯಚೂರಿನಲ್ಲಿ ಶಾಖೋತ್ಪಾದನೆ ವಿದ್ಯುತ ಸ್ಥಾವರವು ಹಾಗೂ ಸಿಮೆಂಟ್ ಕೈಗಾರಿಕೆಗಳು ಹೈದರಾಬಾದ ಕರ್ನಾಟಕಕ್ಕೆ ಪ್ರವೇಶಿಸುತ್ತಿವೆ. ಹೀಗೆ ಅಭಿವೃದ್ಧಿ ಎಂಬ ಹೊಸ ಹೆಸರಿನಲ್ಲಿ ಕೆಲವೆ ಕೆಲವು ವರ್ಗಗಳ ಹಿತ್ತಕ್ಕಾಗಿ ಇಡಿ ಅಲ್ಪ ಸ್ವಲ್ಪ ಭಗೋಳಿಕತೆಯು ತಮ್ಮ ಅಸ್ಥಿತ್ವವನ್ನು ಕಳೆದು ಕೊಳ್ಳುತ್ತಿರುವುದು ಕಂಡುಬರುತ್ತದೆ.

ಹೈದರಾಬಾದ್ ಕರ್ನಾಟಕದ ಕೃಷ್ಣಾ, ಭೀಮಾ ಮತ್ತು ತುಂಗಭದ್ರಾ ನದಿಗಳ ನೀರನ್ನು ಕೃಷಿಗೆ ಉಪಯೋಗಿಸಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದ ರೈತಾಪಿ ವರ್ಗವು ಇದ್ದ ಭೂಮಿಯನ್ನು ಪಕ್ಕದ ರಾಜ್ಯವಾದ ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಬಂಡವಾಳಶಾಹಿಗಳಿಗೆ ಷರತ್ತು ಒಪ್ಪಂದಗಳ ಮೂಲಕ ಕಡಿಮೆ ಹಣಕ್ಕೆ ಹತ್ತಾರು ವರ್ಷಗಳು ಲೀಸ್ ಹಾಕಿ ತಾವು ಆ ಭೂಮಿಯಲ್ಲಿಯೇ ಕೃಷಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡುಬರುತ್ತದೆ. ಹಾಗೆ ಈ ಪ್ರದೇಶವು ಕಡಿಮೆ ಮಳೆ ಪಡೆಯುವರಿಂದ ಪ್ರತಿ ವರ್ಷವು ಒಂದಲ್ಲಾ ಒಂದು ರೀತಿಯಲ್ಲಿ ಬರಗಾಲವನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಆಳ್ವಿಕೆ ಮಾಡುವ ಪ್ರಜಾಪ್ರಭುತ್ವ ಸರ್ಕಾರವು ಯಾವುದೇ ಹೊಸ ಯೋಜನೆ ಹಾಕಿಕೊಳ್ಳದೆ ಇರುವುದರಿಂದ ಕೆಲಸವನು ಹುಡುಕಿಕೊಂಡು ಗೊಳೆ ಹೊಗುವವರ ಸಂಖ್ಯೆ ದಿನೆದಿಂದ ದಿನೆ ಹೆಚ್ಚಾಗುತ್ತಿದೆ.

೨.೩. ಹೈದರಾಬಾದ್ ಕರ್ನಾಟಕದ ಜಿಲ್ಲಾವಾರು ಭೌಗೋಳಿಕತೆ

೨.೩.೧. ಬೀದರ ಜಿಲ್ಲೆ : ಬೀದರ ಜಿಲ್ಲೆಯು ೧೭೦.೩೦೧ ರಿಂದ ೧೮.೫೭೧ ಉತ್ತರ ಆಕ್ಷಾಂಶ ಹಾಗೂ ೭೬೦.೫೧೧ ರಿಂದ ೭೭೦.೫೧೧ ರೇಖಾಂಶಗಳ ನಡುವೆ ಇದೆ. ಜಿಲ್ಲೆಯು ಪೂರ್ವಕ್ಕೆ ತೆಲಂಗಾಣ ರಾಜ್ಯದ ಮೇಡಕ್ ಮತ್ತು ನಿಜಾಮಾಬಾದ್, ಪಶ್ಚಿಮಕ್ಕೆ ಬಿಜಾಪುರ, ಉತ್ತರಕ್ಕೆ ಮಹಾರಾಷ್ಟ್ರದ ನಾಂಡೇಡ್ ಮತ್ತು ಉಸ್ಮಾನಾಬಾದ್, ದಕ್ಷಿಣದಲ್ಲಿ ಗುಲಬರ್ಗಾ ಜಿಲ್ಲೆಗಳಿವೆ. ಜಿಲ್ಲೆಯು ೫,೪೧,೭೬೪

ಹೆಕ್ಟೇರ, ಅಂದರೆ ಸುಮಾರು ೫,೪೫೮ ಚ.ಕಿ.ಮೀಟರ್ ವಿಸ್ತೀರ್ಣ ಹೊಂದಿದೆ. ಇದು ಕರ್ನಾಟಕ ರಾಜ್ಯದ ನಕಾಶೆಯಲ್ಲಿ ಮೇಲ್ಭಾಗದ ತುತ್ತತುದಿಯಲ್ಲಿ ಇದೆ. ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಬೀದರನ್ನು ಮೂರು ರಾಜ್ಯಗಳಲ್ಲಿ ಹಂಚಲಾಯಿತು. ಅದಕ್ಕೆ ಜಿಲ್ಲೆಯ ಭಾಷೆ ವೈವಿಧ್ಯತೆಯಿಂದ ಕೂಡಿದೆ. ೧೯೫೬ರಲ್ಲಿ "ವಿಶಾಲ ಮೈಸೂರು" ರಾಜ್ಯದಲ್ಲಿ ಸೇರ್ಪಡೆಯಾಗುವ ಮೊದಲು ಬೀದರ ಹೈದರಾಬಾದ್ ಪ್ರಾಂತದಲ್ಲಿದ್ದು ಒಂಬತ್ತು ತಾಲೂಕಗಳನ್ನು ಹೊಂದಿತ್ತು. ಭಾಷವಾರು ಪ್ರಾಂತಗಳ ರಚನೆಯ ಸಮಯದಲ್ಲಿ ತೆಲಗು ಭಾಷಿಕರು ಹೆಚ್ಚಾಗಿರುವ ನಾರಾಯಣಖೇಡ, ಜಹೀರಾಬಾದ್ ತೆಲಂಗಾಣಕ್ಕೆ ಸೇರಿದರೆ, ಮರಾಠಿ ಮಾತನಾಡುವ ಜನರು ಹೆಚ್ಚಿದ ಉದ್ದಗಿರ್, ಅಹಮದಪುರ ಹಾಗೂ ನಿಲಂಗಾ ಮಹಾರಾಷ್ಟ್ರಕ್ಕೆ ಸೇರ್ಪಡೆಯಾದವು. ಇನ್ನೂ ಕನ್ನಡ ಭಾಷೆ ಮಾತನಾಡುವ ಸಂಖ್ಯೆ ಹೆಚ್ಚಿದ ಬೀದರ್, ಔರಾದ, ಬಾಲ್ಕಿ ಮತ್ತು ಹುಮನಾಬಾದ ತಾಲೂಕಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಇವತ್ತಿನ ಬೀದರ ಜಿಲ್ಲೆಯು ಐದು ತಾಲೂಕಗಳಾದ ಬೀದರ, ಔರಾದ್, ಬಾಲ್ಕಿ, ಹುಮನಾಬಾದ ಮತ್ತು ಬಸವಕಲ್ಯಾಣಗಳಿಂದ ಕೂಡಿದೆ.

ಬೀದರ ಜಿಲ್ಲೆಯು ಸಮುದ್ರ ಮಟ್ಟದಿಂದ ಸುಮಾರು ೨೨೦೬ ಅಡಿ ಎತ್ತರವಿರುವುದರಿಂದ ಇಲ್ಲಿನ ಹವಮಾನ ಆರೋಗ್ಯಕರವಾಗಿದೆ. ಸಾಮಾನ್ಯವಾಗಿ ಬೆಸಿಗೆಯಲ್ಲಿ ಉಷ್ಣತೆ, ಡಿಸೆಂಬರನಲ್ಲಿ ಚಳಿಯು ಕಂಡುಬಂದರು. ಮುಂಗಾರು ಮಳೆಗಾಲ ಬಿಟ್ಟರೆ ಉಳಿದ ದಿನಗಳಲ್ಲಿ ಶುಷ್ಕ ವಾತಾವರಣವಿರುತ್ತದೆ. ಜಿಲ್ಲೆಯು ಎರಡು ವಿಧದ ಮಣ್ಣಿನಿಂದ ಕೂಡಿದೆ. ಕಪ್ಪು ಮತ್ತು ಕೆಂಪು ಮಣ್ಣು ಮಿಶ್ರತ ಭೂಮಿಯೆಂದು ಕರೆಯಬಹುದು. ಔರಾದ ಮತ್ತು ಬಾಲ್ಕಿ ತಾಲೂಕುಗಳು ಗಟ್ಟಿಯಾದ ಕಪ್ಪು ಮಣ್ಣಿನ ಪ್ರದೇಶವಾಗಿದೆ. ಇನ್ನೂಳಿದ ತಾಲೂಕುಗಳಲ್ಲಿ ಜೇಡಿ ಹಾಗೂ ಬೆಕಿತ ಕೆಂಪು ಜೇಡಿ ಮಣ್ಣಾಗಿದೆ. ಈ ಮಣ್ಣು ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಕಡಿಮೆ ಹೊಂದಿರುತ್ತದೆ. ಇದರಿಂದ ಭೂಮಿಯ ಫಲವತ್ತತೆ ಪ್ರಮಾಣ ಕಡಿಮೆ ಗುಣಮಟ್ಟದಿಂದ ಕೂಡಿರುತ್ತದೆ. ಈ ಮಣ್ಣಿನಲ್ಲಿ ಯಾವುದೇ ವಾಣಿಜ್ಯ ಬೆಳೆಗಳನ್ನು ಬೆಲೆಯುವುದಕ್ಕೆ ಸಾಧ್ಯವಾಗದ ಕಾರಣ ಇಲ್ಲಿನ ರೈತರು ವಾಣಿಜ್ಯೇತರ ಬೆಳೆಗಳನ್ನು ಬೆಳೆಯುವುದರಿಂದ ಆರ್ಥಿಕವಾಗಿ ಹಿಂದುಳಿಸಿರುವುದನ್ನು ಕಂಡುಕೊಳ್ಳಬಹುದು. ಹಾಗೇ ಬೀದರ ಮತ್ತು ಹುಮನಾಬಾದ ತಾಲೂಕಿನಲ್ಲಿ ಕಪ್ಪು ಮಣ್ಣಿದ್ದರಿಂದ ಈ ಪ್ರದೇಶದಲ್ಲಿ ನಿಜಾಮ್ ಆಳ್ವಿಕೆಯ ಕಾಲದಿಂದಲೂ ವಾಣಿಜ್ಯ ಬೆಳೆಗಾದ ಕಬ್ಬು, ಹತ್ತಿ ಬೆಳೆಗಳನ್ನು ಬೆಳೆಯುತ್ತಿರುವುದು ಗಮನಾರ್ಹವಾಗಿದೆ. ಇದರಿಂದ ಕರ್ನಾಟಕ ಸರ್ಕಾರವು ಹುಮನಾಬಾದ ತಾಲೂಕಿನ ಹಳಿಖೇಡ ಗ್ರಾಮದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿತು. ಕಬ್ಬು ಬೆಳೆಯನ್ನು ಪ್ರಮುಖ ಬೆಲೆಯಾಗಿಸಿಕೊಂಡ ರೈತರು ಕಾರ್ಖಾನೆ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದರಿಂದ ಖಾಸಗಿ ಒಡೆತನದ ಸಕ್ಕರೆ ಕಾರ್ಖಾನೆಗಳು ತಲೆ ಎತ್ತಿರುವುದು ಗಮನಿಸಬಹುದಾಗಿದೆ.

ಬೀದರ ಜಿಲ್ಲೆಯಲ್ಲಿ ಹರಿಯುವ ನದಿಗಳಲ್ಲಿ ಗೋದಾವರಿ ಹಾಗೂ ಕೃಷ್ಣಾ ನದಿಗಳ ಉಪನದಿಗಳಾದ ಮಂಜರಾ, ಮುಲ್ಲಾಮಾರಿ ಹಾಗೂ ಕಾಗೀಣಾ ನದಿಗಳು ಪ್ರಮುಖವಾಗಿವೆ. ಗೋದಾವರಿ ನದಿಯ ಮುಖ್ಯ ಉಪನದಿಗಳಲ್ಲಿ ಒಂದಾದ ಮಾಂಜರಾ ನದಿ ಬೀದರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹರಿಯುತ್ತದೆ. ಈ ನದಿಗಳು ರೈತರಿಗೆ ಕೃಷಿಗೆ ಹಾಗೂ ಜನರಿಗೆ ಕುಡಿಯುವುದಕ್ಕೆ ಉಪಯೋಗವಾಗುತ್ತಿದೆ. ಅಲ್ಲದೆ ಜಿಲ್ಲೆಯಲ್ಲಿ ಕೆರೆಗಳು, ತೆರೆದಬಾವಿಗಳು ಕೂಡ ನೀರಾವರಿಗೆ ಮುಖವಾಗಿರುವುದು ಕಂಡುಬರುತ್ತದೆ. ಹೀಗೆ ಹೊಸ ಹೊಸ ತಂತ್ರಜ್ಞಾನಗಳ ಅಳವಡಿಕೆಯ ಮೂಲಕ ಜಿಲ್ಲೆಯ ಭೌಗೋಳಿಕತೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡು ಅಭಿವೃದ್ಧಿಯ ಕಡೆಗೆ ದಾಪುಗಾಲು ಇಡುತ್ತಿದ್ದಾರೆ.

೨.೩.೨. ಗುಲಬರ್ಗಾ ಜಿಲ್ಲೆ: ಗುಲಬರ್ಗಾ ಜಿಲ್ಲೆಯು ೧೬೦.೧೨೧ ರಿಂದ ೧೭೦.೪೬೧ ಉತ್ತರ ಅಕ್ಷಾಂಶ ಹಾಗೂ ೭೬೦.೦೪೧ ರಿಂದ ೭೭೦.೪೨ ಪೂರ್ವ ರೇಖಾಂಶ ನಡುವೆ ಇದೆ. ಜಿಲ್ಲೆಯು ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರದ ರಾಜ್ಯದ ಸೊಲ್ಲಾಪುರ ಮತ್ತು ಉಸ್ಮಾನಬಾದ್ ಪೂರ್ವಕ್ಕೆ ತೆಲಂಗಾಣದ ಮೇಡಕ ಮತ್ತು ಮೆಹಬೂಬ ನಗರ, ಪಶ್ಚಿಮಕ್ಕೆ ಬಿಜಾಪುರ, ಉತ್ತರಕ್ಕೆ ಬೀದರ ಹಾಗೂ ದಕ್ಷಿಣಕ್ಕೆ ಯಾದಗಿರಿ ಜಿಲ್ಲೆಗಳಿವೆ. ಗುಲಬರ್ಗಾ ಜಿಲ್ಲೆಯು ೨೦೦೧ರ ಜನಗಣತಿಯ ವರದಿಯಂತೆ ಭೌಗೋಳಿಕ ಪ್ರದೇಶವು ೧೬,೨೨೪ ಚ.ಕಿ.ಮೀ ವಿಸ್ತೀರ್ಣತೆ ಹೊಂದಿದೆ. ೩೧, ೩೦, ೯೨೨ ಜನಸಂಖ್ಯೆಯನ್ನು ಹೊಂದಿದೆ. ಒಟ್ಟಾರೆಯಾಗಿ ಜಿಲ್ಲೆಯ ಹವಮಾನ ವಿಕ್ಷಣಾಲಯ ಇಲಾಖೆಯಲ್ಲಿನ ಅಂಕಿ ಅಂಶಗಳ ಪ್ರಕಾರ ಗುಲಬರ್ಗಾ ಜಿಲ್ಲೆಯ ಉಷ್ಣತೆ ಗರಿಷ್ಟ ೪೦.೫ ಡಿಗ್ರಿ ಸೆಲಸಿಯಸ್‌ನಿಂದ ಕನಿಷ್ಟ ಉಷ್ಣತೆ ೨೮.೪೦ ಡಿಗ್ರಿ ಸೆಲ್ಸಿಯಸ್ ಆಗಿರುತ್ತದೆ. ಹಾಗೇ ಗುಲಬರ್ಗಾ ಜಿಲ್ಲೆಯು ವಾರ್ಷಿಕವಾಗಿ ಸರಾಸರಿ ಮಳೆಯು ೭೧೨.೬ ಮಿ.ಮಿ ಇರುವುದರಿಂದ ಸಾಮಾನ್ಯವಾಗಿ ಬರಗಾಲ ಮತ್ತು ಕ್ಷಾಮ ಪರಿಸ್ಥಿತಿಗಳು ಆಗಾಗ್ಗೆ ಗೋಚರಿಸುತ್ತವೆ. ಮಲೆಯು ನೈಋತ್ಯದಿಂದ ಈಶಾನ್ಯ ದಿಕ್ಕಿನ ಕಡೆಗೆ ಹೆಚ್ಚಾಗುತ್ತಾ ಹೋಗುತ್ತದೆ. ಜಿಲ್ಲೆಯಲ್ಲಿ ಚಂಡಮಾರುತಗಳ ಹಾವಳಿ ಅತಿ ವಿರಳ. ಆದರೆ ಮಾನ್ಸೂನ ನಂತರದ ಅವಧಿಯಲ್ಲಿ ಬಂಗಾಳದ ಕೊಲ್ಲಿಯಲ್ಲಿ ಸಮುದ್ರದ ಏರಿಳಿತಗಳಿಂದ ಉಂಟಾಗುವ ಮಳೆಯು ಪೂರ್ವ ಕರಾವಳಿಯಲ್ಲಿ ಸುರಿಸಿ ಪಶ್ಚಿಮದೆಡೆ ಸಾಗುವ ವೆಳೆಗೆ ಜಿಲ್ಲೆಯಲ್ಲಿ ಹೆಚ್ಚು ಮಳೆ ಸುರಿಸುವುದು ಕಂಡುಬರುತ್ತದೆ.

ಭಾರತದ ದಕ್ಷಿಣ ಪ್ರಸ್ಥಭೂಮಿಯ ಭಾಗವಾಗಿದ್ದ ಗುಲಬರ್ಗಾವು ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ ಹಾಗೂ ಸಮುದ್ರ ಮಟ್ಟದಿಂದ ೩೦೦ ರಿಂದ ೭೦೦ ಮೀಟರ್ ಎತ್ತರದಲ್ಲಿದೆ. ಆರ್ಕಿಯನ್ ಯುಗದ ಗ್ರಾನೈಟ ಮತ್ತು ಪದರ ಶಿಲೆಗಳಿಂದ ಆರಂಭಿಸಿ ಕ್ರಿಟೇಶಿಯನ್ ಯುಗಕ್ಕೆ ಸೇರಿದ ಡೆಕ್ಕನ್ ಟ್ರ್ಯಾಪ ಮತ್ತು ಅಂತರ ಟ್ರ್ಯಾಪ, ಜಲಜ ಶಿಲೆಯದವರೆ ಶಿಲಾವರ್ಗ ಹಬ್ಬಿಕೊಂಡಿರುವುದು

ಗಮನಾರ್ಹವಾಗಿದೆ. ಜಿಲ್ಲೆಯ ಹೆಚ್ಚಿನ ಭಾಗವು ಡೆಕ್ಕನ್ ಟ್ರ್ಯಾಪ ಶಿಲಾ ಪ್ರದೇಶದಿಂದ ಕೂಡಿದಲ್ಲದೆ, ಮಧ್ಯ ಭಾಗದಲ್ಲಿ ಭೀಮಾ ವರ್ಗಕ್ಕೆ ಸೇರಿದ ಸುಣ್ಣಕಲ್ಲು ಮತ್ತು ಶಿಲಾ ಪದರುಗಳು ಕಂಡುಬರುತ್ತವೆ. ದಕ್ಷಿಣ ಹಾಗೂ ಪೂರ್ವದ ಅಂಚಿನ ಕೆಲವೆಡೆಗಳಲ್ಲಿ ಬಹು ಪ್ರಾಚೀನವಾದ ಪೆನಿಸ್ಸುಲರ್ ನೈಸ್ ಮತ್ತು ಧಾರವಾಡ ವರ್ಗಕ್ಕೆ ಸೇರಿದ ಶಿಲಲೆಗಳು ಕಂಡುಬರುತ್ತವೆ.

ಗುಲಬರ್ಗಾ ಜಿಲ್ಲೆಯು ವೈವಿಧ್ಯಮಯವಾದ ಖನಿಜ ನಿಕ್ಷೇಪಗಳಿಂದ ಶ್ರೀಮಂತವಾಗಿದೆ. ಈ ಜಿಲ್ಲೆಯಲ್ಲಿ ಸುಣ್ಣದ ಕಲ್ಲು, ಬೆಳಚು ಕಲ್ಲು, ಜಿಪ್ಸಮ ಶಹಾಬಾದಿ ಕಲ್ಲು, ಸವಳಿ ಮಣ್ಣು ಮುಂತಾದ ಖನಿಜ ಸಂಪನ್ಮೂಲಗಳು ಲಭ್ಯವಾಗಿವೆ. ಅದರಲ್ಲಿ ಶಹಾಬಾದಲ್ಲಿ ನಡೆಯುವ ಕಲ್ಲು ಗಣಿಗಾರಿಕೆ ಅತ್ಯಂತ ಮಹತ್ವದಾಗಿದೆ. ಈ ಕಲ್ಲುಗಣಿಗಾರಿಕೆಯು ವಿವಿಧ ರಾಜ್ಯಗಳಿಗೆ ಕಲ್ಲು ರಫ್ತು ಮಾಡುತ್ತದೆ. ಇದು ಸಿಮೆಂಟ ತಯಾರಿಸಲು, ಕಟ್ಟಡಗಳನ್ನು ಕಟ್ಟಲು ಉಪಯೋಗವಾಗುತ್ತದೆ. ಆದರೆ ಗುಲಬರ್ಗಾದಲ್ಲಿ ಸಿಗುವ ನೈಸರ್ಗಿಕ ಸಂಪನ್ಮೂಲಗಳು ಅತ್ಯಂತ ಬೇಡಿಕೆ ಇರುವ ಸಂಪನ್ಮೂಲವಲ್ಲದೆ ಇರುವುದರಿಂದ ಕೈಗಾರಿಕವಾಗಿ ಅಭಿವೃದ್ಧಿಯಾಗದೆ ಇನ್ನೂ ಸಂಪ್ರದಾಯಿಕ ನೆಲೆಯಲ್ಲಿಯೇ ಗಣಿಗಾರಿಕೆ ನಡೆದಿರುವುದು ಕಂಡುಬರುತ್ತದೆ.

ಜಿಲ್ಲೆಯ ವಾಯುಗುಣವು ಶುಷ್ಕ ಮತ್ತು ಆರೋಗ್ಯಕರವಾಗಿದೆ. ಆದರೆ ಸರಿಯಾದ ಸಮಯಕ್ಕೆ ಮಳೆ ಬರದ ಕಾರಣ ಕೃಷಿಯು ತುಂಬಾ ಹಿನ್ನಡೆಯಾಗಿದೆ. ಈ ಪ್ರದೇಶವು ಕಪ್ಪು ಮಣ್ಣು ಹೊಂದಿದರಿಂದ ಹತ್ತಿ, ತೊಗರಿ, ಉದು, ಹೆಸರು, ಜೋಳ ಮತ್ತು ಕಡಲೆ ಬೆಳೆಗಳಿಗೆ ಅನುಕೂಲವಾಗಿದೆ. ಅಲ್ಲದೆ ಈ ಭಾಗದ ರೈತರು ಕಡಿಮೆ ಮಳೆಯನ್ನು ಪಡೆಯುವ ಬೆಳೆಗಳನ್ನು ಹೆಚ್ಚಾಗಿ ಬಿತ್ತನೆ ಮಾಡುತ್ತಾರೆ. ಕಪ್ಪು ಮಣ್ಣಿನ ಭೂಮಿಯು ಫಲವತ್ತತೆ ಹೊಂದಿರುತ್ತದೆ. ಆದರೆ ಮಳೆಯು ಹೆಚ್ಚಾದರೆ ಮಾತ್ರ ಭೂಮಿಯು ಹೆಚ್ಚಿನ ಬೆಳೆಯನು ಬೀಡುತ್ತದೆ. ಕಡಿಮೆ ಮಳೆ ಆಗುವುದರಿಂದ ರೈತರು ಕೆಲವು ಸಂದರ್ಭದಲ್ಲಿ ಬೆಳಗೆ ಮಾಡಿರುವ ಸಾಲದ ಸುಳಿಯಲ್ಲಿಯೇ ಜೀವನ ಮಾಡುತ್ತಿರುವುದು ಗಮನಿಸಬಹುದಾಗಿದೆ. ಈ ಜಿಲ್ಲೆಯ ಗಡಿಗುಂಟ ವಿಸ್ತರಿಸಿಕೊಂಡಿವೆ. ಅಲ್ಲದೇ ನೆರೆಯ ತೆಲಂಗಾಣ ರಾಜ್ಯವು ಸಹ ಯಾದಗಿರಿ ತಾಲೂಕಿನ ಇನ್ನೊಂದು ಮೇರೆಯಾಗಿದೆ ಹಾಗಾಗಿ ದ್ವಿಭಾಷಿಕ ಪರಿಸರವು ಗಡಿಹೊಂಸಿಕೊಂಡಿರುವ ಗ್ರಾಮಗಳಲ್ಲಿ ಸಾಮಾನ್ಯ ಲಕ್ಷಣವಾಗಿ ಕಂಡುಬರುವುದು.

ಯಾದಗಿರಿ ಜಿಲ್ಲೆಯು ಮುಖ್ಯವಾಗಿ ಪೆನಿನ್‌ಸುಲಾರ ನೈಸ ಮತ್ತು ಕಣಶಿಲೆಗಳಿಂದ ಕೂಡಿರುವ ಶಿಲಾಶ್ರೇಣಿ ಹೊಂದಿರುವುದು ಆದರೆ ಬಹಳಷ್ಟು ಎತ್ತರದ ಬೆಟ್ಟ ಶ್ರೇಣಿಗಳು ಈ ಪ್ರದೇಶದಲ್ಲಿ ಕಂಡುಬರುವುದಿಲ್ಲ. ಸುಮಾರು ೩೨ ಕಿಲೋಮೀಟರನಷ್ಟು ಸಾಗಿ ಸೇಡಂ ತಾಲೂಕಿನ ಸರಹದ್ದಿನಲ್ಲಿ ಕೊನೆಗೊಳ್ಳುವವು. ಈ ಬೆಟ್ಟ ಸಾಲುಗಳು ಯಾದಗಿರಿ ತಾಲೂಕಿನ ಪಶ್ಚಿಮ ಭಾಗದಿಂದ ಪೂರ್ವಕ್ಕೆ ಹಾರಿಕೊಂಡಿವೆ. ಯರಗೋಳ, ಹತ್ತಿಕುಣಿ, ಮೋಚನಹಳ್ಳಿ, ಚಿಂತಕುಂಡಾದಿಂದ ಗಾಜಕೋಟದವರೆಗೆ

ಹಾಗೂ ಹತ್ತಿಕುಣಿಯಿಂದ, ಪೋತಾಪುರದವರೆಗೆ ಈ ಬೆಟ್ಟ ಸಾಲುಗಳಿವೆ. ಅಲ್ಲದೇ ಪೂರ್ವಭಾಗದಲ್ಲಿರುವ ಗುರಮಿಠಕಲ್ ಪ್ರದೇಶವು ಸಹ ಕಡಿದಾದ ಬೆಟ್ಟ ಮತ್ತು ತಗ್ಗುಗಳಿಂದ ಕೂಡಿರುವುದನ್ನು ಗಮನಿಸಬಹುದು. ಯಾದಗಿರಿ ಪಟ್ಟವು ಸಹ ಕಡಿದಾದ ಬೆಟ್ಟದ ತಪ್ಪಲಿನಲ್ಲಿ ನಿರ್ಮಾಣಗೊಂಡಿರುವುದು. ಶಹಾಪುರ ಪಟ್ಟಣವು ಮಹ್ಮಮಪುರ ಅಥವಾ ಸಾಗರ ಬೆಟ್ಟದ ಮಗ್ಗಲಲ್ಲಿಯೇ ರಚನೆಗೊಂಡಿದರೆ ಸುರಪುರ ಪಟ್ಟಣವು ಗುಡ್ಡದ ಮೇಲೆ ವಿಸ್ತರಿಸಿಕೊಂಡಿದೆ. ಶಹಾಪುರ ಪಟ್ಟಣದ ಪರಿಸರದಲ್ಲಿಯೇ ಹರಡಿಕೊಂಡಿರುವ ಬೆಟ್ಟವು ಬುದ್ಧನು ಮಲಗಿರುವಂತೆ ತೋರುತ್ತದೆ. ಈ ದೃಶ್ಯವು ಇಳಿ ಹೊತ್ತಿನಲ್ಲಿ ಕಂಡುಬರುತ್ತದೆ.

ಸುರಪುರ ತಾಲೂಕಿನ ಹಗರಟಿಯಲ್ಲಿ ಆರಂಭಗೊಳ್ಳುವ ಕಡಿಮೆ ಎತ್ತರ ಕೂಡಿರುವ ಗುಡ್ಡವು ಹುಣಸಗಿ ಪ್ರದೇಶವನ್ನು ದಾಟಿ ಮುದನೂರು ಪರಿಸರದವರೆಗೂ ಕಿರಿದಾಗುತ್ತಾ ಹೋಗುತ್ತದೆ. ಅಲ್ಲದೇ ಅದು ಅಲ್ಲಲ್ಲಿ ನೆಲಸಮಗೊಂಡಂತೆ ಕಾಣುವುದು. ಇದು ಅಖಂಡವಾಗಿ ಹಬ್ಬಿಕೊಂಡಿಲ್ಲ. ಈ ಪರಿಸರದಲ್ಲಿ ಬರುವ ಹುಣಸಗಿ ಮತ್ತು ಬೈಚವಾಳ ಕೊಳ್ಳಗಳು ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ತುಂಬಾ ಮಹತ್ವದ ಹಾಗೂ ಅಮೂಲ್ಯ ಕುರುಹುಗಳನ್ನು ತನ್ನೊಡಲೊಳಗೆ ರಕ್ಷಿಸಿಕೊಂಡು ಬಂದಿರುವವು ಸಂಗತಿಗಳು ತಿಳಿದಿರುವ ವಿಷಯಗಳೇ ಆಗಿವೆ. ಯಾದಗಿರಿ ಜಿಲ್ಲೆಯ ಶಹಾಪುರ ಮತ್ತು ಸುರಪುರ ತಾಲೂಕ ಪ್ರದೇಶಗಳು ಸಗರ ದೋ–ಅಬ್‌ದಲ್ಲಿ ಕೇಂದ್ರಿಕರಣಗೊಂಡಿವೆ. ಕೃಷ್ಣಾ ಮತ್ತು ಭೀಮಾ ನದಿಗಳ ನಡುವಿನ ಪ್ರದೇಶವನ್ನು ಸಗರ ದೋ–ಅಬ್ ಅಥವಾ ಸಗರ ಗಡ್ಡೆ ಎಂದು ಕರೆಯಲಾಗುತ್ತದೆ. ಇದು ೭೬೦.೧೮೧ ರಿಂದ ೭೭೦.೧೮೧ ಆಕ್ಷಾಂಶ ಹಾಗೂ ೧೬೦.೧೫೧ ರಿಂದ ೧೭೦.೧೨೧ ರೇಖಾಂಶಗಳಲ್ಲಿದ್ದು ಹೆಚ್ಚು ಕಡಿಮೆ ೫೩೭೦ ಚ.ಕಿ.ಮೀಟರ್ ವಿಸ್ತೀರ್ಣ ಹೊಂದಿದೆ ಎಂಬ ಉಲ್ಲೇಖವಿದೆ.

ಯಾದಗಿರಿ ಜಿಲ್ಲೆಯಲ್ಲಿ ಪ್ರಮುಖವಾಗಿ ಕೃಷ್ಣಾ, ಭೀಮಾ ಹಾಗೂ ಡೋಣಿ ಎಂಬ ಹೆಸರಿನ ಮೂರು ನದಿಗಳು ಹರಿತವೆ. ಅಲ್ಲದೇ ಹುಣಸಗಿ, ಹತ್ತಿಕುಣಿ ಮತ್ತು ಗುರಮಿಟಕ್ಕಲ್ ಪ್ರದೇಶಗಳಲ್ಲಿ ಸಣ್ಣ ತೊರೆಗಳಾಗಿ ಹರಿದಿರುವ ಜಲ ಮೂಲಗಳು ಈ ಜಿಲ್ಲೆಯಲ್ಲಿವೆ. ಇವು ಪ್ರಾಚೀನ ನಾಗರಿಕತೆಗಳ ಆಡಂಬೋಲದ ಕಣಗಳಾಗಿದ್ದವಲ್ಲದೇ ಈ ಹೋತಿನ ಕೃಷಿ ಚಟುವಟಿಕೆಗಳಿಗೂ ಹೆಚ್ಚಿನ ಸಹಕಾರ ನೀಡಿವೆ. ಹಾಗೆ ವೈವಿಧ್ಯಮಯ ಖನಿಜ ನಿಕ್ಷೇಪಗಳಿಂದಲೂ ಸಂಪದ್ಭರಿತವಾಗಿರುವ ವಿವರಗಳನ್ನು ದಾಖಲಿಸಿರುವುದು ಉತ್ಪ್ರೇಕ್ಷಿತ ಸಂಗತಿಯಲ್ಲ. ಸುರಪುರ ತಾಲೂಕಿನಲ್ಲಿರುವ ಮಂಗಳೂರು ಗ್ರಾಮ ಪರಿಸರದಲ್ಲಿ ಚಿನ್ನ, ತಿಂಥಿಣಿ ಪರಿಸರದಲ್ಲಿ ತಾಮ್ರದ ನಿಕ್ಷೇಪ ಇರುವ ಬಗೆಗೆ ಮಾಹಿತಿಗಳು ಪ್ರಕಟವಾಗಿವೆ. ಶಹಾಪುರ ತಾಲೂಕಿನ ಗೋಗಿ ಗ್ರಾಮ ಪರಿಸರವಂತೂ ಇತ್ತೀಚೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದೆ. ಇಲ್ಲಿ ಸಿಗುತ್ತಿರುವ ಯುರೇನಿಯಂ ನೀಕ್ಷೆಪ ಬಹು ಬಳಕೆಯ ವಿಧಾನಗಳಿಗೆ

ಉಪಯೋಗವಾಗುತ್ತದೆ. ಅಲ್ಲದೇ ಈಗಾಗಲೇ ಈ ಗ್ರಾಮ ಪರಿಸರದಲ್ಲಿ ಗಣಿಗಾರಿಕೆ ಮಾಡುವ ಪ್ರಯತ್ನಗಳು ಆಗಿದುಂಟು. ಈ ನಿಕ್ಷೇಪವು ವೈಜ್ಞಾನಿಕ ವಲಯದಲ್ಲಿ ಅತ್ಯಂತ ಬಹುಬೇಡಿಕೆಯ ಮೂಲವಸ್ತುವಾಗಿ ಪರಿಣಯಿಸಿದೆ. ಆದರೆ ಅದರಿಂದಾಗುವ ದುಷ್ಪರಿಣಾಮಗಳು ಸಹ ಜನರನ್ನು ಹೆಚ್ಚಿನ ಆತಂಕಕ್ಕೆ ಉಂಟುಮಾಡಿವೆ.

೨.೩.೩. ರಾಯಚೂರು ಜಿಲ್ಲೆ: ರಾಯಚೂರು ಜಿಲ್ಲೆಯು ೧೫೦.೫೦೧ ರಿಂದ ೧೬೦.೫೪೧ ಆಕ್ಷಾಂಶ ಹಾಗೂ ೭೬೦.೫೦೧ ರಿಂದ ೭೮೦.೧೫೧ ರೇಖಾಂಶಗಳ ನಡುವೆ ಇದೆ. ಜಿಲ್ಲೆಯು ಪೂರ್ವಕ್ಕೆ ತೆಲಂಗಾಣದ ರಾಜ್ಯದ ಮೆಹಬೂಬ ನಗರ ಜಿಲ್ಲೆ, ಪಶ್ಚಿಮಕ್ಕೆ ಬಾಗಲಕೋಟೆ ಹಾಗೂ ಕೊಪ್ಪಳ, ಉತ್ತರಕ್ಕೆ ಬಿಜಾಪುರ ಮತ್ತು ಯಾದಗಿರಿ, ದಕ್ಷಿಣಕ್ಕೆ ಬಳ್ಳಾರಿ ಜಿಲ್ಲೆಗಳಿವೆ. ಭಾರತ ಸರ್ಕಾರದ ಅಂಕಿ ಸಂಖ್ಯೆಗಳ ಪ್ರಕಾರ ರಾಯಚೂರು ಜಿಲ್ಲೆಯು ಭೌಗೋಳಿಕವಾಗಿ ೬೮೫೪ ಚ.ಕಿ.ಮೀಟರ್ ವಿಸ್ತೀರ್ಣ ಹೊಂದಿದ್ದು, ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯು ೧೬.೭೦ ಲಕ್ಷ ಜನಸಂಖ್ಯೆ ಇದ್ದು, ಅದರಲ್ಲಿ ಪುರುಷರು ೮.೪೨ ಲಕ್ಷ ಹಾಗೂ ಮಹಿಳೆಯರು ೮.೨೮ ಲಕ್ಷ ಆಗಿರುತ್ತದೆ. ಹಾಗೇ ಜನರು ನಗರಕ್ಕಿಂತ ಗ್ರಾಮೀಣ ಮಟ್ಟದಲ್ಲಿಯೆ ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಬಯಲು ಸೀಮೆಯಾದ ಈ ಜಿಲ್ಲೆಯು ದಟ್ಟವಾದ ಬೆಟ್ಟಗುಡ್ಡಗಳನ್ನು ಹೊಂದಿದರೆ, ಬೆಸಿಗೆಯಲ್ಲಿ ಗರಿಷ್ಟ ಸರಾಸರಿ ಉಷ್ಣತೆ ೪೦ ಸೆಂಟಿಗ್ರೇಡ ಇಳಿದ ದಾಖಲೆಗಳಿವೆ. ಕನಿಷ್ಟ ಸರಾಸರಿ ೨೮ ಆಗಿರುತ್ತದೆ. ಇದರಿಂದ ಈ ಪ್ರದೇಶವು ಜನ ವಾಸಯೋಗ್ಯವಾದ ತಾಪಮಾನವನ್ನು ಹೊಂದಿದೆ. ರಾಯಚೂರು ಜಿಲ್ಲೆ ಒಣಹವೆಯಿಂದ ಕೂಡಿದರೂ ಇಲ್ಲಿ ವಾರ್ಷಿಕ ಸರಾಸರಿ ಮಳೆಯು ೬೪೫ ಮಿ.ಮೀಟರಷ್ಟು ಆಗುತ್ತದೆ. ಪ್ರಸ್ತುತ ಜಿಲ್ಲೆಯ ಲಿಂಗಸೂಗೂರ, ಮಾನ್ವಿ, ಸಿಂಧನೂರು, ದೇವದುರ್ಗ ಮತ್ತು ರಾಯಚೂರು ತಾಲೂಕಗಳನ್ನು ಒಳಗೊಂಡಿದೆ.

ಈ ಜಿಲ್ಲೆಯು ವಿಶೇಷವಾದ ಬೆಟ್ಟಗುಡ್ಡಗಳಿಂದ ಆವೃತ್ತವಾದ ಪ್ರದೇಶವಾಗಿದೆ. ಸಣ್ಣ ಪುಟ್ಟ ಬೆಟ್ಟಗಳು ಕರಡಿಗುಟಿ, ಮಸರಕಲ್ಲು, ಕಾಕರಕಲ್ಲು, ಬೆಟ್ಟ ಶ್ರೇಣಿಗಳಿಂದ ಕೂಡಿರುವ ಇದು ಸುಮಾರು ಅಡಿಗಳಷ್ಟು ಎತ್ತರವಿದ್ದು, ಕೃಷ್ಣಾ ನದಿಯು ಕೂಡ ಬೆಟ್ಟಗುಡ್ಡಗಳ ಮಧ್ಯದಲ್ಲಿಯೇ ಹರಿಯುವುದು ಕಂಡು ಬರುತ್ತದೆ. ಇಷ್ಟಲ್ಲದೆ ರಾಯಚೂರು ಅರಣ್ಯ ಸಂಪತ್ತಿನಲ್ಲಿ ಕೂಡ ತನ್ನದೆಯಾದ ಸ್ಥಾನಮಾನ ಪಡೆದಿರುವುದು ಕಂಡುಬರುತ್ತದೆ. ಈ ಅರಣ್ಯ ಪ್ರದೇಶದಲ್ಲಿ ಯಾವುದೆ ಬೆಲೆಬಾಳುವ ಮರಗಳು ಇಂದಿದರು ಕೂಡ ನೀಲಗಿರಿ, ಕಕ್ಕೆ, ಬಟ್ಟಲು, ಮುತುಲು, ಬೇವಿನಮರ ಮುಂತಾದ ಮರಗಳಿಂದ ಕೂಡಿದ ಅರಣ್ಯಾ ಸಂಪತ್ತು ಹೊಂದಿದೆ. ರಾಯಚೂರು ಜಿಲ್ಲೆಯು ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವೆ ಇರುವ ಒಂದು ಫಲವತ್ತಾದ ಭೂಪ್ರದೇಶ ಹೊಂದಿರುವ ಈ ಜಿಲ್ಲೆಯು ಅನೇಕ

ಖನಿಜ ಸಂಪತ್ತು ಹೊಂದಿರುವುದಾಗಿದೆ. ಈ ಸಂಪತ್ ಭರಿತ ಪ್ರದೇಶಕ್ಕಾಗಿ ಚರಿತ್ರೆ ಯುದ್ಧಕೂ ಯುದ್ಧಗಳು ನಡೆದಿರುವುದು ಸ್ಪಷ್ಟವಾಗಿ ಕಂಡುಬರುತ್ತವೆ.

ರಾಯಚೂರಿನ ಜನರ ಮುಖ್ಯ ಕಸುಬು ವ್ಯವಸಾಯ ಆರಂಭದಲ್ಲಿ ಮಳೆಯನ್ನು ಆಧರಿಸಿ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದರು. ತದನಂತರ ರಾಯಚೂರು ಜಿಲ್ಲೆಗೆ ವರದಾನವಾಗಿರುವ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನೀರನ್ನು ಕಾಲುವೆಯ ಮೂಲಕ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡಿದರು. ಹಾಗೇ ಕೆಲವು ತೆರೆದ ಬಾವಿಗಳಿಂದ ನಿರಾವರಿಗೆ ಅನುಕೂಲವಾಗಿರುವುದು ಕಂಡುಬರುತ್ತದೆ. ಈ ರೀತಿಯಾಗಿ ನೀರಾವರಿಯನ್ನು ಮಾಡಿಕೊಂಡ ರೈತರು ಭತ್ತ, ಹತ್ತಿ, ಸೂರ್ಯಕಾಂತಿ, ಕಡಲೆ, ಶೇಂಗಾ, ತೊಗರಿ, ಉಳ್ಳಗಡ್ಡಿ ಹಾಗೂ ಕಬ್ಬು ಮುಂತಾದ ಬೆಳೆಗಳನ್ನು ಮಾಡಿಕೊಳ್ಳಲು ಈ ನದಿಗಳು ಸಹಕಾರಿಯಾಗಿವೆ. ತುಂಗಭದ್ರಾ ಮತ್ತು ಕೃಷ್ಣಾ ನದಿಯು ಬೃಹತ್ ನೀರಾವರಿ ಯೋಜನೆಗಳಿಂದ ಭತ್ತ ಬೆಳೆಯುತ್ತಿದ ರೈತರು ಕಾಲಾನಂತರ ತಮ್ಮ ಭೂಮಿಯನ್ನು ಆಂಧ್ರ ಪ್ರದೇಶದ ಭೂಮಾಲೀಕರಿಗೆ ಲೀಸ್‌ಗೆ ನೀಡಿ, ಅವರ ಹತ್ತಿರವೆ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ.

ರಾಯಚೂರು ಪ್ರದೇಶವು ಅನೇಕ ಖನಿಜ ಸಂಪನ್ಮೂಲಗಳನ್ನು ಹೊಂದಿರುವುದು ಗಮನಿಸಬಹುದು. ಪ್ರಾಚೀನ ಕಾಲದಿಂದಲೂ ಚಿನ್ನ ರಾಯಚೂರು ಜಿಲ್ಲೆಯಲ್ಲಿ ಕಂಡುಬರುತ್ತದೆ. ಪ್ರಭುತ್ವಗಳಿಂದ ಹಿಡಿದು ಇವತ್ತೀನ ಪ್ರಜಾಪ್ರಭುತ್ವದವರೆಗೆ ಚಿನ್ನದ ಉದ್ದಿಮೆ ನಡೆದಿರುವುದು ಕಂಡುಬರುತ್ತದೆ. ಇತ್ತೀಚಿನ ಕೆಲವು ವರ್ಷಗಳಿಂದ ಕಾರ್ಖಾನೆಯು ನಷ್ಟದ ಅಂಚಿನಲ್ಲಿದಕ್ಕಾಗಿ ಉದ್ದಮೆ ಸ್ಥಗಿತವಾಗಿದೆ. ಇಷ್ಟಲ್ಲದೆ ಜಿಲ್ಲೆಯಲ್ಲಿ ಯುರೆನಿಯಂ, ಗ್ರಾನೈಟ, ಅಬ್ರಾಕ ಮುಂತಾದ ಸಂಪನ್ಮೂಲಗಳಿಂದ ಕೂಡಿರುವುದು ಗಮನಿಸಬಹುದಾಗಿದೆ.

೨.೩.೪. ಕೊಪ್ಪಳ ಜಿಲ್ಲೆ : ಕೊಪ್ಪಳ ಜಿಲ್ಲೆಯು ೧೫೦ ರಿಂದ ೧೫೦.೧೩೧ ಉತ್ತರ ಅಕ್ಷಾಂಶ ಹಾಗೂ ೭೫೦ ರಿಂದ ೭೬೧ ರೇಖಾಂಶಗಳ ನಡುವೆ ಇದೆ. ಜಿಲ್ಲೆಯು ಉತ್ತರಕ್ಕೆ ಬಾಗಲಕೋಟೆ ಈಶಾನ್ಯಕ್ಕೆ ರಾಯಚೂರು, ದಕ್ಷಿಣಕ್ಕೆ ಮತ್ತು ಪೂರ್ವಕ್ಕೆ ಬಳ್ಳಾರಿ ಹಾಗೂ ಪಶ್ಚಿಮಕ್ಕೆ ಗದಗ ಜಿಲ್ಲೆಗಳಿವೆ. ಕೊಪ್ಪಳ ಜಿಲ್ಲೆಯು ೫.೫೨, ೪೯೫ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದು, ಇದರಲ್ಲಿ ಗ್ರಾಮಾಂತರ ಜನಸಂಖ್ಯೆ ೮,೧೧.೦೦೦ ಮತ್ತು ನಗರ ಜನಸಂಖ್ಯೆ ೧,೪೮.೧೦೦ ಇದೆ. ಈ ಭಾಗದ ಜನರು ಹೆಚ್ಚು ಕೃಷಿಯನ್ನು ಅವಲಂಭಿಸಿದರಿಂದ ಸರಿ ಸುಮಾರು ೪,೧೫.೮೦೦ ಕೃಷಿ ಕೆಲಸಗಾರರು ಇದ್ದಾರೆ. ಒಟ್ಟು ೫೮೬ ವಸತಿಯುಳ್ಳ ಗ್ರಾಮಗಳು ಹೊಂದಿದೆ. ಬೆಸಿಗೆಯಲ್ಲಿ ಗರಿಷ್ಟ ಸರಾಸರಿ ಉಷ್ಣತೆ ೩೯ ಡಿಗ್ರಿ ಸೆಂಟಿಗ್ರೇಡಗರ ಇಳಿದ ದಾಖಲೆಗಳಿವೆ. ಕನಿಷ್ಟ ಸರಾಸರಿ ತಾಪಮಾನವು ೧೭.೫೦ ಆಗಿರುತ್ತದೆ.

ಈ ಪ್ರದೇಶವು ಪ್ರತಿ ವರ್ಷದ ವಾಡಿಕೆಯಂತೆ ಮಳೆಯ ಪ್ರಮಾಣ ೫೭೨ ಮಿ.ಮೀ ಇರುವುದು ಕಮಡುಬಂದಿದೆ. ಇದರಿಂದ ಈ ಪ್ರದೇಶದ ಮಳೆಯ ಪ್ರಮಾಣ ಕಡಿಮೆಯೆಂದು ಹೇಳಬಹುದು. ಇಲ್ಲಿ ನೈಋುತ್ಯ ಮಾರುತಗಳು ಮಳೆ ಸುರಿಸುತ್ತವೆ. ತುಂಗಭದ್ರಾ ನದಿ ಸ್ವಲ್ಪ ದೂರದಲ್ಲಿದ್ದು ಜಿಲ್ಲೆಗೆ ಇದು ನೀರಿನ ಬಹುಮುಖ್ಯ ಸಂಪನ್ಮೂಲವಾಗಿದೆ. ಮುಂಗಾರು ಹಂಗಾಮು ಸಾಧಾರಣದಿಂದ ಕುಡಿದ್ದು, ಹಿಂಗಾರು ಕೂಡ ಕಡಿಮೆ ಪ್ರಮಾಣದಲ್ಲಿ ಬರುತ್ತದೆ. ಮಳೆಯು ಆಶ್ರಿತವಾದ ಈ ಪ್ರದೇಶದಲ್ಲಿ ಅಲ್ಪಮಳೆ ಬಯಸುವ ಬೆಳೆಗಳನ್ನು ಬೆಳೆಯಲಾಗುತ್ತದೆ. ತುಂಗಭದ್ರ ನದಿಯು ದಡದಲ್ಲಿರುವ ಹರೇಬಗಿನಾಳ, ಕರ್ಕಿಹಳ್ಳಿ, ಹ್ಯಾಟಿ ಮುದ್ದಾಬಳ್ಳಿ, ಬಚನಳ್ಳಿ ಹೀಗೆ ವಿವಿಧ ಗ್ರಾಮಗಳ ರೈತರು ಹೆಚ್ಚಾಗಿ ಕಡಲೆ, ಸೂರ್ಯಕಾಂತಿ, ಅಲಸಂದಿ, ಬೆಳೆಗಳನ್ನು ಬೆಳೆಯುತ್ತಾರೆ. ತುಂಗಭದ್ರ ಎಡದಂಡೆ ಕಾಲುವೆ ಮತ್ತು ಹೆಚ್.ಎಲ್.ಸಿ. ಕಾಲುವೆಗಳಿಂದ ಕೊಪ್ಪಳ ಮತ್ತು ಗಂಗಾವತಿ ತಾಲೂಕಿನ ಕೆಲವು ರೈತರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. ಹೀರೆಹಳ್ಳಿ ಯೋಜನೆಯಿಂದ ಕನ್ನಳ ಗ್ರಾಮದ ಸುತ್ತ ಮುತ್ತಲು ಗ್ರಾಮದವರಿಗೆ ಅನುಕೂಲವಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಹರಿಯುತ್ತಿರುವ ತುಂಗಭದ್ರ ನದಿ ನೈಸರ್ಗಿಕ ಸಂಪನ್ಮೂಲಗಳ ದೃಷ್ಟಿಯಿಂದ ಜಿಲ್ಲೆಗೊಂದು ವರದಾನವಾಗಿದೆ. ಈ ನದಿಗೆ ಮುನಿರಾಬಾದ್ ಗ್ರಾಮದ ಹತ್ತಿರ ನಿಜಾಮರ ಒತ್ತಾಸೆಯಂತೆ ಮದ್ರಾಸದ ಮತ್ತು ಹೈದರಾಬಾದ್ ಸರ್ಕಾರಗಳ ಸಹಯೋಗದೊಂದಿಗೆ ತುಂಗಭದ್ರ ಆಣೆಕಟ್ಟನ್ನು ಕಟ್ಟಲು ಯೋಜನೆಯನ್ನು ರೂಪಿಸಿ ಅಡಿಗಲ್ಲು ಹಾಕಲಾಯಿತು. ಆದರೆ ಈ ಸಂದರ್ಭಕ್ಕೆ ಭಾರತ ದೇಶದ ಸ್ವಾತಂತ್ರ್ಯ ಹೋರಾಟದ ಹೆಚ್ಚು ದಿನೆ ದಿನೆ ಹೆಚ್ಚಾಗಿ ಕೊನೆಗೂ ನಿಜಾಮ ಸರ್ಕಾರವು ಕೂಡ ದೇಶದಲ್ಲಿ ವಿಲಿನವಾಯಿತು. ನಂತರ ಬಂದ ಪ್ರಜಾಪ್ರಭುತ್ವ ಸರ್ಕಾರಗಳು ಈ ನದಿಯ ಆಣೆಕಟ್ಟನ್ನು ಪೂರ್ಣಗೊಳಿಸಿ ಈ ಭಾಗದ ಜನರಿಗೆ ನೀರಾವರಿ ಅನುಕೂಲ ಮಾಡಿಕೊಟ್ಟಿತು. ಆದರಿಂದ ಕೊಪ್ಪಳ ಜಿಲ್ಲೆಯ ಬಹುತೇಕ ಗ್ರಾಮಗಳು ಈ ನೀರಾವರಿ ಸೌಲಭ್ಯ ಪಡೆದುಕೊಂಡು ಇಂದು ಕರ್ನಾಟಕ ರಾಜ್ಯದಲ್ಲಿಯ ಭತ್ತ ಬೆಳೆಯನ್ನು ಬೆಳೆಯುವಲ್ಲಿ ಪ್ರಥಮ ಸ್ಥಾನದಲ್ಲಿ ಇರುವುದು ಕಂಡುಬರುತ್ತದೆ.

ಜಿಲ್ಲೆಯು ಭೂ ವೈಜ್ಞಾನಿಕವಾಗಿ ಇಲ್ಲಿಯ ಶಿಲೆಗಳು ಅತಿ ಪುರಾತನ ಕಾಲಕ್ಕೆ ಸಂಬಂಧಿಸಿದ ಶಿಲೆಗಳಲ್ಲಿ ಇವುಗಳನ್ನು ಪರಿಗಣಿಸಲಾಗಿದೆ. ಕುಷ್ಟಗಿ ತಾಲೂಕಿನ ಹನುಮಸಾಗರ ಸುತ್ತ ಮುತ್ತಲ ಪ್ರದೇಶದಲ್ಲಿ ಸಿಗುವ ಕಡಿಮೆ ವಿಸ್ತೀರ್ಣದ ಕಲಾದಾಗಿ ಶ್ರೇಣಿಗಳನ್ನು ಹೊರತುಪಡಿಸಿದರೆ ಜಿಲ್ಲೆಯ ಉಳಿದ ಭಾಗದಲ್ಲಿ ಆರ್ಕಿಯನ್ಸ್ ಯುಗಕ್ಕೆ ಸೇರಿದ ಶಿಲೆಗಳು ಕಂಡುಬರುತ್ತವೆ. ಜಿಲ್ಲೆಯ ಪ್ರದೇಶ ಗ್ರಾನೈಟ ಉದ್ದಿಮಕ್ಕೆ ರಾಜ್ಯ ವ್ಯಾಪ್ತಿ ಹೆಸರುವಾಸಿಯಾಗಿದೆ. ಗ್ರಾನೈಟ ಶಿಲೆಯು ಅಲಂಕಾರಗಳಿಗಾಗಿ,

ಕಟ್ಟಡಗಳಿಗೆ ಬಳಸುವುದರಿಂದ ಕಲ್ಲು ಗಣಿಗಾರಿಕೆ ಆರಂಭವಾಗಿದೆ. ಹೀಗೆ ಆರಂಭದ ಈ ಗಣಿಗಾರಿಕೆಯಿಂದ ಭೌಗೋಳಿಕ ಪರಿಸರ ಸಂಪೂರ್ಣವಾಗಿ ನಾಶವಾಗ ತೊಡಗಿದೆ. ಇದರಿಂದ ಈ ಪ್ರದೇಶದಲ್ಲಿ ಕಾಡು, ಗಿಡ ಮರಗಳ ಸಂಖ್ಯೆ ಕಡಿಮೆಯಾಗುತ್ತ ಹೋಗುತ್ತಿದ್ದು, ಪರಿಸರದ ಬಗೆಗೆ ಕಾಳಜಿ ವಹಿಸಿದೆ ಇರುವುದರಿಂದ ಅಂತರ್ಜಲ ಮಟ್ಟ, ಉತ್ತಮವಾದ ಗಾಳಿ ಮುಂತಾದ ಕೊರತೆ ಅನುಭವಿಸಲಾಗುತ್ತಿದೆ.

ಉಪಸಂಹಾರ: ಹೈದರಾಬಾದ ಕರ್ನಾಟಕ ಪ್ರದೇಶದ ಚರಿತ್ರೆಯನ್ನು ಅರ್ಥೈಸಿಕೊಳ್ಳಬೇಕಾದರೆ ಆ ಪ್ರದೇಶದ ಭೌಗೋಳಿಕತೆಯು ತಿಳಿಯುವುದು ಅತಿ ಮುಖ್ಯವಾಗಿದೆ. ಏಕೆಂದರೆ ಭೌಗೋಳಿಕ ಅಂಶಗಳು ಚರಿತ್ರೆಯ ಮೇಲೆ ಪ್ರಭಾವ ಬಿರುತ್ತವೆ. ಒಂದು ಪ್ರದೇಶವು ಪ್ರಭುತ್ವವನ್ನು ಸ್ಥಾಪಿಸಲು ಪೂರಕವಾದ ವಾತಾವರಣವಿದ್ದಾಗ ಮಾತ್ರ ಆ ಪ್ರದೇಶದಲ್ಲಿ ಪ್ರಭುತ್ವಗಳು ಸ್ಥಾಪನೆಯಾಗುತ್ತದೆ. ಉದಾಹರಣೆಗೆ ರಾಯಚೂರಿನ ದೋ-ಅಬ್ ಪ್ರದೇಶವು ನದಿಯ ಮುಳಜ ಭೂಮಿಯಾಗಿದರಿಂದ ಆ ಪ್ರದೇಶವು ಫಲವತ್ತಾಗಿರುತ್ತದೆ. ಈ ದೋ-ಅಬ್ ಪ್ರದೇಶದಲ್ಲಿ ಪ್ರಭುತ್ವವನ್ನು ಸ್ಥಾಪಿಸಲು ಅನೇಕ ಯುದ್ಧಗಳಾಗಿರುವುದು ಕಂಡುಬರುತ್ತದೆ. ಒಂದು ವೇಳೆ ಪೂರಕ ವಾತಾವರಣವಿಲ್ಲದ ಪ್ರದೇಶದಲ್ಲಿ ಪ್ರಭುತ್ವವನ್ನು ಸ್ಥಾಪಿಸಿದರೆ ಆ ಪ್ರಭುತ್ವದ ಏಳಿಗೆಗೆ ಹಿನ್ನಡೆಯಾಗಿ ಅಭಿವೃದ್ಧಿ ಕುಂಠಿತವಾಗುತ್ತದೆ. ಹೈದರಾಬಾದ ಕರ್ನಾಟಕ ಪ್ರದೇಶವು ಭೌಗೋಳಿಕವಾಗಿ ಒಣ ಭೂ ಪ್ರದೇಶದಿಂದ ಕೂಡಿದಾಗಿದೆ. ಆದರಿಂದ ಆ ಪ್ರದೇಶದ ಅಭಿವೃದ್ಧಿಗೆ ಪೂರಕವಾದ ವಾತಾವರಣ ಇಲ್ಲದರಿಂದ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ. ಒಂದು ಪ್ರಭುತ್ವವು ಉತ್ತಮ ಪ್ರಭುತ್ವವಾಗಬೇಕಾದರೆ ಗಡಿ, ಭೂಸ್ವರೂಪ, ಭೂಶಿಲಾ, ನದಿಜಾಲ ಹೊಂದಿದಾಗ ಮಾತ್ರ ಅಂತ ಪ್ರಭುತ್ವವು ಬಹು ದಿನಗಳ ಕಾಲ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಹೈದರಾಬಾದ ಕರ್ನಾಟಕ ಪ್ರದೇಶದ ಗುಲಬರ್ಗಾ, ಬೀದರ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಜಿಲ್ಲಾ ಪ್ರದೇಶಗಳು ಒಣ ಭೂ ಪ್ರದೇಶ ಹೊಂದಿರುವ ಜಿಲ್ಲೆಗಳಾಗಿವೆ. ಇಲ್ಲಿನ ರೈತರು ಮಳೆಯನ್ನೆ ಅವಲಂಬಿಸಿದ ಬೆಳೆಯನ್ನು ಬೆಳೆಯುವುದರಿಂದ ಆರ್ಥಿಕವಾಗಿ ಹಿಂದುಳಿಯುತ್ತಿದ್ದಾರೆ. ಈ ಪ್ರದೇಶದಲ್ಲಿ ಪ್ರಮುಖವಾದ ಮೂರು ನದಿಗಳು ಹರಿಯುತ್ತಿದ್ದರು ಕೂಡ ಆ ನದಿಗಳ ಉಪಯೋಗವನ್ನು ಪಡೆದುಕೊಳ್ಳುವಲ್ಲಿ ಈ ಪ್ರದೇಶ ಆಳ್ವಿಕೆ ಮಾಡಿದ ಪ್ರಭುತ್ವಗಳು ವಿಫಲವಾಗಿವೆ. ಹಾಗೇ ಮುಂದೆ ಬಂದ ಪ್ರಜಾಪ್ರಭುತ್ವ ಸರ್ಕಾರಗಳು ಕುಡ ನದಿಗಳನ್ನು ಬಳಸಿಕೊಳ್ಳುವಲ್ಲಿ ಇವತ್ತಿಗೂ ವಿಫಲವಾಗಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿದ ನೈಸರ್ಗಿಕ ಸಂಪನ್ಮೂಲಗಳು ಕಡಿಮೆ ಪ್ರಮಾಣದಲ್ಲಿದರು ಕೂಡ ಇದ್ದ ಸಂಪನ್ಮೂಲಗಳು ಬಳಸಿಕೊಳ್ಳುವಲ್ಲಿ ಹಿಂದುಳಿದಿರುವುದು ಕಂಡುಬರುತ್ತದೆ.

ಕೊನೆ ಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ ಕೆ., ೨೦೧೨, **ತುಳುನಾಡು ಕನ್ನಡ ನುಡಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೩೪–೩೫

೨. ಸಂತೋಷ ಕುಮಾರ ಹೆಚ್.ಬಿ, ೨೦೧೪, **ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳುವಳಿ, ಪಿಎಚ್.ಡಿ ಮಹಾಪ್ರಬಂಧ**, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೩೧

೩. ಪಾಟೀಲ್ ಎಂ.ಬಿ, ೧೯೯೭, **ಕರ್ನಾಟಕ ರಾಜ್ಯ ಗ್ಯಾಸಟಿಯರ್, ಗುಲಬರ್ಗಾ ಜಿಲ್ಲೆ**, ಕರ್ನಾಟಕ ಗ್ಯಾಸಟಿಯರ್, ಬೆಂಗಳೂರು, ಪು.೧೨–೧೩

೪. ಅಮರೇಶ ಹನಮಂತಪ್ಪ, ೨೦೧೪, **ರಾಯಚೂರು ದೋ–ಅಬ್ ಪ್ರದೇಶ ಅಧಿಕಾರ ಮತ್ತು ಹೋರಾಟ, ಅಪ್ರಕಟಿತ ಪಿಎಚ್.ಡಿ ಪ್ರಬಂಧ**, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೪೦

೫. ಪಾಟೀಲ್ ಎಂ.ಬಿ, **ಪೂರ್ವೋಕ್ತ**, ಪು.೧೨–೧೩

೬. **ಕರ್ನಾಟಕ ಪರಂಪರೆ**, ೧೯೭೦, ೪ನೇ ಮುದ್ರಣ ೨೦೧೪, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು.೩೭–೩೮

೭. ಪಾಟೀಲ್ ಎಂ.ಬಿ, **ಪೂರ್ವೋಕ್ತ**, ಪು.೧೪–೧೫

೮. ಸೂರ್ಯನಾಥ ಯು.ಕಾಮತ್(ಮು.ಸಂ), ೧೯೮೪, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ**, ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, ಪು.೯

೯. ಅದೇ ಪು.೧೨–೧೩

೧೦. **ಕರ್ನಾಟಕ ಪರಂಪರೆ**, ಪೂರ್ವೋಕ್ತ, ಪು.೪೨–೪೩

೧೧. ಮೋಹನ್‌ಕೃಷ್ಣ ರೈ ಕೆ., **ಪೂರ್ವೋಕ್ತ**, ಪು.೪೩–೪೪

೧೨. ಸೂರ್ಯನಾಥ ಯು.ಕಾಮತ್(ಮು.ಸಂ), ೧೯೮೪, **ಕರ್ನಾಟಕ ರಾಜ್ಯ ಗ್ಯಾಸಟಿಯರ್ ಭಾಗ ೧**, ಗ್ಯಾಸಟಿಯರ ಇಲಾಖೆ, ಬೆಂಗಳೂರು, ಪು.೩೦

೧೩. ಪಾಟೀಲ್ ಎಂ.ಬಿ, **ಪೂರ್ವೋಕ್ತ**, ಪು.೨೧–೨೨

೧೪. ಸೂರ್ಯನಾಥ ಯು.ಕಾಮತ್(ಮು.ಸಂ), **ಪೂರ್ವೋಕ್ತ**, ಪು.೩೨

೧೫. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.೨೨–೨೩

೧೬. ಸೂರ್ಯನಾಥ ಯು.ಕಾಮತ್(ಮು.ಸಂ), ಪೂರ್ವೋಕ್ತ, ಪು.೩೪

೧೭. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೨೩

೧೮. ಅರವಿಂದ ಚಿಕ್ಕೋಡಿ, ೨೦೧೧, ಇದು ನಮ್ಮ ಕರ್ನಾಟಕ, ಚಾಣುಕ್ಯ ಅಕಾಡೆಮಿ ವಿಜಾಪುರ, ಪು.೧೯೧

೧೯. ಅಮರೇಶ ಆಲ್ಕೋಡ, ೨೦೧೨, ದೇವದುರ್ಗ ಚಾರಿತ್ರಿಕ ಅಧ್ಯಯನ, ಚಿಂತನ ಪ್ರಕಾಶನ, ಬೆಂಗಳೂರು, ಪು.೭

೨೦. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೧೭–೧೮

೨೧. ಅದೇ, ಪು.೧೮–೧೯

೨೨. ಅಮರೇಶ ಆಲ್ಕೋಡ, ಪೂರ್ವೋಕ್ತ, ಪು.೭–೮

೨೩. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೧೮

೨೪. ಮೋಹನ್‌ಕೃಷ್ಣ ರೈ ಕೆ., ಪೂರ್ವೋಕ್ತ, ಪು.೩೭–೩೮

೨೫. ಅಮರೇಶ ಹನುಮಂತಪ್ಪ, ಪೂರ್ವೋಕ್ತ, ಪು.

೨೬. ರಮೇಶ ನಾಯಕ, ೨೦೧೫, ಯಾದಗಿರಿ ಜಿಲ್ಲೆಯ ಸಾಂಸ್ಕೃತಿ ಅಧ್ಯಯನ ಪಿಎಚ್.ಡಿ ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು.

೨೭. ಮೋಹನ್ ಕೃಷ್ಣ ರೈ., ಪೂರ್ವೋಕ್ತ, ಪು.೩೭–೩೮

೨೮. ವೆಂಕಟೇಶ ಕೆ., ಸರೋಜಾ ಬಿ., ೨೦೦೬, ಹೈದರಾಬಾದ ಕರ್ನಾಟಕ ವರ್ತಮಾನ ತಲ್ಲಣಗಳು, ಪಲ್ಲವ ಪ್ರಕಾಶನ ಬಳ್ಳಾರಿ, ಪು.೨೩–೨೪

೨೯. ಮೋಹನ್‌ಕೃಷ್ಣ ರೈ ಕೆ., ಪೂರ್ವೋಕ್ತ, ಪು.೫೦–೫೧

೩೦. ಸಂತೋಷ ಕುಮಾರ ಹೆಚ್.ಬಿ., ಪೂರ್ವೋಕ್ತ, ಪು.೬೦

೩೧. ಇಂದುಮತಿ ಪಾಟೀಲ್, ೨೦೦೬, ಬೀದರ್ ಜಿಲ್ಲೆಯ ಅರಸು ಮನೆತನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೫–೬

೩೨. ಶ್ರೀನಿವಾಸ ಬೇಂದ್ರೆ, ಬೀದರ್ ಕನ್ನಡ ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಬಂಧಗಳು, ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೩–೪

೩೩. ಸಂತೋಷ ಕುಮಾರ ಹೆಚ್.ಬಿ., **ಪೂರ್ವೋಕ್ತ**, ಪು.

೩೪. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.೧೨-೧೩

೩೫. ಅದೇ, ಪು.೨೬

೩೬. ರಮೇಶ ನಾಯಕ, **ಪೂರ್ವೋಕ್ತ**, ಪು.

೩೭. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.

೩೮. ರಮೇಶ ನಾಯಕ, **ಪೂರ್ವೋಕ್ತ**, ಪು.೪೧

೩೯. ಸಂತೋಷ ಕುಮಾರ ಹೆಚ್.ಬಿ., **ಪೂರ್ವೋಕ್ತ**, ಪು.

೪೦. ಅಮರೇಶ ಆಲ್ಕೋಡ, **ಪೂರ್ವೋಕ್ತ**, ಪು.೮

೪೧. ನಿಂಗಪ್ಪ, ೨೦೦೯, **ಕೊಪ್ಪಳ ಜಿಲ್ಲೆಯ ದೈವಗಳು ಜಾನಪದಿಯ ಅಧ್ಯಯನ, ಪಿಎಚ್.ಡಿ ಪ್ರಬಂಧ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೭-೮

೪೨. ಅದೇ, ಪು.೧೦-೧೧

ಅಧ್ಯಾಯ ಮೂರು

ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ಮೂರು

ಚಾರಿತ್ರಿಕ ಹಿನ್ನೆಲೆ

ಹೈದ್ರಾಬಾದ್ ಕರ್ನಾಟಕ ಪ್ರದೇಶವನ್ನು ಚಾರಿತ್ರಿಕವಾಗಿ ನೋಡುವುದಾದರೆ ದೀರ್ಘ ಅವಧಿಯ ಚರಿತ್ರೆಯನ್ನು ಹೊಂದಿರುವುದು ಅಧ್ಯಯನಗಳಿಂದ ಸಾಬೀತಾಗಿದೆ. ಈ ಪ್ರದೇಶದಲ್ಲಿ ಚರಿತ್ರೆಪೂರ್ವ ಅವಧಿಯ ಮಾನವನ ವಸತಿ ನೆಲೆಗಳು ಪುರಾತತ್ವೀಯ ಉತ್ಖನನಗಳಿಂದ ಪತ್ತೆಯಾಗಿದೆ. ಮೌರ್ಯರಿಂದ ನಿಜಾಮ್ ಆಳ್ವಿಕೆಯವರೆಗೆ ನಾನಾ ಬಗೆಯ ಅನುಭವಗಳಿಗೆ ಒಳಗಾದ ಈ ಪ್ರದೇಶವು ಭಾರತ ಸ್ವಾತಂತ್ರ್ಯಗೊಂಡ ಬಳಿಕ ನಿರ್ದಿಷ್ಟ ಚೌಕಟ್ಟೊಂದನ್ನು ಪಡೆದುಕೊಂಡಿತು. ಉತ್ತರ ಹಾಗೂ ದಕ್ಷಿಣ ಗಡಿಗಳು ಚರಿತ್ರೆಯುದ್ದಕ್ಕೂ ನಿರಂತರ ಬದಲಾವಣೆಗಳಿಗೆ ಒಳಗಾಗುತ್ತಿದ್ದವು. ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರದ ಅರಸರು ಮುಂತಾದ ಪ್ರಮುಖ ಆಡಳಿತಗಾರರು ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ತಮ್ಮ ಸಾಮ್ರಾಜ್ಯದೊಳಗೆ ಸೇರಿಸಿಕೊಂಡು ಅಲ್ಲಿನ ಆಡಳಿತಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿದರು. ಅದೇ ರೀತಿ ಸ್ಥಳೀಯ ಅರಸು ಮನೆತನಗಳು ತಮ್ಮ ನಿರ್ದಿಷ್ಟ ಆಡಳಿತ ಪರಿಮಿತಿಯೊಳಗೆ ಅಧೀನ ಸ್ಥಿತಿಯಲ್ಲಿದ್ದರೂ, ಆಡಳಿತ ನಡೆಸುವ ಅಧಿಕಾರ ಪಡೆದುಕೊಂಡಿದ್ದವು. ಚಾರಿತ್ರಿಕ ಹಿನ್ನೆಲೆಯಿಂದ ಪ್ರಸಿದ್ಧವಾದ ಹೈದರಾಬಾದ್ ಕರ್ನಾಟಕ ಪ್ರದೇಶವು ಭಾರತ ಚರಿತ್ರೆಯಲ್ಲಿ ವಹಿಸಿದ ಪಾತ್ರ ಚಿರಸ್ಮರಣೀಯವಾದದ್ದು. ರಾಜಕೀಯ, ಆಡಳಿತ, ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯಲ್ಲಿ ಈ ಪ್ರದೇಶಕ್ಕೆ ವಿಶಿಷ್ಟ ಸ್ಥಾನವಿದೆ.[೧]

ಹೈದರಾಬಾದ್ ಕರ್ನಾಟಕ ಪ್ರದೇಶವು ಐತಿಹಾಸಿಕ ದೃಷ್ಟಿಯಿಂದ ಅನೇಕ ರಾಜಮನೆತನಗಳು ಆಳ್ವಿಕೆ ಮಾಡಿದ ನಾಡಾಗಿದೆ. ಪ್ರಾಗೈತಿಹಾಸಿಕ ದೃಷ್ಟಿಯಿಂದ ಈ ಪ್ರದೇಶದ ವಿವಿಧ ಭಾಗಗಳಲ್ಲಿ ಪ್ರಾಚೀನ ಅವಶೇಷಗಳು ಕಂಡುಬರುತ್ತವೆ. ಮೆಡೋಸ್ ಟೇಲರ್, ರಾಬರ್ಟ್ ಬ್ರೂಸ್ ಮತ್ತು ಕೆ.ವಿ.ಶಿವತಾರಕ ಅವರ ಸಂಶೋಧನೆಗಳ ಮೂಲಕ ಚರಿತ್ರೆ ಕಾಲಗರ್ಭದಲ್ಲಿ ಅಡಗಿ ಹೋಗಿರುವ ಅವಶೇಷಗಳನ್ನು ಹೊರತೆಗೆಯಲಾಯಿತು. ಹೀಗೆ ಹೊರ ತೆಗೆದ ಅವಶೇಷಗಳಿಂದ ಇತಿಹಾಸ

ಪೂರ್ವದ ಮಾನವನು ಈ ಪ್ರದೇಶದಲ್ಲಿ ತನ್ನ ಅಲೆಮಾರಿ ಜೀವನವನ್ನು ನಡೆಸುತ್ತಿದ್ದನೆಂಬ ಸಂಗತಿ ತಿಳಿದುಬರುತ್ತದೆ. ಕೈಗೊಡಲಿ ಹಂತಕ್ಕೆ ಸೇರಿದ ಶಿಲಾಯುಧಗಳು ಕೃಷ್ಣ-ತುಂಗಭದ್ರಾ ನದಿಗಳ ದಂಡೆಗಳಲ್ಲಿ ದೊರೆತಿದ್ದು ಸುಮಾರು ಐದು ಲಕ್ಷ ವರ್ಷಗಳಷ್ಟು ಹಿಂದಿನಿಂದ ಈ ಪ್ರದೇಶದಲ್ಲಿ ಮಾನವ ವಸತಿಯಿದ್ದುದನ್ನು ಸಾಕ್ಷೀಕರಿಸಿವೆ. ಆನಂತರ ಕಾಲಕ್ಕೆ ಸೇರಿದ ಮಧ್ಯಯುಗೀನ ಮತ್ತು ಅಂತ್ಯ ಕಾಲದ ಶಿಲಾಯುಗ ಸಂಸ್ಕೃತಿಗಳ ಅವಶೇಷಗಳನ್ನು ಸಹ ಕೊಪ್ಪಳದ ನೆರೆಹೊರೆಯ ಪ್ರದೇಶಗಳಲ್ಲಿ ಶೋಧಿಸಿ ಹೊರ ತೆಗೆಯಲಾಗಿದೆ.

ಮಾನವನು ತನ್ನ ಅಲೆಮಾರಿ ಜೀವನವನ್ನು ತ್ಯಜಿಸಿ ಗ್ರಾಮೀಣ ಜೀವನದ ಹಂತಕ್ಕೆ ಪ್ರವೇಶಿಸಿದ ಕುರುಹುಗಳನ್ನು ಸುಮಾರು ೪೫೦೦ ವರ್ಷಗಳ ಪೂರ್ವಕ್ಕೆ ನಿರ್ದೇಶಿಸಬಹುದು. ಕೊಪ್ಪಳ ಜಿಲ್ಲೆಗೆ ಹತ್ತಿರವಾದ ರಾಯಚೂರು ಜಿಲ್ಲೆಯು ನವಶಿಲಾಯುಗ ಸಂಸ್ಕೃತಿಯ ಕೇಂದ್ರ ಸ್ಥಾನವಾಗಿತ್ತೆಂಬುದು ಪ್ರಾಕ್ತನಶಾಸ್ತ್ರಜ್ಞರು ಒಪ್ಪಿದ ಸಂಗತಿ. ಈ ಪ್ರದೇಶದ ಮಸ್ಕಿ, ಪಿಕ್ಲಿಹಾಳ ಮುಂತಾದ ನೆಲೆಗಳಲ್ಲಿ ನಡೆದಿರುವ ಪ್ರಾಕ್ತನ ಸಂಶೋಧನೆಗಳಿಂದ ಆಗಿನ ಮಾನವನು ಪ್ರಥಮ ಬಾರಿಗೆ ಆಹಾರೋತ್ಪಾದನೆ, ಪಶು ಸಾಕಾಣಿಕೆಗಳಂತಹ ಕಾರ್ಯಗಳನ್ನು ಆರಂಭಿಸಿದ ವಿಷಯದ ಉಲ್ಲೇಖಗಳಿಂದ ತಿಳಿದುಬರುತ್ತದೆ. ಮಡಿಕೆ, ಕುಡಿಕೆಗಳನ್ನು ತಯಾರಿಸಿ ನಿತ್ಯ ಜೀವನದಲ್ಲಿ ಬಳಸುತ್ತಿದ್ದು, ವಾಸಕ್ಕೆ ಹುಲ್ಲಿನ ಗುಡಿಸಲುಗಳನ್ನು ನಿರ್ಮಿಸಿಕೊಂಡಿದ್ದ ವಿಷಯಗಳು ತಿಳಿದುಬಂದಿವೆ. ಕ್ರಮೇಣ ಜನಜೀವನ ಸುಧಾರಿಸಿದಂತೆ ಕಲೆಗೆ ಗಮನ ನೀಡಿದ ವಿಷಯ ಹಲವಾರು ಪ್ರದೇಶಗಳಲ್ಲಿ ಬಂಡೆಗಲ್ಲುಗಳ ಮೇಲೆ ಕೊರೆದಿರುವ ಪ್ರಾಣಿಗಳ, ಮಾನವನ ಮತ್ತು ಬೇಟೆಯ ರೇಖಾ ಚಿತ್ರಗಳು ದೃಢಪಡಿಸುತ್ತವೆ. ಸುಮಾರು ೩೦೦೦ ವರ್ಷಗಳ ಹಿಂದೆ ಕಬ್ಬಿಣ ಯುಗ ಆರಂಭವಾದಾಗ ಆಗಿನ ಮಾನವರು ಮೃತರ ದೇಹಗಳನ್ನು ಹೂಳಲು ನಿರ್ಮಿಸಿದ ನೂರಾರು ಬೃಹತ್ ಶಿಲಾ ಸಮಾಧಿಗಳನ್ನು ಸಹ ಈ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ನೋಡಬಹುದಾಗಿದೆ.[೨]

ಹೈದರಾಬಾದ್ ಕರ್ನಾಟಕವನ್ನು ಆಳಿದ ರಾಜಮನೆತನಗಳು

ಹೈದರಾಬಾದ್ ಕರ್ನಾಟಕ ಪ್ರದೇಶವು ಹಳೆಯ, ಮಧ್ಯ, ನವಶಿಲಾಯುಗಗಳ ಕೇಂದ್ರವಾಗಿ ಕಂಡುಬಂದ ಹಿನ್ನೆಲೆಯಲ್ಲಿ ಅನೇಕ ಸಾಮ್ರಾಜ್ಯಗಳು ಏಳಿಗೆಗೆ ಬಂದ ಹಂತವನ್ನು ನೋಡಬಹುದಾಗಿದೆ. ಲಿಖಿತ ದಾಖಲೆಗಳು ದೊರೆತ ನಂತರದ ಕಾಲವೇ ಚರಿತ್ರೆಯ ಕಾಲ. ಈ ಪ್ರದೇಶದ ಚಾರಿತ್ರಿಕ ಅಧ್ಯಯನದ ನೆಲೆಯಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಆರಂಭಗೊಂಡ ಸಾಮ್ರಾಜ್ಯಗಳ ಆಡಳಿತ ವ್ಯವಸ್ಥೆಯನ್ನು ಚರ್ಚಿಸಬೇಕಾಗುತ್ತದೆ. ಚಾರಿತ್ರಿಕ ಅಂಶಗಳಲ್ಲಿ ಗತಕಾಲದ ರಾಜಕೀಯ ವಿವರಗಳು ಪ್ರಧಾನವಾಗಿವೆ. ಇದರಲ್ಲಿ ಆಡಳಿತ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕಲೆ ಮತ್ತು ವಾಸ್ತುಶಿಲ್ಪ ಆಯಾಮಗಳು ಸೇರಿಕೊಂಡಿರುತ್ತವೆ. ಈ ಆಯಾಮಗಳಿಂದ ಒಂದು

ಪ್ರದೇಶದ ಚರಿತ್ರೆ ನಿರ್ಮಾಣವಾಗುತ್ತದೆ. ಒಂದು ಹಂತದಲ್ಲಿ ಚರಿತ್ರೆಯೆಂದರೆ ಒಂದು ಗತಕಾಲದ ರಾಜಕೀಯ ಎನ್ನುತ್ತಿದ್ದರು. ಈ ಪದ್ಧತಿ ಈಗ ಹಳೆಯದಾಗಿದೆ. ಈ ಸಂದರ್ಭದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಭೂ ಭಾಗಗಳನ್ನು ವಿಭಿನ್ನ ಅರಸು ಮನೆತನಗಳು ಆಳ್ವಿಕೆ ಮಾಡಿದ್ದರ ಬಗ್ಗೆ ಈ ಕೆಳಗಿನಂತೆ ವಿವರಿಸಲಾಗಿದೆ.[೩]

೧. ಮೌರ್ಯರು

ಹೈದರಾಬಾದ್ ಕರ್ನಾಟಕವು ಸೇರಿದಂತೆ ಭಾರತದ ಇತರೆ ಪ್ರದೇಶಗಳನ್ನು ಆಳಿದ ಮೌರ್ಯರು ಆಡಳಿತದಲ್ಲಿ ಅತ್ಯಂತ ಪ್ರಭಾವಶಾಲಿ ಅರಸರೆನಿಸಿದ್ದಾರೆ. ನಂದರನ್ನು ಸೋಲಿಸಿದ ಮೌರ್ಯರ ಅರಸು ಚಂದ್ರಗುಪ್ತ ಮೌರ್ಯನು ತನ್ನ ಮಂತ್ರಿಯಾದ ಕೌಟಿಲ್ಯನ ಸಹಾಯದಿಂದ ಉತ್ತರ ಭಾರತದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದನು.[೪] ಆ ತರುವಾಯ ಬಿಂದುಸಾರನ ಕಾಲಾನಂತರ ಸಾಮ್ರಾಟನಾದ ಅಶೋಕನ ಕಾಲವು ಆರಂಭವಾಗುವುದು. ಇವನ ಕಾಲದ ಶಾಸನಗಳು ಕರ್ನಾಟಕದಲ್ಲಿ ಉಪಲಬ್ಧವಾಗಿರುವುದರಿಂದ ಕರ್ನಾಟಕ ಭಾಗವು ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ನಿರ್ವಿವಾದವಾಗಿದೆ. ಅಶೋಕನ ಶಾಸನಗಳಲ್ಲಿ ಕೆಲವು ಶಾಸನಗಳು ನಿಜಾಮ್ ಪ್ರಾಂತ್ಯಕ್ಕೆ ಸೇರಿದ ಕರ್ನಾಟಕ ಭಾಗದಲ್ಲಿ ಉಪಲಬ್ಧವಾಗಿವೆ. ರಾಯಚೂರಿನ ಮಸ್ಕಿ, ಪಾಲ್ಕಿಗುಂಡ, ಗವಿಮಠ, ಬಳ್ಳಾರಿಯ ನಿಟ್ಟೂರು, ಉದೆಗೊಳಂ, ಕಲಬುರ್ಗಿಯ ಸನ್ನತಿ ಮತ್ತಿತರ ಪ್ರದೇಶಗಳಲ್ಲಿಯೂ ದೊರೆತಿವೆ. ಅಶೋಕನು ತನ್ನ ಬೌದ್ಧ ಧರ್ಮದ ಪ್ರಚಾರಕ್ಕಾಗಿ ಶಾಸನಗಳು ಬರೆಸಿರಬೇಕು. ಶಾಸನಗಳು ದೊರೆತಿರುವ ಈ ಸ್ಥಳಗಳು ಆ ಕಾಲದಲ್ಲಿ ದಖ್ಖನ್ ಪ್ರಾಂತ್ಯದ ಮುಖ್ಯ ಧಾರ್ಮಿಕ ಕೇಂದ್ರಗಳಾಗಿರಬೇಕು. ಬೌದ್ಧ ಸಂಘಗಳನ್ನು ಇಲ್ಲಿ ಸ್ಥಾಪಿಸಿ ಬೌದ್ಧಧರ್ಮವನ್ನು ಪ್ರಚಾರ ಮಾಡಿ ನೆಲೆಗೊಳಿಸಲು ಶ್ರಮಿಸಿರಬೇಕು. ಮಸ್ಕಿಯ ಹಳೆಯ ರೂಪ 'ಮಾಸಂಗಿ' ಎಂದಿತ್ತು. ಮೂಲ ಮಹಾ ಸಂಘ' ಎಂಬುದು "ಮಾಸಂಗಿ"ಯಾಗಿರಬೇಕೆಂದು ಚರಿತ್ರೆ ಹೇಳುತ್ತದೆ.

ಅಶೋಕನ ಈ ಶಾಸನಗಳು ಪ್ರಾಕೃತ ಭಾಷೆಯಲ್ಲಿದ್ದು, ಬ್ರಾಹ್ಮಿ ಲಿಪಿಯಲ್ಲಿವೆ. ಈ ಪ್ರಾಂತ್ಯದ ಜನರಿಗೆ ಪಾರಿಭಾಷೆ ತಿಳಿದಿರಬಹುದು. ಅದಕ್ಕಾಗಿ ಅಶೋಕ ಆ ಭಾಷೆಯಲ್ಲಿ ಬರೆಸಿರುತ್ತಾನೆ. ಈ ಅವಧಿಯಲ್ಲಿ ಕನ್ನಡ ಭಾಷೆ ಜನ ಸಮುದಾಯಗಳಲ್ಲಿ ಇತ್ತೋ ಇಲ್ಲವೋ ಎಂಬುದನ್ನು ಊಹಿಸುವುದು ಕಷ್ಟ. ಕನ್ನಡ ಭಾಷೆ ಮತ್ತು ಲಿಪಿಗಳು ಮನೆಯೊಳಗೆ ಮಾತ್ರ ಹೆಚ್ಚಾಗಿ ಬಳಕೆಯಲ್ಲಿದ್ದು, ಹೊರಗೆ ಆಗಿನ ಆಡಳಿತ ವರ್ಗದಲ್ಲಿ ಲಿಪಿ ಹೆಚ್ಚಾಗಿ ಬಳಸಲ್ಪಡುತ್ತಿದ್ದವು ಎಂದು ತಿಳಿದುಬರುತ್ತದೆ. ಮೌರ್ಯರು ಈ ಪ್ರದೇಶದಲ್ಲಿ ಸಾಮ್ರಾಜ್ಯ ವಿಸ್ತರಿಸುವುದಕ್ಕೆ ಹಲವಾರು ಕಾರಣಗಳಿವೆ. ವಿಸ್ತರಣಾ ದಾಹ ಎಲ್ಲ ಸಾಮ್ರಾಜ್ಯಗಳಿಗೆ ಇರುವ ಮೂಲಗುಣ; ಮೌರ್ಯರು

ತಮ್ಮ ಬೌದ್ಧ ಧರ್ಮವನ್ನು ಪ್ರಚಾರ ಮಾಡಲು ಮತ್ತು ಅದನ್ನು ನೆಲೆಗೊಳಿಸಲು ಮಾತ್ರ ಬರಲಿಲ್ಲ. ಈ ಪ್ರಾಂತ್ಯದ ಸಂಪತ್ತನ್ನು ಬಳಸಿಕೊಳ್ಳಲು ಮುಂದಾಗಿದ್ದರು. ಈ ಪ್ರಾಂತ್ಯದ ಮೇಲೆ ಮೊದಲು ಸಂಪತ್ತನ್ನು ದೋಚುವ ಆಡಳಿತ ನಡೆಸಿದ್ದೇ ಮೌರ್ಯ ಸಾಮ್ರಾಟರು. ಕರ್ನಾಟಕದಲ್ಲಿರುವ ಸಂಪತ್ತನ್ನು ಪಡೆಯುವ ಧೋರಣೆಯಾಗಿತ್ತೇ ಹೊರತು ಕರ್ನಾಟಕದಲ್ಲಿ ಹೊಸದಾಗಿ ಆರ್ಥಿಕ ಬಲವನ್ನು ಹೆಚ್ಚಿಸುವುದು ಮೌರ್ಯ ಸಾಮ್ರಾಜ್ಯದ ಧೋರಣೆಯಾಗಿರಲಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶವು ಮೌರ್ಯರ ಆಳ್ವಿಕೆಗೆ ಒಳಗಾಗಿ ಇಲ್ಲಿಯ ಸಂಪತ್ತು ಉತ್ತರ ಭಾರತದ ಸಾಮ್ರಾಜ್ಯಗಳಿಗೆ ದಕ್ಕುತಿತ್ತು. ಅಷ್ಟೇ ಅಲ್ಲ ಇದಕ್ಕಿಂತ ಪೂರ್ವದಿಂದಲೂ ಇದೇ ರೀತಿ ಆಗಿರುವುದು ಕಂಡುಬರುತ್ತದೆ.[೬]

೨. ಶಾತವಾಹನರು

ಮೌರ್ಯ ಸಾಮ್ರಾಜ್ಯದ ಪತನದೊಂದಿಗೆ ಅವರ ಸಾಮಂತ ರಾಜರಾಗಿದ್ದ ಶಾತವಾಹನರು ದಕ್ಷಿಣ ಭಾರತದಲ್ಲಿ ಅಧಿಕಾರಕ್ಕೆ ಬಂದರು. ಕ್ರಿ.ಪೂ. ೨೩೦ರಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿ ೨೨೦ವರೆಗೂ ರಾಜ್ಯವನ್ನು ಆಳಿದರು. ಇವರ ಚರಿತ್ರೆಯನ್ನು ತಿಳಿಯಲು ನಮಗೆ ದೊರೆತಿರುವ ಪ್ರಮುಖ ಆಧಾರಗಳೆಂದರೆ ಶಾಸನಗಳು, ನಾಣ್ಯಗಳು, ಸ್ಮಾರಕಗಳು ಮತ್ತು ಪುರಾಣಗಳು. ಇವರ ಬಗ್ಗೆ ದಖ್ಖನಿನ ಪೂರ್ವದಲ್ಲಿ ಏಳು ಶಾಸನಗಳು ಪಶ್ಚಿಮದಲ್ಲಿ ೧೯ ಶಾಸನಗಳು ದೊರೆತಿವೆ. ಪಾಲಿ ಮತ್ತು ಪ್ರಾಕೃತ ಸಾಹಿತ್ಯಗಳು ಅಲ್ಪ ಮಾಹಿತಿಗಳನ್ನು ನೀಡುತ್ತವೆ. ಗುಣಾಢ್ಯನ ಬೃಹತ್ ಕಥಾಕೋಶ ಕೃತಿಯು ಶಾತವಾಹನರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡುತ್ತದೆ. ಶಾತವಾಹನರ ಕಾಲದ ಜನಜೀವನವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ನಾಸಿಕ್ ಮತ್ತು ನಾನಾಘಾಟ್ ಶಾಸನಗಳಲ್ಲಿ ಉಲ್ಲೇಖಿಸಿರುವಂತೆ ಇವರ ಸಾಮ್ರಾಜ್ಯದ ಪ್ರದೇಶಗಳು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಕೆಲವು ಜಿಲ್ಲೆಗಳನ್ನು ಒಳಗೊಂಡಿತ್ತು ಎಂದು ತಿಳಿಯಬಹುದು.

ಅದೇ ರೀತಿ ಶಾತವಾಹನರು ಆಂಧ್ರದವರಲ್ಲವೆಂದು ಸಮಕಾಲೀನ ದಾಖಲೆಗಳಿಂದ ತಿಳಿಯಬಹುದು. ಗೀರನಾರ್ ಮತ್ತು ತಾಳಗುಂದ ಶಾಸನಗಳು ಶಾತವಾಹನರ ಸಮಕಾಲೀನದಲ್ಲಿ ರಚನೆಯಾಗಿವೆ. ಇವುಗಳ ಮಾಹಿತಿಯ ಪ್ರಕಾರ ಇವರು ಆಂಧ್ರದವರಲ್ಲವೆಂದು ತಿಳಿಯಬಹುದು. ಬಳ್ಳಾರಿ ಜಿಲ್ಲೆಯ ಹಿರೇ ಹಡಗಲಿ ಶಾಸನದ ಪ್ರಕಾರ "ಶತಾಹ ನಿಂಭೂ" ಅಥವಾ ಇಂದಿನ ಬಳ್ಳಾರಿ ಜಿಲ್ಲೆಯ ಶಾತವಾಹನರು ಕನ್ನಡಿಗರಾಗಿದ್ದರು ಎನ್ನಬಹುದು. ಶಾತವಾಹನರ ನಾಣ್ಯಗಳು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಹೇರಳವಾಗಿ ದೊರಕಿವೆ. ನಾಣ್ಯಗಳ ಮೇಲೆ ರಾಜಮುದ್ರೆ ಇದ್ದು ಅದು ಆರನೆಯ ಲಾಂಛನದೊಂದಿಗೆ ವ್ಯಕ್ತಗೊಂಡಿದೆ. ಕೊಪ್ಪಳದ ಕೋಟೆಯಲ್ಲಿನ ಉತ್ತರ

ಗೂಡಿನಲ್ಲಿ ಕೆತ್ತಿದ "ಉಸ್ಮಾನ್" ತಾಣದಲ್ಲಿ ದೊರೆತ ಇವರ ಕಾಲದ ಒಂದು ನಾಣ್ಯ ಒಂದು ಬದಿಯಲ್ಲಿ ಆನೆಯ ಉಬ್ಬು ಚಿತ್ರವನ್ನು ಹೊಂದಿದೆ. ಇದು ತುಂಬಾ ಕಲಾತ್ಮಕವಾಗಿದೆ ಮತ್ತು ಪ್ರಮಾಣಬದ್ಧವಾಗಿದೆ. ಇದರ ಸುತ್ತಲೂ ಬ್ರಾಹ್ಮಿ ಲಿಪಿಯಲ್ಲಿ "ಸಿರಿ ಸತಕ" ಎಂದು ಬರೆಯಲ್ಪಟ್ಟಿದೆ. ಇದರ ಲಿಪಿ ಬ್ರಾಹ್ಮಿಯಾಗಿದ್ದರೂ ಭಾಷೆಯು ಪ್ರಾಕೃತವಾಗಿದೆ. ಇದು ಮಹಾರಾಜ ಗೌತಮ ಪುತ್ರ ಶಾತಕರ್ಣಿಯ ಕಾಲದ್ದಾಗಿದೆ ಎಂದು ನಂಬಲಾಗಿದೆ. ನಾಣ್ಯದ ಹಿಂಬದಿಯಲ್ಲಿ ವರ್ತುಲ ದೊಳಗಿನ ಫಲ ಸಹಿತ ವೃಕ್ಷ ಮೂಡಿಸಲಾಗಿದೆ. ಈ ನಾಣ್ಯದ ವಿವರಗಳಿಂದ ಸೈನ್ಯದಲ್ಲಿ ಆನೆ ಹೆಚ್ಚು ಬಳಕೆಯಾಗುತ್ತಿತ್ತು. ಭಾಷೆ ಪ್ರಾಕೃತ ಇರುವುದರಿಂದ ಆಡಳಿತ ಭಾಷೆಯ ಪ್ರಾಕೃತವೇ ಆಗಿತ್ತು ಎನ್ನುವುದು ತಿಳಿದುಬರುತ್ತದೆ. ಫಲಭರಿತ ವೃಕ್ಷವು ಕೃಷಿಯ ಸಂಕೇತ ಮಾತ್ರವಲ್ಲ ಸಮೃದ್ಧಿಯ ಸಂಕೇತವೆಂದು ಗುರುತಿಸುತ್ತಾರೆ. ಕೊಪ್ಪಳ ಪ್ರದೇಶದಲ್ಲಿ ಈ ನಾಣ್ಯಗಳು ಹೆಚ್ಚು ದೊರೆತಿರುವುದರಿಂದ ಕೊಪ್ಪಳವು ಆ ಕಾಲದಲ್ಲಿ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು ಎಂದು ತಿಳಿದುಬರುತ್ತದೆ.[೮]

ಕೊಪ್ಪಳಕ್ಕೆ ಸಮೀಪದಲ್ಲಿರುವ ಚಿಕ್ಕ ಸಿಂದೋಗಿಯಲ್ಲಿ ಕೆಲವು ವರ್ಷಗಳ ಹಿಂದೆ ಆಕಸ್ಮಿಕವಾಗಿ ಒಂದು ಪಾತ್ರೆಯಲ್ಲಿ ಸುಮಾರು ನಾಲ್ಕು ಸಾವಿರ ಶಾತವಾಹನರ ನಾಣ್ಯಗಳು ದೊರೆತಿವೆ. ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆ ಈ ವಿಷಯವನ್ನು ಪ್ರಕಟಿಸಿದೆ. ಹೆಚ್ಚಿನ ಮಾಹಿತಿಯನ್ನು ಇಂಡಿಯನ್ ಆರ್ಕಿಯಾಲಜಿಕಲ್ ರಿವಿವ್ಯೂನ ೧೯೭೭-೭೮ರ ಸಂಚಿಕೆಯಲ್ಲಿದೆ. ಆ ಪಾತ್ರೆಯ ಮೇಲೆ "ಚಿಂತಿಸ" ಎಂದು ಬರೆದಿದೆ. ಚಿಂತಸ್ ಎಂಬುದು ವ್ಯಕ್ತಿಯ ಹೆಸರೆಂದು ವಿದ್ವಾಂಸರು ಶಂಕಿಸುತ್ತಾರೆ. ಡಾ.ಅ.ಸುಂದರ ಅವರು ಈ ಸ್ಥಳದ ಪರಿಶೋಧನೆಯನ್ನು ಮಾಡಿದ್ದು ಅದೇ ಪ್ರದೇಶದಲ್ಲಿ ಅಲ್ಲಿನ ಭಗ್ನ ವಿಗ್ರಹಾರಗಳನ್ನು ಶೋಧಿಸಿರುವರು. ಶಾತವಾಹನರ ಕಾಲದ ನಾಣ್ಯಗಳು, ಗದ್ಯಾಣ, ಪಣ, ಸುವರ್ಣ, ದಿನಾರ್, ಕುಪಣ ಎಂದು ಐದು ಪ್ರಕಾರಗಳಲ್ಲಿ ಕಂಡುಬರುತ್ತದೆ. ಸುವರ್ಣ ದಿನಾರ್ ನಾಣ್ಯಗಳು ಆನೆ, ಕುದುರೆ, ಸಿಂಹ ಮತ್ತು ಬಾಣದ ಚಿಹ್ನೆಗಳನ್ನು ಒಳಗೊಂಡಿದ್ದು ಕ್ರಮವಾಗಿ ೩೫ರಿಂದ ೫೬೦ ಗ್ರಾಂಗಳಷ್ಟು ತೂಗುತ್ತಿದ್ದವು. ಹಾಗೆಯೇ ಅರ್ಧ, ಮುಕ್ಕಾಲು, ಒಂದೂವರೆ ಇಂಚಿನ ವ್ಯಾಸವನ್ನು ಈ ನಾಣ್ಯಗಳು ಹೊಂದಿವೆ

ಮೌರ್ಯ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಕೊಪ್ಪಳ ಪ್ರದೇಶವು ಪ್ರಸಿದ್ಧ ನಗರವಾಗಿತ್ತು. ಅದು ಧಾರ್ಮಿಕ, ಶೈಕ್ಷಣಿಕ, ವಾಣಿಜ್ಯ ಹಾಗೆಯೇ ರಾಜಕೀಯ ಕಾರ್ಯಕ್ಷೇತ್ರವಾಗಿ ದಕ್ಷಿಣ ಭಾರತದಲ್ಲಿ ಪ್ರಚಲಿತಕ್ಕೆ ಬಂದಿತ್ತು. ಅಲ್ಲಲ್ಲಿ ಬೌದ್ಧ ಸ್ತೂಪಗಳನ್ನು ಕಾಣಬಹುದು. ಈಗಿನ ಗವಿಮಠದಲ್ಲಿ ಈ ಸ್ಥೂಪಗಳಂತೆ ಕಾಣುವ ಮೂಲಗಳನ್ನು ಕಾಣಬಹುದು. ಒಂದು ಕಾಲದಲ್ಲಿ ಈ ಗವಿಮಠ ಬೌದ್ಧರ ಕೇಂದ್ರವಾಗಿತ್ತು ಎಂಬುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ.

ಅನಂತರ ಅದು ಜೈನರ ಕೇಂದ್ರವಾಯಿತು. ಶಾತವಾಹನರ ಕಾಲಕ್ಕಾಗಲೇ ಜೈನ ಧರ್ಮ ದಕ್ಷಿಣ ಭಾರತಕ್ಕೆ ಲಗ್ಗೆಯಿಟ್ಟಿತ್ತು. ಶಾತವಾಹನರು ಭಾಗತಃ ಜೈನ ಧರ್ಮಕ್ಕೆ ಮನ್ನಣೆಯನ್ನು ಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಕೊಪ್ಪಳ ನಗರವು ಜೈನಕೇಂದ್ರವಾಗಿ ಪರಿವರ್ತನೆ ಆಗಿತ್ತು. ಶಾತವಾಹನರು ಅದನ್ನು ಧಾರ್ಮಿಕವಾಗಿ ಅಷ್ಟು ಅನುಲಕ್ಷಿಸದೆ ರಾಜಕೀಯ ಮತ್ತು ವಾಣಿಜ್ಯ ವಸಾಹತುವನ್ನಾಗಿ ಮಾಡಿಕೊಂಡಿದ್ದರು ಎಂಬುದರಲ್ಲಿ ಎರಡು ಮಾತಿಲ್ಲ.[೯] ಶಾತವಾಹನರ ನಂತರ ಹಂಚಿಹೋದ ಹಲವಾರು ಸಣ್ಣಪುಟ್ಟ ರಾಜ್ಯಗಳು ತಲೆ ಎತ್ತಿದ್ದವು. ಬಹುಶಃ ಇಂತಹ ಸಣ್ಣ ವಂಶಗಳಲ್ಲಿ ಒಂದಾದ ವಾಕಾಟಕರು ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಅಧಿಕಾರ ಸ್ಥಾಪಿಸಿದರು. ಈ ವಂಶದ ರುದ್ರಸೇನ ಮತ್ತು ಪೃಥ್ವಿಸೇನ ಕುಂತಳವನ್ನು ತಮ್ಮ ವಶಕ್ಕೆ ತೆಗೆದುಕೊಂಡಿರಬೇಕು. ಆರನೆಯ ಶತಮಾನದ ಮಧ್ಯಭಾಗದಲ್ಲಿ ವಾಕಾಟಕರು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡರು.[೧೦]

೩. ಕದಂಬರು

ಕದಂಬರು ಬನವಾಸಿಯಿಂದ ನಾಲ್ಕನೆಯ ಶತಮಾನದಿಂದ ಆರನೆಯ ಶತಮಾನದ ನಡುವೆ ಆಳಿದರು. ಇವರು ತಮ್ಮನ್ನು ಮಾನವ್ಯಸ ಗೋತ್ರದವರೆಂದೂ, ಹಾರಿತೀಪುತ್ರರೆಂದು ಕರೆದುಕೊಂಡಿದ್ದು, ಇದರಿಂದ ಇವರು ಚುಟು ವಂಶದ ಸಂಬಂಧಿಗಳಾಗಿ ಇರಬಹುದೆಂದು ಕಂಡುಬರುತ್ತದೆ.[೧೧] ಹೈದರಾಬಾದ್ ಕರ್ನಾಟಕ ಪ್ರದೇಶವು ಬಹುಮಟ್ಟಿಗೆ ಬನವಾಸಿಯ ಕದಂಬರ ರಾಜ್ಯಕ್ಕೆ ಸೇರಿಕೊಂಡಿತು. ಕದಂಬರ ಆಳ್ವಿಕೆಯಲ್ಲಿ ಕೊಪ್ಪಳ ನಗರವು ಪ್ರಮುಖ ಪಾತ್ರವನ್ನು ವಹಿಸಿದೆ. ಚಂದ್ರವಳ್ಳಿಯ ಪ್ರಥಮ ಶಾಸನದಲ್ಲಿಯೇ ಕೊಪ್ಪಳ ನಗರದ ಉಲ್ಲೇಖವಿದೆ. ಆ ಶಾಸನದ ಪಾಠ ಹೀಗಿದೆ.

೧. ಕದಂಬಾಣಂ ಮಯೂರ ಮರ್ಮಣಾ

೨. ತಟಾಕಾಂ ದೃಢಂ ಕೃತಂ ಅಭಿರುಪಂ ರ(ಚ)ಯಿತ್ವಾ

೩. ವಾನ(ವಾ)ಸಕಂ ಸ್ಥಾಪಯಿತ್ವಾ ಕುಪಣಚ(ಮೋ).......

ಕದಂಬರ ಅರಸ ಮಯೂರವರ್ಮನು ಕೆತ್ತಿಸಿದ ಈ ಶಾಸನವು ಚಂದ್ರವಳ್ಳಿ ಕೆರೆಯನ್ನು ಬಲಪಡಿಸಿದನೆಂದು ಹೇಳಿದೆ. ಈ ಶಾಸನವನ್ನು ಕೆತ್ತಿದ ಲಿಪಿಕಾರ ಅಥವಾ ರೂವಾರಿ ಚಮ ಅಥವಾ ಚಾಮ(ಚಮೋ). ಈ ಚಾಮನು ಕೊಪ್ಪಳದವನ್ನು ಎಂದು ಉಲ್ಲೇಖಿಸಲಾಗಿದೆ. ಈ ಕೊಪ್ಪಳ ಅಂದು ಒಂದು ವಿದ್ಯಾಕೇಂದ್ರವಾತ್ತು. ರೆಸುಕಾಡು, ಸುಕನೂರು, ಗಂಗುಬಾಡಿ, ಸಿರ್ದವಾಡಿ, ನೆರೆಯಂಗಲ್ಲು, ನೋಬಲಾಡಿ, ಪುಲಿಗೆರೆ, ಬನವಾಸಿ, ಬೆಳ್ವೊಲ, ಮಾಸವಾಡಿ, ಯರದೊಡನಾಡು

ಮುಂತಾದ ಸ್ಥಳಗಳ ಅಗ್ರಹಾರಗಳಲ್ಲಿ ಕೊಪ್ಪಣಾತಲದ ಅಗ್ರಹಾರವು ಬಹಳ ಹಳೆಯದಾಗಿತ್ತು ಮಾತ್ರವಲ್ಲ ಹೆಚ್ಚು ಪ್ರಸಿದ್ಧಿಗೆ ಬಂದಿತ್ತು.[೧೨]

೪. ಬಾದಾಮಿ ಚಾಲುಕ್ಯರು

ಕರ್ನಾಟಕವನ್ನು ಆಳಿದ ಪ್ರಮುಖ ಅರಸು ಮನೆತನಗಳಲ್ಲಿ ಬಾದಾಮಿ ಚಾಲುಕ್ಯರ ಮನೆತನವು ಪ್ರಮುಖವಾಗಿದೆ. ಚಾಲುಕ್ಯರು ಕದಂಬ ರಾಜ್ಯ ಪತನವಾದ ಮೇಲೆ ಬಾದಾಮಿಯನ್ನು ರಾಜಧಾನಿಯಾಗಿ ಮಾಡಿಕೊಂಡರು. ಇವರು ಕ್ರಿ.ಶ. ೫೪೦ರಿಂದ ಸುಮಾರು ೨೩೦ ವರ್ಷಗಳವರೆಗೆ ಕರ್ನಾಟಕವನ್ನು ಆಳ್ವಿಕೆ ಮಾಡಿದರು. ಈ ಸಾಮ್ರಾಜ್ಯವು ಕರ್ನಾಟಕದಲ್ಲಿ ಅಷ್ಟೇ ಅಲ್ಲದೇ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಶೇಷತೆಯಿಂದ ಕೂಡಿದೆ. ಬಾದಾಮಿ ಚಾಲುಕ್ಯರ ಸಾಮ್ರಾಜ್ಯವು ಉತ್ತರದಲ್ಲಿ ನರ್ಮದಾ ನದಿ ತೀರದಿಂದ ದಕ್ಷಿಣ ತುಂಗಭದ್ರ ನದಿಯವರೆಗೂ ಹರಡಿತು. ವಾತಾಪಿ ಅಥವಾ ಬಾದಾಮಿಯನ್ನು ರಾಜಧಾನಿಯನ್ನಾಗಿ ಹೊಂದಿದ್ದ ಚಾಲುಕ್ಯರ ಮೂಲದ ಬಗ್ಗೆ ಶಾಸನಗಳು ದೊರೆತಿಲ್ಲ. ಆದರೆ ವೆಂಗಿಯ ಪೂರ್ವ ಚಾಲುಕ್ಯರು ಹಾಗೂ ಕಲ್ಯಾಣದ ಚಾಲುಕ್ಯರ ಶಾಸನಗಳಲ್ಲಿ ಕೆಲವು ಕತೆಗಳು ಕಂಡುಬರುತ್ತದೆ. ಕಲ್ಯಾಣ ಚಾಲುಕ್ಯರ ಹೆಸರಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಚಾಲುಕ್ಯ, ಚಲಿಕ, ಚಲಕ್ಯ ಮೊದಲಾದ ಪದಗಳು ಕಂಡುಬರುತ್ತವೆ.[೧೩]

ಬಾದಾಮಿ ಚಾಲುಕ್ಯರು ಅಧಿಕಾರಕ್ಕೆ ಬಂದು, ಇಬ್ಭಾಗವಾಗಿದ್ದ ಕನ್ನಡ ಪ್ರದೇಶವನ್ನು ಒಗ್ಗೂಡಿಸಿದರೆಂದು, ಅಷ್ಟೇ ಅಲ್ಲ ಕಾವೇರಿಯಿಂದ ನರ್ಮದಾ ನದಿಯವರೆಗೆ ರಾಜ್ಯವನ್ನು ವಿಸ್ತರಿಸಿದರೆಂದು 'ಕರ್ನಾಟಕ ಬಲ' ಎಂಬ ಸೈನ್ಯವನ್ನು ಕಟ್ಟಿದರೆಂದು ಪ್ರಶಂಸಿಸಲಾಗಿದೆ. ಈ ವಂಶದ ಪ್ರಸಿದ್ಧ ಅರಸ ಇಮ್ಮಡಿ ಪುಲಿಕೇಶಿಯಾಗಿದ್ದು, ಉತ್ತರದ ಅರಸರು ದಕ್ಷಿಣದ ಅರಸರ ಬಗ್ಗೆ ಭಯದ ನಿಲುವನ್ನು ತಳೆದಿದ್ದರೆಂದು ಹೇಳಲಾಗಿದೆ. ಭತ್ತ, ಜೋಳ ಬೆಳೆಯುವ ಫಲವತ್ತಾದ ಕೃಷ್ಣ ಮತ್ತು ಗೋದಾವರಿ ನದಿಗಳ ನಡುವಣ ಪ್ರದೇಶವನ್ನು ಪುಲಿಕೇಶಿ ತನ್ನ ಹಿಡಿತದಲ್ಲಿ ಇಟ್ಟು ಕೊಂಡಂತೆ ಕೃಷ್ಣಾ ಮತ್ತು ತುಂಗಭದ್ರ ನದಿಗಳ ನಡುವಣ ಪ್ರದೇಶವು ಇನ್ನೂ ಫಲವತ್ತಾಗಿದ್ದು ಅದನ್ನು ಬಳಸಿಕೊಳ್ಳಲು ಪ್ರಯತ್ನಿಸಿದನು. ಕೃಷ್ಣಾ ಮತ್ತು ತುಂಗಭದ್ರ ನಡುವಿನ ಪ್ರದೇಶಕ್ಕಾಗಿ ಬದಾಮಿ ಚಾಲುಕ್ಯರಿಗೂ, ಪಲ್ಲವರಿಗೂ ನಿರಂತರ ಯುದ್ಧಗಳು ಸಂಭವಿಸಿದವು. ಈ ಫಲವತ್ತಾದ ಬಯಲು ಭೂಮಿಯನ್ನು ಗೆದ್ದು ಅಧಿಪತ್ಯ ಸ್ಥಾಪಿಸಲು ಮುಂದೆ ವಿಜಯನಗರದ ಸಾಮ್ರಾಜ್ಯದ ಅರಸು, ಬಹಮನಿ, ಆದಿಲಶಾಹಿ ಸಾಮ್ರಾಜ್ಯದ ಅರಸರೂ ನಿರಂತರ ಸಂಘರ್ಷವನ್ನು ನಡೆಸಬೇಕಾಯಿತು. ದೋ-ಅಬ್ ಎಂದೇ ಹೆಸರುವಾಸಿಯಾಗಿರುವ ಈ ಪ್ರದೇಶವು ಹತ್ತಿ, ಜೋಳ, ಸಜ್ಜೆ, ಔಡಲ ಮುಂತಾದ ಎಣ್ಣೆ ಬೀಜಗಳ ಬೆಳೆಗೆ ಮತ್ತು ಖನಿಜಗಳ ಉತ್ಪನನಗಳಿಗೆ ಕುರಿ, ಮೇಕೆ, ಪಶು ಸಂಪತ್ತುಗಳಿಗೆ ಯೋಗ್ಯವಾಗಿತ್ತು ಎಂದು ಕಂಡುಬರುತ್ತದೆ.[೧೪]

೫. ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ತರುವಾಯ ಕರ್ನಾಟಕದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡವರು ರಾಷ್ಟ್ರಕೂಟರು. ಇವರ ರಾಜಧಾನಿ ಮಾನ್ಯಖೇಟ(ಈಗಿನ ಮಳಖೇಡ) ಇವರ ಮೂಲಪುರುಷ ದಂತಿದುರ್ಗ. ಈತನು ಕ್ರಿ.ಶ. ೭೫೭ರಲ್ಲಿ ಬಾದಾಮಿ ಚಾಲುಕ್ಯರ ಆಡಳಿತವನ್ನು ಕೊನೆಗಾಣಿಸಿ ರಾಷ್ಟ್ರಕೂಟ ಸಾಮ್ರಾಜ್ಯದ ಸ್ಥಾಪನೆಯನ್ನು ಮಾಡಿದನು. ರಾಷ್ಟ್ರಕೂಟರು ಎಂಬುದು ಮೊದಲ ಅಧಿಕಾರದ ಹುದ್ದೆಯಾಗಿದ್ದು ಕಾಲಕ್ರಮೇಣ ಒಂದು ಕುಟುಂಬದ ಹೆಸರಾಯಿತೆಂದು ಪಿ.ಬಿ.ದೇಸಾಯಿಯವರು ತಿಳಿಸುತ್ತಾರೆ.[೧೫] ರಾಷ್ಟ್ರಕೂಟರ ಕಾಲವನ್ನು ಕರ್ನಾಟಕದ ಅಧಿಕಾರತ್ವದ ಕಾಲ ಎಂದು ಕರೆಯುತ್ತಾರೆ. ಕರ್ನಾಟಕದ ಉಜ್ವಲ ಸಂಸ್ಕೃತಿಯನ್ನು ಬೆಳೆಸಿದವರು; ರಾಷ್ಟ್ರಕೂಟರು ಇವರ ಲಾಂಛನ ಗರುಡ.

ದಂತಿದುರ್ಗನಿಗೆ ಮಕ್ಕಳಿರಲಿಲ್ಲದ ಕಾರಣ ಈತನ ಚಿಕ್ಕಪ್ಪನಾದ ೧ನೆಯ ಕೃಷ್ಣನು ರಾಜನಾದನು. ಈತನಿಗೆ ಧ್ರುವನೆಂಬ ತಮ್ಮನಿದ್ದನು. ಧ್ರುವನು ಆಚಾರ ಪರಾಕ್ರಮಶಾಲಿಯಾಗಿದ್ದನು. ಧ್ರುವ ಮತ್ತು ಶಿಲಾಭಟ್ಟಾರಿಕೆ ದಂಪತಿಗಳ ಮಗನಾದ ಮೂರನೇ ಗೋವಿಂದನನ್ನು "ಪ್ರಭೂತ ವರ್ಷಗೊಂಡ" ಎಂದು ಶಾಸನದಲ್ಲಿ ಕರೆದಿದೆ. ಈತನು ಎಲ್ಲಾ ದಿಕ್ಕುಗಳಿಗೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ದಕ್ಷಿಣದಲ್ಲಿ ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಆರಿಸಿಕೊಂಡನೆಂದು ಅಭಿಪ್ರಾಯವಿದೆ.[೧೬]

ಮೂರನೆಯ ಗೋವಿಂದನು ಅತ್ಯಂತ ಬಲಶಾಲಿಯಾಗಿದ್ದನು. ತನ್ನ ಶಕ್ತಿ-ಶೌರ್ಯ ಮತ್ತು ಪರಾಕ್ರಮಗಳಿಂದ ಜಗತ್ತನ್ನೇ ಜಯಿಸಿದ್ದನು. ಈತನ ಆಡಳಿತ ಅವಧಿಯಲ್ಲಿ ಅನೇಕ ಗಿರಿದುರ್ಗಗಳನ್ನು ಆಕ್ರಮಿಸಿಕೊಂಡಿದ್ದನು. ಅದೇ ಸಂದರ್ಭದಲ್ಲಿ ಮಾನ್ಯಖೇಟದ ಸಮೀಪ ೫೦ ಕಿ.ಮೀ. ಅಂತರದಲ್ಲಿದ್ದ ಗಿರಿದುರ್ಗ ಯಾದಗಿರಿಯನ್ನು ತನ್ನ ವಶಕ್ಕೆ ತೆಗೆದುಕೊಂಡನೆಂದು ತಿಳಿದುಬರುತ್ತದೆ. ಇದಕ್ಕೆ ಯಾವುದೇ ಪುರಾವೆಗಳು ಲಭ್ಯವಾಗಿಲ್ಲ. ಹೀಗಾಗಿ ಇವರ ಕೀರ್ತಿ ಕರ್ನಾಟಕದಲ್ಲಿ ಅಷ್ಟೇ ಅಲ್ಲ ಭಾರತದಾದ್ಯಂತ ಪಸರಿಸಿತ್ತು. ಸುಮಾರು ೨೨೫ ವರ್ಷಗಳಷ್ಟು ದೀರ್ಘಕಾಲದವರೆಗೂ ರಾಷ್ಟ್ರಕೂಟರು ಸಾರ್ವಭೌಮತೆ ಮತ್ತು ಆಡಳಿತದ ಪ್ರಭುತ್ವದೊಂದಿಗೆ ಕರ್ನಾಟಕವನ್ನು ಆಳಿದರು. ರಾಜಕೀಯದಲ್ಲಿ ಅವರ ಕೊಡುಗೆ ಅಪ್ರತಿಮವಾದುದು. ಈ ದಿಸೆಯಲ್ಲಿ ರಾಷ್ಟ್ರಕೂಟರ ಕೀರ್ತಿ ಕರ್ನಾಟಕದ ಒಳಗೂ ಹೊರಗೂ ಹಬ್ಬಿದೆ. ಇದೇ ಸಾಮ್ರಾಜ್ಯದಲ್ಲಿ ಪಂಡಿತರು ಆಶ್ರಯವನ್ನು ಪಡೆದಿದ್ದರು. ರಾಷ್ಟ್ರಕೂಟರ ಶ್ರೇಷ್ಠ ದೊರೆ ಎನಿಸಿಕೊಂಡ ಅಮೋಘವರ್ಷ ನೃಪತುಂಗನು ತಾನು ಮಾಡಿದ ಪರಾಕ್ರಮಗಳಿಂದ ಕೀರ್ತಿಶಾಲಿಯಾದ ದೊರೆ ಎನಿಸಿದ್ದನು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ "ಕವಿರಾಜಮಾರ್ಗ"ದ ಸ್ಥಾನ ಅತ್ಯಂತ ಮಹತ್ವದಾಗಿದೆ. ಇದು

ಅಮೋಘವರ್ಷನ ಆಳ್ವಿಕೆಯಲ್ಲಿ ರಚನೆಯಾಗಿದೆ. ಇದರ ರಚನೆಕಾರ ಶ್ರೀವಿಜಯನು ಕನ್ನಡ ನಾಡಿನ ವಿಸ್ತಾರದ ಬಗ್ಗೆ ಬಹಳ ಅಭಿಮಾನದಿಂದ ಹೇಳುತ್ತಾನೆ.

ಕಾವೇರಿಯಿಂದ ಮಾಗೋ
ದಾವರಿವರಮಿರ್ದ ನಾಡಾದಾ ಕನ್ನಡದೊಳ್॥
ಭಾವಿಸಿದ ಜನಪದಂ ವಸು
ದಾವಳಿ ವಿಲೀನ ವಿಶದವಿಷಯ ವಿಶೇಷಂ॥[೭೨]

ಎಂದು ಅಂದಿನ ಕನ್ನಡ ನಾಡಿನ ವಿಸ್ತಾರದ ಬಗ್ಗೆ ವರ್ಣಿಸಿದ್ದಾನೆ. ಕನ್ನಡ ನಾಡು ಕಾವೇರಿಯಿಂದ ಗೋದಾವರಿ ನದಿಯವರೆಗೆ ವಿಶಾಲವಾಗಿ ಹಬ್ಬಿತ್ತು ಎಂಬುದು ಸ್ಪಷ್ಟವಾಗುತ್ತದೆ. ಇಂತಹ ವಿಶಾಲವಾದ ನಾಡಿನಲ್ಲಿ ಯಾದಗಿರಿ ಪ್ರದೇಶವು ಇದ್ದಿತ್ತೆಂದು ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಯಾದಗಿರಿ ಪ್ರದೇಶವು ಮಾನ್ಯಖೇಟದಿಂದ ಕೇವಲ ೫೦ ಕಿ.ಮೀ. ಅಂತರದಲ್ಲಿದ್ದ ಕಾರಣ ಸಹಜವಾಗಿ ಅದರ ಕೀರ್ತಿ ಯಾದಗಿರಿ ಪ್ರದೇಶಕ್ಕೂ ಅನ್ವಯಿಸುತ್ತದೆ. ರಾಷ್ಟ್ರಕೂಟರ ಆಳ್ವಿಕೆ ಯಾದಗಿರಿ ಪ್ರದೇಶದ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಏಕೆಂದರೆ ಇಲ್ಲಿನ ಗಿರಿದುರ್ಗವನ್ನು ನೋಡಿದಾಗ ಯಾದಗಿರಿಯ ಸುತ್ತಲಿನ ಪ್ರದೇಶದಲ್ಲಿ ಜೈನ ವಿಗ್ರಹಗಳು, ಬಸದಿಗಳು, ಶಾಸನಗಳು ನಮಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತವೆ. ಆದರೆ ಖಚಿತವಾಗಿ ಹೇಳುವುದಾದರೆ, ರಾಷ್ಟ್ರಕೂಟರ ಶಾಸನಗಳು ಈ ಪ್ರದೇಶದಲ್ಲಿ ಲಭ್ಯವಾಗಿಲ್ಲ. ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳೇ ಹೆಚ್ಚಿನ ಪ್ರಮಾಣದಲ್ಲಿ ದೊರೆತಿವೆ. ರಾಷ್ಟ್ರಕೂಟರ ಕಾಲದಲ್ಲಿ ಜೈನ ಧರ್ಮ ಸಾಕಷ್ಟು ಪ್ರಚಲಿತದಲ್ಲಿ ಇದ್ದ ಕಾರಣ ಇಲ್ಲಿ ರಾಷ್ಟ್ರಕೂಟರ ಪ್ರಭಾವ ಅವರ ಆಳ್ವಿಕೆ ಈ ಪ್ರದೇಶದ ಮೇಲೆ ನಡೆದಿರಬೇಕೆಂದು ಭಾವಿಸಲಾಗಿದೆ. ಅಮೋಘವರ್ಷ ನೃಪತುಂಗನ ಕಾಲಕ್ಕೆ ಈ ಪ್ರದೇಶ ಅತ್ಯಂತ ಶ್ರೀಮಂತ ಹಾಗೂ ಸಾಂಸ್ಕೃತಿಕ ಸಮೃದ್ಧ ಪ್ರದೇಶವಾಗಿತ್ತು.

ಅಮೋಘವರ್ಷ ನೃಪತುಂಗನು ೮೭೮ರಲ್ಲಿ ನಿಧನವಾದಾಗ ಅವನ ಮಗ ಇಮ್ಮಡಿ ಕೃಷ್ಣನು ಅಧಿಕಾರಕ್ಕೆ ಬಂದನು. ಈತನು ತಂದೆಯಂತೆ ಮಹಾಪರಾಕ್ರಮಿ ಅರಸನಾಗಿದ್ದನು. ಆತನಿಗೂ ಪೃಥ್ವಿ ವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ ಭಟ್ಟಾರ ಎಂಬ ಬಿರುದುಗಳಿದ್ದವು ಎಂದು ವೆಂಕಟಪುರ ಶಾಸನದಿಂದ ತಿಳಿಯುತ್ತದೆ. ಈತನು ಪೂರ್ವದ ಚಾಲುಕ್ಯರು ಗೂರ್ಜರು ಪ್ರತಿಕಾರರು ಮತ್ತು ಚೋಳರ ಮೇಲೆ ಕರಾಳ ಹಾಗೂ ಸುದೀರ್ಘವಾದ ಯುದ್ಧ ಮಾಡಬೇಕಾಯಿತು. ೯೧೪ರಲ್ಲಿ ಆಳ್ವಿಕೆ ಕೊನೆಗೊಳ್ಳುತ್ತದೆ. ಹೀಗೆ ಇಮ್ಮಡಿ ಕೃಷ್ಣನು ಮಹಾಶೂರನಾಗಿ ತನ್ನ ಪರಾಕ್ರಮಗಳಿಂದ ಕ್ರಿ.ಶ.೮೭೮–೯೧೪ರವರೆಗೆ ಆಳ್ವಿಕೆ ಮಾಡಿದನು. ಮುಂದೆ ಮೂರನೆ ಕೃಷ್ಣನು ಪಟ್ಟಕ್ಕೆ ಬಂದಾಗ ರಾಷ್ಟ್ರಕೂಟರ ಸಾಮ್ರಾಜ್ಯವು ಕರ್ನಾಟಕದ ಚರಿತ್ರೆಯಲ್ಲಿ ಪ್ರಸಿದ್ಧಿಯನ್ನು

ಪಡೆಯಿತು. ಅದೇ ಸಂದರ್ಭದಲ್ಲಿಯೇ ಗಂಗರು ರಾಷ್ಟ್ರಕೂಟರ ಸಾಮಂತರಾಗಿ ಅಧಿಕಾರ ನಡೆಸುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ರಾಷ್ಟ್ರಕೂಟರ ರಾಜ್ಯಾಡಳಿತ ಸಮರ್ಥವಾಗಿ ನಡೆದುಬಂದಿರುವುದು ಹೈದರಾಬಾದ್ ಕರ್ನಾಟಕದ ಚರಿತ್ರೆಯಲ್ಲಿ ಒಂದು ಮೈಲುಗಲ್ಲಾಗಿದೆ.[೧೮]

ರಾಷ್ಟ್ರಕೂಟರ ವಂಶಾವಳಿ

ಧ್ರುವ
|
ಮೂರನೆಯ ಗೋವಿಂದ
|
ಒಂದನೆಯ ಅಮೋಘವರ್ಷ
|
೨ನೇ ಕೃಷ್ಣ
|
೩ನೇ ಇಂದ್ರ — ೩ನೇ ಅಮೋಘವರ್ಷ

೩ನೇ ಇಂದ್ರ
|
೨ನೇ ಅಮೋಘವರ್ಷ

೩ನೇ ಅಮೋಘವರ್ಷ
|
೩ನೇ ಕೃಷ್ಣ

೬. ಕಲ್ಯಾಣದ ಚಾಲುಕ್ಯರು

ಹೈದರಾಬಾದ್ ಕರ್ನಾಟಕದಲ್ಲಿ ಕಲ್ಯಾಣ ಚಾಲುಕ್ಯರು ಆಳ್ವಿಕೆ ಮಾಡಿರುವುದಕ್ಕೆ ಶಾಸನಗಳಲ್ಲಿ ಉಲ್ಲೇಖಗಳು ದೊರೆತಿವೆ. ಕಲ್ಯಾಣದ ಚಾಲುಕ್ಯರ ನೂರಾರು ಶಾಸನಗಳು ಗುಲಬರ್ಗಾ ಜಿಲ್ಲೆಯಲ್ಲಿ ದೊರೆತಿದ್ದು ಅವರ ಆಡಳಿತದ ಪ್ರಭಾವವು ಹೈದರಾಬಾದ್ ಕರ್ನಾಟಕಾದ್ಯಂತ ಕಂಡುಬರುವುದು. ಚಾಲುಕ್ಯರ ಎರಡು ಶಾಖೆಗಳು ಇಮ್ಮಡಿ ಜೈನನಿಂದ ರಾಷ್ಟ್ರಕೂಟರ ಇಮ್ಮಡಿ ಕರ್ಕನು ಸುಮಾರು ಕ್ರಿ.ಶ. ೯೭೩ರಲ್ಲಿ ಪರಾಜಯಗೊಂಡ ನಂತರ ಒಂದು ಕಾಲದಲ್ಲಿ ಪ್ರಬಲರಾಗಿದ್ದ ರಾಷ್ಟ್ರಕೂಟರ ಸಾಮ್ರಾಜ್ಯವು ಕ್ಷೀಣಿಸಿತು. ರಾಷ್ಟ್ರಕೂಟರ ಆಡಳಿತವನ್ನು ತೊರೆದು ಹಾಕಿದ ಎರಡನೆಯ ತೈಲಪನು ಕ್ರಿ.ಶ. ೯೭೩ರಲ್ಲಿ ಮಾನ್ಯಖೇಟದಲ್ಲಿ ಅಧಿಕಾರ ವಹಿಸಿಕೊಂಡನು.[೧೯]

ಈ ಮನೆತನದ ಪ್ರಸಿದ್ಧ ಅರಸ ಆರನೆಯ ವಿಕ್ರಮಾದಿತ್ಯನು ಕಲ್ಯಾಣ ನಗರದಲ್ಲಿ ಪಟ್ಟಾಭಿಷೇಕನಾದನು. ಕ್ರಿ.ಶ.೧೦೭೬ರಲ್ಲಿ ತನ್ನದೇ ಶಕೆಯನ್ನು ಆರಂಭಿಸಿದನು. ಈತನ ಆಸ್ಥಾನ

ಕವಿ ಬಿಲ್ಹಣನು ವಿಕ್ರಮನ ವೈಭವ ಪ್ರೇರಿತ ಆಳ್ವಿಕೆಯನ್ನು ತನ್ನ ಕೃತಿಯಾದ "ವಿಕ್ರಮಾಂಕದೇವ ಚರಿತೆ"ಯಲ್ಲಿ ನೀಡಿದ್ದಾನೆ. ಕಲ್ಯಾಣ ಚಾಲುಕ್ಯರ ಆಡಳಿತಾತ್ಮಕ ವಿಚಾರಗಳ ಬಗ್ಗೆ ಅಷ್ಟೊಂದು ಶಾಸನ ಆಧಾರಗಳು ಲಭ್ಯವಿಲ್ಲದಿರುವಾಗಲೂ ಧಾರ್ಮಿಕವಾಗಿ ಮತ್ತು ಶೈಕ್ಷಣಿಕವಾಗಿ ಏಳ್ಗೆಗಾಗಿ ಅನೇಕ ದೇವಾಲಯಗಳು, ಅಗ್ರಹಾರಗಳು ನಿರ್ಮಿಸಿದ್ದುದಕ್ಕೆ ಉದಾಹರಣೆಯಾಗಿ ಅನೇಕ ಸ್ಮಾರಕಗಳು ಇಂದಿಗೂ ಈ ಪ್ರದೇಶದಾದ್ಯಂತ ಗೋಚರವಾಗುತ್ತವೆ. ಏವೂರು, ಮುದನೂರು, ಏಳೆವಾರ, ಕುಳಭೇರಿ, ಅಂದೇಲಿ, ಕೊಂಡಗುಳಿ, ಸಗರ, ಸಿರವಾಳಿ ಇವು ಪ್ರಸಿದ್ಧ ಅಗ್ರಹಾರಗಳು ಮತ್ತು ನಗರ ಪಟ್ಟಣಗಳಾಗಿದ್ದವು. ಗುಲಬರ್ಗಾ ಜಿಲ್ಲೆಯ ಅರಲು ೩೦೦ ಇಂದಿನ ಚಿತ್ತಾಪುರ ಮತ್ತು ಸೇಡಂ ತಾಲ್ಲೂಕುಗಳ ಪ್ರದೇಶವಾಗಿತ್ತು. ಆಲ್ಲೂರು ಎಂಬ ಈಗಿನ ಗ್ರಾಮವೇ ಅರಲು ಎಂದು ಗುರುತಿಸಲಾಗಿದೆ. ಜೇವರ್ಗಿ ತಾಲ್ಲೂಕಿನ ಅಂದೇಲಿಯಲ್ಲಿ ದೊರೆತಿರುವ ಶಾಸನವು ಅವಮಲ್ಲ ಮೊದಲನೇ ಸೋಮೇಶ್ವರ ಕಾಲಕ್ಕೆ(೧೦೫೦) ಸೇರಿದ್ದು ಚೆನ್ನಮಾಧವ ದೇವಾಲಯಕ್ಕೆ ಆತನು ನೀಡಿದ ದತ್ತಿಯನ್ನು ದಾಖಲಿಸುತ್ತದೆ.

ಒಂದನೆಯ ಸೋಮೇಶ್ವರನ ನಾಗಾಯಿ ಶಾಸನವು ಸ್ಥಳೀಯ ೬೦ ಕುಂಭದ ದೇವಾಲಯದ ಮುಂಭಾಗದಲ್ಲಿದೆ. ಸುದೀರ್ಘವಾದ ಈ ಶಾಸನದಲ್ಲಿ ನಾಗಾವಿಯ ಅಗ್ರಹಾರ ಘತಿಕಸ್ಥಾನಕ್ಕೆ ಮಧುಪ ಅರಸ ದಣ್ಣಾಯಕ ದತ್ತಿ ಬಿಟ್ಟ ವಿಚಾರವಿದೆ. ಆರನೆಯ ವಿಕ್ರಮಾದಿತ್ಯನ ಆಡಳಿತಾವಧಿಯಲ್ಲಿ ಮಧುವಣ ಭಟ್ಟನ ಮಗ ಅಧಿತ್ಯಭಟ್ಟನು ದಂಡಾಧೀಶನಾಗಿದ್ದನೆಂದು ಹಾಗೂ ಈತನು ಆದಿತ್ಯೇಶ್ವರ ದೇವಾಲಯವನ್ನು ರಚಿಸಿ ಹಲವು ದತ್ತಿಗಳನ್ನು ನೀಡಿದ ವಿವರಗಳನ್ನು ಯಡ್ರಾಮಿಯ ಶಾಸನವೊಂದರಲ್ಲಿ ದಾಖಲಿಸಲಾಗಿದೆ.

ವಿಕ್ರಮಾದಿತ್ಯನ ಕಾಲದ ಯಡ್ರಾಮಿಯ ಬಸವಣ್ಣನ ದೇವಾಲಯದ ಮುಂದಿರುವ ಶಾಸನವು ಸಗರನಾಡಿನ ಮಹಾಮಂಡಲೇಶ್ವರರಾದ ಹೈಹಯ ವಂಶದವರ ವಂಶಾವಳಿಯ ವಿವರವನ್ನು ನೀಡುತ್ತದೆ. ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮರ್ತೂರಿನ ಕ್ರಿ.ಶ.೧೧೨೩ರಲ್ಲಿ ತ್ರಿಭುವನಮಲ್ಲನ ಶಾಸನವು ಪೆರ್ಗಡೆ ಬೀಚರಾಜನ ಮರಿತೂರಲು ಕೇಶವ ದೇವರನ್ನು ಪ್ರತಿಷ್ಠಾಪಿಸಿದ ಬಗೆಗೆ ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ವಿಜ್ಞಾನೇಶ್ವರ ಉಲ್ಲೇಖವಿದ್ದು, ಇದು ಒಂದು ಪ್ರಮುಖ ದಾಖಲೆಯಾಗಿದೆ ಎಂದು ಹೇಳಬಹುದು.[೨೦] ಗುಲಬರ್ಗಾ ಜಿಲ್ಲೆಯ ಅರಲು ೩೦೦ ಇಂದಿನ ಚಿತ್ತಾಪುರ ಹಾಗೂ ಸೇಡಂ ತಾಲೂಕಿನ ಅಂದೇಲಿಯಲ್ಲಿ ದೊರೆತಿರುವ ಶಾಸನವು ಅವಮಲ್ಲ ಕಲ್ಯಾಣ ಚಾಲುಕ್ಯರ ಆಸ್ಥಾನ ಕವಿಯಾದ ವಿಜ್ಞಾನೇಶ್ವರನಿಗೆ ಸಂಬಂಧಿಸಿದೆ. ಈತ ಗುಲಬರ್ಗಾ ಜಿಲ್ಲೆಯ ಮರತೂರಿನಲ್ಲಿ ಜನಿಸಿದನು ಎಂದು ಆತನ ಕೃತಿಯಾದ ಮಿತಾಕ್ಷರದಿಂದ ತಿಳಿಯುತ್ತದೆ. ಹಾಗೇ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮೋಘ ಎಂಬ

ಗ್ರಾಮದಲ್ಲಿ ಇವರ ಕಾಲದ ರಾಮೇಶ್ವರ ದೇವಾಲಯದ ಪಕ್ಕದಲ್ಲಿ ಸಿಕ್ಕ ಅವಶೇಷಗಳಿಂದ ಈ ಪ್ರದೇಶವು ಕೂಡ ಇವರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿದುಬರುತ್ತದೆ. ಅದೇ ರೀತಿಯಾಗಿ ದೇವದುರ್ಗವನ್ನು ಕಲ್ಯಾಣ ಚಾಲುಕ್ಯರು ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ಇದಕ್ಕೆ ಸಾಕ್ಷಿಯೆಂಬಂತೆ ಅನೇಕ ಶಾಸನಗಳು ಮಾಹಿತಿಯನ್ನು ಒದಗಿಸುತ್ತವೆ. ಕಲ್ಯಾಣ ಚಾಲುಕ್ಯರ ಕಾಲದ ಪ್ರಮುಖ ಆಡಳಿತ ಘಟಕಗಳೆಂದರೆ ಅಯ್ಯಣವಾಡಿ ೩೦೦ ಹಾಗೂ ಮೊಸಳಿಕಲ್ಲು ೩೦೦, ಜಗದೇಕಮಲ್ಲ ಇಮ್ಮಡಿ ಜಯಸಿಂಹನ ಆಳ್ವಿಕೆಯ ಬಗ್ಗೆ ಕ್ರಿ.ಶ. ೧೦೨೬ ಗಣಜಲಿ ಶಾಸನ ೬ನೇ ವಿಕ್ರಮಾದಿತ್ಯನ ಆಳ್ವಿಕೆಯ ಕುರುಹುಗಳಾಗಿ ಕಲ್ಯಾಣವನ್ನು ಕುರಿತು ವಿಜ್ಞಾನೇಶ್ವರ ತನ್ನ ಮಿತಾಕ್ಷರ ಸಂಹಿತೆಯಲ್ಲಿ ಕಲ್ಯಾಣದಂತಹ ನಗರ ಹಿಂದಿರಲಿಲ್ಲ, ಮುಂದಿರಲಾರದು ಮತ್ತು ವಿಕ್ರಮಾದಿತ್ಯನಂತಹ ಅರಸನನ್ನು ಕಂಡಿಲ್ಲ ಮತ್ತು ಕೇಳಿಲ್ಲ ಎಂದು ಹೇಳಿದ್ದಾನೆ.[೨೧]

೭. ಕಲಚೂರಿಗಳು

ಕರ್ನಾಟಕದ ಅರಸು ಮನೆತನಗಳಲ್ಲಿ ಕಲಚೂರಿಗಳು ಕಲ್ಯಾಣ ಚಾಲುಕ್ಯರ ಸಾಮಂತ ಅರಸರಾಗಿ ಮುಂದೆ ಸ್ವತಂತ್ರವಾಗಿ ರಾಜಭಾರ ಮಾಡಿದ್ದು ಕಡಿಮೆ ಕಾಲವೆಂದು ಹೇಳಬಹುದು. ಇವರು ತಾವು ಯದು ಮತ್ತು ಕಾರ್ತವೀರ್ಯಾರ್ಜುನರ ಕುಲಕ್ಕೆ ಸೇರಿದವರೆಂದು ಹೇಳಿಕೊಂಡಿದ್ದಾರೆ. ಇವರು ಶಿವನ ವಾಹನವಾದ ನಂದಿಯನ್ನು ತಮ್ಮ ಲಾಂಛನವಾಗಿಟ್ಟುಕೊಂಡು ಆಳ್ವಿಕೆ ನಡೆಸಿದರು. ಬಿಜ್ಜಳ ಆರಂಭದಲ್ಲಿ ಕಲ್ಯಾಣವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆಯನ್ನು ಮಾಡಿದ್ದನು. ಅದೇ ರೀತಿಯಾಗಿ ದೇವದುರ್ಗ ಮತ್ತು ರಾಯಚೂರು ಪ್ರದೇಶಗಳು ಇವರ ಆಳ್ವಿಕೆಗೆ ಒಳಪಟ್ಟಿದ್ದವೆಂದು ಹೇಳಲಾಗಿದೆ. ಬಿಜ್ಜಳನ ಮಗರಾಯ ಮುರಾರಿಯು ಕ್ರಿ.ಶ.೧೧೭೦ರ ಗೊಬ್ಬೂರಿನ ಹರಿಹರ ದೇವಾಲಯದಲ್ಲಿರುವ ಶಾಸನ ಏಳು ಬಾವಿ ಬಸವಣ್ಣನ ಗುಡಿಯ ಬಲಪಕ್ಕದಲ್ಲಿದ್ದ ಶಾಸನ ಕ್ರಿ.ಶ. ೧೧೭೭ರ ನಿಲುವಾಜಿ ಶಾಸನಗಳಿವೆ. ಇವುಗಳ ಆಧಾರದ ಮೇಲೆ ಕಲಚೂರಿಗಳು ದೇವದುರ್ಗ ಮತ್ತು ರಾಯಚೂರಿನ ಪ್ರದೇಶದಲ್ಲಿ ಆಳ್ವಿಕೆ ಮಾಡಿದ್ದರೆಂದು ತಿಳಿಯುತ್ತದೆ.[೨೨]


ಕಲಚೂರಿ ಅರಸರು ತಮ್ಮ ಆಡಳಿತ ಅವಧಿಯಲ್ಲಿ ಯಾದಗಿರಿಯನ್ನು ತಮ್ಮ ಅಧೀನಕ್ಕೊಳ ಪಡಿಸಿಕೊಂಡಿದ್ದರು. ಈ ವಂಶದ ಮಾಂಡಲೀಕರಿದ್ದ ಉಚ್ಚಿತ, ಬಿಜ್ಜಳ, ಕರ್ಣ, ಜೊಗದು ಇವರೆಲ್ಲರೂ ಅನುಕ್ರಮವಾಗಿ ಆಳುವಾಗ ತರಿಕಾಡುನಾಡು ಪ್ರದೇಶವನ್ನು ಮಂಗಳವೇಡದಿಂದ ಆಳುತ್ತಿದ್ದ ಜೋಗಮನ ಮಗ ಪೆರ್ಮಾಡಿಯು ಆರನೆಯ ವಿಕ್ರಮಾದಿತ್ಯನ ಮಗಳು ಸಾವಾಳದೇವಿ ಯನ್ನು ವರಿಸಿದನು ಎಂದು ತಿಳಿದುಬರುತ್ತದೆ. ಈಕೆಯ ಮಗನೇ ಬಿಜ್ಜಳನೆಂದು ವಿದ್ವಾಂಸರ ಅಭಿಪ್ರಾಯವಿದೆ.[೨೩]

ಇಮ್ಮಡಿ ಬಿಜ್ಜಳನು ಒಬ್ಬ ಸಮರ್ಥ ಅರಸನಾಗಿದ್ದು ತನ್ನ ಮಾಂಡಲೀಕರನೆಲ್ಲಾ ಹತೋಟಿಯಲ್ಲಿಟ್ಟಿದ್ದನು. ಈತನಿಗೆ ಮಹಾಮಂಡಳೇಶ್ವರ ಕಾಲಂಜನಪುರವರಾಧೀಶ್ವರ ಸುವರ್ಣ ವೃಷಭಧ್ವಜ. ಡಮರುಗಚೂರ್ಯನಿರ್ಘೋಷಣ ಕಳಚೂರ್ಯ ಕುಳಮಳಮಾರ್ತಂಡ, ಕದನ ಪ್ರಚಂಡ ಇತ್ಯಾದಿ ಬಿರುದುಗಳ ಬಗ್ಗೆ ಉಂಡು ಏಳದತ್ತಿ ಶಾಸನದಲ್ಲಿ ಉಲ್ಲೇಖವಿದೆ.

ಕಲಚೂರಿಗಳು ಸುಮಾರು ಇಪ್ಪತ್ತು ವರ್ಷಗಳ ಕಾಲ ಸ್ವತಂತ್ರವಾಗಿ ಕರ್ನಾಟಕವನ್ನು ಆಳಿದರು. ಇವರ ಕಾಲದಲ್ಲಿ ಕರ್ನಾಟಕದ ಚರಿತ್ರೆಯಲ್ಲಿ ಒಂದು ಕ್ರಾಂತಿಕಾರಿ ಯುಗವಾಯಿತು. ಈ ಯುಗದಲ್ಲಿ ರಾಜ್ಯಕ್ರಾಂತಿ, ಧರ್ಮಕ್ರಾಂತಿ, ಸಮಾನತೆಯ ಕ್ರಾಂತಿ, ಸಾಹಿತ್ಯಕ್ರಾಂತಿ ಉಂಟಾಯಿತು. ಇವುಗಳ ಯಥಾರ್ಥ ಸ್ವರೂಪವನ್ನು ಕಂಡುಹಿಡಿಯುವ ಅನ್ವೇಷಕರು ಮಾಡಿದ ಪ್ರಯತ್ನಗಳು ಇನ್ನೂ ಅಪೂರ್ವ ವ್ಯವಸ್ಥೆಯಲ್ಲಿವೆ ಎಂದು ಡಾ.ಪಿ.ಬಿ.ದೇಸಾಯಿ ಅಭಿಪ್ರಾಯಪಡುತ್ತಾರೆ. ವೀರಶೈವ ಧರ್ಮ ಪ್ರವರ್ತಕರು ಭಕ್ತಿಭಂಡಾರಿ ಬಸವಣ್ಣನವರು ಬಿಜ್ಜಳನ ಅರ್ಥಮಂತ್ರಿಯಾಗಿದ್ದರು. ಇವರ ನೇತೃತ್ವದಲ್ಲಿ ನಡೆದ ವೀರಶೈವ ಜಾಗೃತಿ ಕಲ್ಯಾಣ ದೂರದ ಶಿವಶರಣರನ್ನು ಆಕರ್ಷಿಸಿತು. ಇದು ಅನುಭವ ಮಂಟಪ ಸ್ಥಾಪನೆಗೆ ನಾಂದಿಯಾಯಿತು. ಬಸವಣ್ಣನವರು ಯಾವ ಜಾತಿ ಮತ ಮೇಲು ಕೀಳೆನ್ನದೇ ಸರ್ವರು ಒಂದೇ ಸಮಾನ ಎಂದು ಘೋಷಿಸಿದರು. ಕಾಯಕದ ಮಹತ್ವವನ್ನು ಅರುಹಿ ಸತ್ಯ ಶುದ್ಧ ಕಾಯಕವನ್ನು ಪ್ರತಿಪಾದಿಸಿದರು.[೨೪]

ಬಸವಣ್ಣನವರು ಬಿಜ್ಜಳನ ಸಾಮ್ರಾಜ್ಯದಲ್ಲಿ ಜಿಡ್ಡುಗಟ್ಟಿದ ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯನ್ನು ತಿರಸ್ಕರಿಸಿದರು. ಕೆಳಜಾತಿಯ ಮಹಾಜ್ಞಾನಿ ಅಲ್ಲಮಪ್ರಭುಗಳು ಶೂನ್ಯ ಸಿಂಹಾಸನವನ್ನೇರಿದಾಗ ಕಲ್ಯಾಣದ ಪಟ್ಟಭದ್ರರಿಗೆ ಎಲ್ಲ ದೃಷ್ಟಿಯಿಂದಲೂ ಸಮೃದ್ಧವಾಗಿದ್ದ ತಮ್ಮ ಹಿಡಿತ ಕುಸಿಯುತ್ತಿರುವುದು ಅರಿವಾಯಿತು. ಅಂದು ವರ್ಣ ವ್ಯವಸ್ಥೆ ಸಂದರ್ಭದಲ್ಲಿ ಅಸ್ಪೃಶ್ಯ ಜಾತಿಯ ಸಮಗಾರ ಹರಳಯ್ಯನ ಮಗನೊಂದಿಗೆ ಬ್ರಾಹ್ಮಣ ಮಧುವರಸನ ಮಗಳೊಂದಿಗೆ ವಿವಾಹವನ್ನು ಬಸವಣ್ಣನವರು ಏರ್ಪಡಿಸಿದಾಗ ವರ್ಣಾಶ್ರಮ ಧರ್ಮಕ್ಕೆ ಚ್ಯುತಿ ಬಂದಿತೆಂದು ಸನಾತನ ಸಂಪ್ರದಾಯಸ್ಥರು ಬಿಜ್ಜಳನಿಗೆ ಬಸವಣ್ಣನ ವಿರುದ್ಧ ದೂರಿದರು. ಅದನ್ನೇ ನೆಪ ಮಾಡಿಕೊಂಡ ಯಥಾಸ್ಥಿತಿವಾದಿಗಳು ಶರಣರ ಹತ್ಯೆ ಮಾಡಿದರು. ಇದನ್ನು "ಶರಣರ ಹತ್ಯಾಕಾಂಡ" ಎಂದು ರಂಜಾನ್ ದರ್ಗಾ ಅವರು ಅಭಿಪ್ರಾಯಪಡುತ್ತಾರೆ. ಈ ಘಟನೆಯಿಂದ ನೊಂದ ಅನೇಕ ಶರಣರು ಕಲ್ಯಾಣದಿಂದ ಬೇರೆ ಬೇರೆ ಕಡೆಗೆ ವಲಸೆ ಹೋದರು ಎಂದು ತಿಳಿದುಬರುತ್ತದೆ.[೨೫]

ಕಲಚೂರಿ ವಂಶಾವಳಿ



೮. ಯಾದವರು

ಆರಂಭದಲ್ಲಿ ದೇವಗಿರಿಯ ಯಾದವರು ಹೊಯ್ಸಳ ಆಡಳಿತಕ್ಕೆ ಒಳಪಟ್ಟಿದ್ದರು. ನಂತರ ಕಲ್ಯಾಣ ಚಾಲುಕ್ಯರು ಮತ್ತು ಕಲಚೂರಿಗಳ ಅಧಿಪತ್ಯ ಕೊನೆಗೊಂಡ ಮೇಲೆ ಇವರ ಆಡಳಿತ ಆರಂಭವಾಗುತ್ತದೆ. ಹೊಯ್ಸಳರಿಗೂ ಮತ್ತು ಯಾದವರಿಗೂ ಒಂದೇ ಹೆಸರಿನ ಬಿರುದುಗಳಿರುವುದನ್ನು ನಾವು ಕಾಣುತ್ತೇವೆ. ಯಾದವರ ಕಾಲದ ಅವಶೇಷಗಳು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಲಭ್ಯವಾಗಿದೆ. ಇದರಿಂದ ಈ ಭಾಗದಲ್ಲಿ ಯಾದವ ವಂಶಸ್ಥರು ಆಳ್ವಿಕೆ ಮಾಡಿದರೆಂದು ತಿಳಿದುಬರುತ್ತದೆ. ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ಇಮ್ಮಡಿ ಜಯಸಿಂಹನಿಗೆ ಅವ್ವಲದೇವಿ ಎಂಬ ಮಗಳಿದ್ದಳು. ಸೇವುಣ ಅರಸು ಮುಮ್ಮಡಿ ವಿಲ್ಲಮನನ್ನು ಅವ್ವಲದೇವಿಯೊಂದಿಗೆ ವಿವಾಹವಾಗಿದ್ದರಿಂದ ಕಲ್ಯಾಣ ಚಾಲುಕ್ಯರೊಂದಿಗೆ ವೈವಾಹಿಕ ಸಂಬಂಧ ಏರ್ಪಟ್ಟದ್ದರಿಂದ ಯಾದವರ ಸಾಮ್ರಾಜ್ಯ ವಿಸ್ತಾರವಾಯಿತು.[೨೬]

ಸಿಂಘಣನು ಯಾದವ ಅರಸು ಮನೆತನದಲ್ಲಿಯೇ ಪ್ರಮುಖ ಅರಸನಾಗಿದ್ದನು. ಈತನ ಆಳ್ವಿಕೆಯ ಕಾಲದಲ್ಲಿ ರಾಜ್ಯ ವಿಸ್ತಾರವಾಗತೊಡಗಿತು. ಹಾಗೇ ಆಡಳಿತದ ಜೊತೆಗೆ ಕಲೆ, ಸಾಹಿತ್ಯ, ಸಂಸ್ಕೃತಿಗೆ ಹೆಚ್ಚಿನ ಮಹತ್ವವನ್ನು ನೀಡಿರುವುದು ಕಂಡುಬರುತ್ತದೆ. ನಂತರ ಅಧಿಕಾರಕ್ಕೆ ಬಂದ ಅರಸರು ಅಸಮರ್ಥರಾಗಿದ್ದರಿಂದ ಯಾದವ ಮನೆತನವು ಅಳಿವಿನ ಅಂಚಿಗೆ ತಳ್ಳಲ್ಪಟ್ಟಿತು.

ಯಾದವ ಅರಸರ ನೇರ ಆಳ್ವಿಕೆಗೆ ರಾಯಚೂರು ಮತ್ತು ದೇವದುರ್ಗ ಪ್ರದೇಶವು ಒಳಪಟ್ಟಿತ್ತು. ಇವರ ಕಾಲದ ಶಾಸನಗಳು ರಾಯಚೂರು ಮತ್ತು ದೇವದುರ್ಗದಲ್ಲಿ ಲಭ್ಯವಾಗಿವೆ. ಗಬ್ಬೂರಿನ ವೆಂಕಟೇಶ್ವರ ದೇವಾಲಯದ ಆಭರಣದಲ್ಲಿರುವ ಶಾಸನ ಮತ್ತು ವೀರಗೋಟನಲ್ಲಿರುವ ಮೌನೇಶ್ವರರು ತಪಸ್ಸು ಮಾಡಿದ ಗಡಿಯಲ್ಲಿ ಶಾಸನಗಳಿವೆ. ಇವುಗಳ ಆಧಾರದ ಮೇಲೆ ರಾಯಚೂರು ಮತ್ತು ದೇವದುರ್ಗ ಪ್ರದೇಶವು ಇವರ ಆಳ್ವಿಕೆಗೆ ಒಳಪಟ್ಟಿದ್ದವು ಎಂದು ತಿಳಿದುಬರುತ್ತದೆ.[೨೭]

೯. ವಾರಂಗಲಿನ ಕಾಕತೀಯರು

ರಾಯಚೂರು ಪ್ರದೇಶದಲ್ಲಿ ವಾರಂಗಲಿನ ಕಾಕತೀಯರು ಆಳ್ವಿಕೆ ನಡೆಸುತ್ತಿದ್ದರು. ಇಲ್ಲಿನ ಕ್ರಿ.ಶ. ೧೨೯೪ರ ಶಾಸನದ ಪ್ರಕಾರ ಕಾಕತೀಯ ಅರಸ ರುದ್ರದೇವನು ಆಡಳಿತ ನಡೆಸುತ್ತಿದ್ದನು. ಇವರ ಮಾಂಡಲೀಕನಾದ ಗೊನಗನ್ನಯ್ಯ ರೆಡ್ಡಿ ಎಂಬುವವನು ವರ್ಧಮಾನಪುರದಿಂದ ಆಳುತ್ತಿದ್ದನು. ಇವನ ದಂಡನಾಯಕನಾದ ವಿಠಲನಾಥ ನಾಯಕನು ರಾಯಚೂರಿನಲ್ಲಿ ಆಳ್ವಿಕೆ ಮಾಡುವಾಗ ದೇವದುರ್ಗ ಪ್ರದೇಶವು ಕೂಡ ಇವನ ಅಧೀನದಲ್ಲಿತ್ತೆಂದು ತಿಳಿದುಬರುತ್ತದೆ.[೨೮]

೧೦. ವಿಜಯನಗರ ಸಾಮ್ರಾಜ್ಯ

ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದ ಮೇಲೆ ಹೈದರಾಬಾದ್ ಕರ್ನಾಟಕ ಪ್ರದೇಶ ಪರೋಕ್ಷವಾಗಿ ಇವರ ಆಡಳಿತಕ್ಕೆ ಒಳಗಾಯಿತು. ಪ್ರಾರಂಭದಲ್ಲಿ ವಿಜಯನಗರದ ಅರಸರು ಆಂಧ್ರ ಪ್ರದೇಶದ ಮೇಲೆ ಯುದ್ಧಗಳನ್ನು ನಡೆಸುತ್ತಾ ಬಂದರು. ಒಂದನೆಯ ದೇವರಾಯನನ್ನು ಆಂಧ್ರದ ರಾಚಕೊಂಡ ಹಾಗೂ ಕೊಂಡವೀಡಿನ ರೆಡ್ಡಿ ಪ್ರದೇಶಗಳನ್ನು ವಶಪಡಿಸಿಕೊಂಡನು. ಕೃಷ್ಣದೇವರಾಯನು ಕೊಂಡವೀಡು, ಉದಯಗಿರಿ ರಾಯಚೂರಿನ ಮೇಲೆ ಯುದ್ಧ ಸಾರಿ ಈ ಪ್ರದೇಶಗಳನ್ನು ವಶಪಡಿಸಿಕೊಂಡನು ಎಂದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಇದನ್ನು ನ್ಯೂನಿಚ್ ಕೂಡ ಬರೆದಿದ್ದಾನೆ. ವಾರಂಗಲ್ಲು ಕೃಷ್ಣೆಯ ದಕ್ಷಿಣಕ್ಕಿರುವ ಬೆಲ್ಲಂಕೊಂಡ ಪ್ರದೇಶಗಳನ್ನು ವಶಪಡಿಸಿಕೊಂಡನು.[೨೯] ಅಲ್ಲದೆ ವಿಜಯನಗರದ ಅವನತಿಗೆ ರಾಯಚೂರು ಜಿಲ್ಲೆಯ ದೋ-ಅಬ್ ಪ್ರದೇಶ ಪ್ರಮುಖ ಕಾರಣವಾಗಿದೆ. ಇದರ ಸಲುವಾಗಿ ಬಹಮನಿ ಮತ್ತು ವಿಜಯನಗರಗಳ ಮಧ್ಯೆ ನಡೆದ ಯುದ್ಧಗಳು ದೇವದುರ್ಗ ಪ್ರದೇಶದಲ್ಲಿ ಜರುಗಿವೆ. ಅಲ್ಲದೆ ೧೫೨೦ರ ಯುದ್ಧ ಅದಿಲ್‌ಶಾಹಿಗಳೊಂದಿಗೆ ನಡೆದದ್ದು ಕೊಪ್ಪ, ಗುಂಡಗುರ್ಚಿ, ಗೊಬ್ಬೂರು ಪ್ರದೇಶಗಳಲ್ಲಿ. ಹೀಗೆ ದೇವದುರ್ಗ ವ್ಯಾಪ್ತಿಯಲ್ಲಿ ಬರುವ ಹೊಳೆಸಾಲಿನಲ್ಲಿ ಯುದ್ಧ ನಡೆದಿವೆ. ಈ ಎಲ್ಲಾ ಕಾರಣಗಳಿಂದ ರಾಯಚೂರಿನ ದೋ-ಅಬ್ ಪ್ರದೇಶ ವಿಜಯನಗರ ಆಳ್ವಿಕೆಗೆ ಒಳಪಟ್ಟಿತ್ತು.[೩೦]

೧೧. ಬಹಮನಿ ಸುಲ್ತಾನರು

ಕ್ರಿ.ಶ. ೧೩೪೬ರಲ್ಲಿ ಮಹಮ್ಮದ್ ಬಿನ್ ತುಘಲಕನ ವಿರುದ್ಧ ಅನೇಕ ಪ್ರಾಂತ್ಯಗಳು ದಂಗೆ ಎದ್ದವು. ಆ ವೇಳೆಗೆ ದೌಲತ್‌ಬಾದ್ ಪತನವಾಯಿತು. ಇದಕ್ಕೆ ಪ್ರಮುಖ ಕಾರಣನಾದ ದಕ್ಷಿಣದ ಪಥದ ಅಫಘನ್ ರಾಜನಾದ ಇಸ್ಮಾಯಿಲ್ ಮುಖ ಅಥವಾ ನಾಸಿಕ್-ಉದ್-ದಿನ್-ಷಾನು ಸಮರ್ಥ ಅಧಿಕಾರಿಯಾದ ಹಸನ್ ಗಂಗು ಎಂಬುವವನಿಗೆ ತನ್ನ ನಾಯಕತ್ವದ ಜವಾಬ್ದಾರಿ ವಹಿಸಿಕೊಟ್ಟನು. ಆಗ ೧೩೪೭ರಲ್ಲಿ ಹಸನ್ ಗಂಗುನ ಅನುಯಾಯಿಗಳೆಲ್ಲರೂ ಈತನನ್ನು ರಾಜನನ್ನಾಗಿ ಮಾಡಲು ಬೆಂಬಲಿಸಿದರು. ನಂತರ ಬಹಮನಿ ಸಾಮ್ರಾಜ್ಯವನ್ನು ಇತಿಹಾಸದಲ್ಲಿ ಪ್ರಸಿದ್ಧಿಯನ್ನು ಪಡೆಯುವಂತೆ ರಾಜ್ಯವನ್ನು ಸ್ಥಾಪಿಸಿದನು. ಗುಲಬರ್ಗಾ ಮಸೀದಿಯೊಂದರ ಪರ್ಶಿಯನ್ ಶಾಸನವು ಈತನಿಗೆ ಸಿಖಂದರ್-ಇ-ಸಾನಿ ಅಲ್ಲಾವೋದ್ದೀನ್ ಹಸನ್ ಬಹಮನ್ ಷಾ ಅಲ್‌ಬಲಿ ಎಂಬ ಬಿರುದು ಇತ್ತೆಂದು ಉಲ್ಲೇಖಿಸುತ್ತದೆ. ಬಹಮನಿ ಎಂಬುದು ಈತನ ಮನೆತನದ ಅಥವಾ ವಂಶದ ಮೂಲ ವ್ಯಕ್ತಿಯ ಹೆಸರು ಎಂಬ ಅಭಿಪ್ರಾಯವಿದೆ. ಈತನು ಸುಮಾರು ಹನ್ನೊಂದು ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ಹೆಚ್ಚಿನ ಕಾಲವನ್ನು ಯುದ್ಧ ಮತ್ತು ಸಂಧಾನದ ಮಾತುಗಳಲ್ಲಿ ಕಳೆದನೆಂದು ತಿಳಿದುಬರುತ್ತದೆ.[೧]

ದೌಲತ್‌ಬಾದ್‌ನ ಪರ್ಶಿಯನ್ ಶಾಸನದಲ್ಲಿ ಹಸನ್ ಗಂಗುವನ್ನು "ಸುಲ್ತಾನ ಅಬ್ದುಲ್ ಮುಸಾಫಕ್ ಅಲ್ಲಾ-ಉದ್-ದಿನ್ ಬಹಮನ್ ಷಾ" ಎಂದು ಹೆಸರಿಸಲಾಗಿದೆ. ಸುಲ್ತಾನ್ ಅಲ್ಲವೋದ್ದೀನ್ ಬಹಮನ್ ಷಾ ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ಸ್ಥಳೀಯ ಅಮೀರರುಗಳ ಸಹಾಯದಿಂದ ಮತ್ತು ತುಘಲಕನ ತತ್ವಗಳ ಆಧಾರದ ಮೇಲೆ ಆಡಳಿತ ಭದ್ರಪಡಿಸಿದ್ದನೆಂದು ಚರಿತ್ರೆಕಾರರ ಅಭಿಪ್ರಾಯವಾಗಿದೆ.[೨]

ಅಲ್ಲಾವೊದ್ದೀನ್ ಬಹಮನ್ ಷಾ ತನ್ನ ರಾಜ್ಯವನ್ನು ನಾಲ್ಕು ತಕಫ್ ಅಥವಾ ವಿಭಾಗಗಳನ್ನಾಗಿ ವಿಂಗಡಿಸಿದನೆಂದು ತಿಳಿದುಬರುತ್ತದೆ. ಅವುಗಳಲ್ಲಿ ಪ್ರಮುಖವಾದ ಅಹಸನಬಾದ್ ಗುಲಬರ್ಗಾ< ದೌಲತಬಾದ್, ಬೀದರ್ ಮತ್ತು ಕಂದಹಾರ ಹೀಗೆ ಈ ಪ್ರದೇಶಗಳಲ್ಲಿ ಗುಲಬರ್ಗಾವೇ ಮುಖ್ಯ ಆಡಳಿತ ಘಟಕವಾಗಿತ್ತು. ಆಡಳಿತ ನಿಯಂತ್ರಣವನ್ನು ಬಹಮನ್ ಷಾ ತುಘಲಕನ ಆಡಳಿತ ಪದ್ಧತಿಯಂತೆ ರೂಪಿಸಿದನು. ಆಯಾ ಅಧಿಕಾರಿಗಳ ಕಾರ್ಯಗಳು ಮತ್ತು ಹುದ್ದೆಗಳು ಈ ರೀತಿ ಇದ್ದವು. ಸಾಹಿಬ್-ಇ-ಆರ್ಜ್(ಸೈನ್ಯವನ್ನು ಪರಿಶೀಲಿಸುವರು), ದಿವಾನ್(ಮಂತ್ರಿ), ದವತದಾರ್(ಮುದ್ರಾಧಿಕಾರಿ), ಹಾಜೀಬ್ ಉಲ್-ಕಾಸಬಾಹ್(ನಗರ ಪೋಲೀಸ್ ಅಧಿಕಾರಿ), ಶಹ್ವಾ-ಇ-ಬರ್ಗಾ(ದರ್ಬಾರ ಅಧಿಕಾರಿ), ಸರ್.ಪರದಾಹದಾರ್(ನೇಪಥ್ಯಾಧಿಕಾರಿ) ಹೀಗೆ ಅಧಿಕಾರಿ

ಗಳನ್ನು ನೇಮಕ ಮಾಡಿಕೊಂಡು ಅವರವರಿಗೆ ಒಂದೊಂದು ಜವಾಬ್ದಾರಿಯುತ ಕಾರ್ಯಗಳನ್ನು ವಹಿಸಿಕೊಟ್ಟಿದ್ದನೆಂದು ತಿಳಿದುಬರುತ್ತದೆ.[೩೩]

ಹೀಗೆ ಅಲ್ಲಾವೋದ್ದೀನ್ ಬಹಮನ್ ಷಾನು ಸುಮಾರು ಹನ್ನೊಂದು ವರ್ಷ ಸಮರ್ಥ ಆಡಳಿತ ನಡೆಸಿದನೆಂದು ಚರಿತ್ರೆ ಪುಟಗಳು ಹೇಳುತ್ತವೆ. ಗುಲಬರ್ಗಾ ಬಹುಮನಿ ಸುಲ್ತಾನರ ರಾಜಧಾನಿಯಾದ ಮೇಲೆ ರಾಯಚೂರನ್ನು ತನ್ನ ವಶಕ್ಕೆ ತೆಗೆದುಕೊಂಡರು ಎಂದು ತಿಳಿದುಬರುತ್ತದೆ. ಇವರ ರಾಜ್ಯಾಡಳಿತ ರಾಯಚೂರುವರೆಗೆ ವಿಸ್ತರಿಸಿದೆ ಎಂದಾಗ ರಾಯಚೂರು ಮತ್ತು ಗುಲಬರ್ಗಾ ನಡುವೆ ಇರುವ ಯಾದಗಿರಿ ಸಹ ಸುಲ್ತಾನರ ಆಡಳಿತಕ್ಕೆ ಒಳಪಟ್ಟಿರಬೇಕೆಂದು ಕಂಡುಬರುತ್ತದೆ.

ಏಕೆಂದರೆ ಯಾದಗಿರಿ ನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಮುಸ್ಲಿಂ ದೊರೆಗಳ ಆಡಳಿತ ಕಾಲದ ಶಾಸನಗಳು, ಸ್ಮಾರಕಗಳು ಮತ್ತು ಹಲವು ಅವಶೇಷಗಳು ಕಂಡುಬರುವುದು. ಯಾದಗಿರಿಯ ಗಿರಿದುರ್ಗದಲ್ಲಿ ಆ ಅರಸರ ದರ್ಬಾರ್, ಸ್ಮಾರಕಗಳು, ಮಸೀದಿ, ಶಾಸನಗಳು ಇನ್ನಿತರ ಅವಶೇಷಗಳು ಇವೆ. ಶಹ್ನಾ-ಇ-ಬರ್ಗಾ ದರ್ಬಾರ್ ಅಧಿಕಾರಿಗಳ ವಂಶಸ್ಥರ ಮನೆತನ ನಮ್ಮದಾಗಿದೆಯೆಂದು ಇಲ್ಲಿನ ಪುರಸಭೆಯ ಮಾಜಿ ಅಧ್ಯಕ್ಷರಾದ ಅಜೀಜ್ ಅಹಮ್ಮದ್ ಶಹ್ನಾ ಹೇಳಿಕೊಳ್ಳುತ್ತಾರೆ.

ಕ್ರಿ.ಶ. ೧೩೭೮ರಲ್ಲಿ ಬಹಮನಿ ಸಿಂಹಾಸನವನ್ನೇರಿದ ಎರಡನೆಯ ಮಹಮ್ಮದ್ ಷಾನು ಒಬ್ಬ ನಿಷ್ಠಾವಂತ ಆಡಳಿತಗಾರ ಮತ್ತು ಪಂಡಿತನು ಆಗಿದ್ದನು. ತನ್ನ ಆಸ್ಥಾನದಲ್ಲಿ ಸದರ್-ಇ-ಜಹಾನ್(ಮುಖ್ಯ ನ್ಯಾಯಾಧೀಶ)ನನ್ನಾಗಿ ಫೆಜುಲ್ಲಾ ಅಂಜು ಎಂಬ ಪ್ರಸಿದ್ಧ ಪಂಡಿತನನ್ನು ನೇಮಕ ಮಾಡಿದ್ದನು. ಜನಹಿತ ಕಲ್ಯಾಣವೇ ಮಹಮ್ಮದ್ ಷಾನ ಮುಖ್ಯ ಉದ್ದೇಶವಾಗಿತ್ತು. "ಈತನ ಕಾಲದಲ್ಲಿ ಗುಲಬರ್ಗಾ ಮಸೀದಿ ಕಟ್ಟಿಸಿದ ವಿಧಿಯ ೧೩೯೪-೯೫ ಪರ್ಶಿಯನ್ ಶಾಸನವು ಉಲ್ಲೇಖಿಸುತ್ತದೆ." ಈತನ ತರುವಾಯ ಮಕ್ಕಳಾದ ಘಿಯಾಸೋದ್ದಿನ್ ಮತ್ತು ಶಮ್ಸುದ್ದೀನ್ ಇಬ್ಬರು ಒಬ್ಬರ ನಂತರ ಒಬ್ಬರು ಅಧಿಕಾರಕ್ಕೆ ಬಂದರು.[೩೪]

ಬಹಮನಿ ಅರಸರಲ್ಲಿಯೇ ಅತ್ಯಂತ ಸುಪ್ರಸಿದ್ಧ ದೊರೆಯಾದ ಸುಲ್ತಾನ್ ಫಿರೋಜನು ೧೩೯೭ ರಲ್ಲಿ ಪಟ್ಟಕ್ಕೆ ಬಂದನು. ಈತನು ತನ್ನ ಆಡಳಿತವನ್ನು ಪವಿತ್ರ ಕುರಾನ್ ಗ್ರಂಥದ ತತ್ವಗಳ ಆಧಾರದ ಮೇಲೆ ನಡೆಸಿದ ಕಾರಣ ಎಲ್ಲರಿಗೂ ಸಮಾನತೆ ದೊರೆಯುವಂತಾಯಿತು. ಅದರಲ್ಲಿ ಸ್ತ್ರೀಯರಿಗೆ ಉತ್ತಮ ಸ್ಥಾನಮಾನಗಳು ದೊರೆತವು. ದಕ್ಷ ಆಡಳಿತಗಾರನಾಗಿದ್ದ ತಾಜೋದ್ದೀನ್ ಫೀರೋಜನು ಸಾಂಸ್ಕೃತಿಕ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದನು. ಈತನು ಆಸ್ಥಾನದಲ್ಲಿ ಒಳ್ಳೆಯ ಕವಿಗಳು, ಸಂಗೀತಗಾರರು, ತತ್ವಜ್ಞಾನಿಗಳು, ಚರಿತ್ರೆಕಾರರು

ಇದ್ದರೆಂದು ತಿಳಿದುಬರುವುದು. ಫಿರೋಜನು ವಿಜಯನಗರ ಮೇಲೆ ಮೂರು ಬಾರಿ ದಂಡೆತ್ತಿ ಹೋದನು. ಖೆರ್ಲಾದ ನರಸಿಂಗರಾಯನ ಯುದ್ಧದಲ್ಲಿ ಪರಾಭವಗೊಂಡಾಗ ಅವನನ್ನು ಬಹಳ ಗೌರವಯುತವಾಗಿ ಕಂಡನೆಂದು ತಿಳಿದುಬರುತ್ತದೆ. ಸ್ವತ ಕವಿಯಾದ ಈತನು ವಾಸ್ತುಶಿಲ್ಪ ಕಲೆಯಲ್ಲಿ ವಿಶೇಷ ಆಸಕ್ತಿ ವಹಿಸಿದನೆಂದು, ಗುಲಬರ್ಗಾ ಹಾಗೂ ಫಿರೋಜಾಬಾದ್‌ಗಳಲ್ಲಿ ಅನೇಕ ಕಟ್ಟಡಗಳನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ.

ಸುಮಾರು ೨೫ ವರ್ಷಗಳ ಆಳ್ವಿಕೆ ಮಾಡಿದ ಈತನು ವಿಜಯನಗರ ಅರಸರ ವಿರುದ್ಧ ಅಷ್ಟೇ ಅಲ್ಲ, ಅವರ ಹಿತೈಷಿಗಳ ವಿರುದ್ಧವೂ ಹೋರಾಟ ಮಾಡಬೇಕಾಯಿತು. ೧೪೦೬ರಲ್ಲಿ ವಿಜಯನಗರ ಮೊದಲನೆಯ ದೇವರಾಯನೊಡನೆ ಯುದ್ಧ ಮಾಡಿ ವಿಜಯಿಯಾಗಿ ಆತನ ಮಗಳನ್ನು ವಿವಾಹವಾಗಿ ಬಂಕಾಪುರವನನು ವರದಕ್ಷಿಣೆ ರೂಪದಲ್ಲಿ ಪಡೆದನು. ಆರಂಭಿಕ ಸಾಧನೆಗಳ ಆಕಾಂಕ್ಷಿಯಾದ ಫಿರೋಜನು ಅನೇಕ ಪ್ರಾಂತಗಳನ್ನು ಗೆಲ್ಲಲು ಹವಣಿಸುತ್ತಿರುವಾಗಲೇ ಒಮ್ಮೆ ಸೋಲುಂಟಾಗುತ್ತದೆ. ಇದೇ ಸಂದರ್ಭದಲ್ಲಿ ವಿಜಯನಗರದ ಸೈನ್ಯವು ಹಾನಗಲ್ ಮೇಲೆ ದಾಳಿ ಮಾಡಿ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ. ಆಗ ಫಿರೋಜನು ಸೋಲುಂಟಾಗಿ ಅತೃಪ್ತಿ ಹೊಂದುತ್ತಾನೆ. ಅಷ್ಟಾದರೂ ರಾಯಚೂರಿನ ದೋ-ಅಬ್ ಅನ್ನು ಉಳಿಸಿಕೊಳ್ಳುತ್ತಾನೆ. ಹೀಗೆ ತನ್ನ ಅಧಿಕಾರವನ್ನು ಚಲಾಯಿಸುತ್ತಾ ತನ್ನ ಮಗನಿಗೆ ಪಟ್ಟಾಭಿಷೇಕ ಮಾಡುತ್ತಾನೆ. ಮುಂದೆ ಆಡಳಿತಕ್ಕೆ ಬಂದ ಸುಲ್ತಾನರು ಅಸಮರ್ಥರಾಗಿದ್ದರಿಂದ ಬಹುಮನಿ ಸಾಮ್ರಾಜ್ಯವು ಪತನದ ಹಂಚಿನ ಕಡೆಗೆ ಸಾಗುತ್ತದೆ.[೩೫]

೧೨. ಬಿಜಾಪುರದ ಆದಿಲ್‌ಶಾಹಿಗಳು

ಬಹಮನಿ ಸಾಮ್ರಾಜ್ಯವು ಪತನಗೊಂಡ ನಂತರ ಅಸ್ತಿತ್ವಕ್ಕೆ ಬಂದ ಐದು ಪ್ರಮುಖ ಷಾಹಿ ರಾಜ್ಯಗಳಲ್ಲಿ ಬಿಜಾಪುರದ ಆದಿಲ್‌ಶಾಹಿಗಳ ಸಾಮ್ರಾಜ್ಯವು ಪ್ರಮುಖವಾದುದು. ಯೂಸುಫ್ ಆದಿಲ್‌ಖಾನನು ಕ್ರಿ.ಶ.೧೪೯೦ರಲ್ಲಿ ಸ್ವತಂತ್ರವಾಗಿ ಹೊಸದೊಂದು ರಾಜ್ಯವನ್ನು ಸ್ಥಾಪಿಸಿಕೊಂಡನೆಂದು ತಿಳಿದುಬರುತ್ತದೆ.[೩೬] ಕ್ರಿ.ಶ.೧೫೧೦ರಲ್ಲಿ ಗೋವೆಯನ್ನು ಪೋರ್ಚುಗೀಸರಿಂದ ಕಿತ್ತುಕೊಂಡನು. ಇದರ ತರುವಾಯ ಅದೇ ವರ್ಷ ಸಂಭವಿಸಿದ ವಿಜಯನಗರ ವಿರುದ್ಧದ ಯುದ್ಧದಲ್ಲಿ ಯೂಸುಪ್ ಆದಿಲ್‌ಶಾಹಿ ನಿಧನನಾದನು. ನಂತರ ಒಂದನೆಯ ಇಬ್ರಾಹಿಂನು ಬಿಜಾಪುರದ ಸುಲ್ತಾನನಾಗುತ್ತಾನೆ. ಈತನ ಆಡಳಿತ ಅವಧಿಯಲ್ಲಿ ಮೊದಲ ಬಾರಿಗೆ ಕನ್ನಡ ಮತ್ತು ಮರಾಠಿ ಭಾಷೆಗಳನ್ನು ಅಧಿಕೃತ ಭಾಷೆಗಳೆಂದು ಜಾರಿಗೆ ತಂದನು. ಹೀಗೆ ಈತನ ಆಳ್ವಿಕೆ ಕಾಲದಲ್ಲಿ ಬಹಳಷ್ಟು ಮಾರ್ಪಾಡುಗಳನ್ನು ಜಾರಿಗೆ ತಂದನೆಂದು ತಿಳಿದುಬರುತ್ತದೆ. ಮುಂದೆ ಈತನ ಮಗನಾದ ಒಂದನೆಯ ಅಲಿ ಆದಿಲ್‌ಶಾಹನ ಆಳ್ವಿಕೆಯ ಕಾಲದಲ್ಲಿ ಯಾದಗಿರಿ ಆಧಾರ

ಮಸೀದಿಯ ದ್ವಾರದ ಮೇಲಿರುವ ಶಾಸನವು ಕ್ರಿ.ಶ.೧೫೬೩ರಲ್ಲಿ ಮಲೂರ್ಜಾ ಅಲಿಯ ಮಗನಾದ ಖ್ವಾಜಾ ಹಸನ್ ಹೀಗೆ ಅನೇಕ ಸುಲ್ತಾನರ ಆಳ್ವಿಕೆಗೆ ಒಳಗಾಯಿತು.

ಆದಿಲ್‌ಶಾಹಿ ಮನೆತನದಲ್ಲಿ ಸಮರ್ಥ ಅರಸನಾದ ಇಮ್ಮಡಿ ಇಬ್ರಾಹಿಂನು ಅಧಿಕಾರಕ್ಕೆ ಬಂದನು. ಈತನ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಹೆಚ್ಚಿನ ಮಹತ್ವ ಕೊಟ್ಟನೆಂದು ಕಂಡು ಬರುತ್ತದೆ. ಮುಂದೆ ಅಧಿಕಾರಕ್ಕೆ ಬಂದ ಸುಲ್ತಾನರ ಅಸಮರ್ಥತೆಯ ಲಾಭವನ್ನು ಪಡೆದು ಮೊಘಲ್ ಸುಲ್ತಾನ್ ಔರಂಗಜೇಬನು ಬಿಜಾಪುರದ ಮೇಲೆ ದಾಳಿ ಮಾಡಿ ಈ ಪ್ರದೇಶವನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡಿದ್ದನೆಂದು ತಿಳಿದುಬರುತ್ತದೆ.[೩೭]

೧೩. ಹೈದರಾಬಾದ್ ನಿಜಾಮ್ ಮನೆತನ

ಗೋಲ್ಕೊಂಡದ ಕುತ್ಬ್ ಶಾಹಿ ಮನೆತನದ ಅಸಮರ್ಥ ಸುಲ್ತಾನ ಅಬ್ದುಲ್ ಕುತ್ಬ್ ಶಾಹನ ಆಳ್ವಿಕೆಯ ಕಾಲದಲ್ಲಿ ಮೊಘಲರ ಸುಲ್ತಾನನಾದ ಔರಂಗಜೇಬನು ದಖ್ಖನ್ ಪ್ರದೇಶದ ಪ್ರತಿನಿಧಿಯಾಗಿದ್ದನು. ಹೇಗಾದರೂ ಮಾಡಿ ಗೋಲ್ಕೊಂಡವನ್ನು ಗೆದ್ದುಕೊಳ್ಳಬೇಕೆಂದು ಕಾತರನಾಗಿದ್ದು, ಅವಕಾಶಕ್ಕಾಗಿ ಕಾಯುತ್ತಿದ್ದನು. ಗೋಲ್ಕೊಂಡದ ಅಬ್ದುಲ್ ಹಸನ್ ಕುತ್ಬು ಶಾಹನ ಕಾಲದಲ್ಲಿ ಅಂತಹ ಅವಕಾಶ ಒದಗಿಬಂದಿತ್ತು. ಇದರಿಂದ ಔರಂಗಜೇಬನು ಸಂಪೂರ್ಣವಾಗಿ ಗೋಲ್ಕೊಂಡವನ್ನು ವಶಪಡಿಸಿ ಮೊಘಲ್ ಸಾಮ್ರಾಜ್ಯಕ್ಕೆ ವಿಲೀನ ಮಾಡಿಕೊಂಡನು. ಗೋಲ್ಕೊಂಡವನ್ನು ಸ್ವತಂತ್ರವಾಗಿ ಬಿಡದೇ ತನ್ನ ಪ್ರತಿನಿಧಿಯನ್ನು ನೇಮಿಸಿ ಮೊಘಲ್ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯಕ್ಕೆ ಸೇರಿಸಿದನು. ಇದರ ಪ್ರಾಂತ್ಯಾಧಿಕಾರಿಯಾಗಿ ಮೀರ್ ಕಮುರುದ್ದೀನನ್ನು ನೇಮಕ ಮಾಡಿದನು. ಔರಂಗಜೇಬನ ಮರಣದ ನಂತರ ಅವನ ನೆಚ್ಚಿನ ದಂಡನಾಯಕನಾಗಿ ಸೇವೆ ಸಲ್ಲಿಸಿದ ನಿಜಾಮ್ ಉಲ್-ಮುಲ್ಕ್ ಅಸಫ್‌ಶಹ ೧೯೧೩ರಲ್ಲಿ ನಿಜಾಮ್ ಅಸಫ್ ಶಾಹ ವಂಶದ ಸ್ಥಾಪನೆಯನ್ನು ಮಾಡಿದನು. ನಿಜಾಮ್-ಉಲ್-ಮುಲ್ಕ ಅಸಫಶಾಹ ಮೊಘಲರ ಅಧೀನದಿಂದ ಸ್ವತಂತ್ರವಾಗಿ ನಿಜಾಮ್ ಮನೆತನ ಆಳ್ವಿಕೆ ಮಾಡಿತು. ಸುಮಾರು ೧೭೨೪ರಿಂದ ೧೯೪೮ರ ವರೆಗೆ ಏಳು ಜನ ನಿಜಾಮರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತು.[೩೮]

ನಿಜಾಮ್ ಕಾಲದ ಸ್ಥಳೀಯ ರಾಜಮನೆತನಗಳು

ಹೈದರಾಬಾದ್ ನಿಜಾಮರ ಸಂಸ್ಥಾನ ಹೆಚ್ಚು ಚರ್ಚೆಗೆ ಗ್ರಾಸವಾದ ಸಂಸ್ಥಾನವಾಗಿತ್ತು. ಇಂದಿನ ಕರ್ನಾಟಕ, ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳ ಹದಿನಾರು ಜಿಲ್ಲೆಗಳನ್ನು ಈ ಸಂಸ್ಥಾನ ಹೊಂದಿತ್ತು. ಇಲ್ಲಿಯವರೆಗೆ ನಡೆದ ಅಧ್ಯಯನಗಳು ನಿಜಾಮರ ಆಳ್ವಿಕೆಯನ್ನು ವಿರೋಧಿಸುತ್ತಾ ಭಾರತದ ಸ್ವಾತಂತ್ರ್ಯ ಮತ್ತು ಭಾರತದಲ್ಲಿ ವಿಲೀನ ಪ್ರಕ್ರಿಯೆಯ ನೆಲೆಯಲ್ಲಿಯೇ

ನೋಡಿರುವುದು ಹೆಚ್ಚು. ಆದರೆ ನಿಜಾಮ್ ಆಳ್ವಿಕೆಯ ಸಮಯದಲ್ಲಿ ಸಂಸ್ಥಾನದಲ್ಲಿದ್ದ ಸ್ಥಳೀಯ ಮನೆತನಗಳ ಬಗೆಗೆ ಹೆಚ್ಚಿನ ಚರ್ಚೆ ಆಗದೆ, ಕೇವಲ ನಿಜಾಮ್ ಆಳ್ವಿಕೆಯನ್ನೆ ಕೇಂದ್ರವಾಗಿಟ್ಟುಕೊಂಡು ಬಂದಿರುವ ಅಧ್ಯಯನಗಳ ಸಂಖ್ಯೆಯೆ ಹೆಚ್ಚಾಗಿವೆ. ನಿಜಾಮನ ಆಡಳಿತ ವಿವರಿಸುತ್ತಾ ಸ್ಥಳೀಯ ಮನೆತನಗಳ ಬಗ್ಗೆ ಬೆಳಕು ಚೆಲ್ಲಿರುವ ಬರಹಗಾರರಾದ ಕಪಟರಾಳ ಕೃಷ್ಣರಾಯ, ಬಿ.ಕೃಷ್ಣಮಾಚಾರ್ಯ, ಗೋಪಾಲರಾವ್ ಹೇಜೇಬ್, ಪರ್ವಿನ ಸುಲ್ತಾನ, ಬಿ.ಸಿ.ಮಹಾಬಲೇಶ್ವರಪ್ಪ ಮತ್ತು ಅಮರೇಶ ನುಗಡೋಣಿ ಮುಂತಾದವರ ಬರಹಗಳನ್ನು ಬಳಸಿಕೊಂಡು ನಿಜಾಮರ ಅಧೀನದಲ್ಲಿದ್ದ ಸ್ಥಳೀಯ ಮನೆತನಗಳ ಬಗೆಗೆ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ವಿಜಯನಗರ ಪತನದ ನಂತರ ಹೈದರಾಬಾದ್ ಕರ್ನಾಟಕ ಪ್ರದೇಶ ಬಿಜಾಪುರದ ಆದಿಲ್‌ಶಾಹಿಗಳ ಅಧೀನಕ್ಕೊಳಪಡುತ್ತದೆ. ಈ ಕಾಲಾವಧಿಯಲ್ಲಿ ಈ ಪ್ರದೇಶದಲ್ಲಿ ಸಣ್ಣಪುಟ್ಟ ಸಂಸ್ಥಾನಗಳು ಉದಯವಾದದ್ದು ಕಂಡುಬರುತ್ತದೆ. ಈ ಸಂಸ್ಥಾನಗಳ ಸಂಸ್ಥಾನಿಕರಣ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಸಾಮಂತ ಪದ್ಧತಿಯ ಷರತ್ತುಗಳಂತೆ ಇಲ್ಲಿಯೂ ಅವುಗಳನ್ನು ಅನ್ವಯಿಸಿಕೊಂಡಿರುವುದು ಗೋಚರಿಸುತ್ತದೆ. ಆ ಮೂಲಕ ಸ್ವತಂತ್ರತೆ ಹೊಂದಿರುವುದನ್ನು ಗಮನಿಸಬಹುದು. ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಈ ಸಂಸ್ಥಾನಿಕರು ಪ್ರಭಾವಿಗಳಾಗಿ ಗುರುತಿಸಿಕೊಂಡಿದ್ದರು. ಸಂಸ್ಥಾನಗಳ ಹುಟ್ಟಿನ ಬಗ್ಗೆ ಸ್ಪಷ್ಟವಾದ ನಿರೀಕ್ಷಿತ ಪ್ರಮಾಣದ ಆಕರಗಳು ಲಭ್ಯವಾಗುತ್ತಿಲ್ಲ. ದೊರೆತ ಮೌಖಿಕ ಆಕರಗಳ ಜೊತೆಗೆ ಇತರ ಆಕರಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಮೊಘಲರ ಪ್ರತಿನಿಧಿಯಾಗಿ ಅಧಿಕಾರ ವಹಿಸಿಕೊಂಡ ನಿಜಾಮರು ಆರಂಭದಲ್ಲಿ ಈ ಪ್ರದೇಶದ ಮೇಲೆ ಹೆಚ್ಚಿನ ಪ್ರಮಾಣದ ಪ್ರಭಾವ ಹೊಂದಿರಲಿಲ್ಲ. ಏಕೆಂದರೆ ಇಲ್ಲಿನ ಸಂಸ್ಥಾನೀಕರು ಪ್ರಬಲರಾಗಿದ್ದರು. ಇವರನ್ನು ಎದುರು ಹಾಕಿಕೊಂಡು ರಾಜ್ಯಭಾರ ಮಾಡುವುದು ಕಷ್ಟಕರವಾಗಿತ್ತು. ಒಂದು ಕಡೆ ಮರಾಠರ ಪ್ರಭಾವ ಮತ್ತೊಂದು ಕಡೆ ಮೈಸೂರಿನ ಸುಲ್ತಾನರ ಪ್ರಭಾವ ಹಾಗೂ ಬ್ರಿಟಿಶ್ ರಾಜಕೀಯ ತಂತ್ರಗಾರಿಕೆ ಇವೆಲ್ಲವುಗಳ ಮಧ್ಯೆ ಬಹು ಎಚ್ಚರಿಕೆಯಿಂದ ಆಡಳಿತ ನಡೆಸಬೇಕಾಯಿತು. ಈ ಎಲ್ಲ ಒತ್ತಡವನ್ನು ಗಮನಿಸುತ್ತ ಅಧಿಕಾರಕ್ಕೆ ಬಂದ ನಿಜಾಮ್ ನವಾಬ್ ಅಲಿಖಾನನು ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂಬಂತೆ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಳ್ಳುವುದು ಸೂಕ್ತವೆಂದು ಭಾವಿಸಿದನು. ಈ ಹಿನ್ನೆಲೆಯಲ್ಲಿ ಕ್ರಿ.ಶ. ೧೮೦೦ರಲ್ಲಿ ಬ್ರಿಟಿಶ್ ರಾಜಕೀಯ ನೀತಿಯಾದ ಸಹಾಯಕ ಸೈನ್ಯ ಪದ್ಧತಿಗೆ ನಿಜಾಮನು ಸಹಿ ಹಾಕಿದನು. ಇದು ನಿಜಾಮನಿಗೆ ಅನಿವಾರ್ಯವಾಗಿತ್ತು. ಈ ಪದ್ಧತಿಯಿಂದಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಸಂಸ್ಥಾನಿಕರ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಯಿತು. ಈ ಒಪ್ಪಂದಕ್ಕೆ ಪೂರಕವಾಗಿ ತಗಲುವ ಖರ್ಚು ವೆಚ್ಚಗಳನ್ನು ಸರಿದೂಗಿಸಲು ಇಲ್ಲಿನ ಸಂಸ್ಥಾನಿಕರು

ವಾರ್ಷಿಕ ಪೊಗದಿ ಸಲ್ಲಿಸುವಂತೆ ಮಾಡಿದನು. ಇದಕ್ಕೆ ಸುರಪುರ ಸಂಸ್ಥಾನವೇ ಸೂಕ್ತ ಉದಾಹರಣೆಯಾಗಿದೆ.[೩೮]

ನಿಜಾಮನು ತನ್ನ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ಮಾಡಿರುವ ಪ್ರಯತ್ನ ಒಂದೆಡೆಯಾದರೆ, ಬ್ರಿಟಿಶರು ತಮ್ಮ ವಸಾಹತು ನೀತಿಗೆ ಅನುಗುಣವಾಗಿ ನಿಜಾಮನ ಮೂಲಕ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಹಂತಹಂತವಾಗಿ ಎಲ್ಲ ಕ್ಷೇತ್ರಗಳಲ್ಲಿ ಹಸ್ತಕ್ಷೇಪ ಮಾಡಲಾರಂಭಿಸಿದರು. ಇದರಿಂದ ಏಕಕಾಲದಲ್ಲಿಯೇ ನಿಜಾಮರ ರಾಜಕೀಯ ನೀತಿ ಮತ್ತು ಬ್ರಿಟಿಶರ ಆರ್ಥಿಕ ನೀತಿಗಳ ಬೆಳವಣಿಗೆಗೆ ಕಾರಣವಾಯಿತು. ಇಲ್ಲಿ ನಿಜಾಮರು ಆಡಳಿತಾತ್ಮಕವಾಗಿ ಸಂಸ್ಥಾನದಲ್ಲಿ ಯಜಮಾನಿಕೆಯನ್ನು ಸಾಧಿಸಲು ಪ್ರಯತ್ನಿಸಿದರೆ, ಬ್ರಿಟಿಶರು ತಮ್ಮ ಆರ್ಥಿಕ ನೀತಿಗಳ ಮೂಲಕ ಪ್ರದೇಶದ ಸಂಪತ್ತನ್ನು ಕೊಳ್ಳೆಹೊಡೆದದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ನಿಜಾಮ್ ಮತ್ತು ಬ್ರಿಟಿಶರ ನೀತಿಗಳು ಭಿನ್ನ ಭಿನ್ನವಾಗಿದ್ದರೂ ಏಕಕಾಲದಲ್ಲಿಯೇ ಜರುಗಿರುವುದು ಗಮನಾರ್ಹ.[೩೯]

ನಿಜಾಮರು ಸಹಾಯಕ ಸೈನ್ಯ ಪದ್ಧತಿಗೆ ಒಳಗಾಗಿ ಆಡಳಿತಾತ್ಮಕವಾಗಿ ಹಲವು ಬದಲಾವಣೆಗಳನ್ನು ತಂದಿರುವುದು ಕಂಡುಬರುತ್ತದೆ. ಅಧಿಕಾರ ವಿಕೇಂದ್ರಿಕರಣ ನೀತಿಯ ಮೂಲಕ ಸಂಸ್ಥಾನಿಕರಲ್ಲಿಯೇ ಕೇಂದ್ರೀಕರಣಗೊಂಡಿದ್ದ ಅಧಿಕಾರವನ್ನು ಕಿತ್ತುಕೊಂಡು ಸಂಸ್ಥಾನೇತರರಿಗೆ ಹಂಚಿಕೆ ಮಾಡಿದರು. ಹೀಗೆ ಅಧಿಕಾರವನ್ನು ಪಡೆದವರನ್ನು ಗೌಡ, ಕುಲಕರ್ಣಿ, ನಾಡಗೌಡ, ಪಟೇಲ ಎಂದು ಗುರುತಿಸಬಹುದಾಗಿದೆ. ಈ ಮೂಲಕ ಅಧಿಕಾರ ಪಡೆದ ವರ್ಗ ಹೊಸ ಭೂಮಾಲೀಕರಾಗಿ ರೂಪುಗೊಂಡಿರುವುದು ಗಮನಿಸಬಹುದಾಗಿದೆ. ರಾಜಕೀಯವಾಗಿ ತಮ್ಮ ಸ್ಥಾನಮಾನವನ್ನು ಭದ್ರಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ ನಿಜಾಮರಿಗೆ ಸಂಸ್ಥಾನಿಕರನ್ನು ರಾಜಕೀಯವಾಗಿ ಮಟ್ಟಹಾಕಲು ಹಾಗೂ ದಂಗೆ ಏಳದಂತೆ ಅವರನ್ನು ನಿಯಂತ್ರಿಸಲು ಪರ್ಯಾಯ ಶಕ್ತಿ ಅಗತ್ಯವಿತ್ತು. ಇದನ್ನರಿತ ನಿಜಾಮರು ಸಂಸ್ಥಾನಿಕರ ಕೈಯಲ್ಲಿದ್ದ ಅಧಿಕಾರವನ್ನು ಮೊಟಕುಗೊಳಿಸಲು ಸ್ಥಳೀಯವಾಗಿ ಪ್ರಬಲವಾಗಿರುವವರಿಗೆ ಅಧಿಕಾರ ಹಂಚಿಕೆಯನ್ನು ಮಾಡಿದರು. ನಿಜಾಮರ ಈ ನೀತಿಯನ್ನು ಬ್ರಿಟಿಶರು ಬೆಂಬಲಿಸಿದರು.[೪೦]

ಹೀಗೆ ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಸ್ಥಳೀಯ ಅರಸು ಮನೆತನಗಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

೧. ಕನಕಗಿರಿ ಪಾಳೆಯಗಾರರು

ಕನಕಗಿರಿ ಪ್ರಸ್ತುತ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿದೆ. ಹಂಪಿಯಿಂದ ದಕ್ಷಿಣಕ್ಕೆ ಮೂವತ್ತೈದು ಕಿ.ಮೀ. ದೂರದಲ್ಲಿರುವ ಕನಕಗಿರಿ ಚಾರಿತ್ರಿಕವಾಗಿ ನಾಯಕರ ಆಡಳಿತ

ಕೇಂದ್ರವಾಗಿತ್ತು. ಕ್ರಿ.ಶ. ೧೫ನೇ ಶತಮಾನದಲ್ಲಿ ವಿಜಯನಗರ ಅರಸರಿಗೆ ಮಾಂಡಲೀಕರಾದ ಇವರು ಗುಜ್ಜಲ ವಂಶದ ನಾಯಕ ಮನೆತನದವರಾಗಿ ಆಡಳಿತ ಆರಂಭಿಸಿದರು. ೧೫೬೫ರಲ್ಲಿ ವಿಜಯನಗರ ಪತನಗೊಂಡ ನಂತರ ಕನಕಗಿರಿ ರಾಜ್ಯ ಕೆಲಕಾಲ ಬಿಜಾಪುರ ಆದಿಲ್‌ಶಾಹಿಗಳಿಗೆ ನಂತರ ಹೈದರಾಬಾದ್ ನಿಜಾಮ್ ಆಧೀನದಲ್ಲಿ ಮುಂದುವರೆದು ತನ್ನ ಅಸ್ತಿತ್ವವನ್ನು ಉಳಿಸಿ ಕೊಳ್ಳುತ್ತದೆ. ಭಾರತ ಸ್ವಾತಂತ್ರ್ಯಗೊಂಡು ನಂತರ ೧೯೪೮ರಲ್ಲಿ ನಡೆದ ಹೈದರಾಬಾದ್ ರಾಜ್ಯದ ವಿಮೋಚನೆಯವರೆಗೂ ಈ ಮನೆತನದವರು ಅಧಿಕಾರದಲ್ಲಿದ್ದರು.

ಪರಸಪ್ಪ ನಾಯಕ ಕನಕಗಿರಿಯ ಗುಜ್ಜಲವಂಶದ ಮೊದಲ ದೊರೆ. ಈತನು ತನ್ನ ಕುಟುಂಬದೊಡನೆ ಕನಕಗಿರಿ ಪ್ರದೇಶಕ್ಕೆ ಸುಮಾರು ೧೫ನೇ ಶತಮಾನದ ಆರಂಭಿಕ ವರ್ಷಗಳಲ್ಲಿ ಬಂದು ನೆಲೆಸಿದನು. ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಕನಕಗಿರಿಯ ಆಡಳಿತಗಾರನಾಗಿ ನೇಮಕಗೊಂಡಿದ್ದನು. ನಂತರ ನವಾಬ ಉಡಚಪ್ಪನಾಯಕ, ಕೆಲವಡಿ ಉಡಚಪ್ಪ ನಾಯಕ, ಒಂದನೆಯ ಕನಕಪ್ಪ ಉಡಚನಾಯಕ ಮುಂತಾದವರು ಆಳ್ವಿಕೆ ಮಾಡಿದರು. ಇಮ್ಮಡಿ ಉಡಚನಾಯಕನ ಆಡಳಿತ ಅವಧಿಯಲ್ಲಿ ಸುರಪುರದ ದೊರೆ ಹಸರಂಗಿ ಪಾಮನಾಯಕರ ಕೋಟೆಯನ್ನು ಮೊಘಲ್ ಸುಲ್ತಾನನಾದ ಔರಂಗಜೇಬನು ಮುತ್ತಿಗೆ ಹಾಕಿದನು. ಅವನಿಂದ ತಪ್ಪಿಸಿಕೊಂಡು ಕನಕಗಿರಿ ಇಮ್ಮಡಿ ಉಡಚನಾಯಕನಲ್ಲಿ ಆಶ್ರಯ ಕೋರಿಕೊಂಡಿದ್ದರಿಂದ ಆಶ್ರಯ ನೀಡಿದನು.[೪೧]

ಕನಕಪ್ಪ ನಾಯಕನ ನಂತರ ಅಧಿಕಾರಕ್ಕೆ ಬಂದ ಹಿರೇನಾಯಕನು ಕನಕಗಿರಿಯ ಕೊನೆಯ ಅರಸನಾಗಿದ್ದನು. ಇವನು ಮುಂಡರಗಿಯ ದೇಸಾಯಿ ಮಗಳನ್ನು ಹಾಗೂ ಬಾದರ ಬಂಡಿಯ ದಳವಾಯಿ ಹೆಂಡತಿಯನ್ನು ಅಪಹರಿಸಿದನು. ಇದರಿಂದ ದೇಸಾಯಿಗಳು ನಿಜಾಮ್ ಸಿಖಂದರ ರಝಾನ ಹತ್ತಿರ ದೂರು ನೀಡಿದರು. ಇದೇ ಸಮಯಕ್ಕೆ ಹೈದರಾಬಾದ್ ಪ್ರಧಾನಮಂತ್ರಿ ಚಂದೂಲಾಲನು ಹಂಪಿಯಿಂದ ಹೈದರಾಬಾದ್‌ಗೆ ಹೋಗುತ್ತಿರುವಾಗ ಹಿರೇನಾಯಕನ ಸೈನಿಕರಿಂದ ಕಿರುಕುಳ ಅನುಭವಿಸಿದನು. ಈ ಎಲ್ಲ ಬೆಳವಣಿಗೆಯಿಂದ ಕೋಪಗೊಂಡ ನಿಜಾಮ್ ಸುರಪುರದ ಪಾಮನಾಯಕನನ್ನು ಹಾಗೂ ಕನಕಗಿರಿಯ ಹಿರೆನಾಯಕನನ್ನು ಬಂಧಿಸಿ ತರಬೇಕೆಂದು ಆದೇಶಿಸಿ ದನು. ನಿಜಾಮನ ಆದೇಶದಂತೆ ಪಾಮನಾಯಕನು ಕನಕಗಿರಿಯ ಹಿರೆನಾಯಕನನ್ನು ಬಂಧಿಸಿ ಒಪ್ಪಿಸಿದನು. ಅಂದಿನಿಂದ ಕನಕಗಿರಿಯು ನಿಜಾಮ್ ಅಧೀನವಾಯಿತು.[೪೨]

೨. ಅರಕೇರಿ ಸಂಸ್ಥಾನ

ದೇವದುರ್ಗ ತಾಲೂಕಿನ ಅರಕೇರಿ ಗ್ರಾಮವೇ ಅಂದಿನ ಸಂಸ್ಥಾನದ ಕೇಂದ್ರ ಸ್ಥಳವಾಗಿತ್ತು. ಇದು ಗತ ಮತ್ತು ವರ್ತಮಾನದ ಸ್ಥಿತ್ಯಂತರಗಳ ನೆಲೆಯಾಗಿದೆ. ಈ ಸಂಸ್ಥಾನದ ಸಂಸ್ಥಾಪಕರು

ಮತ್ತು ಅದರ ಬೆಳವಣಿಗೆಗೆ ಕಾರಣರಾದವರು ಯಾರೆಂಬುದು ಅಸ್ಪಷ್ಟ. ಆದರೆ, ಚೊಕ್ಕಪ್ಪ ನಾಯಕ, ಬಡೆಸಾಹೇಬ್, ಕೆಸವಯ್ಯ ಗೌಡ ಎಂಬ ಹೆಸರುಗಳು ಮಾತ್ರ ಕೇಳಿಬರುತ್ತದೆ. ದೇವದುರ್ಗದ ಶಾಸನದ ಪ್ರಕಾರ ಕ್ರಿ.ಶ. ೧೮೦೦ರಿಂದ ಪ್ರಸ್ತುತದವರೆಗೆ ಈ ಸಂಸ್ಥಾನದ ವಿರುಪಣ್ಣ ನಾಯಕ ದೊರೆ ಎಂಬುವವರು ಸಿದ್ಧಪಡಿಸಿದ ವಂಶಾವಳಿಯನ್ನು ಗಮನಿಸಬಹುದಾಗಿದೆ. ಇದರ ವ್ಯಾಪ್ತಿಯೂ ಕೂಡ ಚಿಕ್ಕದಾಗಿತ್ತು. ಪ್ರಸ್ತುತ ಈ ಕುಟುಂಬ ಶಿಕ್ಷಣ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿದೆ. ಹಬ್ಬ ಹರಿದಿನಗಳಂದು ಇವರಿಗೆ ಗೌರವ ಸಿಗುತ್ತದೆ. ಕೊನೆಗೂ ಈ ಮನೆತನವು ಕೂಡ ಹೈದರಾಬಾದ್ ನಿಜಾಮರ ಅಧೀನಕ್ಕೆ ಒಳಗಾಗಿ ಅವರ ಆಣತಿಯಂತೆ ಅಧಿಕಾರ ನಡೆಸಿದರು.[೪೩]

೩. ಮಾನ್ವಿ ನಾಡಗೌಡಕಿ ಮನೆತನ

ರಾಯಚೂರು ಜಿಲ್ಲೆಯಲ್ಲಿ ಅನೇಕ ನಾಡಗೌಡ ಮನೆತನಗಳು ಆಳ್ವಿಕೆ ಮಾಡಿವೆ. ತಮ್ಮ ಆಡಳಿತ ಮತ್ತು ಅಧಿಕಾರದಿಂದ ಆರ್ಥಿಕವಾಗಿ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಗಳನ್ನು ಕೈಗೊಂಡ ಮನೆತನದಲ್ಲಿ ಮಾನ್ವಿ, ಸೀಕಲ್ ಮತ್ತು ಬಾಪೂರು ಎಂಬ ಮೂರು ಹಳ್ಳಿಗಳಿಂದ ಕೂಡಿದ ನಾಡಗೌಡಕಿ ಮನೆತನ ಒಂದು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ನಾಡಗೌಡ ಮನೆತನಗಳು ಎರಡು ವಿಧಗಳಲ್ಲಿ ಗುರುತಿಸಬಹುದು. ಮೊದಲನೆಯದು ಹಿರಿಯ ನಾಡಗೌಡ ಮನೆತನವೆಂದರೆ ೧೫ರಿಂದ ೩೦ ಹಳ್ಳಿಗಳು ಇದರ ವ್ಯಾಪ್ತಿಗೆ ಬರುತ್ತಿದ್ದವು. ಎರಡನೆಯದು ಕಿರಿಯ ನಾಡಗೌಡ ಮನೆತನವು ೧ರಿಂದ ೫ ಹಳ್ಳಿಗಳಿಂದ ಕೂಡಿರುತ್ತಿದ್ದವು. ಮಾನ್ವಿ, ಸೀಕಲ್ ಮತ್ತು ಬಾಪೂರು ಮೂರು ಹಳ್ಳಿಗಳಿಂದ ಕೂಡಿದ ಕಿರಿಯ ನಾಡಗೌಡ ಮನೆತನವಾಗಿತ್ತು. ಈ ಮನೆತನವು ಆರಂಭದಲ್ಲಿ ಬಿಜಾಪುರದ ಆದಿಲ್‌ಶಾಹಿ, ಹೈದರಾಬಾದ್ ನಿಜಾಮ್ ಮತ್ತು ಬ್ರಿಟಿಶರ ಅಂಕಿತದಲ್ಲಿದ್ದುಕೊಂಡು ಆಡಳಿತವನ್ನು ಮಾಡಿದವು.

ಮಾನ್ವಿ ನಾಡಗೌಡ ಮನೆತನವು ಪ್ರತಿವರ್ಷದಂತೆ ನಿಜಾಮ್ ಸರ್ಕಾರಕ್ಕೆ ನೀಡಬೇಕಾದ ಪೊಗದಿ ಹಣ ನೀಡದೆ ಇರುವುದರಿಂದ ಕೋಪಗೊಂಡ ನಿಜಾಮ್ ಸರ್ಕಾರವು ಹಣದ ವಸೂಲಿಗಾಗಿ ಸುಬೇದಾರರನ್ನು ಕಳುಹಿಸಿತ್ತು. ಸುಬೇದಾರ ಬರುವ ಸುದ್ದಿ ಅರಿತ ನಾಡಗೌಡನು ಪೊಗದಿ ಹಣ ನೀಡದೆ ಮಾನ್ವಿಯಿಂದ ಪಲಾಯನ ಮಾಡಿದನು; ಇದರಿಂದ ಕೋಪಗೊಂಡ ಸುಬೇದಾರನು ಅವರ ಹತ್ತಿರದ ಸಂಬಂಧಿಗಳಿಗೆ ಮಾನ್ವಿ ಮನೆತನದ ಅಧಿಕಾರವನ್ನು ಹಸ್ತಾಂತರಿಸಿದನು. ಹೀಗೆ ನಿಜಾಮರಿಂದ ಅಧಿಕಾರ ಪಡೆದುಕೊಂಡ ನಾಡಗೌಡರಲ್ಲಿಯೇ ರಾವ್‌ಬಹದ್ದೂರ್ ಸಿದ್ರಾಮಪ್ಪ ಪ್ರಮುಖರು. ತಾನು ಅಧಿಕಾರ ವಹಿಸಿಕೊಂಡ ನಂತರ ನಿಜಾಮ್ ಮತ್ತು ಬ್ರಿಟಿಶರ ಆಣತಿಯಂತೆ ಅಧಿಕಾರವನ್ನು ಚಲಾಯಿಸಿದನು.[೪೪]

ಹೀಗೆ ಆಳ್ವಿಕೆ ಮಾಡಿದ ನಾಡಗೌಡರಲ್ಲಿಯೇ ಚನ್ನಬಸಪ್ಪ ನಾಡಗೌಡರ ಮಡದಿಯಾದ ಜಡೆಯಮ್ಮ ರಾಣಿ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ಮಾಡಿದ ಸಾಧನೆಗಳು ಗಮನಾರ್ಹವಾಗಿವೆ. ೧೮೮೯ರಲ್ಲಿ ರಾಯಚೂರಿನಲ್ಲಿ ಜನಿಸಿದ ಜಡೆಯಮ್ಮ ಚನ್ನಬಸಪ್ಪ ನಾಡಗೌಡನನ್ನು ಮದುವೆಯಾಗಿ ನಾಡಗೌಡ ಮನೆತನಕ್ಕೆ ಬಂದಳು. ಮನೆತನದ ರಾಜ ವೈಭವಗಳಿಗೆ ಆಕರ್ಷಿತಳಾಗದೆ ಸಂಸ್ಥಾನದಲ್ಲಿದ್ದ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಪಣತೊಟ್ಟು ಸಂಸ್ಥಾನಗಳಲ್ಲಿ ಹೆಣ್ಣುಮಕ್ಕಳಿಗಾಗಿ ಶಾಲೆಗಳನ್ನು ತೆರೆದಳು. ಅಷ್ಟೇ ಅಲ್ಲದೆ ಶಾಲೆಯಲ್ಲಿ ಬೋಧನೆ ಮಾಡಲು ತಾನೇ ಮುಂದೆ ಬಂದು ಶಿಕ್ಷಕಿಯಾಗಿ ಸೇವೆ ಸಲ್ಲಿಸಿದಳು. ಜಡೆಯಮ್ಮಳಿಗೆ ಹೆಣ್ಣುಮಕ್ಕಳ ಬಗ್ಗೆ ಇರುವ ಸಾಮಾಜಿಕ ಕಳಕಳಿಯನ್ನು ನೋಡಿದ ನಿಜಾಮ್ ಸರ್ಕಾರವು ಜಡೆಯಮ್ಮಳಿಗೆ ಶಾಲೆಗೆ ಹೋಗಲು ಸವಾರಿಬಂಡಿಯ ವ್ಯವಸ್ಥೆ ಕಲ್ಪಿಸಿತು. ಹೀಗೆ ಮೂವತ್ತು ವರ್ಷಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ಅಂದಿನ ಮಹಿಳೆಯರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿ, ಸಾವಿರಾರು ಹೆಣ್ಣು ಮಕ್ಕಳನ್ನು ವಿದ್ಯಾವಂತರಾಗಿ ಮಾಡಿದ ಕೀರ್ತಿ ಇವಳಿಗೆ ಸಲ್ಲುತ್ತದೆ. ಹೀಗೆ ಮಾನ್ವಿ, ಸೀಕಲ್ ಮತ್ತು ಬಾಪೂರು ಮೂರು ಹಳ್ಳಿಗಳಿಂದ ಕೂಡಿದ ನಾಡಗೌಡಕಿ ಮನೆತನವು ಮಾಡಿರುವ ರಾಜಕೀಯ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಾಧನೆಗಳಿಂದ ಈ ಮನೆತನವು ಚರಿತ್ರೆಯ ಪುಟದಲ್ಲಿ ಶಾಶ್ವತವಾಗಿ ದಾಖಲಾಗಿದೆ.[೪೫]

೪. ಗೆಜ್ಜಲಗಟ್ಟ ದೇಸಾಯಿಗಳು

ವಿಜಯನಗರ ಸಾಮ್ರಾಜ್ಯದ ಪತನವಾದ ನಂತರ ಕೆಲವು ಸಣ್ಣಪುಟ್ಟ ದೇಸಗತಿ, ನಾಡಗೌಡ ಮತ್ತು ದೇಸಾಯಿ ಸಂಸ್ಥಾನಗಳು ಹುಟ್ಟಿಕೊಂಡವು. ಅಂತಹ ಸಂಸ್ಥಾನದಲ್ಲಿ ಗೆಜ್ಜಲಗಟ್ಟ ದೇಸಾಯಿ ಮನೆತನ ಒಂದು. ಈ ಮನೆತನ ಚರಿತ್ರೆ ಕ್ರಿ.ಶ. ೧೭೦೬ರಿಂದ ಆರಂಭವಾಗುತ್ತದೆ. ಸಂಗಾರೆಡ್ಡಿ ಎಂಬುವವನೇ ಈ ಮನೆತನದ ಮೂಲಪುರುಷ. ಈತನು ಲಿಂಗಸೂಗೂರು ತಾಲೂಕಿನಿಂದ ಆಗ್ನೇಯಕ್ಕೆ ૩೦ಕಿ.ಮೀ.ದೂರದಲ್ಲಿರುವ ಗೆಜ್ಜಲಗಟ್ಟ ಎಂಬ ಗ್ರಾಮದಲ್ಲಿ ದೇಸಾಯಿ ಮನೆತನ ಸ್ಥಾಪಿಸಿದನು. ಆರಂಭದಲ್ಲಿ ದಿಲ್ಲಿಯ ಬಾದಶಾಹ ಔರಂಗಜೇಬನ ಕೃಪೆಗೆ ಪಾತ್ರನಾಗಿ ಗೆಜ್ಜಲಗಟ್ಟ ಸುತ್ತಮುತ್ತಲ ಪ್ರದೇಶಗಳ ನಾಡಗೌಡಕಿ ಪಡೆದ ವಿಚಾರಗಳು ಕಂಚಿನ ಪತ್ರದಲ್ಲಿ ದಾಖಲಿಸಿದೆ. ನಂತರ ಅಧಿಕಾರಕ್ಕೆ ಬಂದ ನಿಜಾಮ ಮತ್ತು ಬ್ರಿಟಿಷರ ಅಂಕಿತದಲ್ಲಿ ಇದ್ದುಕೊಂಡೇ ೧೯೪೮ ಸೆಪ್ಟೆಂಬರ್ ೧೭ರವರೆಗೆ ಆಡಳಿತ ಮಾಡಿರುವುದು ಕಂಡುಬರುತ್ತದೆ.

ಸಂಗಾರೆಡ್ಡಿ ನಿಲೋಗಲ್‌ನಲ್ಲಿ ನಾಡಗೌಡಕಿ ಮಾಡಿಕೊಂಡು ಆಡಳಿತ ನಡೆಸುತ್ತಿರುವಾಗ ದಿಲ್ಲಿಯ ಮೊಘಲ್ ಸುಲ್ತಾನ ಔರಂಗಜೇಬನು ದಖ್ಖನ್ ರಾಜ್ಯಗಳ ಮೇಲೆ ದಂಡಯಾತ್ರೆ ಕೈಗೊಂಡು ಬರುವ ಮಾರ್ಗದಲ್ಲಿ ನಿಲೋಗಲ್ ಗ್ರಾಮದ ಹತ್ತಿರ ವಿಶ್ರಾಂತಿ ಪಡೆದನು. ಆಗ ಸಂಗಾರೆಡ್ಡಿ ಮೊಘಲ್ ಸೈನ್ಯಕ್ಕೆ ಭಯಗೊಂಡು ಸೈನಿಕರಿಗೆ ಊಟದ ವ್ಯವಸ್ಥೆ ಮತ್ತು ಆನೆ,

ಕುದುರೆಗಳಿಗೆ ಹುಲ್ಲು ಕಾಳುಗಳನ್ನು ಪೂರೈಸಿದನು. ಇದರಿಂದ ಸಂತುಷ್ಟನಾದ ಬಾದಶಾಹನು ಸಂಗಾರೆಡ್ಡಿಗೆ ದೇಸಾಯಿ ಎಂಬ ಬಿರುದು ನೀಡಿ ದೇವದುರ್ಗವನ್ನು ಉಂಬಳಿಯಾಗಿ ಬಿಟ್ಟುಕೊಟ್ಟನು. ಸಂಗಾರೆಡ್ಡಿಯ ನಂತರ ಅಧಿಕಾರಕ್ಕೆ ಬಂದ ಮಗ ತಿಮ್ಮರೆಡ್ಡಿ ದೇವದುರ್ಗವನ್ನು ಬಿಟ್ಟು ಚುಕ್ಕನಟ್ಟಿ ಮಾತ್ರ ಉಂಬಳಿಯಾಗಿ ಮಾಡಿಕೊಂಡನು. ಇವನ ತರುವಾಯ ಅಧಿಕಾರಕ್ಕೆ ಬಂದ ಪಿಡ್ಡನಗೌಡ ಗಜ್ಜಲಗಟ್ಟಿಯನ್ನು ಉಂಬಳಿಯಾಗಿ ಪಡೆದುಕೊಂಡು ಇದನ್ನೇ ಆಡಳಿತ ಕೇಂದ್ರಸ್ಥಾನ ವನ್ನಾಗಿ ಮಾಡಿಕೊಂಡು ಆಡಳಿತ ಆರಂಭಿಸಿದನು.

ಗೆಜ್ಜಲಗಟ್ಟಿ ನಾಡಗೌಡ ಆರಂಭದಲ್ಲಿ ಕುರುಗಂಟಿ ದೊರೆಗಳ ಅಧೀನದಲ್ಲಿದ್ದುಕೊಂಡೇ ಹಂತಹಂತವಾಗಿ ಮೇಲ್ದರ್ಜೆಯ ಅಧಿಕಾರವನ್ನು ಪಡೆದುಕೊಂಡು ವೆಂಕಟರಾವ್ ನಾಡಗೌಡನ ಆಳ್ವಿಕೆ ಕಾಲಕ್ಕೆ ಸಂಸ್ಥಾನವು ಗೆಜ್ಜಲಗಟ್ಟಿ ನಾಡಗೌಡನಾದ ಮಾನಪ್ಪಗೌಡ ಅಧಿಕಾರಕ್ಕೆ ಬಂದು ಕೆಲವೇ ವರ್ಷಗಳಲ್ಲಿ ವಿಧಿವಶನಾದನು. ಆಗ ಮಾನಪ್ಪಗೌಡನ ಹೆಂಡತಿಯಾದ ರಾಣಿ ಲಕ್ಷ್ಮಿದೇವಿ ನಾಡಗೌಡತಿ ಆಡಳಿತ ಸೂತ್ರವನ್ನು ತಾನೇ ವಹಿಸಿಕೊಂಡು ಸಂಸ್ಥಾನದ ಆಡಳಿತದಲ್ಲಿ ತೋರಿಸಿದ ಕೌಶಲ್ಯ, ಧೀರತನ, ಧೈರ್ಯ, ಸ್ಥೈರ್ಯ ಗುಣಗಳಿಂದ ಜನರಿಗೆ ಮೆಚ್ಚುಗೆಯಾದಳು. ಆಕೆಯು ತೆಗೆದುಕೊಳ್ಳುತ್ತಿದ್ದ ತೀರ್ಮಾನ, ನೀಡುತ್ತಿದ್ದ ನ್ಯಾಯಗಳು ಯೋಗ್ಯವಾಗಿರುತ್ತಿದ್ದವು. ಇದರಿಂದ ಸಂಸ್ಥಾನವು ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಯತ್ತ ತೆಗೆದುಕೊಂಡು ಹೋದ ಕೀರ್ತಿ ರಾಣಿ ಲಕ್ಷ್ಮಿದೇವಿಗೆ ಸಲ್ಲುತ್ತದೆ.[೪೬]

೫. ಕೊಪ್ಪಳ ಜಹಗೀರು

ಹೈದರಾಬಾದ್ ಸಂಸ್ಥಾನದ ನಿಜಾಮ್ ಅರಸರು ತಮ್ಮ ಆಡಳಿತವನ್ನು ಗಟ್ಟಿಗೊಳಿಸಲು ಸಂಸ್ಥಾನದ ಕೆಲವು ಪ್ರದೇಶಗಳನ್ನು ಜಹಗೀರು ನೀಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಅಂತಹ ಜಹಗೀರಲ್ಲಿ ಕೊಪ್ಪಳ ಜಹಗೀರ ಕೂಡ ಒಂದು. ನಿಜಾಮನ ಆಪ್ತ ಹಾಗೂ ದೂರದ ಸಂಬಂಧಿಯಾದ ಸಾಲಾರಜಂಗನಿಗೆ ಕೊಪ್ಪಳ ಜಹಗೀರ ವಹಿಸಿದನು. ಈ ಜಹಗೀರು ಕನ್ನಡ ಪ್ರಾಂತ್ಯಕ್ಕೆ ಸೇರಿದ ರಾಯಚೂರು ಜಿಲ್ಲೆಯಲ್ಲಿಯೇ ದೊಡ್ಡ ಜಹಗೀರಾಗಿತ್ತು. ಇದರ ವ್ಯಾಪ್ತಿಯು ೨೭೧ ಗ್ರಾಮಗಳಿಂದ ಕೂಡಿದ್ದು, ಜನಸಂಖ್ಯೆ ೧,೬೦,೦೦೦ ಇತ್ತು. ಈ ಜಹಗೀರ ಪ್ರದೇಶದ ಭೂಮಿಯು ಫಲವತತ್ತೆಯಿಂದ ಕೂಡಿದ್ದು, ವಾರ್ಷಿಕ ಉತ್ಪನ್ನ ಎಂಟು ಲಕ್ಷಗಳವರೆಗಿತ್ತು.[೪೭]

ಕೊಪ್ಪಳ ಪ್ರದೇಶವನ್ನು ಜಹಗೀರ ಎಂದು ಪಡೆದ ಸಾಲಾರಜಂಗ ಇದಕ್ಕೊಂದು ಜಿಲ್ಲೆಯ ಸ್ಥಾನಮಾನ ನೀಡಿ ಆಡಳಿತ ನಡೆಸುತ್ತಿದ್ದರಿಂದ ಇದು ಸರ್ಕಾರದ ಜಹಗೀರ ಪ್ರದೇಶವಾಯಿತು. ಆಡಳಿತದ ಅನುಕೂಲಕ್ಕಾಗಿ ಅಧಿಕಾರ ವಿಕೇಂದ್ರಿಕರಣ ಮಾಡಿ ಆಮಲ್ದಾರ, ಆದಾಲತ್,

ತಾಲೂಕದಾರ್, ತಹಶೀಲ್, ತಾಲಿಮಾಟ್ ಎಂಬ ಅಧಿಕಾರಿ ವರ್ಗಗಳನ್ನು ನೇಮಿಸಿ ಇವರ ಮೂಲಕ ಜಹಗೀರ್ ಪ್ರದೇಶದ ಆಡಳಿತ ದಕ್ಷತೆಯನ್ನು ಹೆಚ್ಚಿಸಿದನು. ಜಹಗೀರ ಪ್ರದೇಶದ ಆಡಳಿತದ ಕೊನೆಯ ಘಟಕ ಗ್ರಾಮಾಡಳಿತ. ಗ್ರಾಮಾಡಳಿತದಲ್ಲಿ ಪಟ್ವಾರಿ, ಪೊಲೀಸ್ ಪಾಟೀಲ್, ಮಾಲಿಪಾಟೀಲ್ ಎಂಬ ಸ್ಥಳೀಯರ ಸಹಾಯದಿಂದ ಗ್ರಾಮೀಣ ಮಟ್ಟದಲ್ಲಿ ತೆರಿಗೆ ವಸೂಲಿ ಮಾಡುವುದು, ನ್ಯಾಯದಾನ ಮಾಡುವುದು ಮತ್ತು ಆಡಳಿತಕ್ಕೆ ಅನುಕೂಲವಾಗುವ ವಾತಾವರಣವನ್ನು ನಿರ್ಮಿಸಿ ಜಹಗೀರು ಪ್ರದೇಶದ ಆಡಳಿತವನ್ನು ಗಟ್ಟಿಗೊಳಿಸುವುದಾಗಿತ್ತು.[೪೮]

ಕೊಪ್ಪಳ ಜಹಗೀರು ಪ್ರದೇಶವು ಬಿಜಾಪುರದ ಆದಿಲ್‌ಶಾಹಿ ಸುಲ್ತಾನರ ಕಾಲದಲ್ಲಿ ಪರ್ಶಿಯನ್ ನಂತರ ಹೈದರಾಬಾದ್ ನಿಜಾಮ್ ಕಾಲದಲ್ಲಿ ಉರ್ದು ಹೀಗೆ ಆಡಳಿತ ಭಾಷೆಗಳಾದವು. ಆದರೆ ಸಾಲಾರಜಂಗ ಜಹಗೀರು ಪಡೆದುಕೊಂಡ ಮೇಲೆ ಈ ಪ್ರದೇಶದಲ್ಲಿ ಆಡಳಿತ ಭಾಷೆಯಾಗಿ ಉರ್ದು ಇದ್ದರೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಕನ್ನಡಕ್ಕೆ ಮನ್ನಣೆ ನೀಡಿರುವುದು ಕಂಡುಬರುತ್ತದೆ.[೪೯] ೧೮೮೯ರಲ್ಲಿ ಅಂದಿನ ಜಹಗೀರ ಸರ್ಕಾರವು ಕೊಪ್ಪಳ ನಗರ ಪ್ರದೇಶ ಗುಲ್ಜಾರ ಹೌಜಿನ ಮುಂಭಾಗದಲ್ಲಿ ತಹತಾನಿಯಾ ಎಂಬ ಉರ್ದು ಮಾಧ್ಯಮ ಶಾಲೆಯನ್ನು ತೆರೆಯಿತು. ೧೮೯೦ರಲ್ಲಿ ಇದೇ ಶಾಲೆಯಲ್ಲಿ ಕನ್ನಡ ತರಗತಿಗಳನ್ನು ನಡೆಸಲು ಸರ್ಕಾರ ಅನುವು ಮಾಡಿಕೊಟ್ಟಿತು. ಕೊಪ್ಪಳದಲ್ಲಿನ ಉರ್ದು ಶಾಲೆಯು ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಹೈಸ್ಕೂಲ್ ಆಗಿತ್ತು. ಕನ್ನಡ ಮಾಧ್ಯಮದಲ್ಲಿ ಬೋಧಿಸುತ್ತಿದ್ದ ಕನ್ನಡ ಶಿಕ್ಷಕ ಸೀನಪ್ಪ ಮಂಗಲಗಿ ಅವರು ಪ್ರಾಂಶುಪಾರ ಗಮನ ಸೆಳೆಯುವ ಹಾಗೇ ಕನ್ನಡ ಕಲಿಸಲು ಪ್ರಯತ್ನಿಸಿದರು. ಹಾಗೇ ಜಹಗೀರ ಪ್ರದೇಶದ ವಿವಿಧ ಗ್ರಾಮಗಳಲ್ಲಿ ಸರ್ಕಾರದ ನೆರವು ಇಲ್ಲದೆ ಗಾಂವಠಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಸ್ಥಳೀಯ ಮಕ್ಕಳಿಗಾಗಿ ಅಕ್ಷರ ಜ್ಞಾನ ನೀಡುವ ಕಾರ್ಯದಲ್ಲಿ ಮುಖ್ಯ ಪಾತ್ರ ನಿರ್ವಹಿಸಿದವು.

ಹೀಗೆ ಕೊಪ್ಪಳ ಜಹಗೀರ ಪ್ರದೇಶವನ್ನು ಸಾಲಾರಜಂಗನು ಕೊಪ್ಪಳ ಮತ್ತು ಯಲಬುರ್ಗಾ ವನ್ನು ಒಂದುಗೂಡಿಸಿ ಕಂದಾಯವನ್ನು ಹೆಚ್ಚಿಸಿದನು. ಕೊಪ್ಪಳದ ನಿವಾಸಿಯಾದ ಅಂಗಡಿ ಸಂಗಣ್ಣ ಎಂಬ ವ್ಯಕ್ತಿ ಸಾಲಾರಜಂಗನ ಮನಸ್ಸು ಗೆದ್ದು ಈ ಪ್ರದೇಶದಲ್ಲಿ ಸಾಲಾರಜಂಗನ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದನು. ಸಾಲಾರಜಂಗನು ಹೆಚ್ಚು ಕಾಲ ವಿದೇಶ ಪ್ರಯಾಣದಲ್ಲಿಯೇ ಕಳೆಯುತ್ತಿದ್ದನೆಂಬ ವಿರೋಧವಿತ್ತು. ಇದರ ಲಾಭ ಪಡೆದ ಅಧಿಕಾರ ವರ್ಗಗಳು ಜನಸಾಮಾನ್ಯರಿಂದ ಹೆಚ್ಚಿನ ತೆರಿಗೆಯನ್ನು ವಸೂಲಿ ಮಾಡಿದರು. ಇದರಿಂದ ಜನಸಾಮಾನ್ಯರು ಸಾಲಾರಜಂಗನನ್ನು ದೋಷಿಸಲು ಆರಂಭಿಸಿದ್ದರು. ಕೊನೆಗೂ ಜಹಗೀರ ಪ್ರದೇಶವು ನಿಜಾಮ್ ಜಹಗೀರು ಸರ್ಕಾರದಿಂದ ಸ್ವಾತಂತ್ರ್ಯ ಹೊಂದಿ ಭಾರತದಲ್ಲಿ ವಿಲೀನವಾಗುವವರೆಗೆ ಜಹಗೀರ ಪ್ರದೇಶವಿತ್ತು.[೫೦]

೬. ಗುಡಗಂಟಿ ಸಂಸ್ಥಾನ

ಗುಡಗುಂಟಿ ಸಂಸ್ಥಾನವು ಇಂದಿನ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಿನಿಂದ ೧೮.ಕಿ.ಮೀ.ದೂರದಲ್ಲಿದೆ. ಎಡದೊರೆ ನಾಡು, ದೋ-ಅಬ್‌ನ ಪ್ರದೇಶ ಇದು. ೧೭ನೇ ಶತಮಾನದಲ್ಲಿ ರಾಜಾ ಜಕ್ಕಪ್ಪ ನಂತರ ಇದೇ ವಂಶದವರು 'ಸಜಾಬಹದೂರು' ಬಿರುದಿನಿಂದ ಸುದೀರ್ಘ ಕಾಲ ಆಳ್ವಿಕೆ ನಡೆಸುತ್ತಾರೆ. ಸುರಪುರ-ಗುಡಗುಂಟಿಯವರ ಮೂಲ ಒಂದೇ. ಜಕ್ಕಪ್ಪನಾಯಕನಿಗೆ ಗಡ್ಡಿಪಿಡ್ಡಿನಾಯಕ ಮತ್ತು ಗಡ್ಡಿರಂಗನಾಯಕ ಮಕ್ಕಳಿದ್ದರು. ಅವರಲ್ಲಿ ಜಕ್ಕಪ್ಪನಾಯಕ, ಲಿಂಗನಾಯಕ, ಸೋಮಪಡ್ಡಿ ನಾಯಕ, ಸೋಲಿಂಗ ನಾಯಕ, ಜಡಿಸೋಮಪ್ಪ ನಾಯಕ, ರಾಜಾಸೋಮಪ್ಪ ನಾಯಕ, ರಾಣಿ ಗೌರಮ್ಮ, ತಿಪ್ಪರಾಜ ಜಡಿಸೋಮಪ್ಪ ನಾಯಕ ಮೊದಲಾದವರು ಆಳ್ವಿಕೆ ನಡೆಸಿದ್ದಾರೆ.

ಇವರು ಹಿರಿಯರಂತೆ ರಾಜ್ಯ ಸಂಘಟಿಸಲು ಪ್ರಯತ್ನಿಸಿದರು. ರಾಜಾ ಸೋಮಲಿಂಗ ನಾಯಕನಿಗೆ ಮಕ್ಕಳಿರಲಿಲ್ಲ. ಅಷ್ಟೊತ್ತಿಗೆ ನಿಜಾಮ್ ಸರ್ಕಾರ ಗುಡಗುಂಟಿಯನ್ನು ಆಕ್ರಮಿಸಿಕೊಂಡಿತು. ಆಗ ನಿಜಾಮ್ ಸರ್ಕಾರದ ಆಜ್ಞೆಯಂತೆ ರಾಜಾ ಸೋಮಲಿಂಗಪ್ಪನ ಮಡದಿ ರಾಣಿ ಕಾಟಮ್ಮಳಿಗೆ ಅಧಿಕಾರ ನೀಡಿ ತಮ್ಮ ಅಧೀನದಲ್ಲಿ ಆಳ್ವಿಕೆ ಮಾಡಲು ಆದೇಶಿಸಿತು. ನಂತರ ರಾಣಿ ಕಾಟಮ್ಮ ತನ್ನ ಸಂಸ್ಥಾನಕ್ಕೆ ದತ್ತು ತೆಗೆದುಕೊಳ್ಳಲು ಅನುಮತಿ ನೀಡಬೇಕೆಂದು ನಿಜಾಮ್ ಸರ್ಕಾರವನ್ನು ಕೇಳಿಕೊಂಡಳು. ನಿಜಾಮ್ ಸರ್ಕಾರವು ರಾಣಿ ಕಾಟಮ್ಮಳ ಕೋರಿಕೆ ಮೇರೆಗೆ ಮೈದುನನ ಮಗನಾದ ರಾಜ ಜಡಿ ಸೋಮಪ್ಪ ನಾಯಕನನ್ನು ದತ್ತು ತೆಗೆದುಕೊಂಡಳು. ಈತ ಚಿಕ್ಕ ವಯಸ್ಸಿನವನಿದ್ದ ಕಾರಣ ಸಂಸ್ಥಾನದ ಎಲ್ಲ ಅಧಿಕಾರಗಳನ್ನು ರಾಣಿಯೇ ನೋಡಿಕೊಳ್ಳುತ್ತಿದ್ದಳು. ಗುಡಗುಂಟಿ ಸಂಸ್ಥಾನದ ಮೇಲೆ ತಮ್ಮ ಹಿಡಿತವನ್ನು ಸ್ಥಾಪಿಸಲು ನಿಜಾಮ್ ಸರ್ಕಾರವು ಸಂಸ್ಥಾನದ ಆಡಳಿತ ವ್ಯವಸ್ಥೆಗಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿತು. ಅವರಿಗೆ 'ನಾಜಿಮ್' ಎಂದು ಕರೆಯುತ್ತಿದ್ದರು. ಈತನ ನಿಜಾಮ ಸರ್ಕಾರ ನೀತಿಗೆ ಅನುಗುಣವಾಗಿ ಸಂಸ್ಥಾನದ ಸಂಪೂರ್ಣ ಅಧಿಕಾರಗಳು ತನ್ನ ಇಚ್ಛೆಗೆ ಅನುಸಾರವಾಗಿ ನಡೆದುಕೊಳ್ಳುವಂತೆ ಮಾಡಿದನು. ನಂತರ ಅರಸ ವಯಸ್ಸಿಗೆ ಬಂದ ಮೇಲೆ ಆಡಳಿತವನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಈತ ತೀರಿಕೊಂಡ ತರುವಾಯ ಈ ಸಂಸ್ಥಾವನ್ನು ನಿಜಾಮ್ ಸರ್ಕಾರ ತನ್ನ ವಶಕ್ಕೆ vÉÉ ÀPÉ Ar vÀ[೩೧]

ರಾಣಿ ಗೌರಮ್ಮ ನಿಜಾಮ್ ಸರ್ಕಾರದ ಒಪ್ಪಿಗೆ ಪಡೆದು ತನ್ನ ಮೊಮ್ಮಗನಾದ ರಾಜಾ ತಿಪ್ಪರಾಜ ಜಡಿ ಸೋಮನಾಯಕನನ್ನು ಮತ್ತೊಂದು ಬಾರಿ ದತ್ತು ತೆಗೆದುಕೊಂಡಿದ್ದಳು. ಈತನೇ ಗುಡಗುಂಟಿ ಸಂಸ್ಥಾನದ ಕೊನೆಯ ದೊರೆ. ಇವನು ೧೯೩೩ರಲ್ಲಿ ಸಿಂಹಾಸನ ಏರುತ್ತಾನೆ. ಆಗ

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮುಳುಗಿತ್ತು. ಈ ನಾಯಕರು ಸುರಪುರದವರೊಂದಿಗೆ ಕೈ ಜೋಡಿಸಿ ಬ್ರಿಟಿಷರ ವಿರುದ್ಧ ಪ್ರತಿಭಟಿಸಿದರು. ಇಂತಹ ಸಂದರ್ಭದಲ್ಲಿ ಸಂಸ್ಥಾನವನ್ನು ನೋಡಿಕೊಂಡು ಹೋಗಲು ಸಣ್ಣಪುಟ್ಟ ಜಮೀನ್ದಾರರನ್ನು ನೇಮಕ ಮಾಡಿದನು. ಇವರಿಂದ ಸಂಸ್ಥಾನಕ್ಕೆ ಬರುವ ಅಂದಾಜು ಐವತ್ತು ಸಾವಿರ ರೂಪಾಯಿ ಕಂದಾಯದಲ್ಲಿ ನಿಜಾಮ್ ಸರ್ಕಾರಕ್ಕೆ ವಾರ್ಷಿಕ ೭೦೦೦ ರೂ.ಗಳನ್ನು ಕೊಡಬೇಕಾಯಿತು. ಹೀಗೆ ಅಧಿಕಾರ ವಿಕೇಂದ್ರೀಕರಣ ಮೂಲಕ ಆಡಳಿತ ಮುಂದುವರಿಸಿದರು. ದೇಶದ ಸ್ವಾತಂತ್ರ್ಯ ಗಳಿಸಿದ ನಂತರ ದೇಶದ ಎಲ್ಲ ಅರಸೊತ್ತಿಗೆಗಳು ಭಾರತದ ಒಕ್ಕೂಟದಲ್ಲಿ ವೀಲಿನವಾದವು. ಆದರೆ ಹೈದರಾಬಾದ್ ಸಂಸ್ಥಾನವು ೧೯೪೮ ಸೆಪ್ಟೆಂಬರ್‌ನಲ್ಲಿ ವಿಲೀನವಾಗಿದಂತೆ ಗುಡಗುಂಟಿ ಸಂಸ್ಥಾನವು ವಿಲೀನವಾಯಿತು. ಹೀಗೆ ವಿಲೀನವಾದ ಮೇಲೆ ಈ ಮನೆತನದವರು ವಿವಿಧ ಬಗೆಯ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಗುಡಗುಂಟಿ ಸಂಸ್ಥಾನವು ಆಡಳಿತದಲ್ಲಿ ನಾಲ್ಕು ವಿಭಾಗಗಳಾಗಿ ಮಾಡಿಕೊಂಡಿತು. ಮಾಲಿ, ಫೌಜದಾರಿ, ದಿವಾನಿ ಮತ್ತು ಪೋಲೀಸ್ ಕಚೇರಿಗಳೆಂದು ಹೆಸರಿಸಿಕೊಂಡಿದ್ದರು. ನ್ಯಾಯಾಡಳಿತದಲ್ಲಿ ನಿಜಾಮರು ಅಧೀನವಾಗುವರೆಗೆ ಇಲ್ಲಿ ನ್ಯಾಯ ನಿರ್ಣಾಯಕಕ್ಕಾಗಿ ಯಾವುದೇ ನ್ಯಾಯಾಲಯದ ವ್ಯವಸ್ಥೆ ಇರಲಿಲ್ಲ. ಕುಲಾಚಾರಿಕೆ ಪದ್ಧತಿಯ ಮೂಲಕ ನ್ಯಾಯವನ್ನು ನಿರ್ಣಯಿಸುತ್ತಿದ್ದರು. ಕುಲಾಚಾರಿಕೆ ಪದ್ಧತಿ ಎಂದರೆ ತಮ್ಮ ಅಧೀನದ ಹಳ್ಳಿಗಳಲ್ಲಿಯ ಪ್ರತಿಯೊಂದು ಕುಲ ಅಥವಾ ಜಾತಿಗೆ ಸಂಬಂಧಿಸಿದ ಜನಾಂಗದ ಆಚಾರ–ವಿಚಾರ, ರೂಢಿ–ಸಂಪ್ರದಾಯಗಳ ಪದ್ಧತಿಗಳಿಗೆ ಅನುಗುಣವಾಗಿ ನ್ಯಾಯಗಳನ್ನು ಬಗೆಹರಿಸುವ ಪದ್ಧತಿ ಜಾರಿಯಲ್ಲಿತ್ತು. ಭಾರತದಲ್ಲಿಯೇ ನ್ಯಾಯ ಇಲಾಖೆಯೊಂದನ್ನು ಆರಂಭಿಸಿ ನ್ಯಾಯಾಂಗಕ್ಕೆ ಪ್ರತ್ಯೇಕವಾದ ವ್ಯವಸ್ಥೆ ಮಾಡಿದ್ದು ನಿಜಾಮ್ ಆಡಳಿತವೇ. ನಿಜಾಮ್ ನ್ಯಾಯಾಂಗ ವ್ಯವಸ್ಥೆ ಇಲ್ಲಿ ಜಾರಿಗೆ ಬಂದಿತು.[೫೨]

೭. ದೇವದುರ್ಗ ಸಂಸ್ಥಾನ

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ನಾಯಕರ ಆರಸರ ಸಂಸ್ಥಾನವಾಗಿತ್ತು. ಇವರ ಮೂಲಪುರುಷ ಸವಣೂರು ಬಂಕಾಪುರದಲ್ಲಿ ಮೊದಲು ವಾಸವಾಗಿದ್ದಂತೆ ನಂತರ ಇವರ ಮೂಲಪುರುಷ ಸೋಮಜಂಪಲ ಭೂಮಿಪತಿರಂಗಪ್ಪ ನಾಯಕ ಮೊದಲು ದೇವದುರ್ಗ ತಾಲೂಕಿನ ಅರಕೇರಾದ ಜಂಪಲಮರಡಿಯಲ್ಲಿ ತಂಗಿದ್ದರು. ಅಲ್ಲಿಂದ ಇವರು ಚಂದನಕೇರಿಗೆ ಬರುತ್ತಾರೆ. ಚಂದನಕೇರಿ ದೇವದುರ್ಗದಿಂದ ಒಂದು ಕಿ.ಮೀ.ದೂರದಲ್ಲಿದೆ. ಅಲ್ಲಿ ವಾಸುದೇವ ನಾಯಕ ದೊರೆಯೆಂದು ಕರೆಸಿಕೊಂಡನು. ಈತನೇ ದೇವದುರ್ಗ ಅರಸು ಮನೆತನದ ಸ್ಥಾಪಕ.

ಆರಂಭದಲ್ಲಿ ದೇವದುರ್ಗ ಸಂಸ್ಥಾನವು ವಿಜಯನಗರದ ಅಧೀನವಾಗಿತ್ತು. ಇದು ಪತನವಾದ ನಂತರ ಆದಿಲ್‌ಶಾಹಿಗಳ ಅಧೀನಕ್ಕೊಳಪಟ್ಟಿತ್ತು. ದೇವದುರ್ಗ ಸಂಸ್ಥಾನವು ವಿಜಾಪುರದ

ಆದಿಲ್‌ಶಾಹಿಗಳ ಆಶ್ರಯ ಪಡೆದರೂ ಸ್ವತಂತ್ರವಾಗಿ ಆಳ್ವಿಕೆ ನಡೆಸಿತು. ಈ ಪ್ರದೇಶವು ಮೊಘಲರು ಮತ್ತು ಕನಕಗಿರಿ ನಾಯಕರಿಂದ ಮೇಲಿಂದ ಮೇಲೆ ದಾಳಿಗೊಳಗಾಗುತ್ತಿತ್ತು. ಈ ದಾಳಿಯನ್ನು ತಡೆಯಲು ಅಪ್ರಾಪ್ತ ವಯಸ್ಕನಾದ ಬಿಜಾಪುರದ ಬಾದಶಹ ಸಿಖಂದರ ಆದಿಲ್‌ಶಾಹನಿಗೆ ಸಾಧ್ಯವಾಗಲಿಲ್ಲ. ಈ ಸಮಯದಲ್ಲಿ ಸುರಪುರದ ಅರಸ ಹಸರಂಗಿ ಪಾಮನಾಯಕ ಇದರ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡನು. ಸುರಪುರದ ಸಂಸ್ಥಾನದ ಅಧೀನದಲ್ಲಿ ಆಡಳಿತ ನಡೆಸಿದ ದೇವದುರ್ಗ ಮುಂದೆ ವೈವಾಹಿಕ ಸಂಬಂಧಗಳು ನಡೆದಿರುವುದರಿಂದ ಉತ್ತಮವಾಗಿ ಸಂಬಂಧ ಬೆಳೆಸಿಕೊಂಡಿದ್ದರು. ಮೊಘಲರ ನಂತರ ಸುರಪುರವು ನಿಜಾಮರ ಅಧೀನಕ್ಕೆ ಒಳಗಾದರು ಇದರಿಂದ ಸುರಪುರದ ಸಂಸ್ಥಾನದ ಅಧೀನವಿದ್ದ ಎಲ್ಲ ಸಂಸ್ಥಾನಗಳು ನಿಜಾಮ ಸರ್ಕಾರಕ್ಕೆ ವಿಧೇಯರಾಗಿದ್ದರು ಎಂದು ಕಂಡುಕೊಳ್ಳಬಹುದು.

೧೮೫೩ರಲ್ಲಿ ಬ್ರಿಟಿಷರ ಸಾಮ್ರಾಜ್ಯಶಾಹಿ ಧೋರಣೆಯಂತೆ ಹತ್ತಿ ಬೆಳೆಯುವ ಫಲವತ್ತಾದ ಭೂಮಿ ಇರುವ ಬೀರಾರ ಮತ್ತು ದೋ–ಅಬ್ ಪ್ರದೇಶವನ್ನು ನಿಜಾಮನಿಂದ ಪಡೆಯಲು ಬೀರಾರ ಒಪ್ಪಂದ ಮಾಡಿಕೊಂಡರು. ಒಪ್ಪಂದದಂತೆ ಬೀರಾರ್, ಉಸ್ಮನಾಬಾದ್ ಮತ್ತು ರಾಯಚೂರು ಜಿಲ್ಲೆಗಳನ್ನು ಈಸ್ಟ್ ಇಂಡಿಯಾ ಕಂಪನಿಗೆ ಬಿಟ್ಟುಕೊಡಲಾಯಿತು. ಆಗಿನಿಂದ ಈ ಸಂಸ್ಥಾನವು ಬ್ರಿಟಿಶರ ಅಧೀನಕ್ಕೆ ಒಳಪಟ್ಟಿತ್ತು. ಸಂಸ್ಥಾನದ ಆರಸರು ಬ್ರಿಟಿಷರ ಜೊತೆಗೆ ಉತ್ತಮವಾದ ಸಂಬಂಧ ಹೊಂದಿದ್ದರಿಂದ ಅವರ ಜೀವನ ಉಪಯೋಗಕ್ಕೆ ಕೆಲವಷ್ಟು ಭೂಮಿ ಬಿಟ್ಟುಕೊಟ್ಟರು.[೫೩]

೮. ಸುರಪುರ ಸಂಸ್ಥಾನ

ಸುರಪುರ ಸಂಸ್ಥಾನಿಕರು ಯೋಧ ಜನಾಂಗದ ನಾಯಕರ ಗೋಸಾಲ ವಂಶದವರು. ಮೂಲತಃ ರತ್ನಗಿರಿ(ಆಂಧ್ರಪ್ರದೇಶ) ಪ್ರದೇಶದಿಂದ(ಮೈಸೂರು) ಪಾಳೆಯಗಾರರಾಗಿ ಬಂದವರು. ವಿಜಯನಗರದಲ್ಲಿದ್ದು ನಂತರ ಈ ಭಾಗಕ್ಕೆ ಬಂದಿದ್ದಾರೆ. ಮೂಲಪುರುಷ ಕಲ್ಲಪ್ಪನಾಯಕ ಈ ವಂಶದ ೧೩ ಜನ ಅರಸರು ೧೬೫೬ರಿಂದ ೧೮೫೮ರವರೆಗೆ ೨೦೨ ವರ್ಷಗಳ ಕಾಲ ಆಳ್ವಿಕೆ ನಡೆಸಿರುವುದು ಗಮನಾರ್ಹ. ಬಿಜಾಪುರದ ಆದಿಲಾಶಾಹಿಗಳು ಮೊಘಲ್ ಔರಂಗಜೇಬನ ಗೋಲ್ಕಂಡ, ಮರಾಠ, ಹೈದರಾಲಿ, ಟಿಪ್ಪು ಸುಲ್ತಾನ, ನಿಜಾಮ ಮತ್ತು ಬ್ರಿಟಿಷರ ದಬ್ಬಾಳಿಕೆಯ ನಡುವೆ ಆಡಳಿತ ನಡೆಸಿರುವುದು ಕಂಡುಬರುತ್ತದೆ.[೫೪]

ಆರಂಭದಲ್ಲಿ ಸುರಪುರದ ದೊರೆ ಗಡ್ಡಿಪಿಡ್ಡ ನಾಯಕನು ಬಿಜಾಪುರದ ಮಹಮ್ಮದ್ ಆದಿಲ್‌ಶಾಹಿಯಿಂದ ಸರದೇಸಗತಿ ಪ್ರದೇಶಗಳು ಸಂಪಾದಿಸಿ ಅವರ ಪ್ರೀತಿಗೆ ಪಾತ್ರನಾದನು. ಇದರಿಂದ ಸಂತೋಷಗೊಂಡ ಆದಿಲ್‌ಶಾಹಿ ಸುಲ್ತಾನನು ಗಡ್ಡಿಪಿಡ್ಡ ನಾಯಕನಿಗೆ ಗಜದಂಡ

ಲಹರಿ ಪಿಡ್ಡನಾಯಕ ಎಂಬ ಬಿರುದನ್ನು ನೀಡಿದನು. ಇದೇ ಸಮಯಕ್ಕೆ ಮೊಘಲ್ ದೊರೆ ಔರಂಗಜೇಬನು ದಕ್ಷಿಣ ಭಾರತದ ಮೇಲೆ ತನ್ನ ಹಿಡಿತ ಸಾಧಿಸುವ ಉದ್ದೇಶದಿಂದ ಬಿಜಾಪುರದ ಮೇಲೆ ದಾಳಿ ಮಾಡಿದನು. ಆಗ ಬಿಜಾಪುರದ ಪರವಾಗಿ ಗಡ್ಡಿಪಿಡ್ಡಿ ನಾಯಕನು ಯುದ್ಧದಲ್ಲಿ ಹೋರಾಡಿದನು. ಇವನ ಹೋರಾಟವನ್ನು ಕಂಡು ಔರಂಗಜೇಬನು ಸಂತೋಷದಿಂದ ಪತ್ರ ಬರೆದು ಮೆಚ್ಚುಗೆಯ ಮಾತನಾಡಿರುವುದರಿಂದ ಸುರಪುರದ ನಾಯಕರುಗಳು ಸಾಹಸಿಗಳೆಂದು ತಿಳಿಯಬಹುದು.[೫೫]

ಗಡ್ಡಿಪಿಡ್ಡಿ ನಾಯಕನ ನಂತರ ದತ್ತುಮಗನಾದ ಹಸರಂಗಿ ಪಾಮನಾಯಕ ಅಧಿಕಾರಕ್ಕೆ ಬಂದನು. ಮೊಘಲರು ಮತ್ತೆ ಬಿಜಾಪುರದ ಮೇಲೆ ಯುದ್ಧ ಸಾರಿದರು. ಈ ದಾಳಿಯನ್ನು ಎದುರಿಸದೇ ಸಿಕಂದರ್ ಆದಿಲ್‌ಶಾಹನು ಮೊಘಲರಿಗೆ ಶರಣಾಗಿ ತನ್ನ ಸಾಮ್ರಾಜ್ಯವನ್ನು ಮೊಘಲರ ಒಡೆತನಕ್ಕೆ ಒಪ್ಪಿಸಿದನು. ಅಂದಿನಿಂದ ಬಿಜಾಪುರದ ಮಾಂಡಲೀಕರಾಗಿ ಅಧಿಕಾರ ನಡೆಸುತ್ತಿದ್ದ ಸುರಪುರದ ನಾಯಕರು ಕೂಡ ಮೊಘಲರ ಅಧೀನದಲ್ಲಿಯೇ ಅಧಿಕಾರ ನಡೆಸಬೇಕಾಯಿತು. ಔರಂಗಜೇಬನ ಮರಣದ ನಂತರ ಮೊಘಲರ ದಕ್ಷಿಣ ಸುಬಾದ ಸುಬೇದಾರನಾದ ಕಮುರೋದ್ದೀನ್ ಕಿಲುಚಖಾನ್‌ನು ಮೊಘಲರ ಅಸಮರ್ಥತೆ ಲಾಭ ಪಡೆದು ಅಸಫತಾಹ ಮನೆತನವನ್ನು ಸ್ಥಾಪಿಸಿದನು. ಆ ಸಮಯದಲ್ಲಿ ಸುರಪುರದ ನಾಯಕರು ಸ್ವತಂತ್ರವಾಗಿ ಅಧಿಕಾರ ನಡೆಸುತ್ತಿದ್ದರು.[೫೬]

ಮುಮ್ಮಡಿ ಪಾಮ ನಾಯಕನು ಅಧಿಕಾರಕ್ಕೆ ಬಂದ ದಿನಗಳಲ್ಲಿ ಪೇಶ್ವೆ ಮತ್ತು ಹೈದರಾಬಾದ್ ನಿಜಾಮರು ಸುರಪುರವನ್ನು ಸೆದೆಬಡಿಯಲು ಜಂಟಿಯಾಗಿ ಸುರಪುರದ ಮೇಲೆ ದಾಳಿ ಮಾಡಿದರು. ಈ ದಾಳಿಯನ್ನು ಎದುರಿಸುವಲ್ಲಿ ವಿಫಲನಾದ ಮುಮ್ಮಡಿ ಪಾಮನಾಯಕನು ಪೇಶ್ವೆ ಮತ್ತು ನಿಜಾಮರೊಂದಿಗೆ ಒಪ್ಪಂದ ಮಾಡಿಕೊಂಡನು. ಒಪ್ಪಂದದ ಪ್ರಕಾರ ನಿಜಾಮ ಸರ್ಕಾರಕ್ಕೆ ೭೯,೦೦೦ರೂ ಮತ್ತು ಪೇಶ್ವೆಯವರಿಗೆ ೯೪ ರೂ.ಗಳು ದಂಡವನ್ನು ನೀಡಬೇಕಾಯಿತು. ಅಂದಿನಿಂದ ಸುರಪುರವು ಸಾಲಗಾರ ಸಂಸ್ಥಾನವಾಯಿತು.[೫೭]

ನಿಜಾಮ್ ಸಹಾಯಕ ಸೈನ್ಯ ಪದ್ಧತಿ ಸ್ವೀಕರಿಸಿದ ನಂತರ ಹೈದರಾಬಾದ್ ನಿಜಾಮರು ತಮ್ಮ ಸಂಸ್ಥಾನ ಪ್ರದೇಶದಲ್ಲಿದ್ದ ಸಂಸ್ಥಾನ, ದೇಸಗತಿ ಮನೆತನ, ದೇಸಾಯಿ ಮನೆತನಗಳನ್ನು ನಿಯಂತ್ರಿಸಲು ಬ್ರಿಟಿಷರ ಸಹಾಯ ಪಡೆದರು. ಸುರಪುರದ ದೊರೆಗಳು ಒಪ್ಪಂದದ ಅನುಗುಣವಾಗಿ ವಾರ್ಷಿಕ ಪೊಗದಿ ಹಣವನ್ನು ಸಲ್ಲಿಸದಿದ್ದಲ್ಲಿ ಬ್ರಿಟಿಷರ ಸೈನಿಕ ಸಹಾಯದಿಂದ ವಸೂಲಿ ಮಾಡಲಾಗುತ್ತಿತ್ತು. ಈ ವೇಳೆಗೆ ಬ್ರಿಟಿಷರು ನಿಜಾಮನಿಗೆ ಸಹಾಯ ಮಾಡುವ ನೆಪದಲ್ಲಿ ತಮ್ಮ ಹಸ್ತಕ್ಷೇಪ ಮಾಡುವಲ್ಲಿ ಯಶಸ್ವಿಯಾದರು. ಹೀಗೆ ನಿಜಾಮ ಮತ್ತು ಬ್ರಿಟಿಷರು ಈ ಪ್ರದೇಶವನ್ನು ಹಂತಹಂತವಾಗಿ ಎಲ್ಲ ಕ್ಷೇತ್ರಗಳಲ್ಲಿ ಹಸ್ತಕ್ಷೇಪ ಮಾಡಲಾರಂಭಿಸಿದರು.[೫೮]

ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಹೋರಾಟ ನಡೆದಾಗ ನಿಜಾಮನು ಬ್ರಿಟಿಷರ ಆಣತಿಯಂತೆ ತನ್ನ ಅಧೀನದಲ್ಲಿದ್ದ ಪ್ರದೇಶಗಳಲ್ಲಿ ಹೋರಾಟ ನಡೆಯದ ಹಾಗೆ ಎಚ್ಚರ ವಹಿಸಿದನು. ಆದರೆ ಈ ಎಚ್ಚರದ ಗಡಿಯನ್ನು ದಾಟಿ ಸುರಪುರದ ವೆಂಕಟಪ್ಪ ನಾಯಕನು ಬ್ರಿಟಿಷರ ಸಾಮ್ರಾಜ್ಯಶಾಹಿ ನೀತಿಯ ವಿರುದ್ಧ ಹೋರಾಡಲು ಸಿದ್ಧನಾದನು. ಇದನ್ನು ಮನಗಂಡಿದ್ದ ಬ್ರಿಟಿಷರು ನಿಜಾಮನ ಸಹಾಯದಿಂದ ವೆಂಕಟಪ್ಪನಾಯಕನನ್ನು ಬಂಧಿಸಿ ಹೈದರಾಬಾದಿಗೆ ವಿಚಾರಣೆ ಕರೆತಂದರು. ವೆಂಕಟಪ್ಪನಾಯಕ ಬ್ರಿಟಿಷರ ಅಧೀನವಾಗುವುದಕ್ಕಿಂತ ಸಾಯುವುದೇ ಮೇಲೆಂದು ಗುಂಡು ಹಾರಿಸಿಕೊಂಡು ಪ್ರಾಣ ಬಿಟ್ಟನು. ನಂತರ ಸುರಪುರ ಸಂಸ್ಥಾನವನ್ನು ಬ್ರಿಟಿಶರು ತಮಗೆ ಸಹಾಯ ನೀಡಿದ ನಿಜಾಮನ ಅಧೀನಕ್ಕೆ ನೀಡಿದರು. ಹೀಗೆ ಸುರಪುರವನ್ನು ತನ್ನ ವಶಕ್ಕೆ ಪಡೆದುಕೊಂಡು ೧೯೪೮ರ ಸೆಪ್ಟೆಂಬರ್ ೧೭ರವರೆಗೆ ಆಳ್ವಿಕೆ ಮಾಡಿದನು.[೫೯]

ವಿಜಯನಗರದ ಪತನದ ನಂತರ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಹಲವು ಸಂಸ್ಥಾನ, ದೇಸಾಯಿ, ದೇಸಮುಖ ಮತ್ತು ನಾಡಗೌಡರ ಮನೆತನಗಳು ಬಿಜಾಪುರದ ಆದಿಲಾಶಾಹಿ ಕಾಲಘಟ್ಟದಲ್ಲಿ ಬಹು ತೀವ್ರವಾಗಿ ಗುರುತಿಸಿಕೊಂಡವು. ಕಾಲಾನಂತರ ಅಧಿಕಾರಕ್ಕಾಗಿ ತಮ್ಮಲ್ಲಿಯೇ ಆಂತರಿಕ ಕಲಹಗಳಿಂದ ಅವುಗಳ ಶಕ್ತಿಯನ್ನು ಕುಗ್ಗುವಂತೆ ಮಾಡಿತು. ಮೊಘಲರ ನಂತರ ಅಧಿಕಾರಕ್ಕೆ ಬಂದ ನಿಜಾಮ ಸರ್ಕಾರವು ಅಧಿಕಾರವನ್ನು ಸ್ಥಾಪಿಸಲು ಹಲವಾರು ಒಪ್ಪಂದಗಳನ್ನು ಮಾಡಿಕೊಂಡು ಸ್ಥಳೀಯವಾಗಿ ಪ್ರಬಲವಾಗಲು ಪ್ರಯತ್ನಿಸಿತು. ಇದಕ್ಕೆ ಅಡ್ಡಿಯಾಗಿರುವ ಈ ಸ್ಥಳೀಯ ಮನೆತನಗಳನ್ನು ಮಟ್ಟಹಾಕಿ ಪ್ರಬಲವಾದ ಸರ್ಕಾರವನ್ನು ಸ್ಥಾಪಿಸಬೇಕಾದರೆ ಬ್ರಿಟಿಷರ ಜೊತೆ ಹೊಂದಾಣಿಕೆ ಮಾಡಿಕೊಂಡಾಗ ಮಾತ್ರ ಸಾಧ್ಯ ಎಂದು ತಿಳಿದು ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿತು. ಇದರಿಂದ ನಿಜಾಮ ಮತ್ತು ಬ್ರಿಟಿಷರ ಸಂಬಂಧ ಉತ್ತಮ ರೀತಿಯಲ್ಲಿ ಬೆಳೆದದ್ದರಿಂದ ಸ್ಥಳೀಯ ಮನೆತನಗಳು ನಿಜಾಮರ ಅಧೀನಕ್ಕೆ ಒಳಗಾದವು. ಸಂಸ್ಥಾನಿಕರ ಕೈಯಲ್ಲಿದ್ದ ಅಧಿಕಾರವನ್ನು ವಿಕೇಂದ್ರೀಕರಣ ಮುಖಾಂತರ ಸ್ಥಳೀಯ ಪ್ರಬಲವಾದ ಸಮುದಾಯಗಳಿಗೆ ನೀಡಿದರಿಂದ ಸಮುದಾಯಗಳು ಒತ್ತಾಯದ ಮುಖಾಂತರ ತೆರಿಗೆ ವಸೂಲಿ ಮಾಡಿ ತೆರಿಗೆ ನೀಡಿದ್ದವರ ಭೂಮಿಯನ್ನು ವಶಪಡಿಸಿಕೊಂಡು ಹೊಸ ಭೂ ಮಾಲೀಕವರ್ಗ ಉದಯವಾಯಿ. ಈ ಭೂಮಾಲಿಕ ವರ್ಗವು ಸಂಸ್ಥಾನಿಕರನ್ನು ಪರಿಗಣನೆಗೆ ತೆಗೆದುಕೊಳ್ಳದೆ ತಾವು ಮರಿ ಸಂಸ್ಥಾನಿಕರಂತೆ ವರ್ತಿಸತೊಡಗಿದರು.

ಕೊನೆಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ ಕೆ., ೨೦೧೦, **ಕೆನರಾದ ವಿಭಜನೆ ಹತ್ತಿ ರಾಜಕೀಯದ ವಿಶ್ಲೇಷಣೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೨೩-೨೪.

೨. ಸಿದ್ಧಲಿಂಗಪ್ಪ ಕೊಟ್ನೆಕಲ್, ೨೦೧೦, **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ,** ಮೇಘನಾ ಪ್ರಕಾಶನ, ಕೊಪ್ಪಳ, ಪು.೧೦.

೩. ಅಮರೇಶ ಆಲ್ಕೋಡ, ೨೦೧೨, **ದೇವದುರ್ಗ ಚಾರಿತ್ರಿಕ ಅಧ್ಯಯನ,** ಚಿಂತನ ಪ್ರಕಾಶನ, ಬೆಂಗಳೂರು, ಪು.೧೦.

೪. ಶರ್ಮಾ ಆರ್.ಎಸ್.(ಮೂಲ), ಶಂಕರ ನಾರಾಯಣರಾವ್(ಅನು), ೨೦೦೭, **ಪ್ರಾಚೀನ ಭಾರತ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೧೨೮.

೫. ಗೋಪಾಲರಾವ್ ಎಚ್.ಎಸ್., ೨೦೧೪, **ಕರ್ನಾಟಕದ ಏಕೀಕರಣ ಇತಿಹಾಸ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೪-೫

೬. ಅಮರೇಶ ನುಗಡೋಣಿ, ೨೦೦೩, **ಹೈದರಾಬಾದ್ ಕರ್ನಾಟಕದ ಹಾಡು-ಪಾಡು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೨-೩.

೭. ಅಶ್ವತ್, ೨೦೧೦, **ಕೊಪ್ಪಳ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ(ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ),** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೬-೨೭

೮. ಸಿದ್ಧಲಿಂಗಪ್ಪ ಕೊಟ್ನೆಕಲ್, **ಪೂರ್ವೋಕ್ತ,** ಪು.೩೪.

೯. ಅಶ್ವತ್, **ಪೂರ್ವೋಕ್ತ,** ಪು. ೩೦-೩೧

೧೦. ಸಿದ್ಧಲಿಂಗಪ್ಪ ಕೊಟ್ನೆಕಲ್, **ಪೂರ್ವೋಕ್ತ,** ಪು.೩೪-೩೫.

೧೧. ಸೂರ್ಯನಾಥ ಯು. ಕಾಮತ್, ೨೦೧೫, **ಕರ್ನಾಟಕದ ಸಂಕ್ಷಿಪ್ತ ಇತಿಹಾಸ,** ಎಂ.ಸಿ.ಸಿ., ಪ್ರಕಾಶಕರು, ಬೆಂಗಳೂರು, ಪು.೨೬.

೧೨. ಅಶ್ವತ್, **ಪೂರ್ವೋಕ್ತ,** ಪು. ೩೨-೩೩

೧೩. ಜಾಗೀರದಾರ್ ಆರ್.ಜ., ಲಿಂಗಸೂಗೂರು ವಿಠಲರಾವ(ಸಂ), ೧೯೪೧, **ಹೈದರಾಬಾದ್ ಕರ್ನಾಟಕ,** ಪ್ರೇಮಸಾಗರ ಮುದ್ರಣಾಲಯ, ಹೈದರಾಬಾದ್, ಪು.೩.

೧೪. ಅಮರೇಶ ನುಗಡೋಣಿ, **ಪೂರ್ವೋಕ್ತ,** ಪು.೫-೬.

೧೫. ಪಾಟೀಲ್ ಎಂ.ಬಿ.(ಮು.ಸಂ), ೧೯೬೭, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲಬರ್ಗಾ ಜಿಲ್ಲೆ**, ಗೀತಾಂಜಲಿ ಪ್ರಿಂಟರ್ಸ್, ಬೆಂಗಳೂರು, ಪು.೪೫.

೧೬. ಸಾಲೆತ್ತೊರೆ ಬಿ.ಎ., ದೇಸಾಯಿ ಪಾಂಡುರಂಗರಾಯರು, **ಕನ್ನಡ ನಾಡಿನ ಚರಿತ್ರೆ, ಭಾಗ ೧**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೩೬–೩೯

೧೭. ತಿಪ್ಪೇರುದ್ರಸ್ವಾಮಿ ಎಚ್., ೧೯೯೫, **ಕರ್ನಾಟಕದ ಸಾಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ.ಮೂರ್ತಿ, ಮೈಸೂರು, ಪು.೩೧೫.

೧೮. ಲಿಂಗೇರಿ ಯ.ಎಲ್.೨೦೧೦, **ಯಾದಗಿರಿ ಪ್ರದೇಶದ ಸಾಂಸ್ಕೃತಿಕ ಅಧ್ಯಯನ(ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ)**, ಪು.೫೪–೫೫.

೧೯. ಸಂತೋಷಕುಮಾರ, ೨೦೧೨, **ಶರಣಬಸವೇಶ್ವರ ಮತ್ತು ಖಾಜಾ ಬಂದೇ ನವಾಜ ಸೌಹಾರ್ದತೆಯ ಅಧ್ಯಯನ(ಅಪ್ರಕಟಿತ** ಎಂ.ಫಿಲ್. ನಿಬಂಧ), ಪು.೧೦–೧೧.

೨೦. ತಿಪ್ಪಣ, ೨೦೧೨, **ಹೈದರಾಬಾದ್, ಸಂಸ್ಥಾನದಲ್ಲಿ ದಿವಾನರಾಗಿ ಸರ್.ಮಿರ್ಜಾ** ಎಂ. **ಇಸ್ಮಾಯಿಲ್(ಅಪ್ರಕಟಿತ** ಎಂ.ಫಿಲ್.ನಿಬಂಧ). ಪು.೯–೧೦.

೨೧. ಅದೇ, ಪು.೯–೧೦.

೨೨. ಪಾಟೀಲ್ ಎಂ.ಬಿ.(ಮು.ಸಂ), **ಪೂರ್ವೋಕ್ತ**, ಪು.೫೪.

೨೩. ಅದೇ, ಪು.೫೪–೫೫.

೨೪. ರಂಜಾನ್ ದರ್ಗಾ, ೨೦೧೦, **ವಿಚಾರ ಕ್ರಾಂತಿ ಬಸವಣ್ಣನ ಚಳುವಳಿ**, ಪು.೭.

೨೫. ಪಾಟೀಲ್ ಎಂ.ಬಿ(ಮು.ಸಂ), **ಪೂರ್ವೋಕ್ತ**, ಪು.೪೯.

೨೬. ತಿಪ್ಪಣ್ಣ, **ಪೂರ್ವೋಕ್ತ**, ಪು.೧೧.

೨೭. ಅಮರೇಶ ಆಲ್ಕೋಡ್, **ಪೂರ್ವೋಕ್ತ**, ಪು.೧೫.

೨೮. ರಾಬರ್ಟ್ ಸಿವೆಲ್(ಮೂಲ), ಸದಾನಂದ ಕನವಳ್ಳಿ(ಅನು), ೨೦೧೦, **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ**, ಪು.೧೩೬.

೨೯. ದೀಕ್ಷಿತ್ ಜಿ.ಎಸ್., ರಾಮಸ್ವಾಮಿ ಬಿ., ೧೯೯೭, **ಶ್ರೀಕೃಷ್ಣದೇವರಾಯನ ಜೀವನ ಸಾಧನೆಗಳು**, ಪು.೬೨–೬೪.

೩೦. ಪಾಟೀಲ್ ಎಂ.ಬಿ.(ಮು.ಸಂ.), **ಪೂರ್ವೋಕ್ತ**, ಪು.೯೦.

೩೧. ಮುಜುಂದಾರ್ ಆರ್.ಸಿ.(ಮೂಲ), ಕೃಷ್ಣಮೂರ್ತಿ(ಅನು), **ಸುಲ್ತಾನರ ಅಧಿಪತ್ಯ, ಭಾಗ ಒಂದು,** ಕುವೆಂಪು ಭಾಷಾ ಭಾರತಿ, ಬೆಂಗಳೂರು, ಪು.೩೮೨.

೩೨. ಪಾಟೀಲ್ ಎಂ.ಬಿ.(ಮು.ಸಂ.), **ಪೂರ್ವೋಕ್ತ,** ಪು.೯೧-೯೨.

೩೩. ಲಿಂಗೇರಿ ಯ.ಎಲ್., **ಪೂರ್ವೋಕ್ತ,** ಪು.೮೦.

೩೪. ಮಜುಮ್‌ದಾರ್ ಆರ್.ಸಿ., ರಾಯಚೌಧುರಿ ಎಚ್.ಸಿ., ಕಾಲೀ ಕಿಂಕರದತ್ತ, ಶಾರದಪ್ರಸಾದ್ ಎನ್.ಎಸ್.(ಅನು), ೨೦೧೨, **ಭಾರತದ ಪ್ರೌಢ ಇತಿಹಾಸ,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೫. ಕೃಷ್ಣ ಕೊಲ್ಹಾರ ಕುಲಕರ್ಣಿ, ೨೦೦೨, **ಬಿಜಾಪುರ, ಆದಿಲ್‌ಶಾಹಿ,** ಸಿಕ್ಯಾಬ್ ಬಿಜಾಪುರ, ಪು.೩೪-೩೫.

೩೬. ಲಿಂಗೇರಿ ಯ.ಎಲ್., **ಪೂರ್ವೋಕ್ತ,** ಪು.೮೪-೮೫.

೩೭. ತಿಪ್ಪಣ್ಣ, **ಪೂರ್ವೋಕ್ತ,** ಪು.೧೫-೧೪.

೩೮. ಅಮರೇಶ ಹಣಮಂತ, **ರಾಯಚೂರು ದೋ-ಅಬ್ ಪ್ರದೇಶ: ಅಧಿಕಾರ ಮತ್ತು ಹೋರಾಟ** (ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ), ೨೦೧೪, ಪು.೨೨೨-೨೨೭

೩೯. ಅಮರೇಶ ನುಗಡೋಣಿ, **ಪೂರ್ವೋಕ್ತ,** ಪು.೩೬-೩೭

೪೦. ಅಮರೇಶ ಅಲ್ಕೋಡ, **ಪೂರ್ವೋಕ್ತ,** ಪು.೧೨೧

೪೧. ಅಮರೇಶ ಯತಗಲ್, ೨೦೦೭, **ಇತಿಹಾಸ ಮಂಥನ,** ಅದಿತಿ ಪ್ರಕಾಶನ, ಲಿಂಗಸೂಗೂರು, ಪು.೧೦೬-೧೦೭

೪೨. ಕೊಟ್ರೇಶ ಎಂ.(ಸಂ), ೨೦೧೦, **ಕಲ್ಯಾಣ ಕರ್ನಾಟಕ ಅರಸುಮನೆತನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೧೨-೧೧೩

೪೩. ಅಮರೇಶ ಹಣಮಂತ, ಪೂರ್ವೋಕ್ತ, ಪು.೨೨೦

೪೪. ಶಾಶ್ವತಸ್ವಾಮಿ ಮುಕ್ಕುಂದಿಮಠ, ೨೦೦೮, **ಕೃಷ್ಣ ತುಂಗೆ ನೆಲದ** ಸಿರಿ, ಸಮುಖ ಪ್ರಕಾಶನ, ಬೆಂಗಳೂರು, ಪು.೯೧

೪೫. ಕಾಂತರಾಜಪುರ ಸುರೇಶ, ವಸಂತಕುಮಾರ ಆರ್.(ಸಂ), ೨೦೧೪, **ಕನ್ನಡ ನುಡಿ, ತ್ರಿಮಾಸ ಪತ್ರಿಕೆ, ಸಂಪುಟ ೭೯,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೭-೮

೪೬. ಕೊಟ್ರೇಶ್ ಎಂ.(ಸಂ), **ಪೂರ್ವೋಕ್ತ**, ಪು.೩೧-೩೫

೪೭. ಜಾಗೀರದಾರ್ ಆರ್.ಜಿ., ಲಿಂಗಸೂಗೂರು ವಿಠಲರಾವ್(ಸಂ), **ಪೂರ್ವೋಕ್ತ**, ಪು.೮೦

೪೮. ಅಶ್ವಥ್ ಡಿ.ಎಸ್., ೧೯೯೯, **ವಿಮೋಚನೆ ಕೊಪ್ಪಳ ಜಿಲ್ಲೆಯ ಹೈದರಾಬಾದ್ ವಿಮೋಚನಾ ಹೋರಾಟದ ಕತೆ**, ಜಿಲ್ಲಾಡಳಿತ ಕೊಪ್ಪಳ, ಪು.೧೪೧

೪೯. ಪಾಟೀಲ ಬಿ.ಸಿ.(ಸಂ), ೧೯೯೮, **ಕೊಪ್ಪಳ: ಸಾಂಸ್ಕೃತಿಕ ಪರಂಪರೆ**, ಹರಿಹರ ಪ್ರಕಾಶನ, ಕೊಪ್ಪಳ, ಪು.೮೯

೫೦. ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ(ಸಂ), ೨೦೧೫, **ಇತಿಹಾಸ ದರ್ಶನ**, ಸಂಪುಟ ೩೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು.೩೮೭-೮೮

೫೧. ಮೋಹನ್‌ಕೃಷ್ಣ ರೈ ಕೆ.(ಸಂ), ೨೦೦೮, **ಚರಿತ್ರೆ ಅಧ್ಯಯನ**, ಸಂಪುಟ ೩, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೨. ಕೊಟ್ರೇಶ ಎಂ.(ಸಂ), **ಪೂರ್ವೋಕ್ತ**, ಪು.೧೪೭

೫೩. ಅಮರೇಶ ಯತಗಲ್, **ಪೂರ್ವೋಕ್ತ**, ಪು. ೩೬-೩೮

೫೪. ಮೋಹನ್‌ಕೃಷ್ಣ ರೈ ಕೆ., ೨೦೦೮, **ಪೂರ್ವೋಕ್ತ**, ಪು.೧೦೮-೧೦೯

೫೫. ಕಪಟರಾಳ ಕೃಷ್ಣರಾಯ, ೨೦೦೫, **ಸುರಪುರ ಸಂಸ್ಥಾನದ ಇತಿಹಾಸ**, ಕಪಟರಾಳ ಕೃಷ್ಣರಾಯ ಸ್ಮಾರಕ ಸಮಿತಿ, ಬೆಂಗಳೂರು, ಪು. ೭-೮

೫೬. ಅಮರೇಶ ಯತಗಲ್, ೨೦೦೦, **ಇತಿಹಾಸ ಇಂಚರ**, ಅದಿತಿ ಪ್ರಕಾಶನ, ಲಿಂಗಸೂಗೂರು, ಪು.೧೧೫

೫೭. ಅದೇ, ಪು.೧೧೬

೫೮. ಅಮರೇಶ ಯತಗಲ್, **ಪೂರ್ವೋಕ್ತ**, ಪು.೯೩-೯೪

೫೯. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.೮೧

ಅಧ್ಯಾಯ: ನಾಲ್ಕು

ನಿಜಾಮ್ ಆಳ್ವಿಕೆಯ ಸ್ವರೂಪ

ಅಧ್ಯಾಯ: ನಾಲ್ಕು

ನಿಜಾಮ್ ಆಳ್ವಿಕೆಯ ಸ್ವರೂಪ

ಪೀಠಿಕೆ

ನಿಜಾಮ್ ಕಿಲಿಚಖಾನನು ಮೊಗಲರ ಅಸಮರ್ಥತೆ ಲಾಭವನ್ನು ಪಡೆದುಕೊಂಡು ದಕ್ಷಿಣ ಭಾರತದಲ್ಲಿ ನಿಜಾಮ್ ಮನೆತನವನ್ನು ಸ್ಥಾಪಿಸಿದನು. ಹೀಗೆ ಅಧಿಕಾರ ಸ್ಥಾಪಿಸಿದ ನಂತರ ಮೊಗಲ್, ಬಹಮನಿ ಹಾಗೂ ಆದಿಲಾಶಾಹಿಗಳ ಆಳ್ವಿಕೆ ಸ್ವರೂಪದ ಆಧಾರದ ಮೇಲೆ ತನ್ನ ಅಧಿಕಾರವನ್ನು ಭದ್ರಪಡಿಸಿಕೊಂಡನು. ಆರಂಭದಲ್ಲಿ ಸೈನ್ಯಕ್ಕೆ ಹೆಚ್ಚಿನ ಒತ್ತು ನೀಡುತ್ತಾ ಸೈನ್ಯಾಡಳಿತ ಪದ್ಧತಿಗೆ ಅನುಗುಣವಾಗಿ ಆಡಳಿತ ಪದ್ಧತಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಪ್ರಯತ್ನ ಮಾಡಿದನು. ಆದರೆ ಇದೇ ಸಂದರ್ಭಕ್ಕೆ ನಿಜಾಮ್ ಕಿಲಿಚಖಾನನು ಅನಾರೋಗ್ಯದಿಂದ ಮರಣ ಹೊಂದಿದನು. ಇವನ ನಂತರ ಉತ್ತಾರಾಧಿಕಾರಕ್ಕಾಗಿ ತಮ್ಮ ತಮ್ಮಲ್ಲಿಯೇ ಕದನಗಳು ಆರಂಭಗೊಂಡವು. ಇದೇ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ತಮ್ಮ ವಸಹಾತು ನೆಲೆಗಳನ್ನು ಸ್ಥಾಪಿಸಿದ ಫ್ರೆಂಚರು ಮತ್ತು ಬ್ರಿಟಿಶರು ದಕ್ಷಿಣ ಭಾರತದಲ್ಲಿ ಕೂಡ ವಿಸ್ತರಿಸಿಕೊಳ್ಳಲು ಹೊಂಚ ಹಾಕುತ್ತಿದ್ದರು. ನಿಜಾಮರ ಉತ್ತಾರಾಧಿಕಾರತ್ವದ ಕದನವನ್ನು ತಮ್ಮ ವಸಹಾತುಶಾಹಿ ನೆಲೆಗಳ ಸ್ಥಾಪನೆಗೆ ಮುಖ್ಯ ಭೂಮಿಕೆಯನ್ನಾಗಿ ಮಾಡಿಕೊಂಡರು. ಹೀಗೆ ಈ ಯುದ್ಧದಲ್ಲಿ ಜಯಗಳಿಸಿದ ಬ್ರಿಟಿಶ ಬೆಂಬಲಿತ ನಿಜಾಮ್ ಅಲಿಖಾನನು ಅಧಿಕಾರಕ್ಕೆ ಬಂದನು. ಹೀಗೆ ಅಧಿಕಾರಕ್ಕೆ ಬಂದ ನಿಜಾಮನು ಬ್ರಿಟಿಶರ ವಸಾಹತುಶಾಹಿ ಧೋರಣೆಯಂತೆ ಅಧಿಕಾರವನ್ನು ಚಲಾಯಿಸಲೇ ಬೇಕಾಯಿತು.

ಇನ್ನೊಂದು ಕಡೆಗೆ ದಕ್ಷಿಣ ಭಾರತದ ಮೇಲೆ ಹಿಡಿತವನ್ನು ಸಾಧಿಸುವುದಕ್ಕಾಗಿ ಹೈದರಾಲಿ ಟಿಪ್ಪುಸುಲ್ತಾನ ಮತ್ತು ಮರಾಠರು ಹೊಂಚ ಹಾಕುತ್ತಿದ್ದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಿಜಾಮ್ ಆಲಿಖಾನನು ತನ್ನ ಅಸ್ತಿತ್ವಕ್ಕಾಗಿ ಬ್ರಿಟಿಶರ ಸಹಾಯಕ ಸೈನ ಪದ್ಧತಿಗೆ ಸಹಿ ಹಾಕುವುದರ ಮೂಲಕ ಆಶ್ರಿತ ಸಂಸ್ಥಾನವಾಗಿ ಆಡಳಿತ ನಡೆಸಿದನು. ಹೀಗೆ ನಿಜಾಮರು

ಸ್ಥಳೀಯ ಮತ್ತು ವಸಾಹತುಶಾಹಿ ನಡುವಿನ ಸಂಘರ್ಷದಲ್ಲಿ ತಮ್ಮ ಅಧಿಕಾರವನ್ನು ಉಳಿಸಿಕೊಂಡು ೨೨೫ ವರ್ಷಗಳ ಕಾಲ ಆಳ್ವಿಕೆ ಮಾಡಿದರು. ಈ ರೀತಿಯಾಗಿ ನಿಜಾಮರ ಆಡಳಿತ ಸ್ವರೂಪವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.[೧]

ಅತ್ಯಂತ ವಿವಾದಗ್ರಸ್ತ ಚರಿತ್ರೆ ಬರವಣಿಗೆಯಲ್ಲಿ ನಿಜಾಮ್ ಮನೆತನವೂ ಒಂದು. ನಿಜಾಮ್ ಮತ್ತು ಅವರ ಆಡಳಿತದ ವಿವರಗಳನ್ನೊಳಗೊಂಡಿರುವ ವಿದೇಶಿ ಹಾಗೂ ದೇಶಿ ಆಕರಗಳು ಈ ಬಗ್ಗೆ ವಿರೋಧಾತ್ಮಕ ಪ್ರತಿಮೆಗಳನ್ನು ಕೊಟ್ಟು ಗೊಂದಲಗೊಳಿಸಿವೆ. ನಿಜಾಮರ ಈ ಪ್ರತಿಮೆ ಒಂದು ಕಡೆ ಉತ್ತಮವಾಗಿ ಕಂಡರೆ, ಇನ್ನೊಂದು ಕಡೆ ನಿರ್ದಯಿ ಎಂಬಂತೆ ಕಾಣುತ್ತದೆ. ಬಹುತೇಕ ಪಾಶ್ಚಾತ್ಯ ವಸಾಹತುವಾದಿಗಳು ಭಾರತದ ರಾಷ್ಟ್ರೀಯವಾದಿಗಳು ಮತ್ತು ದಕ್ಷಿಣ ಭಾರತದ ಬರಹಗಾರರನ್ನು ಒಳಗೊಂಡು ಆತನನ್ನು ಕ್ರೂರಿ, ಸರ್ವಾಧಿಕಾರಿ, ಮತಾಂಧನೆಂದು ಚಿತ್ರಿಸಿದರೆ, ಕೆಲವರು ಇದರ ವಿರುದ್ಧವಾಗಿ ಬರೆದಿದ್ದಾರೆ.

ನಿಜಾಮರ ಸ್ವಭಾವ, ಅವರ ಆಡಳಿತ ಕ್ರಮ, ಇತರರೊಂದಿಗಿನ ರಾಜಕೀಯ ಸಂಬಂಧಗಳು ಮತ್ತು ಸಮಕಾಲೀನ ಸಂದರ್ಭ ಹಲವು ಭಾಷೆಗಳಲ್ಲಿ ಆ ಬಗ್ಗೆ ಆಕರಗಳನ್ನು ಸೃಷ್ಟಿಸಿತು. ಇಲ್ಲಿಯವರೆಗೆ ಪ್ರಕಟವಾಗಿರುವ ಆಕರ ಸಾಮಗ್ರಿ ಇಂಗ್ಲಿಷ್‌ನಲ್ಲಿದ್ದು ನಿಜಾಮರ ಬಗ್ಗೆ ವಿಕೃತ ಚಿತ್ರಣ ಕೊಡುತ್ತದೆ. ಭಾರತದಲ್ಲಿದ್ದ ಅಥವಾ ಅಂದಿನ ಭಾರತದೊಂದಿಗೆ ಸಂಬಂಧವಿದ್ದ ಪ್ರತಿಯೊಬ್ಬ ಇಂಗ್ಲಿಷನೂ ವಸಾಹತು ನೀತಿಗೆ ಅನುಗುಣವಾಗಿ ದಾಖಲೆಗಳನ್ನು ಸೃಷ್ಟಿಸಿದನು. ಬ್ರಿಟಿಶರು ತಮ್ಮ ವಿರುದ್ಧ ಭಾರತದಲ್ಲಿ ಸಂಘಟನೆ ಆಗಬಾರದು ಎಂಬ ಉದ್ದೇಶದಿಂದ ಕೋಮುವಾದವಾಗಿ ಹಿಂದೂ ಮತ್ತು ಮುಸ್ಲಿಂ ಎಂಬ ಭಾವನೆಯಿಂದ ನಿಜಾಮರ ಬಗ್ಗೆ ವಿಷಯಕಾರಿದ್ದಾರೆ. ಈ ಎಲ್ಲ ಅಂಶಗಳನ್ನು ಗಮನಿಸುತ್ತಾ ನಿಜಾಮರನ್ನು ಕುರಿತು ಸ್ಥಳೀಯವಾಗಿ ಸಿಗುವ ತೆಲುಗು, ಕನ್ನಡ ಮತ್ತು ಮರಾಠಿಯಲ್ಲಿರುವ ದಾಖಲೆಗಳ ಜೊತೆಗೆ ಸ್ಥಳೀಯವಾಗಿ ಲಭ್ಯವಿರುವ ಲಾವಣಿಗಳು, ಐತಿಹ್ಯಗಳು ಮತ್ತು ಕನ್ನಡ ಸಾಹಿತ್ಯದ ಕೃತಿಗಳನ್ನು ಇಟ್ಟುಕೊಂಡು ನಿಜಾಮರ ಆಳ್ವಿಕೆಯ ಸ್ವರೂಪವನ್ನು ಈ ಕೆಳಗಿನಂತೆ ಚರ್ಚಿಸಿ ವಿಶ್ಲೇಷಿಸಲಾಗಿದೆ.[೨]

ಹೈದರಾಬಾದ್ ಸಂಸ್ಥಾನವು ಸ್ಥಾಪನೆಯಾಗುವ ಪೂರ್ವದಲ್ಲಿ ಈ ಪ್ರದೇಶವು ಮೊಗಲರ ಅಧೀನದಲ್ಲಿತ್ತು. ಔರಂಗಜೇಬನ ಮರಣದ ನಂತರ ಅಧಿಕಾರಕ್ಕೆ ಬಂದ ಬಹುತೇಕ ಸುಲ್ತಾನರು ಅಸಮರ್ಥರಾಗಿದ್ದರು. ಈ ಅಸಮರ್ಥತೆಯ ಉಪಯೋಗವನ್ನು ಪಡೆದುಕೊಂಡು ಮೊಗಲ ಆಡಳಿತದಲ್ಲಿರುವ ಸುಬೇದಾರರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. ಅಂತಹ ಸುಬೇದಾರರಲ್ಲಿ ಒಬ್ಬನಾದ ದಕ್ಷಿಣ ಭಾರತದ ಸುಬೇದಾರ ಕಮರೋದ್ದಿನ್‌ನು ಹೈದರಾಬಾದ್ ಪ್ರದೇಶವನ್ನು ಕೇಂದ್ರಬಿಂದುವಾಗಿ ಮಾಡಿಕೊಂಡು ಆಳ್ವಿಕೆಯನ್ನು ಆರಂಭಿಸಿದನು. ಹೀಗೆ ಆಳ್ವಿಕೆಯನ್ನು ಆರಂಭಿಸಿದ

ಕಮುರೋದ್ದಿನನು ಆರಂಭದಲ್ಲಿ ಮೊಗಲರ ಸಾಮಂತನಾಗಿ ಮೊಗಲರ ಆಡಳಿತ ಪದ್ಧತಿಯನ್ನು ತನ್ನ ಸಂಸ್ಥಾನಕ್ಕೆ ಹೊಂದಾಣಿಕೆಯಾಗುವ ರೀತಿಯಲ್ಲಿ ಜಾರಿಗೆ ತರುವ ಮುಖಾಂತರ ಸಂಪೂರ್ಣವಾಗಿ ಸ್ವಾತಂತ್ರ್ಯವನ್ನು ಘೋಷಿಸಿಕೊಂಡನು. ಹೀಗೆ ಹೈದರಾಬಾದ್ ಸಂಸ್ಥಾನವು ಸ್ವಾತಂತ್ರ್ಯಪೂರ್ವದಲ್ಲಿ ಒಟ್ಟು ಏಳು ಜನ ನಿಜಾಮರ ಆಳ್ವಿಕೆಗೆ ಒಳಪಟ್ಟಿತ್ತು. ಇವರ ಆಳ್ವಿಕೆ ಕಾಲದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹೊಂದಿರುವ ಅಭಿವೃದ್ಧಿ ಮತ್ತು ಅಭಿವೃದ್ಧಿಯಾಗದ ಚರಿತ್ರೆಯ ಚಿತ್ರಣ ಹಾಗೂ ನಿಜಾಮರ ವಿವರ ಈ ಕೆಳಗಿನಂತಿದೆ.

೧. ಮೀರ್ ಕಮುರೋದ್ದಿನ್ ಬಿನ್ ಕಿಲೀಚಖಾನ್(೧೭೨೪-೧೭೪೮)
೨. ನವಾಬ್ ನಿಜಾಮ್ ಅಲಿಖಾನ್(೧೭೬೧-೧೮೦೩)
೩. ನವಾಬ್ ಸಿಕಂದರ್ ಬಹದ್ದೂರ್ ಜಹಾ(೧೮೦೪-೧೮೨೮)
೪. ನಾಸಿರುದ್ದೌಲ್ ಬಹದ್ದೂರ್(೧೮೨೯-೧೮೫೭)
೫. ಅಫಜಲುದ್ದೌಲ್ ಬಹದ್ದೂರ್(೧೮೫೭-೧೮೬೯)
೬. ಮೀರ್ ಮೆಹಬೂಬ್ ಅಲಿ(೧೮೬೯-೧೯೧೧)
೭. ಮೀರ್ ಉಸ್ಮಾನ್ ಅಲಿಖಾನ್(೧೯೧೧-೧೯೪೮)[3]

೧. ಕಮುರೋದ್ದಿನ್ ಕಿಲೀಚಖಾನ್(೧೭೨೪-೧೭೪೮)

ಕಮುರೋದ್ದಿನ್ ಕಿಲೀಚಖಾನ್‌ನನು ಹೈದರಾಬಾದ್ ಪ್ರದೇಶವನ್ನು ಕೇಂದ್ರವಾಗಿ ಮಾಡಿಕೊಂಡು ಅಸಫಿಯಾ ಮನೆತನವನ್ನು ಸ್ಥಾಪಿಸಿದನು. ಈತನು ಖಲೀಫ ಅಬೂಬಕರ್ ವಂಶಕ್ಕೆ ಸೇರಿದ ಗಾಜಿಯೋದ್ದಿನನ ಮಗನಾಗಿದ್ದನು. ತಂದೆಯ ಮರಣದ ನಂತರ ಮೊಗಲ್ ಸೈನ್ಯದಲ್ಲಿ ಸೇರಿಕೊಂಡು ತನ್ನ ಪ್ರತಿಭೆಯಿಂದ ಮೊಗಲ್ ಸುಲ್ತಾನನ ಪ್ರೀತಿಗೆ ಪಾತ್ರನಾದನು. ಇದರಿಂದ ಸಂತೋಷಗೊಂಡ ಔರಂಗಜೇಬನು ಇವನಿಗೆ ೪೫೦ ಕುದುರೆಗೆ ಮನಸಬ್ದಾರಿಯಾಗಿ ನೇಮಿಸಿದನು. ಹೀಗೆ ದೊರೆತ ಅವಕಾಶಗಳನ್ನು ಉಪಯೋಗಿಸಿಕೊಂಡು ಮೊಗಲರ ಸುಭಾಗಳಲ್ಲಿ ಒಂದಾದ ಬಿಜಾಪುರ ಸುಭಾದ ಸುಬೇದಾರನಾಗಿ ಅಧಿಕಾರ ವಹಿಸಿಕೊಂಡನು. ಬಿಜಾಪುರದಲ್ಲಿ ಅನೇಕ ಬದಲಾವಣೆಗೆ ಕಾರಣಕರ್ತನಾದನು. ಇಂತಹ ಸಂದರ್ಭದಲ್ಲಿ ಮೊಗಲ್ ಸುಲ್ತಾನನಾದ ಔರಂಗಜೇಬನ ಮರಣವು ಇವನಿಗೆ ವರದಾನವಾಯಿತು.[4] ನಂತರ ಅಧಿಕಾರಕ್ಕೆ ಬಂದ ಫರೂಕಶಿಯಾರನು ಕಮುರೋದ್ದಿನನ ಸಾಹಸವನ್ನು ಕಂಡು ಇವನಿಗೆ ‘ನಿಜಾಮ್-ಉಲ್-ಮುಲ್ಕ ಫಿರೋಜ್ ಜಂಗ್” ಎಂಬ ಬಿರುದನ್ನು ನೀಡಿ ದಕ್ಷಿಣ ಪ್ರಾಂತದ ಸುಬೇದಾರನಾಗಿ ನೇಮಿಸಿದನು. ಇದರಿಂದ ಕೋಪಗೊಂಡ ಸೈಯದ್ ಸಹೋದರರು ಮೊಗಲ್ ಸುಲ್ತಾನನ ಮೇಲೆ ಪ್ರಭಾವ ಬೀರಿ ಕಮುರೋದ್ದಿನ್‌ನನ್ನು ಮತ್ತೆ ಬಿಜಾಪುರದ ಸುಬೇದಾರನ್ನಾಗಿ ವರ್ಗಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸೈಯದ್ ಸಹೋದರರು ಹೀಗೆ ಮಾಡಿ ತಮ್ಮ ಪರಮಾಪ್ತನಾದ ದಿಲಾವರ್‌ಖಾನ್‌ನನ್ನು ಕಮುರೋದ್ದಿನನ ಸ್ಥಾನಕ್ಕೆ ನೇಮಿಸುವಲ್ಲಿ ಯಶಸ್ವಿಯಾದರು. ಇದರಿಂದ ಕೋಪಗೊಂಡ ನಿಜಾಮ್-ಉಲ್-ಮುಲ್ಕನು ದಿಲಾವರ್‌ಖಾನ್‌ನ ಮೇಲೆ ಯುದ್ಧ ಸಾರಿದ್ದರಿಂದ ಈ ಯುದ್ಧದಲ್ಲಿ ಸೋತ ದಿಲಾವರ್‌ಖಾನ್‌ನನು ಪಲಾಯನ ಮಾಡಿದನು. ಇಷ್ಟೊತ್ತಿಗಾಗಲೇ ದೆಹಲಿ ದರ್ಬಾರ್‌ನಲ್ಲಿ ಸೈಯದ್ ಸಹೋದರರ ಪ್ರಭಾವ ಕಡಿಮೆಯಾದ್ದರಿಂದ ಫರೂಕಶಿಯಾರನು ನಿಜಾಮನ ತಪ್ಪನ್ನು ಮನ್ನಿಸಿ ಆವನನ್ನು ತನ್ನ ಆಸ್ಥಾನದ ವಜೀರನನ್ನಾಗಿ ನೇಮಿಸಿದನು. ಆದರೆ ಕಮುರೋದ್ದೀನನಿಗೆ ವಜೀರ ಹುದ್ದೆಯ ಮೇಲೆ ಆಸಕ್ತಿ ಇಲ್ಲದ ವಿಷಯ ಸುಲ್ತಾನನಿಗೆ ತಿಳಿದು ನಿಜಾಮನನ್ನು ಮತ್ತೆ ದಕ್ಷಿಣ ಪ್ರಾಂತದ ಸುಬೇದಾರನ್ನಾಗಿ ನೇಮಿಸಿದನು.[೫] ಹೀಗೆ ಅಧಿಕಾರ ಪಡೆದ ಕಮುರೋದ್ದಿನನು ದೆಹಲಿ ಸುಲ್ತಾನರ ಅಸಮರ್ಥತೆಯ ಅವಕಾಶ ಉಪಯೋಗಿಸಿಕೊಂಡು ೧೭೨೪ರಲ್ಲಿ ಸ್ವಾತಂತ್ರ್ಯ ಘೋಷಿಸಿಕೊಂಡು ಅಸಫಿಯಾ ಮನೆತನ ಸ್ಥಾಪಿಸಿದನು.[೬] ಪ್ರಾರಂಭದಲ್ಲಿ ಔರಂಗಾಬಾದ್ ರಾಜಧಾನಿಯಾಗಿ ಮಾಡಿಕೊಂಡನು. ಆದರೆ ಪ್ರದೇಶ ಹೊಂದಾಣಿಕೆಯಾಗದೆ ಮೂಸಿ ನದಿಯ ಬಳಿಯಲ್ಲಿದ್ದ ಹೈದರಾಬಾದ್ ನಗರವನ್ನು ರಾಜಧಾನಿಯಾಗಿ ಮಾಡಿಕೊಂಡು ಸಂಸ್ಥಾನವನ್ನು ಉತ್ತರದ ತಪತಿ ನದಿಯಿಂದ ದಕ್ಷಿಣದ ಕರ್ನಾಟಕದ ಗಡಿಯವರೆಗೆ ವಿಸ್ತರಿಸಿದನು.[೭]

ದೆಹಲಿ ದರ್ಬಾರ್‌ನಲ್ಲಿ ಸಿಂಹಾಸನಕ್ಕಾಗಿ ಅಸ್ಥಿರತೆಯ ಕಲಹಗಳು ಆರಂಭವಾದ್ದರಿಂದ ಇವನ ರಾಜ್ಯದ ಪ್ರಗತಿಗೆ ಯಾವುದೇ ಅಡೆತಡೆಗಳು ಉಂಟಾಗಲಿಲ್ಲ. ಆದರೆ ಅವನಿಗಿದ್ದ ಒಂದು ಪ್ರಬಲ ವಿರೋಧವೆಂದರೆ ಮರಾಠರು ಅನುಸರಿಸಿದ ವಿಸ್ತರಣೆಯ ನೀತಿಯಾಗಿತ್ತು. ಆದರೂ ತನ್ನ 'ರಾಜ್ಯ ನಿರ್ಬಂಧ ನೀತಿ'ಯಿಂದ ಸುಲಭವಾಗಿ ಮರಾಠರನ್ನು ಹತೋಟಿಯಲ್ಲಿಟ್ಟಿದ್ದನು. ಕಮುರೋದ್ದಿನನು ಮರಣ ಹೊಂದುವ ವೇಳೆಗೆ ದಖನ್ನಿನಲ್ಲಿ ತನ್ನ ಸಾಮ್ರಾಜ್ಯದ ಆಳ್ವಿಕೆಯನ್ನು ಸುಭದ್ರಗೊಳಿಸಿಕೊಂಡನು. ಇವನ ಜೀವಿತ ಅವಧಿಯಲ್ಲಿ ಮರಾಠರು ಈತನಿಂದ ಚೌತ ತೆರಿಗೆಯನ್ನು ವಸೂಲಿ ಮಾಡುತ್ತಿದ್ದರೆಂದು ವ್ಯಕ್ತವಾಗುತ್ತದೆ. ಕಮುರೋದ್ದಿನ್ ನಿಧನವಾದ ಮೇಲೆ ಹೈದರಾಬಾದಿನಲ್ಲಿ ನಾಸಿರ್‌ಜಂಗ್ ಮತ್ತು ಅಕ್ಕನ ಮಗ ಮುಜಾಫರ್‌ಜಂಗ್ ಇಬ್ಬರ ನಡುವೆ ಸಿಂಹಾಸನಕ್ಕಾಗಿ ಕಲಹ ಆರಂಭವಾಯಿತು.[೮] ಈ ವೇಳೆಗಾಗಲೇ ದಕ್ಷಿಣ ಭಾರತದಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿಕೊಂಡಿದ್ದ ಫ್ರೆಂಚರು ಮತ್ತು ಬ್ರಿಟಿಶರು ಈ ಸಿಂಹಾಸನ ಕಲಹದಲ್ಲಿ ಪರವಿರೋಧ ಪಕ್ಷವನ್ನು ವಹಿಸಿ ಪ್ರವೇಶ ಮಾಡಿದರು. ಇದನ್ನು ಚರಿತ್ರೆಯಲ್ಲಿ ಕರ್ನಾಟಕ ಯುದ್ಧಗಳೆಂದು ಗುರುತಿಸಬಹುದಾಗಿದೆ. ಪ್ರಾರಂಭದಲ್ಲಿ ಫ್ರೆಂಚರು ಹೈದರಾಬಾದ್ ಸಂಸ್ಥಾನದ ಆಂತರಿಕ ವಿಷಯದಲ್ಲಿ ಪ್ರವೇಶಿಸಿ ಸಂಸ್ಥಾನವನ್ನು ವಸಾಹತು ಪ್ರದೇಶವನ್ನಾಗಿ ಮಾಡುವುದಕ್ಕೆ ಏನೆಲ್ಲಾ ಪ್ರಯತ್ನ ಮಾಡಿದರು.[೯] ಆದರೆ ಇವರಂತೆ ಬ್ರಿಟಿಶರು ಕೂಡ ಹೈದರಾಬಾದ್ ಸಂಸ್ಥಾನದಲ್ಲಿ ತಮ್ಮ

ವಸಾಹತು ಸ್ಥಾಪನೆ ಮಾಡುವುದಕ್ಕಾಗಿ ತಮ್ಮ ಬದ್ಧವೈರಿಯಾದ ಫ್ರೆಂಚರನ್ನು ಹೇಗಾದರೂ ಮಾಡಿ ಈ ಪ್ರದೇಶದಿಂದ ಕಾಲು ತೆಗೆಯುವಂತೆ ಮಾಡುವಲ್ಲಿ ಯಶಸ್ವಿಯಾದರು. ನಂತರ ಬ್ರಿಟಿಶರು ಹೈದರಾಬಾದನ್ನು ವಸಾಹತು ಸಂಸ್ಥಾನವೆಂದು ಕರೆಯದೆ ಮಿತ್ರ ಸಂಸ್ಥಾನವೆಂದು ಘೋಷಿಸಿ ಸಂಸ್ಥಾನದ ಮೇಲೆ ಸಂಪೂರ್ಣ ನಿಯಂತ್ರಣ ಹೇರಿದರು.[೧೦]

೨. ನವಾಬ್ ನಿಜಾಮ್ ಅಲಿಖಾನ್(೧೭೬೧–೧೮೦೩)

ನಿಜಾಮ್–ಉಲ್–ಮುಲ್ಕನ ತರುವಾಯ ಉತ್ತರಾಧಿಕಾರಕ್ಕಾಗಿ ನಡೆದ ಯುದ್ಧದಲ್ಲಿ ನವಾಬ್ ನಿಜಾಮ್ ಅಲಿಖಾನ್ ತಾನೇ ಎರಡನೆಯ ನಿಜಾಮನೆಂದು ಘೋಷಿಸಿಕೊಂಡಿದ್ದರಿಂದ ನಿಜಾಮ್ ಮನೆತನದ ಚರಿತ್ರೆಯಲ್ಲಿ ಎರಡನೆಯ ನಿಜಾಮನಾಗಿ ಅಧಿಕಾರ ನಡೆಸಿದನು. ನಿಜಾಮ್ ಅಲಿಖಾನ್ ಆರಂಭದಲ್ಲಿ ಸಂಸ್ಥಾನದ ರಾಜಕೀಯ, ಆರ್ಥಿಕ, ಸಾಮಾಜಿಕ, ಸ್ಥಿತಿಗತಿಯನ್ನು ಗಮನಿಸಿ ಅಸಫಿಯಾ ಮನೆತನದ ಉಳಿವಿಗಾಗಿ ಅನೇಕ ಒಪ್ಪಂದಗಳನ್ನು ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದನು. ಯುರೋಪಿಯನ್ನರಾದ ಫ್ರೆಂಚರು ಮತ್ತು ಬ್ರಿಟಿಶರು ತಮ್ಮ ತಮ್ಮ ವಸಾಹತು ಪ್ರದೇಶಗಳ ವಿಸ್ತರಣೆಗಾಗಿ ಕಾದಾಡುತ್ತಿರುವ ಸಂದರ್ಭವನ್ನು ಸೂಕ್ಷ್ಮವಾಗಿ ಅವಲೋಕಿಸಿ ತನ್ನ ಪ್ರಭುತ್ವ ಗಟ್ಟಿಗೊಳಿಸುವ ನಿರ್ಧಾರಕ್ಕೆ ಬಂದನು. ಫ್ರೆಂಚರು ಬ್ರಿಟಿಶರ ವಿರುದ್ಧ ಯುದ್ಧದಲ್ಲಿ ಸೋಲನ್ನೊಪ್ಪಿಕೊಂಡ ನಂತರ ಭಾರತದಲ್ಲಿ ಅವರ ಪ್ರಭಾವ ಕಡಿಮೆಯಾಗುತ್ತಿರುವುದನ್ನು ಕಂಡು ನಿಜಾಮ್ ಅಲಿಖಾನ್ ಬ್ರಿಟಿಶರ ಸ್ನೇಹಹಸ್ತ ಚಾಚಿದನು. ಈ ಸಂದರ್ಭಕ್ಕಾಗಿ ಕಾಯುತ್ತಿದ್ದ ಈಸ್ಟ್ ಇಂಡಿಯಾ ಕಂಪನಿ ನಿಜಾಮನ ಜೊತೆ ಅನೇಕ ಒಪ್ಪಂದಗಳನ್ನು ಮಾಡಿಕೊಂಡಿತು.[೧೨] ನಿಜಾಮನು ಪ್ರಭುತ್ವ ಉಳಿಸಿಕೊಳ್ಳಲು ಸಮಯಸಾಧಕನಂತೆ ಬಲ ಇದ್ದವರ ಕಡೆಗೆ ವಾಲುತ್ತಿದ್ದನು. ಫ್ರೆಂಚರ ಬಲ ಹೆಚ್ಚುತ್ತಿರುವುದು ಕಂಡರೆ ಫ್ರೆಂಚರ ಕಡೆಗೆ, ಬ್ರಿಟಿಶರು ಮೇಲುಗೈ ಸಾಧಿಸುತ್ತಿದ್ದರೆ ಬ್ರಿಟಿಶರ ಕಡೆ ವಾಲುತ್ತಿದ್ದನು. ಇದನ್ನು ಕಂಡುಕೊಂಡ ಬ್ರಿಟಿಶರು ಈಸ್ಟ್ ಇಂಡಿಯಾ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳುವಂತೆ ಪ್ರೇರೇಪಿಸಿದರು. ಕೊನೆಗೆ ನಿಜಾಮ್ ಅಲಿಖಾನ್ ಸಹಾಯಕ ಸೈನ್ಯಪದ್ಧತಿಗೆ ಸಹಿ ಹಾಕಿ ಸಂಪೂರ್ಣವಾಗಿ ಬ್ರಿಟಿಶ್ ಕೈಗೊಂಬೆಯಾದನು.[೧೩] ಈ ಪದ್ಧತಿಗೆ ಸಹಿ ಹಾಕಿದ ಸಂಸ್ಥಾನವು ಕಡ್ಡಾಯವಾಗಿ ಒಬ್ಬ ಬ್ರಿಟಿಶ್ ರೆಸಿಡೆಂಟನನ್ನು ಆಡಳಿತ ಅಧಿಕಾರಿಯಾಗಿ ಒಪ್ಪಿಕೊಳ್ಳಬೇಕಾಯಿತು. ಹೈದರಾಬಾದ್ ಸಂಸ್ಥಾನದಲ್ಲಿ ಕೂಡ ಮಿ.ಹಾಲೆಮಡ್ ಮೊದಲನೆಯ ಬ್ರಿಟಿಶ್ ರೆಸಿಡೆಂಟನಾದನು. ಇದರಿಂದ ಫ್ರೆಂಚರ ಪ್ರಭಾವ ಕಣ್ಮರೆಯಾಯಿತು. ಸಹಾಯಕ ಸೈನ್ಯ ಪದ್ಧತಿ ಒಪ್ಪಂದದ ಮೇರೆಗೆ ಬ್ರಿಟಿಶರು ನಿಜಾಮನನ್ನು ಸಾಧ್ಯವಾದಷ್ಟು ತಮ್ಮ ಹಿಡಿತದಲ್ಲಿಟ್ಟುಕೊಂಡರು. ಹೀಗೆ ನಿಜಾಮ್ ಅಲಿಖಾನ್ ಅಧಿಕಾರ ಚಲಾಯಿಸುತ್ತಾ ೧೮೦೩ರಲ್ಲಿ ಮರಣ ಹೊಂದಿದನು.[೧೪]

೩. ನಿಜಾಮ್ ಸಿಕಂದರ್ ಬಹದ್ದೂರ್(೧೮೦೪–೧೯೨೮)

ಮೀರ್ ನಿಜಾಮ್ ಅಲಿಖಾನ್‌ನ ನಂತರ ಹಿರಿಯ ಮಗ ಸಿಕಂದರ್ ಬಹದ್ದೂರ್ ಪಟ್ಟಕ್ಕೆ ಬಂದನು. ಇವನು ಅಧಿಕಾರಕ್ಕಿಂತ ಹೆಚ್ಚಿನ ಗಮನವನ್ನು ಸುಖಸಂಪತ್ತನ್ನು ಅನುಭವಿಸಲು ಕಾಲ ಕಳೆಯುತ್ತಾ ಅರಮನೆಯಲ್ಲಿಯೇ ಇದ್ದನು. ಇಂತಹ ಸಂದರ್ಭದಲ್ಲಿ ನಿಜಾಮನ ಪರಮಾಪ್ತ ಹಾಗೂ ಹಿತೈಷಿಯಾದ ಪ್ರಧಾನಮಂತ್ರಿ ಆಲಮ್‌ನು ೧೮೦೮ರಲ್ಲಿ ಮರಣ ಹೊಂದಿದ್ದರಿಂದ ಆ ಹುದ್ದೆಯ ಮೇಲೆ ಆಲಮ್‌ನ ಸಹೋದರಿಯ ಮಗ ಮುನಿರ್–ಉಲ್–ಮುಲ್ಕನು ಕಣ್ಣಿಟ್ಟಿದ್ದನು. ನಿಜಾಮನೂ ಕೂಡ ಇವನನ್ನೇ ಪ್ರಧಾನ ಮಂತ್ರಿಯಾಗಿಸುವ ಅಭಿಲಾಷೆ ಹೊಂದಿದನು. ಆದರೆ ಬ್ರಿಟಿಶ್ ಅಧಿಕಾರಿ ಲಾರ್ಡ್ ಮಿಂಟೋ ಚಂದೋಲಾಲನನ್ನು ನೇಮಿಸಬೇಕೆಂದು ಒತ್ತಡ ಹಾಕಿದನು. ಬ್ರಿಟಿಶರ ಒತ್ತಡಕ್ಕೆ ಮಣಿದು ಸಿಕಂದರ್ ಬಹದ್ದೂರ್ ಚಂದೋಲಾಲನನ್ನು ಪ್ರಧಾನ ಮಂತ್ರಿಯಾಗಿ ನೇಮಕ ಮಾಡಿದನು. ಬ್ರಿಟಿಶರ ಆಣತಿಯಂತೆ ಪ್ರಧಾನಿಯಾದ ಚಂದೋಲಾಲನು ಸಂಪೂರ್ಣವಾಗಿ ಅವರ ಕೈಗೊಂಬೆಯಾದನು. ಇದೇ ಸಂದರ್ಭದಲ್ಲಿ ಬ್ರಿಟಿಶರು ಮರಾಠರ ಮೇಲೆ ಯುದ್ಧ ಸಾರಿದ್ದರಿಂದ ಈ ಯುದ್ಧದ ಖರ್ಚು ವೆಚ್ಚವೆಲ್ಲ ನಿಜಾಮ್ ಸಂಸ್ಥಾನವೇ ಭರಿಸಬೇಕಾಯಿತು. ಇದರಿಂದ ಸಂಸ್ಥಾನದ ಆರ್ಥಿಕತೆ ದುರ್ಬಲವಾಗಲಾರಂಭಿಸಿತು. ಸಂಸ್ಥಾನದ ಆರ್ಥಿಕತೆಯನ್ನು ಸರಿದೂಗಿಸಿಕೊಳ್ಳಲು ಚಂದೋಲಾಲನು ಬ್ರಿಟಿಶರ ವಸಾಹತು ನೀತಿಯಂತೆ ಮಾಲಾ ಆಡಳಿತ ಪದ್ಧತಿಯನ್ನು ಜಾರಿಗೆ ತಂದನು. ಇದರ ಪ್ರಕಾರ ಆಡಳಿತದ ಪ್ರಮುಖ ಹುದ್ದೆಗಳನ್ನು ನಿರ್ದಿಷ್ಟ ಕಾಲಾವಧಿಗೆ ಗುತ್ತಿಗೆ ಆಧಾರದ ಮೇಲೆ ಹರಾಜು ಹಾಕುತ್ತಾ ಆಡಳಿತವನ್ನು ಖಾಸಗೀಕರಣ ಮಾಡುವುದಾಗಿತ್ತು. ಸಂಸ್ಥಾನದ ಬಂಡವಾಳಶಾಹಿಗಳು, ಭೂಮಾಲೀಕರು, ಜಮೀನ್ದಾರರು ಹೆಚ್ಚಿನ ಹಣವನ್ನು ನೀಡಿ ಪ್ರಮುಖ ಹುದ್ದೆಗಳನ್ನು ಗುತ್ತಿಗೆಗೆ ತೆಗೆದುಕೊಂಡರು. ಹೀಗೆ ಹುದ್ದೆ ಪಡೆದುಕೊಂಡ ಈ ವರ್ಗವು ಹೆಚ್ಚಿನ ಸಂಪತ್ತನ್ನು ಕ್ರೋಡೀಕರಿಸುವುದಕ್ಕಾಗಿ ರೈತಾಪಿವರ್ಗಗಳ ಮೇಲೆ ಅಧಿಕ ತೆರಿಗೆಯನ್ನು ವಿಧಿಸಲು ಆರಂಭಿಸಿದರು. ತೆರಿಗೆಯನ್ನು ನೀಡಲು ನಿರಾಕರಿಸಿದ ರೈತರ ಭೂಮಿ ಯನ್ನು ಬಲವಂತವಾಗಿ ವಶಪಡಿಸಿಕೊಂಡಿದ್ದರು. ಬ್ರಿಟಿಶರು ಚಂದೋಲಾಲನ ಮುಖಾಂತರ ತಮ್ಮ ವಸಾಹತುಶಾಹಿ ಧೋರಣೆಯಂತೆ ಸಂಪತ್ತನ್ನು ಕಬಳಿಸಲು ಈ ನೀತಿ ಜಾರಿಗೊಳಿಸಿದರು. ಇಂತಹ ಆಡಳಿತ ಕ್ರಮದಿಂದ ಸಂಸ್ಥಾನದ ಆರ್ಥಿಕತೆ ಇನ್ನಷ್ಟು ಬಲಹೀನಗೊಂಡಿತು.[೧೬]

ಚಂದೋಲಾಲನ ಅಸಮರ್ಪಕ ಆರ್ಥಿಕ ನಿರ್ವಹಣೆಯಿಂದ ಸಂಸ್ಥಾನದ ಬೊಕ್ಕಸ ಬರಿದಾಗಿ ಹಣಕಾಸಿನ ಮುಗ್ಗಟ್ಟು ಕಾಣಿಸಿಕೊಂಡಿತು. ಆರ್ಥಿಕತೆಯನ್ನು ಸರಿದೂಗಿಸಲು ಬ್ರಿಟಿಶ್ ಖಾಸಗಿ ಲೇವಾದೇವಿಗಾರ ಪಾಲ್ಮೇರ್ ಸಂಸ್ಥೆಯಿಂದ ರೂ. ೬೦ ಲಕ್ಷ ಸಾಲ ಪಡೆದನು. ಪ್ರತಿ ಯಾಗಿ ರೂ.೮ ಲಕ್ಷ ಕಮೀಷನ್ ಹಾಗೂ ಶೇಕಡ ೧೮% ಬಡ್ಡಿಯನ್ನು ಕೊಡಲು ಒಪ್ಪಂದವಾಯಿತು.

ಹೀಗೆ ಸಾಲ ಪಡೆದ ಹಣದಿಂದ ಈಸ್ಟ್ ಇಂಡಿಯಾ ಕಂಪನಿಗೆ ನೀಡಬೇಕಾದ ಬಾಕಿಯನ್ನು ತೀರಿಸಲಾಯಿತು. ಇದರಿಂದ ಸಂಸ್ಥಾನದ ಸಂಕಟವು ತಾತ್ಕಾಲಿಕವಾಗಿ ಪರಿಹಾರಗೊಂಡಿತು. ಆದರೆ ಸಾಲ ನೀಡಿದ ವಿಲಿಯಂ ಪಾಲ್ಮೇರ್ ಸಂಸ್ಥಾನದ ರಾಜಕೀಯದಲ್ಲಿ ಅನಗತ್ಯವಾಗಿ ಹಸ್ತಕ್ಷೇಪ ಮಾಡತೊಡಗಿದನು. ಇದನ್ನು ಸಹಿಸದ ಬ್ರಿಟಿಶ್ ಸರ್ಕಾರ ಸಂಸ್ಥಾನದ ಮೇಲಿನ ಪ್ರಭಾವ ಬಲಪಡಿಸಿಕೊಳ್ಳಲು ವಿಲಿಯಂ ಪಾಲ್ಮೇರ್ ಸಂಸ್ಥೆಯ ಸಾಲವನ್ನು ತಾನೇ ತೀರಿಸಿತು. ಇಷ್ಟೆಲ್ಲ ಘಟನೆ ನಡೆದ ಮೇಲೆ ಎಚ್ಚೆತ್ತುಕೊಂಡ ನಿಜಾಮ್ ಸಿಕಂದರ್ ಬಹದ್ದೂರ್ ೧೮೧೫ರಲ್ಲಿ ಪ್ರಧಾನಿ ಚಂದೋಲಾಲನಿಂದ ಬಲವಂತವಾಗಿ ರಾಜೀನಾಮೆಯನ್ನು ಪಡೆದನು.[೧೭]

೪. ನಿಜಾಮ್ ನಾಸಿರುದ್ದೌಲ್ ಬಹದ್ದೂರ್(೧೮೨೯–೧೮೫೭)

ನಿಜಾಮ್ ಸಿಕಂದರ್ ಬಹದ್ದೂರ್ ಮರಣದ ನಂತರ ಅವನ ಮಗನಾದ ನಾಸಿರುದ್ದೌಲ್ ಪಟ್ಟಕ್ಕೆ ಬಂದನು. ಇವನು ವಿಶಾಲ ಮನೋಭಾವದಿಂದ ಜನಪ್ರಿಯತೆ ಗಳಿಸಿದನು. ಹಾಗೇ ತನ್ನ ತಂದೆಯಂತೆ ಬ್ರಿಟಿಶರ ಜೊತೆ ನಿರಂತರ ಮೈತ್ರಿಯನ್ನು ಬಳಸಿಕೊಳ್ಳಲು ಹೊಸ ಹೊಸ ಕರಾರುಗಳಿಗೆ ಸಹಿ ಹಾಕಿದನು. ಇದಕ್ಕೆ ಪ್ರತಿಯಾಗಿ ಬ್ರಿಟಿಶರು ನಿಜಾಮನನ್ನು ಕೇವಲ ಯುದ್ಧದ ಸಮಯದ ಸೈನಿಕ ಪ್ರತಿನಿಧಿ ಎಂಬ ನಿರ್ಬಂಧವನ್ನು ತೆಗೆದು, ನಿಜಾಮನ ನೆರವಿಗೆ ಒಂದು ಸೈನಿಕ ತುಕಡಿಯ ಸಂಸ್ಥಾನದಲ್ಲಿ ನೆಲೆಗೊಳಿಸಿದರು. ಇದು ನಿಜಾಮ್ ಸರ್ಕಾರವು ಪರೋಕ್ಷವಾಗಿ ಬ್ರಿಟಿಶರ ಅಧೀನದಲ್ಲಿಯೇ ಇರುವಂತೆ ಮಾಡುವ ಹುನ್ನಾರವಾಗಿತ್ತು.[೧೮] ಹಾಗೆ ಈಸ್ಟ್ ಇಂಡಿಯಾ ಕಂಪನಿ ಸೈನಿಕರ ಖರ್ಚು ವೆಚ್ಚವೆಲ್ಲ ಸಂಸ್ಥಾನವೇ ಭರಿಸಬೇಕಾಯಿತು. ಇಂತಹ ಸಂದರ್ಭದಲ್ಲಿ ಸಾಲಾರ್‌ಜಂಗನು ಪ್ರಧಾನಮಂತ್ರಿಯಾಗಿ ನೇಮಕಗೊಂಡಿದ್ದನು. ಸಾಲಾರ್‌ಜಂಗನು ಅಧಿಕಾರ ವಹಿಸಿಕೊಂಡಾಗಿನಿಂದ ಸಂಸ್ಥಾನದಲ್ಲಿ ಹೊಸ ಹೊಸ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಸಿಕಂದರ್ ಬಹದ್ದೂರ್‌ನ ಪ್ರೀತಿಗೆ ಪಾತ್ರನಾಗಿದ್ದನು. ನಿಜಾಮರ ಆಳ್ವಿಕೆಯ ಅವಧಿಯಲ್ಲಿಯೇ ಅತ್ಯಂತ ಶ್ರೇಷ್ಠ ಪ್ರಧಾನಮಂತ್ರಿಯಾಗಿ ಹೆಸರುವಾಸಿಯಾದನು.[೧೯]

ನಿಜಾಮ್ ನಾಸಿರುದ್ದೌಲ್ ಬಹದ್ದೂರ್ ಆರಂಭದ ದಿನಗಳನ್ನು ಬಿಟ್ಟರೆ ೧೮೩೬ ರಿಂದಲೂ ಬ್ರಿಟಿಶರ ಜೊತೆ ಸೌಹಾರ್ದಯುತ ರಾಜಕೀಯ, ಆರ್ಥಿಕ ಸಂಬಂಧವನ್ನು ಕಾಯ್ದುಕೊಂಡಿದ್ದನು. ಬ್ರಿಟಿಶರು ದಮನ ಹಾಗೂ ಓಲೈಸುವ ನೀತಿಗೆ ಅನುಗುಣವಾಗಿ ಮರಾಠ ಹಾಗೂ ಮೈಸೂರು ರಾಜಕೀಯ ಶಕ್ತಿಗಳ ಅಧಿಕಾರ ವಿಸ್ತರಿಸದಂತೆ, ತಮ್ಮ ಆರ್ಥಿಕ ಹಿತಾಸಕ್ತಿ ಮತ್ತು ದಕ್ಷಿಣ ಭಾರತದಲ್ಲಿ ತಮ್ಮ ಪರಮಾಧಿಕಾರವನ್ನು ಕಾಯ್ದುಕೊಳ್ಳಲು ಹೈದರಾಬಾದ್ ಸಂಸ್ಥಾನವನ್ನು ಬ್ರಿಟಿಶರು ಒಂದು ಲಾಭದಾಯಕ ರಾಜ್ಯವನ್ನಾಗಿ ಬಳಸಿದರು. ಈ ಕಾರಣದಿಂದಾಗಿ ಬ್ರಿಟಿಶ್

ಸಾಮ್ರಾಜ್ಯಶಾಹಿ ವಿರುದ್ಧ ಸಿಡಿದೇಳದೆ ಕೊನೆಯವರೆಗೆ ಬ್ರಿಟಿಶರಿಗೆ ವಿಧೇಯನಾಗಿ ಉಳಿದುಕೊಂಡು ೧೮೫೭ರಲ್ಲಿ ಮರಣ ಹೊಂದಿದನು.[೨೦]

೫. ಅಫಜಲುದ್ದೌಲ್ ಬಹದ್ದೂರ್(೧೮೫೭-೧೮೬೯)

ನಾಲ್ಕನೆಯ ನಿಜಾಮ್ ನಾಸಿರುದ್ದೌಲನ ಮರಣದ ನಂತರ ಅಫಜಲುದ್ದೌಲ್ ಬಹದ್ದೂರ್ ಅಧಿಕಾರಕ್ಕೆ ಬಂದನು. ಆರಂಭದಲ್ಲಿ ತನ್ನ ತಂದೆಯು ಬ್ರಿಟಿಶ್ ಜೊತೆ ಹೊಂದಿರುವ ಸಂಬಂಧವನ್ನು ತನ್ನ ಅವಧಿಯಲ್ಲಿ ಮುಂದುವರಿಸಿದನು. ೧೮೫೭ರ ಸಂದರ್ಭದಲ್ಲಿ ಭಾರತದ ಸ್ಥಳೀಯ ಸಂಸ್ಥಾನಗಳು ಬ್ರಿಟಿಶರ ದಬ್ಬಾಳಿಕೆಯಿಂದ ಹೊರಬರಲು, ಹಾಗೆಯೇ ಪ್ರಭುತ್ವವನ್ನು ಉಳಿಸಿ ಕೊಳ್ಳುವುದಕ್ಕಾಗಿ ಸಾಮ್ರಾಜ್ಯಶಾಹಿ ನೀತಿಯ ವಿರುದ್ಧ ಹೋರಾಟಕ್ಕಿಳಿದರು. ಈ ಬೆಳವಣಿಗೆಯಿಂದ ಕಂಗೆಟ್ಟ ಬ್ರಿಟಿಶರು ಹೇಗಾದರೂ ಮಾಡಿ ವಸಾಹತು ಪ್ರದೇಶವನ್ನು ಉಳಿಸಿಕೊಳ್ಳಬೇಕೆಂದು ಪ್ರಯತ್ನಿಸುವ ಸಂದರ್ಭದಲ್ಲಿ ತಮ್ಮ ಪಾಲಿಗೆ ಅತ್ಯಂತ ಪ್ರಮುಖ ಅಸ್ತ್ರವಾಗಿ ಕಂಡವನೇ ಹೈದರಾಬಾದ್ ನಿಜಾಮ. ನಿಜಾಮ್ ಸಂಸ್ಥಾನವು ಭಾರತದಲ್ಲಿ ಅತ್ಯಂತ ದೊಡ್ಡ ಸಂಸ್ಥಾನವಾದ್ದರಿಂದ, ಭಾರತದಲ್ಲಿ ನಾವು ನೆಲೆ ನಿಲ್ಲಬೇಕಾದರೆ ನಿಜಾಮನ ಸಹಕಾರ ಅತ್ಯಂತ ಮುಖ್ಯ ಎಂದು ಭಾವಿಸಿದ ಬ್ರಿಟಿಶರು ಆತನ ಸ್ನೇಹಹಸ್ತ ಚಾಚಿದರು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ನಿಜಾಮ್ ಅಫಜಲುದ್ದೌಲ್ ಬಹದೂರ್ ಬ್ರಿಟಿಶರಿಗೆ ಅಭಯ ಹಸ್ತ ನೀಡಿದ್ದರಿಂದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಶರು ಯಶಸ್ವಿ ಕಂಡರು.[೨೧] ನಿಜಾಮ್ ಮಾಡಿದ ಸಹಾಯಕ್ಕೆ ಪ್ರತಿಫಲವಾಗಿ ಬ್ರಿಟಿಶ್ ಸರ್ಕಾರವು ಒಂದು ಒಪ್ಪಂದ ಮಾಡಿಕೊಂಡಿತು. ಆ ಒಪ್ಪಂದದ ಪ್ರಕಾರ ನಿಜಾಮನು ಬ್ರಿಟಿಶರಿಗೆ ನೀಡಬೇಕಾಗಿದ್ದ ೫೦ ಲಕ್ಷ ರೂ. ಸಾಲವನ್ನು ರದ್ದುಪಡಿಸಿದರು. ಹಾಗೇ ತಮ್ಮ ಹಿಡಿತದಲ್ಲಿರುವ ಹತ್ತಿ ಬೆಳೆಯುವ ಫಲವತ್ತಾದ ಪ್ರದೇಶಗಳಾದ ರಾಯಚೂರು ಧೊ-ಅಬ್, ನಲದುರ್ಗಾ, ಕನಕಗಿರಿ, ಲಿಂಗಸೂಗೂರ ಮತ್ತು ಉಸ್ಮಾನಾಬಾದ್‌ಗಳನ್ನು ನಿಜಾಮನಿಗೆ ಹಿಂದಿರುಗಿಸಿದರು.[೨೨]

೧೮೫೭ರಲ್ಲಿ ಬ್ರಿಟಿಶ್ ವಿರುದ್ಧ ನಡೆಯುತ್ತಿರುವ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಯುದ್ಧದಲ್ಲಿ ಹೈದರಾಬಾದ್ ಪಾಲ್ಗೊಳ್ಳದಂತೆ ನಿಜಾಮ್ ಮತ್ತು ಪ್ರಧಾನಮಂತ್ರಿ ಸಾಲಾರಜಂಗ್ ಜಾಣ್ಮೆಯಿಂದ ನಡೆದುಕೊಂಡಿದ್ದರು. ಹೀಗೆ ಮಾಡುವುದರ ಮೂಲಕ ಬ್ರಿಟಿಶರ ಪ್ರೀತಿಗೆ ಪಾತ್ರರಾಗುವುದರ ಜೊತೆಗೆ ತಮ್ಮ ಸಂಸ್ಥಾನದ ವಿರೋಧಿಗಳಿಗೆ ಎಚ್ಚರಿಕೆಯ ಘಂಟೆ ರವಾನಿಸಿದರು. ನಿಜಾಮರು ದಂಗೆಯನ್ನು ದಮನ ಮಾಡಲು ಎಷ್ಟೆಲ್ಲಾ ಪ್ರಯತ್ನಿಸಿದರೂ ಕೂಡ ಸಂಸ್ಥಾನದಲ್ಲಿ ಕೆಲವು ಕಡೆ ಬ್ರಿಟಿಶರ ಆಳ್ವಿಕೆಯ ದಾಸ್ಯದಿಂದ ಮುಕ್ತರಾಗಲು ಪೇಶ್ವೆ ನಾನಾ ಸಾಹೇಬ್ ಕರೆಯಂತೆ ಹಮ್ಮಿಗೆ ಕೆಂಚನಗೌಡ, ಮುಂಡರಗಿ ಭೀಮರಾವ್, ಸುರಪುರದ ರಾಜಾ ವೆಂಕಟಪ್ಪ ನಾಯಕ ಮುಂತಾದವರ

ಜೊತೆಗೆ ಹೈದರಾಬಾದ್, ಮದರಾಸು, ಮೈಸೂರು, ತಿರುವಾಂಕೂರು ಹಾಗೂ ಕೊಚ್ಚಿನ್ ರಾಜ್ಯಗಳಲ್ಲಿ ಸಹ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದಾಗಿ ಸ್ಪಂದಿಸುತ್ತಿದ್ದರು. ಆದರೆ ನಿಜಾಮನು ಸಣ್ಣಪುಟ್ಟ ಸಂಸ್ಥಾನಗಳನ್ನು ಹತ್ತಿಕ್ಕಲು ಬ್ರಿಟಿಶರ ಅಂಕುಶವನ್ನು ಬಳಸುತ್ತಿದ್ದನು. ಇಷ್ಟಾದರೂ ಸಹ ಸುರಪುರದ ಮತ್ತು ಹಲಗಲಿ ಬೇಡರು, ಸಣ್ಣಪುಟ್ಟ ಪಾಳೆಯಪಟ್ಟು ವೀರರು ವೀರಾವೇಶದಿಂದ ಹೋರಾಡಿ ಬ್ರಿಟಿಶ್ ಸೈನ್ಯದಲ್ಲಿ ಉನ್ನತ ಅಧಿಪತಿಯಾಗಿದ್ದ ಕ್ಯಾಪ್ಟನ್ ನ್ಯೂಬರಿಯನ್ನು ಕೊಂದುಹಾಕಿದರು. ಈ ಘಟನೆಯಿಂದ ಕೋಪಗೊಂಡ ಬ್ರಿಟಿಶರು ಹೈದರಾಬಾದ್ ನಿಜಾಮನ ಸಹಾಯ ಪಡೆದು ಏಕತೆಯಿಂದ ನಡೆಸಿದ ಹೋರಾಟವನ್ನು ದಮನ ಮಾಡುತ್ತಾ ದಕ್ಷಿಣ ಭಾರತದ ಜನತೆಯ ಅಭಿಲಾಷೆ ಈಡೇರದಂತೆ ಮಾಡಿದರು.

ಹೀಗೆ ನಿಜಾಮರು ತಮ್ಮ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಹರಡದ ಹಾಗೇ ನೋಡಿಕೊಂಡಿದ್ದರಿಂದ ೧೮೫೭ರ ಸಂಗ್ರಾಮದ ಅಲೆಗಳು ದಕ್ಷಿಣ ಭಾರತದಲ್ಲಿ ಸಂಪೂರ್ಣವಾಗಿ ಹರಡಲಿಲ್ಲ. ಇದರಿಂದ ಬ್ರಿಟಿಶ್ ಸರ್ಕಾರವು ನಿಜಾಮನಿಗೆ ಅಸಫಿಯಾ ಧ್ವಜ, ರಾಷ್ಟ್ರಗೀತೆ, ಕಂದಾಯ, ಹಣಮುದ್ರಣ, ಪೊಲೀಸ್, ಬ್ಯಾಂಕ್, ಸಾರಿಗೆ ಮುಂತಾದ ಕ್ಷೇತ್ರಗಳಿಗೆ ಪೂರ್ಣ ಅಧಿಕಾರ ನೀಡಿದರು. ೧೮೫೭ರ ಸ್ವಾತಂತ್ರ್ಯ ಸಂಗ್ರಾಮ ಕುರಿತು ಬಾಂಬೆ ಪ್ರಾಂತ್ಯದ ಗವರ್ನರ್ ಭಾರತದ ಗವರ್ನರ್ ಜನರಲ್‌ಗೆ ಬರೆದ ಪತ್ರದಲ್ಲಿ "ನಿಜಾಮ್ ಕೈಬಿಟ್ಟರೆ ಎಲ್ಲವೂ ಕೈ ಬಿಟ್ಟಂತೆ" ಎಂದು ಬರೆದಿದ್ದಾನೆ. ಇದರಿಂದ ಬ್ರಿಟಿಶರಿಗೆ ನಿಜಾಮನು ಎಷ್ಟು ಪ್ರಸ್ತುತವಾಗಿದ್ದನೆಂದು ತಿಳಿದುಬರುತ್ತದೆ.[೨೩]

೬. ಮೆಹಬೂಬ್ ಅಲಿಖಾನ್ ಬಹದ್ದೂರ್(೧೮೬೯–೧೯೧೧)

ಮೆಹಬೂಬ್ ಅಲಿಖಾನ್ ಅಫಜಲುದ್ದೌಲನ ಉತ್ತರಾಧಿಕಾರಿಯಾಗಿ ಕೇವಲ ಮೂರು ವರ್ಷದ ಅಪ್ರಾಪ್ತ ಬಾಲಕ ಪಟ್ಟಕ್ಕೆ ಬಂದನು. ಈ ಸಮಯದಲ್ಲಿ ಆಡಳಿತವನ್ನು ಪ್ರಧಾನ ಮಂತ್ರಿ ಮೊದಲನೆಯ ಸಾಲಾರ್‌ಜಂಗ್ ಹಾಗೂ ನವಾಬ ಶಮ್ಶಲಾ ಉಮ್ರಾ ನೋಡಿಕೊಳ್ಳು ತ್ತಿದ್ದರು.[೨೪] ೧೮೮೪ರವರೆಗೂ ಜಾರಿಯಲ್ಲಿದ್ದ ರಾಜಪ್ರತಿನಿಧಿಗಳ ಆಳ್ವಿಕೆಯನ್ನು ಕೊನೆಗಾಣಿಸಿ ಅದೇ ವರ್ಷ ನಿಜಾಮ್ ಮೆಹಬೂಬ್ ಅಲಿಖಾನ್ ಅಧಿಕಾರ ವಹಿಸಿಕೊಂಡನು. ರಾಜ್ಯದ ಜನತೆ ಈತನ ಆಳ್ವಿಕೆಯ ಕಾಲದಲ್ಲಿ ಬಹಳ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದರು. ಮೆಹಬೂಬ್ ಅಲಿಖಾನ್‌ನು ಶಾಂತಿಪ್ರಿಯನು, ಉದಾರಿಯೂ ಆಗಿದ್ದನು. ಹಿಂದೂ ಮುಸಲ್ಮಾನ ಈ ಎರಡು ಜನಾಂಗದ ಹಿತವನ್ನು ಕಾಪಾಡುವಲ್ಲಿ ಮುತುವರ್ಜಿ ವಹಿಸಿದನು. ಜಾತಿಯ ಆಧಾರದ ಮೇಲೆ ಯಾವ ಭೇದಭಾವವನ್ನೂ ಮಾಡುತ್ತಿರಲಿಲ್ಲ. ಧರ್ಮನಿರಪೇಕ್ಷ ಭಾವನೆಯಿಂದಲೇ ಆಡಳಿತ ನಡೆಸುತ್ತಿದ್ದನು. ಅಂಥ ಒಂದೆರಡು ಪ್ರಸಂಗಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ. ಆ

ಪ್ರಸಂಗಗಳು ಈ ಕೆಳಗಿನಂತಿವೆ. ಅಚ್ಚುತರಾವ್ ಎಂಬ ಒಬ್ಬ ಸುಬೇದಾರನು ನಿಜಾಮ ಸಾಹೇಬರ ಒಲವು ಪಡೆಯುವುದಕ್ಕಾಗಿ ಒಮ್ಮೆ ಮೆಹಬೂಬ್ ಅಲಿಖಾನ ಬಹಾದ್ದೂರನಲ್ಲಿ ತಾನು ಇಸ್ಲಾಂ ಧರ್ಮವನ್ನು ಸ್ವೀಕರಿಸುತ್ತೇನೆ ಎಂದು ವಿನಂತಿಸಿಕೊಂಡನು. ಆಗ ನಿಜಾಮ್ ಬಹದ್ದೂರ್ "ನೀನು ಇಸ್ಲಾಂ ಧರ್ಮವನ್ನು ಸ್ವೀಕರಿಸಬಯಸುವುದಾದರೆ ಮೊದಲು ನಿನ್ನ ಸುಬೇದಾರಿ ಹುದ್ದೆಯನ್ನು ಬಿಡಬೇಕಾಗುತ್ತದೆ. ಏಕೆಂದರೆ ಈ ಹುದ್ದೆ ಇರುವುದು ಬರಿ ಬ್ರಾಹ್ಮಣರಿಗಾಗಿಯೇ ಹೊರತು ಮುಸಲ್ಮಾನರಿಗಲ್ಲ" ಎಂದು ಗದರಿಸಿದನು. ಇಂಥದ್ದೇ ಇನ್ನೊಂದು ಘಟನೆ ಕಂಡುಬರುತ್ತದೆ. ರಾಜ್ಯದ ಪ್ರಧಾನಮಂತ್ರಿಯಾಗಿದ್ದ ಮಹಾರಾಜಾ ಕಿಶನ್ ಪ್ರಸಾದರು ತಮ್ಮ ಸುಲ್ತಾನರ ಧರ್ಮ ನಿರಪೇಕ್ಷತೆಗೆ, ಅವರ ಉದಾರತೆಗೆ ತುಂಬಾ ಮಾರುಹೋಗಿದ್ದರು. ಹಿಂದೂ, ಮುಸ್ಲಿಂ ಎಂಬುದು ಅರ್ಥವಿಲ್ಲದ್ದು, ರಾಜನ ಧರ್ಮವೇ ಪ್ರಜೆಗಳಾದ ನಮ್ಮ ಧರ್ಮ ಎಂಬ ಭಾವನೆ ಅವನದಾಗಿತ್ತು. ಹೀಗಾಗಿ ತಮ್ಮ ಮಗಳನ್ನು ಒಬ್ಬ ಮುಸ್ಲಿಮನಿಗೆ ಕೊಟ್ಟು ಮದುವೆ ಮಾಡಿದನು. ಇಂಥ ಮಹಾರಾಜ ಕಿಶನ್ ಪ್ರಸಾದರು ಒಮ್ಮೆ ತಾವೂ ಮುಸಲ್ಮಾನನಾಗುವ ಇಚ್ಛೆ ವ್ಯಕ್ತಪಡಿಸಿದನು. ಇದರಿಂದ ಕೋಪಗೊಂಡ ನಿಜಾಮ ಮೆಹಬೂಬ್ ಅಲಿಖಾನ್ "ನೀವು ಮುಸಲ್ಮಾನರಾಗುವುದಾದರೆ ಸಂತೋಷವಾಗಿ ಆಗಬಹುದು, ನನ್ನದೇನೂ ಅಭ್ಯಂತರವಿಲ್ಲ. ಆದರೆ ಪರಂಪರೆಯಿಂದ ಹಿಂದೂಗಳಿಗಾಗಿಯೇ ಕಾಯ್ದಿರಿಸಿಕೊಂಡು ಬಂದಿರುವಂತಹ ರಾಜ್ಯದ ಪ್ರಧಾನಮಂತ್ರಿಯ ಪಟ್ಟವನ್ನು ನೀವು ಬಿಡಬೇಕಾಗುತ್ತದೆ" ಎಂದು ಮಾರ್ಮಿಕವಾಗಿ ನುಡಿದರು. ಈ ಮೇಲಿನ ಪ್ರಸಂಗಗಳಿಂದ ನಿಜಾಮನ ಧರ್ಮನಿರಪೇಕ್ಷ ಭಾವನೆ ವ್ಯಕ್ತವಾಗುತ್ತದೆ.[೨೫]

೧೮೯೩ರಲ್ಲಿ ಸ್ವಾಮಿ ವಿವೇಕಾನಂದರು ಸ್ವಲ್ಪಕಾಲ ಹೈದರಾಬಾದಿನಲ್ಲಿ ತಂಗಿದ್ದರು. ಆಗ ಸಿಕಿಂದರಾಬಾದ್ ಮೆಹಬೂಬ್ ಕಾಲೇಜಿನಲ್ಲಿ ಒಂದು ದೊಡ್ಡ ಸಭೆಯನ್ನು ಏರ್ಪಡಿಸಲಾಯಿತು. ಆ ಸಭೆಯನ್ನು ಉದ್ದೇಶಿಸಿ ವಿವೇಕಾನಂದರು ಭಾಷಣ ಮಾಡಿದರು. ಅಲ್ಲಿ ಜಾತಿಭೇದವಿಲ್ಲದೆ ಜನಸಮುದಾಯ ಕಿಕ್ಕಿರಿದು ಸೇರಿತ್ತು. ಜಾತಿ ಚೌಕಟ್ಟಿಲ್ಲದೆ ಹೈದರಾಬಾದ್ ಜನತೆ ಸ್ವಾಮಿಗಳ ವ್ಯಕ್ತಿತ್ವದ ಆಕರ್ಷಣೆಗೆ ಮಾರುಹೋಗಿತ್ತು. ಇನ್ನೊಂದು ಮಹತ್ವದ ಸಂಗತಿಯೆಂದರೆ ನಿಜಾಮನ ದರಬಾರದ ಅನೇಕ ಸದಸ್ಯರು ಹಾಗೂ ಪ್ರಧಾನಮಂತ್ರಿ ಸರ್ ಅಹಮದ್ ಶಹಾ ಹಾಗೂ ಸರ್ ಖುರ್ಷಿದ್ ಅಲಿಖಾನರು ಸ್ವಾಮೀಜಿಯನ್ನು ಸ್ವಾಗತಿಸಲು ಹೈದರಾಬಾದ್ ರೈಲ್ವೆ ನಿಲ್ದಾಣದಲ್ಲಿ ರಾಜರಿದ್ದರು. ಈ ಘಟನೆಯಿಂದ ನಿಜಾಮ ಮೆಹಬೂಬ್ ಅಲಿಖಾನನ ಆಳ್ವಿಕೆಯಲ್ಲಿ ಜನತೆ ಸ್ವತಂತ್ರವಾಗಿ ಬಾಳುವ ಅವಕಾಶವಿದ್ದವು ಎಂದು ತಿಳಿದುಬರುತ್ತದೆ. ಹೀಗೆ ಆಳ್ವಿಕೆ ಮಾಡುತ್ತಾ ನಿಜಾಮ ಮೆಹಬೂಬ್ ಅಲಿಖಾನ್ ೧೯೧೧ರಲ್ಲಿ ಮರಣ ಹೊಂದಿದನು. ನಂತರ ಇವನ ಮಗನಾದ ನಿಜಾಮ್ ಉಸ್ಮಾನ್ ಅಲಿಖಾನ್ ಅಧಿಕಾರಕ್ಕೆ ಬಂದನು.[೨೬]

೭. ಮೀರ್ ಉಸ್ಮಾನ್ ಅಲಿಖಾನ್(೧೯೧೧–೧೯೪೮)

ಹೈದರಾಬಾದ್ ಸಂಸ್ಥಾನದ ನಿಜಾಮರಲ್ಲಿಯೇ ಕೊನೆಯ ನಿಜಾಮ ಮೀರ್ ಉಸ್ಮಾನ್ ಅಲಿಖಾನ್. ಈತನು ಮೆಹಬೂಬ ಅಲಿಖಾನ್‌ನ ತರುವಾಯ ಆಗಸ್ಟ್ ೨೯, ೧೯೧೧ರಲ್ಲಿ ಅಧಿಕಾರಕ್ಕೆ ಬಂದನು. ಪ್ರಾರಂಭದಲ್ಲಿ ತಾನೊಬ್ಬ ಇಸ್ಲಾಂ ಸಾಮ್ರಾಟನಾಗಬೇಕು, ಇಡೀ ಮುಸ್ಲಿಂ ಜಗತ್ತಿನ ಏಕಮಾತ್ರ ಮುಖಂಡನಾಗಬೇಕೆಂಬ ಆಸೆ ಇವನಲ್ಲಿ ಹುಟ್ಟುಕೊಂಡಿತು. ಅದಕ್ಕಾಗಿ ಟರ್ಕಿ ಪದಚ್ಯುತ ಸುಲ್ತಾನನ ಇಬ್ಬರು ಹೆಣ್ಣುಮಕ್ಕಳನ್ನು ತನ್ನ ಪುತ್ರರಾದ ಮೊಹಜಂಜಹಾನ್ ಮತ್ತು ಅಜಂಜರಾನರಿಗೆ ಮದುವೆ ಮಾಡಿಸಿದನು. ಹೀಗೆ ಮದುವೆ ಮಾಡುವ ಮೂಲಕ ಅಂತಾರಾಷ್ಟ್ರೀಯ ವಲಯಗಳಲ್ಲಿ ತನ್ನ ಪ್ರಭಾವ ಬೆಳೆಸಿಕೊಳ್ಳಬೇಕೆಂಬ ಇಚ್ಛೆ ಹೊಂದಿದನು. ಆದರೆ ಮೊಹಜಂಜಹಾನ್‌ನ ಹೆಂಡತಿಯಾದ ನಿಲೋಫರ್ ತನ್ನ ಗಂಡನನ್ನು ತೊರೆದು ಹೋದದ್ದರಿಂದ ನಿಜಾಮನ ಜಗತ್ತಿನ ಮುಖಂಡನಾಗುವ ಆಸೆ ಆಸೆಯಾಗಿಯೇ ಉಳಿಯಿತು.[೨೭]

ಉಸ್ಮಾನ್ ಅಲಿಖಾನನು ಇತರ ಸಂಸ್ಥಾನಿಕರಂತೆ ಸುಧಾರಣಾವಾದಿಯಾಗಿರಲಿಲ್ಲ. ರಾಜ್ಯದ ಸಂಪನ್ಮೂಲಗಳ ಬಹುಭಾಗ ರಾಜ ಪರಿವಾರದವರಿಗೆ ಮೀಸಲಾಗಿರಿಸಿದ್ದರಿಂದ ಸುಲ್ತಾನನು ಆರ್ಥಿಕವಾಗಿ ಶ್ರೀಮಂತನಾಗಿದ್ದನು. ಆಧುನಿಕತೆಗೆ ಹೊಂದಿಕೊಂಡು ತನ್ನ ಜೀವನಶೈಲಿಯಲ್ಲಿ ಅನೇಕ ಬದಲಾವಣೆಗಳನ್ನು ಕಂಡುಕೊಂಡು, ಬ್ರಿಟಿಶರ ಜೊತೆ ಉತ್ತಮವಾದ ಸಂಬಂಧ ಹೊಂದಿದನು. ಬ್ರಿಟಿಶರು ಕೂಡ ಹೈದರಾಬಾದ್ ಸಂಸ್ಥಾನವನ್ನು ಕೇಂದ್ರವಾಗಿಟ್ಟುಕೊಂಡು ಇತರ ಅರಸು ಮನೆತನಗಳ ಮೇಲೆ ನಿಯಂತ್ರಣ ಸಾಧಿಸಿದರು. ನಿಜಾಮ್ ಸಂಸ್ಥಾನದಲ್ಲಿದ್ದ ಬ್ರಿಟಿಶ್ ರೆಸಿಡೆಂಟನು ಆಡಳಿತದಲ್ಲಿ ಸಂಪೂರ್ಣವಾಗಿ ಪ್ರಭಾವ ಬೀರುತ್ತಿದ್ದನು. ಹೀಗೆ ನಿಜಾಮ ಬ್ರಿಟಿಶರ ಅಧೀನನಾಗಿ ಅಧಿಕಾರ ಚಲಾಯಿಸುತ್ತಿದ್ದನು. ಹಾಗೆ ತನ್ನ ರಾಜ್ಯದಲ್ಲಿ ಬ್ರಿಟಿಶರ ಸಹಕಾರದೊಂದಿಗೆ ರೈಲ್ವೆ ಮಾರ್ಗವನ್ನು ಅಭಿವೃದ್ಧಿಪಡಿಸಿದನು. ಕಾಜಿಪೇಟೆ–ಬಲ್ಲಾರ ಶಹಾ ಮಾರ್ಗ, ಮುದಖೇಡ ಆದಿಲಾಬಾದ್ ಮಾರ್ಗವನ್ನು ಬ್ರಾಡ್‌ಗೇಜ್ ಆಗಿ ಪರಿವರ್ತನೆ ಹೊಂದಿ ಇತರ ರಾಜ್ಯಗಳೊಂದಿಗೆ ಸಂಪರ್ಕ ಪಡೆಯಿತು. ೧೯೨೮ರಲ್ಲಿ ಹೈದರಾಬಾದ್ ನಗರದಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಅನುಕೂಲ ಮಾಡಿಕೊಟ್ಟನು. ಮೆಡಿಕಲ್ ಸ್ಕೂಲ್, ಇಂಜಿನಿಯರಿಂಗ್ ಸ್ಕೂಲ್ ಮತ್ತು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ತಾನು ಪ್ರಜಾಪಾಲಕ ದೊರೆ ಎಂದು ತೋರಿಸಿಕೊಟ್ಟನು. ಹಾಗೆಯೇ ನಿಜಾಮನು ಸುಲ್ತಾನ್ ಬಜಾರ್ ಎಂಬ ಪ್ರದೇಶವನ್ನು ಬ್ರಿಟಿಶ್ ರೆಸಿಡೆಂಟ್‌ನಾದ ಹುಂಪೇರನಿಂದ ೧೯೩೩ ಮೇ ೧೪ರಂದು ಮರಳಿ ಪಡೆದನು. ಇದರ ಸವಿನೆನಪಿಗಾಗಿ ನಿಜಾಮ ಮೇ ೧೪ರಂದು ಸಾರ್ವಜನಿಕ ರಜಾ ದಿನ

ಎಂದು ಘೋಷಿಸಿದನು. ಮುಂದೆ ನಿಜಾಮನು ೧೯೩೧ರಿಂದ ೧೯೩ರವರೆಗೆ ದುಂಡು ಮೇಜಿನ ಪರಿಷತ್ತಿನಲ್ಲಿ[೨೮] ತನ್ನ ಸಂಸ್ಥಾನದ ಪ್ರತಿನಿಧಿಯಾಗಿ ಅಕ್ಬರ್ ಬಹದ್ದೂರನನ್ನು ಕಳುಹಿಸಿದನು. ಇದೇ ಸಂದರ್ಭದಲ್ಲಿ ಭಾರತೀಯ ರಾಷ್ಟ್ರೀಯ ಆಂದೋಲನ ಶಕೆ ಪರಾಕಾಷ್ಠೆ ತಲುಪಿತು. ಬ್ರಿಟಿಶರ ಆಪ್ತಮಿತ್ರನಾದ ನಿಜಾಮ ರಾಷ್ಟ್ರೀಯ ಚಳುವಳಿಗಳನ್ನು ಸಂಸ್ಥಾನದಲ್ಲಿ ಹರಡದಂತೆ ಎಚ್ಚರಿಕೆಯನ್ನು ವಹಿಸಿದನು. ಆದರೂ ಕೂಡ ಸಂಸ್ಥಾನದಲ್ಲಿ ರಾಷ್ಟ್ರೀಯ ಚಳುವಳಿ ವ್ಯಾಪಿಸಿತು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ವಂದೇ ಮಾತರಂ ಚಳುವಳಿಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರಿಂದ ಅವರನ್ನು ಕಾಲೇಜುಗಳಿಂದ ಹೊರಹಾಕಲಾಯಿತು. ಕೊನೆಗೂ ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ತೀವ್ರವಾದಾಗ ಬ್ರಿಟಿಶರು ಹಿಂದಿರುಗುವ ಸ್ಥಿತಿಯಲ್ಲಿದ್ದರು. ಅವರು ಭಾರತವನ್ನು ತೊರೆದುಹೋಗುವ ಮುನ್ನ ಸಂಸ್ಥಾನಿಕರಿಗೆ ಸ್ವತಂತ್ರ ಭಾರತದಲ್ಲಿ ವಿಲೀನವಾಗಬಹುದು, ಇಲ್ಲ ಸ್ವತಂತ್ರವಾಗಿಯೇ ಉಳಿದು ರಾಜ್ಯಾಡಳಿತ ನಡೆಸಬಹುದು ಎಂದು ಹೇಳಿಕೆಯನ್ನು ಹೊರಡಿಸಿದರು.[೨೯] ಭಾರತದಲ್ಲಿಯೇ ದೊಡ್ಡ ಸಂಸ್ಥಾನವನ್ನು ಹೊಂದಿರುವ ನಿಜಾಮರು ಇದರಿಂದ ಪ್ರೇರಿತರಾಗಿ ಹೈದರಾಬಾದ್ ಸಂಸ್ಥಾನವು ಸ್ವತಂತ್ರವಾಗಿಯೇ ಮುಂದುವರಿಯುವುದು. ಪ್ರಜೆಗಳು ಸಂಸ್ಥಾನಕ್ಕೆ ನಿಷ್ಠೆಯಿಂದಿರಬೇಕು ಎಂದು ಜೂನ್ ೨೬, ೧೯೪೭ರಲ್ಲಿ ಫರ್ಮಾನು ಹೊರಡಿಸಿದರು. ಮುಂದೆ ಆಗಸ್ಟ್ ೧೫, ೧೯೪೭ರಿಂದ ಸೆಪ್ಟೆಂಬರ್ ೧೭, ೧೯೪೮ರವರೆಗೆ ಹೈದರಾಬಾದ್ ಸಂಸ್ಥಾನವು ಹೋರಾಟದ ಕೇಂದ್ರಬಿಂದುವಾಯಿತು. ಇದರಿಂದ ನಿಜಾಮ್ ಸರ್ಕಾರವನ್ನು ರಕ್ಷಿಸುವ ಹೊಣೆಯನ್ನು "ಇತ್ತೇಹಾದುಲ್ ಮುಸ್ಲಿಮಿನ್" ಸಂಘಟನೆ ಹೊರಲು ಕಟಿಬದ್ಧವಾಯಿತು. ಕಾಶಿಂ ರಜ್ವಿ ತನ್ನ ಅಧೀನದಲ್ಲಿದ್ದ ರಜಾಕಾರರಿಗೆ ಸಂಸ್ಥಾನದ ತುಂಬೆಲ್ಲಾ ಕಾರ್ಯ ನಿರ್ವಹಿಸಲು ಹರಿಬಿಟ್ಟನು. ರಜಾಕಾರರು ತಮ್ಮ ರಜಾಕಾರ ಪಡೆಯನ್ನು ಹೆಚ್ಚಿಸಲು ಜನರನ್ನು ಒತ್ತಾಯದಿಂದ ಸೇರಿಸಿಕೊಳ್ಳತೊಡಗಿದರು. ಅವರ ಜತೆ ಪಠಾಣರು, ನಿಜಾಮ ಪೊಲೀಸರು ಸೇರಿಕೊಂಡು ಹಳ್ಳಿ ಹಳ್ಳಿಗಳಲ್ಲಿ ದಾಳಿ ಮಾಡಿದರು.[೩೦] ಹೈದರಾಬಾದ್ ಪ್ರಾಂತದಲ್ಲಿ ಅರಾಜಕತೆ, ಕೊಲೆ, ಸುಲಿಗೆ ಮತ್ತು ವಲಸೆ ಕಂಡು ಭಾರತ ಸರ್ಕಾರವು ನಿಜಾಮ್ ಆಡಳಿತದ ವಿರುದ್ಧ ಪೊಲೀಸ್ ಕಾರ್ಯಾಚರಣೆ ನಡೆಸಲು ತೀರ್ಮಾನಿಸಿತು. ಉಪಪ್ರಧಾನಿ ಸರದಾರ ವಲ್ಲಭಭಾಯಿ ಪಟೇಲರು ಜನರಲ್ ಚೌದರಿಯವರ ನೇತೃತ್ವದಲ್ಲಿ ಭಾರತೀಯ ಸೇನೆಯನ್ನು ಸೆಪ್ಟೆಂಬರ್ ೧೩, ೧೯೪೮ರಂದು ಸಂಸ್ಥಾನಕ್ಕೆ ಕಳುಹಿಸಿದರು. ಹೈದರಾಬಾದ್ ಸಂಸ್ಥಾನವನ್ನು ಪ್ರವೇಶಿಸಿದ ಭಾರತೀಯ ಸೈನ್ಯವು ರಜಾಕಾರರ ದೌರ್ಜನ್ಯವನ್ನು ಅಡಗಿಸಿ ನಿಜಾಮನನ್ನು ಶರಣಾಗುವಂತೆ ಮಾಡಿತು. ಕೊನೆಗೆ ೧೯೪೮ ಸೆಪ್ಟೆಂಬರ್ ೧೭ರಂದು ಉಸ್ಮಾನ್ ಅಲಿಖಾನ್ ಸ್ವಾತಂತ್ರ್ಯ ಭಾರತದಲ್ಲಿ ವಿಲೀನವಾಗುವುದಕ್ಕೆ ಸಹಿ ಹಾಕಿದನು.[೩೧]

ನಿಜಾಮ್ ಆಳ್ವಿಕೆ ಸ್ವರೂಪದ ಪ್ರಮುಖ ಅಂಶಗಳು

ಕಮುರೋದ್ದಿನ್ ಕಿಲೀಚಖಾನನು ಹೈದರಾಬಾದ್ ಪ್ರದೇಶವನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಮೊಗಲರಿಂದ ಸ್ವಾತಂತ್ರ್ಯ ಘೋಷಿಸಿಕೊಂಡನು. ಹೀಗೆ ಘೋಷಿಸಿಕೊಂಡ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ದೇಶಿಯ ಅರಸು ಮನೆತನಗಳ ಜೊತೆ ನಿರಂತರವಾಗಿ ಹೋರಾಡಬೇಕಾಯಿತು. ಅಂತಹ ದೇಶಿ ಸಂಸ್ಥಾನಗಳೆಂದರೆ ಮರಾಠರು, ಮೈಸೂರಿನ ಹೈದರ್-ಟಿಪ್ಪು, ತಿರುವಂಕೂರು, ಸಣ್ಣ ಪುಟ್ಟ ಪಾಳೇಪಟ್ಟುಗಳ ದಂಗೆಯನ್ನು ಎದುರಿಸುತ್ತಾ ದಕ್ಷಿಣ ಭಾರತದ ರಾಜಕಾರಣದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕಾಗಿತ್ತು. ಅದೇ ಸಂದರ್ಭಕ್ಕೆ ಯುರೋಪಿಯನ್ ರಾಷ್ಟ್ರಗಳು ತಮ್ಮ ವಸಾಹತು ಪ್ರದೇಶದ ವಿಸ್ತರಣೆಗೆ ದಕ್ಷಿಣ ಭಾರತಕ್ಕೆ ಆಗಮಿಸಿದರು. ನಿಜಾಮನು ತನ್ನ ಸಂಸ್ಥಾನದ ಆಡಳಿತವನ್ನು ವಿಸ್ತರಣೆ ಮಾಡುವುದಕ್ಕೆ ಇವರ ಸಹಾಯದಿಂದ ವೈರಿಗಳನ್ನು ಸದೆಬಡಿಯಲು ಪ್ರಯತ್ನಿಸಿದನು. ಹಾಗೆಯೇ ಫ್ರೆಂಚ್ ಮತ್ತು ಬ್ರಿಟಿಶರು ತನ್ನ ಸ್ವತಂತ್ರಕ್ಕೆ ಧಕ್ಕೆ ಬರುವ ರೀತಿಯಲ್ಲಿ ನಡೆದುಕೊಂಡರೆ ಅವರನ್ನು ವಿರೋಧಿಸುತ್ತಿದ್ದರು. ನಿಜಾಮನು ತಮ್ಮ ಆಳ್ವಿಕೆಯ ಸಂದರ್ಭಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತ ಅಸಫಿಯಾ ಮನೆತನದ ಆಡಳಿತ ಗಟ್ಟಿಗೊಳಿಸಲು ಎಲ್ಲ ತರಹದ ಪ್ರಯೋಗಗಳನ್ನು ಪ್ರಯೋಗಿಸಿ ಗೊಂದಲಕ್ಕೊಳಗಾದನು. ಇಂತಹ ಗೊಂದಲಗಳಿಂದ ಹೊರಬರಲು ನಿಜಾಮ ಅನುಸರಿಸಿದ ಧೋರಣೆಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

೧. ಮೊಗಲ್ ಸುಬೇದಾರನಾಗಿ ನಿಜಾಮ್

ನಿಜಾಮ್-ಉಲ್-ಮುಲ್ಕ ಅಸಫಜಹಾ ಒಬ್ಬ ಸಮರ್ಥ, ದಕ್ಷ ಆಡಳಿತಗಾರನಾಗಿದ್ದನು. ಔರಂಗಜೇಬನ ಮರಣದ ನಂತರ ತನ್ನ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳುವ ಸಮಯಕ್ಕಾಗಿ ಕಾಯುತ್ತಿದ್ದನು. ಮೊಗಲ್ ಸುಲ್ತಾನನಾಗಿ ಅಧಿಕಾರ ಸ್ವೀಕರಿಸಿದ ಫರೂಕಶಿಯಾರನು ಅಸಫಜಹಾನ ಸಾಮರ್ಥ್ಯವನ್ನು ಪರಿಗಣಿಸಿ ಆಸ್ಥಾನದ ವಜೀರನನ್ನಾಗಿ ನೇಮಕ ಮಾಡಿಕೊಂಡನು. ಆದರೆ ನಿಜಾಮ್-ಉಲ್-ಮುಲ್ಕನು ಈ ನೇಮಕವನ್ನು ತಿರಸ್ಕರಿಸಿದನು. ಏಕೆಂದರೆ ಉತ್ತರ ಭಾರತದಲ್ಲಿ ಅಧಿಕಾರಕ್ಕಾಗಿ ನಡೆದಿರುವ ಕುತಂತ್ರವನ್ನು ನಿಯಂತ್ರಿಸುವಲ್ಲಿ ಮೊಗಲ್ ದೊರೆ ಸೋತಿರುವುದನ್ನು ಮನಗಂಡು ಉತ್ತರ ಭಾರತದ ಸಂದಿಗ್ಧ ರಾಜಕೀಯದಿಂದ ಮುಕ್ತನಾಗಿ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ದಕ್ಷಿಣ ಪ್ರಾಂತವನ್ನು ಆಯ್ಕೆ ಮಾಡಿಕೊಂಡನು. ಮೊಗಲ್ ದೊರೆ ಫರೂಕಶಿಯಾರನು ಅಸಫಜಹಾನ ಮನದಾಳವನ್ನು ಅರಿತುಕೊಂಡು ದಕ್ಷಿಣ ಸುಬೇದಾರನಾಗಿ ನೇಮಕ ಮಾಡಿದನು. ನಂತರ ಅಧಿಕಾರಕ್ಕೆ ಬಂದ ಮಹಮದ್ ಷಾ ನಿಜಾಮನಿಗೆ ಉತ್ತರ ಭಾರತದ ರಾಜಕಾರಣದಿಂದ ನಿಯಂತ್ರಿಸುವಲ್ಲಿ ವಿಫಲನಾದನು. ದಕ್ಷಿಣ ಸುಭಾ ಒಟ್ಟು ಆರು ಉಪವಿಭಾಗಗಳಿಂದ ಕೂಡಿತ್ತು.

ಅವುಗಳೆಂದರೆ ಖಾನದೇಶ, ಔರಂಗಾಬಾದ್, ಬಿರಾರ್, ಬೀದರ, ಬಿಜಾಪುರ ಮತ್ತು ಹೈದರಾಬಾದ್ ಪ್ರದೇಶಗಳನ್ನು ಒಳಗೊಂಡಿದ್ದವು. ಈ ರೀತಿಯಾಗಿ ಅಧಿಕಾರ ಪಡೆದುಕೊಂಡ ಅಸಫಜಾಹನು ಮೊಗಲ್ ಸುಲ್ತಾನರ ಪ್ರೀತಿಗೆ ಪಾತ್ರನಾಗುತ್ತ ದಕ್ಷಿಣ ಭಾರತದ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದನು.[೩೨]

ನಿಜಾಮನು ದಕ್ಷಿಣ ಸುಬೇದಾರನಾಗಿ ಕೇಂದ್ರ ಸರ್ಕಾರದಿಂದ ಸ್ವತಂತ್ರ ಎಂದು ಬಹಿರಂಗವಾಗಿ ಘೋಷಿಸದಿದ್ದರೂ ಸ್ವತಂತ್ರ ರಾಜನಂತೆಯೇ ಆಳ್ವಿಕೆ ನಡೆಸಿದನು. ದೆಹಲಿಗೆ ತಿಳಿಯದ ಹಾಗೆಯೇ ಅನೇಕ ಯುದ್ಧಗಳನ್ನು ಮಾಡಿ, ಶಾಂತಿಯನ್ನು ಕಾಪಾಡಿದ. ಬಿರುದು, ಜಹಗೀರು ಮತ್ತು ಅಧಿಕಾರಗಳನ್ನು ನೀಡಿದನು. ಹಿಂದೂಗಳ ವಿಷಯದಲ್ಲಿ ಧರ್ಮಸಹಿಷ್ಣುತೆಯ ನೀತಿಯನ್ನು ಅನುಸರಿಸಿದ. ಉದಾಹರಣೆಗೆ ಪುರನ ಚಂದ್ ಎಂಬ ಹಿಂದೂವನ್ನು ತನ್ನ ದಿವಾನನಾಗಿ ನೇಮಿಸಿಕೊಂಡನು. ಮೊಗಲ್ ಸಾಮ್ರಾಜ್ಯದ ಮಾದರಿಯಲ್ಲಿಯೇ ಜಹಗೀರುದಾರಿ ವ್ಯವಸ್ಥೆಯ ಆಧಾರದ ಮೇಲೆ ಡೆಕ್ಕನ್‌ನಲ್ಲಿ ತನ್ನ ಅಧಿಕಾರವನ್ನು ಬಲಪಡಿಸಿದನು. ಜೊತೆಗೆ ದೊಡ್ಡ ದೊಡ್ಡ ಗಲಭೆಕೋರ ಜಮೀನ್ದಾರರಿಗೆ ತನ್ನ ಅಧಿಕಾರವನ್ನು ಗೌರವಿಸುವಂತೆ ಒತ್ತಾಯಿಸಿದ. ಕಂದಾಯ ವ್ಯವಸ್ಥೆಯನ್ನು ಭ್ರಷ್ಟತೆಯಿಂದ ಮುಕ್ತವಾಗುವಂತೆ ಮಾಡಲು ಪ್ರಯತ್ನಿಸಿದನು. ತನ್ನ ಸುಭಾದಲ್ಲಿ ಅಭಿವೃದ್ಧಿ ಕಾರ್ಯ ಮಾಡುತ್ತಾ ದೆಹಲಿಗೆ ಸಂಬಂಧಿಸಿದ ಉತ್ತರ ಭಾರತದ ವ್ಯವಹಾರಗಳಲ್ಲಿ ಕೂಡ ಸುಲ್ತಾನನ ಆಜ್ಞೆಯ ಅನುಸಾರ ಭಾಗವಹಿಸಿ ಮೊಗಲ್ ಸುಲ್ತಾನನ ಮೆಚ್ಚುಗೆಗೆ ಪಾತ್ರನಾದನು. ಹೀಗೆ ಇವನು ಹೆಚ್ಚಿನ ಸಮಯವನ್ನು ಉತ್ತರ ಭಾರತದ ವ್ಯವಹಾರಗಳಲ್ಲಿ ತೊಡಗಿಸಿದ್ದರಿಂದ ಮರಾಠರು ದಕ್ಷಿಣ ಪ್ರಾಂತದ ಪ್ರದೇಶಗಳ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡರು. ಇದರಿಂದ ಎಚ್ಚೆತ್ತುಕೊಂಡ ನಿಜಾಮನು ಸಂಪೂರ್ಣವಾಗಿ ದಕ್ಷಿಣ ಭಾರತವನ್ನು ತನ್ನ ಕೇಂದ್ರಸ್ಥಾನ ಮಾಡಿಕೊಂಡು ಆಡಳಿತ ಮಾಡಿದನು.[೩೩]

೨. ಕರ್ನಾಟಿಕ್ ಯುದ್ಧದಲ್ಲಿ ನಿಜಾಮ್ ಧೋರಣೆ

ನಿಜಾಮರ ಆಳ್ವಿಕೆಯ ಆರಂಭ ಕಾಲದಲ್ಲಿ ಕರ್ನಾಟಕದ ದಕ್ಷಿಣ ಭಾಗವನ್ನು ಹೈದರಾಲಿ, ಮಹಾರಾಷ್ಟ್ರದ ದಕ್ಷಿಣ ಭಾಗವನ್ನು ಪೇಶ್ವೆಗಳು ಆಳ್ವಿಕೆ ನಡೆಸುತ್ತಿದ್ದರು. ನಿಜಾಮ್, ಮರಾಠ ಮತ್ತು ಹೈದರಾಲಿ ದಕ್ಷಿಣ ಭಾರತದಲ್ಲಿ ತಮ್ಮ ಪ್ರಭುತ್ವವನ್ನು ವಿಸ್ತರಿಸುವುದಕ್ಕಾಗಿ ಒಬ್ಬರು ಇನ್ನೊಬ್ಬರನ್ನು ದ್ವೇಷಿಸತೊಡಗಿದರು. ಇಂತಹ ಸಂದರ್ಭದಲ್ಲಿ ಭಾರತಕ್ಕೆ ವ್ಯಾಪಾರಕ್ಕಾಗಿ ಆಗಮಿಸಿದ ಫ್ರೆಂಚ್ ಮತ್ತು ಬ್ರಿಟಿಶರು ಭಾರತದ ಸ್ಥಳೀಯ ಅರಸರ ನಿರ್ಲಕ್ಷ್ಯ ಧೋರಣೆಯನ್ನು ಮನಗಂಡು ಸ್ಥಳೀಯ ರಾಜಕಾರಣದಲ್ಲಿ ಪ್ರವೇಶ ಮಾಡುತ್ತಾ ವಸಾಹತುಗಳನ್ನು ಸ್ಥಾಪಿಸಿದರು. ಹೀಗೆ ಸ್ಥಾಪಿಸಿದ ವಸಾಹತುಗಳನ್ನು ಭಾರತದೆಲ್ಲೆಡೆ ವಿಸ್ತರಿಸುವಲ್ಲಿ ಒಬ್ಬರನ್ನೊಬ್ಬರು ಸ್ಪರ್ಧೆಗಿಳಿದು

ಹೆಚ್ಚಿನ ವಸಾಹತು ಪ್ರದೇಶ ಪಡೆಯುವುದಕ್ಕಾಗಿ ಹೊಂಚುಹಾಕುತ್ತಿದ್ದರು. ನಿಜಾಮ್-ಉಲ್-ಮುಲ್ಕನ ಮರಣಾನಂತರ ಉತ್ತರಾಧಿಕಾರಕ್ಕಾಗಿ ಅಂತಃಕಲಹಗಳು ನಡೆದವು. ನಿಜಾಮನ ಅಧೀನದಲ್ಲಿ ಆಳ್ವಿಕೆ ಮಾಡುತ್ತಿದ್ದ ಸಂಸ್ಥಾನಗಳು ತಮ್ಮ ಅಸ್ತಿತ್ವದ ಹುಡುಕಾಟಕ್ಕಾಗಿ ನಡೆಸಿದ ಪ್ರಯತ್ನದಿಂದ ದಂಗೆಗಳು ಉಲ್ಬಣಗೊಂಡು ದಂಗೆಯ ಯುಗವೇ ಈ ಪ್ರಾಂತ್ಯದಲ್ಲಿ ಆರಂಭವಾಯಿತು. ಇದೇ ಸರಿಯಾದ ಸಮಯವೆಂದು ಫ್ರೆಂಚ್ ಮತ್ತು ಬ್ರಿಟಿಶರು ನಿಜಾಮರ ಅಂತಃಕಲಹದಲ್ಲಿ ಪ್ರವೇಶ ಮಾಡಿದರು. ನಿಜಾಮನ ಮಗ ನಾಸಿರ್‌ಜಂಗನಿಗೂ ಮಗಳ ಮಗ ಮುಜಾಫರ್ ಜಂಗನಿಗೂ ಅಧಿಕಾರಕ್ಕಾಗಿ ತೀವ್ರವಾದ ಹೋರಾಟ ನಡೆಯಿತು.[೨೪] ಈ ಸಮಯವನ್ನು ಉಪಯೋಗಿಸಿಕೊಂಡ ಫ್ರೆಂಚರು ತಮ್ಮ ವಸಾಹತುಶಾಹಿ ನೀತಿಯನ್ನು ಬಲವಂತವಾಗಿ ಹೇರಲು ಪ್ರಯತ್ನಿಸುತ್ತಿದ್ದರು. ಫ್ರೆಂಚರ ಗವರ್ನರ್‌ರಾಗಿದ್ದ ಡೂಪ್ಲೆ ಹೈದರಾಬಾದ್ ಸಂಸ್ಥಾನದ ರಾಜಕಾರಣದಲ್ಲಿ ಪ್ರವೇಶ ಮಾಡಿ ಉತ್ತರಾಧಿಕಾರಕ್ಕಾಗಿ ಬಂಡೆದ್ದ ಮುಜಾಫರ್ ಜಂಗನನ್ನು ಬೆಂಬಲಿಸಿದನು. ಫ್ರೆಂಚರ ಬಲದಿಂದ ಮುಜಾಫರ್‌ಜಂಗನು ಹೇಗಾದರೂ ಮಾಡಿ ಹೈದರಾಬಾದ್ ಸಂಸ್ಥಾನದ ಗದ್ದುಗೆಯನ್ನೇರಲು ಸಾಹಸ ಪಡುತ್ತಿದ್ದನು. ಡೂಪ್ಲೆ ಈ ಬೆಳವಣಿಗೆಯಿಂದ ಜಾಗೃತನಾಗಿ ತಮ್ಮ ಬದ್ಧವೈರಿಯಾದ ಬ್ರಿಟಿಶರಿಗಿಂತ ಫ್ರೆಂಚ್ ವಸಾಹತು ಪ್ರದೇಶವು ವಿಸ್ತರಣೆಯಾಗಬೇಕು ಎಂಬ ಅಭಿಲಾಷೆಯಿಂದ ತನ್ನ ಸೈನಿಕ ಬಲದ ಮೂಲಕ ಹೈದರಾಬಾದ್ ಮೇಲೆ ದಾಳಿ ಮಾಡಿದನು. ಇದರಿಂದ ಕೋಪಗೊಂಡ ಬ್ರಿಟಿಶರು ಫ್ರೆಂಚರ ಶಕ್ತಿಯನ್ನು ಕುಂಠಿತಗೊಳಿಸುವ ಹುನ್ನಾರಕ್ಕಾಗಿ ನಾಸಿರ್‌ಜಂಗನನ್ನು ಬೆಂಬಲಿಸಿದರು. ಹೀಗೆ ಫ್ರೆಂಚ್ ಮತ್ತು ಬ್ರಿಟಿಶರು ಸ್ಥಳೀಯ ರಾಜಕಾರಣವನ್ನು ಸ್ವಯಂ ಪ್ರತಿಷ್ಠೆಯಾಗಿ ತೆಗೆದುಕೊಂಡರು.[೨೫]

ಇದೇ ಸಂದರ್ಭಕ್ಕೆ ಫ್ರಾನ್ಸ್ ಮತ್ತು ಇಂಗ್ಲೆಂಡಿನಲ್ಲಿ ಸಪ್ತ ವಾರ್ಷಿಕ ಯುದ್ಧ ಆರಂಭಗೊಂಡಿತು. ಅದರ ಪ್ರಭಾವ ಬಹುಬೇಗನೆ ಭಾರತದಲ್ಲಿ ಕೂಡ ಕಂಡುಬಂದಿತು. ಫ್ರೆಂಚ್ ಮತ್ತು ಬ್ರಿಟಿಶರು ದಕ್ಷಿಣ ಭಾರತದಲ್ಲಿ ವಸಾಹತು ಪ್ರದೇಶವನ್ನು ಸ್ಥಾಪಿಸಲು ಶಕ್ತಿ ಮೀರಿ ಹೋರಾಡುತ್ತಿದ್ದರು. ೧೭೪೮ರಲ್ಲಿ ಯುರೋಪಿನಲ್ಲಿ ನಡೆದ ಸಪ್ತ ವಾರ್ಷಿಕ ಯುದ್ಧವು ಒಪ್ಪಂದದ ಮೂಲಕ ಕೊನೆಗೊಂಡಿತು. ಆದರೆ ಭಾರತದಲ್ಲಿದ್ದ ವಸಾಹತುಶಾಹಿ ಕಂಪನಿಗಳಾದ ಫ್ರೆಂಚ್ ಮತ್ತು ಬ್ರಿಟಿಶರು ಭಾರತದ ಒಡೆತನದ ವಿಷಯದಲ್ಲಿನ ಪ್ರತಿಸ್ಪರ್ಧೆ ಮುಂದುವರಿಯಿತು. ಫ್ರೆಂಚ್ ಗವರ್ನರ್ ಡೂಪ್ಲೆಯು ಭಾರತದಲ್ಲಿ ಪ್ರಬಲವಾದ ಒಡೆತನ ಸ್ಥಾಪಿಸಲು ಭಾರತೀಯ ಅರಸರ ನಡುವಿನ ವೈಮನಸ್ಸಿನ ಮಧ್ಯ ಪ್ರವೇಶಿಸಿ ಆಧುನಿಕ ಶಿಸ್ತುಬದ್ಧ ಫ್ರೆಂಚ್ ಸೈನ್ಯದ ನೆರವನ್ನು ಪಡೆದು, ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿಕಟ್ಟುತ್ತಾ ಗೆದ್ದ ಪಕ್ಷದಿಂದ ಆರ್ಥಿಕ, ವಾಣಿಜ್ಯ ಮತ್ತು ಪ್ರಾದೇಶಿಕ ನೆರವನ್ನು ಪಡೆಯುವ ಹೊಸ ತಂತ್ರವನ್ನು ಕಂಡುಕೊಂಡನು. ಹೀಗೆ

ಸ್ಥಳೀಯ ಅರಸರ, ನವಾಬರ ಮತ್ತು ಪಾಳೇಪಟ್ಟುಗಳ ಸಂಪನ್ಮೂಲ, ಸೈನ್ಯವನ್ನು ಫ್ರೆಂಚ್ ಕಂಪನಿಯ ಹಿತಕ್ಕಾಗಿ ಬಳಸಿಕೊಂಡು ತನ್ನ ಪ್ರತಿಸ್ಪರ್ಧಿಯಾದ ಬ್ರಿಟಿಶರನ್ನು ಭಾರತದಿಂದ ಹೊರಗಟ್ಟುವ ಯೋಜನೆ ಸಿದ್ಧಪಡಿಸಿದನು. ಈ ರೀತಿಯಾಗಿ ಭಾರತದ ಮೇಲೆ ವಿದೇಶಿಯರು ತಮ್ಮ ಲಾಭಕ್ಕಾಗಿ ಮಾಡುತ್ತಿರುವ ದಬ್ಬಾಳಿಕೆ, ತಂತ್ರಗಾರಿಕೆಯನ್ನು ನಿರಾಕರಿಸುವಲ್ಲಿ ಸ್ಥಳೀಯ ಅರಸರು ಸೋತುಹೋದರು. ಭಾರತೀಯ ಅರಸರಿಗೆ ದೇಶಪ್ರೇಮಕ್ಕಿಂತ ಸ್ವಂತ ಹಿತಾಸಕ್ತಿ, ಅಸ್ತಿತ್ವ, ಅಧಿಕಾರವೇ ಮುಖ್ಯವಾಗಿ ತಮ್ಮ ತಮ್ಮಲ್ಲಿಯೇ ಇರುವ ಆಂತರಿಕ ಪ್ರತಿಸ್ಪರ್ಧೆಯನ್ನು ಪರಿಹರಿಸಿಕೊಳ್ಳಲು ವಿದೇಶಿಯರ ಸಹಾಯಕ್ಕೆ ಕೈಚಾಚಿದರು.[೩೬]

ಮುಜಾಫರ್‌ಜಂಗನು ಹೈದರಾಬಾದ್ ಸಂಸ್ಥಾನದ ಅಧಿಕಾರ ಪಡೆಯುವ ಭರಾಟೆಯಲ್ಲಿ ಡೂಪ್ಲೆಯೊಂದಿಗೆ ಸೇರಿಕೊಂಡು, ಕರ್ನಾಟಕದ ಚಂದಾಸಾಹೇಬನ ಸೈನ್ಯದೊಂದಿಗೆ ರಹಸ್ಯ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದಂತೆ ತ್ರಿಕೂಟ ಸೈನ್ಯವು ಹೈದರಾಬಾದ್ ಸಂಸ್ಥಾನದ ನಾಸಿರ್‌ಜಂಗನ ಮೇಲೆ ದಾಳಿ ಮಾಡಿತು. ದಾಳಿಯನ್ನು ಎದುರಿಸಲಾಗದೆ ನಾಸಿರ್‌ಜಂಗನು ಯುದ್ಧದಲ್ಲಿಯೇ ಕೊಲೆಯಾದ್ದರಿಂದ ಮುಜಾಫರ್‌ಜಂಗನು ಅಧಿಕಾರವನ್ನು ವಹಿಸಿಕೊಂಡನು. ತನ್ನನ್ನು ಬೆಂಬಲಿಸಿದ ಫ್ರೆಂಚ್ ಕಂಪನಿಗೆ ಪಾಂಡಿಚೇರಿಯ ಸಮೀಪದ ಪ್ರದೇಶವನ್ನು ಬಹುಮಾನವಾಗಿ ನೀಡಿ, ಕಂಪನಿಗೆ ೫ ಲಕ್ಷ ಹಣದ ಜೊತೆಗೆ ಸೈನ್ಯದ ಖರ್ಚು ವೆಚ್ಚ ನೀಡಲು ಒಪ್ಪಿದನು. ಇದಕ್ಕೆ ಪ್ರತಿಯಾಗಿ ಡೂಪ್ಲೆ ಮುಜಾಫರ್‌ಜಂಗನ ರಕ್ಷಣೆಯ ನೆಪದಲ್ಲಿ ಫ್ರೆಂಚ್ ಸೈನ್ಯ ಹೈದರಾಬಾದಿನಲ್ಲಿಯೇ ಇರಿಸುವ ಮುಖಾಂತರ ತಮ್ಮ ವಸಾಹತು ನೀತಿಯನ್ನು ಗಟ್ಟಿಗೊಳಿಸಿದನು. ಮುಜಾಫರ್‌ಜಂಗನು ಅಧಿಕಾರ ಸ್ವೀಕರಿಸಿ ರಾಜಧಾನಿಗೆ ಬರುವಾಗ ಅಕಸ್ಮಿಕವಾಗಿ ಕೊಲೆಯಾದನು. ತಕ್ಷಣ ಫ್ರೆಂಚ್ ಅಧಿಕಾರಿ ಬುಸ್ಸಿಯು ನಿಜಾಮ್-ಉಲ್-ಮುಲ್ಕನ ಮೂರನೇ ಮಗ ಸಲಬತ್ ಜಂಗನನ್ನು ಸಿಂಹಾಸನದ ಮೇಲೆ ಕೂರಿಸಿದನು. ಇದರಿಂದ ಸಂತೋಷಗೊಂಡ ಸಲಬತ್‌ಜಂಗನು ಫ್ರೆಂಚರಿಗೆ ಮುಸ್ತಾಫಾ ನಗರ, ರಾಜಮುದ್ರೆ ಮತ್ತು ಚಿಕಾಕೋಲ್ ಎಂಬ ಜಿಲ್ಲೆಗಳನ್ನೊಳಗೊಂಡ ಉತ್ತರ ಸರ್ಕಾರಗಳನ್ನು ಬಿಟ್ಟುಕೊಟ್ಟನು. ಇದರಿಂದ ನಿಜಾಮನು ಪಡೆದುಕೊಂಡಿರುವುದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚಿನದಾಗಿತ್ತು. ತಾನು ಸಂಸ್ಥಾನದ ನಿಜಾಮನೆಂದು ಭಾವಿಸಿದನು. ಆದರೆ ವಾಸ್ತವವಾಗಿ ತನ್ನ ಸ್ವತಂತ್ರವನ್ನು ಕಳೆದುಕೊಂಡಿದ್ದನು.[೩೭] ಬ್ರಿಟಿಶರು ಕೂಡ ಭಾರತದ ಮೇಲೆ ತಮ್ಮ ಹಿಡಿತವನ್ನು ಸ್ಥಾಪಿಸಲು ಫ್ರೆಂಚರ ವಿರುದ್ಧ ಯುದ್ಧಗಳನ್ನು ಆರಂಭಿಸಿದರು. ಅಷ್ಟರಲ್ಲಿಯೇ ೧೭೫೪ರಲ್ಲಿ ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳ ನಡುವೆ ಆದ ಶಾಂತಿ ಒಪ್ಪಂದದ ಪ್ರಕಾರ ಭಾರತದಲ್ಲಿಯೂ ಶಾಂತಿ ನೆಲೆಸಿತು. ಹೀಗೆ ಕರ್ನಾಟಕ ಯುದ್ಧದಲ್ಲಿ ನಿಜಾಮ್ ತಮ್ಮ ಅಸ್ತಿತ್ವಕ್ಕಾಗಿ ಹಲವಾರು ಒಪ್ಪಂದಗಳಿಗೆ ಒಳಗಾಗಿದ್ದನು. ಫ್ರೆಂಚರ ಬೆಂಬಲಿತ ಸಲಬತ್‌ಜಂಗ್

ಅಧಿಕಾರದಲ್ಲಿದ್ದಾಗ ಇವನ ತಮ್ಮನಾದ ನಿಜಾಮ್ ಅಲಿಖಾನ್ ಬಂಡಾಯ ಎದ್ದನು. ಆಗ ಸಲಬತ್ ಜಂಗ್‌ನು ಬ್ರಿಟಿಶರ ಮೊರೆಹೋದನು. ಇದೇ ಸಂದರ್ಭವನ್ನು ಬ್ರಿಟಿಶರು ಸರಿಯಾಗಿ ಉಪಯೋಗಿಸಿಕೊಂಡು ನಿಜಾಮ್ ಅಲಿಖಾನನನ್ನು ಅಧಿಕಾರಕ್ಕೆ ತಂದರು. ಇಲ್ಲಿಂದಲೇ ನಿಜಾಮರು ಬ್ರಿಟಿಶರ ಹಿಡಿತಕ್ಕೆ ಒಳಗಾದರು.[೩೮]

೩. ಆಂಗ್ಲೋ–ಮೈಸೂರು ಯುದ್ಧದಲ್ಲಿ ನಿಜಾಮ್

ದಕ್ಷಿಣ ಭಾರತದಲ್ಲಿ ಹೈದರಾಲಿ ಪ್ರಬಲವಾಗುತ್ತಿರುವುದು ನೋಡಿ ಬ್ರಿಟಿಶರಿಗೆ ಇದನ್ನು ಸಹಿಸದಾಯಿತು. ಹೇಗಾದರೂ ಮಾಡಿ ಹೈದರಾಲಿಯನ್ನು ನಿಯಂತ್ರಿಸುವ ಯೋಜನೆಯಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿ ಅಂತಹ ಒಂದು ಅವಕಾಶಕ್ಕಾಗಿ ಕಾಯುತ್ತಿತ್ತು. ಹೈದರಾಲಿ ದಕ್ಷಿಣ ಭಾರತದ ಸಣ್ಣಪುಟ್ಟ ಪಾಳೇಗಾರರನ್ನು ನಿಯಂತ್ರಿಸುವ ಮೂಲಕ ತನ್ನ ಆಡಳಿತ ವ್ಯಾಪ್ತಿಯನ್ನು ವಿಸ್ತರಿಸಿದನು. ಇದರಿಂದ ಎಚ್ಚೆತ್ತುಕೊಂಡ ಹೈದರಾಬಾದ್ ನಿಜಾಮನು ದಕ್ಷಿಣ ರಾಜಕೀಯದಲ್ಲಿ ನನಗಿಂತ ಪ್ರಬಲವಾಗುತ್ತಿರುವ ಹೈದರಾಲಿಯನ್ನು ಸದೆಬಡಿಯಲು ತನ್ನ ಬದ್ಧವೈರಿಯಾದ ಮರಾಠರೊಡನೆ ಕೈಜೋಡಿಸಿದನು. ಹೈದರಾಲಿಗೆ ಅಧಿಕಾರ ಹಿಡಿಯುವ ಹಕ್ಕಿಲ್ಲವೆಂದು ನಿಜಾಮ್ ಅಲಿಖಾನ್ ದ್ವೇಷಿಸಿ, ಮರಾಠರ ಜೊತೆಗೂಡಿ ಬ್ರಿಟಿಶರ ಸಹಾಯಹಸ್ತ ಚಾಚಿದನು.[೩೯] ಇದೇ ಅವಕಾಶಕ್ಕಾಗಿ ಕಾಯುತ್ತಿದ್ದ ಬ್ರಿಟಿಶರು, ನಿಜಾಮ್ ಮತ್ತು ಮರಾಠರೊಡನೆ ತ್ರಿಪಕ್ಷೀಯ ಮೈತ್ರಿಕೂಟ ಒಪ್ಪಂದ ಮಾಡಿಕೊಂಡರು. ನಿಜಾಮನು ಒಪ್ಪಂದದಲ್ಲಿ ಬ್ರಿಟಿಶರಿಗೆ ಒಂದು ಷರತ್ತು ವಿಧಿಸಿದನು. ಅ ಷರತ್ತಿನ ಪ್ರಕಾರ ಮೈತ್ರಿಕೂಟ ವಿಜಯಶಾಲಿಯಾದರೆ ಮೈಸೂರು ಸಂಸ್ಥಾನದ ಉತ್ತರ ಪ್ರದೇಶಗಳನ್ನು ತನಗೊಪ್ಪಿಸಬೇಕೆಂಬ ಬೇಡಿಕೆ ಇಟ್ಟನು. ಬ್ರಿಟಿಶ್ ಸರ್ಕಾರವು ಹೈದರಾಲಿಯನ್ನು ಮಟ್ಟ ಹಾಕುವುದಕ್ಕಾಗಿ ನಿಜಾಮನ ಷರತ್ತಿಗೆ ಒಪ್ಪಿಗೆ ನೀಡಿತು. ಇದರಿಂದ ನಿಜಾಮನು ದಕ್ಷಿಣ ಭಾರತದಲ್ಲಿ ಪ್ರಬಲವಾಗುತ್ತಿರುವ ಹೈದರಾಲಿಯನ್ನು ಸದೆಬಡಿಯುವುದರ ಜೊತೆಗೆ ಮೈಸೂರಿನ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದರ ಮುಖಾಂತರ ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆಯಬಹುದು ಎಂದುಕೊಂಡಿದ್ದನು. ಚಾಣಕ್ಯನಾದ ಹೈದರಾಲಿ ಬೀಸುವ ದೊಣ್ಣೆ ಏಟಿನಿಂದ ತಪ್ಪಿಸಿಕೊಳ್ಳಲು ಮರಾಠರಿಗೆ ಪೊಗದಿ ಹಣವನ್ನು ನೀಡುವುದರ ಮೂಲಕ ಮೈತ್ರಿ ಕೂಟದಿಂದ ಹೊರನಡೆಯುವಂತೆ ಮಾಡಿದನು.

ನಿಜಾಮನು ಬ್ರಿಟಿಶರ ಆಣತಿಯಂತೆ ಮೈಸೂರಿನ ಮೇಲೆ ಯುದ್ಧ ಸಾರಿದನು. ಯಾವುದೇ ಪ್ರಯೋಜನ ಆಗಲಿಲ್ಲ. ಇದರಿಂದ ಬ್ರಿಟಿಶರು ನಿಜಾಮನ ಮೈತ್ರಿಯಿಂದ ಕೂಡ ಹೈದರಾಲಿಯನ್ನು ಹತ್ತಿಕ್ಕಲು ಆಗಲಿಲ್ಲವೆಂದು ಅಸಮಾಧಾನಗೊಂಡಿದ್ದರು. ಈ ಸಮಯದಲ್ಲಿ ನಿಜಾಮನು ಒಪ್ಪಂದದಂತೆ ನಡೆದುಕೊಳ್ಳುವಲ್ಲಿ ಬ್ರಿಟಿಶರು ವಿಫಲವಾಗಿದ್ದಾರೆ ಎಂದು ದೂಷಿಸಿ ಹೈದರಾಲಿಯ ಪರ ವಾಲಿದನು.

ನಿಜಾಮನು ತನ್ನ ಅಧಿಕಾರ, ಸಂಪತ್ತು ಮತ್ತು ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೈದರಾಲಿಯ ಜೊತೆಗೂಡಿ ಕರ್ನಲ್ ಸ್ಮಿತ್ ನೇತೃತ್ವದ ಸೈನ್ಯವನ್ನು ಎದುರಿಸಿದನು. ಆದರೆ ನಿಜಾಮನ ಮೈತ್ರಿಗೆ ಯಾವುದೇ ಜಯವಾಗಲಿಲ್ಲ. ಈ ಬೆಳವಣಿಗೆಯಿಂದ ಕೋಪಗೊಂಡ ಬ್ರಿಟಿಶರು ಹೈದರಾಲಿಯ ಮೇಲೆ ಯುದ್ಧ ಸಾರಿದರೂ ಯಾವುದೇ ಪ್ರಯೋಜನ ಆಗದಿದ್ದರಿಂದ ಒಪ್ಪಂದ ಮಾಡಿಕೊಂಡರು. ಆದರೆ ತಮಗೆ ಮೋಸ ಮಾಡಿದ ನಿಜಾಮನಿಗೆ ಬುದ್ಧಿ ಕಲಿಸುವುದಕ್ಕಾಗಿ ಹೈದರಾಬಾದ್ ಮೇಲೆ ದಾಳಿ ಮಾಡಲು ಪೂರ್ವ ತಯಾರಿ ನಡೆಸಿದರು. ಇದನ್ನು ಮನಗಂಡ ನಿಜಾಮನು ಹೈದರಾಲಿಯನ್ನು ತೊರೆದು ಮಚಲೀಪಟ್ಟಣ ಒಪ್ಪಂದದನ್ವಯ ಬ್ರಿಟಿಶರ ಮೈತ್ರಿಗೆ ಸೇರಿಕೊಂಡನು. ಈ ಒಪ್ಪಂದದಂತೆ ನಿಜಾಮನು ಹೈದರಾಲಿಯನ್ನು ಆಕ್ರಮಣಕಾರಿಯೆಂದು ಪರಿಗಣಿಸಿ, ಮೈಸೂರಿನ ದಿವಾನಿಯ ಹಕ್ಕನ್ನು ಬ್ರಿಟಿಶರಿಗೆ ನೀಡುವುದರ ಜೊತೆಗೆ ಹೈದರಾಲಿಯ ಮೇಲೆ ಯುದ್ಧ ಸಾರಿದಾಗ ಸೈನಿಕ ನೆರವನ್ನು ನೀಡಲು ಒಪ್ಪಿದನು. ಹೀಗೆ ನಿಜಾಮನು ತನ್ನ ಪ್ರಭುತ್ವವನ್ನು ಉಳಿಸಿಕೊಳ್ಳುವ ಭರಾಟೆಯಲ್ಲಿ ಡೋಲಾಯ ಮಾನದ ಸ್ಥಿತಿಯಂತೆ ನಡೆದುಕೊಂಡನು.[೪೦]

೧೭೭೫ರಲ್ಲಿ ಮರಾಠರ ನಾನಾ ಫಡ್ನವೀಸ್ ಮತ್ತು ರಘುನಾಥರಾವ್ ನಡುವೆ ಅಧಿಕಾರಕ್ಕೆ ಸಂಘರ್ಷ ನಡೆದಿತ್ತು. ಈ ಸಂದರ್ಭದಲ್ಲಿ ಬೊಂಬೆ ಪ್ರೆಸಿಡೆನ್ಸಿ ಅಧಿಕಾರಿಗಳು ರಘುನಾಥರಾವ್‌ನ ಪರವಾಗಿ ಮಧ್ಯೆ ಪ್ರವೇಶಿಸಲು ನಿರ್ಧರಿಸಿದರು. ಇದರಿಂದ ಕೋಪಗೊಂಡ ಮರಾಠ ನಾಯಕರೂ ಪೇಶ್ವೆ ಮತ್ತು ನಾನಾ ಫಡ್ನವೀಸ್ ನೇತೃತ್ವದಲ್ಲಿ ಒಗ್ಗಟ್ಟಾಗಿ ರಘುನಾಥರಾವನನ್ನು ಮತ್ತು ಬ್ರಿಟಿಶರನ್ನು ಎದುರಿಸಲು ಸಿದ್ಧರಾದರು. ಹೈದರಾಲಿಯು ಬ್ರಿಟಿಶರ ವಿರುದ್ಧ ಮರಾಠರನ್ನು ಬೆಂಬಲಿಸಿದನು. ಇದೇ ಸಮಯಕ್ಕೆ ನಿಜಾಮನ ಕಡುವೈರಿಯಾದ ರಘುನಾಥರಾವ್‌ನನ್ನು ಬ್ರಿಟಿಶರು ಬೆಂಬಲಿಸಿದ್ದರಿಂದ ಮರಾಠರ ಸಂಯುಕ್ತ ಒಕ್ಕೂಟವನ್ನು ಸೇರಿದನು. ಹೀಗೆ ಬ್ರಿಟಿಶರ ಆಡಳಿತವನ್ನು ವಿರೋಧಿಸುತ್ತಿರುವ ದಕ್ಷಿಣ ಭಾರತದ ರಾಜ್ಯಗಳು ಒಕ್ಕೂಟವನ್ನು ಸೇರಿಕೊಂಡವು.[೪೧] ಬ್ರಿಟಿಶರು ಈ ಸಂಯುಕ್ತ ಒಕ್ಕೂಟವನ್ನು ಒಡೆಯಲು ಹೈದರಾಬಾದ್ ನಿಜಾಮನನ್ನು ಗುಂಟೂರು ಪ್ರದೇಶದ ಆಡಳಿತಾಧಿಕಾರಿಯಾಗಿ ನೇಮಿಸಿದರು. ಜೊತೆಗೆ ಒಂಬತ್ತು ಲಕ್ಷ ಪೊಗದಿ ಹಣ ನೀಡುವುದಾಗಿ ಹೇಳಿದರು. ಕಾಲಾನಂತರ ಮರಾಠರನ್ನು ಸದೆಬಡಿದ ಮೇಲೆ ಬ್ರಿಟಿಶರು ತಮ್ಮ ವಸಾಹತು ನೀತಿಗೆ ಅನುಗುಣವಾಗಿ ನಿಜಾಮನನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಗುಂಟೂರು ಪ್ರದೇಶದ ಆಡಳಿತವನ್ನು ತಾವೇ ವಹಿಸಿಕೊಂಡರು. ಇದರಿಂದ ಕೋಪಗೊಂಡ ನಿಜಾಮನು ಬ್ರಿಟಿಶರನ್ನು ವಿರೋಧಿಸುವ ನೆಪದಲ್ಲಿ ಅವರ ಪ್ರತಿಸ್ಪರ್ಧಿಗಳಾದ ಫ್ರೆಂಚರ ಸೈನಿಕ ಸಹಕಾರವನ್ನು ಕೋರಿದನು. ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್‌ನು ನಿಜಾಮನ ಧೋರಣೆಯನ್ನು ಸೂಕ್ಷ್ಮವಾಗಿ ಪರಿಗಣಿಸಿ ಸ್ಥಳೀಯ ಅರಸನ ಅವಶ್ಯಕತೆ ಮನಗಂಡು ಗುಂಟೂರು ಪ್ರದೇಶವನ್ನು ಬಸಲತ್‌ಜಂಗನಿಗೆ

ಬಿಟ್ಟು ಕೊಡುವುದರ ಮೂಲಕ ನಿಜಾಮನ ಸ್ನೇಹವನ್ನು ಮುಂದುವರಿಸಿದನು. ೧೭೮೨ರಲ್ಲಿ ಬಸಲತ್‌ಜಂಗ್ ಕಾಲವಾದ ನಂತರ ೧೭೮೮ರ ಒಪ್ಪಂದದ ಆಧಾರದ ಮೇಲೆ ನಿಜಾಮನಿಂದ ಗುಂಟೂರನ್ನು ಹಿಂದಿರುಗಿಸಲು ಒತ್ತಾಯ ಮಾಡಿದರು. ನಿಜಾಮ ಮತ್ತು ಬ್ರಿಟಿಶರಿಗೆ ಗುಂಟೂರು ಒಂದು ಮುಖ್ಯ ಸ್ಥಾನವಾಗಿತ್ತು. ಕೊನೆಗೂ ನಿಜಾಮನು ಗುಂಟೂರನ್ನು ಬ್ರಿಟಿಶರಿಗೆ ಬಿಟ್ಟುಕೊಟ್ಟು ಟಿಪ್ಪು ಸುಲ್ತಾನ್ ಆಕ್ರಮಿಸಿದ ತನ್ನ ಪ್ರದೇಶಗಳನ್ನು ಮರಳಿ ಪಡೆಯಲು ಬ್ರಿಟಿಶರ ಸಹಾಯ ಕೋರಿದನು. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಬ್ರಿಟಿಶರು ಸ್ಥಳೀಯ ಅರಸರ ಸಹಾಯದಿಂದ ಟಿಪ್ಪುವನ್ನು ನಿರ್ನಾಮ ಮಾಡಿದರು.[೪೨]

ಕರ್ನಾಟಕದಲ್ಲಿ ಬ್ರಿಟಿಶರ ವಸಾಹತುಶಾಹಿ ಆಡಳಿತವನ್ನು ವಿರೋಧಿಸಿದ ಟಿಪ್ಪು ಸುಲ್ತಾನನಿಗೆ ನಿಜಾಮ್ ಮತ್ತು ಮರಾಠರು ಬೆಂಬಲ ನೀಡಲಿಲ್ಲ. ಬದಲಾಗಿ ಬ್ರಿಟಿಶರಿಗೆ ಸೈನಿಕ ನೆರವನ್ನು ನೀಡಿ ಬೆಂಬಲಿಸಿದರು. ಒಂದು ವೇಳೆ ಬ್ರಿಟಿಶ್ ವಸಾಹತುಶಾಹಿ ಆಡಳಿತವನ್ನು ನಿರ್ನಾಮ ಮಾಡಬೇಕೆಂದು ಛಲ ತೊಟ್ಟಿದ್ದ ಟಿಪ್ಪು ಸುಲ್ತಾನನಿಗೆ ನಿಜಾಮ್ ಮತ್ತು ಮರಾಠರು ಬೆಂಬಲ ನೀಡಿದ್ದರೆ ಕರ್ನಾಟಕ ಚರಿತ್ರೆ ಬೇರೆ ಇರುತ್ತಿತ್ತೇನೋ! ಟಿಪ್ಪು ಸುಲ್ತಾನ್ ನಿಜಾಮರ ಜೊತೆ ವೈವಾಹಿಕ ಸಂಬಂಧವನ್ನು ಬೆಳೆಸಲು ಪ್ರಯತ್ನಿಸಿದ. ಅದು ಸಾಧ್ಯವಾಗಲಿಲ್ಲ. ಶಾಹಿ ರಾಜ್ಯಗಳು ನಾಶವಾದದ್ದು ಅದೇ ಇಸ್ಲಾಂ ಧರ್ಮದ ಮೊಗಲ್ ಔರಂಗಜೇಬ್‌ನಿಂದ; ಇಲ್ಲೂ ಅದು ಮರುಕಳಿಸಿದಂತಾಯಿತು. ಅಧಿಕಾರ ದಾಹಕ್ಕೆ ಧರ್ಮ ಅಡ್ಡಿ ಬರುವುದಿಲ್ಲ ಎಂಬುದಕ್ಕೆ ಇದು ಸಾಕ್ಷಿ.[೪೩]

ಹೀಗೆ ನಿಜಾಮನು ತನ್ನ ಪ್ರಭುತ್ವವನ್ನು ಗಟ್ಟಿಗೊಳಿಸುವುದಕ್ಕಾಗಿ ದೇಶೀಯ ಅರಸರನ್ನು ಬ್ರಿಟಿಶರ ಮೂಲಕ ನಿಯಂತ್ರಿಸುತ್ತಾ ಅಸಫಿಯಾ ಮನೆತನವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದನು. ಬ್ರಿಟಿಶರು ಕೂಡ ಭಾರತದಲ್ಲಿ ತಮ್ಮ ವಸಾಹತುಶಾಹಿ ಆಡಳಿತದ ಅನುಕೂಲಕ್ಕಾಗಿ ಹೈದರಾಬಾದ್ ಸಂಸ್ಥಾನದ ಸ್ನೇಹವನ್ನು ಮುಂದುವರೆಸುತ್ತಾ ಸ್ಥಳೀಯ ಅರಸು ಮನೆತನಗಳ ಮೇಲೆ ಅಧಿಕಾರ ಸ್ಥಾಪಿಸಲು ಪ್ರಯತ್ನಿಸಿದರು. ಭಾರತದ ಗವರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿಯು ತನ್ನ ರಾಜಕೀಯ ಗುರಿಯನ್ನು ಸಾಧಿಸಲು ಮೂರು ವಿಧಾನಗಳ ಮೇಲೆ ಅವಲಂಬಿತನಾಗಿದ್ದನು. ಸಹಾಯಕ ಸೈನ್ಯಪದ್ಧತಿ, ಪೂರ್ಣ ಪ್ರಮಾಣದ ಯುದ್ಧ ಮತ್ತು ಹಿಂದಿನ ಅಧೀನ ರಾಜರ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವುದು, ಭಾರತೀಯ ರಾಜರುಗಳಿಂದ ಹಣ ಪಡೆದು ಬ್ರಿಟಿಶ್ ಸೈನ್ಯ ನೆರವು ನೀಡುವ ಪರಿಪಾಠಗಳ ಮೂಲಕ ವಸಾಹತುಶಾಹಿ ಆಡಳಿತ ಗಟ್ಟಿಗೊಳಿಸುವುದಾಗಿತ್ತು. ಅದಕ್ಕೆ ಅನುಗುಣವಾಗಿ ಹೈದರಾಬಾದ್ ನಿಜಾಮ್ ತನ್ನ ವಿರೋಧಿಗಳಾದ ಟಿಪ್ಪು ಸುಲ್ತಾನ್, ಮರಾಠ ಮತ್ತು ಸ್ಥಳೀಯ ಪಾಳೇಪಟ್ಟುಗಳನ್ನು ನಿಯಂತ್ರಿಸಲು ಹಾತೊರೆಯುತ್ತಿದ್ದ ಸಮಯದಲ್ಲಿಯೇ

ಬ್ರಿಟಿಶರು ಸಹಾಯಕ ಸೈನ್ಯಪದ್ಧತಿ ಎಂಬ ಅಸ್ತ್ರವನ್ನು ಮುಂದಿಟ್ಟರು. ನಿಜಾಮ್ ಅಸ್ತಿತ್ವದ ಪ್ರಶ್ನೆಯ ಜೊತೆಗೆ ಅಧಿಕಾರವನ್ನು ಉಳಿಸಿಕೊಳ್ಳಲು ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕುವುದರ ಮೂಲಕ ಸಂಪೂರ್ಣವಾಗಿ ಬ್ರಿಟಿಶರ ಅಧೀನ ಅರಸನಾದನು.[೪೪] ಸಹಾಯಕ ಸೈನ್ಯ ಪದ್ಧತಿ ಒಪ್ಪಂದದ ಪ್ರಕಾರ ನಿಜಾಮನು ೬ ಬೆಟಾಲಿಯನ್ ಸೈನಿಕರಿಂದ ಕೂಡಿದ ಸೈನ್ಯದ ವಾರ್ಷಿಕ ಖರ್ಚಾದ ೨೪,೧೭,೦೦೦ ರೂಪಾಯಿಗಳನ್ನು ಭರಿಸಬೇಕಾಗಿತ್ತು. ಆಂತರಿಕ ಆಡಳಿತದಲ್ಲಿ ನಿಜಾಮನು ಕಂಪನಿಯ ಪೂರ್ವಾನುಮತಿಯನ್ನು ಪಡೆದುಕೊಂಡು ಯಾವುದೇ ನೀತಿಯನ್ನು ಜಾರಿಗೊಳಿಸಬೇಕಾಗಿತ್ತು.[೪೫]

೪. ೧೮೫೭ರ ದಂಗೆಯಲ್ಲಿ ನಿಜಾಮನ ಪಾತ್ರ

ಭಾರತದಲ್ಲಿ ಬ್ರಿಟಿಶರು ತಮ್ಮ ವಸಾಹತುಶಾಹಿ ನೀತಿಯಂತೆ ಆಡಳಿತ ನಡೆಯಬೇಕೆಂಬ ಅಭಿಪ್ರಾಯದಿಂದ ಅನೇಕ ಹೊಸ ಹೊಸ ನೀತಿಗಳನ್ನು ಜಾರಿಗೆ ತಂದರು. ಅದರಲ್ಲಿ ಲಾರ್ಡ್ ವೆಲ್ಲೆಸ್ಲಿಯು ಜಾರಿಗೆ ತಂದಿದ್ದ ಸಹಾಯಕ ಸೈನ್ಯಪದ್ಧತಿ ಒಂದು. ಈ ಪದ್ಧತಿಗೆ ಒಳಗಾದ ಭಾರತೀಯ ಸಂಸ್ಥಾನಗಳು ಬ್ರಿಟಿಶರ ಅಪಾರ ಸೈನಿಕ ವೆಚ್ಚವನ್ನು ಭರಿಸಲು ಸಾಧ್ಯವಾಗದೇ ಬ್ರಿಟಿಶರ ನೀತಿಯಿಂದ ಅಸಂತೃಪ್ತಿಯನ್ನು ಹೊಂದಿದರು.[೪೬] ಲಾರ್ಡ್ ಡಾಲ್‌ಹೌಸಿಯು ಜಾರಿಗೆ ತಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ನಾನಾಸಾಹೇಬ, ಝಾನ್ಸಿ ರಾಣಿ ಲಕ್ಷ್ಮಿಬಾಯಿ, ಮೊಗಲ್ ಚಕ್ರವರ್ತಿ ಬಹದ್ದೂರ್ ಷಾ ಮುಂತಾದ ಅರಸರು ತಮ್ಮ ಸಾಮ್ರಾಜ್ಯ ವಸಹತುಶಾಹಿ ಆಡಳಿತಕ್ಕೆ ಬಲಿಯಾದ್ದರಿಂದ ಅದರ ವಿರುದ್ಧ ದ್ವೇಷ ಕಾರುತ್ತಾ ಬ್ರಿಟಿಶರ ಶತ್ರುಗಳಾದರು. ನಂತರ ಬ್ರಿಟಿಶರ ನೇರ ಆಳ್ವಿಕೆಗೆ ಒಳಪಟ್ಟಿದ್ದ ಭಾರತೀಯ ಸಂಸ್ಥಾನಗಳು ಅವರ ಆಡಳಿತದಿಂದ ಬೇಸತ್ತು ತಾವು ಸ್ವತಂತ್ರವಾಗಿ ಆಡಳಿತ ನಡೆಸಬೇಕೆಂದು, ಬ್ರಿಟಿಶ್ ಆಡಳಿತದ ವಿರುದ್ಧ ಭಾರತದ ಉತ್ತರದಿಂದ ದಕ್ಷಿಣದವರೆಗೂ ದಂಗೆ ಎದ್ದರು.[೪೭] ಆದರೆ ಉತ್ತರ ಭಾರತದಲ್ಲಿ ಹುಟ್ಟಿಕೊಂಡಿದ್ದ ದಂಗೆಯು ದಕ್ಷಿಣ ಭಾರತದ ಕಡೆ ಹೆಚ್ಚಿನ ಪ್ರಮಾಣದಲ್ಲಿ ವ್ಯಾಪಿಸದೇ ಉತ್ತರ ಭಾರತಕ್ಕೆ ಸೀಮಿತವಾಯಿತು. ದಕ್ಷಿಣ ಭಾರತದಲ್ಲಿ ದಂಗೆಯ ಪ್ರಭಾವವನ್ನು ಜಾಗೃತವಾಗದ ಹಾಗೇ ಬ್ರಿಟಿಶರ ಆಪ್ತಮಿತ್ರನಾದ ನಿಜಾಮನು ನೋಡಿಕೊಂಡನು. ತನ್ನ ಸಂಸ್ಥಾನದಲ್ಲಿ ದಂಗೆಯನ್ನು ಹತ್ತಿಕ್ಕುವ ಎಲ್ಲಾ ಕೆಲಸವನ್ನು ಪ್ರಧಾನ ಮಂತ್ರಿಯಾದ ಸಾಲಾರ್‌ಜಂಗನ ಮುಖಾಂತರ ಮಾಡಿಸಿದನು. ಸಂಸ್ಥಾನದಲ್ಲಿ ಜನರು ಗುಂಪು ಗುಂಪಾಗಿ ಸೇರುವುದು, ಚರ್ಚೆ ಮಾಡುವುದು, ಸಭೆ ಸಮಾರಂಭಗಳಿಗೆ ಅನುಮತಿಯನ್ನು ನೀಡದೆ ನಿಷೇಧಿಸಿದನು. ಹೀಗೆ ದಕ್ಷಿಣ ಭಾರತದಲ್ಲಿ ದಂಗೆಯ ಪ್ರಭಾವ ವ್ಯಾಪಿಸದೆ ಉಳಿಯಿತು.[೪೮]

ನಾನಾ ಸಾಹೇಬನ ಪ್ರಭಾವಕ್ಕೆ ಒಳಗಾದ ಸುರಪುರದ ವೆಂಕಟಪ್ಪ ನಾಯಕನು ತನ್ನ ಸಂಸ್ಥಾನದಲ್ಲಿ ಬ್ರಿಟಿಶರ ಆಳ್ವಿಕೆಯ ವಿರುದ್ಧ ದಂಗೆ ಎದ್ದನು. ಇದರಿಂದ ಕೋಪಗೊಂಡು ದುರಾಡಳಿತದ ಆರೋಪದ ಮೇಲೆ ಸುರಪುರದ ನಾಯಕನ ವಿರುದ್ಧ ತನಿಖೆಯನ್ನು ಮಾಡಲು ಕಂಪನಿ ಸರ್ಕಾರ ನಿರ್ಧಾರ ಕೈಗೊಂಡಿತು. ಈ ಎಲ್ಲ ಆರೋಪಗಳು ನಿರಾಧಾರ ವಾದವೆಂದು ವೆಂಕಟಪ್ಪ ನಾಯಕ ಪ್ರತಿಪಾದಿಸಿದನು. ಆದರೆ ಇದೇ ಸಮಯಕ್ಕೆ ಹೈದರಾಬಾದಿನ ನಿಜಾಮನು ಸುರಪುರ ಸಂಸ್ಥಾನದ ನಾಯಕನು ಗುಪ್ತವಾಗಿ ಸೈನಿಕಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾನೆಂದು ಆರೋಪಿಸಿ ಹೈದರಾಬಾದ್‌ನಲ್ಲಿದ್ದ ಬ್ರಿಟಿಶ್ ರೆಸಿಡೆಂಟ್‌ಗೆ ದೂರು ಕಳುಹಿಸಿದನು. ಇದರಿಂದ ಕೋಪಗೊಂಡ ಬ್ರಿಟಿಶರು ನಿಜಾಮನ ಸಹಕಾರದಿಂದ ವೆಂಕಟಪ್ಪ ನಾಯಕನನ್ನು ಬಂಧಿಸಿ ದಂಗೆ ದಮನ ಮಾಡಿದರು.[೪೯] ೧೮೫೭ರಲ್ಲಿ ದೇಶದ ತುಂಬೆಲ್ಲಾ ವ್ಯಾಪಕವಾಗಿ ಜನರು ಬ್ರಿಟಿಶರ ವಿರುದ್ಧ ದಂಗೆ ಎದ್ದರು. ಇದರ ಪ್ರಭಾವಕ್ಕೆ ಒಳಗಾದ ಹೈದರಾಬಾದಿನ ಮುಸ್ಲಿಮರು ಬ್ರಿಟಿಶ್ ಮತ್ತು ನಿಜಾಮನ ಧೋರಣೆಯಿಂದ ದಂಗೆಯಲ್ಲಿ ಪಾಲ್ಗೊಳ್ಳಲು ಉತ್ಸುಹಕರಾಗಿದ್ದರು. ಒಮ್ಮೆ ರೆಸಿಡೆಂಟ್ ನಿಜಾಮ್ ದರ್ಬಾರದಿಂದ ಹೊರಬರುತ್ತಿದ್ದಾಗ ಅವನ ಮೇಲೆ ಹಲ್ಲೆ ನಡೆಸಲಾಯಿತು. ಹೀಗೆ ಭಾರತದ ತುಂಬೆಲ್ಲಾ ಮೂರು ತಿಂಗಳ ಕಾಲ ದಂಗೆ ವ್ಯಾಪಿಸಿದರು. ನಿಜಾಮನು ತನ್ನ ಸಂಸ್ಥಾನದಲ್ಲಿ ಯಶಸ್ವಿಯಾಗದ ರೀತಿಯಿಂದ ಕಟ್ಟೆಚ್ಚರ ವಹಿಸಿದನು. ಇದರ ಪರಿಣಾಮವಾಗಿ ದಕ್ಷಿಣ ಭಾರತದ ಮದ್ರಾಸ್, ಮೈಸೂರು, ತಿರುವಾಂಕೂರ್ ಮತ್ತು ಕೊಚ್ಚಿನ್ ರಾಜ್ಯಗಳಲ್ಲಿ ದಂಗೆ ವ್ಯಾಪಕವಾಗಿ ಹರಡದೆ ಕೇವಲ ಸೀಮಿತ ಜನರ ಮಧ್ಯೆ ನಡೆಯಿತ್ತೆಂದು ತಿಳಿದುಬರುತ್ತದೆ.[೫೦]

ಕೊನೆಗೆ ಬ್ರಿಟಿಶರು ತಮ್ಮ ಚಾಣಾಕ್ಷತನದಿಂದ ಈ ದಂಗೆಯನ್ನು ದಮನ ಮಾಡಿ ವಿಜಯಶಾಲಿಯಾದರು. ಬ್ರಿಟಿಶರು ಜಯದ ಮಾಲೆ ಧರಿಸುವಲ್ಲಿ ನಿಜಾಮನ ಪಾತ್ರವನ್ನು ಪರಿಗಣಿಸಿದ ಬ್ರಿಟಿಶ್ ಸರ್ಕಾರವು ರಾಯಚೂರು ಧೋ-ಅಬ್, ವನದುರ್ಗ, ಬಿರಾರ್ ಪ್ರಾಂತದ ಕೆಲವು ಪ್ರದೇಶಗಳನ್ನು ಪುನಃ ನಿಜಾಮನಿಗೆ ಬಿಟ್ಟುಕೊಟ್ಟರು. ಹೀಗೆ ಬ್ರಿಟಿಶರು ನಿಜಾಮನನ್ನು ತಮ್ಮ ಆಪ್ತಮಿತ್ರನೆಂದು ಪರಿಗಣಿಸಿದರು. ಆದರೆ ವಸಾಹತು ನೀತಿಗೆ ಅನುಗುಣವಾಗಿ ನಿಜಾಮನನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದರು.[೫೧]

೫. ಜಮೀನ್ದಾರರು ಹಾಗೂ ನಿಜಾಮನ ವಿರುದ್ಧ ಹೋರಾಟ

ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಮುನ್ನವೇ ಈ ಪ್ರಾಂತದಲ್ಲಿ ಜಮೀನ್ದಾರರು ನಿಜಾಮ್ ಮತ್ತು ಬ್ರಿಟಿಶರ ವಿರುದ್ಧ ಹೋರಾಟಕ್ಕೆ ತೊಡಗಬೇಕಾಯಿತು. ಇದನ್ನು ಸ್ವಾತಂತ್ರ್ಯ ಹೋರಾಟ ಎಂದು ಕರೆಯಲಾಗದಿದ್ದರೂ ತಮ್ಮ ಹಿತಾಸಕ್ತಿಗಾಗಿ ಸರ್ಕಾರದ ಜತೆ ಭೂಮಾಲೀಕರು ನಡೆಸಿದ

ಸಂಘರ್ಷ ಎಂದು ಕರೆಯಬಹುದು. ಬ್ರಿಟಿಶರು ನಿಜಾಮ ಮತ್ತು ಮರಾಠರ ಸಹಾಯದಿಂದ ಟಿಪ್ಪು ಸುಲ್ತಾನನನ್ನು ಸೋಲಿಸಿದ ಮೇಲೆ ಅವರಿಗೆ ಪುನಃ ಎದುರಾದ ದೊಡ್ಡ ಶಕ್ತಿ ಧೋಂಡಿಯ ವಾಘ, ಇವನು ಮರಾಠಿ ಮೂಲದವನು; ಕೊಲ್ಲಾಪುರ, ಧಾರವಾಡ ಮುಂತಾದ ಕಡೆ ಸಂಸ್ಥಾನಗಳಲ್ಲಿ ದುಡಿದು ನಂತರ ಹೈದರಾಲಿ ಸೈನ್ಯದಲ್ಲಿ ಸೇರಿಕೊಂಡನು. ಟಿಪ್ಪುವಿನ ಕಾಲದಲ್ಲಿ ಸೆರೆಮನೆ ಸೇರಿದ್ದ. ಅಲ್ಲಿಂದ ಬಿಡುಗಡೆಗಾಗಿ ಬ್ರಿಟಿಶರ ವಿರೋಧಿಯಾಗಿ ಬೆಳೆದ. ಮೈಸೂರು ಸಂಸ್ಥಾನವು ಬ್ರಿಟಿಶರಿಗೆ ವಾರ್ಷಿಕ ಕಾಣಿಕೆಯನ್ನು ಒಪ್ಪಿಸುವ ಸಲುವಾಗಿ ರೈತರ ಮೇಲೆ ಕರ ಹೇರಿದಾಗ, ರೈತರು ಧೋಂಡಿಯಾ ವಾಘನನ್ನು ಬೆಂಬಲಿಸಿದರು. ಆರಂಭದಲ್ಲಿ ಅವನ ಸಂಘಟನೆ ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿದ್ದು, ಬ್ರಿಟಿಶರು ಬೆನ್ನು ಹತ್ತಿದಾಗ ನಿಜಾಮ್ ಪ್ರಾಂತಕ್ಕೆ ಬಂದು ಸೇರಿದ. ರಾಯಚೂರಿನ ಕೃಷ್ಣಾ ನದಿ ಸರಹದ್ದಿನಲ್ಲಿ ಅವನನ್ನು ಬ್ರಿಟಿಶರು ನಿಜಾಮನ ನೆರವಿನೊಂದಿಗೆ ಸೆರೆಹಿಡಿದರು.

ನಿಜಾಮ್ ಸಿಕಂದರ್‌ಶಾಹಿ ಆಳ್ವಿಕೆಗೆ ಬಂದಾಗ ಈ ಪ್ರಾಂತ್ಯದಲ್ಲಿ ಅರಾಜಕತೆ ತುಂಬಿತ್ತು. ಆರ್ಥಿಕ ತೊಂದರೆಗಳು ಉಲ್ಬಣಗೊಂಡವು. ಸಂಸ್ಥಾನದಲ್ಲಿ ವಾರ್ಷಿಕ ಬಜೆಟ್ ಎಂಬುದೇ ಇರಲಿಲ್ಲ. ಈ ಸಮಯದಲ್ಲಿ ಪಿಂಡಾರಿಗಳು, ಬಿಲ್ಲರು ಮತ್ತು ಜಮೀನುದಾರರು ದಂಗೆ ಏಳ ತೊಡಗಿದರು. ಆದರೆ ನಿಜಾಮ್ ಈಸ್ಟ್ ಇಂಡಿಯಾ ಕಂಪನಿಯ ಅಧೀನಕ್ಕೆ ಒಳಗಾಗಿದ್ದ. ಎರಡನೆಯ ಮರಾಠ ಯುದ್ಧ ನಡೆದಾಗ ನಿಜಾಮ ಸರಿಯಾಗಿ ತಮಗೆ(ಬ್ರಿಟಿಶರು) ಸಹಕರಿಸಲಿಲ್ಲ ಎಂಬ ನೆಪವನ್ನು ಒಡ್ಡಿ ಇನ್ನೊಂದು ಒಪ್ಪಂದ ಮಾಡಿಕೊಂಡರು. ಪ್ರಾಂತದಲ್ಲಿ ಶುರುವಾದ ದಂಗೆಗಳನ್ನು ಹತ್ತಿಕ್ಕದೆ ಸುಮ್ಮನಿರುವಂತಿಲ್ಲ. ಬ್ರಿಟಿಶರು ಈ ಸಮಯದಲ್ಲಿ ಮತ್ತೊಂದು "ಬ್ರಿಗೇಡ್" ಎಂಬ ಸೈನ್ಯವನ್ನು ಗೊತ್ತು ಮಾಡಿ ಸ್ಥಳೀಯ ದಂಗೆಗಳನ್ನು ನಿಯಂತ್ರಿಸಲು ನಿಜಾಮನಿಗೆ ಒಪ್ಪಿಸಿದರು. ಇದರಿಂದ ವೀರಪ್ಪ ದೇಸಾಯಿ, ಹಮ್ಮಿಗಿ ಕೆಂಚನಗೌಡ, ಮುಂಡರಗಿ ಭೀಮರಾಯ ಮತ್ತು ಅನೇಕ ಜಮೀನುದಾರರು ಬಲಿಯಾದರು. ಸಿಂದಗಿಯ ಬಂಡಾಯ, ಸುರಪುರದ ದಂಗೆ, ಹಲಗಲಿ ಬೇಡರು, ಬಾಲ್ಕಿಯ ರಾಮರಾಯ, ಬೀದರಿನ ಸುಳಿಹಳ್ಳಿ ಶಿವಲಿಂಗಯ್ಯ ದೇಶಮುಖ್ ಮುಂತಾದ ಜಮೀನುದಾರರನ್ನು ಹತ್ತಿಕ್ಕಲು ಬ್ರಿಗೇಡ್ ಸೈನ್ಯವನ್ನು ಬಳಸಿದರು. ಇವರೆಲ್ಲರೂ ಈ ಪ್ರಾಂತ್ಯಕ್ಕೆ ಸೇರಿದವರಾಗಿದ್ದರು. ತಮ್ಮ ತಮ್ಮ ಹಿತಾಸಕ್ತಿಗೆ ಹೋರಾಡಿದರು. ಮುಂದೆ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪ್ರೇರಣೆಯಾದವರು. ಈ ಮುಖಂಡರಿಗೆ ಬೆಂಬಲ ನೀಡಿದ ತಪ್ಪಿಗಾಗಿ ಅನೇಕ ಸಾಮಾನ್ಯ ಜನರನ್ನು ತಪ್ಪಿತಸ್ಥರಾಗಿ ನಿಜಾಮ್ ಮತ್ತು ಬ್ರಿಟಿಶರಿಂದ ಶಿಕ್ಷೆಗೆ ಒಳಗಾದರು.[೨]

೬. ಆಶ್ರಿತ ಸಂಸ್ಥಾನಗಳೊಂದಿಗೆ ನಿಜಾಮ್ ಸಂಬಂಧ

ಬಿಜಾಪುರ ಆದಿಲ್‌ಶಾಹಿ ಮನೆತನವು ತನ್ನ ಆಳ್ವಿಕೆಯಲ್ಲಿ ಸೇವೆ ಸಲ್ಲಿಸಿದ ಅಧಿಕಾರಿಗಳನ್ನು ಗುರುತಿಸಿ ಅವರ ಸೇವೆಗೆ ಅನುಗುಣವಾಗಿ ಜಹಗೀರು ನೀಡುವ ಪದ್ಧತಿ ಜಾರಿಗೆ ಬಂದಿತು. ಅರಸನಿಂದ ನಿರ್ದಿಷ್ಟವಾಗಿ ಗುರುತಿಸಿದ ಭೂಪ್ರದೇಶವನ್ನು ಆಡಳಿತ ಅಧಿಕಾರಿಗಳ ಆಳ್ವಿಕೆಗೆ ನೀಡುವುದೇ ಜಹಗೀರು. ಈ ಜಹಗೀರು ಭೂಪ್ರದೇಶದಲ್ಲಿ ಅರಸನ ಆಜ್ಞೆ ಅನುಸಾರವಾಗಿ ಕಂದಾಯ ವಸೂಲಿ ಮಾಡುತ್ತ, ಆಡಳಿತವನ್ನು ನೋಡಿಕೊಳ್ಳುವುದು ಜಹಗೀರ್‌ದಾರನ ಕರ್ತವ್ಯವಾಗಿತ್ತು. ಹೀಗೆ ಜಹಗೀರ್ ಪಡೆದ ಜಹಗೀರ್‌ದಾರರು ಆದಿಲ್‌ಶಾಹಿ ಸುಲ್ತಾನರ ಅಸಮರ್ಥತೆಯ ಲಾಭವನ್ನು ಪಡೆದು ಮರಿ ಪಾಳೆಯಗಾರರಂತೆ ವರ್ತಿಸುತ್ತಾ, ಸ್ವತಂತ್ರ ಘೋಷಿಸಿಕೊಂಡು ಸಂಸ್ಥಾನಿಕರಾಗಿ ಹೊರಹೊಮ್ಮಿದರು. ನಂತರ ಅಧಿಕಾರಕ್ಕೆ ಬಂದ ಮೊಗಲರ ಆಳ್ವಿಕೆ ಅವಧಿಯಲ್ಲಿ ಸುಲ್ತಾನರ ಆಡಳಿತವನ್ನು ಒಪ್ಪಿಕೊಂಡು ಆಶ್ರಿತ ಸಂಸ್ಥಾನಿಕರಾಗಿ ಆಡಳಿತ ನಡೆಸುತ್ತಿದ್ದರು. ಮೊಗಲರ ನಂತರ ಅವರ ಸುಬೇದಾರನಾದ ಕಮುರೋದ್ದಿನ್‌ನು ತನ್ನ ಸುಭಾದಲ್ಲಿ ಆಶ್ರಿತ ಸಂಸ್ಥಾನಗಳಿಗೆ ಆಶ್ರಯ ನೀಡುತ್ತಾ ಅವರಿಂದ ಕಪ್ಪದ ಹಣವನ್ನು ಸ್ವೀಕರಿಸಿ ಅಧೀನವಾಗಿ ಮಾಡಿಕೊಂಡನು. ಹೀಗೆ ನಿಜಾಮರು ತಮ್ಮ ಆಡಳಿತ ಅವಧಿಯಲ್ಲಿ ಆಶ್ರಿತ ಸಂಸ್ಥಾನಗಳ ಮೇಲೆ ನಿಯಂತ್ರಣ ಸಾಧಿಸಿದರು. ಅಂತಹ ಸಂಸ್ಥಾನಗಳೆಂದರೆ ಆನೆಗೊಂದಿ ಸಂಸ್ಥಾನ, ಗುಡಗಂಟಿ, ದೇವದುರ್ಗ, ಸುರಪುರ ಮತ್ತು ಗುಂತಗೋಳ.

೧. ಆನೆಗೊಂದಿ ಸಂಸ್ಥಾನ

ಆನೆಗೊಂದಿ ಸಂಸ್ಥಾನವು ಆರಂಭದಲ್ಲಿ ಅನೇಕ ಮನೆತನಗಳ ಸಾಮಂತರಾಗಿ ಆಡಳಿತ ನಡೆಸುತ್ತಿತ್ತು. ೧೭೦೭ರಲ್ಲಿ ಮೊಗಲ್ ಸುಲ್ತಾನ್ ಔರಂಗಜೇಬನ ಮರಣದ ನಂತರ ದಕ್ಷಿಣ ಭಾರತದಲ್ಲಾದ ರಾಜಕೀಯ ಧ್ರುವೀಕರಣದ ಲಾಭವನ್ನು ಪಡೆದು ಕಮುರೋದ್ದೀನನು ಅಸಫಿಯಾ ಮನೆತನ ಸ್ಥಾಪಿಸಿದನು. ತನ್ನ ಆಳ್ವಿಕೆಯಲ್ಲಿದ್ದ ಅನೆಗೊಂದಿ ನಾಯಕರ ಭೂಮಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಇದರಿಂದ ಆನೆಗೊಂದಿ ಅರಸರು ನಿಜಾಮನ ಆಶ್ರಿತ ಸಂಸ್ಥಾನವಾಗಿ ಉಳಿದುಕೊಂಡರು. ಸಣ್ಣಪುಟ್ಟ ಪಾಳೇಗಾರರ ಮೇಲೆ ಯುದ್ಧ ಮಾಡುತ್ತಾ, ಕೆಲವರಿಗೆ ಸೈನಿಕ ಸಹಾಯ ನೀಡುತ್ತಿದ್ದರು. ಇದಕ್ಕೆ ಪ್ರತಿಫಲವಾಗಿ ಅವರಿಂದ ಪಡೆದ ಪೊಗದಿ ಹಣವನ್ನು ಸಂಗ್ರಹಿಸಿ ಅದರಲ್ಲಿ ಸ್ವಲ್ಪ ಭಾಗ ನಿಜಾಮ ಸರ್ಕಾರಕ್ಕೆ ಸಂದಾಯ ಮಾಡುತ್ತಿದ್ದರು. ಇದೇ ಸಮಯಕ್ಕೆ ೧೭೭೫ರಲ್ಲಿ ಹೈದರಾಲಿಯು ತನ್ನ ಸಾಮ್ರಾಜ್ಯದ ವಿಸ್ತರಣೆಗಾಗಿ ಉತ್ತರ ಕರ್ನಾಟಕ ಪ್ರದೇಶದ ಮೇಲೆ ಯುದ್ಧ ಸಾರಿ ಆನೆಗೊಂದಿಯನ್ನು ವಶಪಡಿಸಿಕೊಂಡನು. ಹೈದರಾಲಿಯ ಮರಣದ ನಂತರ ಟಿಪ್ಪುಸುಲ್ತಾನ್ ಕಾಲದಲ್ಲಿಯೂ ಅಧೀನರಾಗಿಯೇ ಅಧಿಕಾರ ನಡೆಸುತ್ತಿದ್ದರು.

ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧದಲ್ಲಿ ಸೋತ ಟಿಪ್ಪುವಿನಿಂದ ವಶಪಡಿಸಿಕೊಂಡ ಪ್ರದೇಶಗಳನ್ನು ಬ್ರಿಟಿಶರು ಯುದ್ಧದ ಪೂರ್ವದಲ್ಲಿ ಮಾಡಿಕೊಂಡಿರುವ ಒಪ್ಪಂದದಂತೆ ಕರ್ನಾಟಕದ ಉತ್ತರ ಪ್ರದೇಶಗಳನ್ನು ನಿಜಾಮನಿಗೆ ಬಿಟ್ಟುಕೊಟ್ಟರು. ಹೀಗೆ ಆನೆಗೊಂದಿ ಸಂಸ್ಥಾನ ಪ್ರದೇಶವು ನಿಜಾಮರ ವಶವಾಯಿತು. ನಿಜಾಮರು ಆನೆಗೊಂದಿ ಸಂಸ್ಥಾನಿಕರನ್ನು ತಮ್ಮ ಅಧೀನದಲ್ಲಿಟ್ಟುಕೊಂಡು ಅವರಿಂದ ಒತ್ತಾಯದ ಮೂಲಕ ಕಪ್ಪಕಾಣಿಕೆಗಳನ್ನು ವಸೂಲಿ ಮಾಡುತ್ತಿದ್ದರು. ಕೆಲವು ಸಂದರ್ಭದಲ್ಲಿ ನಿಜಾಮರು ಆನೆಗೊಂದಿ ಅರಸರಿಗೆ ಪುತ್ರ ಸಂತಾನವಿಲ್ಲದೆ ಇರುವಾಗ ದತ್ತು ಸ್ವೀಕಾರಕ್ಕೆ ಅನುಮತಿಯನ್ನು ಪಡೆಯಲು ಕಪ್ಪಕಾಣಿಕೆಯನ್ನು ನೀಡುವ ಪದ್ಧತಿ ಜಾರಿಗೆ ತಂದಿದ್ದರು. ನಿಜಾಮರ ಈ ಧೋರಣೆಯಿಂದ ತಿಳಿದು ಬರುವುದೇನೆಂದರೆ ತಮ್ಮ ಲಾಭಕ್ಕಾಗಿ ಸಂದರ್ಭಗಳನ್ನು ಉಪಯೋಗಿಸಿಕೊಳ್ಳುವ ಚಾಕಚಕ್ಯತೆ ಇರುವುದು ಕಂಡುಬರುತ್ತದೆ.[೫೩]

೨. ಗುಂತಗೋಳ ಸಂಸ್ಥಾನ

ಗುಂತಗೋಳದ ನಾಯಕರು ಬಿಜಾಪುರದ ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ ನಿರ್ಲಕ್ಷಿಸಲ್ಪಟ್ಟ ಪ್ರದೇಶದಲ್ಲಿ ಒಂದು ಸಂಸ್ಥಾನವನ್ನು ಸ್ಥಾಪಿಸಿದರು. ಮುಂದೆ ಆಡಳಿತಕ್ಕೆ ಬಂದ ಮೊಗಲ್ ಸುಲ್ತಾನರಿಗೆ ಕಪ್ಪಕಾಣಿಕೆ ನೀಡುತ್ತಾ ಅವರ ಆಶ್ರಿತ ಸಂಸ್ಥಾನಗಳಾದರು. ನಿಜಾಮನ ಆಳ್ವಿಕೆಯ ಸಂದರ್ಭದಲ್ಲಿ ಸಂಸ್ಥಾನದ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವ ಮೂಲಕ ಸ್ಥಳೀಯ ಅಧಿಕಾರಿಗಳಾದ ಪಾಟೀಲ್, ಕುಲಕರ್ಣಿ, ನಾಡಗೌಡ, ದೇಸಾಯಿ ಮತ್ತು ದೇಶಮುಖರಿಗೆ ತೆರಿಗೆ ವಸೂಲಿ ಮಾಡುವ ಅಧಿಕಾರ ನೀಡಿದನು. ಇದರಿಂದ ಸ್ಥಳೀಯ ಅಧಿಕಾರಿಗಳು ಸಂಸ್ಥಾನದ ಅರಸನಿಗಿಂತ ನಿಜಾಮನಿಗೆ ಹೆಚ್ಚಿನ ಗೌರವ ಸೂಚಿಸುತ್ತಿದ್ದರು. ಸಂಸ್ಥಾನದಲ್ಲಿ ಸಂಗ್ರಹಿಸಿದ ತೆರಿಗೆಯನ್ನು ಅರಸರು ನಿಜಾಮ್ ಸರ್ಕಾರಕ್ಕೆ ವಾರ್ಷಿಕ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಹೈದರಾಬಾದ್ ನಿಜಾಮನು ಯಾವುದೇ ಸಂದರ್ಭದಲ್ಲಿ ಸೈನಿಕ ಸಹಾಯ ಕೇಳಿದಾಗ ಸೈನಿಕ ಸಹಾಯ ನೀಡುವುದರ ಮೂಲಕ ನಿಜಾಮ ಆಡಳಿತದ ಅಧೀನದಲ್ಲಿಯೇ ಆಳ್ವಿಕೆ ನಡೆಸಿದರು.[೫೪]

೩. ದೇವದುರ್ಗ ಸಂಸ್ಥಾನ

ದೇವದುರ್ಗದ ಅರಸರು ತಮ್ಮ ಸಂಸ್ಥಾನವನ್ನು ಉಳಿಸಿಕೊಳ್ಳಲು ತಮ್ಮ ಪ್ರತಿಸ್ಪರ್ಧಿ ಕನಕಗಿರಿಯ ರಂಗಪ್ಪನಾಯಕನ ಮಗ ಹಿರೇನಾಯಕನ ದಾಳಿಯಿಂದ ನಿಜಾಮನ ರಕ್ಷಣೆ ಕೋರಿದರು. ಇದೇ ಸಂದರ್ಭವನ್ನು ಬಳಸಿಕೊಂಡು ನಿಜಾಮ್ ತನ್ನ ಸಾಮಂತ ಪಾಳೇಗಾರನಾದ ಸುರಪುರದ ದೊರೆಯ ಮೂಲಕ ಕನಕಗಿರಿಯ ಹಿರೇನಾಯಕನನ್ನು ಸದೆಬಡಿದು ದೇವದುರ್ಗ ಅರಸರನ್ನು ರಕ್ಷಣೆ ಮಾಡಿದರು. ಇದಕ್ಕೆ ಪ್ರತಿಫಲವಾಗಿ ನಿಜಾಮರು ದೇವದುರ್ಗ ಸಂಸ್ಥಾನದ

ಪ್ರದೇಶಗಳ ಜೊತೆ ಕಪ್ಪಕಾಣಿಕೆಯನ್ನು ಸ್ವಾಧೀನಪಡಿಸಿಕೊಂಡರು.[೫೫] ನಂತರ ೧೮೫೩ರಲ್ಲಿ ನಿಜಾಮ್ ಬೀರಾರ್ ಒಪ್ಪಂದಕ್ಕೆ ಸಹಿ ಹಾಕಿದ್ದರಿಂದ ಬೀರಾರ್, ಉಸ್ಮಾನಾಬಾದ್, ರಾಯಚೂರು ಮತ್ತು ದೇವದುರ್ಗ ಸಂಸ್ಥಾನವನ್ನು ಈಸ್ಟ್ ಇಂಡಿಯಾ ಕಂಪನಿಗೆ ಬಿಟ್ಟುಕೊಟ್ಟನು. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಶರಿಗೆ ಮಾಡಿದ ಸಹಕಾರದಿಂದ ವಿಜಯಶಾಲಿಯಾಗಿದ್ದರಿಂದ ಬ್ರಿಟಿಶರು ನಿಜಾಮನಿಂದ ಪಡೆದುಕೊಂಡ ಪ್ರದೇಶಗಳನ್ನು ಮರಳಿ ನೀಡಿದರು. ಹೀಗಾಗಿ ದೇವದುರ್ಗ ಸ್ವಾತಂತ್ರ್ಯ ಚಳುವಳಿಯಿಂದ ಭಾರತದಲ್ಲಿ ವಿಲೀನವಾಗುವವರೆಗೆ ನಿಜಾಮನ ಅಧೀನದಲ್ಲಿಯೇ ಉಳಿಯಿತು.[೫೬]

೪. ಸುರಪುರದ ಸಂಸ್ಥಾನ

ವಿಜಯನಗರದ ಅರಸರ ಆಳ್ವಿಕೆಯಲ್ಲಿ ಸೈನಿಕರಾಗಿ ಸೇವೆ ಸಲ್ಲಿಸಿದ ಬೇಡ ಪಡೆಯನ್ನು, ಸುರಪುರದ ಸುತ್ತಲ ಪ್ರದೇಶದ ಆಡಳಿತವನ್ನು ನೀಡಿ ತಮ್ಮ ಮಾಂಡಲೀಕರಾಗಿ ಮಾಡಿಕೊಂಡರು. ಕೃಷ್ಣಾ-ಭೀಮಾ ನದಿಗಳ ಮಧ್ಯ ಪ್ರದೇಶವಾಗಿದ್ದರಿಂದ ಕೃಷ್ಣಾ ಭೀಮಾ ಪ್ರದೇಶದ ಪಾಳೇಗಾರರೆಂದು ನೇಮಿಸಿದರು. ಔರಂಗಜೇಬನು ದಕ್ಷಿಣ ಭಾರತದ ದಂಡಯಾತ್ರೆ ಕೈಗೊಂಡು ಸುರಪುರದ ಪಾಳೇಗಾರರೊಂದಿಗೆ ಕಾದಾಡಿ ಅವರ ಧೈರ್ಯವನ್ನು ಕೊಂಡಾಡಿ ಇವರೊಂದಿಗೆ ಸ್ನೇಹಹಸ್ತ ಚಾಚಿದನು. ಮೊಗಲರ ಪತನದ ನಂತರ ಹೈದರಾಬಾದ್ ನಿಜಾಮನು ಈ ಪ್ರದೇಶವನ್ನು ಕಬಳಿಸಲು ಹರಸಾಹಸ ಪಡುತ್ತಿದ್ದನು. ಆದರೆ ಸಂಪೂರ್ಣವಾಗಿ ಅಧಿಕಾರ ಸ್ಥಾಪಿಸುವಲ್ಲಿ ವಿಫಲನಾಗಿದ್ದನು. ಇದೇ ಸಂದರ್ಭಕ್ಕೆ ದಕ್ಷಿಣ ಭಾರತದಲ್ಲಿ ಬ್ರಿಟಿಶರು ತಮ್ಮ ವಸಾಹತುಶಾಹಿ ನೀತಿಯನ್ನು ವಿಸ್ತರಿಸುವುದಕ್ಕಾಗಿ ಸ್ಥಳೀಯ ಅರಸರನ್ನು ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿಕಟ್ಟುವ ಮೂಲಕ ಸಾಮ್ರಾಜ್ಯಶಾಹಿ ನೀತಿ ಗಟ್ಟಿಗೊಳಿಸಿಕೊಳ್ಳುತ್ತಿದ್ದರು. ನಿಜಾಮನು ಸುರಪುರವನ್ನು ವಶಪಡಿಸಿಕೊಳ್ಳಲು ಬ್ರಿಟಿಶರ ಸಹಾಯ ಕೋರಿದನು. ಬ್ರಿಟಿಶರ ವಸಾಹತುಶಾಹಿ ನೀತಿಯನ್ನು ವಿರೋಧಿಸುತ್ತಿರುವ ಸುರಪುರದ ನಾಯಕನನ್ನು ಸದೆಬಡಿಯುವುದಕ್ಕೆ ಇದೇ ಒಳ್ಳೆಯ ಸಮಯವೆಂದು ಬ್ರಿಟಿಶರು ನಿಜಾಮನ ಜೊತೆ ಸೇರಿ ಸುರಪುರ ಸಂಸ್ಥಾನವನ್ನು ವಶಪಡಿಸಿಕೊಂಡರು.[೫೭]

ನಿಜಾಮ ಅಫಜಲದ್ದೌಲ್ ಬಹದ್ದೂರ್ ತನ್ನ ಅಧೀನದಲ್ಲಿ ಆಶ್ರಿತ ಸಂಸ್ಥಾನಗಳ ಮೇಲೆ ನಿಯಂತ್ರಣ ಸಾಧಿಸುತ್ತಾ ಅವುಗಳಿಂದ ಪೊಗದಿ ಹಣವನ್ನು ಪಡೆಯುತ್ತಿದ್ದನು. ಇದೇ ಸಮಯಕ್ಕೆ ೧೮೫೭ರ ದಂಗೆಯು ಭಾರತದ ತುಂಬೆಲ್ಲ ವ್ಯಾಪಕವಾಗಿ ಹರಡಿತ್ತು. ನಿಜಾಮನು ಈ ದಂಗೆಯನ್ನು ತನ್ನ ಸಂಸ್ಥಾನದಲ್ಲಿ ಹರಡದ ಹಾಗೆ ಎಚ್ಚರಿಕೆ ವಹಿಸಿದನು. ಆದರೆ ಈ ಎಚ್ಚರಿಕೆಯ ಗಡಿಯನ್ನು ದಾಟಿ ಸುರಪುರದ ವೆಂಕಟಪ್ಪ ನಾಯಕನು ಬ್ರಿಟಿಶರ ಸಾಮ್ರಾಜ್ಯಶಾಹಿ ನೀತಿ ವಿರುದ್ಧ ಹೋರಾಡಲು ಸಿದ್ಧನಾದನು. ಇದನ್ನು ಮನಗಂಡ ಬ್ರಿಟಿಶರು ನಿಜಾಮನ ಸಹಾಯದಿಂದ ವೆಂಕಟಪ್ಪ ನಾಯಕನನ್ನು

ಬಂಧಿಸಿ ಹೈದರಾಬಾದಿಗೆ ಕರೆತಂದರು. ಈ ಸಹಾಯಕ್ಕಾಗಿ ಬ್ರಿಟಿಶರು ಸುರಪುರವನ್ನು ನಿಜಾಮನ ಆಡಳಿತದ ಒಂದು ಭಾಗವಾಗಿ ಬಿಟ್ಟುಕೊಟ್ಟರು.[೫೮] ನಿಜಾಮನು ಈ ರೀತಿಯಾಗಿ ವಶಪಡಿಸಿಕೊಂಡ ಸುರಪುರ ಸಂಸ್ಥಾನವನ್ನು ಬ್ರಿಟಿಶರ ಸಹಾಯಕ ಸೈನ್ಯಪದ್ಧತಿಗೆ ಅನುಗುಣವಾಗಿ ತನ್ನ ಸಂಸ್ಥಾನದಲ್ಲಿದ್ದ ಬ್ರಿಟಿಶ್ ಸೈನಿಕ ಖರ್ಚು-ವೆಚ್ಚಗಳನ್ನು ಸರಿದೂಗಿಸಲು ಸುರಪುರದ ಮೇಲೆ ಅಧಿಕ ತೆರಿಗೆಯನ್ನು ವಿಧಿಸಿದನು. ಸಂಸ್ಥಾನಕ್ಕೆ ಹೊರೆಯಾಗುವ ತೆರಿಗೆಯನ್ನು ಸಮಯಕ್ಕೆ ಸರಿಯಾಗಿ ಪಾವತಿಸಿದರೆ ಬ್ರಿಟಿಶರ ನೆರವಿನಿಂದ ವಸೂಲಿ ಮಾಡಿ ತನ್ನ ಆರ್ಥಿಕ ಹೊರೆಯನ್ನು ಸರಿದೂಗಿಸಿಕೊಳ್ಳುತ್ತಿದ್ದನು.[೫೯]

೫. ಗುಡಗಂಟಿ ಸಂಸ್ಥಾನ

ಗುಡಗಂಟಿ ಸಂಸ್ಥಾನದ ಅರಸರು ಸುರಪುರದ ಮೂಲಕ್ಕೆ ಸೇರಿದವರು. ಇವರ ಮೂಲ ಪುರುಷ ನರಸಿಂಹನಾಯಕನೆಂದು ತಿಳಿದುಬರುತ್ತದೆ. ಜಕ್ಕಪ್ಪ ನಾಯಕನ ಹಿರಿಯ ಮಗನಾದ ಗಟ್ಟಿಲಿಂಗನಾಯಕನೇ ಗುಡಗಂಟಿ ಸಂಸ್ಥಾನದ ಸ್ಥಾಪಕ. ಈ ಸಂಸ್ಥಾನವು ಅನೇಕ ಅರಸರ ಆಳ್ವಿಕೆಯಲ್ಲಿ ಆಶ್ರಿತ ಸಂಸ್ಥಾನವಾಗಿ ಆಡಳಿತ ಮಾಡಿತು.[೬೦] ಸುರಪುರದ ನಾಯಕರ ಜೊತೆ ವೈವಾಹಿಕ ಸಂಬಂಧ ಏರ್ಪಟ್ಟಿದ್ದರಿಂದ ಅವರ ಅಧೀನದಲ್ಲಿಯೇ ಆಡಳಿತ ನಡೆಸುತ್ತಿತ್ತು. ಸುರಪುರವನ್ನು ಈಗಾಗಲೇ ನಿಜಾಮನು ವಶಪಡಿಸಿಕೊಂಡಿದ್ದರಿಂದ ಗುಡಗಂಟಿ ಕೂಡ ನಿಜಾಮನ ಆಡಳಿತಕ್ಕೆ ಒಳಗಾಯಿತು.[೬೧] ಗುಡಗಂಟಿ ಸಂಸ್ಥಾನದ ಅರಸ ಸೋಮಲಿಂಗ ನಾಯಕನಿಗೆ ಮಕ್ಕಳಿರಲಿಲ್ಲ. ಅದಕ್ಕಾಗಿ ರಾಣಿ ಕಾಟಮ್ಮ ನಿಜಾಮ್ ಸರ್ಕಾರಕ್ಕೆ ದತ್ತು ತೆಗೆದುಕೊಳ್ಳುವುದಕ್ಕೆ ಅರಿಕೆ ಮಾಡಿಕೊಂಡಳು. ಸರ್ಕಾರದ ಆಜ್ಞೆಯ ಮೇರೆಗೆ ರಾಣಿ ಕಾಟಮ್ಮ ಮೈದುನನ ಮಗನಾದ ರಾಜ ಜಡಿ ಸೋಮಲಿಂಗಪ್ಪ ನಾಯಕನನ್ನು ದತ್ತಕ ತೆಗೆದುಕೊಂಡಳು. ಈತ ಚಿಕ್ಕವನಿದ್ದ ಕಾರಣಕ್ಕೆ ಸಂಸ್ಥಾನದ ಎಲ್ಲ ಅಧಿಕಾರವನ್ನು ರಾಣಿಯೇ ನೋಡಿಕೊಂಡು ಹೋಗುತ್ತಿದ್ದಳು. ಆಗ ನಿಜಾಮ್ ಸರ್ಕಾರವು ಗುಡಗಂಟಿ ಸಂಸ್ಥಾನದ ಮೇಲೆ ಹತೋಟಿಯನ್ನು ಸ್ಥಾಪಿಸಲು ಒಬ್ಬ ಸರ್ಕಾರಿ ಅಧಿಕಾರಿಯನ್ನು ನೇಮಿಸಿದರು. ಆ ಅಧಿಕಾರಿಗೆ 'ನಾಜೀಮ್' ಎಂದು ಕರೆಯುತ್ತಿದ್ದರು. ನಂತರ ಅಧಿಕಾರ ವಹಿಸಿಕೊಂಡ ಜಡಿ ಸೋಮಲಿಂಗಪ್ಪ ನಾಯಕನು ನಿಜಾಮ್ ಆಣತಿಯಂತೆ ಆಡಳಿತ ನಡೆಸುತ್ತಾ ಮರಣ ಹೊಂದಿದನು. ತರುವಾಯ ಮತ್ತೊಬ್ಬ ದತ್ತಕ ಮಗನಾಗಿ ರಾಜ ತಿಪ್ಪರಾಜ ಸೋಮನಾಯಕನಿಗೆ ಪಟ್ಟಾಭಿಷೇಕ ಮಾಡಲಾಯಿತು. ಗುಡಗಂಟಿ ಸಂಸ್ಥಾನದ ಕೊನೆಯ ದೊರೆ ತಿಪ್ಪರಾಜ ಸೋಮನಾಯಕ. ತನ್ನ ಅಧಿಕಾರಾವಧಿಯಲ್ಲಿ ಒಳ ಹಳ್ಳಿಗಳಿಗೆ ಉಸ್ತುವಾರಿಯನ್ನಾಗಿ ಸಣ್ಣ ಪುಟ್ಟ ಜಮೀನ್ದಾರರನ್ನು ನೇಮಕ ಮಾಡಿದನು. ಇವರನ್ನು ನಾಡಗೌಡರು, ದೇಸಾಯಿಗಳು ಎಂದು ಕರೆಯುತ್ತಿದ್ದರು. ಈ ಜಮೀನ್ದಾರರಿಂದ ಸಂಸ್ಥಾನಕ್ಕೆ ಬರುತ್ತಿರುವ ಆದಾಯ ೧/೫ ಪಾಲನ್ನು ನಿಜಾಮನಿಗೆ ವಾರ್ಷಿಕ ಪೊಗದಿ ನೀಡಬೇಕಾಗಿತ್ತು. ಹೀಗೆ ನಿಜಾಮರು ತಮ್ಮ

ಆಡಳಿತದ ಅವಧಿಯಲ್ಲಿದ್ದ ಆಶ್ರಿತ ಸಂಸ್ಥಾನಗಳನ್ನು ಕೇವಲ ತಮ್ಮ ಆರ್ಥಿಕ, ಸೈನಿಕ, ಹಿತಾಸಕ್ತಿಗಳಿಗೆ ಬಳಸಿಕೊಳ್ಳುವ ಮೂಲಕ ಅಸಫಿಯಾ ಮನೆತನದ ಆಡಳಿತವನ್ನು ಗಟ್ಟಿಗೊಳಿಸುವ ಕೆಲಸವನ್ನು ಮಾಡಿರುವುದು ಕಂಡುಬರುತ್ತದೆ.[೬೨]

೭. ಮರಾಠರೊಂದಿಗೆ ನಿಜಾಮ್ ಸಂಬಂಧ

ಮೊಗಲ್ ಸುಲ್ತಾನ ಔರಂಗಜೇಬನ ಮರಣದ ನಂತರ ಅಧಿಕಾರಕ್ಕೆ ಬಂದ ಅಸಮರ್ಥ ದೊರೆಗಳಿಂದ ಸಾಮಂತ ಸಂಸ್ಥಾನಗಳು ಹೊರಬಂದು ಸ್ವಾತಂತ್ರ್ಯ ಘೋಷಿಸಿಕೊಂಡವು. ಅಂತಹ ಮನೆತನಗಳಲ್ಲಿ ಮರಾಠರದ್ದು ಒಂದು. ಮರಾಠರು ಮೊಗಲ್ ಸುಲ್ತಾನನ ಮೇಲೆ ಪ್ರಭಾವ ಬೀರಿ ದಕ್ಷಿಣ ಭಾರತದಲ್ಲಿ ಚೌತ ಮತ್ತು ಸರ್ದೇಶಮುಖಿಗಳನ್ನು ವಸೂಲಿ ಮಾಡುವ ಅಧಿಕಾರವನ್ನು ಪಡೆದರು. ದಖ್ಖನಿನ ಸುಬೇದಾರನಾಗಿ ಅಧಿಕಾರ ಸ್ವೀಕರಿಸಿದ ದಾವುದ್‌ಖಾನ್‌ನು ಮರಾಠರು ಮೊಗಲ್ ಸುಲ್ತಾನನಿಂದ ಪಡೆದ ಅಧಿಕಾರವನ್ನು ವಿರೋಧಿಸಿದನು. ತನ್ನ ಸುಭಾದಲ್ಲಿ ಮೊಗಲ್ ಸರ್ಕಾರದ ಅಧಿಕಾರಿಗಳೇ ಚೌತ ಮತ್ತು ಸರ್ದೇಶಮುಖಿ ವಸೂಲಿ ಮಾಡಿದಲ್ಲಿ ಮಾತ್ರ ಮರಾಠರ ಸವಲತ್ತುಗಳನ್ನು ಒಪ್ಪುವುದಾಗಿ ಘೋಷಿಸಿದನು.[೬೩] ಇದರಿಂದ ಮರಾಠರು ಹೇಗಾದರೂ ಮಾಡಿ ತಮ್ಮ ಅಧಿಕಾರ ವಿರೋಧಿಸುತ್ತಿರುವ ದಾವುದ್‌ಖಾನ್‌ನನ್ನು ಸುಬೇದಾರ ಹುದ್ದೆಯಿಂದ ತೆಗೆಯುವ ಒಳಸಂಚು ಹೂಡಿದರು. ಮೊಗಲ್ ಸುಲ್ತಾನನ ಮೂಲಕ ದಾವುದ್‌ಖಾನನನ್ನು ಬೇರೆ ಸುಭಾಕ್ಕೆ ವರ್ಗಾಯಿಸಲಾಯಿತು. ಮರಾಠರು ತಮ್ಮ ಅಧಿಕಾರ ವಿರೋಧಿಸುವ ವ್ಯಕ್ತಿ ಹೋಗಿದ್ದಾನೆಂಬ ಸಂದರ್ಭದಲ್ಲಿಯೇ ಆ ಸ್ಥಾನಕ್ಕೆ ನಿಜಾಮ್-ಉಲ್-ಮುಲ್ಕ ಅಸಫಜಹಾನನ್ನು ನೇಮಿಸಲಾಯಿತು. ಮೊದಲೇ ಮರಾಠರ ವಿರೋಧಿಯಾಗಿದ್ದ ಇವನು ಅವರ ಸವಲತ್ತುಗಳನ್ನು ವಿರೋಧಿಸಿದನು. ಇದರಿಂದ ಕೋಪಗೊಂಡ ಮರಾಠರು ದಕ್ಷಿಣ ಭಾರತದ ಮೇಲೆ ದಾಳಿ ಮಾಡಿ ದಕ್ಷಿಣ ಭಾರತದ ಪಾಳೇಪಟ್ಟುಗಳಿಂದ ಕಪ್ಪಕಾಣಿಕೆಗಳನ್ನು ವಸೂಲಿ ಮಾಡುತ್ತಿದ್ದರು. ಹೀಗೆ ಪಾಳೇಪಟ್ಟುಗಳು ಕಪ್ಪಕಾಣಿಕೆಗಳನ್ನು ನೀಡುತ್ತಾ ಸ್ವತಂತ್ರ ರಾಜ್ಯಗಳಂತೆ ವರ್ತಿಸುತ್ತಿದ್ದವು. ಈ ಬೆಳವಣಿಗೆಗಳಿಂದ ದಕ್ಷಿಣ ಭಾರತದ ಮೇಲೆ ನಿಜಾಮ್-ಉಲ್-ಮುಲ್ಕನ ಪ್ರಭಾವ ಕಡಿಮೆ ಯಾಯಿತು. ಇಂತಹ ಸಮಯದಲ್ಲಿ ದೆಹಲಿ ದರ್ಬಾರದ ಸೈಯದ್ ಸಹೋದರರು ತಮ್ಮ ನಂಬಿಕಸ್ಥನನ್ನು ಸುಬೇದಾರನ್ನಾಗಿ ನೇಮಿಸುವುದಕ್ಕಾಗಿ ಮರಾಠರನ್ನು ವಿರೋಧಿಸುತ್ತಿದ್ದ ನಿಜಾಮನನ್ನು ವರ್ಗಾಯಿಸಲು ಮರಾಠರ ಸಹಾಯದಿಂದ ಮೊಗಲ್ ಸುಲ್ತಾನನ ಮೇಲೆ ಪ್ರಭಾವ ಬೀರಿದರು. ಇದರಿಂದ ೧೭೧೫ರಲ್ಲಿ ಮೊಗಲ್ ಚಕ್ರವರ್ತಿಯಾಗಿದ್ದ ಫರೂಕಶಿಯಾರನು ನಿಜಾಮನನ್ನು ಬಿಜಾಪುರಕ್ಕೆ ಉಪ ಸುಬೇದಾರನ್ನಾಗಿ ವರ್ಗಾಯಿಸಿದರು. ಹೀಗೆ ಸುಬೇದಾರನಾದ ಸೈಯದ್ ಹುಸೇನ್ ಅಲಿಯು ಮರಾಠರ ಅಭಿಲಾಷೆಯಂತೆ ಸರ್ದೇಶಮುಖಿಗಳನ್ನು ವಸೂಲಿ ಮಾಡುವ ಹಕ್ಕನ್ನು ಮನ್ನಿಸಿದನು. ಆದರೆ ದುರದೃಷ್ಟವಶಾತ್ ಮೊಗಲ್ ಚಕ್ರವರ್ತಿ ಮತ್ತು ಸೈಯದ್ ಸಹೋದರರ ನಡುವೆ ವೈಮನಸ್ಸು ಉಂಟಾಯಿತು.

ಮರಾಠರಿಗೆ ಇದೊಂದು ಒಳ್ಳೆಯ ಅವಕಾಶವಾಯಿತು. ಈ ಭಿನ್ನಾಭಿಪ್ರಾಯವನ್ನು ಸರಿಪಡಿಸಿಕೊಳ್ಳಲು ಮೊಗಲ್ ಸುಲ್ತಾನನು ಮರಾಠರ ಸಹಾಯಕ ಕೇಳಿದ್ದರಿಂದ ಪೇಶ್ವೆ ಬಾಲಾಜಿ ವಿಶ್ವನಾಥನು ದೆಹಲಿ ದರ್ಬಾರ್‌ಗೆ ತೆರಳಿದನು. ಇಂತಹ ಸಂದರ್ಭದಲ್ಲಿ ಮೊಗಲ್ ಸುಲ್ತಾನ್ ಫರೂಕಶಿಯಾರನು ಮರಣ ಹೊಂದಿದ್ದರಿಂದ ಉತ್ತರಾಧಿಕಾರಿಯಾಗಿ ಮಹಮದ್ ಷಾ ಅಧಿಕಾರ ವಹಿಸಿಕೊಂಡನು. ತಮಗೆ ಸಹಾಯ ನೀಡಿದ ಮರಾಠರಿಗೆ ಮೂರು ದಾನಪತ್ರಗಳನ್ನು ನೀಡಿದನು. ಈ ಮೂರು ದಾನಪತ್ರಗಳು ಮರಾಠ ಸಾಮ್ರಾಜ್ಯಕ್ಕೆ ಅಡಿಗಲ್ಲಾಯಿತು. ಮೊದಲನೆಯ ದಾನ ಪತ್ರದ ಪ್ರಕಾರ ಮರಾಠರಿಗೆ ಹೈದರಾಬಾದ್ ಸೇರಿದಂತೆ ದಖನ್ನಿನಲ್ಲಿ, ಕರ್ನಾಟಕ ಮತ್ತು ಮೈಸೂರಿನಲ್ಲಿ ಚೌತ ಕಂದಾಯವನ್ನು ವಸೂಲಿ ಮಾಡುವ ಹಕ್ಕು ಸಿಕ್ಕಿತು. ಎರಡನೆಯ ಪ್ರಕಾರ ಚೌತನ ಮೇಲೆ ಹತ್ತನೇ ಒಂದು ಭಾಗ ಸರ್ದೇಶಮುಖಿ ಎಂಬ ತೆರಿಗೆಯನ್ನು ವಸೂಲಿ ಮಾಡುವುದು. ಕೊನೆಯದಾಗಿ ಮರಾಠರಿಗೆ ತಮ್ಮ ಪ್ರದೇಶದ ಮೇಲೆ ಪೂರ್ಣ ಪ್ರಭುತ್ವ ಲಭಿಸಿ ಸ್ವರಾಜ್ಯ ಸ್ಥಾಪಿಸಲು ಅನುಕೂಲವಾದ್ದರಿಂದ ಅವರ ಬಹುದಿನದ ಆಸೆ ಫಲಿಸಿತು.[೪೪]

ನಿಜಾಮನ ನೇತೃತ್ವದಲ್ಲಿ ಸರದಾರರ ಗುಂಪೊಂದು ಒಂದೇ ವರ್ಷದೊಳಗೆ ದೆಹಲಿಯಲ್ಲಿ ಸೈಯದ್ ಸಹೋದರರನ್ನು ಅವರ ಸ್ಥಾನದಿಂದ ಕೆಳಗುರುಳಿಸಿತು. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡ ನಿಜಾಮನು ತನ್ನ ಸ್ಥಾನವನ್ನು ಭದ್ರಗೊಳಿಸಲು ಮರಾಠರೊಂದಿಗೆ ಮಿತ್ರತ್ವ ಸಾಧಿಸಿದರೆ ತನ್ನ ಕೆಲಸ ಸುಲಭವೆಂದು ತಿಳಿದುಕೊಂಡನು. ೧೭೨೪ ಮೇ ೧೮ ರಂದು ನಿಜಾಮನು ಪೇಶ್ವೆಯನ್ನು ನಬ್ಬಾ ಎಂಬ ಪ್ರದೇಶದಲ್ಲಿ ಭೇಟಿಯಾಗಿ ಸೈನಿಕ ಸಹಾಯಕ್ಕಾಗಿ ಒತ್ತಾಯಿಸಿದನು. ತನಗೆ ಬೆಂಬಲ ನೀಡಿದಲ್ಲಿ ಮರಾಠರನ್ನು ದಖನ್ನಿನಲ್ಲಿ ಚೌತ ಮತ್ತು ಸರ್ದೇಶ್‌ಮುಖಿಗಳನ್ನು ವಸೂಲಿ ಮಾಡುವ ಹಕ್ಕನ್ನು ಮನ್ನಿಸುವುದಾಗಿ ಆಶ್ವಾಸನೆ ಕೊಟ್ಟನು. ಈ ರೀತಿಯಾಗಿ ಮರಾಠರ ಸಹಾಯ ಪಡೆದ ನಿಜಾಮನು ದಕ್ಷಿಣ ಸುಬೇದಾರನ ಮೇಲೆ ದಾಳಿ ಮಾಡಿದನು. ದಾಳಿಯನ್ನು ಎದುರಿಸದೆ ಸುಬೇದಾರ ಪಲಾಯನ ಮಾಡಿದ್ದರಿಂದ ನಿಜಾಮ-ಉಲ್-ಮುಲ್ಕನು ಮತ್ತೆ ದಕ್ಷಿಣ ಸುಭಾದ ಸುಬೇದಾರನಾಗಿ ಅಧಿಕಾರ ಸ್ವೀಕರಿಸಿದನು.

ಒಪ್ಪಂದದಂತೆ ನಿಜಾಮನು ಮರಾಠರಿಗೆ ಮೊಗಲ್ ಚಕ್ರವರ್ತಿ ಆಜ್ಞೆಯಂತೆ ಚೌತ ಮತ್ತು ಸರ್ದೇಶ್‌ಮುಖಿಗಳನ್ನು ವಸೂಲಿ ಮಾಡಲು ಮನ್ನಿಸಿದನು. ಹೀಗೆ ಮರಾಠರು ಪಡೆದ ಅಧಿಕಾರವನ್ನು ಉಳಿಸಿಕೊಳ್ಳಲು ಶಾಂತಿ ಮತ್ತು ಶಿಸ್ತುಗಳನ್ನು ಕಾಪಾಡುವುದು ಮರಾಠ ಸರ್ಕಾರದ ಬಹುದೊಡ್ಡ ಕೆಲಸವಾಗಿತ್ತು. ಅದಕ್ಕಾಗಿ ಬಾಲಾಜಿ ವಿಶ್ವನಾಥನು ದಖನ್ನನ್ನು ಬೇರೆ ಬೇರೆ ಭಾಗಗಳನ್ನಾಗಿ ವಿಂಗಡಿಸಿ, ಪ್ರತಿ ಭಾಗಕ್ಕೂ ಒಬ್ಬ ಮರಾಠ ಮುಖಂಡರನ್ನು ನೇಮಿಸಿ ಅವನ ಮುಖಾಂತರ ಆ ಪ್ರದೇಶದಲ್ಲಿ ಚೌತ ಮತ್ತು ಸರ್ದೇಶ್‌ಮುಖಿಗಳನ್ನು ವಸೂಲಿ ಮಾಡಿ ಅದರಲ್ಲಿ

ತಮ್ಮ ಆಡಳಿತಕ್ಕಾಗುವ ವೆಚ್ಚದ ಹಣವನ್ನು ತೆಗೆದುಕೊಂಡು ಉಳಿದ ಹಣವನ್ನು ಸರ್ಕಾರಕ್ಕೆ ಪಾವತಿಸುತ್ತಿದ್ದನು. ಮರಾಠ ಅಧಿಕಾರಿಗಳು ತಮ್ಮ ಚೌತ ಮತ್ತು ಸರ್ದೇಶ್‌ಮುಖಿ ವಸೂಲಿ ಮಾಡುವ ಪ್ರದೇಶದಲ್ಲಿ ಎಲ್ಲ ವಿಧಿಯಲ್ಲಿ ಸ್ವತಂತ್ರರಂತೆ ವರ್ತಿಸುತ್ತಿದ್ದರು. ಈ ಬೆಳವಣಿಗೆಯಿಂದ ನಿಜಾಮನು ಮರಾಠರ ಸವಲತ್ತುಗಳನ್ನು ರದ್ದುಪಡಿಸುವುದರ ಜೊತೆಗೆ ಅವರನ್ನು ಮಟ್ಟಹಾಕುವ ಸಮಯಕ್ಕಾಗಿ ಕಾಯುತ್ತಿದ್ದನು. ಆದರೆ ಬಲಿಷ್ಠರಾಗಿದ್ದ ಮರಾಠರು ನಿಜಾಮನ ಆಸೆ ಕೈಗೂಡದಂತೆ ನಡೆದುಕೊಂಡರು. ಇದರಿಂದ ಮರಾಠರೊಡನೆ ನಿಜಾಮನ ಸಂಬಂಧ ಸೂಕ್ಷ್ಮವಾಗಿತ್ತು. ನಿಜಾಮನು ಒಂದೇ ಕಾಲದಲ್ಲಿ ಮರಾಠರ ಶತ್ರು ಮತ್ತು ಮಿತ್ರನಾಗಿದ್ದನು.[೬೫]

ನಿಜಾಮ-ಉಲ್-ಮುಲ್ಕನ ಮರಣದ ನಂತರ ಉತ್ತರಾಧಿಕಾರಕ್ಕಾಗಿ ನಡೆದ ಹೋರಾಟದ ಸ್ಥಳೀಯ ರಾಜಕಾರಣದಲ್ಲಿ ಫ್ರೆಂಚ್ ಮತ್ತು ಬ್ರಿಟಿಶರು ತಮ್ಮ ಸಾಮ್ರಾಜ್ಯಶಾಹಿ ನೀತಿಯಂತೆ ಆರ್ಥಿಕವಾಗಿ ಲಾಭ ಮಾಡಿಕೊಳ್ಳಲು ಭಾಗವಹಿಸಿದರು. ಈ ಕರ್ನಾಟಕ ಯುದ್ಧದಲ್ಲಿ ಮರಾಠರು ಭಾಗವಹಿಸಿ ನಿಜಾಮ ಮತ್ತು ಆರ್ಕಾಟ್ ನವಾಬನ ಉತ್ತರಾಧಿಕಾರಕ್ಕಾಗಿ ಬೆಂಬಲಿಸಿ ತಮ್ಮ ವಿಸ್ತರಣಾ ನೀತಿಯನ್ನು ಮುಂದುವರಿಸಿದರು.[೬೬] ಆದರೆ ಈ ನೀತಿಯಿಂದಾಗಿ ಮರಾಠರು ಅಫ್ಘಾನಿಸ್ತಾನದ ಸುಲ್ತಾನ್ ಅಹಮದ್ ಷಾ ಅಬ್ದಾಲಿಯ ವಿರೋಧಿಗಳಾಗಿ ೧೭೬೧ರಂದು ಪಾಣಿಪಟ್ ಎಂಬ ಪ್ರದೇಶದಲ್ಲಿ ಪರಸ್ಪರ ಎದುರಾದವು. ಬಲಾಢ್ಯ ಶಕ್ತಿ ಹೊಂದಿದ ಅಹಮದ್ ಷಾ ಅಬ್ಬಾಲಿಯು ನಡೆಸಿದ ಬಿರುಸಾದ ದಾಳಿಯನ್ನು ತಡೆಯಲಾರದೆ ಮರಾಠರು ಚದುರಿ ಹೋದರು. ಭಾರತವನ್ನು ತಮ್ಮ ಆಳ್ವಿಕೆಗೆ ತರುವ ಮರಾಠರ ಕನಸು ನುಚ್ಚು ನೂರಾಯಿತು. ಅದುವರೆಗೆ ಮರಾಠರಲ್ಲಿದ್ದ ಐಕ್ಯತೆಯು ಮುರಿದು ಬಿದ್ದು ಭೋನ್ಸ್ಲೆ, ಹೋಳ್ಕರ್, ಸಿಂಧ್ಯಾಗಳು ತಮ್ಮ ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ಬೆಳೆಸಿಕೊಂಡರು. ಇದರಿಂದ ನಿಜಾಮನಿಗೆ ದಕ್ಷಿಣ ಭಾರತದಲ್ಲಿ ತನ್ನ ಅಧಿಕಾರವನ್ನು ಸ್ಥಿರಗೊಳಿಸಿಕೊಳ್ಳಲು ಅನುಕೂಲವಾಯಿತು. ಹಾಗೆಯೇ ತನ್ನ ಪ್ರದೇಶದ ಮೇಲೆ ಮರಾಠರು ವಿಧಿಸುತ್ತಿದ್ದ ಚೌತ ಮತ್ತು ಸರ್ದೇಶ್‌ಮುಖಿಗಳನ್ನು ರದ್ದುಪಡಿಸಿದನು. ಹೀಗೆ ನಿಜಾಮನು ಮರಾಠರಲ್ಲಿದ್ದ ಒಡಕನ್ನು ತನ್ನ ಲಾಭಕ್ಕಾಗಿ ಬಳಸಿಕೊಂಡು ಬ್ರಿಟಿಶರ ಸಹಾಯದಿಂದ ದಕ್ಷಿಣ ಭಾರತದಲ್ಲಿ ಪ್ರಬಲವಾಗುತ್ತಿದ್ದನು.[೬೭]

೮. ಯುರೋಪಿಯನ್ ರಾಷ್ಟ್ರಗಳೊಂದಿಗೆ ನಿಜಾಮ್ ಸಂಬಂಧ

ಭಾರತವು ಚರಿತ್ರೆಯುದ್ದಕ್ಕೂ ನಿರಂತರವಾಗಿ ಹಲವಾರು ಬಗೆಯ ಅನುಭವಗಳಿಗೆ ಒಳಗಾಗುತ್ತಲೇ ಬಂತು. ಗ್ರೀಕ್, ರೋಮನ್, ಅರೇಬಿಯನ್, ಪರ್ಷಿಯನ್ ಹಾಗೂ ಯುರೋಪಿಯನ್ ಪ್ರಭಾವ ಭಾರತದ ಮೇಲೆ ಸಾಕಷ್ಟು ಆಗಿ, ಅದು ಬೀರಿದ ಪರಿಣಾಮಗಳು ಅಳಿಸಲಾಗದ ಮುದ್ರೆಯಾಗಿ ಇಂದಿಗೂ ಉಳಿದುಕೊಂಡು ಬಂದಿದೆ. ಯುರೋಪಿಯನ್ನರು

ಆಧುನಿಕ ಸಂದರ್ಭದಲ್ಲಿ ಭಾರತವನ್ನು ಹೊರ ಜಗತ್ತಿನೊಂದಿಗೆ ಮುಖಾಮುಖಿಯಾಗುವಂತೆ ಮಾಡಿದವು. ಈ ಮುಖಾಮುಖಿ ಸ್ಥಳೀಯ ರಾಜಕಾರಣ ಆರ್ಥಿಕತೆ ಹಾಗೂ ಸಾಮಾಜಿಕ ರಚನೆಯ ಮೇಲೆ ಬೀರಿದ ಪ್ರಭಾವ ಹಾಗೂ ಉಂಟುಮಾಡಿದ ಪರಿಣಾಮ ಸ್ಥಳೀಯತೆ ಎನ್ನುವುದು ಸ್ಥಳೀಯವಾಗಿ ಉಳಿಯದೆ, ವಿಶ್ವಾತ್ಮಕ ನೆಲೆಯಲ್ಲಿ ವ್ಯಾಖ್ಯಾನಗೊಳ್ಳಲಾರಂಭಿಸಿತು. ಜಾಗತಿಕ ಮಾರುಕಟ್ಟೆ ಕೇಂದ್ರಿತ ಅರ್ಥವ್ಯವಸ್ಥೆ ವಸಾಹತುಶಾಹಿಗಳ ಪ್ರವೇಶದ ಕಾಲದಿಂದಲೇ ಚುರುಕುಗೊಂಡು, ವಸಾಹತುಗಳ ಮೇಲೆ ತನ್ನ ನಿಯಂತ್ರಣವನ್ನು ಸಾಧಿಸಿತು. ಯುರೋಪಿಯನ್ನರ ಆಗಮನ ಭಾರತದ ರಾಜಕಾರಣ ಹಾಗೂ ಆರ್ಥಿಕತೆಯನ್ನು ಸಂಪೂರ್ಣವಾಗಿ ಬದಲಾಯಿಸಿ ಯುರೋಪಿಯನ್ ಆರ್ಥಿಕತೆ ಜಾರಿಗೊಳ್ಳುವಂತೆ ಮಾಡಿತು.[೮]

ಯುರೋಪಿಯನ್ ಆಳ್ವಿಕೆಯನ್ನು ಕೇವಲ ರಾಜಕೀಯ ನೆಲೆಯಿಂದಷ್ಟೇ ನೋಡಲು ಸಾಧ್ಯವಾಗುವುದಿಲ್ಲ. ಯುರೋಪಿಯನ್ನರ ಆಳ್ವಿಕೆ ಸ್ಥಳೀಯ ಆರ್ಥಿಕತೆಯಲ್ಲಿ ಉಂಟುಮಾಡಿದ ಬದಲಾವಣೆಗಳನ್ನು ಆರ್ಥಿಕ ಹಿನ್ನೆಲೆಯಿಂದಲೇ ನೋಡಬೇಕಾಗುತ್ತದೆ. ಸ್ಥಳೀಯ ಅರಸು ಮನೆತನಗಳನ್ನು ಮಟ್ಟಹಾಕಿ ತಮ್ಮ ಸಾರ್ವಭೌಮತೆಯನ್ನು ಮೆರೆದು ಯುರೋಪಿಯನ್ನರು ಸ್ಥಳೀಯ ರಾಜಕಾರಣ ಹಾಗೂ ಆರ್ಥಿಕತೆಯ ಮೇಲೆ ತಮ್ಮ ಯಜಮಾನಿಕೆಯನ್ನು ಸ್ಥಾಪಿಸಿ ಕೊಂಡರು. ಇಲ್ಲಿ ಯಜಮಾನಿಕೆಯನ್ನು ಸ್ಥಾಪಿಸುವ ಪ್ರಕ್ರಿಯೇ ಬಲಾತ್ಕಾರದ ನೆಲೆಯಿಂದಷ್ಟೇ ಅಲ್ಲದೆ, ಮನವೊಲಿಕೆಯ ಹಾಗೂ ಸ್ಥಳೀಯರನ್ನು ಪ್ರಕ್ರಿಯೆಯ ಭಾಗವನ್ನಾಗಿಸುವುದರ ಮೂಲಕ ನಡೆಯಿತು. ಈ ಪ್ರಕ್ರಿಯೆಯಲ್ಲಿ ಶತ್ರುಗಳು ಮಿತ್ರರಾಗುವ ಹಾಗೂ ಮಿತ್ರರು ಶತ್ರುಗಳಾಗುವ ನಾಟಕಗಳು ನಡೆದವು.[೯] ಹೀಗೆ ಹೈದರಾಬಾದ್ ನಿಜಾಮರು ತಮ್ಮ ದೇಶಿಯ ಸಂಸ್ಥಾನಗಳಿಗಿಂತ ಉಳಿಸಿಕೊಳ್ಳುವ ತವಕದಲ್ಲಿದ್ದ ಸಂದರ್ಭದಲ್ಲಿ ಅವರಿಗೆ ದೇಶಿಯ ಸಂಸ್ಥಾನಗಳಿಗಿಂತ ಯುರೋಪಿಯನ್ನರೇ ಮುಖ್ಯವಾದರು. ನಿಜಾಮ್-ಉಲ್-ಮುಲ್ಕನ ಮರಣದ ನಂತರ ಉತ್ತರಾಧಿಕಾರಕ್ಕಾಗಿ ನಡೆದ ಕಲಹದಲ್ಲಿ ಅಧಿಕಾರಕ್ಕಾಗಿ ತಮ್ಮಲ್ಲಿಯೇ ದ್ವೇಷ ಸಾಧಿಸುತ್ತಾ ಫ್ರೆಂಚರ ಸಹಾಯ ಕೋರಿದರು. ಮೂಲತಃ ಫ್ರೆಂಚರು ಭಾರತಕ್ಕೆ ಬಂದಿರುವುದು ವ್ಯಾಪಾರದ ಮುಖಾಂತರ ಸಂಪತ್ತನ್ನು ದೋಚುವ ಉದ್ದೇಶದಿಂದ. ಅಂತಹ ಸಮಯಕ್ಕೆ ನಿಜಾಮರು ತಮ್ಮ ಕುಟುಂಬ ಕಲಹಕ್ಕೆ ಇವರ ಸಹಾಯ ಕೇಳಿದ್ದರಿಂದ ಇದೇ ಸಮಯವನ್ನು ಉಪಯೋಗಿಸಿಕೊಂಡ ಫ್ರೆಂಚರು ಸಹಾಯ ಮಾಡುವ ನೆಪದಲ್ಲಿ ನಿಜಾಮರಿಂದ ಅನೇಕ ಸವಲತ್ತುಗಳನ್ನು ಪಡೆದರು. ಹೈದರಾಬಾದನ್ನು ಕೇಂದ್ರಸ್ಥಾನ ಮಾಡಿಕೊಂಡು ದಕ್ಷಿಣ ಭಾರತದಲ್ಲಿ ತಮ್ಮ ವಸಾಹತುಶಾಹಿಯನ್ನು ವಿಸ್ತರಿಸುವ ತವಕದಲ್ಲಿದ್ದರು.[೧೦] ಆದರೆ ಇವರ ಪ್ರಬಲ ವಿರೋಧಿಗಳಾದ ಬ್ರಿಟಿಶರು ಕೂಡ ಹೈದರಾಬಾದ್ ಮೂಲಕ ದಕ್ಷಿಣದಲ್ಲಿ ತಮ್ಮ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳಬೇಕೆಂಬ ಬಯಕೆ

ಹೊಂದಿದ್ದರು. ಹೀಗೆ ಎರಡು ಯುರೋಪಿಯನ್ ರಾಷ್ಟ್ರಗಳು ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಜಾಗತಿಕ ಮಟ್ಟಕ್ಕೆ ತೆಗೆದುಕೊಂಡು ಹೋದವು. ನಿಜಾಮನು ಯುರೋಪಿಯನ್ ರಾಷ್ಟ್ರಗಳ ಸೈನಿಕರ ಸಹಾಯದಿಂದ ತಮ್ಮ ಕಲ್ಮಹಗಳನ್ನು ಸರಿದೂಗಿಸಿಕೊಳ್ಳುತ್ತಾ ಸ್ಥಳೀಯ ಅರಸುಮನೆತನಗಳ ಮೇಲೆ ನಿಯಂತ್ರಣ ಸಾಧಿಸಲು ಈ ಸಂದರ್ಭವನ್ನು ಉಪಯೋಗಿಸಿಕೊಂಡನು. ಕೊನೆಗೆ ಫ್ರೆಂಚರು ಬ್ರಿಟಿಶರಿಗೆ ಪ್ರತಿಸ್ಪರ್ಧಿ ನೀಡುವಲ್ಲಿ ಸೋತು ಹೈದರಾಬಾದ್ ಪ್ರದೇಶವನ್ನು ಬ್ರಿಟಿಶರಿಗೆ ಬಿಟ್ಟುಕೊಟ್ಟರು. ಈ ರೀತಿಯಾಗಿ ಬ್ರಿಟಿಶರು ನಿಜಾಮನ ಮನೆತನದ ಮೇಲೆ ಅಧಿಕಾರ ಸ್ಥಾಪಿಸಿದರು. ಆದರೆ ನಿಜಾಮನು ಸಂಪೂರ್ಣವಾಗಿ ಬ್ರಿಟಿಶರ ಕಪಿಮುಷ್ಠಿಯಲ್ಲಿರದೆ ಅವರನ್ನು ವಿರೋಧಿಸುತ್ತಾ ತಾನೊಬ್ಬ ಸ್ವತಂತ್ರ ಅರಸನೆಂಬುದನ್ನು ತೋರಿಸುತ್ತಿದ್ದನು.೨೪

ಇದರಿಂದ ಬ್ರಿಟಿಶರು ಹೇಗಾದರೂ ಮಾಡಿ ನಿಜಾಮನನ್ನು ಸಂಪೂರ್ಣ ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದರು. ಅಂತಹ ಸಮಯಕ್ಕೆ ಭಾರತಕ್ಕೆ ಗವರ್ನರ್ ಜನರಲ್ ಆಗಿ ಅಧಿಕಾರಕ್ಕೆ ಬಂದ ಲಾರ್ಡ್ ವೆಲ್ಲೆಸ್ಲಿ ಸಹಾಯಕ ಸೈನ್ಯಪದ್ಧತಿ ಎಂಬ ಅಸ್ತ್ರವನ್ನು ಮುಂದಿಟ್ಟು ಅದಕ್ಕೆ ನಿಜಾಮನು ಒಪ್ಪಿಕೊಳ್ಳುವಂತೆ ಮಾಡಿದನು. ನಿಜಾಮನು ತನ್ನ ಪ್ರಬಲ ವಿರೋಧಿಗಳಾದ ಮರಾಠ ಮತ್ತು ಹೈದರಾಲಿಯ ದಾಳಿಯನ್ನು ಎದುರಿಸುವುದಕ್ಕಾಗಿ ಬ್ರಿಟಿಶ್ ಸಹಾಯಕ ಸೈನ್ಯಪದ್ಧತಿಗೆ ಸಹಿ ಹಾಕುವ ಮೂಲಕ ಕಠಿಣ ಸಂದರ್ಭವನ್ನು ಸರಿದೂಗಿಸಿ ಕೊಂಡನು. ಹೀಗೆ ನಿಜಾಮನು ಬ್ರಿಟಿಶರ ಅಧೀನದಲ್ಲಿ ಆಳ್ವಿಕೆಯನ್ನು ನಡೆಸುತ್ತಾ ಅವರ ಆಧುನಿಕತೆ ಎಂಬ ಪರಿಕಲ್ಪನೆಯನ್ನು ಮೈಗೂಡಿಸಿಕೊಂಡು ರೈಲ್ವೆ, ಬ್ಯಾಂಕ್, ವ್ಯಾಪಾರ, ರಸ್ತೆ ಸಾರಿಗೆ, ಅಂತಾರಾಷ್ಟ್ರೀಯ ವ್ಯಾಪಾರ ಮುಂತಾದ ಕ್ಷೇತ್ರದಲ್ಲಿ ಬದಲಾವಣೆಯನ್ನು ಕಂಡುಕೊಳ್ಳಲು ಪ್ರಯತ್ನಿಸಿದನು.೨೫

೯. ನಿಜಾಮ್ ಭಾಷಿಕ ನೀತಿ

ಹೈದರಾಬಾದ್ ನಿಜಾಮರ ಆಳ್ವಿಕೆಯ ಆರಂಭದಲ್ಲಿ ಫಾರಸಿ ಭಾಷೆಗೆ ಮನ್ನಣೆ ನೀಡಲಾಗಿತ್ತು. ನಂತರ ದಖನ್ ಮಿಶ್ರಿತ ಭಾಷೆಯಾಗಿ ಉರ್ದುವನ್ನು ಮುಂಚೂಣಿಗೆ ತಂದರು. ದಿನ ಕಳೆದಂತೆ ದಖನಿ ಉರ್ದು ಭಾಷೆ ಜನಭಾಷೆಯಾಗಿ ಪರಿಣಮಿಸಿತು. ಇದರಿಂದ ನಿಜಾಮರು ಉರ್ದು ಭಾಷೆಗೆ ಹೆಚ್ಚಿನ ಸ್ಥಾನ ನೀಡಿ ಅಭಿವೃದ್ಧಿಪಡಿಸಿದರು. ಸಂಸ್ಥಾನದಲ್ಲಿ ಮರಾಠಿ, ತೆಲುಗು, ಕನ್ನಡ ಭಾಷೆಗಳ ಬಹುಸಂಖ್ಯಾತರು ಇದ್ದಾಗಲೂ ಉರ್ದು ಭಾಷೆಯನ್ನು ಆಡಳಿತ ಮತ್ತು ಶಿಕ್ಷಣದ ಭಾಷೆಯನ್ನಾಗಿಸಿದರು. ಇದರಿಂದ ಕನ್ನಡ, ತೆಲುಗು ಮತ್ತು ಮರಾಠಿ ಭಾಷೆಗಳು ತಮ್ಮ ಪ್ರಾಧಾನ್ಯತೆಯನ್ನು ಕಳೆದುಕೊಳ್ಳುತ್ತ ಸಾಗಿದವು. ನಿಜಾಮರು ಉರ್ದು ಭಾಷೆಯನ್ನು ದೇಶಿ ಭಾಷೆಯನ್ನಾಗಿ ಮಾಡಬೇಕೆಂದು ಛಲ ತೊಟ್ಟು ರಾಜ್ಯಾಡಳಿತ ಹಾಗೂ ಶಿಕ್ಷಣದಲ್ಲಿ ಉರ್ದು

ಭಾಷೆಯನ್ನು ಕಡ್ಡಾಯ ಮಾಡಿದರು. ಅದಕ್ಕೆ ಪೂರಕವಾಗುವಂತೆ ಉರ್ದು ಭಾಷೆಯನ್ನು ಅಭಿವೃದ್ಧಿಪಡಿಸಲು ನಿಜಾಮ ಸರ್ಕಾರವು ಅನೇಕ ಕ್ರಮಗಳನ್ನು ಅನುಸರಿಸಿತು. ಏಕೆಂದರೆ ಇಂಗ್ಲಿಷ್ ಭಾಷೆ ಅಂತಾರಾಷ್ಟ್ರೀಯ ಭಾಷೆಯಾಗಿ, ಅಧಿಕಾರದ ಭಾಷೆಯಾಗಿ ಹಾಗೂ ಆಡಳಿತ ಪ್ರತಿನಿಧಿ ಯಾಗಿ ಗುರುತಿಸಿಕೊಂಡಿತ್ತು.

ನಿಜಾಮರು ಕೂಡ ಉರ್ದು ಭಾಷೆಯನ್ನು ಇಂಗ್ಲಿಶ್ ಭಾಷೆಯಂತೆ ಅಧಿಕಾರದ ಭಾಷೆ ಹಾಗೂ ಆಡಳಿತ ಪ್ರತಿನಿಧಿ ಭಾಷೆಯಾಗಿ ಮಾಡುತ್ತ ಉರ್ದುವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವ ಇರಾದೆ ಹೊಂದಿದ್ದರು. ಇಂಗ್ಲಿಶ್ ಭಾಷೆಯಂತೆ ಉರ್ದುವನ್ನು ಉನ್ನತೀಕರಿಸುವುದಕ್ಕಾಗಿ ಇಂಗ್ಲಿಶ್‌ನಿಂದ ಉರ್ದುವಿಗೆ ಭಾಷಾಂತರಿಸಲು ಒಂದು ವಿಭಾಗವನ್ನು ಆರಂಭಿಸಿ ಭಾಷಾಂತರ ಕಾರ್ಯವನ್ನು ನಿರಂತರ ಕ್ರಿಯಾಶೀಲವಾಗಿ ನಡೆಯುವಂತೆ ಎಚ್ಚರ ವಹಿಸಿದರು. ಹೀಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿದ್ದ ಜ್ಞಾನವಸ್ತುವನ್ನು ಉರ್ದುವಿಗೆ ಭಾಷಾಂತರಿಸಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಪರಿಪಾಠ ಜಾರಿಗೆ ತಂದರು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಭಾಷಾಂತರ ವಿಭಾಗದ ಸಹಯೋಗದಲ್ಲಿ ಉರ್ದು ಪಾರಿಭಾಷಿಕ ಪದಕೋಶಗಳನ್ನು ರಚಿಸಿದರು. ಜೊತೆಗೆ ವಿಜ್ಞಾನ, ತಂತ್ರಜ್ಞಾನ, ವೈದ್ಯಶಾಸ್ತ್ರ, ಕಾನೂನು ಹೀಗೆ ಪ್ರತಿಯೊಂದು ವಿಷಯಕ್ಕೆ ಉರ್ದು ಭಾಷೆಯಲ್ಲಿ ಪದಕೋಶಗಳನ್ನು ರೂಪಿರುವುದನ್ನು ಗಮನಿಸಿದರೆ ಉರ್ದು ಭಾಷೆಯನ್ನು ಅಭಿವೃದ್ಧಿ ಪಡಿಸಿದ ನಿಜಾಮರ ನೀತಿ ಉಳಿದವರಿಗೆ ಮಾದರಿಯಾಗಿದೆ ಎಂದು ಸಿದ್ಧಯ್ಯ ಪುರಾಣಿಕರು ಅಭಿಪ್ರಾಯಪಟ್ಟಿದ್ದಾರೆ. ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ ಜಗತ್‌ಪ್ರಸಿದ್ಧ ವಿಜ್ಞಾನಿ ಡಾ.ಸರ್.ಸಿ.ವಿ.ರಾಮನ್ ಅವರೇ ಉರ್ದುವಿನಲ್ಲಿ ವಿಜ್ಞಾನ ಬೋಧನೆಯನ್ನು ಕಣ್ಣಾರೆ ಕಂಡು ಪ್ರಶಂಸೆ ವ್ಯಕ್ತಪಡಿಸಿದರು.[೩]

ನಿಜಾಮರು ಉರ್ದು ಭಾಷೆಯನ್ನು ಬೆಳೆಸುತ್ತಾ ಆಡಳಿತ ಭಾಷೆಯನ್ನಾಗಿಸಿದ್ದರು. ಇದರಿಂದ ಆಡಳಿತದಲ್ಲಿ ಉದ್ಯೋಗವನ್ನು ಪಡೆಯುವುದಕ್ಕಾಗಿ ಮೇಲ್ವರ್ಗದ ಬ್ರಾಹ್ಮಣರು, ಲಿಂಗಾಯತರು ಉರ್ದು ಭಾಷೆಯಲ್ಲಿ ಶಿಕ್ಷಣ ಪಡೆದು ಸಂಸ್ಥಾನದಲ್ಲಿ ಪ್ರಮುಖ ಹುದ್ದೆಗಳನ್ನು ಪಡೆದುಕೊಂಡರೇ ಹೊರತು ಕೆಳವರ್ಗದವರು ಉರ್ದು ಶಿಕ್ಷಣ ಪಡೆಯದೆ ಇದರಿಂದ ದೂರವೇ ಉಳಿದರು. ಗ್ರಾಮಾಂತರ ಪ್ರದೇಶದ ಮುಸ್ಲಿಮರು ಇದಕ್ಕೆ ಹೊರತಾಗಿರಲಿಲ್ಲ. ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ನಿಜಾಮ್ ಸರ್ಕಾರವು ಶಾಲೆ ಆರಂಭಿಸಿದ್ದರಿಂದ ಶಾಲೆಗಳಲ್ಲಿ ಮುಸ್ಲಿಮರು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಶಿಕ್ಷಣ ಪಡೆದರು. ಉರ್ದು ಶಿಕ್ಷಣ ಪಡೆದ ಮೇಲ್ವರ್ಗದ ಜನರು ಅಧಿಕಾರವನ್ನು ಪಡೆದುಕೊಂಡು ಸಾಮಾನ್ಯ ಜನರ ಮೇಲೆ ಸವಾರಿ ಮಾಡುತ್ತಿದ್ದರು. ನಿಜಾಮರು ಬಹುಸಂಖ್ಯಾತರ ಬೆಂಬಲ ಪಡೆಯುವುದಕ್ಕಾಗಿ ಸ್ಥಳೀಯ ಮಟ್ಟದ ಹುದ್ದೆಗಳನ್ನೆಲ್ಲ ಇವರಿಗೆ ವಹಿಸಿ ಇವರ

ಮುಖಾಂತರ ತನ್ನ ಆಡಳಿತವನ್ನು ಗಟ್ಟಿಗೊಳಿಸಿಕೊಂಡಿದ್ದರು. ಉರ್ದು ಶಿಕ್ಷಣ ಪಡೆಯದೆ ಇದ್ದ ರೈತಾಪಿ ವರ್ಗಗಳ ಮೇಲೆ ಜಮೀನ್ದಾರರು ಹೆಚ್ಚಿನ ತೆರಿಗೆ ವಿಧಿಸಿ ರಸೀದಿಯನ್ನು ಉರ್ದುವಿನಲ್ಲಿ ಬರೆಯುತ್ತಿದ್ದರು. ಭಾಷೆ ಬರದ ಜನರು ಇದರಿಂದ ಮೋಸ ಹೋಗುತ್ತಿದ್ದರು.[೨೪]

ನಿಜಾಮರು ಉರ್ದು ಭಾಷೆಯನ್ನು ರಾಜ್ಯ ಭಾಷೆ ಎಂದು ಘೋಷಿಸಿಕೊಂಡರು. ಪ್ರಾಂತದ ಇತರ ಭಾಷೆಗಳ ಬಗ್ಗೆ ಅವರಿಗೆ ಅಭಿಮಾನವಿತ್ತು. ಪ್ರಾಂತದಲ್ಲಿ ಉರ್ದು ಶಾಲೆಗಳು ಆರಂಭವಾದರೂ, ಶಿಕ್ಷಣದಲ್ಲಿ ಕನ್ನಡ ಒಂದು ಭಾಷಾ ವಿಷಯವಾಗಿ ಕಲಿಯಲು ಅವಕಾಶವಿತ್ತು. ಕನ್ನಡ ಅಧ್ಯಯನ ಮಕ್ಕಳಿಗಾಗಿ ಮೈಸೂರು ಸಂಸ್ಥಾನದಲ್ಲಿ ಸಿದ್ಧಪಡಿಸಿದ ಕನ್ನಡ ಪಠ್ಯಪುಸ್ತಕಗಳನ್ನು ತರಿಸಿಕೊಡುತ್ತಿದ್ದರು. ಹೈದರಾಬಾದ್ ಪ್ರಾಂತದಲ್ಲಿ ಕನ್ನಡ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವ ಅವಕಾಶ ಇಲ್ಲದಂತಾಯಿತು. ಮೈಸೂರು ಸಂಸ್ಥಾನದಲ್ಲಿದ್ದ ವಿಶ್ವವಿದ್ಯಾಲಯಕ್ಕೆ ಕನ್ನಡ ಭಾಷೆಯನ್ನು ಕಲಿಯಲು ಹೋಗುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮಂಜೂರು ಮಾಡುತ್ತಿದ್ದರು. ಇಂತಹ ಶಿಷ್ಯವೇತನ ಮೂಲಕ ಕನ್ನಡ ಭಾಷೆಯನ್ನು ಅಧ್ಯಯನ ಮಾಡಿರುವ ಮೊದಲಿಗರು ಡಿ.ಕೆ.ಭೀಮಸೇನ ರಾವ್. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ನಿಜಾಮ್ ಸರ್ಕಾರವು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ವಿಭಾಗ ಆರಂಭಿಸಿ ಅದಕ್ಕೆ ಮೊದಲು ಉಪನ್ಯಾಸಕರಾಗಿ ಡಿ.ಕೆ.ಭೀಮಸೇನರಾಯರನ್ನು ನೇಮಕ ಮಾಡಿತು. ಹೀಗೆ ನಿಜಾಮರು ಉರ್ದು ಭಾಷೆಯನ್ನು ಇತರ ಭಾಷೆಗಳೊಂದಿಗೆ ಸಂಬಂಧಗಳನ್ನು ಬೆಸೆಯುವ ಭಾಷೆಯಾಗುವಂತೆ ಮಾಡಿದರೆ ವಿನಃ ಬೇರ್ಪಡಿಸುವ ಭಾಷೆಯಾಗಿ ಮಾಡಲಿಲ್ಲ.[೨೫]

೧೦. ಸ್ವಾತಂತ್ರ್ಯ ಚಳುವಳಿ ಕುರಿತು ನಿಜಾಮ್ ಧೋರಣೆ

ಹೈದರಾಬಾದ್ ಸಂಸ್ಥಾನದ ಕೊನೆಯ ಹಾಗೂ ಏಳನೆಯ ನಿಜಾಮನಾದ ಮೀರ್ ಉಸ್ಮಾನ್ ಅಲಿಖಾನ್ ಬಹಾದ್ದೂರ್ ಅವರ ಕಾಲದಲ್ಲಿ ಸ್ವಾತಂತ್ರ್ಯ ಆಂದೋಲನ ಆರಂಭವಾಯಿತು. ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಆಂದೋಲನ ನಡೆಸಲು ಕ್ರಿ.ಶ.೧೯೩೮ರ ಹರಿಪುರ ಕಾಂಗ್ರೆಸ್ ಅಧಿವೇಶದ ನಿರ್ಣಯವೇ ಕಾರಣವಾಗಿದೆ. ಬ್ರಿಟಿಶ್ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಚಳುವಳಿಗಳು ನಡೆಯುತ್ತಿದ್ದವು. ಆದರೆ ರಾಜಪ್ರಭುತ್ವದ ಸಂಸ್ಥಾನಗಳಲ್ಲಿ ಚಳುವಳಿಗೆ ಅವಕಾಶವೇ ಇರಲಿಲ್ಲ. ಇದನ್ನು ಗಮನಿಸಿದ ಸುಭಾಷ್‌ಚಂದ್ರ ಬೋಸ್ ಅವರು ೧೯೩೮ರಲ್ಲಿ ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಬ್ರಿಟಿಶ್ ಭಾರತದಂತೆ ಸಂಸ್ಥಾನಗಳಲ್ಲಿಯೂ ಕೂಡ ಸ್ವಾತಂತ್ರ್ಯಕ್ಕಾಗಿ ಚಳುವಳಿಗಳನ್ನು ನಡೆಸಬೇಕೆಂದು ನಿರ್ಣಯ ತೆಗೆದುಕೊಂಡರು. ಈ ಹಿನ್ನೆಲೆಯಲ್ಲಿ ಹೈದರಾಬಾದ್ ಸಂಸ್ಥಾನದಲ್ಲಿಯೂ ರಾಜ್ಯ ಕಾಂಗ್ರೆಸ್ ಸ್ಥಾಪನೆಯೊಂದಿಗೆ ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟಗಳು ಆರಂಭವಾದವು.

ನಿಜಾಮರ ಜಾತೀಯತೆ ಹಾಗೂ ದಬ್ಬಾಳಿಕೆಯ ಸರ್ವಾಧಿಕಾರ ಆಡಳಿತದ ವಿರುದ್ಧ ಹೈದರಾಬಾದ್ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತು. ಭಾರತದ ಎಲ್ಲ ರಾಜ್ಯಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮ ಪರಕೀಯರಾದ ಬ್ರಿಟಿಶರ ವಿರುದ್ಧವಾಗಿದ್ದರೆ, ಹೈದರಾಬಾದ್ ಸಂಸ್ಥಾನದಲ್ಲಿ ಅರಸನಾದ ನಿಜಾಮ್ ಮತ್ತು ಬ್ರಿಟಿಶರ ವಿರುದ್ಧವಾಗಿತ್ತು. ಈ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ಎರಡು ಹಂತದಲ್ಲಿ ನಡೆದಿತ್ತು. ಮೊದಲನೆಯ ಹಂತದಲ್ಲಿ ಬ್ರಿಟಿಶರ ವಿರುದ್ಧವಾದರೆ ಎರಡನೆಯ ಹಂತ ನಿಜಾಮ ಆಡಳಿತದ ವಿರುದ್ಧ ನಡೆದಿತ್ತು. ಹೀಗೆ ಭಾರತದಾದ್ಯಂತ ನಡೆದ ಸ್ವಾತಂತ್ರ್ಯ ಹೋರಾಟದ ಫಲವಾಗಿ ೧೯೪೭ ಆಗಸ್ಟ್ ೧೫ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಆದರೆ ಹೈದರಾಬಾದ್ ಸಂಸ್ಥಾನ ಸ್ವಾತಂತ್ರ್ಯವಾಗಲಿಲ್ಲ. ಏಕೆಂದರೆ ಬ್ರಿಟಿಶರು ನಿರ್ಗಮಿಸಿದ ಮೇಲೆ ನಿಜಾಮನು ಸ್ವತಂತ್ರ ಅರಸನಾಗುವ ಕನಸು ಕಂಡನು. ಬ್ರಿಟಿಶರು ಭಾರತವನ್ನು ಬಿಟ್ಟು ಹೋಗುವ ಸಮಯದಲ್ಲಿ ಸಂಸ್ಥಾನಿಕರಿಗೆ ಭಾರತ ಅಥವಾ ಪಾಕಿಸ್ತಾನ ಸೇರುವ ಇಲ್ಲವೇ ಸ್ವತಂತ್ರವಾಗಿ ಉಳಿಯುವ ಅವಕಾಶವನ್ನು ನೀಡಿದರು. ಈ ಅವಕಾಶವನ್ನು ಉಪಯೋಗಿಸಿಕೊಂಡು ನಿಜಾಮನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿಕೊಂಡನು. ಇದರಿಂದ ಎಚ್ಚೆತ್ತುಕೊಂಡ ಭಾರತ ಸರ್ಕಾರವು ಹೈದರಾಬಾದನ್ನು ಭಾರತದ ಒಕ್ಕೂಟದಲ್ಲಿ ವಿಲೀನ ಮಾಡಬೇಕೆಂದು ನಿಜಾಮನಿಗೆ ಪತ್ರ ರವಾನಿಸಿದರು. ಇದನ್ನು ಧಿಕ್ಕರಿಸಿದ ನಿಜಾಮ ಉಸ್ಮಾನ್ ಅಲಿಖಾನ್ ತಾನು ಸ್ವತಂತ್ರವಾಗಿ ಆಡಳಿತ ನಡೆಸುವುದರ ಜೊತೆಗೆ ಒಂದು ರಾಷ್ಟ್ರವನ್ನಾಗಿ ಮಾಡುವುದಾಗಿ ಘೋಷಿಸಿದನು. ಇದರಿಂದಾಗಿ ಹೈದರಾಬಾದ್ ಸಂಸ್ಥಾನದ ಜನರು ಭಾರತ ಒಕ್ಕೂಟಕ್ಕೆ ಸೇರಲು ನಿಜಾಮನ ಆಡಳಿತದ ವಿರುದ್ಧ ಹೋರಾಟಕ್ಕಿಳಿದರು. ಈ ಹೋರಾಟದ ಸ್ವರೂಪ ಈ ಕೆಳಗಿನಂತಿದೆ.[೭]

ಅ. ಒಕ್ಕೂಟ ಸೇರಿ ಚಳುವಳಿ

ಭಾರತವು ಸ್ವಾತಂತ್ರ್ಯವಾದ ನಂತರ ಹೈದರಾಬಾದ್ ಸಂಸ್ಥಾನದ ನಿಜಾಮನು ಭಾರತದಲ್ಲಿ ವಿಲೀನವಾಗದೆ ಸ್ವತಂತ್ರವಾಗಿ ಇರುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಇದರಿಂದ ಹೈದರಾಬಾದ್ ಸಂಸ್ಥಾನದ ಜನತೆ ಭಾರತದ ಒಕ್ಕೂಟವನ್ನು ಸೇರಬೇಕೆಂದು ನಿಜಾಮನ ಮೇಲೆ ಒತ್ತಡ ಹಾಕಲು ಸಂಸ್ಥಾನದ ತುಂಬೆಲ್ಲ ಹೋರಾಟಕ್ಕಿಳಿದರು. ಈ ಬೆಳವಣಿಗೆಯಿಂದ ಎಚ್ಚೆತ್ತುಕೊಂಡ ನಿಜಾಮನು ಹೇಗಾದರೂ ಮಾಡಿ ಚಳುವಳಿಯನ್ನು ನಿಯಂತ್ರಿಸಲು ಪ್ರಯತ್ನಿಸಿದನು. ಸಂಸ್ಥಾನದಲ್ಲಿ ಸಭೆ ಸಮಾರಂಭಗಳಿಗೆ ನಿಷೇಧಾಜ್ಞೆ ವಿಧಿಸಿದನು. ಹೋರಾಟದ ಮುಂಚೂಣಿ ನಾಯಕರನ್ನು ಬಂಧಿಸಿದನು. ಇಷ್ಟೆಲ್ಲದರ ನಡುವೆಯೂ ಒಕ್ಕೂಟ ಸೇರಿ ಚಳುವಳಿ ದಿನೇ ದಿನೇ ಬಲಿಷ್ಠವಾಗ ತೊಡಗಿತು.[೭]

ಆ. ಗಡಿಶಿಬಿರಗಳ ಪಾತ್ರ

ಒಕ್ಕೂಟ ಸೇರಿ ಚಳುವಳಿಯ ಮೇಲೆ ನಿಷೇಧ ವಿಧಿಸಿ ಚಳುವಳಿಯ ನಾಯಕತ್ವವನ್ನು ವಹಿಸಿದ ನಾಯಕರನ್ನು ಗಡಿಪಾರು ಮಾಡಿದರು. ಇದರಿಂದ ಚಳುವಳಿಗಾರರು ಸಂಸ್ಥಾನದ ಹೊರಗಡೆ ಗಡಿಶಿಬಿರಗಳನ್ನು ಸ್ಥಾಪಿಸಿಕೊಂಡು ಇವುಗಳ ಮೂಲಕ ಹೋರಾಟ ಆರಂಭಿಸಿದರು. ಅಂತಹ ಗಡಿಶಿಬಿರಗಳಲ್ಲಿ ಗಜೇಂದ್ರಗಡ, ಸಿಂದಗಿ, ತಾಳಿಕೋಟೆ, ದುದನಿ, ಹೊಟಗಿ ಮುಂತಾದವು ಗಳಿದ್ದವು. ಗಡಿಶಿಬಿರಗಳನ್ನು ಮಾಡಿಕೊಂಡು ಅವುಗಳ ಮೂಲಕ ಸಂಸ್ಥಾನದಲ್ಲಿ ಜಾಗೃತಿ ಮೂಡಿಸಿ ಭಾರತ ಒಕ್ಕೂಟಕ್ಕೆ ಸಂಸ್ಥಾನ ಸೇರಬೇಕೆಂದು ಹೋರಾಟ ಮಾಡಿದರು. ನಿಜಾಮನ ಆಡಳಿತದಿಂದ ಮುಕ್ತಿಗಾಗಿ ದಿನವಿಡೀ ಹೋರಾಡಿದರು.[೭೮]

ಇ. ರಜಾಕಾರರ ಧೋರಣೆ

'ಇತ್ತೇಹಾದುಲ್ ಮುಸ್ಲಿಮಿನ್' ಸಂಘಟನೆಯ ಸದಸ್ಯರೇ ರಜಾಕಾರರು. ಇವರು ಮುಸ್ಲಿಂ ಆಡಳಿತ ಉಳಿಸುವುದಕ್ಕಾಗಿ ಹುಟ್ಟಿಕೊಂಡ ಒಂದು ಅರೆ ಪಡೆ. ಆರಂಭದಲ್ಲಿ ನಿಜಾಮನು ಈ ಪಡೆಯನ್ನು ವಿರೋಧಿಸುತ್ತಿದ್ದನು. ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಫಲವಾಗಿ ಹೈದರಾಬಾದ್ ಸಂಸ್ಥಾನದಲ್ಲಿ ಚಳುವಳಿಗಳು ಹುಟ್ಟಿಕೊಂಡವು. ಈ ಚಳುವಳಿಗಳನ್ನು ನಿಜಾಮನು ರಜಾಕಾರ ಪಡೆಯ ಮೂಲಕ ನಿಯಂತ್ರಿಸಲು ಪ್ರಯತ್ನಿಸಿದನು. ಇದರಿಂದ ಕಾಸಿಂ ರಜ್ವಿಯು ನಿಜಾಮನ ಅಸಹಾಯಕತೆಯನ್ನು ಉಪಯೋಗಿಸಿಕೊಂಡು ಪರೋಕ್ಷವಾಗಿ ಸಂಸ್ಥಾನದ ಎಲ್ಲ ಕಾರ್ಯಗಳನ್ನು ತನ್ನ ಮೂಲಕವೇ ನಡೆಯುವಂತೆ ನೋಡಿಕೊಂಡನು. ನಿಜಾಮ ಉಸ್ಮಾನ್ ಅಲಿಖಾನನು ಸೂಕ್ಷ್ಮವಾದ ಸಂದರ್ಭವನ್ನು ಗಮನಿಸಿ ಹೇಗಾದರೂ ಮಾಡಿ ತನ್ನ ಪ್ರಭುತ್ವವನ್ನು ಉಳಿಸಿಕೊಳ್ಳಬೇಕೆಂಬ ಹಠಕ್ಕೆ ಬಿದ್ದಿದ್ದರಿಂದ ರಜಾಕಾರರ ಕೈಗೊಂಬೆಯಾದನು. ಕಾಸಿಂ ರಜ್ವಿಯ ಆಜ್ಞೆಯಂತೆ ರಜಾಕಾರರು ನಿಜಾಮ ಮನೆತನದ ಉಳಿವಿಗಾಗಿ ಮನಬಂದಂತೆ ಹಾಗೇ ವರ್ತಿಸಿದರು. ಇವರ ದಬ್ಬಾಳಿಕೆಯಿಂದ ಬೇಸತ್ತ ಹೈದರಾಬಾದ್ ಸಂಸ್ಥಾನದ ಜನರು ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಅವರ ಮನವಿಗೆ ಸರ್ಕಾರ ಸ್ಪಂದಿಸಿ ರಜಾಕಾರರನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕಾರ್ಯಾಚರಣೆ ಮಾಡಿತು.[೭೯]

ಈ. ಕಾಂಗ್ರೆಸ್ಸಿನ ಪಾತ್ರ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾಂಗ್ರೆಸ್ ಮೊದಲನೆಯ ಸ್ಥಾನದಲ್ಲಿ ನಿಲ್ಲುತ್ತದೆ. ಬ್ರಿಟಿಶ್ ವಸಾಹತುಶಾಹಿ ಆಡಳಿತದ ವಿರುದ್ಧ ಹಗಲಿರುಳು ಹೋರಾಡಿ, ಬ್ರಿಟಿಶ್ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸುವುದರ ಮೂಲಕ ಗಾಂಧೀಜಿ ನೇತೃತ್ವದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಕಾಂಗ್ರೆಸಿನ ಪಾತ್ರ ಅತ್ಯಂತ ಮಹತ್ವದಾಗಿದೆ. ಅದೇ ರೀತಿ ಕಾಂಗ್ರೆಸ್

ಹೈದರಾಬಾದ್ ಸಂಸ್ಥಾನದ ನಿಜಾಮ ಆಡಳಿತದ ವಿರುದ್ಧ ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿತು. ಭಾರತ ಒಕ್ಕೂಟಕ್ಕೆ ಸೇರಲು ಹಿಂದೇಟು ಹಾಕುತ್ತಿದ್ದ ನಿಜಾಮನ ಮೇಲೆ ಒತ್ತಡ ಹೇರುವುದರ ಮೂಲಕ ಒಕ್ಕೂಟ ಸೇರುವಲ್ಲಿ ಇದರ ಪಾತ್ರ ಅತ್ಯಂತ ಹಿರಿದಾಗಿದೆ.[೮೦]

ಉ. ರಾಷ್ಟ್ರನಾಯಕರ ಪ್ರಯತ್ನ

ಭಾರತ ಸ್ವಾತಂತ್ರ್ಯವಾದರೂ ಕೂಡ ನಿಜಾಮ್ ಉಸ್ಮಾನ್ ಅಲಿಖಾನನು ಭಾರತದ ಒಕ್ಕೂಟದಲ್ಲಿ ಸೇರಲು ನಿರಾಕರಿಸಿದನು. ಈ ಬೆಳವಣಿಗೆಯಿಂದ ಎಚ್ಚೆತ್ತುಕೊಂಡ ರಾಷ್ಟ್ರದ ನಾಯಕರುಗಳಾದ ಮಹಾತ್ಮ ಗಾಂಧೀಜಿ, ಪಂಡಿತ ನೆಹರು ಸರದಾರ ವಲ್ಲಭಭಾಯಿ ಪಟೇಲ, ಸಿ.ರಾಜಗೋಪಾಲಾಚಾರಿ ಮುಂತಾದವರು ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಮುಖಾಂತರ ನಿಜಾಮನ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿದರು. ನಿಜಾಮನಿಗೆ ಪತ್ರದ ಮುಖೇನ ಒಕ್ಕೂಟಕ್ಕೆ ಸೇರಿಕೊಳ್ಳಲು ಸಲಹೆ ನೀಡಿದರು. ಈ ಸಲಹೆ ತಿರಸ್ಕರಿಸಿ ನಿಜಾಮನು ಪ್ರತ್ಯೇಕ ದೇಶದ ಕನಸನ್ನು ಕಾಣುತ್ತಿದ್ದನು. ಇದರಿಂದ ಬೇಸರಗೊಂಡ ನಾಯಕರು ಕೊನೆಗೆ ಸೈನಿಕ ಕಾರ್ಯಾಚರಣೆ ಮುಖಾಂತರ ಸಂಸ್ಥಾನವನ್ನು ವಶಪಡಿಸಿಕೊಳ್ಳಲು ಒಪ್ಪಿಗೆ ನೀಡಿದರು.[೮೧]

ಊ. ಹೈದರಾಬಾದ್ ಸಂಸ್ಥಾನ ಭಾರತಕ್ಕೆ ಸೇರ್ಪಡೆ

ಹೈದರಾಬಾದ್ ನಿಜಾಮನು ಭಾರತ ಸರ್ಕಾರದ ವಿರುದ್ಧವಾಗಿ ರಜಾಕಾರರ ಮೂಲಕ ಸ್ವತಂತ್ರವಾಗುವುದಕ್ಕೆ ಹಾತೊರೆಯುತ್ತಿದ್ದನು. ಇದಕ್ಕೆ ಬೆಂಬಲವಾಗಿದ್ದ ಕಾಸಿಂ ರಜ್ವಿಯು ಸಂಸ್ಥಾನದಲ್ಲಿ ಅಮಾನವೀಯ ರೀತಿಯಲ್ಲಿ ವರ್ತಿಸುತ್ತಿದ್ದನು. ಹೀಗೆ ಇಡೀ ಪ್ರಾಂತವೇ ಅರಾಜಕತೆ, ಕೊಲೆ, ಸುಲಿಗೆಯಲ್ಲಿ ತೊಡಗಿಸಿಕೊಂಡಿರುವುದನ್ನು ಕಂಡು ಭಾರತ ಸರ್ಕಾರವು ನಿಜಾಮ ಸರ್ಕಾರದ ವಿರುದ್ಧ ಪೊಲೀಸ್ ಕಾರ್ಯಾಚರಣೆ ನಡೆಸಲು ತೀರ್ಮಾನಿಸಿತು. ಉಪಪ್ರಧಾನಿಯಾದ ಸರ್ದಾರ್ ವಲ್ಲಭಭಾಯಿ ಪಟೇಲರು ಜನರಲ್ ಚೌಧರಿಯವರ ನೇತೃತ್ವದಲ್ಲಿ ಭಾರತೀಯ ಸೈನ್ಯವನ್ನು ಸೆಪ್ಟೆಂಬರ್ ೧೩, ೧೯೪೮ರಂದು ರವಾನಿಸಿದರು. ಸೈನ್ಯವು ಹೈದರಾಬಾದ್ ಸಂಸ್ಥಾನವನ್ನು ಪ್ರವೇಶಿಸಿ ರಜಾಕಾರರು ಮತ್ತು ನಿಜಾಮನ ಪೊಲೀಸ್ ದೌರ್ಜನ್ಯವನ್ನು ಅಡಗಿಸಿತು. ನಿಜಾಮ ೧೯೪೮ ಸೆಪ್ಟೆಂಬರ್ ೧೭ರಂದು ಶರಣಾಗತಿಯಾಗಿ ಭಾರತದಲ್ಲಿ ವಿಲೀನವಾಗುವುದಕ್ಕೆ ಒಪ್ಪಿಕೊಂಡನು.[೮೨]

ನಿಜಾಮರ ಆಳ್ವಿಯ ಸ್ವರೂಪವನ್ನು ನೋಡಿದಾಗ ಹೈದರಾಬಾದ್ ಸಂಸ್ಥಾನವು ಆರಂಭದಲ್ಲಿ ಮೊಗಲ್‌ರ ಆಡಳಿತದ ಕೆಲವು ಪ್ರಮುಖ ಅಂಶಗಳನ್ನು ಅಳವಡಿಸಿಕೊಂಡಿತ್ತಲ್ಲದೆ, ಭಾರತದಲ್ಲಿ

ಆಳಿಹೋದ ಮುಸ್ಲಿಂ ಅರಸರ ಆಡಳಿತದ ಕೆಲವು ಪ್ರಮುಖ ನೀತಿಗಳನ್ನು ಹಾಗೆಯೇ ಮುಂದುವರಿಸಿತು. ನಿಜಾಮರು ತಮ್ಮ ಆಡಳಿತವನ್ನು ಸುಗಮವಾಗಿ ನಡೆಸಲು ಸ್ಥಳೀಯ ಪ್ರಬಲವಾದ ಸಮುದಾಯಗಳ ಸಹಕಾರದಿಂದ ಸ್ಥಳೀಯ ಆಡಳಿತದಲ್ಲಿ ಅನೇಕ ಬದಲಾವಣೆಯನ್ನು ತರಲು ಪ್ರಯತ್ನಿಸಿದರು. ಅವರಿಗೆ ಕೆಲವು ಪ್ರದೇಶಗಳನ್ನು ಜಹಗೀರ್ ನೀಡಿ ಅವರ ಒಲವನ್ನು ಗಳಿಸಿದ್ದರು. ಈ ಜಹಗೀರು ಪಡೆದುಕೊಂಡ ವರ್ಗವು ಗ್ರಾಮೀಣ ಮಟ್ಟದಲ್ಲಿ ರೈತರಿಗೆ ಶೋಷಣೆಯನ್ನು ನೀಡುತ್ತಾ ಅವರ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಿತು. ನಿಜಾಮರು ಈ ಜಾಗೀರದಾರರ ಮತ್ತು ರಜಾಕಾರರ ಮೂಲಕ ತಮ್ಮ ಆಡಳಿತದ ವಿರುದ್ಧ ದಂಗೆ ಆಗದ ಹಾಗೆ ನಿಯಂತ್ರಿಸುವಲ್ಲಿ ಯಶಸ್ವಿಯಾದರು. ತಮ್ಮ ಆಳ್ವಿಕೆಯನ್ನು ಉಳಿಸಿಕೊಳ್ಳಲು ಮಿತ್ರರು ಶತ್ರುಗಳೆನ್ನದೆ ತಮಗೆ ಅನುಕೂಲವಾಗುವ ರೀತಿಯಲ್ಲಿ ಒಪ್ಪಂದ ಮಾಡಿಕೊಳ್ಳುವ ಮುಖಾಂತರ ಅಧಿಕಾರವನ್ನು ಗಟ್ಟಿಗೊಳಿಸಿಕೊಂಡಿರುವುದು ಕಂಡುಬರುತ್ತದೆ. ಸ್ಥಳೀಯ ಅರಸರನ್ನು ಮಟ್ಟ ಹಾಕಲು ಯುರೋಪಿಯನ್ನರ ಸಹಾಯ ಪಡೆದುಕೊಂಡು ಇತರರ ಮೂಲಕ ಬ್ರಿಟಿಶರ ನಿಯಂತ್ರಣಕ್ಕೆ ತಾವೇ ಒಳಗಾದರು. ಹೀಗೆ ನಿಜಾಮರು ಕೊನೆಯವರೆಗೂ ಸಂಸ್ಥಾನದ ಉಳಿವಿಗಾಗಿ ಹಾಗೂ ಪ್ರತ್ಯೇಕ ರಾಷ್ಟ್ರಕ್ಕಾಗಿ ಪ್ರಯತ್ನಿಸುತ್ತಲೇ ಇದ್ದರು. ಕೊನೆಗೆ ಒತ್ತಡ ಬಂದಾಗ ಭಾರತದಲ್ಲಿ ವಿಲೀನವಾಗುವುದಕ್ಕೆ ಒಪ್ಪಿಕೊಂಡಿರುವುದು ಕಂಡುಬರುತ್ತದೆ.

ಕೊನೆಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ ಕೆ., **ಪ್ರಭುತ್ವ ಮತ್ತು ಜನತೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು.೩-೮.

೨. ಮಹಾಬಲೇಶ್ವರಪ್ಪ ಬಿ.ಸಿ., **ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು**, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೮, ಪು.೧೨-೧೩.

೩. ನಯೀಮ್ ಎಂ.ಎ., **ಮೊಗಲ್ ಅಡ್ಮಿನಿಸ್ಟ್ರೇಷನ್ ಆಫ್ ಡೆಕ್ಕನ್ ಅಂಡರ್ ನಿಜಾಮುಲ್ಮ್ ಮುಲ್ಕ್ ಆಸಫ್ ಜಹಾ**, ಜೈಕೋ ಪಬ್ಲಿಕೇಷನ್, ಬಾಂಬೆ, ೧೯೮೪, ಪು.೫-೬.

೪. ಪಾಟೀಲ್ ಎಂ.ಬಿ.(ಸಂ), **ಗುಲಬರ್ಗಾ ಜಿಲ್ಲಾ ದರ್ಶನ**, ಗೀತಾಂಜಲಿ ಪ್ರಿಂಟರ್ಸ್ ಬೆಂಗಳೂರು, ೧೯೯೭, ಪು.೨೭.

೫. ಅಮರೇಶ ಆಲ್ಕೋಡ, **ದೇವದುರ್ಗ: ಚಾರಿತ್ರಿಕ ಅಧ್ಯಯನ**, ಚಿಂತನ ಪ್ರಕಾಶನ, ಬೆಂಗಳೂರು, ೨೦೧೨, ಪು.೧೨-೨.

೬. ವೈಕುಂಠಂ, **ಸ್ಟೇಟ್ ಎಕಾನಮಿ ಆ್ಯಂಡ್ ಸೋಶಿಯಲ್ ಟ್ರಾನ್ಸ್‌ಫರ್ಮೇಶನ್ ಹೈದರಾಬಾದ್ ಸ್ಟೇಟ್**, ಮನೋಹರ್, ದೆಹಲಿ, ೨೦೦೨, ಪು.೮-೯.

೭. ಪೆಂಡಲ್ಬರಿ ಎಂ., **ಹಿಸ್ಟರಿ ಆಫ್ ಡೆಕ್ಕನ್, ವಾಲ್ಯೂಮ್ II**, ನ್ಯೂ ಡೆಲ್ಲಿ, ೧೯೨೪, ಪು.೫೭–೫೮.

೮. ಶೀಲಾರಾಜ, **ಮೆಡಿವಿಲಿಜಂ ಟು ಮಾಡರ್ನಿನಿಜಂ**, ಪಾಪುಲರ್, ಬಾಂಬೆ, ೧೯೮೭, ಪು.೪–೫.

೯. ಗೋಪಾಲರಾವ್ ಹೇಜೀಬ್, **ಹೈದರಾಬಾದ್ ಮುಕ್ತಿ ಸಂಘರ್ಷ**, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೨೦೦೧, ಪು.೧೧.

೧೦. ವೈಕುಂಠಂ, **ಪೂರ್ವೋಕ್ತ**, ಪು.೨೧–೨೨.

೧೧. ಪೆಂಡಲ್ಬರಿ ಎಂ., **ಪೂರ್ವೋಕ್ತ**, ಪು.೬೧–೬೨.

೧೨. ಬಾಲಚಂದ್ರ ಜಯಶೆಟ್ಟಿ, **ಹೈದರಾಬಾದ್ ಕರ್ನಾಟಕದ ವಿಮೋಚನ ಚಳುವಳಿಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬, ಪು.೧೦.

೧೩. ಅದೇ, ಪು.೧೧–೧೨.

೧೪. ಪಾಟೀಲ್ ಎಂ.ಬಿ, **ಪೂರ್ವೋಕ್ತ**, ಪು.೭೩.

೧೫. ಶೀಲಾರಾಜ, **ಪೂರ್ವೋಕ್ತ**, ಪು.೪೭.

೧೬. ಬಸವರಾಜ ಪೊಲೀಸ್ ಪಾಟೀಲ್(ಸಂ), **ಬಿಡುಗಡೆ**, ಅಮರ ಪ್ರಕಾಶನ, ಗುಲಬರ್ಗಾ, ೨೦೦೨, ಪು.೨೦

೧೭. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.೨೦.

೧೮. ವೈಕುಂಠಂ, **ಪೂರ್ವೋಕ್ತ**, ಪು.೨೯.

೧೯. ಮಹಾಬಲೇಶ್ವರಪ್ಪ ಬಿ.ಸಿ., **ಪೂರ್ವೋಕ್ತ**, ಪು.೧೩.

೨೦. ಶೀಲಾರಾಜ, **ಪೂರ್ವೋಕ್ತ**, ಪು.೧೦–೧೧.

೨೧. ಅದೇ, ಪು.೧೧–೧೨.

೨೨. ತಿಪ್ಪಣ್ಣ, **ಹೈದರಾಬಾದ್ ಸಂಸ್ಥಾನದಲ್ಲಿ ದಿವಾನರಾಗಿ ಸರ್ ಮಿರ್ಜಾ ಇಸ್ಮಾಯಿಲ್**, ಅಪ್ರಕಟಿತ ಎಂ.ಫಿಲ್ ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪು.೨೩.

೨೩. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.೭೪.

೨೪. ಬಾಲಚಂದ್ರ ಜಯಶೆಟ್ಟಿ, **ಪೂರ್ವೋಕ್ತ**, ಪು.೯–೧೦.

೨೫. ತಿಪ್ಪಣ್ಣ, **ಪೂರ್ವೋಕ್ತ**, ಪು.೨೪-೨೫.

೨೬. ಗೋಪಾಲರಾವ್ ಹೇಜೀಬ್, **ಪೂರ್ವೋಕ್ತ**, ಪು.೨೬.

೨೭. ಭಾವ ವಿ.ಕೆ., **ದಿ ಲಾಸ್ಟ್ ನಿಜಾಮ್**, ರೆಡೆನ್ಸ್, ನ್ಯೂ ದೆಹಲಿ, ೧೯೮೦, ಪು.೬೪-೬೫.

೨೮. ತಿಪ್ಪಣ್ಣ, **ಪೂರ್ವೋಕ್ತ**, ಪು.೨೭.

೨೯. ಬಸವರಾಜ ಪೊಲೀಸ್ ಪಾಟೀಲ್, **ಪೂರ್ವೋಕ್ತ**, ಪು.೨೫-೨೬.

೩೦. ಡೇಂಗ್ಲೆ ಬಿ.ಎಸ್., **ಹೈದರಾಬಾದ್ ಫ್ರೀಡಮ್ ಸ್ಟ್ರಲ್ ದಿ ರೂಲ್ ಆಫ್ ಮರಾಠವಾಡ**, ಕಲ್ಪನ ಪ್ರಕಾಶನ, ೧೯೯೮, ಪು.೨೬೧-೨೬೪.

೩೧. ಭಾವ ವಿ.ಕೆ., **ಪೂರ್ವೋಕ್ತ**, ಪು.೨೮೪-೨೮೫.

೩೨. ಭಾವ ವಿ.ಕೆ., **ಹೈದರಾಬಾದ್ ಅಂಡರ್ ಸಾಲಾರಜಂಗ್ I**, ಚಂದಾ ಕಂಪನಿ ಲೀ., ನ್ಯೂ ದೆಹಲಿ, ೧೯೯೬, ಪು.೬-೭.

೩೩. ಬಿಪನ್ ಚಂದ್ರ(ಮೂಲ), ಗೋಪಾಲರಾವ್ ಎಚ್.ಎಸ್.(ಅನು), **ಆಧುನಿಕ ಭಾರತದ ಇತಿಹಾಸ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೪, ಪು.೩೩.

೩೪. ಅಮರೇಶ ನುಗಡೋಣಿ, **ಹೈದರಾಬಾದು ಕರ್ನಾಟಕ ಹಾಡು-ಪಾಡು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩, ಪು.೩೫-೩೬.

೩೫. ಮಜುಮ್‌ದಾರ್ ಆರ್.ಸಿ., ರಾಯ್‌ಚೌಧರಿ ಎಚ್.ಸಿ., ಕಾಲೀಕಿಂಕರದತ್ತ(ಮೂಲ), ಶಾರದಾ ಪ್ರಸಾದ್ ಎನ್.ಎಸ್(ಅನು), **ಭಾರತದ ಪ್ರೌಢ ಇತಿಹಾಸ**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೨, ಪು.೫೭೧.

೩೬. ಬಿಪನ್ ಚಂದ್ರ(ಮೂಲ), ಗೋಪಾಲರಾವ್ ಎಚ್.ಎಸ್.(ಅನು), **ಪೂರ್ವೋಕ್ತ**, ಪು.೭೫-೭೬.

೩೭. ಅದೇ, ಪು.೭೬-೭೭.

೩೮. ಶಂಕರನಾರಾಯಣ ಎನ್.ಪಿ., **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು**, ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೧೩, ಪು.೩೨.

೩೯. ಅಮರೇಶ ನುಗಡೋಣಿ, **ಪೂರ್ವೋಕ್ತ**, ಪು.೩೬.

೪೦. ಮಜುಮ್‌ದಾರ್ ಆರ್.ಸಿ., ರಾಯಚೌಧರಿ ಎಚ್.ಸಿ., ಕಾಲೀಕಿಂಕರದತ್ತ(ಮೂಲ), ಶಾರದಾ ಪ್ರಸಾದ್ ಎನ್.ಎಸ್.(ಅನು), **ಪೂರ್ವೋಕ್ತ**, ಪು.೬೦೧-೬೦೨.

೪೧. ಬಿಪನ್ ಚಂದ್ರ(ಮೂಲ), ಗೋಪಾಲರಾವ್ ಎಚ್.ಎಸ್.(ಅನು), **ಪೂರ್ವೋಕ್ತ**, ಪು.೮೭.

೪೨. ಮಜುಮ್‌ದಾರ್ ಆರ್.ಸಿ., ರಾಯಚೌಧರಿ ಎಚ್.ಸಿ., ಕಾಲೀಕಿಂಕರದತ್ತ(ಮೂಲ), ಶಾರದಾ ಪ್ರಸಾದ್ ಎನ್.ಎಸ್.(ಅನು), **ಪೂರ್ವೋಕ್ತ**, ಪು.೬೦೮.

೪೩. ಅಮರೇಶ ನುಗಡೋಣಿ, **ಪೂರ್ವೋಕ್ತ**, ಪು.೩೬

೪೪. ಬಿಪನ್ ಚಂದ್ರ(ಮೂಲ), ಗೋಪಾಲರಾವ್ ಎಚ್.ಎಸ್.(ಅನು), **ಪೂರ್ವೋಕ್ತ**, ಪು.೮೯.

೪೫. ಮೋಹನ್‌ಕೃಷ್ಣ ರೈ ಕೆ., **ವಸಾಹತುಶಾಹಿ ಮತ್ತು ನಗರೀಕರಣ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪು.೧೪.

೪೬. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.೮೯.

೪೭. ಅದೇ, ಪು.೮೧

೪೮. ಮಹಾಬಲೇಶ್ವರಪ್ಪ ಬಿ.ಸಿ., **ಪೂರ್ವೋಕ್ತ**, ಪು.೧೧

೪೯. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.೮೨.

೫೦. ಮುನ್ಷಿ ಕೆ.ಎಂ.(ಮೂಲ), ರಂಗರಾವ್ ಎ.ಆರ್., **ಒಂದು ಯುಗದ ಅಂತ್ಯ**, ಭಾರತೀಯ ವಿದ್ಯಾಭವನ, ಮೈಸೂರು, ೨೦೦೭, ಪು.೧೭.

೫೧. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.೭೪.

೫೨. ಅಮರೇಶ ನುಗಡೋಣಿ, **ಪೂರ್ವೋಕ್ತ**, ಪು.೫೬–೫೭.

೫೩. ಕೃಷ್ಣಮೂರ್ತಿ ಪಿ.ವಿ., **ಆನೆಗೊಂದಿ ಪ್ರಭುಗಳ ಇತಿಹಾಸ: ಶಾಸನಗಳು ಮತ್ತು ಇತರ ಆಕರಗಳ ಹಿನ್ನೆಲೆಯಲ್ಲಿ ಒಂದು ಪರಿಶೀಲನೆ**, ಸೂರ್ಯ ಮತ್ತು ದೇರ್ತ ಅಭಿನಂದನ ಗ್ರಂಥ, ೨೦೦೨, ಪು.೨೫೪.

೫೪. ಅಮರೇಶ ಯತಗಲ್, **ಇತಿಹಾಸ ಇಂಚರ**, ಅಧಿತಿ ಪ್ರಕಾಶನ, ಲಿಂಗಸೂಗೂರು, ೨೦೦೫, ಪು.೫೬–೫೭.

೫೫. ಅಮರೇಶ ಯತಗಲ್, **ಇತಿಹಾಸ ಮಂಥನ**, ಅಧಿತಿ ಪ್ರಕಾಶನ, ಲಿಂಗಸೂಗೂರು, ೨೦೦೭, ಪು.೨೭.

೫೬. ಷೇಕ್ ಅಲಿ ಬಿ.(ಪ್ರ.ಸ), ಸೆಬಾಸ್ಟಿಯನ್ ಜೋಸೆಫ್(ಸಂ.ಸ), **ಕರ್ನಾಟಕ ಚರಿತ್ರೆ, ಸಂಪುಟ ೬**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.೧೭೦.

೫೭. ಕಪಟರಾಳ ಕೃಷ್ಣರಾಯರು(ಮೂಲ), ಧ್ರುವನಾರಾಯಣ(ಮಾಲೆ ಸಂಪಾದಕರು), **ಸುರಪುರದ ಸಂಸ್ಥಾನ**, ಕಪಟರಾಳ ಕೃಷ್ಣರಾಯ ಸ್ಮಾರಕ ಸಮಿತಿ, ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು, ೨೦೦೫, ಪು.೧೨೦.

೫೮. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು.೮೧-೮೨.

೫೯. ಅಮರೇಶ್ ಯತಗಲ್, **ಪೂರ್ವೋಕ್ತ**, ಪು.೯೩-೯೪.

೬೦. ಹರ್ತಿಕೋಟೆ ವಿರೇಂದ್ರ ಸಿಂಹ, ತೇಜಸ್ವಿ ಕಟ್ಟಿಮನಿ, **ಘಟ್ಟ ಹೊಸಹಳ್ಳಿ ಘಟ್ಟಿಗ**, ೨೦೦೨, ಪು.೨೪.

೬೧. ಕಪಟರಾಳ ಕೃಷ್ಣರಾಯರು, **ಪೂರ್ವೋಕ್ತ**, ಪು.೭೪.

೬೨. ಅಮರೇಶ ಯತಗಲ್, **ಪೂರ್ವೋಕ್ತ**, ಪು.೨೩-೨೪.

೬೩. ಪೆಂಡಬ್ಬರಿ ಎಂ., **ಪೂರ್ವೋಕ್ತ**, ಪು.೮೦-೮೧.

೬೪. ಮುದ್ದಾಚಾರಿ ಬಿ., **ಮರಾಠರ ಆಕ್ರಮಣ ಮೈಸೂರಿನ ಪ್ರತಿಭಟನೆ**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೧, ಪು.೬-೯

೬೫. ಅದೇ, ಪು.೮-೯.

೬೬. ಬಿಪನ್ ಚಂದ್ರ(ಮೂಲ), ಗೋಪಾಲರಾವ್ ಎಚ್.ಎಸ್.(ಅನು), **ಪೂರ್ವೋಕ್ತ**, ಪು.೭೫.

೬೭. ಶಂಕರನಾರಾಯಣ ಎನ್.ಪಿ., **ಪೂರ್ವೋಕ್ತ**, ಪು.೩೩.

೬೮. ಮೋಹನ್‌ಕೃಷ್ಣ ರೈ ಕೆ., **ಕೆನರಾದ ವಿಭಜನೆ: ಹತ್ತಿ ರಾಜಕೀಯದ ವಿಶ್ಲೇಷಣೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು.೧.

೬೯. ಅದೇ, ಪು.೩-೪.

೭೦. ಪೆಂಡಬ್ಬರಿ ಎಂ., **ಪೂರ್ವೋಕ್ತ**, ಪು.೨೯-೩೦.

೭೧. ಸರೋಜಿನಿ ರೆಗಾನಿ, **ನಿಜಾಮ್-ಬ್ರಿಟಿಶ್ ರಿಲೇಷನ್ಸ್**, ಬುಕ್‌ಲೋವರ್ಸ್, ಹೈದರಾಬಾದ್, ೧೯೬೩, ಪು.೧೨೧-೧೨೨.

೭೨. ಅದೇ, ಪು.೧೮೯-೧೯೦.

೭೩. ಅಮರೇಶ ನುಗಡೋಣಿ, **ಪೂರ್ವೋಕ್ತ**, ಪು.೭೨-೭೩.

೭೪. ಅದೇ, ಪು.೬೯.

೭೫. ರಾಘವೇಂದ್ರರಾವ್ ಕೆ., **ಪ್ರೊ.ಡಿ.ಕೆ.ಭೀಮಸೇನರಾಯರು ಬದುಕು-ಬರಹ,** ಕನ್ನಡ ಸಾಹಿತ್ಯ ಪರಿಷತ್ತು, ೨೦೦೧, ಪು.೪-೫.

೭೬. ಅಮರೇಶ ಅಲ್ಕೋಡ, **ಪೂರ್ವೋಕ್ತ,** ಪು.೧೨೯

೭೭. ಸ್ವಾಮಿ ರಮಾನಂದ ತೀರ್ಥ(ಮೂಲ), ಸೂರ್ಯನಾಥ ಕಾಮತ್(ಅನು), **ಹೋರಾಟದ ನೆನಪುಗಳು,** ಗೀತಾ ಬುಕ್ ಹೌಸ್, ಮೈಸೂರು, ೧೯೭೭, ಪು.೧೮೮-೧೮೯.

೭೮. ಮಹಾಬಲೇಶ್ವರಪ್ಪ ಬಿ.ಸಿ., **ಪೂರ್ವೋಕ್ತ,** ಪು.೯೨-೯೩.

೭೯. ಅದೇ, ಪು.೬೭.

೮೦. ಪಾಟೀಲ್ ಎಂ.ಬಿ., **ಪೂರ್ವೋಕ್ತ,** ಪು.೮೭-೮೮.

೮೧. ತಿಪ್ಪಣ್ಣ, **ಪೂರ್ವೋಕ್ತ,** ಪು.೬೩-೬೪.

೮೨. ಮುನ್ಷಿ ಕೆ.ಎಂ.(ಮೂಲ), ರಂಗರಾವ್ ಎ.ಆರ್.(ಅನು), **ಪೂರ್ವೋಕ್ತ,** ಪು.೩೬೭-೩೬೮.

ಅಧ್ಯಾಯ ಐದು

ಆಡಳಿತ

೫.೧. ಆಡಳಿತ ಸ್ವರೂಪ

೫.೨. ಆಡಳಿತ ಘಟಕಗಳು

೫.೩. ಅಧಿಕಾರಿ ವರ್ಗ

೫.೪. ನ್ಯಾಯಾಂಗ ಆಡಳಿತ

೫.೫. ಸೈನ್ಯಾಡಳಿತ

೫.೬. ಕಂದಾಯ ಆಡಳಿತ

ಅಧ್ಯಾಯ ಐದು

ಆಡಳಿತ

ಪೀಠಿಕೆ

ದಕ್ಷಿಣ ಭಾರತದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದ ಹೈದರಾಬಾದ್ ನಿಜಾಮರಿಗೆ ಇಲ್ಲಿಯ ರಾಜಕೀಯ ಸಮಸ್ಯೆಗಳ ಬಗ್ಗೆ ಹೆಚ್ಚು ಜ್ಞಾನವಿರಲಿಲ್ಲ. ದಕ್ಷಿಣ ಭಾರತಕ್ಕೆ ಬಂದ ನಂತರವೂ ಅವರು ತಮ್ಮನ್ನೆದುರಿಸಿದ ಮರಾಠರು ಮತ್ತು ಸ್ಥಳೀಯ ಸಣ್ಣಪುಟ್ಟ ಪಾಳೆಪಟ್ಟುಗಳ ಮೇಲೆ ಯುದ್ಧ ಮತ್ತು ಒಪ್ಪಂದ ಮಾಡಿಕೊಳ್ಳುವುದರಲ್ಲಿಯೇ ಹೆಚ್ಚು ಕಾಲವನ್ನು ಕಳೆಯಬೇಕಾಯಿತು. ಇದರಿಂದ ಆರಂಭದಲ್ಲಿ ತಮ್ಮ ಧ್ಯೇಯಗಳಿಗನುಸಾರವಾಗಿ ಸರ್ಕಾರವನ್ನು ರೂಪಿಸಲಾಗಲಿಲ್ಲ. ಇಲ್ಲಿ ಪ್ರಚಲಿತವಾಗಿದ್ದ ಆಡಳಿತ ಪದ್ಧತಿಯನ್ನು ಒಪ್ಪಿಕೊಂಡು ಹಿಂದೆ ಇದ್ದ ಅಧಿಕಾರಿಗಳನ್ನೇ ಆಡಳಿತದ ವಿವಿಧ ಘಟ್ಟಗಳಲ್ಲಿ ಮುಂದುವರೆಯುವಂತೆ ಮಾಡಿದರು. ಸಂಸ್ಥಾನದ ಕೇಂದ್ರ ಮತ್ತು ಸುಬಾ ಮಟ್ಟದಲ್ಲಿ ಮಾತ್ರ ನೇರವಾಗಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಸ್ಥಳೀಯ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲಿಲ್ಲವಾದರೂ ಸ್ಥಳೀಯ ಅಧಿಕಾರಿಗಳ ಮೂಲಕ ನಿಯಂತ್ರಿಸುತ್ತಿದ್ದರು. ನಿಜಾಮರು ತಮ್ಮ ಆಡಳಿತವನ್ನು ಸ್ಥಾಪಿಸುವುದಕ್ಕಿಂತ ಮುಂಚೆ ಈ ಪ್ರದೇಶವನ್ನು ಆಳ್ವಿಕೆ ಮಾಡಿದ ಬಹಮನಿ, ಆದಿಲ್‌ಶಾಹಿ ಮತ್ತು ಮೊಗಲರ ಆಡಳಿತದ ಅಂಶಗಳನ್ನು ತೆಗೆದುಕೊಂಡು ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡರು. ಆಡಳಿತದಲ್ಲಿ ತಮ್ಮದೇಯಾದ ಹೊಸ ನಿಯಮಗಳನ್ನು ಜಾರಿಗೆ ತಂದರು.

ನಿಜಾಮರ ಆಡಳಿತದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಕೆಲವು ಚರಿತ್ರೆಕಾರರು ಅದನ್ನು ಧರ್ಮ ಪ್ರಧಾನ ಪ್ರಭುತ್ವ ಎಂದು ಕರೆದಿದ್ದಾರೆ. ಮತ್ತೆ ಕೆಲವರು ಅದನ್ನು ದಬ್ಬಾಳಿಕೆ ಅಥವಾ ಶಕ್ತಿ ಪ್ರಧಾನ ಪ್ರಭುತ್ವವೆಂದೂ ಆ ಸಂಸ್ಥಾನ ಸೈನಿಕ ಶಕ್ತಿಯ ಆಧಾರದ ಮೇಲೆ ನಿಂತತ್ತೇ ಹೊರತು ಜನಾನುರಾಗವನ್ನು ಪಡೆದಿರಲಿಲ್ಲವೆಂತಲೂ ಅಭಿಪ್ರಾಯಪಟ್ಟಿದ್ದಾರೆ. ಆದರೆ ಮೂಲ ಆಕರಗಳನ್ನು ವಸ್ತುನಿಷ್ಠವಾಗಿ ಅಭ್ಯಸಿಸಿ ವಿಶ್ಲೇಷಿಸಿದಾಗ ನಿಜಾಮರು ಸ್ಥಾಪಿಸಿದ ಸಂಸ್ಥಾನವು ಶಕ್ತಿ ಪ್ರಧಾನವೂ ಅಲ್ಲ, ಧರ್ಮ ಪ್ರಧಾನವೂ ಅಲ್ಲ ಎಂಬುದು ಮನವರಿಕೆಯಾಗಿ ಅದು ಮಧ್ಯಕಾಲೀನ ಮೊಗಲ್

ಮತ್ತು ವಸಾಹತುಶಾಹಿ ಬ್ರಿಟೀಶ್ ಮಾದರಿ ಪದ್ಧತಿಯನ್ನು ಹೋಲುವಂತಹ ಆಡಳಿತ ಪದ್ಧತಿಯ ಸಂಸ್ಥಾನವೆಂಬುದು ಖಚಿತವಾಗುತ್ತದೆ.

ಹೈದರಾಬಾದ್ ನಿಜಾಮರ ಸಂಸ್ಥಾನ ಹೇಗೆ ಧರ್ಮ ಪ್ರಧಾನ ರಾಜ್ಯವಾಗಿರಲಿಲ್ಲ ಎಂಬುದನ್ನು ಪರಿಶೀಲಿಸಬಹುದು. ಧರ್ಮ ಪ್ರಧಾನ ರಾಜ್ಯ ಕೆಲವು ವಿಶಿಷ್ಟ ಗುಣಗಳಿಂದ ಕೂಡಿರಬೇಕು. ರಾಜ್ಯದ ಧ್ಯೇಯ–ಧೋರಣೆಗಳೆಲ್ಲ ಧಾರ್ಮಿಕ ಧ್ಯೇಯಗಳ ಸಾಧನೆಗೋಸ್ಕರ ಇರಬೇಕು. ಎಲ್ಲಾ ಕಾಯಿದೆಗಳು ದೇವರ ಆಜ್ಞೆಯ ಮೇರೆಗೆ ಸಜ್ಜುಗೊಳಿಸಿದ ಪುರೋಹಿತ ವರ್ಗವೊಂದು ರಾಜ್ಯದ ಎಲ್ಲಾ ಆಡಳಿತವನ್ನು ನಿರ್ವಹಿಸಬೇಕು. ಈ ದೃಷ್ಟಿಯಿಂದ ಕೂಲಂಕಷ ಅಧ್ಯಯನ ನಡೆಸಿದಾಗ ನಿಜಾಮ ರಾಜ್ಯ ಧಾರ್ಮಿಕ ಪ್ರಧಾನತೆಯ ರಾಜ್ಯಕ್ಕೆ ಬೇಕಾದ ಮೇಲ್ಕಂಡ ಯಾವ ಗುಣಗಳನ್ನು ಹೊಂದಿರಲಿಲ್ಲ ಎಂಬುದು ವಿಧಿತವಾಗುತ್ತದೆ. ರಾಜ್ಯದ ಕಾನೂನುಗಳು ಸುಲ್ತಾನನಿಂದ ಅಥವಾ ಆಡಳಿತ ವರ್ಗಕ್ಕೆ ಸೇರಿದವರಿಂದ ರಚಿಸಲ್ಪಡುತ್ತಿದ್ದವೇ ಹೊರತು ಧರ್ಮಶಾಸ್ತ್ರ ಪಂಡಿತರಿಂದಲ್ಲ. ಆಡಳಿತ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟಿಲ್ಲದವರ ಕೈಯಲ್ಲಿತ್ತು. ಸುಲ್ತಾನನ ರಾಜ್ಯಾಡಳಿತ ನೀತಿಯಲ್ಲಿ ಶ್ರೀಮಂತರು, ಜಮೀನ್ದಾರರು ಮತ್ತು ಸೈನ್ಯಾಧಿಕಾರಿಗಳು ಪ್ರಭಾವ ಬೀರುತ್ತಿದ್ದರು. ನಿಜಾಮರು ತಮ್ಮ ಧರ್ಮವನ್ನು ಗೌರವಿಸುತ್ತಿದ್ದುದು ನಿಜ. ಆದರೆ ಅವರು ಧರ್ಮವನ್ನೇ ರಾಜಕೀಯದ ತಳಹದಿಯನ್ನಾಗಿ ಮಾಡಿಕೊಂಡಿರಲಿಲ್ಲ.

ನಿಜಾಮರ ಸರ್ಕಾರ ಸೈನಿಕ ಶಕ್ತಿಯನ್ನು ಆಧರಿಸಿತ್ತೆಂಬ ವಾದ ಮತ್ತು ಆ ಸರಕಾರ ಜನಾನುರಾಗಕ್ಕೆ ಪಾತ್ರವಾಗಲಿಲ್ಲ ಎಂಬ ವಾದಗಳೆರಡು ಕೂಡ ಸತ್ಯಕ್ಕೆ ದೂರವಾದವು. ಜನರ ಸಹಕಾರವಿಲ್ಲದೆ ಯಾವ ರಾಜ್ಯವಾಗಲಿ ಅಥವಾ ಯಾವ ಸರಕಾರವೇ ಆಗಲಿ ಬಹಳ ಕಾಲ ಮುಂದುವರಿಯಲಾರದು. ಆಧುನಿಕ ಕಾಲದಲ್ಲಿ ಜನಾನುರಾಗವನ್ನು ಪಡೆಯದ ಸರ್ವಾಧಿಕಾರ ಸರಕಾರಗಳು ಹೇಗೆ ಬಹಳ ಬೇಗ ಉರುಳಿಬಿದ್ದವು ಎಂಬುದನ್ನು ನಾವು ಕಂಡಿದ್ದೇವೆ. ಆಗಿಂದಾಗ್ಗೆ ಯುದ್ಧಗಳಾಗುತ್ತಿದ್ದ ಮಾತ್ರಕ್ಕೆ ಅದು ಸೈನಿಕ ಶಕ್ತಿಯನ್ನು ಆಧರಿಸಿದ ರಾಜ್ಯವೆಂದು ಹೇಳುವುದು ಸಮಂಜಸವಲ್ಲ. ಈ ಮೇಲಿನ ಅಂಶಗಳ ಮುಖಾಂತರ ತಿಳಿದುಬರುವುದೇನೆಂದರೆ ನಿಜಾಮರು ಕೇಂದ್ರ ಆಡಳಿತದಲ್ಲಿ ಮಾತ್ರ ತಮ್ಮ ಅಧಿಕಾರಕ್ಕೆ ಸಂಬಂಧಪಟ್ಟಂತೆ ಕೆಲವು ಬದಲಾವಣೆಗಳನ್ನು ಜಾರಿಗೆ ತಂದರು. ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ನಿಜಾಮರ ಆಳ್ವಿಕೆಗಿಂತ ಹಿಂದೆ ಹೇಗೆ ಸ್ಥಳೀಯ ಅಧಿಕಾರಿಗಳ ಕೈಯಲ್ಲಿತ್ತೋ ಅದೇ ಮಾದರಿ ಮುಂದುವರೆಯಿತು.

ಹೈದರಾಬಾದ್ ಸಂಸ್ಥಾನದ ರಚನೆಯಲ್ಲಿ ಆಡಳಿತದ ಪಾತ್ರ ಮಹತ್ವದ್ದು. ಇದೊಂದು ಸಾಮ್ರಾಜ್ಯದ ಬೆಳವಣಿಗೆಯ ನಿರ್ಧಾರಕ ಅಂಶವೂ ಹೌದು. ಆಡಳಿತ ವ್ಯವಸ್ಥೆಯನ್ನು ರೂಪಿಸುವವರು ಆಳುವ ವರ್ಗದವರಾದ ನಿಜಾಮರಾಗಿದ್ದರು. ಇದರಿಂದಾಗಿ ಆಡಳಿತ ವಿಧಾನ ಸಾಮಾಜಿಕ ರಚನೆಗೆ ಅನುಗುಣವಾಗಿಯೇ ಇರುತ್ತಿತ್ತು. ಆಡಳಿತದಲ್ಲಿ ನಿಜಾಮರು ಹಾಗೂ ನಿಜಾಮರಿಂದ ನೇಮಕವಾದ

ಅಧಿಕಾರಿ ವರ್ಗಗಳು ರಾಜಕೀಯವಾಗಿ ಒಪ್ಪಂದ ಮಾಡಿಕೊಂಡಂತೆಯೂ ಕಂಡುಬರುತ್ತದೆ. ಕೇಂದ್ರಾಡಳಿತ, ಸುಬಾ, ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ಗ್ರಾಮಾಡಳಿತ ಇವೆಲ್ಲವೂ ಪರಸ್ಪರ ಸಂಬಂಧವನ್ನು ಹೊಂದಿರುತ್ತಿದ್ದವು. ಆಡಳಿತದ ಸ್ವರೂಪದಲ್ಲಿಯೂ ಬದಲಾವಣೆಗಳನ್ನು ಕಾಣುವುದು ಸಾಧ್ಯವಿರಲಿಲ್ಲ. ಕೇಂದ್ರಾಡಳಿತದಲ್ಲಿ ನಿಜಾಮರು, ಸುಬಾದಲ್ಲಿ ಸುಬೇದಾರರು, ಜಿಲ್ಲಾಡಳಿತದಲ್ಲಿ ತಾಲೂಕದಾರರು, ತಾಲೂಕು ಆಡಳಿತದಲ್ಲಿ ತಹಶೀಲ್ದಾರರು ಹಾಗೂ ಗ್ರಾಮಾಡಳಿತ ದಲ್ಲಿ ವರ್ತಕ ಶ್ರೇಣಿಗಳು, ಪಟೇಲರು, ಮಾಲಿ ಪಾಟೀಲ್, ಪೊಲೀಸ್ ಪಾಟೀಲ್ ಮುಂತಾದವರು ಆಡಳಿತ ನಡೆಸುತ್ತಿದ್ದರು. ಇವರೆಲ್ಲರೂ ಪರಸ್ಪರ ಒಬ್ಬರಿಗೊಬ್ಬರು ಅಧೀನರಾಗಿರುತ್ತಿದ್ದರು. ಶ್ರೇಣೀಕೃತ ಸಮಾಜ ವ್ಯವಸ್ಥೆಯ ಮಾದರಿಯಲ್ಲಿಯೇ ಅಧಿಕಾರಿಗಳ ವಿವಿಧ ಶ್ರೇಣಿಗಳಿರುತ್ತಿದ್ದವು. ಹೀಗೆ ಹೈದರಾಬಾದ್ ನಿಜಾಮರ ಆಡಳಿತವನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೫.೧. ಆಡಳಿತ ಸ್ವರೂಪ

ನಿಜಾಮರು ಆಡಳಿತವನ್ನು ಮಧ್ಯಕಾಲೀನ ಮುಸ್ಲಿಂ ಮನೆತನಗಳ ಹಾಗೂ ಬ್ರಿಟಿಶರ ಪ್ರಭಾವಕ್ಕೆ ಒಳಗಾಗಿ ನಡೆಸಿದರು. ನಿಜಾಮರು ಆರಂಭ ಕಾಲದಲ್ಲಿ ಬಹಮನಿ ಸುಲ್ತಾನರ ಆಡಳಿತ ಅಂಶಗಳಾದ ತರಫ, ಜಹಗೀರ, ದೇಸಾಯಿ ಮುಂತಾದ ಅಂಶಗಳನ್ನು ಬಳಸಿಕೊಂಡು ಆಡಳಿತ ರಚನೆ ಮಾಡಿಕೊಂಡಿದ್ದರು. ನಂತರದಲ್ಲಿ ಮೊಗಲ ಆಡಳಿತ ವಿಧಾನವನ್ನು ಹೆಚ್ಚು ಕಡಿಮೆ ಆರಂಭದ ನಿಜಾಮನು ಸಂಪೂರ್ಣವಾಗಿ ಯಥಾವತ್ತಾಗಿ ಅನುಸರಿಸಿರುವುದನ್ನು ಗಮನಿಸಬಹುದು. ಮೊಗಲರ ಕೆಲವು ಆಡಳಿತ ಹುದ್ದೆಗಳು ನಿಜಾಮರ ಆಡಳಿತದ ಕೊನೆಯವರೆಗೆ ಚಾಲ್ತಿಯಲ್ಲಿದ್ದುದು ಕಂಡುಬರುತ್ತದೆ. ಹೈದರಾಬಾದ್ ನಿಜಾಮರು ಈ ಮೇಲಿನ ಆಡಳಿತ ಅಂಶಗಳನ್ನೇ ತಮ್ಮ ಪ್ರದೇಶಕ್ಕೆ ಹೊಂದಾಣಿಕೆ ಯಾಗುವ ರೀತಿಯಲ್ಲಿ ಬದಲಾವಣೆ ಮಾಡಿಕೊಂಡು ತಮ್ಮ ಆಳ್ವಿಕೆಯನ್ನು ಗಟ್ಟಿ ಮಾಡಿಕೊಂಡಿದ್ದನ್ನು ಗಮನಿಸಬಹುದಾಗಿದೆ.[೧] ಒಟ್ಟಾರೆಯಾಗಿ ನಿಜಾಮರ ಆಡಳಿತವನ್ನು ಅಧ್ಯಯನಕ್ಕೆ ಅನುಕೂಲವಾಗುವಂತೆ ಮೂರು ಭಾಗಗಳಲ್ಲಿ ವಿಂಗಡಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಈ ಮೂರು ವಿಭಾಗಗಳು ಈ ಕೆಳಗಿನಂತಿವೆ.

೧. ಮೊಘಲಾಯಿ ಆಡಳಿತ ಹಂತ ಕ್ರಿಶ ೧೭೨೪ರಿಂದ ೧೮೫೩: ಹೈದರಾಬಾದ್ ನಿಜಾಮರು ಆರಂಭದಲ್ಲಿ ಸಂಪೂರ್ಣವಾಗಿ ಮೊಗಲರ ಆಡಳಿತವನ್ನೇ ಚಾಲ್ತಿಯಲ್ಲಿ ತಂದಿರುವುದರಿಂದ ಇದನ್ನು ಮೊಘಲಾಯಿ ಹಂತವೆಂದು ಗುರುತಿಸಲಾಗಿದೆ. ಮೊಘಲಾಯಿ ಎಂದರೆ ಮೊಗಲ ಆಡಳಿತ ಸ್ವರೂಪವಾಗಿದೆ. ನಿಜಾಮ ಆಳ್ವಿಕೆಯ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ಆಡಳಿತ ಸ್ವರೂಪ ಮೊಗಲರ ಆಡಳಿತವನ್ನು ಹೋಲುತ್ತಿದ್ದುದರಿಂದ ಈ ಪ್ರದೇಶದ ಜನರು ಇಂದಿಗೂ ಕೂಡ ನಿಜಾಮ ಆಡಳಿತ ಅವಧಿಯನ್ನು ಮೊಘಲಾಯಿ ಆಡಳಿತವೆಂದು ಕರೆಯುವುದು ರೂಢಿಯಲ್ಲಿದೆ.[೨] ಮೊಗಲರು

ತಮ್ಮ ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ಸುಬಾಗಳೆಂದು ವಿಂಗಡಿಸಿದರು. ಅಂತಹ ಸುಬಾಗಳಲ್ಲಿ ಹೈದರಾಬಾದ್ ದಖ್ಖನ್ ಪ್ರದೇಶವೂ ಒಂದಾಗಿತ್ತು. ಔರಂಗಜೇಬನು ದಖ್ಖನ್ ಪ್ರದೇಶದ ಮೇಲೆ ದಂಡೆಯಾತ್ರೆ ಕೈಗೊಂಡು ಜಯಿಸಿದ ನಂತರ, ದಖ್ಖನ್ ಪ್ರದೇಶದ ಸುಬೇದಾರನ್ನಾಗಿ ತನ್ನ ನಂಬಿಕಸ್ತ ದಂಡನಾಯಕ ಕಮುರೋಧಿನ್ ಕಿಲಿಚಖಾನ್‌ನನ್ನು ನೇಮಿಸಿದ್ದನು. ಹೀಗೆ ನಿಜಾಮನು ೧೭೧೪ ರಿಂದ ೧೭೨೪ವರೆಗೆ ಮೊಗಲರ ಅಧೀನದಲ್ಲಿಯೇ ಅಧಿಕಾರ ಚಲಾಯಿಸಿದನು.[೩]

೧೭೨೪ರಲ್ಲಿ ದೆಹಲಿಯಲ್ಲಾದ ರಾಜಕೀಯ ಬದಲಾವಣೆಯಿಂದಾಗಿ ದಖ್ಖನ್‌ನ ಸುಬೇದಾರನಾಗಿದ್ದ ಕಿಲಿಚಖಾನನನ್ನು ಮೊಗಲ್ ಸುಲ್ತಾನನು ವಜೀರನನ್ನಾಗಿ ನೇಮಿಸಿದನು. ಕಿಲಿಚಖಾನನು ಒಲ್ಲದ ಮನಸ್ಸಿನಿಂದ ದಖ್ಖನ್‌ನಿಂದ ದೆಹಲಿಗೆ ಪ್ರಯಾಣ ಮಾಡಿದನು. ಅಷ್ಟರಲ್ಲಿ ಮುಖರಿಜ್‌ಖಾನನು ದಖ್ಖನಿನ ಸುಬೇದಾರನಾದನು. ಮುಂದೆ ಮೊಗಲ ಸುಲ್ತಾನರ ಅಸಮರ್ಥತೆಯ ಲಾಭ ಪಡೆದ ನಿಜಾಮ್–ಉಲ್-ಮುಲ್ಕ್‌ನು ಶಕಿಯರ ಖೇಡ ಕದನದಲ್ಲಿ ಮುಖರಿಜ್‌ಖಾನನನ್ನು ಸೋಲಿಸಿ ೧೭೨೪ರಲ್ಲಿ ಮೊಗಲರಿಂದ ತಾನು ಸ್ವತಂತ್ರನೆಂದು ಘೋಷಿಸಿಕೊಂಡನು ದಖ್ಖನ್ ಪ್ರದೇಶದ ತನ್ನ ಆಡಳಿತ ನೆಲೆಗೆ ಔರಂಗಬಾದ್‌ನ್ನು ಆರಂಭದ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ಆರಂಭಿಸಿದನು.[೪]

ಮೊಗಲರ ಅಧೀನದಿಂದ ಉದಯಿಸಿದ ಹೈದರಾಬಾದ್ ಸಂಸ್ಥಾನವು ಆರಂಭದಲ್ಲಿ ಮೊಗಲರ ಆಡಳಿತ ವಿಭಾಗಗಳಾದ ಸುಬಾ, ಸರ್ಕಾರ, ಮಹಲ್ ಅಥವಾ ಪರಗಣ ಮತ್ತು ತಾಜ್ ಎಂಬ ಅಂಶಗಳನ್ನು ಯಥಾವತ್ತಾಗಿ ಉಳಿಸಿಕೊಂಡಿತು. ನಿಜಾಮನು ಸಂಸ್ಥಾನವನ್ನು ಆರು ಸುಬಾಗಳನ್ನಾಗಿ ವಿಂಗಡಿಸಿಕೊಂಡನು. ಅವುಗಳೆಂದರೆ ಔರಂಗಬಾದ್, ಮಹಮ್ಮದ್‌ಬಾದ್ (ಬೀದರ್), ಖಾನದೇಶ, ಬೀರಾರ್, ದಾರುಲ್ ಜಾಫರ್ (ಬಿಲಾಪುರ) ಹಾಗೂ ಫರಕುಂದಾ ಬನ್ನಿಯಾದ (ಹೈದರಾಬಾದ್). ಹಾಗೆಯೇ ಸಂಸ್ಥಾನವನ್ನು ಒಟ್ಟು ೧೬ ಸರ್ಕಾರಗಳನ್ನಾಗಿ ವಿಂಗಡಿಸಿದನು. ಈ ಸರ್ಕಾರಗಳ ಅಧೀನದಲ್ಲಿ ಮಹಲ್ ಅಥವಾ ಪರಗಣಗಳು ಕಾರ್ಯನಿರ್ವಹಿಸುತ್ತಿದ್ದವು. ಆಡಳಿತದ ಕೊನೆಯ ಘಟಕವಾಗಿ ತಾಜ್ ಎಂದರೆ ಗ್ರಾಮಾಡಳಿತವಿತ್ತು.[೫]

ದಖ್ಖನ್ ಪ್ರಾಂತ್ಯಕ್ಕೆ ಇಂತಹ ಆಡಳಿತ ವ್ಯವಸ್ಥೆ ಹೊಸದಾಗಿರಲಿಲ್ಲ. ಅದಾಗಲೇ ಈ ಪ್ರದೇಶವನ್ನು ಬಹಮನಿ, ಬಿಜಾಪುರದ ಆದಿಲ್‌ಶಾಹಿ ಹಾಗೂ ಮೊಗಲರು ವ್ಯವಸ್ಥಿತವಾದ ಆಡಳಿತ ಚೌಕಟ್ಟಿನಡಿ ರೂಪಿಸಿಕೊಂಡಿದ್ದರು. ಆದರೆ ಮೊಗಲ್ ಮತ್ತು ಮರಾಠರ ನಡುವಿನ ಸಂಘರ್ಷದ ಪರಿಣಾಮದಿಂದಾಗಿ ದಖ್ಖನ್‌ನಲ್ಲಿ ೧೭ನೇ ಶತಮಾನದ ಕೊನೆಯ ಭಾಗದಲ್ಲಿ ಆಡಳಿತ ಶೂನ್ಯತೆ ಕಾಣಿಸಿಕೊಂಡಿತ್ತು. ಇಂತಹ ಸಮಯದಲ್ಲಿ ಅಧಿಕಾರಕ್ಕೆ ಬಂದ ನಿಜಾಮ್–ಉಲ್–ಮುಲ್ಕ್‌ನು ವ್ಯವಸ್ಥಿತವಾದ ಆಡಳಿತವನ್ನು ಸ್ಥಾಪಿಸುವ ಅಗತ್ಯ ಮನಗಂಡನು.[೬] ಹೈದರಾಬಾದ್ ರಾಜ್ಯದ ಆಡಳಿತ ರಚನೆಯಲ್ಲಿ ನಿಜಾಮನ

ನಂತರದ ಸ್ಥಾನವನ್ನು ದಿವಾನನು ಹೊಂದಿರುತ್ತಿದ್ದನು. ಇವನು ನಿಜಾಮನ ಆಜ್ಞೆಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಹೊಂದಿದ್ದನು. ನಿಜಾಮನ ಮಂತ್ರಿಗಳಲ್ಲಿ ದಿವಾನನು ಸೈನ್ಯ ಮತ್ತು ಹಣಕಾಸಿನ ವಿಷಯದಲ್ಲಿ ಹೆಚ್ಚಿನ ಅಧಿಕಾರವನ್ನು ಹೊಂದಿದ್ದನು. ಕಂದಾಯದ ಆಡಳಿತದಲ್ಲಿ ದಿವಾನ ನಂತರದ ಸ್ಥಾನ ಪೇಷ್ವಾರ ಆಗಿತ್ತು. ಪೇಷ್ವಾರನು ಸುಬಾ ಮಟ್ಟದಲ್ಲಿನ ಕಂದಾಯಕ್ಕೆ ಸಂಬಂಧಿಸಿದ ವಿಷಯದ ಮೇಲೆ ಉಸ್ತುವಾರಿ ಪಡೆದಿದ್ದನು. ಸಂಸ್ಥಾನದಲ್ಲಿ ದಿನನಿತ್ಯದ ಕಂದಾಯವನ್ನು ವಸೂಲಿ ಮಾಡುವ ಅಧಿಕಾರಿಯನ್ನು ದಫ್ತರದಾರ್ ಎಂದು ಕರೆಯುತ್ತಿದ್ದರು. ನಗರ ಪ್ರದೇಶಗಳ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿಯನ್ನು ಕೊತ್ವಾಲನಿಗೆ ವಹಿಸಲಾಗಿತ್ತು.[೭]

ಸುಬಾಗಳಲ್ಲಿ ಸುಬೇದಾರ, ಸರ್ಕಾರಗಳಲ್ಲಿ ಫೌಜದಾರ್, ಮಹಲ್‌ಗಳಲ್ಲಿ ಮಹಲದಾರ ಹಾಗೂ ತಾಜ್‌ಗಳಲ್ಲಿ ಗೌಡ, ಪಟೇಲ ಮತ್ತು ಶಾನಭೋಗರು ಪ್ರಮುಖ ಆಡಳಿತಾಧಿಕಾರಿಗಳಾಗಿದ್ದರು. ಇವರು ಕೇಂದ್ರ ಆಡಳಿತದ ನಿರ್ದೇಶನದಂತೆ ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ತೆರಿಗೆ ಸಂಗ್ರಹಿಸಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುತ್ತಿದರು. ಹೀಗೆ ನಿಜಾಮರು ಸಂಸ್ಥಾನದಲ್ಲಿ ಕ್ರೋಢೀಕೃತ ವ್ಯವಸ್ಥೆಯ ಕೇಂದ್ರೀಕೃತ ಆಡಳಿತವನ್ನು ಜಾರಿಗೆ ತರುವ ತವಕದಲ್ಲಿದ್ದುದನ್ನು ಗಮನಿಸಬಹುದು. ಉದಾಹರಣೆಗೆ ಆರಂಭದ ನಿಜಾಮ ನಿಜಾಮ್-ಉಲ್-ಮುಲ್ಕ್‌ನು ತನ್ನ ಸಂಸ್ಥಾನದ ಆಡಳಿತವನ್ನು ವ್ಯವಸ್ಥಿತ ರೀತಿಯಲ್ಲಿ ರಚನೆ ಮಾಡಲು ಉತ್ತರ ಭಾರತದ ಪ್ರತಿಷ್ಠಿತ ಆಡಳಿತ ಮನೆತನಗಳಿಂದ ಸೇನಾಧಿಕಾರಿಗಳನ್ನು ಮತ್ತು ಆಡಳಿತಾಧಿಕಾರಿಗಳನ್ನು ಕರೆತಂದಿದ್ದನು. ಈ ಅಧಿಕಾರಿ ವರ್ಗ ನಿಜಾಮ್ ಸಂಸ್ಥಾನದ ಪ್ರಮುಖ ಹುದ್ದೆಗಳನ್ನು ಅಲಂಕರಿಸಿತ್ತು.[೮]

ಕ್ರಿಶ ೧೭೪೮-೧೭೫೦ರ ಕಾಲಘಟ್ಟದಲ್ಲಿ ಸಂಸ್ಥಾನದ ರಾಜಕೀಯ ಮತ್ತು ಆಡಳಿತ ಅಸ್ಥಿರತೆಯಿಂದ ಕೂಡಿದ್ದು ಸೈನಿಕ ಮತ್ತು ನಾಗರಿಕ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳು ಕಂಡಬಂದವು. ಮೊದಲನೆಯ ನಿಜಾಮನ ನಂತರ ಅಧಿಕಾರಕ್ಕೆ ಬಂದ ನಿಜಾಮ ಅಲಿಖಾನನು (ಕ್ರಿಶ ೧೭೬೧-೧೮೦೩) ನಾಗರಿಕ ಮತ್ತು ಸೈನ್ಯಾಡಳಿತದಲ್ಲಿ ಮಹತ್ವದ ಬದಲಾವಣೆಗಳನ್ನು ತರಲು ಪ್ರಯತ್ನಿಸಿದನು. ಅದಕ್ಕಾಗಿ ಸೈನ್ಯ ವ್ಯವಸ್ಥೆಯಲ್ಲಿ ಪೈಗಾ ಸೈನ್ಯವನ್ನು ಹುಟ್ಟುಹಾಕಿದನು. ಪೈಗಾ ವಿಶಿಷ್ಟ ಅಧಿಕಾರ ಹೊಂದಿದ ಪ್ರತಿಷ್ಠಿತ ಗಣ್ಯವ್ಯಕ್ತಿಯ ಸ್ಥಾನಮಾನವನ್ನು ಸೂಚಿಸುತ್ತದೆ. ಪೈಗಾ ಸೈನ್ಯದ ಕಾರ್ಯವೆಂದರೆ ಮನ್‌ಸಬ್‌ದಾರರ ಸೈನ್ಯಗಳು ಮತ್ತು ಸರ್ಕಾರದ ಅಧೀನದಲ್ಲಿದ್ದ ಸೈನ್ಯಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು. ಹಾಗೆಯೇ ನಿಜಾಮನ ಖಾಸಗಿ ಒಡೆತನದ ಪ್ರದೇಶವನ್ನು ಹಾಗೂ ಸಂಸ್ಥಾನವನ್ನು ರಕ್ಷಿಸುವುದು ಪೈಗಾದ ಮತ್ತೊಂದು ಪ್ರಮುಖ ಕಾರ್ಯವಾಗಿತ್ತು.[೯]

ಈ ಎರಡು ಬಗೆಯ ಪ್ರತ್ಯೇಕ ಸೈನ್ಯ ವ್ಯವಸ್ಥೆಯಲ್ಲದೆ ನಿಜಾಮ ಆಲಿಖಾನ್ ಕಾಲದಲ್ಲಿ ಬ್ರಿಟಿಶ್ ಸೈನ್ಯ ಕೂಡ ಅಸ್ಥಿತ್ವಕ್ಕೆ ಬಂದಿತು. ಅದನ್ನು ರೆಸೆಲ್ ಬ್ರಿಗೇಡ್ ಎಂದು ಕರೆಯಲಾಗುತ್ತಿತ್ತು. ಹೆನ್ರಿ ರೆಸೆಲನು ರೆಸಿಡೆಂಟನಾಗಿದ್ದಾಗ ರಾಜ್ಯದಲ್ಲಿ ಆಂತರಿಕ ದಂಗೆಗಳನ್ನು ಹತ್ತಿಕ್ಕಲು ಸೂಕ್ತ ಸೈನಿಕ ವ್ಯವಸ್ಥೆ ಇಲ್ಲದಿದ್ದುದನ್ನು ಗಮನಿಸಿದನು. ಸಹಾಯಕ ಸೈನ್ಯ ಪದ್ಧತಿ ಅಸ್ತಿತ್ವದಲ್ಲಿದ್ದರೂ ಆ ಸೈನ್ಯವನ್ನು ಆಂತರಿಕ ಗಲಭೆ ಹತ್ತಿಕ್ಕಲು ಬಳಸುವಂತಿರಲಿಲ್ಲ. ಆದ್ದರಿಂದ ರಾಜ್ಯದಲ್ಲಿ ಸುವ್ಯವಸ್ಥಿತ ಸೈನ್ಯವನ್ನು ಕಟ್ಟಲು ರೆಸಿಡೆಂಟ್ ರೆಸೆಲ್ ಯೋಚಿಸಿದನು. ರೆಸೆಲ್ ಬ್ರಿಗೇಡ್ ಎಂಬ ಹೆಸರಿನ ಹೊಸ ಸೈನ್ಯವನ್ನು ರಾಜ್ಯದ ಖರ್ಚಿನಿಂದಲೇ ಸ್ಥಾಪಿಸಲಾಯಿತು. ರಾಜ್ಯದಲ್ಲೆದ್ದ ದಂಗೆಗಳನ್ನು ಹತ್ತಿಕ್ಕಲು ಈ ಸೈನ್ಯವನ್ನು ಬಳಸಲಾಯಿತು. ನಂತರದ ದಿನಗಳಲ್ಲಿ ಇದನ್ನು ಹೈದರಾಬಾದ್ ಕಾಂಟಿಜೆಂಟ್ ಸೈನ್ಯ ಎಂದು ಕರೆಯಲಾಯಿತು. ಈ ಸೈನ್ಯ ನೆಲೆಸುತ್ತಿದ್ದ ಪ್ರದೇಶ ಕಂಟೋನ್ಮೆಂಟ್ ಎಂದು ಹೆಸರಾಯಿತು.[೧೦]

ಮೂರನೆಯ ನಿಜಾಮನ ಕಾಲ ಹೈದರಾಬಾದ್ ಕರ್ನಾಟಕದ ಆಡಳಿತದ ಚರಿತ್ರೆಯಲ್ಲಿ ಮಹತ್ವದ ಘಟ್ಟವಾಗಿದೆ. ಹೈದರಾಬಾದ್ ಸಂಸ್ಥಾನದ ಅತ್ಯುನ್ನತ ಅಧಿಕಾರ ಸ್ಥಾಪನೆಗೆ ರೆಸಿಡೆಂಟನೊಡನೆ ನಡೆದ ವಿವಾದಗಳು ಇದಕ್ಕೆ ಕಾರಣವಾದವು. ರಾಜ್ಯದ ಒಟ್ಟು ಆಡಳಿತ ನಿಜಾಮನ ನೇತೃತ್ವದಲ್ಲಿತ್ತು. ಪೇಷ್ಕಾರನಾಗಿದ್ದ ಚಂದೋಲಾಲನನ್ನು ಪ್ರಧಾನಮಂತ್ರಿಯನ್ನಾಗಿ ಮಾಡುವಂತೆ ಬ್ರಿಟಿಶ್ ರೆಸಿಡೆಂಟನು ನಿಜಾಮನಿಗೆ ಸಲಹೆ ನೀಡಿದನು. ಚಂದೋಲಾಲನನ್ನು ನೇಮಿಸಲು ನಿಜಾಮನು ವಿರೋಧಿಸಿದನು. ಈ ಬೆಳವಣಿಗೆಯಿಂದ ಕೋಪಗೊಂಡ ರೆಸಿಡೆಂಟನು ಈ ವಿಷಯದಲ್ಲಿ ಒತ್ತಡ ಹೇರತೊಡಗಿದನು. ಸಹಾಯಕ ಸೈನ್ಯ ಪದ್ಧತಿ ಒಪ್ಪಂದದ ಮೇರೆಗೆ ಚಂದೋಲಾಲನನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಿಸಲು ನಿಜಾಮನು ಒಪ್ಪಿಕೊಳ್ಳಬೇಕಾಯಿತು. ಬ್ರಿಟಿಶರ ಸಹಾಯದಿಂದ ಪ್ರಧಾನಿಯಾದ ಚಂದೋಲಾಲನು ರೆಸಿಡೆಂಟನ ಆಣತಿಯಂತೆ ಆಡಳಿತ ನಡೆಸತೊಡಗಿದನು. ಅಲ್ಲಿಯವರೆಗೆ ಮಹಲ್‌ಗಳಾಗಿದ್ದ ಪ್ರದೇಶಗಳನ್ನು ತಾಲೂಕುಗಳನ್ನಾಗಿ ರೂಪಿಸಿದನು. ತಾಲೂಕುಗಳ ಅಧಿಕಾರವನ್ನು ಚಲಾಯಿಸಲು ತಾಲೂಕಾಧಿಕಾರಿಗಳನ್ನು ನೇಮಿಸಿದನು. ನಿಜಾಮನು ಬ್ರಿಟಿಶರೊಂದಿಗೆ ಒಪ್ಪಂದ ಮಾಡಿಕೊಂಡ ಪರಿಣಾಮವಾಗಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡನು.[೧೧]

೨. ಆಂಗ್ಲೋ- ಮೊಘಲಾಯಿ ಹಂತ ಕ್ರಿಶ ೧೮೫೩–೧೮೮೩: ಈ ಕಾಲಾವಧಿಯನ್ನು ಆಂಗ್ಲೋ-ಮೊಘಲಾಯಿ ಮಿಶ್ರಿತ ಆಡಳಿತ ಹಂತವೆಂದು ಕರೆಯಬಹುದು. ಪ್ರಧಾನ ಮಂತ್ರಿಯಾಗಿ ಆಡಳಿತಾತ್ಮಕ ಬದಲಾವಣೆಗೆ ಕಾರಣೀಭೂತನಾಗಿದ್ದ ಸಾಲಾರ್‌ಜಂಗ್‌ನ ಆಡಳಿತ ಅವಧಿಯ ಈ ಹಂತವನ್ನು ಸಾಲಾರ್‌ಜಂಗ್‌ನ ಸುಧಾರಣೆಯ ಹಂತವೆಂದೂ ಕರೆಯಬಹುದು. ನಿಜಾಮರು ಆರಂಭದಲ್ಲಿ ಮೊಗಲ್ ನೀತಿಯನ್ನು ಅಳವಡಿಸಿಕೊಂಡು ತಮಗೆ ಹೊಂದಾಣಿಕೆಯಾಗುವ ರೀತಿಯಲ್ಲಿ ಆಡಳಿತ ನಡೆಸಿದರು. ನವಾಬ ಅಲಿಖಾನನು ಸಹಾಯಕ ಸೈನ್ಯ ಪದ್ಧತಿಯನ್ನು ಸ್ವೀಕರಿಸಿದ ಪರಿಣಾಮವಾಗಿ

ಬ್ರಿಟಿಶರ ವಸಾಹತುಶಾಹಿ ಧೋರಣೆಗೆ ಅನುಗುಣವಾಗಿ ಅಧಿಕಾರ ನಡೆಸುವ ಅನಿವಾರ್ಯತೆಗೆ ಒಳಗಾದನು. ಈ ಸಂದರ್ಭದಲ್ಲಿ ಹೈದರಾಬಾದ್ ಸಂಸ್ಥಾನವು ಬ್ರಿಟಿಶರಿಂದ ಪ್ರಭಾವಿತನಾಗಿ ಅವರ ಪ್ರೀತಿಗೆ ಪಾತ್ರನಾಗಿದ್ದ ಒಂದನೆಯ ಸಾಲಾರ್‌ಜಂಗ್‌ನನ್ನು ಪ್ರಧಾನಮಂತ್ರಿಯಾಗಿ ಪಡೆಯಿತು. ಇವನ ಆಡಳಿತಾವಧಿಯಲ್ಲಿ ಮೊಗಲ್ ಆಡಳಿತ ಪದ್ಧತಿಯೊಂದಿಗೆ ಬ್ರಿಟಿಶ್ ಆಡಳಿತ ಪದ್ಧತಿ ಅಳವಡಿಸಿಕೊಂಡು ಆಧುನಿಕ ಹೊಸ ಆಡಳಿತವೊಂದು ಜಾರಿಗೆ ಬಂದುದು ಕಂಡುಬರುತ್ತದೆ[೧೨].

ಸಾಲಾರ್‌ಜಂಗ್‌ನು ಆಡಳಿತದಲ್ಲಿ ಹೊಸ ಮಾದರಿಯೊಂದನ್ನು ಜಾರಿಗೆ ತರಲು ಅದುವರೆಗೂ ಜಾರಿಯಲ್ಲಿದ್ದ ಆಡಳಿತದ ಬದಲಾಗಿ ಜಿಲ್ಲಾಬಂಧಿ ಎಂಬ ವ್ಯವಸ್ಥೆಯನ್ನು ಜಾರಿಗೆ ತಂದನು. ಜಿಲ್ಲಾಬಂಧಿ ಪ್ರಕಾರ ಸಂಸ್ಥಾನದಲ್ಲಿದ್ದ ಸುಬಾಗಳನ್ನು ವಿಭಾಗಗಳಾಗಿ, ಸರ್ಕಾರಗಳನ್ನು ಜಿಲ್ಲೆಗಳಾಗಿ, ಮಹಲಗಳನ್ನು ತಾಲೂಕುಗಳಾಗಿ ಹಾಗೂ ಗ್ರಾಮಾಡಳಿತವನ್ನು ಆಡಳಿತದ ಕೊನೆಯ ಘಟಕವನ್ನಾಗಿ ಬದಲಾಯಿಸಲಾಯಿತು.[೧೩] ಇದರಿಂದ ಸಂಸ್ಥಾನದಲ್ಲಿದ್ದ ಆರು ಸುಬಾಗಳು ಐದು ಸುಬಾಗಳಾಗಿ ಹಾಗೂ ೧೬ ಜಿಲ್ಲೆಗಳು ೧೮ ಜಿಲ್ಲೆಗಳಾಗಿ ಬದಲಾದವು. ನಿಜಾಮನ ಖಾಸಗಿ ಜೀವನದ ಖರ್ಚು ವೆಚ್ಚಗಳಿಗಾಗಿ ಹೊಸ ಜಿಲ್ಲೆಗಳಲ್ಲಿ ನಾಲ್ಕು ಜಿಲ್ಲೆಗಳನ್ನು ಬಿಟ್ಟುಕೊಡಲಾಯಿತು. ಒಂದನೆಯ ಸಾಲಾರ್‌ಜಂಗ್‌ನು ಜಿಲ್ಲೆಗಳ ಆಡಳಿತ ವ್ಯವಸ್ಥೆಯ ಮೇಲುಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿಯನ್ನು ಕಂದಾಯ ಸಮಿತಿಗೆ ವಹಿಸಿದನು. ಹೈದರಾಬಾದ್ ಕರ್ನಾಟಕ ಪ್ರದೇಶದ ಗುಲಬರ್ಗಾ, ರಾಯಚೂರು ಹಾಗೂ ಸುರಪುರ ಜಿಲ್ಲಾ ಸ್ಥಾನಮಾನವನ್ನು ಸಾಲಾರ್‌ಜಂಗ್‌ನ ಆಡಳಿತಾವಧಿಯಲ್ಲಿ ಪಡೆದುಕೊಂಡಿದ್ದು ವಿಶೇಷವಾಗಿದೆ.[೧೪] ಅವನು ರಾಜ್ಯ ಮಟ್ಟದ ಆಡಳಿತದಲ್ಲೂ ಸುಧಾರಣೆ ತರಲು ಯತ್ನಿಸಿದನು. ಸಂಸ್ಥಾನದಲ್ಲಿ ಬಲಯುತವಾದ ಒಂದು ಮಂತ್ರಿಮಂಡಲವಿದ್ದು ಆ ಮಂತ್ರಿಮಂಡಲದ ಸಹಾಯಕ್ಕಾಗಿ ಸಹಾಯಕ ಸಚಿವರು, ಕಾರ್ಯದರ್ಶಿಗಳು, ಸಹಕಾರ್ಯದರ್ಶಿಗಳು ಇರುವ ಕೇಂದ್ರೀಯ ವ್ಯವಸ್ಥೆಯನ್ನು ರೂಪಿಸಲು ಪ್ರಯತ್ನಿಸಿದನು. ಆದರೆ ಬ್ರಿಟಿಶರ ನಕರಾತ್ಮಕ ಧೋರಣೆಯಿಂದ ಸಹಾಯಕ ಸಚಿವರನ್ನು ಮಾತ್ರ ನೇಮಕ ಮಾಡಲು ಸಾಧ್ಯವಾಯಿತು. ಮಂತ್ರಿಗಳ ಕೆಲಸದ ಭಾರ ಕಡಿಮೆ ಮಾಡಲು ನೇಮಕವಾದ ಸಹಾಯಕ ಮಂತ್ರಿಗಳನ್ನು ಮದ್-ಉಲ್-ಮಹಮ್ಮದ್ ಎಂದೂ ಪ್ರಧಾನ ಮಂತ್ರಿಯನ್ನು ಸದರ್-ಉಲ್-ಮಹಮ್ಮದ್ ಎಂದೂ ಕರೆಯುವ ರೂಢಿ ಜಾರಿಗೆ ಬಂದಿತು.[೧೫]

೩. ಆಧುನಿಕ ಆಡಳಿತ ಹಂತ ೧೮೮೩–೧೯೪೮: ಬ್ರಿಟಿಶರ ಆಡಳಿತದಿಂದ ಪ್ರಭಾವಿತನಾಗಿದ್ದ ನಿಜಾಮ ಮೆಹಬೂಬ ಅಲಿಖಾನ ಬಹದ್ದೂರನು ಒಂದನೆಯ ಸಾಲಾರ್‌ಜಂಗ್‌ನ ಆಡಳಿತಾವಧಿಯಲ್ಲಿ ಜಾರಿಗೆ ಬಂದ ಸುಧಾರಣೆಗಳಲ್ಲಿದ್ದ ದೋಷಗಳನ್ನು ಸರಿಪಡಿಸಲು ಆಡಳಿತದಲ್ಲಿ ಕ್ರಮಬದ್ಧತೆ, ಕಾನೂನಾತ್ಮಕ ನೆಲೆಗಟ್ಟಿನ ಹೊಸ ಮಾದರಿಯನ್ನು ಜಾರಿಗೆ ತರಲು ಕಾನೂನು ರಚಿಸಿದನು. ಈ ಕಾನೂನುಗಳಲ್ಲಿ ಕಾನೊನ್ಚೆ ಮುಬಾರಕ್, ಹೊಸ ಸಂವಿಧಾನ ಕಾಯಿದೆ ಮಂಡಲ ಮತ್ತು ಕಾರ್ಯಕಾರಿ

ಸಮಿತಿ ಮುಂತಾದ ಕಾಯಿದೆ ಜಾರಿಗೆ ತರುವ ಮುಖಾಂತರ ಆಡಳಿತದಲ್ಲಿ ಜನರು ಕೂಡ ಭಾಗವಹಿಸುವ ಅವಕಾಶ ಒದಗಿಸಿಕೊಟ್ಟಿರುವುದು ಕಂಡುಬರುತ್ತದೆ. ಈ ಬಗೆಯ ಕಾಯಿದೆಗಳನ್ನು ಜಾರಿಗೆ ತರುವ ಮೂಲಕ ಬದಲಾದ ಸನ್ನಿವೇಶಕ್ಕೆ ಅನುಗುಣವಾಗಿ ಆಡಳಿತದಲ್ಲೂ ಬದಲಾವಣೆ ತಂದ ನಿಜಾಮರು ತಮ್ಮ ಪ್ರಭುತ್ವ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೊಸ ದಿಕ್ಕಿನೆಡೆಗೆ ಹೆಜ್ಜೆಹಾಕಿದರು.[೧೬]

ಆದರೂ ಅವರು ತಂದ ಹೊಸ ಬದಲಾವಣೆಗೆ ವಿರೋಧವೂ ವ್ಯಕ್ತವಾಯಿತು.[೧೭] ಸಂಸ್ಥಾನದ ಕೊನೆಯ ನಿಜಾಮ ಉಸ್ಮಾನ್ ಅಲಿಖಾನನ ಆಡಳಿತ ಅವಧಿ ತುಂಬ ಸಂದಿಗ್ಧ ಸ್ಥಿತಿಯಲ್ಲಿತ್ತು. ಏಕೆಂದರೆ ಭಾರತದಾದ್ಯಂತ ಸ್ವಾತಂತ್ರ್ಯಕ್ಕಾಗಿ ಚಳುವಳಿಗಳು ಆರಂಭಗೊಂಡಿದ್ದು ಅದರ ಪ್ರಭಾವ ಹೈದರಾಬಾದ್ ಸಂಸ್ಥಾನದ ಮೇಲೂ ಆಗಿತ್ತು. ನಿಜಾಮನು ಬ್ರಿಟಿಶರ ವಸಾಹತು ಧೋರಣೆಯನ್ನೂ ಹಾಗೂ ಸ್ವಾತಂತ್ರ್ಯ ಚಳುವಳಿಯನ್ನೂ ಎದುರಿಸಬೇಕಾಯಿತು. ಇದರಿಂದ ಬೇಸತ್ತ ನಿಜಾಮನು ಕಾಸಿಂನ ಸಹಾಯ ಕೋರಿದನು. ಕಾಸಿಂ ರಜ್ವಿಯು ರಜಾಕಾರರೊಂದಿಗೆ ಸಂಸ್ಥಾನಕ್ಕೆ ಧಾವಿಸಿದನು. ಅವನು ರಜಾಕಾರರಲ್ಲಿ ಮುಸ್ಲಿಂ ಮತೀಯ ಭಾವನೆಯನ್ನು ಮೂಡಿಸಿ ನಿಜಾಮನಿಗೆ ಬೆಂಬಲ ವ್ಯಕ್ತಪಡಿಸಿದನು. ನಂತರದಲ್ಲಿ ನಿಜಾಮ ಉಸ್ಮಾನ ಆಲಿಖಾನ್‌ನ ಇಕ್ಕಟ್ಟಿನ ಪರಿಸ್ಥಿತಿಯ ಲಾಭ ಪಡೆದು ಸಂಸ್ಥಾನದ ಆಡಳಿತವನ್ನು ತನ್ನ ಕೈಗೆ ತೆಗೆದುಕೊಳ್ಳಲು ಪ್ರಯತ್ನಿಸಿದನು. ನಿಜಾಮ ಸಂಸ್ಥಾನ ಈ ಬಿಕ್ಕಟ್ಟಿನಿಂದ ಹೊರಬರಲು ಮತ್ತೆ ಬ್ರಿಟಿಶರತ್ತ ಕೈಚಾಚಿತು. ಸ್ವಾತಂತ್ರ್ಯ ಬಂದ ನಂತರ ಭಾರತೀಯ ಸೇನೆ ನಿಜಾಮನನ್ನು ಸೋಲಿಸಿ ಅವನ ಸಂಸ್ಥಾನವನ್ನು ತನ್ನ ದೇಶದ ಭಾಗವಾಗಿ ಸೇರಿಸಿಕೊಂಡಿತು.[೧೮]

೫.೨. ಆಡಳಿತ ಘಟಕಗಳು

ಹೈದರಾಬಾದ್ ನಿಜಾಮ ಮನೆತನದ ಸಂಸ್ಥಾನ ಆರಂಭದಲ್ಲಿ ದೊಡ್ಡ ಸಂಸ್ಥಾನವಾಗಿತ್ತು. ನಂತರದ ದಿನಗಳಲ್ಲಿ ಉಂಟಾದ ಬದಲಾವಣೆಯಿಂದ ದಕ್ಷಿಣ ಭಾರತದ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕದವರೆಗೆ ವಿಸ್ತಾರ ಹೊಂದಿತು. ಈ ಪ್ರದೇಶದಲ್ಲಿ ವ್ಯವಸ್ಥಿತ ರೀತಿಯಲ್ಲಿ ಆಡಳಿತ ರೂಪಿಸಿಕೊಂಡಿದ್ದಲ್ಲದೆ, ಮೊಗಲ್ ಆಡಳಿತದ ಅಂಶಗಳನ್ನು ತಮ್ಮ ಪ್ರದೇಶಕ್ಕೆ ಹೊಂದಾಣಿಕೆಯಾಗುವ ರೀತಿಯಲ್ಲಿ ಮಾರ್ಪಾಡು ಮಾಡಿಕೊಂಡಿತು. ನಿಜಾಮರು ಬ್ರಿಟಿಶರ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ನಂತರ ಅವರ ಪ್ರಭಾವಕ್ಕೆ ಒಳಗಾಗಿ ಬ್ರಿಟಿಶ್ ಆಡಳಿತ ಮಾದರಿ ಅನುಸರಿಸಿದರು. ಆಂತರಿಕ ಮತ್ತು ಬಾಹ್ಯ ಒತ್ತಡಗಳಿಗೆ ಅನುಗುಣವಾಗಿ ತಮ್ಮ ಆಡಳಿತವನ್ನು ವಿವಿಧ ವಿಭಾಗಗಳಲ್ಲಿ ವಿಂಗಡನೆ ಮಾಡಿಕೊಂಡು ಆಡಳಿತ ನಡೆಸಿದರು.

೫.೨.೧. ಕೇಂದ್ರಾಡಳಿತ

ನಿಜಾಮರ ಆಡಳಿತ ವ್ಯವಸ್ಥೆಯಲ್ಲಿ ಕೇಂದ್ರಾಡಳಿತವು ಬಲಿಷ್ಠವಾಗಿತ್ತು. ಕೇಂದ್ರದ ಮುಖ್ಯಸ್ಥನಾದ ನಿಜಾಮನು, ಸಂಸ್ಥಾನದ ಸಮಸ್ತ ಅಧಿಕಾರ ತನ್ನ ಹೆಸರಿನಲ್ಲಿ ಕಾರ್ಯರೂಪಕ್ಕೆ ಬರುವಂತೆ ಮಾಡಿದ್ದನು.

ನಿಜಾಮರ ನಿರ್ಣಯವೇ ಅಂತಿಮವಾಗಿದ್ದು, ಅದು ಪ್ರಶ್ನಾರ್ಹವಾಗಿರಲಿಲ್ಲ. ಅದು ಪ್ರಶ್ನಾರ್ಹವಾದರೆ ಸಂಸ್ಥಾನದ ಸುಲ್ತಾನನನ್ನೇ ಪ್ರಶ್ನೆ ಮಾಡಿದಂತೆಂದು ಪ್ರತೀತಿಯಾಗಿತ್ತು. ಕೇಂದ್ರಾಡಳಿತದ ಕಾರ್ಯಗಳನ್ನು ಸುಗಮವಾಗಿ ನಡೆಸಲು ನಿಜಾಮನ ಅಧೀನದಲ್ಲಿ ಪ್ರಧಾನಮಂತ್ರಿ, ಮಂತ್ರಿಮಂಡಲ, ಮಂತ್ರಿಪರಿಷತ್ತು, ಕಾರ್ಯದರ್ಶಿಗಳು ಹಾಗೂ ಇತರ ಅಧಿಕಾರಿಗಳಿದ್ದರು. ಕೇಂದ್ರಾಡಳಿತದ ಅಧೀನದಲ್ಲಿ ಸುಬಾಗಳು, ಜಿಲ್ಲಾಗಳು, ತಾಲೂಕುಗಳು, ನಗರ ಆಡಳಿತ ಹಾಗೂ ಗ್ರಾಮಾಡಳಿತಗಳು ಕಾರ್ಯನಿರ್ವಹಿಸುತ್ತಿದ್ದವು. ನಿಜಾಮರ ಕೇಂದ್ರಾಡಳಿತವನ್ನು ಈ ಕೆಳಗಿನಂತೆ ವಿವರಿಸಿದೆ.

೧. **ನವಾಬ್ (ನಿಜಾಮ್)** : ನವಾಬ್ ಎಂಬ ಪದವು ಪರ್ಶಿಯನ್ ಶಬ್ದವಾಗಿದ್ದು, ಅದರ ಅರ್ಥ **"ಆಳುವ ಅಧಿಕಾರಿ"**, ರಾಜ ಎಂದಾಗುತ್ತದೆ. ಹೈದರಾಬಾದ್ ಸಂಸ್ಥಾನದ ಮುಖ್ಯಸ್ಥನನ್ನು ನವಾಬ್ ಎಂದು ಗೌರವ ಸೂಚಕವಾಗಿ ಕರೆಯುತ್ತಿದ್ದರು. ನವಾಬನನ್ನು ನಿಜಾಮ್ ಎಂದು ಕೂಡ ಕರೆಯುತ್ತಿದ್ದರು. ನಿಜಾಮ್ ಎಂದರೆ ವ್ಯವಸ್ಥಾಪಕ[೧೯], ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುವವನು, ರಕ್ಷಕ, ನಿಯಾಮಕ ಎಂದಾಗುತ್ತದೆ.[೨೦] ನಿಜಾಮನು ಸಂಸ್ಥಾನದ ಸರ್ವೋಚ್ಚ ಅಧಿಕಾರಿಯಾಗಿ, ರಾಜ್ಯದ ಅಧಿಕಾರವನ್ನೆಲ್ಲ ತನ್ನಲ್ಲಿಯೇ ಕೇಂದ್ರೀಕರಿಸಿಕೊಂಡಿದ್ದನು. ನಿಜಾಮ್ ನಿರಂಕುಶ ಪ್ರಭುವಾಗಿದ್ದರೂ ಆತನ ಆಡಳಿತವು ಪ್ರಜಾಪಾಲಕತನವನ್ನು ಸಂಕೇತಿಸುತ್ತಿತ್ತು. ಆತ ಸಂಸ್ಥಾನದ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ವಿಧೇಯಕ ಸಭೆಯ ಮುಖ್ಯಸ್ಥನಾಗಿದ್ದನು. ಹಾಗೆಯೇ ಸೈನ್ಯದ ದಂಡನಾಯಕನನ್ನು, ಸೈನ್ಯ ಅಧಿಕಾರಿ, ನ್ಯಾಯಾಧೀಶರನ್ನು ಹಾಗೂ ರಾಜ್ಯದ ಉನ್ನತ ಅಧಿಕಾರಿಗಳನ್ನು ನೇಮಕ ಮಾಡುವ ಅತಿ ಉನ್ನತ ಅಧಿಕಾರಿಯಾಗಿದ್ದನು. ಸಂಸ್ಥಾನದ ಎಲ್ಲಾ ಕಾರ್ಯಗಳು ಸುಲ್ತಾನನ ಆಜ್ಞೆಯ ಮೇರೆಗೆ ನಡೆಯುತ್ತಿದ್ದವು. ನಿಜಾಮ್ ಆಡಳಿತ ವಂಶಪಾರಂಪರೆಯಿಂದ ಕೂಡಿದ್ದು ನಿಜಾಮನ ನಂತರ ಅವನ ಹಿರಿಯ ಮಗ ಅಧಿಕಾರಕ್ಕೆ ಬರುತ್ತಿದ್ದನು. ಅಧಿಕಾರ ವಹಿಸಿಕೊಳ್ಳುವ ಪಟ್ಟಾಭಿಷೇಕ ಸಮಾರಂಭ ರಾಜಪರಿವಾರದವರು, ಸೇನಾನಿಗಳು, ಸರದಾರರು, ಜಹಗೀರದಾರರು ಮತ್ತು ಸಾಮಂತ ಅರಸರ ಸಮ್ಮುಖದಲ್ಲಿ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಸಾಮಂತ ವರ್ಗ ಹಾಜರಿದ್ದು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಕಪ್ಪಕಾಣಿಕೆ ಸಲ್ಲಿಸಿ ಅಧೀನತೆಯನ್ನು ಒಪ್ಪಿಕೊಳ್ಳುತ್ತಿತ್ತು. ಕೆಲವು ಸಂದರ್ಭದಲ್ಲಿ ಅರಸನು ತನ್ನ ಜೀವಿತ ಅವಧಿಯಲ್ಲಿಯೇ ತನ್ನ ಉತ್ತರಾಧಿಕಾರಿಯನ್ನು ನೇಮಿಸುವುದಿತ್ತು. ಸುಲ್ತಾನನ ಮರಣದ ನಂತರವೂ ಉತ್ತರಾಧಿಕಾರಿಯನ್ನು ನೇಮಕ ಮಾಡಲಾಗುತ್ತಿತ್ತು.[೨೧] ಸಂಸ್ಥಾನದಲ್ಲಿ ಸಿಂಹಾಸನಕ್ಕಾಗಿ ಕುಟುಂಬಗಳಲ್ಲಿಯೇ ಕಲಹಗಳು ನಡೆದಿತ್ತು. ನಿಜಾಮ ಕಮಾರೋದಿನ ಶಿಲಿಚಖಾನನ ನಂತರ ಉತ್ತರಾಧಿಕಾರಕ್ಕಾಗಿ ಮಗನಾದ ನಾಸಿರ್‌ಜಂಗ್ ಮತ್ತು ಮುಜಾಫರ್‌ಜಂಗ್ ಮಧ್ಯ ದೊಡ್ಡ ಕಂದಕವನ್ನೇ ಸೃಷ್ಟಿ ಮಾಡಿತು. ದಕ್ಷಿಣ ಭಾರತದಲ್ಲಿ ವಸಾಹತು ಸ್ಥಾಪಿಸಲು ಹರಸಾಹಸ ಪಡುತ್ತಿದ್ದ ಫ್ರೆಂಚರು ಮತ್ತು ಬ್ರಿಟಿಶರು ಇದರ ಲಾಭವನ್ನು ಪಡೆದರು. ಆರಂಭದಲ್ಲಿ ಫ್ರೆಂಚರು ಹೈದರಾಬಾದ್ ಸಂಸ್ಥಾನದ ಉತ್ತರಾಧಿಕಾರಿ ಕಲಹದಲ್ಲಿ ಭಾಗವಹಿಸಿ

ಮುಜಾಫರ್‌ಜಂಗ್‌ನಿಗೆ ಬೆಂಬಲಿಸುವ ನೆಪದಲ್ಲಿ ತಮ್ಮ ವಸಾಹತು ಸ್ಥಾಪಿಸಲು ಪ್ರಯತ್ನಿಸಿದರು. ಆದರೆ ಫ್ರೆಂಚರ ಬದ್ಧವೈರಿಯಾಗಿದ್ದ ಬ್ರಿಟಿಶರು ಭಾರತದಲ್ಲಿ ತಮ್ಮ ವಸಾಹತು ಸ್ಥಾಪನೆಗೆ ಅಡ್ಡಗಾಲು ಹಾಕುತ್ತಿರುವ ಫ್ರೆಂಚರನ್ನು ಸದೆಬಡಿಯಲು ನಾಸಿರ್‌ಜಂಗ್‌ನಿಗೆ ಸಹಾಯ ಮಾಡಿದರು. ನಿಜಾಮರ ಆಂತರಿಕ ಕಚ್ಚಾಟದಲ್ಲಿ ಲಾಭದ ಅವಕಾಶ ಪಡೆದ ಯುರೋಪಿನ ರಾಷ್ಟ್ರಗಳು ಸಿಂಹಾಸನ ಬಿಕ್ಕಟ್ಟು ಪರಿಹರಿಸುವ ನೆಪದಲ್ಲಿ ತಮ್ಮ ಪ್ರಭುತ್ವವನ್ನು ಗಟ್ಟಿಗೊಳಿಸಿಕೊಂಡರು.[೨೨]

೨. ದರ್ಬಾರ್: ಆಡಳಿತದ ಕೇಂದ್ರಬಿಂದುವಾದ ದರ್ಬಾರ್ ಮುಖ್ಯಸ್ಥನಾಗಿ ನಿಜಾಮ ಕಾರ್ಯ ನಿರ್ವಹಿಸುತ್ತಿದ್ದನು. ಪ್ರತಿದಿನ ಬೆಳಗಿನ ಸಮಯದಲ್ಲಿ ಸಂಸ್ಥಾನದ ಪ್ರಧಾನಮಂತ್ರಿ ನಿಜಾಮನನ್ನು ಕಂಡು ಇಡೀ ದಿನದ ಕಾರ್ಯಕ್ರಮ ಕುರಿತು ಸಂಕ್ಷಿಪ್ತ ಮಾಹಿತಿ ನೀಡಬೇಕಾಗಿತ್ತು. ಸಂಸ್ಥಾನದ ಕಾರ್ಯಾಂಗದ ವರದಿಯನ್ನು ನಿಜಾಮನಿಗೆ ಸಲ್ಲಿಸಿ ಒಪ್ಪಿಗೆ ಪಡೆಯಬೇಕಾಗಿತ್ತು. ಮಧ್ಯಾಹ್ನದ ನಂತರ ದರ್ಬಾರ್ ಜನಸಾಮಾನ್ಯರಿಂದ ತುಂಬಿದ್ದು ಅವರ ಸಮಸ್ಯೆ, ಅಹವಾಲು ಆಲಿಸುವ ಪರಿಪಾಠ ಬೆಳೆದುಕೊಂಡು ಬಂದಿತ್ತು. ಜನಸಾಮಾನ್ಯರು ದರ್ಬಾರಿಗೆ ಬಂದರೆ ನಿಜಾಮ ಮೆಹಬೂಬ ಅಲಿಖಾನನು ಜನರನ್ನು ತುಂಬ ಅಕ್ಕರೆಯಿಂದ ಕಂಡು ಅವರ ಸಮಸ್ಯೆಗಳನ್ನು ಪರಿಹರಿಸುತ್ತಿದ್ದನು. ಹಾಗಾಗಿ ಸಂಸ್ಥಾನದ ಜನತೆ ಇವನನ್ನು ಹಿಂದೂ ಮುಸ್ಲಿಮರ ಕಣ್ಮಣಿಯೆಂದು ಬಣ್ಣಿಸುತ್ತಿದ್ದರು. ಅವನ ನಂತರ ಅಧಿಕಾರಕ್ಕೆ ಬಂದ ಉಸ್ಮಾನ್ ಅಲಿಖಾನನ ಅವಧಿಯಲ್ಲೂ ಇದೇ ಪದ್ಧತಿ ಮುಂದುವರೆಯಿತು. ಪ್ರತಿ ಶುಕ್ರವಾರದಂದು ದರ್ಬಾರದಲ್ಲಿ ಯಾವುದೇ ಕಾರ್ಯ ಕಲಾಪಗಳು ನಡೆಯುತ್ತಿರಲ್ಲಿಲ್ಲ.[೨೩] ಅಂದು ನಿಜಾಮನು ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದು ದರ್ಬಾರಿಗೆ ರಜೆ ದಿನವಾಗಿತ್ತು. ಆಡಳಿತದ ಯಾವುದೇ ಮಹತ್ವದ ವಿಷಯವನ್ನು ಚರ್ಚಿಸಲು ದರ್ಬಾರದಲ್ಲಿ ನಿಜಾಮನ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತಿತ್ತು. ಈ ಸಭೆಯಲ್ಲಿ ಪ್ರಧಾನಮಂತ್ರಿ, ಮಂತ್ರಿಮಂಡಲ ಮತ್ತು ಸಲಹಾ ಸಮಿತಿ ಸದಸ್ಯರು ಭಾಗವಹಿಸಿ ಸಂಸ್ಥಾನದ ಆಡಳಿತಕ್ಕೆ ಅನುಕೂಲಕರವಾದ ರೀತಿಯಲ್ಲಿ ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ನಿಜಾಮನ ದರ್ಬಾರದಲ್ಲಿ ಸಂಸ್ಥಾನದ ಸಾಮಂತ ಅರಸರು, ಜಹಗೀರದಾರರು, ಇನಾಮದಾರರು, ಅಧಿಕಾರಿಗಳು ಹಾಗೂ ಇತರ ಪ್ರಮುಖ ವ್ಯಕ್ತಿಗಳು ಭಾಗವಹಿಸುತ್ತಿದ್ದರು. ಚರ್ಚಿತ ವಿಷಯದ ಅಂತಿಮ ನಿರ್ಧಾರವನ್ನು ಪ್ರಕಟಿಸುವ ಅಧಿಕಾರ ನಿಜಾಮನಿಗೆ ಮಾತ್ರ ಇರುತ್ತಿತ್ತು. ಯಾವುದೇ ಅಹಿತಕರ ಘಟನೆಗಳಿಗೆ ಸಂಸ್ಥಾನ ಸಿಲುಕಿಕೊಂಡಾಗ ನಿಜಾಮನ ಸಲಹೆಯಂತೆ ಪ್ರಧಾನಮಂತ್ರಿ ವಿಶೇಷ ಸಭೆಯನ್ನು ಕರೆಯುತ್ತಿದ್ದನು. ಆಡಳಿತ ಉತ್ತಮ ರೀತಿಯಲ್ಲಿ ಸಾಗಲು ನಿಜಾಮನು ದರ್ಬಾರಿನ ಕಾರ್ಯಕಲಾಪವನ್ನು ಸುಗಮವಾಗುವ ಹಾಗೆ ನೋಡಿಕೊಳ್ಳುತ್ತಿದ್ದನು.[೨೪]

ನಿಜಾಮನು ಸಹಾಯಕ ಸೈನ್ಯ ಪದ್ಧತಿಯನ್ನು ಸ್ವೀಕರಿಸಿದ ನಂತರ ದರ್ಬಾರದಲ್ಲಿ ಸುಲ್ತಾನನಿಗೆ ಸರಿಸಮಾನವಾದ ಆಸ್ಥಾನದಲ್ಲಿ ಬ್ರಿಟಿಶ್ ರೆಸಿಡೆಂಟ್‌ನು ಆಸೀನನಾಗಲು ವ್ಯವಸ್ಥೆ ಮಾಡಬೇಕಾಯಿತು. ದರ್ಬಾರದಲ್ಲಿ ನಡೆಯುವ ಪ್ರತ್ಯಕ್ಷ ಹಾಗೂ ಪರೋಕ್ಷ ಚರ್ಚೆಯಲ್ಲಿ ರೆಸಿಡೆಂಟನು ಭಾಗವಹಿಸುತ್ತಿದ್ದನು.

ಬ್ರಿಟಿಶ್ ವಿರೋಧಿ ಚರ್ಚೆಯನ್ನು ಮೊಟಕುಗೊಳಿಸುವ ಅಧಿಕಾರ ಹೊಂದಿದ್ದನು ಹಾಗೂ ವಸಾಹತುಶಾಹಿ ನೀತಿಗೆ ಅನುಗುಣವಾಗಿ ಅನುಕೂಲಕರವಾಗಿದ್ದರೆ ಮಾತ್ರ ಮಾನ್ಯ ಮಾಡುತ್ತಿದ್ದನು. ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡು ನಿಜಾಮನು ತನ್ನ ಸ್ವಾತಂತ್ರ್ಯವನ್ನು ಬ್ರಿಟಿಶರಿಗೆ ಒತ್ತೆಯಿಟ್ಟದ್ದನು.[೨೫]

೩. ಕಾನೂನ್ಚೆ ಮುಬಾರಕ್: ೧೮೬೯ರಲ್ಲಿ ತನ್ನ ತಂದೆಯ ಮರಣದ ನಂತರ ನಿಜಾಮ ಮೆಹಬೂಬ ಅಲಿಖಾನ ಬಹದ್ದೂರನು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಸಂಸ್ಥಾನದ ರಾಜಕೀಯ ಪರಿಸ್ಥಿತಿ ತುಂಬಾ ಸಂದಿಗ್ಧ ಸ್ಥಿತಿಯಲ್ಲಿತ್ತು.[೨೬] ಪ್ರಧಾನಮಂತ್ರಿ ಮೊದಲನೆಯ ಸಾಲಾರ್‌ಜಂಗ್ ಮತ್ತು ಆತನ ಮಗನಾದ ಎರಡನೆಯ ಸಾಲಾರ್‌ಜಂಗ್‌ನ ಅಧಿಕಾರಾವಧಿಯಲ್ಲಿ ಸಂಸ್ಥಾನದಲ್ಲಿದ್ದ ವೈಯಕ್ತಿಕ ಕಾನೂನಿನ ಆಡಳಿತವನ್ನು ಶಾಸನಬದ್ಧಗೊಳಿಸಿದ ಪ್ರಯತ್ನ ಅತ್ಯಂತ ಮಹತ್ವದ್ದಾಗಿದೆ. ಈ ಶಾಸನ ಜಾರಿಗೆ ಬರುವ ಮುನ್ನ ಸಂಸ್ಥಾನದ ದಿವಾನರು, ದೇಶಮುಖ, ಸರದೇಶಮುಖ, ದೇಶಪಾಂಡೆ ಮುಂತಾದವರು ಆಡಳಿತದ ಜೊತೆಗೆ ಕಂದಾಯ ವಸೂಲಿ ಮಾಡುವ ಕಾರ್ಯದಲ್ಲಿ ತಲ್ಲೀನರಾಗಿದ್ದರು. ಕಂದಾಯ ವಸೂಲಿ ಮಾಡುತ್ತಿದ್ದ ಅಧಿಕಾರಿ ವರ್ಗ ನಿಗದಿತ ಕಂದಾಯವನ್ನು ಸರ್ಕಾರಕ್ಕೆ ಒಪ್ಪಿಸಿ ತಮ್ಮ ಲಾಭಕ್ಕಾಗಿ ಹೆಚ್ಚುವರಿ ತೆರಿಗೆ ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದರು. ಅಧಿಕಾರಿಗಳು ಸರಕಾರದ ಹೆಸರಿನಲ್ಲಿ ತಮ್ಮ ವೈಯಕ್ತಿಕ ಹಿತ ಸಾಧನೆಗಾಗಿ ಅಧಿಕಾರ ದುರುಪಯೋಗ ಪಡಿಸಿಕೊಳ್ಳುತ್ತಿದ್ದುದನ್ನು ಮನಗಂಡ ಒಂದನೆಯ ಸಾಲಾರ್‌ಜಂಗ್‌ನು ಜಿಲ್ಲಾಬಂಧಿ ಎಂಬ ಕಾಯಿದೆಯನ್ನು ಜಾರಿಗೆ ತಂದನು. ಇಲ್ಲಿಯವರೆಗೆ ತೆರಿಗೆ ವಸೂಲಿ ಮಾಡುತ್ತಿದ್ದ ಆಡಳಿತ ವರ್ಗದ ಅಧಿಕಾರವನ್ನು ಮೊಟಕುಗೊಳಿಸಿ ಹೊಸ ಆಡಳಿತ ವರ್ಗವನ್ನು ಅವನು ಹುಟ್ಟುಹಾಕಿದನು. ಆ ಆಡಳಿತ ವರ್ಗ ತಾಲೂಕದಾರ, ಅವಲ್ ತಾಲೂಕದಾರ, ಎರಡನೆ ತಾಲೂಕದಾರ ಹಾಗೂ ತಹಶೀಲ್ದಾರ ಅಧಿಕಾರಿಗಳಿಂದ ಕೂಡಿತ್ತು. ಈ ಅಧಿಕಾರಿಗಳಿಗೆ ತೆರಿಗೆ ವಸೂಲಿ ಮಾಡುವುದರ ಜೊತೆಗೆ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಲಾಯಿತು. ಹೀಗೆ ಒಂದನೆಯ ಸಾಲಾರ್‌ಜಂಗ್‌ನು ಕಂದಾಯ, ಆಡಳಿತ, ಪೊಲೀಸ್ ಇಲಾಖೆ, ಲೋಕೋಪಯೋಗಿ ಇಲಾಖೆಗಳ ಆಡಳಿತವನ್ನು ಶಾಸನಬದ್ಧಗೊಳಿಸಲು ಯತ್ನಿಸಿದನು. ಈ ಸಮಯದಲ್ಲಿ ಅಧಿಕಾರಕ್ಕೇರಿದ ಮೆಹಬೂಬ ಅಲಿಖಾನನು ಸಂಸ್ಥಾನದ ಸಾಂಪ್ರದಾಯಿಕ ಆಡಳಿತ ಪದ್ಧತಿಯ ಜೊತೆಗೆ ಪ್ರಧಾನಮಂತ್ರಿ ಒಂದನೆಯ ಸಾಲಾರ್‌ಜಂಗ್ ಜಾರಿಗೆ ತಂದಿದ್ದ ಆಡಳಿತಾತ್ಮಕ ಸುಧಾರಣೆಗಳಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಿ ಹೊಸ ಕಾನೂನುಬದ್ಧ ಆಡಳಿತ ನೀತಿಯನ್ನು ಜಾರಿಗೆ ತಂದನು.[೨೭] ಬ್ರಿಟಿಶ್ ಭಾರತದ ಸಂಸ್ಥಾನಗಳಲ್ಲಿ ಈಗಾಗಲೇ ಇಂತಹ ಪ್ರಯತ್ನಗಳು ಸಾಕಷ್ಟು ನಡೆದಿದ್ದವು. ಬ್ರಿಟಿಶರು ತಮ್ಮ ವಸಾಹತು ನೀತಿಯನ್ನು ಬಲಿಷ್ಠಗೊಳಿಸುವ ತವಕದಲ್ಲಿ ಹೊಸ ಕಾಯಿದೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದರು. ಈ ಕಾಯಿದೆಗಳು ಸಂಸ್ಥಾನಗಳ ಮೇಲೆ ಪ್ರಭಾವ ಬೀರಿ ಬ್ರಿಟಿಶ್ ಕಾಯಿದೆಗಳಿಗೆ ಅನುಗುಣವಾಗಿ ಸಂಸ್ಥಾನಗಳೂ

ತಮ್ಮ ಆಡಳಿತದಲ್ಲಿ ಸುಧಾರಣೆ ತರುವುದು ರೂಢಿಯಾಗತೊಡಗಿತು. ಇದರಿಂದ ಬ್ರಿಟಿಶರಿಗೆ ಭಾರತದ ಸಂಸ್ಥಾನಗಳ ಮೇಲೆ ತಮ್ಮ ಹಿಡಿತ ಸಾಧಿಸುವ ಹಾದಿ ಸುಗಮವಾಯಿತು. ಹೈದರಾಬಾದ್ ಸಂಸ್ಥಾನ ಇದರಿಂದ ಹೊರತಾಗಿರಲಿಲ್ಲ.[೨೮] ಮೆಹಬೂಬ ಅಲಿಖಾನನು ೧೮೯೩ರಲ್ಲಿ ಜಾರಿಗೆ ತಂದ "ಕಾನೊನ್ಚೆ ಮುಬಾರಕ್" ಎಂಬ ಹೊಸ ಕಾಯಿದೆ ಆಡಳಿತದಲ್ಲಿ ಹೊಸ ಸುಧಾರಣೆ ತರುವ ಮೂಲಕ ಜನಸಾಮಾನ್ಯರ ಹಿತ ಕಾಪಾಡುವ ಭರವಸೆ ಮೂಡಿಸಿತು ಮತ್ತು ಕ್ಯಾಬಿನೆಟ್ ಕೌನ್ಸಿಲ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗಳ ರಚನೆಗೆ ಭದ್ರ ಬುನಾದಿ ಹಾಕಿತು.[೨೯]

ಕಾನೊನ್ಚೆ ಮುಬಾರಕ್ ಕಾಯಿದೆಯಲ್ಲಿ ಕಾಲಕ್ಕನುಗುಣವಾದ ತಿದ್ದುಪಡಿ ಮಾಡಿಕೊಳ್ಳುವ ಅವಕಾಶ ಒದಗಿಸಿರುವ ನಿಯಮ ಅಸಮಂಜಸವಾಗಿರುವುದನ್ನು ಮನಗಂಡು ೨೬ ರಬಿ-ಉಸ್-ಸನಿ ೧೩೧೯ ಹಿಜರಿ (೧೯೦೨)ರಂದು ತಿದ್ದುಪಡಿ ಮಾಡಿದ ನೀತಿನಿಯಮಗಳನ್ನು ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಯಿತು. ೧. ಮಂತ್ರಿ ಪರಿಷತ್ತು, ೨. ಮಂತ್ರಿಗಳು ೩. ಸಹಾಯಕ ಮಂತ್ರಿಗಳು ಮತ್ತು ೪. ಕಾರ್ಯದರ್ಶಿಗಳು. ಇಲ್ಲಿಯವರೆಗೆ ಜಾರಿಯಲ್ಲಿದ್ದ ನಿಯಮಗಳನ್ನು ತಿದ್ದುಪಡಿಗೆ ಒಳಪಡಿಸಿದ್ದರಿಂದ, ತಿದ್ದುಪಡಿಯಾದ ಹೊಸ ಕಾಯಿದೆ ಜಾರಿಗೆ ತರುವ ಕ್ರಮವನ್ನು ಪ್ರತಿಪಾದಿಸಲಾಯಿತು. ಮಂತ್ರಿ ಪರಿಷತ್ತು ಕುರಿತ ನಿಯಮವೆಂದರೆ ಪ್ರಧಾನ ಮಂತ್ರಿಯ ನೇತೃತ್ವದಲ್ಲಿ ಪ್ರತಿ ತಿಂಗಳು ಸಭೆ ಸೇರಿ ಚರ್ಚಿಸಿದ ವಿಷಯವನ್ನು ಒಮ್ಮತದ ನಿರ್ಧಾರದ ಮೂಲಕ ನಿಜಾಮನ ಒಪ್ಪಿಗೆಗೆ ಶಿಫಾರಸು ಮಾಡುವುದು: ಮಂತ್ರಿಮಂಡಲ ಕೈಗೊಂಡ ಕಾಯಿದೆ ಕಾನೂನುಗಳನ್ನು ಸಮರ್ಥವಾಗಿ ಜಾರಿಗೆ ತರಲು ಪ್ರತಿಯೊಬ್ಬ ಮಂತ್ರಿಗೂ ಸಹಾಯಕ ಸಚಿವ ಮತ್ತು ಕಾರ್ಯದರ್ಶಿಯನ್ನು ನೇಮಿಸುವುದಾಗಿದೆ.[೩೦]

ಕಾನೊನ್ಚೆ ಮುಬಾರಕ್ ಕಾಯಿದೆಗನುಸಾರವಾಗಿ ಸ್ಥಾಪಿತವಾದ ಕಾಯಿದೆ ಮಂಡಲ ಅಥವಾ ವಿಧಾನ ಪರಿಷತ್ತು ಹೆಚ್ಚು ಕಡಿಮೆ ಹೈದ್ರಾಬಾದ್ ಸಂಸ್ಥಾನ ಭಾರತದಲ್ಲಿ ವಿಲೀನವಾಗುವವರೆಗೂ ಅದೇ ಮಾದರಿಯಲ್ಲಿ ಕೆಲಸ ಮಾಡುತ್ತಿತ್ತು. ಕಾನೊನ್ಚೆ ಮುಬಾರಕ್ ಕಾಯಿದೆ ಬಹುತೇಕ ಬ್ರಿಟಿಶ್ ನೀತಿಗಳನ್ನು ಅಳವಡಿಸಿಕೊಂಡು ದೇಶಿಯ ನೆಲೆಯಲ್ಲಿ ರೂಪಿತವಾದುದಾಗಿತ್ತು.[೩೧]

೪. ಮಂತ್ರಿಮಂಡಲ(ಬಾಬೆ ಹುಕೂಮತ್) ನಿಜಾಮನು ಅತ್ಯಂತ ಹೆಚ್ಚಿನ ಅಧಿಕಾರವನ್ನು ಹೊಂದಿದ್ದರೂ ಸಂಸ್ಥಾನದ ಆಡಳಿತ ವ್ಯವಸ್ಥೆಯನ್ನು ಒಂಟಿಯಾಗಿ ನಿರ್ವಹಿಸಲು ಸಾಧ್ಯವಿರಲಿಲ್ಲ. ಒಂದನೆಯ ಸಾಲಾರ್‌ಜಂಗ್‌ನು ತನ್ನ ಅಧಿಕಾರಾವಧಿಯಲ್ಲಿ ಮಂತ್ರಿಮಂಡಲವನ್ನು ಕಾನೂನುಬದ್ಧವಾಗಿ ಬಲಪಡಿಸಲು ಯತ್ನಿಸಿದನು.[೩೨] ಆದರೆ ಬ್ರಿಟಿಶರು ಮಂತ್ರಿಮಂಡಲ ರಚಿಸಲು ಒಪ್ಪಿಗೆ ನೀಡದಿದ್ದರೂ ನಂತರ ಅಧಿಕಾರಕ್ಕೆ ಬಂದ ನಿಜಾಮ ಮೆಹಬೂಬ ಅಲಿಖಾನ್ ಬಹಾದ್ದೂರನು ಸಾಲಾರ್‌ಜಂಗ್‌ನ ಪ್ರಯತ್ನ ಬಲಪಡಿಸುವ ನಿಟ್ಟಿನಲ್ಲಿ ೧೮೯೩ರಲ್ಲಿ ಕಾನೊನ್ಚೆ ಮುಬಾರಕ್ ಕಾಯಿದೆಯಡಿ ಕಾನೂನುಬದ್ಧ

ಮಂತ್ರಿಮಂಡಲ ಕಾರ್ಯರೂಪಕ್ಕೆ ಬರುವಂತೆ ಮಾಡಿದನು. ಇದು ನಿಜಾಮ ಪ್ರಭುತ್ವಕ್ಕೆ ಅಧೀನವಾಗಿ ಕೆಲಸ ಮಾಡುತ್ತಿತ್ತು. ಇದರ ಸದಸ್ಯರನ್ನು ನೇಮಿಸುವ ಹಾಗೂ ತೆಗೆದು ಹಾಕುವ ಅಂತಿಮ ಅಧಿಕಾರ ನಿಜಾಮನ ಅಧೀನದಲ್ಲಿತ್ತು. ಮಂತ್ರಿಮಂಡಲವು ಸಂಸ್ಥಾನದ ಯಾವುದೇ ವಿಷಯವನ್ನು ಕುರಿತು ಅದರ ಸಾಧಕ-ಬಾಧಕ ಚರ್ಚಿಸಿ ನಿಜಾಮನಿಗೆ ಸಲಹೆ ನೀಡುತ್ತಿತ್ತು.[೩೩]

ಕಾನೊನ್ಚೆ ಮುಬಾರಕ್ ಕಾಯಿದೆಯ ಮೂರನೆಯ ಕಲಮಿನಲ್ಲಿ ಕ್ಯಾಬಿನೆಟ್ ಕೌನ್ಸಿಲ್ ಎಂದರೆ ಮಂತ್ರಿಮಂಡಲವನ್ನು ಕುರಿತಿದೆ. ನಿಜಾಮ ಪ್ರಭುಗಳ ಆಜ್ಞೆಗನುಸಾರ ಸಂಸ್ಥಾನದ ರಾಜ್ಯಾಡಳಿತವನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವುದು, ಪ್ರಧಾನ ಮಂತ್ರಿಯ ನೇತೃತ್ವದಲ್ಲಿ ಸಭೆ ಸೇರುವುದು, ಆಡಳಿತಕ್ಕೆ ಸಂಬಂಧಿಸಿದ ಕಾಯಿದೆಯನ್ನು ಕೂಲಂಕಶವಾಗಿ ಚರ್ಚಿಸುವುದು, ಮಂತ್ರಿಮಂಡಲದ ಸದಸ್ಯರ ಸಲಹೆ ಪಡೆದ ಕಾಯಿದೆಗೆ ಪ್ರಧಾನಮಂತ್ರಿ ಒಪ್ಪಿಗೆ ನೀಡುವುದು, ಒಪ್ಪಿತ ಕಾಯಿದೆಯನ್ನು ಕಾರ್ಯರೂಪಕ್ಕೆ ತರಲು ನಿಜಾಮ್ ಪ್ರಭುತ್ವದ ಒಪ್ಪಿಗೆಗಾಗಿ ಕಿಂಗ್ ಕೊಠಿಗೆ ಕಳುಹಿಸಬಹುದೆಂದು ವರ್ಣಿಸಲಾಗಿದೆ. ಕಾನೂನ್ಚೆ ಮುಬಾರಕ್ ಕಾಯಿದೆ ಮಂತ್ರಿಮಂಡಲವನ್ನು ವರ್ಣಿಸಿರುವ ಕ್ರಮ ನೋಡಿದಾಗ ನಿಜಾಮರು ಸಂಸ್ಥಾನದ ಆಡಳಿತವನ್ನು ಉತ್ತಮಗೊಳಿಸಲು ಮಾಡಿರುವ ಪ್ರಯತ್ನ ಕಂಡುಬರುತ್ತದೆ.[೩೪] ಕಾಯಿದೆಯನುಸಾರ ಸ್ಥಾಪಿತವಾದ ಮಂತ್ರಿಮಂಡಲವನ್ನು ಬಾಚಿ ಹುಕೂಮತ್ ಎಂದು ಕರೆಯಲಾಯಿತು. ಈ ನಂತರ ಉಸ್ಮಾನ್ ಅಲಿಖಾನನು ಆಡಳಿತದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದನು. ಅದರನ್ವಯ ೧೯೧೬ ರಿಂದ ೧೯೨೧ರವರೆಗೆ ಮಂತ್ರಿಮಂಡಲವನ್ನು ನಿಷ್ಕ್ರಿಯಗೊಳಿಸಿ ಪ್ರಧಾನಮಂತ್ರಿಯ ಎಲ್ಲ ಅಧಿಕಾರವನ್ನು ತಾನೇ ಚಲಾಯಿಸಿದನು. ಸಂಸ್ಥಾನದ ಆಡಳಿತ ಯಂತ್ರ ಸಂಪೂರ್ಣ ಕುಸಿದು ನಿಜಾಮ್ ಉಸ್ಮಾನ್ ಅಲಿಖಾನನು ಆಡಳಿತದಲ್ಲಿ ವಿಫಲತೆ ಅನುಭವಿಸಿದನು. ಇದನ್ನು ಕೂಡಲೇ ಮನಗೊಂಡು ೧೩೨೯ನೇ ಫಸಲಿ ಅಂದರೆ ೧೯೨೦ರಲ್ಲಿ ಹೊರಡಿಸಿದ ಆದೇಶ ಮೂಲಕ ಮತ್ತೆ ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲವನ್ನು ಕ್ರಿಯಾಶೀಲಗೊಳಿಸಿದನು. ೧೯೨೦ರ ತಿದ್ದುಪಡಿ ಮೂಲಕ ಕಾನೂನುಬದ್ಧ ಕಾರ್ಯಕಾರಿ ಸಮಿತಿ ರಚಿಸಿದನು.[೩೫] ಕಾರ್ಯಕಾರಿ ಸಮಿತಿಯ ವಿವರ ಈ ಕೆಳಗಿನಂತಿದೆ.

೫. ಕಾರ್ಯಕಾರಿ ಸಮಿತಿ: ನಿಜಾಮ ಉಸ್ಮಾನ್ ಅಲಿಖಾನ್ ಬಹದ್ದೂರ್ ಪಟ್ಟವೇರಿದ ನಂತರ ತನ್ನ ತಂದೆ ಜಾರಿಗೆ ತಂದಿದ್ದ ಕಾನೊನ್ಚೆ ಮುಬಾರಕ್‌ಗೆ ಅನುಗುಣವಾಗಿ ತನ್ನ ಅಧಿಕಾರವನ್ನು ಚಲಾಯಿಸಿದನು. ಸಂಸ್ಥಾನದಲ್ಲಾದ ಆಡಳಿತ ಸುಧಾರಣೆಯ ಫಲವಾಗಿ ಕಾನೊನ್ಚೆ ಮುಬಾರಕ್ ಕಾಯಿದೆ ಸಾಂಪ್ರದಾಯಿಕ ರೂಪ ಪಡೆದುಕೊಂಡಿತು. ಸಂಪೂರ್ಣ ತಿದ್ದುಪಡಿಗೆ ಒಳಪಡಿಸಲಾದ ಕಾನೊನ್ಚೆ ಮುಬಾರಕ್ ಕಾಯಿದೆ ಹೊಸ ಚಹರೆಯೊಂದಿಗೆ ೧೯೧೯ರಲ್ಲಿ ಹೊಸ ಸಂವಿಧಾನದ

ಹೆಸರಿನಲ್ಲಿ ಕಾರ್ಯಾರಂಭ ಮಾಡಿತು. ನಿಜಾಮ ಉಸ್ಮಾನ ಅಲಿಖಾನನು ಜಾರಿಗೆ ತಂದ ಹೊಸ ಸಂವಿಧಾನವು ಚಾಲ್ತಿಯಲ್ಲಿದ್ದ ಮಂತ್ರಿಮಂಡಲವನ್ನು ನವೆಂಬರ್ ೧೭, ೧೯೧೯ ರಂದು ರದ್ದುಪಡಿಸಿತು. ಸಂಸ್ಥಾನದ ಆಡಳಿತ ನಿರ್ವಹಣೆ ಮಾಡಲು ಮಂತ್ರಿಮಂಡಲ ಸ್ವರೂಪದ ಕಾರ್ಯಕಾರಿ ಸಮಿತಿಯನ್ನು ನೇಮಿಸಿದನು.[೩೬]

ಕಾರ್ಯಕಾರಿ ಸಮಿತಿಯು ನಿಜಾಮ್ ಸರಕಾರ ಉತ್ತಮ ರೀತಿಯಲ್ಲಿ ಕೆಲಸ ಮಾಡಲು ಸಲಹೆ ಸೂಚನೆಯನ್ನು ನೀಡುತ್ತಿತ್ತು. ಪ್ರಧಾನ ಮಂತ್ರಿಯ ನೇತೃತ್ವದಲ್ಲಿ ಹುಟ್ಟಿಕೊಂಡ ಕಾರ್ಯಕಾರಿ ಸಮಿತಿಯು ಒಬ್ಬ ಉಪಾಧ್ಯಾಯ ಹಾಗೂ ಎಂಟು ಸದಸ್ಯರನ್ನು ಒಳಗೊಂಡಿತ್ತು. ಸಮಿತಿಯ ಕಾರ್ಯವೈಖರಿಯನ್ನು ದಾಖಲಿಸುವುದು ಮತ್ತು ಅವನ್ನು ದಾಖಲೆರೂಪದಲ್ಲಿ ಕಾರ್ಯಗತ ಗೊಳಿಸುವುದು ಕಾರ್ಯಕಾರಿ ಸಮಿತಿಯ ಖಾಯಂ ಸದಸ್ಯನಾಗಿದ್ದ ಸದರ–ಉಲ್–ಮಹಮ್ಸ್ ಏಕ್ತೆಯಿಸಾಸಿಯ ಕೆಲಸವಾಗಿತ್ತು.

ಕಾರ್ಯಕಾರಿ ಸಮಿತಿ

ಸದರ್–ಇ–ಅಜಾಮ್ (ಅಧ್ಯಕ್ಷರು)

|

ನಬೀ ಸದರ್–ಇ–ಅಜಾಮ್ (ಉಪಾಧ್ಯಕ್ಷರು)

|

ಸದರ್–ಉಲ್–ಮಹಮ್ಸ್ (ಸದಸ್ಯರು)

೧. ಹಣಕಾಸು ಇಲಾಖೆ

೨. ನ್ಯಾಯಾಂಗ ಇಲಾಖೆ

೩. ಸೈನಿಕ ಇಲಾಖೆ

೪. ಕಂದಾಯ ಇಲಾಖೆ

೫. ರಾಜಕೀಯ ಇಲಾಖೆ

೬. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

೭. ಸಾರ್ವಜನಿಕ ಇಲಾಖೆ

೮. ಶಿಕ್ಷಣ, ಪೊಲೀಸ್, ನ್ಯಾಯ

|

೯. ಸದರ್–ಉಲ್–ಮಹಮ್ಸ್ ಏಕ್ತೆಯಿಸಾಸಿ (ಅಸಾಮಾನ್ಯ ಸದಸ್ಯ)

೧. ದಾಖಲೆ ಮತ್ತು ಮಾಹಿತಿ

ಕಾರ್ಯಕಾರಿ ಸಮಿತಿಯ ಅಧ್ಯಕ್ಷ ಸ್ಥಾನ ವಹಿಸಿದ್ದ ಪ್ರಧಾನಮಂತ್ರಿಯನ್ನು ಸದರ್-ಇ-ಅಜಾಮ್ ಎಂದು ಕರೆಯುತ್ತಿದ್ದರು. ಅಧ್ಯಕ್ಷರು ಅನುಪಸ್ಥಿತಿಯಲ್ಲಿ ಕಾರ್ಯ ಸುಗಮವಾಗಿ ನಡೆಯುವ ಉದ್ದೇಶದಿಂದ ನಬೀ ಸದರ್-ಇ-ಅಜಾಮ್ ಎಂಬ ಉಪಾಧ್ಯಕ್ಷನನ್ನು ನೇಮಿಸಿತು. ಈ ಸಮಿತಿಯ ಸದಸ್ಯರನ್ನು ಸದರ್-ಉಲ್-ಮಹಮ್ಸ್ ಎಂದು ಕರೆಯುತ್ತಿದ್ದರು. ಸಂಸ್ಥಾನದ ಸಂವಿಧಾನಾತ್ಮಕ ಸಮಿತಿಯಾಗಿ ಆಡಳಿತ ಕ್ರಮದಲ್ಲಿ ಭಾಗವಹಿಸುವ ಉದ್ದೇಶವನ್ನು ಸಮಿತಿ ಹೊಂದಿತ್ತು.[೩೬]

೧. **ಪ್ರಧಾನ ಮಂತ್ರಿ:** ನಿಜಾಮರು ಮೊಗಲ್ ಆಡಳಿತ ಪದ್ಧತಿಯಂತೆ ಪ್ರಧಾನ ಮಂತ್ರಿಯನ್ನು ದಿವಾನ ಎಂದು ಕರೆಯುತ್ತಿದ್ದರು. ಹೈದರಾಬಾದ್ ಸಂಸ್ಥಾನದ ಮೊದಲ ದಿವಾನ ರಾಜಾ ರಘುನಾಥದಾಸ. ನಿಜಾಮನು ಆಡಳಿತದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಲು ಆರಂಭಿಸಿದ್ದು ಮತ್ತು ಸಹಾಯಕ ಸೈನ್ಯ ಪದ್ಧತಿಯಡಿ ಬ್ರಿಟಿಶ್ ಮಾದರಿ ಆಡಳಿತ ಅಳಡಿಸಿಕೊಳ್ಳತೊಡಗಿದ್ದು ಆಧುನಿಕತೆ ಕಡೆಗಿಟ್ಟ ಹೆಜ್ಜೆಯಾಗಿತ್ತು. ಸಂಸ್ಥಾನದ ಆಡಳಿತವನ್ನು ಉತ್ತಮಪಡಿಸಲು ಅನೇಕ ಪ್ರಧಾನಮಂತ್ರಿಗಳು ಸೇವೆ ಸಲ್ಲಿಸಿದ್ದಾರೆ. ತಾನು ಮುಸ್ಲಿಂ ನಿಜಾಮನಾಗಿದ್ದರೂ ತನ್ನ ಸಂಸ್ಥಾನದ ಪ್ರಧಾನಮಂತ್ರಿಗಳನ್ನಾಗಿ ಅನೇಕ ಹಿಂದೂ ಧರ್ಮಕ್ಕೆ ಸೇರಿದ ಪಂಡಿತರನ್ನು ನೇಮಿಸಿಕೊಂಡಿದ್ದನು. ಅವರೂ ಆಡಳಿತದಲ್ಲಿ ಸುಧಾರಣೆ ತರಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಪ್ರಧಾನ ಮಂತ್ರಿಗಳಾಗಿ ಸೇವೆ ಸಲ್ಲಿಸಿದ ಹಿಂದೂ ಪಂಡಿತರಲ್ಲಿ ರಾಜಾ ರಘುನಾಥದಾಸ್, ರಾಜಾ ಪ್ರತಾಪ ವನ್ಸ, ರಾಜಾ ಚಂದೋಲಾಲ್, ಗಣೇಶ ಹಾಗೂ ಕಿಷನ್ ಪ್ರಸಾದ್ ಪ್ರಮುಖರಾಗಿದ್ದಾರೆ.[೩೮]

ಪ್ರಧಾನಮಂತ್ರಿಯಾಗಿ ಆಡಳಿತದಲ್ಲಿ ಪ್ರಮುಖ ಸುಧಾರಣೆ ತಂದು ಆಡಳಿತ ಯಂತ್ರವನ್ನು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ ದಕ್ಷ ಆಡಳಿತಗಾರ, ಚತುರ, ಮಹಾನ್ ವಿದ್ಯಾವಂತ ಮೊದಲನೆಯ ಸಾಲಾರ್‌ಜಂಗ್‌ನ ೧೮೫೩ ರಿಂದ ೧೮೮೧ರವರೆಗಿನ ಅವಧಿಯನ್ನು ಸುಧಾರಣೆಯ ಅವಧಿಯೆಂದು ಕರೆಯಬಹುದು.[೩೯] ಸಾಲಾರ್‌ಜಂಗ್‌ನು ಚಾಲ್ತಿಯಲ್ಲಿದ್ದ ಸಾಂಪ್ರದಾಯಿಕ ಆಡಳಿತ ಪದ್ಧತಿಯನ್ನು ಬ್ರಿಟಿಶ್ ಆಡಳಿತ ಪದ್ಧತಿಯೊಂದಿಗೆ ಸಮ್ಮಿಶ್ರಗೊಳಿಸಿ ಹೊಸ ನಿಯಮಗಳನ್ನು ರೂಢಿಗೆ ತಂದನು. ಅವು ರಾಜ್ಯದ ವಿಂಗಡಣೆಯನ್ನೂ ಒಳಗೊಂಡಿವೆ.[೪೦] ಗುತ್ತೇದಾರಿ ಪದ್ಧತಿಯ ಮೂಲಕ ತೆರಿಗೆ ವಸೂಲಿ ಮಾಡುತ್ತಿದ್ದ ಅನಿಷ್ಟ ಪದ್ಧತಿಯನ್ನು ರದ್ದುಗೊಳಿಸಿದನು. ತೆರಿಗೆ ವಸೂಲಿ ಮಾಡುತ್ತಿದ್ದ ಜಮಿನ್ದಾರರು, ಜಹಗೀರ್‌ದಾರರು, ಭೂಮಾಲೀಕರು ಮತ್ತು ಆಡಳಿತ ಅಧಿಕಾರಿಗಳು ಗುತ್ತೇದಾರಿ ರೈತರಲ್ಲಿ ಹೆಚ್ಚಿನ ತೆರಿಗೆಯನ್ನು ವಿಧಿಸುತ್ತಿದ್ದರು.[೪೧] ಸಾಲಾರ್‌ಜಂಗ್‌ನು ಈ ಪದ್ಧತಿಯನ್ನು ನಿರ್ಮೂಲನೆ ಮಾಡಿ, ಅದರ ಸ್ಥಾನದಲ್ಲಿ ತಾಲೂಕುದಾರ, ತಹಶೀಲ್ದಾರ ಎಂಬ ಅಧಿಕಾರಿಗಳನ್ನು ನೇಮಿಸಿದನು.[೪೨]

ಸಾಲಾರ್‌ಜಂಗ್‌ನು ಜಹಗೀರ್‌ದಾರ, ಇನಾಮ್‌ದಾರ ಮತ್ತು ಪೈಗಾದಾರ ಪದ್ಧತಿಯನ್ನು ಪರಿಶೀಲಿಸಿ "ದರಿಯಾಫ್ ಇನಾಮತ್" ಎಂಬ ಪ್ರತ್ಯೇಕ ಇಲಾಖೆ ಆರಂಭಿಸಿದನು.[೪೩] ಕಂದಾಯ ಆಡಳಿತದಲ್ಲಿ ಮಣ್ಣಿನ ಪರೀಕ್ಷೆ ಮುಖಾಂತರ ತೆರಿಗೆಯನ್ನು ನಿರ್ಧಾರ ಮಾಡುವ ಪದ್ಧತಿ ಜಾರಿಗೆ ತಂದನು. ಸಾಲಾರ್‌ಜಂಗ್‌ನು ತನ್ನ ಅಧಿಕಾರಾವಧಿಯಲ್ಲಿ ನಿಜಾಮನ ಸಹಕಾರದೊಂದಿಗೆ ಸುಧಾರಣೆಯ ಮಂತ್ರಕ್ಕೆ ಹಸಿರು ನಿಶಾನೆ ನೀಡಿದನು.[೪೪]

ಸಾಲಾರ್‌ಜಂಗ್‌ನ ನಂತರ ಸುಧಾರಣೆಗೆ ಪ್ರಯತ್ನ ಮಾಡಿದ ಇನ್ನೊಬ್ಬ ಪ್ರಧಾನಮಂತ್ರಿ ಕಿಷನ್ ಪ್ರಸಾದ್.[೪೫]

೨. ಪ್ರಮುಖ ಮಂತ್ರಿಗಳು: ಪ್ರತಿಯೊಬ್ಬ ಮಂತ್ರಿಯು ಒಂದೊಂದು ಇಲಾಖೆಯ ಮುಖ್ಯಸ್ಥನಾಗಿದ್ದು ಆ ಇಲಾಖೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದನು. ಕಾನೊನ್ಚೆ ಮುಬಾರಕ್ ಕಾಯಿದೆಯ ಅನ್ವಯ ಮಂತ್ರಿಗಳಿಗೆ ಸಹಾಯಕರಾಗಿ ಕಾರ್ಯದರ್ಶಿಗಳು, ವಿಭಾಗದ ಮುಖ್ಯ ಅಧಿಕಾರಿಗಳು ಇರುತ್ತಿದ್ದರು. ನಿಜಾಮ್ ಸರಕಾರದಲ್ಲಿದ್ದ ಪ್ರಮುಖ ಮಂತ್ರಿಗಳ ಅಧಿಕಾರ ಮತ್ತು ಕಾರ್ಯಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಸೈನಿಕ ಮಂತ್ರಿ: ಸೈನಿಕ ಖಾತೆ ಮಂತ್ರಿ ನಿಜಾಮ್ ಕಮುರೋಧಿನ್ ಶಿಲಿಚಖಾನನ ಆಳ್ವಿಕೆಯಿಂದಲೂ ಇದ್ದುದು ಕಂಡುಬರುತ್ತದೆ. ಸಹಾಯಕ ಸೈನ್ಯ ಪದ್ಧತಿ ಸ್ವೀಕರಿಸಿದ ನಂತರ ಸೈನ್ಯದ ಕಡೆಗೆ ಗಮನ ಕೊಡದೆ ಬ್ರಿಟಿಶ್ ಸೈನಿಕರ ಮೇಲೆ ಅವಲಂಬಿತರಾಗಿದ್ದು, ಬ್ರಿಟಿಶರು ಸಮಯಕ್ಕೆ ಸರಿಯಾಗಿ ಸೈನಿಕ ಸಹಾಯ ಮಾಡದೆ ಇದ್ದುದರಿಂದ ಸೈನ್ಯವನ್ನು ಮತ್ತೆ ಕಟ್ಟಲು ಬಲವಾದ ಇಲಾಖೆಯನ್ನು ಹುಟ್ಟುಹಾಕಲಾಯಿತು. ಸೈನಿಕರಿಗೆ ಬ್ರಿಟಿಶ್ ಮಾದರಿಯ ಆಧುನಿಕ ಶೈಲಿಯ ಉಪಕರಣಗಳೊಂದಿಗೆ ತರಬೇತಿ ನೀಡಲಾಯಿತು. ಸೈನಿಕ ಇಲಾಖೆಯನ್ನು ನೋಡಿಕೊಳ್ಳಲು ಸೈನಿಕಮಂತ್ರಿಯ ಅಧೀನದಲ್ಲಿ ಕಾರ್ಯದರ್ಶಿ, ಸಹಕಾರ್ಯದರ್ಶಿ, ಸೈನ್ಯ ರಸ್ಥೆದಾರ, ಇಮತ್ತೆಯಾಜ್, ಮೌಲ್ವಿಜಿಮ ಇರುತ್ತಿದ್ದರು.[೪೬]

ಹಣಕಾಸಿನ ಮಂತ್ರಿ: ಹಣಕಾಸು ಮಂತ್ರಿಯು ಮಂತ್ರಿಮಂಡಲದಲ್ಲಿ ಮೂರನೆಯ ಸ್ಥಾನ ಹೊಂದಿರುವ ಮಂತ್ರಿ, ಹಣಕಾಸು ಮಂತ್ರಿಯನ್ನು ನೇಮಿಸುವ ಸಂದರ್ಭದಲ್ಲಿ ಆರ್ಥಿಕ ವಿಚಾರದಲ್ಲಿ ಹೊಂದಿರುವ ಜ್ಞಾನವನ್ನು ಪರಿಗಣಿಸಲಾಗುತ್ತಿತ್ತು. ಉದಾಹರಣೆಗೆ ಅಕ್ಬರ ಹೈದರಿ ಎಂಬ ಹಣಕಾಸು ಮಂತ್ರಿಯು ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದಲ್ಲಿ ವ್ಯಾಸಂಗ ಮಾಡಿದ್ದನು. ಅವನಿಗೆ ನಿಜಾಮನು ತನ್ನ ಸಂಸ್ಥಾನದಲ್ಲಿ ಪ್ರಮುಖ ಹಣಕಾಸು ಖಾತೆ ನೀಡಿದ್ದುದನ್ನು ಗಮನಿಸಬಹುದು.[೪೭]

ಭೂಕಂದಾಯ ಮಂತ್ರಿ: ಸುಲ್ತಾನನ ಆದೇಶದ ಮೇರೆಗೆ ಪ್ರಧಾನ ಮಂತ್ರಿಯ ಸಲಹೆಯಂತೆ ತೆರಿಗೆ ವಿಧಿಸುವ ಪ್ರಮುಖ ಕಾರ್ಯಕೈಗೊಳ್ಳುತ್ತಿದ್ದ ಅಧಿಕಾರಿಯನ್ನು ಭೂಕಂದಾಯ ಮಂತ್ರಿಯೆಂದು

ಕರೆಯುತ್ತಿದ್ದರು. ಮೊಗಲರ ಕಂದಾಯ ಮಂತ್ರಿ ತೋದರಮಲ್ಲನು ಮಾಡಿದ್ದ ಸುಧಾರಣೆಯನ್ನು ನಿಜಾಮರು ತಮ್ಮ ಆಳ್ವಿಕೆಯ ಕಾಲಘಟ್ಟದಲ್ಲಿ ಜಾರಿಗೆ ತಂದ ಸಂಗತಿಯನ್ನು ಈ ಹಿಂದೆಯೇ ಪ್ರಸ್ತಾಪಿಸಿದೆ. ರಾಜ್ಯಾದಾಯದ ಸಂಗ್ರಹದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ ಈ ಮಂತ್ರಿ ಭೂಮಿಯನ್ನು ಮಾಪನ ಮಾಡುವ ಮೂಲಕ ಅದರ ಫಲವತ್ತತೆಯ ಆಧಾರದ ಮೇಲೆ ತೆರಿಗೆ ವಿಧಿಸುತ್ತಿದ್ದನು.[೪೮]

ನ್ಯಾಯ ಹಾಗೂ ಸಾರ್ವಜನಿಕ ಕಾರ್ಯಮಂತ್ರಿ: ಹೈದರಾಬಾದ್ ಸಂಸ್ಥಾನದ ನ್ಯಾಯಾಂಗ ಆರಂಭದಲ್ಲಿ ಸೈನಿಕ ಆಡಳಿತದ ಪ್ರಕಾರ ಕಾರ್ಯನಿರ್ವಹಿಸುತಿತ್ತು. ನಂತರ ನ್ಯಾಯಾಂಗದಲ್ಲಿ ಅನೇಕ ಬದಲಾವಣೆಗಳನ್ನು ತಂದು ನ್ಯಾಯಾಂಗವನ್ನು ಪ್ರತ್ಯೇಕ ಇಲಾಖೆಯನ್ನಾಗಿ ಸ್ಥಾಪನೆ ಮಾಡಲಾಯಿತು. ನ್ಯಾಯಾಲಯಗಳ ಸಂಖ್ಯೆ ಹೆಚ್ಚು ಮಾಡುವ ಮೂಲಕ ನ್ಯಾಯಾಂಗವನ್ನು ವ್ಯವಸ್ಥಿತಗೊಳಿಸುವ ಪ್ರಯತ್ನ ಮಾಡಲಾಯಿತು.

ಅಭಿವೃದ್ಧಿಯ ಮಾರ್ಗ ತೋರಿಸುವುದು ಸಾರ್ವಜನಿಕ ಕಾರ್ಯಮಂತ್ರಿಯ ಕಾರ್ಯವಾಗಿತ್ತು.[೪೯]

೬. ಕಾಯಿದೆ ಮಂಡಲ: ಕಾನೂನ್ಚೆ ಮುಬಾರಕ್ ಕಾಯಿದೆಯನ್ನು ಅನುಸರಿಸಿ ಕಾರ್ಯಾರಂಭ ಮಾಡಿದ ಹೊಸ ಕಾಯಿದೆ "ಕಾಯಿದೆ ಮಂಡಲ" ಅಥವಾ "ಲೆಜಿಸ್ಲೆಟಿವ್ ಕೌನ್ಸಿಲ್" ಆಗಿತ್ತು.[೫೦] ಈ ಪೂರ್ವದಲ್ಲಿ ಮೊದಲ ಪ್ರಧಾನ ಮಂತ್ರಿ ಒಂದನೆಯ ಸಾಲಾರ್‌ಜಂಗ್‌ನು ಬ್ರಿಟಿಶ್ ಲೆಜಿಸ್ಲೆಟಿವ್ ಕೌನ್ಸಿಲ್ ಮಾದರಿಯಲ್ಲಿ ಸಂಸ್ಥಾನದ ಶಾಸನ ರಚನೆ ಮಾಡುವುದಕ್ಕಾಗಿ ಶಾಸನ ರಚನೆ ಸಭೆ ಸ್ಥಾಪಿಸಲು ಮಾಡಿಕೊಂಡಿದ್ದ ಮನವಿಯಂತೆ ನಿಜಾಮನು ೧೮೭೦ರಲ್ಲಿ ಕಾನೂನು ಸಮಿತಿಯನ್ನು ನೇಮಕ ಮಾಡಿದನು. ಇದನ್ನು ಮಹಮ್ಮದ್ ಕಾನೂನು ಸಮಿತಿಯೆಂದು ಹೆಸರಿಸಲಾಗಿದೆ. ಈ ವರದಿ ಕಾನೂನಾತ್ಮಕ ಶಾಸನ ರಚನೆಯಾಗಬೇಕಾದರೆ ಕಾನೂನಾತ್ಮಕವಾದ ಕೌನ್ಸಿಲ್ ಇರಬೇಕೆಂಬ ವಾದವನ್ನು ಮುಂದಿಟ್ಟಿತು.[೫೧]

ವರದಿಯನ್ನು ಆಧರಿಸಿ ವಿಧಾನ ಪರಿಷತ್ತು ಅಂದರೆ ಕಾಯಿದೆ ಮಂಡಲ ಸ್ಥಾಪಿಸುವ ಹಾದಿಯಲ್ಲಿ ನಿಜಾಮನ ಅಧ್ಯಕ್ಷತೆಯಲ್ಲಿ ನೋಬಲ್ ವರ್ಗ ಒಳಗೊಂಡ ಪರಿಷತ್ತು ಆರಂಭವಾಯಿತು. ನಂತರ ಈ ಕಾಯಿದೆ ಮಂಡಲವನ್ನು ರಾಜ್ಯ ಪರಿಷತ್ತು ಎಂದು ಕರೆಯುವುದರೊಂದಿಗೆ ಸಮಿತಿಯಲ್ಲಿದ್ದ ನೊಬಲ್ ಸದಸ್ಯರ ಬದಲಾಗಿ ನಿಜಾಮ್ ಸರಕಾರದ ಮಂತ್ರಿಗಳನ್ನೇ ಸದಸ್ಯರನ್ನಾಗಿ ನೇಮಕ ಮಾಡುಲು ತಿದ್ದುಪಡಿ ತರಲಾಯಿತು. ಈ ಮೂಲಕ ನಿವಾಲ ಖುರ್ಷಿದ್ ಜಾಹ್, ಬಹಷಿಕ-ಉದ್-ದೌಲ, ವಿಕರ ಹಾಗೂ ರಾಜ್ಯದ ಪೇಷ್ಕಾರ ಅವರು ಸದಸ್ಯರಾದ ಸಚಿವರಾಗಿದ್ದರು.[೫೨]

ಅಸ್ತಿತ್ವಕ್ಕೆ ಬಂದ ಶಾಸನ ಪರಿಷತ್ತು ನಿಜಾಮ ಮೆಹಬೂಬ ಅಲಿಖಾನನ ಮುತ್ಸದ್ಧಿತನದಿಂದಾಗಿ ಸಂವಿಧಾನಾತ್ಮಕ ನೆಲೆಯಲ್ಲಿ ಹೊಸ ಕಾಯಿದೆಗಳನ್ನು ಜಾರಿಗೆ ತಂದಿತು. ಆ ಕಾಯಿದೆಯಲ್ಲಿ

ಕಾನೊನ್ಚೆ ಮುಬಾರಕ್ ಒಂದಾಗಿದೆ. ಇದರಿಂದ ಶಾಸನ ಪರಿಷತ್ತು ಇನ್ನಷ್ಟು ಬಲಿಷ್ಠವಾಯಿತು. ಮೆಹಬೂಬ ಅಲಿಖಾನರ ಹೊಸ ಸಂವಿಧಾನವೆಂದೇ ಹೆಸರು ಪಡೆದ ಕಾನೊನ್ಚೆ ಮುಬಾರಕ್ ಕಾಯಿದೆಯಲ್ಲಿ ಮಂತ್ರಿಮಂಡಲ ಮತ್ತು ಶಾಸನ ಪರಿಷತ್ತಿನ ಬಲವರ್ಧನೆಗೆ ಕ್ರಮ ಕೈಗೊಳ್ಳಲಾಯಿತು. ೧೮೯೩ರಲ್ಲಿ ಕಾನೊನ್ಚೆ ಮುಬಾರಕ್ ಕಾಯಿದೆಯ ಮೂಲ ಸ್ವರೂಪ ಬದಲಾವಣೆಯಾಗಿ ಸದಸ್ಯರ ಸಂಖ್ಯೆಯನ್ನು ೪ ರಿಂದ ೧೯ಕ್ಕೇರಿಸಲಾಯಿತು.[೫೩] ಸದಸ್ಯರ ವಿವರ ಕೆಳಕಂಡಂತಿದೆ

ಶಾಸನ ಪರಿಷತ್ತು

ಪ್ರಧಾನ ಮಂತ್ರಿ

(ಅಧ್ಯಕ್ಷರು)

।

ಕಂದಾಯ ಮಂತ್ರಿ

(ಉಪಾಧ್ಯಕ್ಷರು)

।

ಸದಸ್ಯರು

ಅಧಿಕಾರಿ ಸದಸ್ಯರು

೧. ಮುಖ್ಯ ನ್ಯಾಯಾಧೀಶರು

೨. ಪೊಲೀಸ್ ಮತ್ತು ನ್ಯಾಯಾಂಗದ ಕಾರ್ಯದರ್ಶಿ

೩. ಕೆಳದರ್ಜೆಯ ನ್ಯಾಯಾಧೀಶರು

೪. ವಿಧಾನ ಪರಿಷತ್ತಿನ ಕಾರ್ಯದರ್ಶಿ

೫. ಸಾರ್ವಜನಿಕ ನಿರ್ದೇಶಕರು

೬. ನಗರ ಮ್ಯಾಜಿಸ್ಟ್ರೇಟ್

೭. ಪಿಡಬ್ಲ್ಯೂಡಿ ಕಾರ್ಯದರ್ಶಿ

೮. ಪೊಲೀಸ್ ಮಹಾನಿರ್ದೇಶಕರು

ಅಧಿಕಾರೇತರ ಸದಸ್ಯರು

೧. ಜಹಗೀರ್‌ದಾರರು

೨. ವಕೀಲರು

೩. ಪೈಗಾದ ಮುಖ್ಯಸ್ಥರು

೪. ಕಾರ್ಯದರ್ಶಿ

೫. ಪೈಗಾದ ಮುಖ್ಯಸ್ಥರು

|

ಕಾರ್ಯದರ್ಶಿ

|

ಅಧೀನ ಕಾರ್ಯದರ್ಶಿ

|

ಆಡಳಿತ ಅಧಿಕಾರಿ

ಈ ಮೇಲೆ ವಿವರಿಸಿದಂತೆ ಕಾಯಿದೆ ಮಂಡಲದ ಸಭೆಗೆ ಪ್ರಧಾನ ಮಂತ್ರಿ ಅಧ್ಯಕ್ಷರಾಗಿದ್ದರು. ಉಪಾಧ್ಯಕ್ಷರನ್ನು ತಾತ್ಕಾಲಿಕವಾಗಿ ಇಲಾಖೆಯ ಮಂತ್ರಿಗಳಲ್ಲಿ ಒಬ್ಬರನ್ನು ಆಯ್ಕೆ ಮಾಡಲಾಗುತ್ತಿತ್ತು. ಯಾವ ವಿಷಯ ಚರ್ಚೆಯಾಗುತ್ತದೆಯೋ ಆ ಇಲಾಖೆಯ ಸಚಿವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ಸದಸ್ಯರಲ್ಲಿ ಎರಡು ವಿಧದ ಸದಸ್ಯರಿದ್ದು ಅವರಲ್ಲಿ ಅಧಿಕಾರಿ ಸದಸ್ಯರು ಹಾಗೂ ಅಧಿಕಾರೇತರ ಸದಸ್ಯರು ಸೇರಿದ್ದರು. ಅಧಿಕಾರಿ ಸದಸ್ಯರಲ್ಲಿ ಸಂಸ್ಥಾನದ ಮುಖ್ಯ ನ್ಯಾಯಾಧೀಶರು, ಪೊಲೀಸ್ ಮತ್ತು ನ್ಯಾಯಾಂಗದ ಕಾರ್ಯದರ್ಶಿ ಮುಂತಾದ ಸದಸ್ಯರು ಕಾಯಿದೆ ಮಂಡಲದಲ್ಲಿ ಭಾಗವಹಿಸಿ ಯಾವುದೇ ಕಾಯಿದೆಯ ಜಾರಿ ಪೂರ್ವ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಅಧಿಕಾರೇತರ ಸದಸ್ಯರಲ್ಲಿ ಎಂದರೆ ಸಂಸ್ಥಾನದಲ್ಲಿದ್ದ ಜಹಾಗೀರದಾರರು, ವಕೀಲರು ಮತ್ತು ಪೈಗಾದ ಮುಖ್ಯಸ್ಥರು, ಜಹಾಗೀರ ಪ್ರದೇಶದಿಂದ ಮತ್ತು ವಕೀಲರ ಪಂಗಡದಿಂದ ಚುನಾಯಿತರಾದ ಎರಡೆರಡು ಸದಸ್ಯರು, ಪೈಗಾದ ಕ್ಷೇತ್ರದಿಂದ ಒಬ್ಬ ಸದಸ್ಯ ಹಾಗೂ ಸಾಹುಕಾರರಲ್ಲಿ ಒಬ್ಬರು ನಾಮನಿರ್ದೇಶಿತ ಸದಸ್ಯರಿದ್ದರು. ನಾಮನಿರ್ದೇಶನ ಮಾಡುವ ಅಧಿಕಾರ ನಿಜಾಮನಿಗೆ ಇತ್ತು. ಸದಸ್ಯರ ಈ ವಿವರದನ್ವಯ ನಿಜಾಮನು ಪ್ರಜಾಪ್ರಭುತ್ವ ಮಾದರಿಯನ್ನು ಅನುಸರಿಸಿ ವಿವಿಧ ಕ್ಷೇತ್ರಗಳಿಗೆ ಮಾನ್ಯತೆ ನೀಡಿರುವುದು ಕಂಡುಬರುತ್ತದೆ.[೫೫]

ಕಾಯಿದೆ ಮಂಡಲ ಅಥವಾ ಶಾಸನ ರಚನೆ ಸಭೆಯು ಆಡಳಿತ, ಆರ್ಥಿಕ ಮತ್ತು ಸಾಮಾಜಿಕ ಕಾಯಿದೆಗಳನ್ನು ರೂಪಿಸುತ್ತಿದ್ದು ಸಾಮಾನ್ಯ ಕಾಯಿದೆ ಹಾಗೂ ಪ್ರಮುಖವಾದ ಕಾಯಿದೆ ಎಂಬ ಎರಡು ವಿಧದ ಕಾಯಿದೆಗಳು ಅಂಗೀಕರಿಸುತ್ತಿತ್ತು. ಸಾಮಾನ್ಯ ಕಾಯಿದೆ ಮಂಡಿಸುವ ಸದಸ್ಯರು ಸಾಮಾನ್ಯ ನಿಯಮಾವಳಿಗಳ ಮೂಲಕ ಮಂಡಿಸುತ್ತಿದ್ದರು. ಪ್ರಮುಖ ಕಾಯಿದೆಗಳನ್ನು ಮಂಡಿಸುವ ಪೂರ್ವದಲ್ಲಿ ಪ್ರಧಾನ ಮಂತ್ರಿಯ ಒಪ್ಪಿಗೆ ಪಡೆಯುವುದು ಕಡ್ಡಾಯವಾಗಿತ್ತು. ನಂತರ ಕಾರ್ಯಕಾರಿ ಸಮಿತಿಯ ಒಪ್ಪಿಗೆಗಾಗಿ ಕಳುಹಿಸಲಾಗುತಿತ್ತು. ಕಾಯಿದೆ ಜಾರಿಗೆ ಬರುವ ಪೂರ್ವದಲ್ಲಿ ಅಂತಿಮವಾಗಿ ನಿಜಾಮನ ಒಪ್ಪಿಗೆ ಪಡೆಯುವುದು ಅತ್ಯಂತ ಮುಖ್ಯವಾಗಿರುತ್ತಿತ್ತು.[೫೬]

ಬ್ರಿಟಿಶರು ತಮ್ಮ ವಸಾಹತುಶಾಹಿ ಧೋರಣೆಯನ್ನು ಬಿಗಿಗೊಳಿಸುವ ಸಲುವಾಗಿ ಭಾರತದಲ್ಲಿ ೧೯೧೯ರ ಕಾಯಿದೆ, ೧೯೨೦ರ ಕಾಯಿದೆ ಹಾಗೂ ೧೯೩೫ರ ಕಾಯಿದೆಗಳನ್ನು ಜಾರಿಗೆ ತಂದರು.

ಇವುಗಳ ಮೂಲಕ ಏಕ ಮಾದರಿ ಆಡಳಿತ ಪದ್ಧತಿ, ಆರ್ಥಿಕ ಹಿಡಿತ ಸಾಧಿಸುವ ಕಡೆಗೆ ಸಾಗಿದರು. ಬ್ರಿಟಿಶರು ಸುಧಾರಣವಾದದ ಮೂಲಕ ಇಟ್ಟ ಹೆಜ್ಜೆಗಳು ಭಾರತದ ಸಂಸ್ಥಾನಗಳಲ್ಲಿ ಜಾಗೃತಿ ಮೂಡಿಸಿತು. ಇದರ ಪರಿಣಾಮವಾಗಿ ಸ್ಥಳೀಯ ಅರಸರು ಬ್ರಿಟಿಶ್ ಮಾದರಿಯ ಆಡಳಿತವನ್ನು ಒಲ್ಲದ ಮನಸ್ಸಿನಿಂದ ಅನುಸರಿಸತೊಡಗಿದರು. ಸಂಸ್ಥಾನ ಕೂಡ ತನ್ನ ರಾಜ್ಯಾಂಗದಲ್ಲಿ ಬದಲಾವಣೆಗಳನ್ನು ಮಾಡಿಕೊಂಡಿತು. ಈ ಕುರಿತ ಬಾಲಮುಕ್ಕುಂದ ರೈ ಹಾಗೂ ದಿವಾನ ಬಹಾದ್ದೂರ ಆರ್ವಮುಡು ಐಯ್ಯಂಗಾರ್ ಸುಧಾರಣ ಸಮಿತಿಗಳ ವಿವರಗಳು ಈ ಕೆಳಗಿನಂತಿವೆ.[೫೭]

೧. ಬಾಲಮುಕ್ಕುಂದ ರೈ ಸಮಿತಿ: ಹೈದರಾಬಾದ್ ನಿಜಾಮ್ ಉಸ್ಮಾನ್ ಅಲಿಖಾನ್ ಬಹಾದ್ದೂರನು ಸಂಸ್ಥಾನದಲ್ಲಿದ್ದ ಶಾಸನ ರಚನೆ ಸಭೆಯಲ್ಲಿ ಬದಲಾವಣೆಯನ್ನು ತರಲು ಪ್ರಧಾನ ಮಂತ್ರಿ ಅಲಿ ಇಮಾಮ್‌ರ ಸಲಹೆಯಂತೆ ರಾಜ್ಯಾಂಗ ಸುಧಾರಣೆಗಾಗಿ ಬಾಲಮುಕ್ಕುಂದ ರೈ ಸಮಿತಿಯನ್ನು ನೇಮಿಸಿದನು. ಹೈಕೋರ್ಟ್ ನಿವೃತ್ತ ನ್ಯಾಯಾಧೀಶರಾಗಿದ್ದ ಬಾಲಮುಕ್ಕಂದ ರೈ ಅದಾಗಲೇ ಸಂಸ್ಥಾನದಲ್ಲಿನ ಶಾಸನ ರಚನೆ ಸಭೆಯನ್ನು ಕುರಿತು ದೀರ್ಘ ಅಧ್ಯಯನ ಕೈಗೊಂಡಿದ್ದರು.

ಬಾಲಮುಕ್ಕುಂದ ರೈ ಸಮಿತಿ ತನ್ನ ವರದಿಯಲ್ಲಿ ಕೆಲವೊಂದು ಶಿಫಾರಸುಗಳನ್ನು ಮಾಡಿತು. ಅದರ ಪ್ರಕಾರ ಶಾಸನ ಸಭೆಯನ್ನು ಎರಡು ವಿಧಗಳಲ್ಲಿ ಸ್ಥಾಪಿಸಬೇಕು. ಒಂದು ಮೇಲ್ಮನೆ, ಇನ್ನೊಂದು ಕೆಳಮನೆ. ಮೇಲ್ಮನೆ ೬೮ ಸದಸ್ಯರನ್ನು ಒಳಗೊಂಡಿರಬೇಕು. ಕೆಳಮನೆ ೧೨೦ ಸದಸ್ಯರಿಂದ ಕೂಡಿರಬೇಕು. ಬ್ರಿಟಿಶ್ ಶಾಸನ ಸಭೆಯ ಮಾದರಿಯಲ್ಲಿದ್ದ ಬಾಲಮುಕ್ಕುಂದ ರೈ ಸಮಿತಿಯ ವರದಿಯನ್ನು ನಿಜಾಮನು ಜಾರಿಗೊಳಿಸದೆ ನಿಷ್ಕ್ರಿಯಗೊಳಿಸಿದನು.[೫೮]

೨. ದಿವಾನ ಬಹಾದ್ದೂರ ಅರ್ವಮುಡು ಅಯ್ಯಂಗಾರ್ ಸಮಿತಿ: ನಿಜಾಮನು ೧೯೩೮ರಲ್ಲಿ ದಿವಾನ ಬಹಾದ್ದೂರ ಅರ್ವಮುಡು ಅಯ್ಯಂಗಾರ್ ನೇತೃತ್ವದ ಸಮಿತಿಯನ್ನು ನೇಮಿಸಿದನು.[೫೯] ಸಮಿತಿಯು ಅದಾಗಾಗಲೇ ಭಾರತದ ಸಂಸ್ಥಾನಗಳಲ್ಲಿದ್ದ ಜನರನ್ನೊಳಗೊಂಡ ಆಡಳಿತ ಸ್ಥಾಪಿಸಬೇಕೆಂಬ ಬೇಡಿಕೆಯನ್ನು ಪರಿಶೀಲಿಸಿತು. ನಿಜಾಮನು ಆಡಳಿತದಲ್ಲಿ ಜನರು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕೆಂದು ೧೯೩೮ರಲ್ಲಿ ಸಲ್ಲಿಸಿದ ವರದಿ ಶಿಫಾರಸು ಮಾಡಿತು.[೬೦] ಶಾಸನ ರಚನೆ ಸಭೆಯಲ್ಲಿದ್ದ ಸದಸ್ಯರ ಸಂಖ್ಯೆಯನ್ನು ಹಿಗ್ಗಿಸುವ ಜೊತೆಗೆ ಜಾತಿವಾರು ಪ್ರಾತಿನಿಧ್ಯ ನೀಡಬೇಕು ಎಂದು ತಿಳಿಸಿತು. ಅಯ್ಯಂಗಾರ್ ಸಮಿತಿ ನೀಡಿದ ವರದಿಯು ಹಿಂದೂ ಮತ್ತು ಮುಸ್ಲಿಮರಿಗೆ ಸಮಾನ ಪ್ರಾತಿನಿಧ್ಯ ನೀಡುವ ಮುಖಾಂತರ ಶಾಸನ ರಚನೆ ಸಭೆಯಲ್ಲಿ ಸಮಾನ ಸಂಖ್ಯೆಯ ಸದಸ್ಯರನ್ನು ನೇಮಿಸಬೇಕೆಂದು ತಿಳಿಸಿತು. ವರದಿಯ ಶಿಫಾರಸಿನಿಂದ ಕೆರಳಿದ ಇತ್ತೆಹಾದುಲ್ ಮುಸ್ಲಿಂಮಿನ್ ಸಂಘಟನೆಯು ಬಹದ್ದೂರ ಯಾರ್‌ಜಂಗ್‌ನ ನೇತೃತ್ವದಲ್ಲಿ ವರದಿಯನು ಬಹಿಷ್ಕರಿಸಿತು. ಬಹದ್ದೂರ ಯಾರ್‌ಜಂಗ್‌ನು ಅಯ್ಯಂಗಾರ್ ಸಮಿತಿ ವರದಿ ಶಿಫಾರಸನ್ನು ಸಂಸ್ಥಾನದ ತುಂಬ ಪ್ರಚುರಪಡಿಸಿ ಮತೀಯ ಕಲಹವನು ಹುಟ್ಟು ಹಾಕಿದನು. ಅಯ್ಯಂಗಾರ್ ಸಮಿತಿ ವಿರೋಧಿ

ಚಳುವಳಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲೂ ವ್ಯಾಪಕವಾಗಿ ಪಸರಿಸಿತು. ಇತ್ತೆಹಾದುಲ್ ಸಂಘಟನೆಯು ನಿಜಾಮನ ಮೇಲೆ ಒತ್ತಡ ಹಾಕುವ ಮೂಲಕ ವರದಿಯನ್ನು ಜಾರಿಗೆ ಬರದ ಹಾಗೇ ಪ್ರಯತ್ನಿಸಿತು. ನಿಜಾಮ್ ಉಸ್ಮಾನ್ ಆಲಿಖಾನನು ಸಂದಿಗ್ಧ ಸ್ಥಿತಿಯಲ್ಲಿದ್ದು ಬ್ರಿಟಿಶರನ್ನು ಎದುರು ಹಾಕಿಕೊಳ್ಳಲು ಸಿದ್ಧನಿರಲಿಲ್ಲ.[೬೧] ೧೯೩೯ರಂದು ೧೩೪೮ನೇ ಫಸಲಿ ಪ್ರಕಟಿಸುವ ಮೂಲಕ ಪ್ರಜಾಸತ್ತಾತ್ಮಕವಾದ ಅಯ್ಯಂಗಾರ್ ವರದಿಯನ್ನು ಜಾರಿಗೊಳಿಸಿದನು. ಇದರಿಂದ ಜಿಲ್ಲಾ ಸಭೆ, ತಾಲೂಕು ಸಭೆ, ಪುರಸಭೆ ಮತ್ತು ಹೈದರಾಬಾದಿನ ಪುರಸಭೆಯಲ್ಲೂ ಚುನಾಯಿತ ಸದಸ್ಯರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಕಾನೂನಾತ್ಮಕವಾಗಿ ರೂಪುಗೊಂಡಿತು. ೧೯೩೯ರ ಕಾಯಿದೆ ಮೂಲಕ ಸ್ಥಾಪನೆಯಾದ ಶಾಸನ ರಚನೆ ಸಭೆಯ ಸಂಪೂರ್ಣ ಸ್ವರೂಪದ ವಿವರ ಈ ಕೆಳಗಿನಂತಿದೆ.[೬೨](ಪುಟ ಸಂಖ್ಯೆ ೧೪೩ರಲ್ಲಿ ನೀಡಲಾಗಿದೆ)


೫.೨.೨. ಸುಬಾಗಳು

ಕೇಂದ್ರ ಪ್ರಭುತ್ವದಿಂದ ಆಡಳಿತ ನಡೆಸುವುದು ಸಮಂಜಸವಲ್ಲದ ಕಾರಣ ವಿವಿಧ ಭಾಗಗಳ ಪ್ರದೇಶವನ್ನು ಒಂದುಗೂಡಿಸಿ ಸುಬಾಗಳನ್ನು ರಚಿಸಿಕೊಳ್ಳಲಾಯಿತು. ಈ ಸುಬಾಗಳು ಕೇಂದ್ರ ಪ್ರಭುತ್ವದ ಅಧೀನದಲ್ಲಿ ಕಾರ್ಯನಿರ್ವಹಿಸಬೇಕಾಗಿತ್ತು. ಇವುಗಳಿಗೆ ಯಾವುದೇ ಸ್ವಾಯತ್ತತೆ ಇರಲಿಲ್ಲ. ನಿಜಾಮನು ಆರಂಭದಲ್ಲಿ ಆರು ಸುಬಾಗಳನ್ನು ಮಾಡಿಕೊಂಡಿದ್ದನು.[೬೪] ಆರು ಸುಬಾಗಳ ಬದಲಾಗಿ ಐದು ಸುಬಾಗಳು ಮಾತ್ರ ಉಳಿದುಕೊಂಡವು. ಅನಂತರ ದಖ್ಖನ್ ಪ್ರದೇಶದಲ್ಲಿ ನಡೆದ ಫ್ರೆಂಚ್ ಮತ್ತು ಬ್ರಿಟಿಶ್ ಹೋರಾಟಗಳ ನಡುವೆ ನಿಜಾಮನು ನಾಲ್ಕು ಸುಬಾಗಳನ್ನು ಮಾತ್ರ ಉಳಿಸಿಕೊಳ್ಳುವಂತಾಯಿತು. ಅವುಗಳೆಂದರೆ ವಾರಂಗಲ್–ಔರಂಗಬಾದ್, ಮೇಡಕ್ ಹಾಗೂ ಗುಲಬರ್ಗಾ. ಗುಲಬರ್ಗಾ ಪ್ರದೇಶ ಸುಬಾ ಸ್ಥಾನ ಪಡೆಯುವ ಮುಂಚೆ ಬಿಜಾಪುರ ಸುಬಾದ ಭಾಗವಾಗಿತ್ತು. ೧೮೯೪ರಲ್ಲಿ ಗುಲಬರ್ಗಾ ಸುಬಾದ ಸ್ಥಾನ ಪಡೆಯಿತು. ಸುಬಾ ಸ್ಥಾನ ಪಡೆದಿದ್ದ ಬೀದರ್ ೧೯೦೧ರಲ್ಲಿ ಗುಲಬರ್ಗಾ ಸುಬಾದ ಭಾಗವಾಯಿತು.[೬೫]

ಗುಲಬರ್ಗಾ ಸುಬಾ ೧೯೦೫

ಕ್ರ.ಸಂ.	ಜಿಲ್ಲೆ ಹೆಸರು	ವಿಸ್ತೀರ್ಣತೆ	ಜನಸಂಖ್ಯೆ
೧	ಗುಲಬರ್ಗಾ	೬೦೦೪	೧,೦೪೧,೦೬೭
೨	ಉಸ್ಮಾನಾಬಾದ್	೪,೦೧೦	೫,೩೫.೦೨೭
೩	ರಾಯಚೂರು	೬,೮೭೫	೯೩೨,೦೯೦
೪	ಬೀದರ್	೪,೧೬೬	೭೬೬,೧೨೯

ಹೈದರಾಬಾದ್ ನಿಜಾಮ್ ಶಾಸನ ಸಭೆ ಸದಸ್ಯರ ಪಟ್ಟಿ ೧೯೪೬



೧೯೦೫ಕ್ಕೂ ಮೊದಲು ಲಿಂಗಸುಗೂರು ಜಿಲ್ಲಾ ಸ್ಥಾನವನ್ನು ಹೊಂದಿದ್ದು ನಂತರ ರಾಯಚೂರು ಜಿಲ್ಲೆಯಲ್ಲಿ ತಾಲೂಕು ಪ್ರದೇಶವಾಗಿ ಸೇರ್ಪಡೆಗೊಂಡಿತು. ಗುಲಬರ್ಗಾ ಸುಬಾ ಬ್ರಿಟಿಶರ ಅಧೀನದಲ್ಲಿದ್ದ ಬಾಂಬೆ ಮತ್ತು ಮದ್ರಾಸ್ ಪ್ರೆಸಿಡೆನ್ಸಿ ಪ್ರದೇಶಗಳನ್ನು ಹೊಂದಿತ್ತು. ಗುಲಬರ್ಗಾ, ಉಸ್ಮಾನಾಬಾದ್, ರಾಯಚೂರು ಹಾಗೂ ಬೀದರ್, ಉಸ್ಮಾನಾಬಾದ್ ಹೊರಪ್ರದೇಶಕ್ಕೆ ಸೇರಿದ್ದವು. ಈ ಸುಬಾಗಳು ಸುಮಾರು ೬೦% ಕನ್ನಡ ಮಾತನಾಡುವ ಪ್ರದೇಶಗಳಾಗಿದ್ದವು. ಇನ್ನುಳಿದವು ಮರಾಠಿ ಹಾಗೂ ಉರ್ದು ಮಾತನಾಡುವ ಪ್ರದೇಶಗಳಾಗಿದ್ದವು. ನಿಜಾಮನು ಸುಬಾದ ಆಡಳಿತವನ್ನು ನಿರ್ವಹಿಸಲು ಸುಬೇದಾರ ಎಂಬ ಅಧಿಕಾರಿಯನ್ನು ನೇಮಕ ಮಾಡುತ್ತಿದ್ದನು. ಸುಬೇದಾರ ಹುದ್ದೆ ಮೊಗಲರ ಕಾಲದಲ್ಲೂ ಇತ್ತು. ಉದಾಹರಣೆಗೆ ನಿಜಾಮ ಕಿಲಿಚಖಾನನು ಮೊಗಲರ ದಕ್ಷಿಣ ಸುಬೇದಾರ ನಾಗಿದ್ದುದು. ಸುಬೇದಾರನು ಸುಬಾದ ಮುಖ್ಯಸ್ಥರಾಗಿರುತ್ತಿದ್ದನು. ಇವನು ಸಂಪೂರ್ಣವಾಗಿ ಕೇಂದ್ರ ಪ್ರಭುತ್ವಕ್ಕೆ ಅಧೀನನಾಗಿ ಅಧಿಕಾರ ಚಲಾಯಿಸುತ್ತಿದ್ದನು. ಸುಬೇದಾರ ಹುದ್ದೆಗೆ ಬಹುತೇಕ ನಿಜಾಮನ ಹತ್ತಿರದ ಸಂಬಂಧಿಕರನ್ನು, ಯುವನಿಜಾಮನನ್ನು ಹಾಗೂ ಸಂಸ್ಥಾನದಲ್ಲಿದ್ದ ಬಲಿಷ್ಠ ಜಹಾಗೀರ್ ದಾರನನ್ನು ನೇಮಿಸುವುದು ವಾಡಿಕೆ ಇತ್ತು. ಸುಬೇದಾರರಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದವರ ಸಂಖ್ಯೆ ಗಣನೀಯವಾಗಿತ್ತು. ಗುಲಬರ್ಗಾ ಸುಬಾದಲ್ಲೂ ಮುಸ್ಲಿಮ್ ಸಮುದಾಯಕ್ಕೆ ಸೇರಿದ ಸುಬೇದಾರರು ಹೆಚ್ಚಿನ ಸಂಖ್ಯೆಯಲ್ಲಿ ನೇಮಕವಾಗಿದ್ದುದ್ದನ್ನು ಗಮನಿಸಬಹುದು.[೬೭]

ಸುಬೇದಾರರು ನಿಜಾಮ ಮತ್ತು ಕೇಂದ್ರ ಪ್ರಭುತ್ವದ ಆದೇಶಕ್ಕೆ ಅನುಗುಣವಾಗಿ ಅಧಿಕಾರ ಚಲಾಯಿಸುತ್ತಿದ್ದರು. ಸುಬಾದಲ್ಲಿ ಪ್ರತ್ಯೇಕವಾದ ಸೈನ್ಯವನ್ನು ಸಂಘಟಿಸುವುದರ ಜೊತೆಗೆ ಕೇಂದ್ರ ಪ್ರಭುತ್ವಕ್ಕೆ ಅವಶ್ಯಕತೆಯಾದಾಗ ಸೈನ್ಯವನ್ನು ಒದಗಿಸಬೇಕಾಗಿತ್ತು. ಸುಬಾದ ಭೂಪ್ರದೇಶಗಳಲ್ಲಿ ಎಲ್ಲಾ ತರಹದ ತೆರಿಗೆಯನ್ನು ವಸೂಲಿ ಮಾಡಿ ನಿಜಾಮನ ಖಜಾನೆಗೆ ರವಾನಿಸಬೇಕಾಗಿತ್ತು. ಸುಬೇದಾರರು ಸುಬಾದಲ್ಲಿ ನ್ಯಾಯ ನೀಡುತ್ತಿದ್ದರು. ಅಪರಾಧಿಗೆ ಕಠಿಣ ಶಿಕ್ಷೆ ವಿಧಿಸುವ ಹಕ್ಕು ಪಡೆದಿದ್ದರು. ಕೆಲವು ಸಂದರ್ಭದಲ್ಲಿ ಕಕ್ಷಿದಾರನಿಗೆ ಸುಬೇದಾರ ನೀಡಿದ ತೀರ್ಪಿನ ವಿರುದ್ಧ ನಿಜಾಮನಲ್ಲಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿತ್ತು. ಸುಬೇದಾರರು ಪರೋಕ್ಷವಾಗಿ ನಿಜಾಮನ ಹೆಸರಿನ ಮೇಲೆ ಅನೇಕ ಅಧಿಕಾರಗಳನ್ನು ಚಲಾಯಿಸುತ್ತಿದ್ದರು. ಸುಬೇದಾರರು ಸಂಸ್ಥಾನದಲ್ಲಿ ಉನ್ನತ ಮನ್ಸಬ್‌ದಾರರಾಗಿ ಕಾರ್ಯನಿರ್ವಹಿಸುತ್ತಿದ್ದರು. ಸುಬೇದಾರ ಸುಬಾದ ಮುಖ್ಯಸ್ಥರಾಗಿದ್ದರಿಂದ ಅವರಿಗೆ ಜಹಗೀರ ನೀಡಲಾಗುತ್ತಿತ್ತು. ಸುಬೇದಾರರು ಸುಬಾದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿಕೊಂಡು ಅಲ್ಲಿಯ ಜನರ ಸುಖದುಃಖಗಳ ಮೇಲ್ವಿಚಾರಣೆಯಲ್ಲಿ ಭಾಗಿಯಾಗಿರುತ್ತಿದ್ದರು. ತಮ್ಮ ಅಧೀನ ಅಧಿಕಾರಿಗಳನ್ನು ನೇಮಕ ಮಾಡುವ ಹಾಗೂ ವಜಾ ಮಾಡುವ ಸಂದರ್ಭದಲ್ಲಿ ನಿಜಾಮನಿಗೆ ಸಲಹೆ ನೀಡುತ್ತಿದ್ದರು. ಆದರೆ ಸುಬಾದ ಆರ್ಥಿಕತೆಗೆ ಸಂಬಂಧಿಸಿದಂತೆ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಪ್ರಧಾನಮಂತ್ರಿಯ ಸಲಹೆ ಪಡೆಯುವುದು ಕಡ್ಡಾಯವಾಗಿತ್ತು.[೬೮]

ಸುಬೇದಾರ ಹುದ್ದೆ ಬ್ರಿಟಿಶ್ ಆಡಳಿತದ ಪ್ರೆಸಿಡೆನ್ಸಿ ಕಮಿಷನರ್ ಹುದ್ದೆಗೆ ಸರಿಸಮಾನವಾಗಿತ್ತು. ಸುಬೇದಾರರು ಕೇಂದ್ರ ಕಚೇರಿಯಲ್ಲಿರದೆ ರಾಜಧಾನಿಯಲ್ಲಿಯೇ ಹೆಚ್ಚಿನ ಸಮಯ ಕಳೆಯುತ್ತಿದ್ದರಿಂದ ಅವರ ಅಧೀನ ಅಧಿಕಾರಿಗಳು ಸುಬಾದ ಆಡಳಿತ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಇದರಿಂದ ಆಡಳಿತದಲ್ಲಿ ಸ್ಥಿರತೆ ಕಳೆದುಹೋಗಿ, ಶಾಂತಿ ಮತ್ತು ಕಾನೂನು ವ್ಯವಸ್ಥೆಗೆ ಭಂಗ ಉಂಟಾಗುತ್ತಿತ್ತು.[೬೯]

೫.೨.೩. ಜಿಲ್ಲೆಗಳು

ಮೊಗಲರ ಸ್ಥಳೀಯ ಆಡಳಿತ ಪದ್ಧತಿಯಂತೆ ಸುಬಾ-ಸರ್ಕಾರ ಪರಗಣ ಮತ್ತು ಗ್ರಾಮಾಡಳಿತ ಅಳವಡಿಸಿಕೊಂಡು ನಿಜಾಮರು ಆಡಳಿತ ಆರಂಭಿಸಿದರು. ಈ ಮುಖಾಂತರ ಜಿಲ್ಲಾ ಆಡಳಿತದಲ್ಲಿ ವರ್ತಕ ಶ್ರೇಣಿಗಳಾದ ಪಠಾಣರು, ಅರಬರು ಮತ್ತು ಜಮೀನ್ದಾರರು ಪ್ರಮುಖ ಪಾತ್ರವನ್ನು ವಹಿಸಿದರು. ಜಿಲ್ಲಾಡಳಿತದಲ್ಲಿ ಅಧಿಕಾರ ಪಡೆದುಕೊಂಡ ಈ ವರ್ಗ ತಮಗೆ ಹೊಂದಾಣಿಕೆಯಾಗುವ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದರು. ಆದರೆ ೧೮೫೩ರಲ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಒಂದನೆಯ ಸಾಲಾರ್‌ಜಂಗ್‌ನು ಜಿಲ್ಲಾ ಆಡಳಿತ ಪದ್ಧತಿಯ ಲೋಪದೋಷಗಳನ್ನು ಪರಿಶೀಲಿಸಿ ಬಲಪಡಿಸುವ ನಿಟ್ಟಿನಿಂದ ಅದಾಗಲೇ ಇದ್ದ ಆಡಳಿತ ಪದ್ಧತಿಯನ್ನು ಬದಲಾವಣೆಗೊಳಪಡಿಸಿ, ಜಿಲ್ಲಾಬಂದಿ ಆಡಳಿತ ಪದ್ಧತಿಯನ್ನು ಜಾರಿಗೆ ತಂದನು. ಈ ಪದ್ಧತಿಯ ಪ್ರಕಾರ ಈಗಾಗಲೇ ಜಿಲ್ಲಾ ಆಡಳಿತ ಪದ್ಧತಿಯಲ್ಲಿ ಅಧಿಕಾರ ಚಲಾಯಿಸುತ್ತಿದ್ದ ವರ್ತಕ ಶ್ರೇಣಿ ವರ್ಗದ ಪಠಾಣರು, ಅರಬರು ಮತ್ತು ಜಮೀನ್ದಾರರು ಸಂಪೂರ್ಣವಾಗಿ ಅಧಿಕಾರ ಕಳೆದುಕೊಂಡರು. ಅವರ ಸ್ಥಾನದಲ್ಲಿ ತಾಲೂಕುದಾರು, ತಹಶೀಲ್ದಾರರು ಮತ್ತು ವತನದಾರರು ಎಂಬ ಅಧಿಕಾರಿ ವರ್ಗ ಹುಟ್ಟಿಕೊಂಡಿತು. ಮೊಗಲ್ ಪದ್ಧತಿಯಂತೆ ಕರೆಯುತ್ತಿದ್ದ ಪರಗಣ ಮತ್ತು ದೇಹ (ಗ್ರಾಮಾಡಳಿತ) ಎಂಬ ಸರ್ಕಾರದ ಆಡಳಿತ ವರ್ಗೀಕರಣದಲ್ಲೂ ಬದಲಾವಣೆ ತಂದು ಜಿಲ್ಲೆ, ತಾಲೂಕು ಮತ್ತು ಗ್ರಾಮಾಡಳಿತ ಎಂದು ವರ್ಗೀಕರಿಸಲಾಯಿತು.

ನಂತರ ಜಿಲ್ಲಾ ಆಡಳಿತ ಪದ್ಧತಿಯನ್ನು ಕೂಲಂಕಶ ಅಭ್ಯಸಿಸಿ ಆ ಪದ್ಧತಿಯನ್ನು ಕಾನೂನಾತ್ಮಕ ಚೌಕಟ್ಟಿಗೆ ಅಳವಡಿಸಲು ಪ್ರಯತ್ನಿಸಲಾಯಿತು. ೧೮೮೪ರಲ್ಲಿ ಸಂಸ್ಥಾನಕ್ಕೆ ಭೇಟಿ ನೀಡಿದ್ದ ಬ್ರಿಟಿಶ್ ವೈಸ್‌ರಾಯ್ ಲಾರ್ಡ್ ರಿಪ್ಪನ್‌ನ ಪ್ರಭಾವ ಮತ್ತು ಪರಿಣಾಮದಿಂದ ದಸ್ತೂರ್-ಉಲ್-ಅಮ್ಲಾಗ ಕಾಯಿದೆ ಮೂಲಕ ಜಿಲ್ಲಾ ಮಂಡಳಿ ಮತ್ತು ತಾಲೂಕು ಮಂಡಳಿಯನ್ನು ಸ್ಥಾಪನೆ ಮಾಡಲಾಯಿತು. ಈ ಮುಖಾಂತರ ಆಡಳಿತವನ್ನು ಗಟ್ಟಿಗೊಳಿಸುವ ಮತ್ತು ಆರ್ಥಿಕ ಸ್ಥಿತಿಯನ್ನು ಬಲಿಷ್ಠಗೊಳಿಸುವ ಉದ್ದೇಶ ಹೊಂದಿದ್ದ ಮಂಡಳಿಯ ವಿವರ ಈ ಕೆಳಗಿನಂತಿದೆ.[೭೦]

ಜಿಲ್ಲಾ ಮಂಡಳಿ: ನಿಜಾಮ ಆಡಳಿತ ವ್ಯವಸ್ಥಿತ ಆಡಳಿತವನ್ನು ರೂಪಿಸಲು ಜಿಲ್ಲಾ ಮಂಡಳಿಗಳನ್ನು ಸ್ಥಾಪಿಸಿತು. ಮಂಡಳಿಯಲ್ಲಿ ಒಟ್ಟು ಹದಿನಾಲ್ಕು ಸದಸ್ಯರಿದ್ದು ಅದರಲ್ಲಿ ಏಳು ಸದಸ್ಯರು ಅಧಿಕಾರಿಗಳು,

ಉಳಿದ ಏಳು ಸದಸ್ಯರು ಅಧಿಕಾರೇತರ ಸದಸ್ಯರಾಗಿದ್ದರು. ಇವರನ್ನು ತಾಲೂಕುದಾರನ ಸಲಹೆ ಮೇರೆಗೆ ನಿಜಾಮ ಸರ್ಕಾರ ನೇಮಕ ಮಾಡುತ್ತಿತ್ತು.

೧. ತಾಲೂಕುದಾರ (ಅಧ್ಯಕ್ಷ)

೨. ಎರಡನೆಯ ತಾಲೂಕುದಾರ

೩. ಜಿಲ್ಲಾ ಲೋಕೋಪಯೋಗಿ ಅಧಿಕಾರಿ

೪. ಜಿಲ್ಲಾ ಪೋಲೀಸ್ ಅಧಿಕಾರಿ

೫. ವೈದ್ಯ ಅಧಿಕಾರಿ

೬. ತಹಶೀಲ್ದಾರ

೭. ಸ್ಥಳೀಯ ಶಾಲೆಯ ಮುಖ್ಯ ಶಿಕ್ಷಕರು

ಈ ಮೇಲಿನ ಸದಸ್ಯರು ಅಧಿಕಾರಿ ವರ್ಗದ ಸದಸ್ಯರಾಗಿದ್ದರೆ, ಅಧಿಕಾರೇತರ ಸದಸ್ಯರನ್ನು ತಾಲೂಕುದಾರನು ನೇಮಕ ಮಾಡುತ್ತಿದ್ದನು. ಇವರಲ್ಲಿ ಅಧಿಕಾರಿ ಸದಸ್ಯರು ಹೆಚ್ಚಾಗಿ ಸಭೆಯಲ್ಲಿ ಭಾಗವಹಿಸುತ್ತಿದ್ದರು. ಅಧಿಕಾರಿ ಸದಸ್ಯರಲ್ಲಿ ಐದು ಸದಸ್ಯರು ಸಭೆಯಲ್ಲಿದ್ದರೆ ಆ ಸಭೆ ಬಹುಮತದಿಂದ ತುಂಬಿರುತ್ತಿತ್ತು. ಜಿಲ್ಲಾ ಆಡಳಿತ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವಲ್ಲಿ ಈ ಮಂಡಳಿಗಳ ಪಾತ್ರವು ಮಹತ್ವದ್ದಾಗಿತ್ತು.

ನಿಜಾಮರ ಆಳ್ವಿಕೆಗೆ ಒಳಗಾಗಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಗುಲಬರ್ಗಾ, ಬೀದರ್ ಮತ್ತು ರಾಯಚೂರು ಪ್ರದೇಶಗಳು ಜಿಲ್ಲಾಡಳಿತದ ಕೇಂದ್ರ ಸ್ಥಾನವಾಗಿದ್ದವು. ೧೯೦೫ರವರೆಗೆ ಲಿಂಗಸುಗೂರು ನಿಜಾಮ ಆಡಳಿತದ ಜಿಲ್ಲಾ ಪ್ರದೇಶವಾಗಿತ್ತು. ೧೯೦೫ರಲ್ಲಿ ನಡೆದ ಆಡಳಿತ ಪುನಾರಚನೆ ಕಾರ್ಯದಲ್ಲಿ ಲಿಂಗಸುಗೂರು ಜಿಲ್ಲಾ ಸ್ಥಾನಮಾನ ಕಳೆದುಕೊಂಡಿತು. ಇದೇ ಸಂದರ್ಭದಲ್ಲಿ ಬೀದರ್ ಕೂಡ ಸುಬಾ ಸ್ಥಾನ ಕಳೆದುಕೊಂಡು ಗುಲಬರ್ಗಾ ಸುಬಾದಲ್ಲಿ ಸೇರ್ಪಡೆಯಾಯಿತು. ಅಂದಿನಿಂದ ಗುಲಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲಾ ಪ್ರದೇಶಗಳು ನಿಜಾಮರ ಆಡಳಿತ ಕೊನೆಗೊಳ್ಳುವವರೆಗೂ ಗುಲಬರ್ಗಾ ಸುಬಾದಲ್ಲಿತ್ತು.[೮]

೧. ಗುಲಬರ್ಗಾ ಜಿಲ್ಲೆ : ಗುಲಬರ್ಗಾ ಜಿಲ್ಲಾ ಪ್ರದೇಶ ಮೊದಲಿಗೆ ಬಿಜಾಪುರ ವಿಭಾಗದ ಜಿಲ್ಲೆಯಾಗಿತ್ತು. ನಂತರ ಬಿಜಾಪುರ ಸುಬಾ ಮರಾಠರ ವಶವಾದ ಕಾರಣ ಬಿಜಾಪುರ ಸುಬಾವನ್ನು ಗುಲಬರ್ಗಾಕ್ಕೆ ವರ್ಗಾಯಿಸಲಾಯಿತು. ಗುಲಬರ್ಗಾ ಜಿಲ್ಲಾ ಪ್ರದೇಶ ನಿಜಾಮರ ಆಡಳಿತದಲ್ಲಿ ಒಂದು ಪ್ರಬಲ ಸುಬಾವಾಯಿತು, ಜಿಲ್ಲಾಡಳಿತ ಕೇಂದ್ರವಾಯಿತು. ನಿಜಾಮರ ಆಡಳಿತ ಅಂತ್ಯವಾಗುವವರೆಗೂ

ಅದು ಸುಬಾವಾಗಿಯೇ ಉಳಿದಿತ್ತು. ಸ್ವಾತಂತ್ರ್ಯ ನಂತರ ನಡೆದ ಏಕೀಕರಣ ಹೋರಾಟದ ಫಲವಾಗಿ ಗುಲಬರ್ಗಾ ಪ್ರದೇಶ ಕರ್ನಾಟಕ ರಾಜ್ಯದ ಭಾಗವಾಯಿತು. ಅದು ಕರ್ನಾಟಕದಲ್ಲೂ ಸುಬಾದ ಹಾಗೆಯೇ ವಿಭಾಗೀಯ ಕೇಂದ್ರವಾಯಿತು.[೨] ಈ ಜಿಲ್ಲಾ ಪ್ರದೇಶವನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ವಿವರಿಸಿದೆ.

ಗುಲಬರ್ಗಾ ಜಿಲ್ಲೆ ೧೩೪೦ ಫಸಲಿ (೧೯೩೧)

ಕ್ರ.ಸಂ	ತಾಲೂಕುಗಳು	ವಿಸ್ತೀರ್ಣತೆ ಮೈಲು	ನಗರ ಸಂಖ್ಯೆ	ಹಳ್ಳಿ ಸಂಖ್ಯೆ	ಮುನ್ಸಿಪಾಲಿಟಿ	ಜಹಾಗೀರ ಪ್ರದೇಶ	ಪೈಗಾ ಪ್ರದೇಶ
೧	ಗುಲಬರ್ಗಾ	೮೦೭	೧	೨೪೭	೧	–	–
೨	ಚಿಂಚೋಳಿ	೮೨೩	–	೧೭೨	–	–	–
೩	ಕೊಡಗಲ್	೬೨೨	೨	೧೬೦	೧	–	–
೪	ಯಾದಗಿರಿ	೫೦೭	೨	೧೩೫	೧	–	–
೫	ಸೇಡಂ	೪೪೦	೧	೧೦೯	೧	–	–
೬	ಆಂದೋಲ	೭೦೯	–	೧೫೯	–	–	–
೭	ಶಹಾಪುರ	೫೪೬	–	೧೬೨	೧	–	–
೮	ಸುರಪುರ	೫೨೭	೧	೧೮೬	–	–	–
೯	ಕಲ್ಯಾಣಿ	೨೭೨	೧	೭೩	–	ಜಹಾಗೀರ	–
೧೦	ಚಿತ್ತಾಪುರ	೩೬೦	೧	೩೪	–	ಜಹಾಗೀರ	–
೧೧	ತಾಂಡೂರು	೨೧೧	೧	೭೫	–	ಜಹಾಗೀರ	–
೧೨	ಶಹಾಬಾದ	೨೫೬	೧	೨೬	–	–	ಪೈಗಾ
೧೩	ಆಳಂದ	೪೦೨	೧	೬೯	–	–	ಪೈಗಾ
೧೪	ಬಸಿರಾಬಾದ	೧೨೧	–	೩೬	–	–	ಪೈಗಾ
೧೫	ಅಫಜಲಪುರ	೩೭೨	–	೫೫	–	–	ಪೈಗಾ

ಕೋಷ್ಟಕದಲ್ಲಿ ವಿವರಿಸಿದ ಹಾಗೆ ಗುಲಬರ್ಗಾ ಜಿಲ್ಲೆ ಸುಮಾರು ಹದಿನೈದು ತಾಲೂಕುಗಳಿಂದ ಕೂಡಿತ್ತು. ಇದು ೧೯೩೧ರ ಜನಗಣತಿ ವರದಿ ಆಧರಿಸಿದ ಮಾಹಿತಿಯಾಗಿದೆ. ೧೯೦೧ರ ಜನಗಣತಿಯ ಪ್ರಕಾರ ಗುಲಬರ್ಗಾ ಜಿಲ್ಲೆ ಕೇವಲ ಎಂಟು ತಾಲೂಕುಗಳನ್ನು ಒಳಗೊಂಡಿತ್ತು. ೧೯೦೫ರಲ್ಲಿ ಆದ ಆಡಳಿತಾತ್ಮಕ ಬದಲಾವಣೆಯಿಂದಾಗಿ ಯಾದಗಿರಿ, ಶಹಪುರ ಮತ್ತು ಸುರಪುರ ತಾಲೂಕುಗಳು ಗುಲಬರ್ಗಾ ಜಿಲ್ಲೆಯಲ್ಲಿ ಸೇರ್ಪಡೆಗೊಂಡವು.[೩]

೧೯೩೧ರ ಜನಗಣತಿಯ ವರದಿ ಪ್ರಕಾರ ನಿಜಾಮ್ ಸರ್ಕಾರದಲ್ಲಿ ಕಂದಾಯ ಆಡಳಿತ ಹಾಗೂ ಸಾಮಾನ್ಯ ಆಡಳಿತದ ಅಧೀನದಲ್ಲಿ ಎಂಟು ತಾಲೂಕುಗಳಿದ್ದವು. ಇನ್ನುಳಿದ ಏಳು ತಾಲೂಕುಗಳಲ್ಲಿ ಮೂರು ಜಹಾಗೀರ್ ಆಡಳಿತಕ್ಕೆ ಸೇರಿದ್ದರೆ ಉಳಿದ ನಾಲ್ಕು ತಾಲೂಕುಗಳು ಪೈಗಾ ಆಡಳಿತದ ಅಧೀನದಲ್ಲಿದ್ದವು. ನಿಜಾಮ್ ಸರ್ಕಾರದ ಆಡಳಿತ ನಾಲ್ಕು ಪ್ರಕಾರವಾಗಿದ್ದು ಅವು ದಿವಾನ ಆಡಳಿತ, ಜಹಾಗೀರ್, ಪೈಗಾ ಮತ್ತು ಸರ್ಫೆ-ಎ-ಖಾಸ್ ಆಡಳಿತವಾಗಿದ್ದವು. ದಿವಾನ್ ಆಡಳಿತದ ಪ್ರದೇಶ ಸರ್ಕಾರದ ನೇರವಾದ ಆಡಳಿತಕ್ಕೆ ಒಳಪಟ್ಟಿತ್ತು. ಇನ್ನುಳಿದ ಮೂರು ಆಡಳಿತ ಪ್ರದೇಶಗಳ ಆಡಳಿತ ಪರೋಕ್ಷವಾಗಿ ಸರ್ಕಾರದ ಅಧೀನದಲ್ಲಿದ್ದವು. ಈ ಪ್ರದೇಶಗಳ ಆಡಳಿತ ಪ್ರತ್ಯೇಕವಾಗಿ ಜಹಾಗೀರದಾರ, ಪೈಗಾದಾರ ಮತ್ತು ನಿಜಾಮನ ಆಪ್ತ ಸಹಾಯಕರಿಂದ ನಡೆಯುತ್ತಿತ್ತು.[೭೪]

ಗುಲಬರ್ಗಾ ಜಿಲ್ಲೆಯಲ್ಲಿ ನಿಜಾಮನ ಆಡಳಿತವನ್ನು ನಾಲ್ಕು ಭಾಗಗಳಲ್ಲಿ ಗಮನಿಸಬಹುದು. ಗುಲಬರ್ಗಾ ಜಿಲ್ಲೆಯಲ್ಲಿ ಐದು ಮುನ್ಸಿಪಾಲಿಟಿಗಳು ಇದ್ದವು. ಅವು ಗುಲಬರ್ಗಾ, ಕೊಡಂಗಲ್, ಯಾದಗಿರಿ, ಸೇಡಂ ಹಾಗೂ ಜಹಗೀರ. ಪೈಗಾ ಮತ್ತು ಸರ್ಫೆ-ಎ-ಖಾನ್ ಆಡಳಿತಕ್ಕೆ ಸೇರ್ಪಡೆಯಾದ ತಾಲೂಕುಗಳಲ್ಲಿ ಮುನ್ಸಿಪಾಲಿಟಿ ಸ್ಥಾಪನೆಯಾಗದಿರುವುದು ಗಮನಿಸಬಹುದಾಗಿದೆ. ಒಟ್ಟಾರೆಯಾಗಿ ಗುಲಬರ್ಗಾ ಜಿಲ್ಲೆಯ ಆಡಳಿತ ನಾಲ್ಕು ಭಾಗಗಳಲ್ಲಿ ಇದ್ದುದರಿಂದ ಈ ಪ್ರದೇಶಗಳ ಆಡಳಿತವನ್ನು ಏಕರೂಪದಲ್ಲಿ ನೋಡಲು ಸಾಧ್ಯವಾಗದು. ಸ್ವಾತಂತ್ರ್ಯ ನಂತರ ಗುಲಬರ್ಗಾ ಜಿಲ್ಲೆಯು ತನ್ನ ಅಧೀನದಲ್ಲಿದ್ದ ಕೊಡಂಗಲ್, ಆಂದೋಲ, ತಾಂಡೂರು ಹಾಗೂ ಬಸಿರಾಬಾದ್ ತಾಲೂಕುಗಳನ್ನು ಆಂಧ್ರಪ್ರದೇಶಕ್ಕೆ ಬಿಟ್ಟುಕೊಡಬೇಕಾಯಿತು.[೭೫]

೨. ಬೀದರ್ ಜಿಲ್ಲೆ: ಮೊದಲಿಗೆ ಬೀದರ್ ಪ್ರದೇಶ ಸುಬಾ ಕೇಂದ್ರವಾಗಿದ್ದು, ಇದರಲ್ಲಿ ಕನ್ನಡ ಮಾತನಾಡುವ ಗುಲಬರ್ಗಾ ಮತ್ತು ರಾಯಚೂರು ಪ್ರದೇಶಗಳು ಸೇರಿಕೊಳ್ಳದೇ ಇದ್ದುದು ವಿಶೇಷ ವಾಗಿದೆ. ಬೀದರ್ ಸುಬಾದಲ್ಲಿ ಮೇಡಕ್, ಇಂದೂರ್, ಮೆಹಬೂಬ್‌ನಗರ ಹಾಗೂ ಸುರಮರ-ತಾಂಡೂರ ಜಿಲ್ಲಾ ಪ್ರದೇಶಗಳಿದ್ದವು. ೧೯೦೫ರಲ್ಲಿ ಬೀದರ್ ಸುಬಾ ಪ್ರದೇಶಗಳು ಸಂಪೂರ್ಣವಾಗಿ ತೆಲುಗು ಮಾತನಾಡುವ ಪ್ರದೇಶವಾಗಿದ್ದು ಸುಬಾ ಕೇಂದ್ರವಾದ ಬೀದರ್ ಮಾತ್ರ ಕನ್ನಡ ಮಾತನಾಡುವ ಪ್ರದೇಶವಾಗಿದ್ದರಿಂದ ಬೀದರನ್ನು ಕನ್ನಡ ಮಾತನಾಡುವ ಗುಲಬರ್ಗಾ ಸುಬಾಕ್ಕೆ ಸೇರಿಸಲಾಯಿತು. ತೆಲುಗು ಮಾತನಾಡುತ್ತಿದ್ದ ಮೆಡಕ್ ಜಿಲ್ಲೆಯನ್ನು ಪ್ರತ್ಯೇಕ ಸುಬಾವೆಂದು ಘೋಷಿಸಲಾಯಿತು. ಬೀದರ್ ಜಿಲ್ಲೆಯಲ್ಲಿರುವ ತಾಲೂಕು ಮತ್ತು ಅದರ ವಿಸ್ತೀರ್ಣತೆಯನ್ನು ಈ ಕೆಳಗಿನಂತೆ ನೀಡಲಾಗಿದೆ.

ಬೀದರ್ ಜಿಲ್ಲೆ -೧೯೩೧

ಕ್ರಸಂ	ತಾಲೂಕುಗಳು	ವಿಸ್ತೀರ್ಣತೆ ಮೈಲು	ನಗರ ಸಂಖ್ಯೆ	ಹಳ್ಳಿ ಸಂಖ್ಯೆ	ಮುನ್ಸಿಪಾಲಿಟಿ	ಜಹಾಗೀರ ಪ್ರದೇಶ	ಪೈಗಾ ಪ್ರದೇಶ
೧	ಬೀದರ್	೬೨೭	೨	೧೯೭	೧		
೨	ಉದಗಿರ	೬೮೪	೧	೧೭೫	೧		
೩	ಅಹಮದ್‌ಪುರ	೬೮೦	೧	೨೨೨			
೪	ಜನವಾಡ	೪೪೦	೧	೧೩೨			
೫	ನಿಲಾಂಗ್	೬೫೧	೧	೧೬೦			
೬	ಮೈನಾಬಾದ್	೨೯೦	೧	೯೫			
೭	ನಾರಾಯಣಖೇಡ	೨೨೧		೧೦೩			
೮	ಗೊರವಾಡಿ	೨೫೦		೫೭			ಪೈಗಾ
೯	ಜಹಿರಾಬಾದ್	೯೨		೫೪			ಪೈಗಾ
೧೦	ಬಾಲ್ಕಿ	೨೦೭		೧೯			ಪೈಗಾ
೧೧	ಫರತಾಬಾದ್	೨೨೨		೬೧			ಪೈಗಾ
೧೨	ಹಸನಾಬಾದ್	೧೦೯		೪೪			ಪೈಗಾ
೧೩	ಚಿಂಚೋಳಿ	೧೯೨		೫೪			ಪೈಗಾ
೧೪	ಮುರ್ಗಾ	೧೬೦		೪೬		ಜಹಾಗೀರ	

ಈ ಮೇಲಿನ ಮಾಹಿತಿ ೧೯೩೧ರ ಜನಗಣತಿಯನ್ನು ಆಧರಿಸಿದೆ. ಬೀದರ್ ಜಿಲ್ಲೆ ಒಟ್ಟು ಹದಿನಾಲ್ಕು ತಾಲೂಕುಗಳನ್ನು ಒಳಗೊಂಡಿತ್ತು. ಬೀದರ್ ಜಿಲ್ಲೆಯ ಸುಮಾರು ಎಂಟು ತಾಲೂಕುಗಳು ಪೈಗಾ ಪ್ರದೇಶವಾಗಿದ್ದರಿಂದ ಅವುಗಳ ಆಡಳಿತವನ್ನು ಪೈಗಾದ ಮುಖ್ಯಸ್ಥನು ನೋಡಿಕೊಳ್ಳುತ್ತಿದ್ದನು. ಮುರ್ಗಾ ತಾಲೂಕು ಮಾತ್ರ ಜಹಾಗೀರ ಪ್ರದೇಶವಾಗಿತ್ತು. ಇನ್ನುಳಿದ ಐದು ತಾಲೂಕುಗಳು ದಿವಾನಿ ಅಂದರೆ ಸರ್ಕಾರದ ಅಧೀನದಲ್ಲಿತ್ತು. ಹಾಗೆಯೇ ಬಿದರ್ ಜಿಲ್ಲಾ ಪ್ರದೇಶದಲ್ಲಿ ಬೀದರ್ ಮತ್ತು ಉದ್ದಿರ ತಾಲೂಕು ಪ್ರದೇಶದಲ್ಲಿ ಮಾತ್ರ ಮುನ್ಸಿಪಾಲಿಟಿ ಇತ್ತು.

ಹೈದ್ರಾಬಾದ್ ಸಂಸ್ಥಾನ ಭಾರತದಲ್ಲಿ ವಿಲೀನವಾದ ನಂತರ ಬೀದರ್ ಜಿಲ್ಲೆಯಲ್ಲಿದ್ದ ಉದ್ದಿರ, ಅಹಮದ್‌ಪುರ, ನಿಲಾಂಗ, ಗೊರವಾಡಿ, ಜಹರಾಬಾದ್, ಮುರ್ಗಾ ಮತ್ತು ಫರತ್ತಬಾದ್ ತಾಲೂಕುಗಳು ಮಹಾರಾಷ್ಟ್ರಕ್ಕೆ ಸೇರ್ಪಡೆ ಹೊಂದಿದವು. ಇನ್ನುಳಿದ ಬೀದರ್, ಮೈನಾಬಾದ್, ಬಾಲ್ಕಿ, ಚಿಂಚೊಳಿ, ಹಸನಬಾದ್ ತಾಲೂಕು ಪ್ರದೇಶಗಳು ಕನ್ನಡ ಮಾತನಾಡುವ ಪ್ರದೇಶವಾದ್ದರಿಂದ ಅವು ಕರ್ನಾಟಕ ರಾಜ್ಯದಲ್ಲಿ ಉಳಿದುಕೊಂಡವು.[೭]

೩. ರಾಯಚೂರು ಜಿಲ್ಲೆ: ರಾಯಚೂರು ಜಿಲ್ಲೆ ಆರಂಭದಿಂದಲ್ಲೂ ನಿಜಾಮ್ ಆಡಳಿತದಲ್ಲಿ ಗುಲಬರ್ಗಾ ಸುಬಾದ ಭಾಗವಾಗಿತ್ತು. ೧೯೦೧ರ ಜನಗಣತಿ ವರದಿ ಪ್ರಕಾರ ರಾಯಚೂರು ಜಿಲ್ಲೆ ಆರು ತಾಲೂಕುಗಳಿಂದ ಕೂಡಿತ್ತು. ನಂತರ ೧೯೦೫ರಲ್ಲಿ ಕೆಲವು ತಾಲೂಕುಗಳು ಬಿಟ್ಟುಹೋಗಿ ಇನ್ನೂ ಕೆಲವು ತಾಲೂಕುಗಳು ಸೇರಿಕೊಂಡವು. ಲಿಂಗಸುಗೂರು ಜಿಲ್ಲಾ ಪ್ರದೇಶದಲ್ಲಿದ್ದ ಕುಷ್ಟಗಿ, ಲಿಂಗಸುಗೂರು, ಗಂಗಾವತಿ ಮತ್ತು ಸಿಂಧನೂರ ತಾಲೂಕುಗಳು ರಾಯಚೂರು ಜಿಲ್ಲೆಯಲ್ಲಿ ಸೇರಿಕೊಂಡವು. ಯಾದಗಿರಿ ತಾಲೂಕು ಪ್ರದೇಶವನ್ನು ಗುಲಬರ್ಗಾ ಜಿಲ್ಲೆಗೆ ಸೇರಿಸಲಾಯಿತು. ರಾಯಚೂರು ಜಿಲ್ಲಾ ಪ್ರದೇಶ ಹನ್ನೊಂದು ತಾಲೂಕುಗಳಿಂದ ಕೂಡಿತ್ತು.[೮೮] ಆ ತಾಲೂಕು ಮತ್ತು ಅವುಗಳ ವಿಸ್ತೀರ್ಣತೆಯನ್ನು ಈ ಕೆಳಗಿನಂತೆ ಕೋಷ್ಟಕದಲ್ಲಿ ನೀಡಲಾಗಿದೆ.

ರಾಯಚೂರು ಜಿಲ್ಲೆ–೧೯೩೧

ಕ್ರಸಂ	ತಾಲೂಕುಗಳು	ವಿಸ್ತೀರ್ಣತೆ ಮೈಲು	ನಗರ ಸಂಖ್ಯೆ	ಹಳ್ಳಿ ಸಂಖ್ಯೆ	ಮುನ್ಸಿಪಾಲಿಟಿ	ಜಹಾಗೀರ ಪ್ರದೇಶ	ಪೈಗಾ ಪ್ರದೇಶ
೧	ರಾಯಚೂರು	೬೯೬	೧	೧೯೯	೧		
೨	ಅಮಲಪುರ	೨೩೨	೧	೪೮	೧		
೩	ದೇವದುರ್ಗ	೫೪೭	೨	೧೮೭	೧		
೪	ಗಂಗಾವತಿ	೪೫೯	೧	೪೫೮	೧		
೫	ಕುಷ್ಟಗಿ	೭೧೫	೨	೨೨೮	೧		
೬	ಲಿಂಗಸುಗೂರ	೭೯೩	೨	೧೯೫	೧		
೭	ಮಾನವಿ	೬೭೬	೨	೧೬೮	೧		
೮	ಸಿಂಧನೂರು	೬೭೨	೧	೧೮೨	೧		
೯	ಕೊಪ್ಪಳ	೫೩೧	೧	೧೬೨		ಜಹಾಗೀರ	
೧೦	ಯಲಬುರ್ಗಾ	೪೯೩	–	೧೦೪		ಜಹಾಗೀರ	
೧೧	ಗದ್ವಾಲ	೮೧೭	೩	೧೨೨	ಸಂಸ್ಥಾನ		

ಈ ಮೇಲಿನ ವಿವರಣೆ ೧೯೩೧ರ ಜನಗಣತಿಯನ್ನಾಧರಿಸಿದೆ. ರಾಯಚೂರು ಜಿಲ್ಲೆ ಒಟ್ಟು ಹನ್ನೊಂದು ತಾಲೂಕು ಪ್ರದೇಶಗಳನ್ನು ಒಳಗೊಂಡಿತ್ತು.[೮೯] ಅದರಲ್ಲಿ ಕೊಪ್ಪಳ ಮತ್ತು ಯಲಬರ್ಗಾ ತಾಲೂಕು ಪ್ರದೇಶಗಳು ಸಾಲಾರ್‌ಜಂಗ್ ಎಸ್ಟೇಟ್ನ ಜಹಾಗೀರ್ ಪ್ರದೇಶಗಳಾಗಿದ್ದವು. ಇವುಗಳ

ಆಡಳಿತದ ಸಂಪೂರ್ಣ ಹೊಣೆಗಾರಿಕೆ ಸಾಲಾರ್‌ಜಂಗ್‌ನದಾಗಿತ್ತು. ಹಾಗೆಯೇ ಗದ್ವಾಲ ಸಂಸ್ಥಾನವೂ ರಾಯಚೂರು ಜಿಲ್ಲೆಯ ತಾಲೂಕು ಪ್ರದೇಶವಾಗಿತ್ತು. ಇನ್ನುಳಿದ ಪ್ರದೇಶಗಳು ನಿಜಾಮ್ ದಿವಾನ್ ಆಡಳಿತಕ್ಕೆ ಒಳಗಾದ ಪ್ರದೇಶಗಳಾಗಿದ್ದವು. ಇವುಗಳ ಆಡಳಿತ ಮತ್ತು ಆರ್ಥಿಕ ಸ್ಥಿತಿಗೆ ಸಂಬಂಧಿಸಿ ನಿಜಾಮ್ ಸರ್ಕಾರವೇ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಿತ್ತು. ಗದ್ವಾಲ ಮತ್ತು ಅಲಂಪುರ್ ಪ್ರದೇಶಗಳು ಆಂಧ್ರಪ್ರದೇಶಕ್ಕೆ ಸೇರಿಕೊಂಡರೆ ಇನ್ನುಳಿದ ಪ್ರದೇಶಗಳು ಕರ್ನಾಟಕಕ್ಕೆ ಸೇರ್ಪಡೆಯಾದವು.[೮೦]

ಜಿಲ್ಲಾ ಆಡಳಿತ ಅಧಿಕಾರಿಯನ್ನು ತಾಲೂಕುದಾರ ಎಂದು ಕರೆಯುತ್ತಿದ್ದರು. ಈ ಅಧಿಕಾರಿಯನ್ನು ನಿಜಾಮನು ಪ್ರಧಾನಮಂತ್ರಿಯ ಸಲಹೆ ಮೇರೆಗೆ ನೇಮಕ ಮಾಡುತ್ತಿದ್ದನು. ತಾಲೂಕುದಾರ ಇಡೀ ಜಿಲ್ಲಾ ಆಡಳಿತದ ಕೇಂದ್ರ ಬಿಂದುವಾಗಿದ್ದನು. ಪ್ರಧಾನಮಂತ್ರಿ ಸಾಲಾರ್‌ಜಂಗ್‌ನು ಆಡಳಿತ ಸುಧಾರಣೆ ಕಾಯಿದೆಯನ್ನು ಜಾರಿಗೆ ತರುವ ಮೂಲಕ ತಾಲೂಕುದಾರರಿಗೆ ಹೆಚ್ಚಿನ ಅಧಿಕಾರವನ್ನು ನೀಡಿದನು. ತಾಲೂಕುದಾರ ಜಿಲ್ಲೆಯ ಆಡಳಿತ, ಸಾಮಾಜಿಕ ಮತ್ತು ನ್ಯಾಯಾಂಗಕ್ಕೆ ಸಂಬಂಧಿಸಿದಂತೆ ಅಧಿಕಾರ ಪಡೆದಿದ್ದನು. ತಾಲೂಕುದಾರನಿಗೆ ಜಿಲ್ಲೆಯ ಆಡಳಿತದಲ್ಲಿ ಎರಡನೇ ತಾಲೂಕುದಾರ ಮತ್ತು ಮೂರನೆಯ ತಾಲೂಕುದಾರ ಎಂಬ ಅಧಿಕಾರಿಗಳು ಸಹಾಯಕರಾಗಿದ್ದರು. ಜಿಲ್ಲೆಯ ಆಡಳಿತದ ಹೊರೆಯನ್ನು ಕಡಿಮೆ ಮಾಡಲು ಮೂರು ತಾಲೂಕುಗಳನ್ನೊಳಗೊಂಡ ಉಪ ವಿಭಾಗೀಯ ಕಚೇರಿಯನ್ನು ಆರಂಭಿಸಲಾಗಿತ್ತು. ಅದರ ಅಧಿಕಾರಿಯನ್ನಾಗಿ ಮೂರನೆಯ ತಾಲೂಕುದಾರನನ್ನು ನೇಮಿಸಲಾಯಿತು. ತಾಲೂಕುದಾರನು ಜಿಲ್ಲಾ ಆಡಳಿತ ವ್ಯವಸ್ಥೆಯನ್ನು ಉತ್ತಮಗೊಳಿಸಲು ಈ ಕೆಳಗಿನ ಪ್ರಮುಖ ಅಧಿಕಾರವನ್ನು ಹೊಂದಿದ್ದನು.[೮೧]

೧. ನೇಮಕಾತಿ ಅಧಿಕಾರ: ನಿಜಾಮ್ ಸರ್ಕಾರ ಜಿಲ್ಲಾ ಆಡಳಿತ ವ್ಯವಸ್ಥಿತವಾಗಿ ಸಾಗಲು ತನ್ನ ಅಧೀನ ಅಧಿಕಾರಿಗಳ ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ತಾಲೂಕುದಾರನಿಗೆ ನೀಡಿತ್ತು. ಜಿಲ್ಲಾ ಆಡಳಿತದ ಪ್ರಮುಖ ಜವಾಬ್ದಾರಿ ಹುದ್ದೆಗಳಾದ ಶಿರಸ್ಥೆದಾರ, ಖಜಾಂಚಿ ಹಾಗೂ ಲೆಕ್ಕಾಧಿಕಾರಿಗಳನ್ನು ಬಿಟ್ಟು ಉಳಿದ ಅಧಿಕಾರಿಗಳನ್ನು ನೇಮಿಸಿಕೊಳ್ಳುವ ಅಧಿಕಾರ ಪಡೆದಿದ್ದನು. ನೇಮಕವಾದ ಅಧಿಕಾರಿಗಳು ತಾಲೂಕುದಾರನಿಗೆ ನಿಷ್ಠೆಯಿಂದ ಇರುತ್ತಿದ್ದರು. ತಾಲೂಕುದಾರರು ಕೇಂದ್ರ ಪ್ರಭುತ್ವದೊಂದಿಗೆ ವಿಶ್ವಾಸದಿಂದಿದ್ದು ಸ್ಥಳೀಯ ಅಧಿಕಾರಿಗಳ ಮೇಲೆ ನಿಯಂತ್ರಣ ಹೊಂದಿದ್ದರು.

೨. ಅಧಿಕಾರಿಗಳ ಅಮಾನತು: ತಾಲೂಕುದಾರನು ಜಿಲ್ಲಾ ಆಡಳಿತವನ್ನು ಉತ್ತಮಗೊಳಿಸುವ ಉದ್ದೇಶದಿಂದ ಆಡಳಿತದಲ್ಲಿ ಬೇಜವಾಬ್ದಾರಿ ತೋರಿದ ಅಧಿಕಾರಿಗಳನ್ನು ಅಮಾನತು ಮಾಡುವ ಅಧಿಕಾರ ಹೊಂದಿದ್ದನು. ಅಮಾನತು ಮಾಡುವ ಸಂದರ್ಭದಲ್ಲಿ ಸುಬೇದಾರನ ಅಪ್ಪಣೆಯನ್ನು ಪಡೆಯುವುದು ಕಡ್ಡಾಯವಾಗಿತ್ತು. ತಾಲೂಕುದಾರನು ಸುಬೇದಾರನ ಮಾರ್ಗದರ್ಶನದಲ್ಲಿ ಅಧಿಕಾರವನ್ನು ಚಲಾಯಿಸುತ್ತಿದ್ದನು.[೮೨]

೩. ಕಂದಾಯಕ್ಕೆ ಸಂಬಂಧಿಸಿದ ಅಧಿಕಾರ: ತಾಲೂಕುದಾರನು ನಿಜಾಮ್ ಸರಕಾರದ ಹಾಗೂ ಸುಬೇದಾರನ ಆದೇಶಗಳಿಗೆ ಅನುಸಾರವಾಗಿ ಅಧಿಕಾರವನ್ನು ಚಲಾಯಿಸುತ್ತಿದ್ದನು. ತನ್ನ ಜಿಲ್ಲೆಯಲ್ಲಿ ನಿಜಾಮ್ ದಿವಾನಿ ಆಡಳಿತಕ್ಕೆ ಸಂಬಂಧಿಸಿದ ಭೂಮಿಯ ಕಂದಾಯವನ್ನು ವಸೂಲಿ ಮಾಡುವ ಅಧಿಕಾರ ಹೊಂದಿದ್ದನು. ಆದರೆ ತನ್ನ ಜಿಲ್ಲಾ ಪ್ರದೇಶದಲ್ಲಿದ ಪೈಗಾ ಮತ್ತು ಜಹಾಗೀರ್ ಪ್ರದೇಶಗಳ ಆಡಳಿತ ಮತ್ತು ಕಂದಾಯ ವಸೂಲಿಯ ಅಧಿಕಾರ ತಾಲೂಕುದಾರನಿಗೆ ಇರಲಿಲ್ಲ.

೪. ಖಾಲ್ಸಾ ಭೂಮಿ ಅಧಿಕಾರ: ತಾಲೂಕುದಾರನು ಖಾಲ್ಸಾ ಭೂಮಿಯ ಮೇಲೆ ಸಂಪೂರ್ಣ ಅಧಿಕಾರ ಹೊಂದಿದ್ದನು. ಖಾಲ್ಸಾ ಭೂಮಿ ನಿಜಾಮ್ ಸರ್ಕಾರಕ್ಕೆ ಸಂಬಂಧಿಸಿದ ಭೂಮಿಯಾಗಿದ್ದು ಕೃಷಿಗೆ ಯೋಗ್ಯವಾದ ಭೂಮಿಯ ಆಧಾರದ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಭೂಮಿಗೆ ಸಂಬಂಧಪಟ್ಟ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ ಅಧಿಕಾರವನ್ನು ತಾಲೂಕುದಾರ ಪಡೆದಿದ್ದನು. ವಾರಸುದಾರರಿಲ್ಲದ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿತ್ತು.

೫. ನ್ಯಾಯಾಂಗ ಅಧಿಕಾರ: ಆರಂಭದಲ್ಲಿ ತಾಲೂಕುದಾರರಿಗೆ ಕಂದಾಯ ವಸೂಲಿ ಮಾಡುವ ಅಧಿಕಾರ ಮಾತ್ರ ನೀಡಲಾಗಿತ್ತು. ೧೮೬೭ರ ಕಂದಾಯದ ಜೊತೆಗೆ ನ್ಯಾಯಾಂಗದ ಅಧಿಕಾರವನ್ನು ಸಹ ನೀಡಲಾಯಿತು. ನ್ಯಾಯದಾನ ಮಾಡುವ ಸಂದರ್ಭದಲ್ಲಿ ಸಾಕ್ಷಿ ಪುರಾವೆಗಳನ್ನು ಪರಿಶೀಲಿಸಲಾಗುತ್ತಿತ್ತು. ಕೆಲವು ಸಂದರ್ಭದಲ್ಲಿ ತಾಲೂಕುದಾರನು ನೀಡಿದ ನ್ಯಾಯದ ವಿರುದ್ಧ ಹೈಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿತ್ತು.[೮೩]

೫.೨.೪. ತಾಲೂಕು

ನಿಜಾಮರು ವಿಕೇಂದ್ರೀಕರಣದ ಮೂಲಕ ಮೊಗಲರ ಹಾಗೆ ಸರ್ಕಾರ, ಪರಗಣ ಮತ್ತು ದೆಹ್ (ಹಳ್ಳಿಗಳು) ಎಂದು ವಿಭಾಗಿಸಿಕೊಂಡು ಆಡಳಿತ ನಡೆಸುತ್ತಿದ್ದರು. ೧೬೫೩ರಲ್ಲಿ ಮೊಗಲರ ಪದ್ಧತಿಯಂತಿದ್ದ ಮುಖ್ಯಸ್ಥ ಶಿಖದಾರನ ಆಡಳಿತ ಪ್ರದೇಶಗಳು ತಾಲೂಕುಗಳೆಂದು ಬದಲಾಯಿತು. ತಾಲೂಕು ಅಧಿಕಾರಿಯನ್ನು ತಹಶೀಲ್ದಾರನೆಂದು ಕರೆಯಲಾಯಿತು. ನಂತರ ತಾಲೂಕು ಮಂಡಳಿಗಳನ್ನು ಸ್ಥಾಪಿಸಲಾಯಿತು.[೮೪] ಇದರ ಮುಖಾಂತರ ಆರ್ಥಿಕ ನೆಲೆ ಮತ್ತು ಆಡಳಿತ ನೆಲೆಯನ್ನು ಗಟ್ಟಿಗೊಳಿಸಲು ಪ್ರಯತ್ನಿಸಲಾಯಿತು. ತಾಲೂಕು ಮಂಡಳಿ ಜಿಲ್ಲಾ ಆಡಳಿತದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ತಾಲೂಕು ಮಂಡಳಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಐದು ಸದಸ್ಯರನ್ನು ನೇಮಕ ಮಾಡಲಾಯಿತು. ಅವರಲ್ಲಿ ಇಬ್ಬರು ಅಧಿಕಾರಿ ಸದಸ್ಯರಾಗಿದ್ದರೆ, ಉಳಿದ ಮೂವರು ಅಧಿಕಾರೇತರ ಸದಸ್ಯರಾಗಿದ್ದರು. ಅಧಿಕಾರಿ ಸದಸ್ಯರೆಂದರೆ ಜಿಲ್ಲಾ ಆಡಳಿತದಲ್ಲಿದ್ದ ಎರಡನೆಯ ಮತ್ತು ಮೂರನೆಯ ತಾಲೂಕುದಾರರು. ಇವರು ತಹಶೀಲ್ದಾರನ ಜೊತೆಗೂಡಿ ಅಧಿಕಾರ ಚಲಾಯಿಸುತ್ತಿದ್ದರು. ಅಧಿಕಾರೇತರ

ಸದಸ್ಯರನ್ನು ತಾಲೂಕುದಾರನು ನೇಮಿಸುತ್ತಿದ್ದನು. ಈ ಎಲ್ಲ ಸದಸ್ಯರು ತಾಲೂಕಿನ ಆಡಳಿತ ಮತ್ತು ಆರ್ಥಿಕ ವ್ಯವಸ್ಥೆಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ನಿಜಾಮ ಆಳ್ವಿಕೆಯ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ೪೦ ತಾಲೂಕುಗಳಿದ್ದವು. ಆ ತಾಲೂಕುಗಳ ಹೆಸರು ಈ ಹಿಂದೆ ನೀಡಿರುವ ಜಿಲ್ಲಾ ಪಟ್ಟಿಯಲ್ಲಿವೆ.[೮೫]

ನಿಜಾಮ್ ಸರ್ಕಾರ ತಾಲೂಕು ಅಧಿಕಾರಿಯಾಗಿದ್ದ ತಹಶೀಲ್ದಾರನನ್ನು ತಾಲೂಕು ಪ್ರದೇಶದ ಆದಾಯ ಇಲಾಖೆ ಅಧಿಕಾರಿಯಾಗಿ ನೇಮಿಸಿತು. ತದನಂತರ ತಾಲೂಕು ಪ್ರದೇಶದ ಆಡಳಿತವನ್ನು ಚುರುಕುಗೊಳಿಸುವ ಸಲುವಾಗಿ ಆದಾಯದ ಜೊತೆಗೆ ಶಾಂತಿ ಸುವ್ಯವಸ್ಥೆ, ಲೋಕೋಪಯೋಗಿ, ನ್ಯಾಯಾಂಗ ಮುಂತಾದ ಅಧಿಕಾರಗಳನ್ನು ನೀಡಿತು. ಆಡಳಿತದ ಹೊರೆಯನ್ನು ಕಡಿಮೆ ಮಾಡಲು ಆತನಿಗೆ ಅಧೀನ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು. ತಾಲೂಕಿನ ಪ್ರತಿಯೊಂದು ಇಲಾಖೆಗೆ ಅಧಿಕಾರಿಗಳನ್ನು ನೇಮಿಸಲಾಯಿತು. ಗೀರದವಾರ (ಕಂದಾಯ ನಿರೀಕ್ಷಕರು), ಪೇಷ್ಕರ (ಸಹಾಯಕ), ಜಮಾದಾರ ಇವರು ಆಡಳಿತದಲ್ಲಿ ಸಹಕರಿಸುತ್ತಿದ್ದರು.[೮೬]

ತಹಶೀಲ್ದಾರನನ್ನು ಪ್ರಧಾನಮಂತ್ರಿ ನೇಮಕ ಮಾಡುತ್ತಿದ್ದನು. ಅವನು ಜಿಲ್ಲಾ ಆಡಳಿತದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ರೀತಿಯಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಲಾಗಿತ್ತು. ತಾಲೂಕಿನ ಎಲ್ಲ ಅಧಿಕಾರ ತಹಶೀಲ್ದಾರನಲ್ಲಿಯೇ ಕೇಂದ್ರೀಕೃತವಾಗಿತ್ತು. ತಹಶೀಲ್ದಾರನು ತಾಲೂಕಿನ ಆಡಳಿತದ ಜೊತೆಗೆ ಗ್ರಾಮಾಡಳಿತದಲ್ಲೂ ಸಹಕರಿಸುತ್ತಿದ್ದನು. ನಿಜಾಮ ಸರ್ಕಾರ ಆಡಳಿತ ವಿಕೇಂದ್ರೀಕರಣಗೊಳಿಸಿ ಸಂಸ್ಥಾನದ ಆಡಳಿತವನ್ನು ಸುಗಮಗೊಳಿಸಿತ್ತು.[೮೭]

೫.೨.೫. ನಗರಾಡಳಿತ

ಹೈದ್ರಾಬಾದ್ ನಿಜಾಮನು ನಗರ ಆಡಳಿತಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದನು. ಬ್ರಿಟಿಶರು ಅದಾಗಲೇ ನಗರ ಆಡಳಿತ ವ್ಯವಸ್ಥೆಯನ್ನು ಮದ್ರಾಸ್ ಮತ್ತು ಮುಂಬಾಯಿ ಪ್ರೆಸಿಡೆನ್ಸಿಯಲ್ಲಿ ಜಾರಿಗೆ ತಂದಿದ್ದರು. ಈ ಪದ್ಧತಿಗೆ ಮಾರುಹೋದ ದೇಶಿಯ ಸಂಸ್ಥಾನಗಳು ತಮ್ಮ ಸಂಸ್ಥಾನಗಳಲ್ಲಿ ನಗರ ಆಡಳಿತವನ್ನು ವ್ಯವಸ್ಥಿತವಾಗಿ ಜಾರಿಗೆ ತರಲು ಪ್ರಯತ್ನಿಸುತ್ತಿದ್ದರು. ನಿಜಾಮ ಸಂಸ್ಥಾನವು ೧೮೬೯ರಲ್ಲಿ ಬ್ರಿಟಿಶ್ ಮಾದರಿಯಲ್ಲಿ ನಗರಾಡಳಿತವನ್ನು ಜಾರಿಗೊಳಿಸಲಾಯಿತು.[೮೮]

ಸಾಲಾರ್‌ಜಂಗ್‌ನು ಹೈದರಾಬಾದ್ ನಗರದಲ್ಲಿ ಪುರಸಭೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿದನು. ತದನಂತರ ಸಂಸ್ಥಾನದ ಸುಭಾಗಳಾದ ಗುಲಬರ್ಗಾ, ಔರಂಗಬಾದ್, ಮೇಡಕ್ ಮತ್ತು ವಾರಂಗಲ್ಲಿನಲ್ಲಿ ಸ್ಥಾಪನೆಯಾದ ಪುರಸಭೆಗಳು ನಗರ ಮಾರುಕಟ್ಟೆಯನ್ನು ಹಾಗೂ ನಗರ ಪ್ರದೇಶದ ನಿಯಂತ್ರಣ ಮಾಡಲು ಪ್ರತ್ಯೇಕವಾದ ಇಲಾಖೆಯನ್ನು ಹೊಂದಿದ್ದವು. ನಗರ ಪ್ರದೇಶಗಳ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಕೊತ್ವಾಲ್–ಇ–ಬಾಲ್ದಾ ಎಂಬ ಪೊಲೀಸ್ ಕಮೀಷನರನ್ನು

ನೇಮಿಸಲಾಗಿತ್ತು. ಪುರಸಭೆ ಆಡಳಿತ ಮಂಡಳಿಗೆ ಅಧ್ಯಕ್ಷ, ಕಮೀಷನರ್ ಹಾಗೂ ಆರು ಜನ ಸದಸ್ಯರನ್ನು ನೇಮಿಸಲಾಯಿತು. ಆರು ಜನ ಸದಸ್ಯರಲ್ಲಿ ಇಬ್ಬರು ಸದಸ್ಯರು ಸಾಮಾನ್ಯ ಜನರಾಗಿದ್ದರೆ ಉಳಿದ ನಾಲ್ಕು ಸದಸ್ಯರು ನಿಜಾಮ ಆಡಳಿತದ ಪಟ್ಟಭದ್ರ ಹಿತಾಶಕ್ತಿಗಳಾದ ಜಹಾಗೀರದಾರರು ಹಾಗೂ ಪೈಗಾದಾರರು ಆಗಿರುತ್ತಿದ್ದರು. ಪುರಸಭೆಯ ಮೇಲುಸ್ತುವಾರಿ ಅಧಿಕಾರಿಯಾಗಿ ಸೂಪರಿಡೆಂಟನನ್ನು ನೇಮಿಸಲಾಯಿತು. ೧೮೮೧ರ ನಂತರ ಪ್ರತಿಯೊಂದು ಪುರಸಭೆಗೆ ಆಡಳಿತವನ್ನು ನೋಡಿಕೊಳ್ಳಲು ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸುವ ಮೂಲಕ ಅವುಗಳ ಆಡಳಿತ ಭದ್ರಪಡಿಸಲಾಯಿತು.[೯]

೧೮೮೪ರ ನಂತರ ನಿಜಾಮ್ ಮೆಹಬೂಬ್ ಅಲಿಖಾನ ಬಹಾದ್ದೂರನು ನಗರಾಡಳಿತವನ್ನು ಕಾಯಿದೆ ಬದ್ಧವಾಗಿ ಜಾರಿಗೊಳಿಸಲು ಪ್ರಯತ್ನಿಸಿದನು. ನಂತರ ೧೯೦೩ರಲ್ಲಿ ಪುರಸಭೆ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಜೊತೆಗೆ ೨೪ ಜನ ಸದಸ್ಯರಿಂದ ಕೂಡಿದ ಸಮಿತಿ ಇತ್ತು. ಈ ಸದಸ್ಯರಲ್ಲಿ ಹನ್ನೆರಡು ಜನ ಸದಸ್ಯರು ಅಧಿಕಾರೇತರ ಸದಸ್ಯರಾಗಿದ್ದರೆ ಇನ್ನುಳಿದ ನಾಲ್ಕು ಜನ ಸದಸ್ಯರು ನಿವೃತ ಅಧಿಕಾರಿಗಳು ಹಾಗೂ ಆರು ಜನ ಸದಸ್ಯರು ಅಧಿಕಾರಿಗಳಾಗಿದ್ದವರು. ೧೯೦೫ರಲ್ಲಿ ಈ ಕಾಯಿದೆಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಸದಸ್ಯರ ಸಂಖ್ಯೆಯನ್ನು ಕಡಿತಗೊಳಿಸಲಾಯಿತು.[೧೦]

೧೯೦೮ರಲ್ಲಿ ಸಂಸ್ಥಾನ ನಗರ ಸುಧಾರಣೆಗಾಗಿ ಮಂಡಳಿಯೊಂದನ್ನು ನೇಮಿಸಿತು. ಅದು ನಗರ ಸುಧಾರಣೆ ಮಂಡಳಿ ಎಂದಿತ್ತು. ನಗರ ಅಭಿವೃದ್ಧಿಗಾಗಿ ಹೊಸ ಯೋಜನೆಗಳನ್ನು ಹಾಕಿಕೊಂಡು ನಗರ ಆಡಳಿತ ಭದ್ರಪಡಿಸುವ ಪ್ರಯತ್ನ ಮಾಡಿತು. ಆ ಸಂದರ್ಭದಲ್ಲಿ ಬ್ರಿಟಿಶ್ ರೆಸಿಡೆಂಟ್‌ನಾದ ಪೆನ್ನೆನ್‌ನು ನಗರ ಸುಧಾರಣೆ ಮಂಡಳಿಯಲ್ಲಿ ಕೆಲವು ಬದಲಾವಣೆಗಳಿಗೆ ಶಿಫಾರಸ್ಸು ಮಾಡಿದನು. ಇದಕ್ಕನುಗುಣವಾಗಿ ೧೯೧೨ರಲ್ಲಿ ಹೊಸ ನಗರ ಸುಧಾರಣೆಯನ್ನು ಜಾರಿಗೆ ತರುವ ಮೂಲಕ ಬದಲಾವಣೆಯ ಕಡೆಗೆ ಹೆಜ್ಜೆ ಹಾಕಲಾಯಿತು.

೧೯೩೨ರಲ್ಲಿ ಹೈದರಾಬಾದ್ ಶಾಸನ ರಚನೆ ಸಭೆಯು ಹೈದರಾಬಾದ್ ಪುರಸಭೆ ಕಾಯಿದೆ ೧೯೩೨ ಅನ್ನು ಜಾರಿಗೆ ತಂದಿತು. ಈ ಕಾಯಿದೆಯನ್ನು ಪುರಸಭೆ ಕಾನೂನಿನ ಚೌಕಟ್ಟಿನಡಿ ತಂದಿತು. ಅದಾಗಲೇ ಸಂಸ್ಥಾನದಲ್ಲಿ ಜಾರಿಯಲ್ಲಿದ್ದ ಬಾಂಬೆ–ಮದ್ರಾಸ್ ಪುರಸಭೆ ಕಾಯಿದೆಯಿಂದ ಹೊರಬಂದು ಸ್ವತಂತ್ರವಾದ ಕಾಯಿದೆಯನ್ನು ರೂಪಿಸಲಾಯಿತು. ೧೯೩೩ರಲ್ಲಿ ಈ ಕಾಯಿದೆ ಜಾರಿಗೆ ಬರುವ ಮೂಲಕ ನಗರ ಆಡಳಿತವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿತು.

೧. ಪುರಸಭೆ ನಿಗಮ

೨. ಸಮನ್ವಯ ಸಮಿತಿ

೩. ಪುರಸಭೆ ಕಮಿಷನರ್

ಹೈದರಾಬಾದ್ ಪುರಸಭೆ ಕಾಯಿದೆಯನ್ನು ಹಾಗೂ ಪುರಸಭೆ ಆಡಳಿತವನ್ನು ವ್ಯವಸ್ಥಿತಗೊಳಿಸಲು ಪುರಸಭೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರೊಂದಿಗೆ ೩೬ ಸದಸ್ಯರನ್ನು ಚುನಾಯಿತ ಮತ್ತು ನಾಮನಿರ್ದೇಶಿತ ಪದ್ಧತಿಯಡಿ ನೇಮಿಸಲು ಜಾರಿಗೊಳಿಸಿತು. ಈ ೩೬ ಜನ ಸದಸ್ಯರಲ್ಲಿ ೧೩ ಸದಸ್ಯರನ್ನು ನಾಮನಿರ್ದೇಶಿತರನ್ನಾಗಿ ಮಾಡಲಾಗಿತ್ತು. ಅವರಲ್ಲಿ ಪಾರ್ಷಿ, ಕ್ರೈಸ್ತ ಮತ್ತು ದಲಿತ ಸಮುದಾಯಕ್ಕೆ ಸೇರಿದ ಒಬ್ಬೊಬ್ಬ ಸದಸ್ಯರನ್ನು ನಾಮನಿರ್ದೇಶಿಸಿದ್ದರು. ಇನ್ನುಳಿದ ಹತ್ತು ಜನ ಸದಸ್ಯರನ್ನು ಸರ್ಫ–ಎ–ಖಾಸ್, ಪೈಗಾ, ಸಾಲಾರ್‌ಜಂಗ್ ಎಸ್ಟೇಟ್, ಪೇಷ್ಕರ್ ಎಸ್ಟೇಟ್ ಮತ್ತು ಜಹಗೀರ್ ಪ್ರದೇಶದಿಂದ ನೇಮಕ ಮಾಡಲಾಗುತಿತ್ತು. ಉಳಿದ ೨೩ ಸದಸ್ಯರನ್ನು ನೇರ ಚುನಾವಣೆಯ ಮೂಲಕ ಆಯ್ಕೆ ಮಾಡುವ ಪದ್ಧತಿಯನ್ನು ಈ ಕಾಯಿದೆ ಜಾರಿಗೆ ತಂದಿತು. ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕು ಮತ್ತು ಅಧಿಕಾರವನ್ನು ಭೂಮಾಲೀಕರಿಗೆ ಹಾಗೂ ಕಾನೂನಾತ್ಮಕವಾಗಿ ವಿಶ್ವವಿದ್ಯಾಲಯದಿಂದ ಪದವಿ ಪಡೆದ ಪದವೀಧರರಿಗೆ ನೀಡಿತು. ನಿಜಾಮರು ನಗರ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದು ಕಂಡುಬರುತ್ತದೆ.[೯೧]

೫.೨.೬. ಗ್ರಾಮಾಡಳಿತ

ಹೈದರಾಬಾದ್ ನಿಜಾಮರ ಆಡಳಿತದ ಕೊನೆಯ ಘಟಕ ಗ್ರಾಮಾಡಳಿತವಾಗಿದೆ. ಈ ಪದ್ಧತಿ ಪ್ರಾಚೀನ ಕಾಲದಿಂದಲೂ ನಡೆದು ಬಂದಿದ್ದು ಗಾವುಂಡ, ಪ್ರಭುಗಾವುಂಡ, ಪೆರ್ಗಡೆಗಳೆಂಬ ಅಧಿಕಾರಿವರ್ಗ ಗ್ರಾಮಾಡಳಿತ ಕಾರ್ಯವನ್ನು ನಿರ್ವಹಿಸುತ್ತಿತ್ತು. ಮಧ್ಯಕಾಲೀನ ಕಾಲಘಟ್ಟದಲ್ಲಿ ಆಳ್ವಿಕೆ ಮಾಡಿದ ಮುಸ್ಲಿಂ ಅರಸು ಮನೆತನಗಳ ಆಳ್ವಿಕೆಯಲ್ಲೂ ಗ್ರಾಮಾಡಳಿತವೇ ಕೊನೆಯ ಘಟಕವಾಗಿತ್ತು. ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಗ್ರಾಮಾಡಳಿತವನ್ನು ಪಟೇಲ್, ಕುಲಕರ್ಣಿ ಮತ್ತು ಚೌಕೀದಾರ ಎಂಬ ಅಧಿಕಾರಿಗಳು ನಡೆಸುತ್ತಿದ್ದರು. ನಿಜಾಮರ ಆಡಳಿತ ಅವಧಿಯಲ್ಲಿ ಈ ಮೇಲಿನ ಅರಸುಮನೆತನಗಳ ಹಾಗೆ ಗ್ರಾಮಾಡಳಿತದ ಅಧಿಕಾರ ಗ್ರಾಮೀಣ ಸ್ಥಳೀಯರಲ್ಲೇ ಇತ್ತು.

ನಿಜಾಮರು ಆಡಳಿತದ ಮುಖ್ಯಸ್ಥನನ್ನು ವತನದಾರ ಎಂದು ಕರೆಯುತ್ತಿದ್ದರು. ಈ ಅಧಿಕಾರಿ ಗ್ರಾಮದ ಸಂಪೂರ್ಣ ಅಧಿಕಾರವನ್ನು ಚಲಾಯಿಸುತ್ತಿದ್ದನು. ಈತನಿಗೆ ಸಹಾಯಕರಾಗಿ ದೇಶಪಾಂಡೆ, ಸರದೇಶಪಾಂಡೆ, ಪಟ್ವಾರಿ ಎಂಬ ಅಧಿಕಾರಿ ವರ್ಗ ಇರುತ್ತಿತ್ತು. ತಾಲೂಕುದಾರ ಮತ್ತು ತಹಶೀಲ್ದಾರರ ಅಧೀನದಲ್ಲಿ ವತನದಾರ ಕಾರ್ಯನಿರ್ವಹಿಸುತ್ತಿದ್ದನು. ಕೇಂದ್ರಪ್ರಭುತ್ವಕ್ಕೆ ಈತನು ಗ್ರಾಮದ ಪ್ರತಿನಿಧಿಯಾಗಿ ಮಾಹಿತಿ ನೀಡುತ್ತಿದ್ದನು. ಗ್ರಾಮದ ಕಂದಾಯ, ನ್ಯಾಯಾಡಳಿತ, ರಕ್ಷಣೆ ಮುಂತಾದ ಜವಾಬ್ದಾರಿಯನ್ನು ಇವನಿಗೆ ವಹಿಸಲಾಗಿತ್ತು.

ಗ್ರಾಮದ ತೆರಿಗೆ ಸಂಗ್ರಹಿಸುವ ಜವಾಬ್ದಾರಿಯನ್ನು ಮಾಲಿಪಾಟೀಲನಿಗೆ ವಹಿಸಲಾಗಿತ್ತು. ಈತನು ಗ್ರಾಮದ ತೆರಿಗೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಕೇಂದ್ರಪ್ರಭುತ್ವದ

ಆದೇಶಕ್ಕನುಸಾರವಾಗಿ ವತನದಾರನ ಅನುಮತಿಯೊಂದಿಗೆ ಕಂದಾಯ ಸಂಗ್ರಹಿಸುತ್ತಿದ್ದನು. ಮಾಲಿ ಪಾಟೀಲ ಅಧಿಕಾರಿಯ ಹೆಸರು ಸೂಚಿಸುವ ಹಾಗೆ ಮಾಲಿ ಎಂದರೆ ಕರ ವಸೂಲಿ ಪಾಟೀಲ ಎಂದರೆ ಮುಖ್ಯಸ್ಥ ಎಂಬ ಅರ್ಥವಿದೆ. ಗ್ರಾಮಾಡಳಿದ ಶಾಂತಿ ಕಾಪಾಡುವ ಹೊಣೆಯನ್ನು ಹೊತ್ತಿರುವ ಅಧಿಕಾರಿಯನ್ನು ಪೊಲೀಸ್ ಪಾಟೀಲ ಎಂದು ಕರೆಯುತ್ತಿದ್ದರು. ಈ ಅಧಿಕಾರಿಯ ಹೆಸರು ಸೂಚಿಸುವ ಹಾಗೆ ಪೊಲೀಸ್ ಎಂದರೆ ರಕ್ಷಕ, ಪಾಟೀಲ ಎಂದರೆ ಮುಖ್ಯಸ್ಥನೆಂಬ ಅರ್ಥವಿದೆ. ಪಟ್ವಾರಿ ಎಂಬ ಅಧಿಕಾರಿಯು ಗ್ರಾಮದ ಆಡಳಿತದ ಲೆಕ್ಕ ಪತ್ರಗಳನ್ನು ದಾಖಲಿಸುವ ಮೂಲಕ ಅವುಗಳ ಸಂರಕ್ಷಣೆ ಮಾಡುವ ಜವಾಬ್ದಾರಿ ಹೊಂದಿದ್ದನು. ಪಟ್ವಾರಿ ಭೂಮಿಗೆ ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಕೂಡ ದಾಖಲಿಸುತ್ತಿದ್ದನು. ತಲಾರ ಎಂಬ ವ್ಯಕ್ತಿಯು ಗ್ರಾಮಾಡಳಿತದಲ್ಲಿ ಜವಾನನಾಗಿ ಸೇವೆ ಸಲ್ಲಿಸುತ್ತಿದ್ದನು. ಸೇತಸಿಂಧು ಎಂಬುವವನು ಕಾವಲುಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದನು. ಈ ಗ್ರಾಮಾಧಿಕಾರಿಗಳು ಗ್ರಾಮ ಮಟ್ಟದಲ್ಲಿ ಪ್ರಬಲ ಸಮುದಾಯದ ಪ್ರತಿನಿಧಿಗಳಾಗಿರುತ್ತಿದ್ದರು.[೯೩]

ಗ್ರಾಮಾಡಳಿತ ನಿಜಾಮ್ ಪ್ರಭುತ್ವದ ಆದೇಶಕ್ಕೆ ಅನುಗುಣವಾಗಿ ನಡೆಯುತ್ತಿತ್ತು. ಪ್ರಭುತ್ವ ಗ್ರಾಮಾಡಳಿತದಲ್ಲಿ ಹೆಚ್ಚಿನ ಹಸ್ತಕ್ಷೇಪ ಮಾಡದೆ ನಂಬಿಕಸ್ಥ ಅಧಿಕಾರಿಗಳನ್ನು ನಿಯೋಜಿಸುತ್ತಿತ್ತು. ಗ್ರಾಮಾಧಿಕಾರಿಗಳು, ಸುಬೇದಾರ, ತಾಲೂಕುದಾರ ಮತ್ತು ತಹಶೀಲ್ದಾರ ಮುಂತಾದ ಸರ್ಕಾರಿ ಅಧಿಕಾರಿಗಳ ಪ್ರತಿನಿಧಿಗಳಾಗಿ ಗ್ರಾಮ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಗ್ರಾಮದ ಜನರು ಗ್ರಾಮಾಡಳಿತದ ಅಧಿಕಾರಿಗಳಿಗೆ ಕೆಲವೊಮ್ಮೆ ಬಿಟ್ಟಿಚಾಕರಿ ಮಾಡುತ್ತಿದ್ದರು. ಈ ಪದ್ಧತಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಇವತ್ತಿಗೂ ಇದು ಜೀವಂತವಾಗಿದೆ.[೯೪]

ಗ್ರಾಮಗಳಲ್ಲಿ ನ್ಯಾಯ ತೀರ್ಮಾನ ಮಾಡುವ ಪದ್ಧತಿ ಪಂಚಾಯತಿಯಾಗಿದ್ದು, ಇದರ ಪಂಚಾಯಿತರು ಪಂಚಕೂಟರಿಂದ ರಚಿತವಾಗಿರುತ್ತಿತ್ತು. ಪಂಚಾಯಿತಿಗೆ ಗ್ರಾಮಾಡಳಿತದ ಅಧಿಕಾರಿಗಳು ಹಾಗೂ ಗ್ರಾಮದ ಮೇಲುವರ್ಗದ ಪ್ರಮುಖರು ಭಾಗವಹಿಸುತ್ತಿದ್ದರು. ನ್ಯಾಯಕ್ಕಾಗಿ ಗ್ರಾಮದ ಜನರು ಪಂಚಾಯಿತಿಗೆ ಬರುತ್ತಿದ್ದರು. ಪಂಚಾಯಿತಿ ಸಾಕ್ಷಿಗಳನ್ನು ಆಲಿಸಿ ನ್ಯಾಯ ತೀರ್ಮಾನಿಸುತ್ತಿತ್ತು. ಶಿಕ್ಷೆಗೆ ಗುರಿಯಾದ ಕಕ್ಷಿದಾರರಿಂದ ಹೆಚ್ಚಿನ ದಂಡವನ್ನು ವಸೂಲಿ ಮಾಡುತ್ತಿತ್ತು. ಗ್ರಾಮಾಡಳಿತ ಮೇಲುವರ್ಗದ ಕೂಟವಾಗಿದ್ದು ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಆಡಳಿತ ನಡೆಸುತ್ತಿತ್ತು.[೯೫]

೫.೩. ಅಧಿಕಾರಿ ವರ್ಗ

ನಿಜಾಮ ಆಡಳಿತದಲ್ಲಿ ಅಧಿಕಾರಿಗಳು ತಮ್ಮದೇ ಛಾಯೆ ಮೂಡಿಸುತ್ತ ಅನೇಕ ಸೌಲಭ್ಯಗಳನ್ನು ಪಡೆದುಕೊಂಡಿದ್ದರು. ಅವುಗಳಲ್ಲಿ ಜಹಾಗೀರ ಪ್ರದೇಶ, ಇನಾಮ್ ಭೂಮಿ, ಸಂಸ್ಥಾನದಲ್ಲಿ ಪ್ರಮುಖ ಉನ್ನತ ಹುದ್ದೆ ಮುಖ್ಯವಾಗಿದ್ದವು. ಅಧಿಕಾರಿಗಳು ತಾವು ಪಡೆದ ಜಹಾಗೀರ, ಇನಾಮ್ ಪ್ರದೇಶಗಳಲ್ಲಿ

ತಮ್ಮದೇ ಸಾಮ್ರಾಜ್ಯ ಸ್ಥಾಪಿಸಿಕೊಂಡಿದ್ದರು. ಇದರಿಂದ ಜಹಾಗೀರ ಮತ್ತು ಇನಾಮ್ ಪ್ರದೇಶದಲ್ಲಿದ್ದ ಜನಸಾಮಾನ್ಯರು ಜೀವ ಭಯದ ವಾತಾವರಣದಲ್ಲಿ ಬದುಕು ನಡೆಸಬೇಕಾಗಿತ್ತು. ನಿಜಾಮರು, ನಿಜಾಮ ಅಧಿಕಾರಿಗಳು, ಜಹಾಗೀರದಾರರು ಮತ್ತು ಭೂಮಾಲೀಕರ ಆಡಳಿತ ಏಕ ಕಾಲದಲ್ಲಿ ನಡೆಯುತ್ತಿತ್ತು. ಅಂತಹ ಅಧಿಕಾರಿ ವರ್ಗಗಳ ವಿವರ ಈ ಕೆಳಗಿನಂತಿದೆ.

೫.೩.೧. ಜಹಗೀರದಾರ

ಪ್ರಭುತ್ವದ ಆಡಳಿತದಲ್ಲಿ ಉನ್ನತ ಹುದ್ದೆ ಹೊಂದಿದ್ದ ಸರದಾರರು, ಸೈನಿಕ ಅಧಿಕಾರಿಗಳು, ವರಿಷ್ಠರಿಗೆ ಪಡೆದಿದ್ದ ನಿರ್ದಿಷ್ಟ ಭೂಪ್ರದೇಶದಲ್ಲಿ ತೆರಿಗೆ, ಆಡಳಿತ, ನ್ಯಾಯ ತೀರ್ಮಾನಗಳನ್ನು ಕೇಂದ್ರ ಪ್ರಭುತ್ವಕ್ಕನುಗುಣವಾಗಿ ನಡೆಸುವ ಕ್ರಮಕ್ಕೆ ಜಹಗೀರ ಎಂದು ಕರೆಯುತ್ತಾರೆ. ಇಂತಹ ಜಹಗೀರ ಪ್ರದೇಶದ ಮುಖ್ಯಸ್ಥನನ್ನು ಜಹಗೀರದಾರ್ ಎಂದು ಕರೆಯುತ್ತಿದ್ದರು.[೯೬] ಈ ಪದ್ಧತಿ ಬಿಜಾಪುರದ ಆದಿಲ್‌ಶಾಹಿಗಳ ಕಾಲದಿಂದಲೂ ರೂಢಿಗತವಾಗಿತ್ತು. ಆದಿಲ್‌ಶಾಹಿಗಳು ಸಾಮ್ರಾಜ್ಯವನ್ನು ವಿವಿಧ ಜಹಗೀರಗಳನ್ನಾಗಿ ವಿಂಗಡಿಸಿ ವ್ಯವಸ್ಥಿತವಾಗಿ ಆಡಳಿತ ನಡೆಸಲು ಆರಂಭಿಸಿದರು. ನಂತರ ಉತ್ತರ ಭಾರತದಲ್ಲಿ ಮೊಗಲರು ಕೂಡ ಈ ಪದ್ಧತಿಯನ್ನು ಅಳವಡಿಸಿಕೊಂಡರು. ಇವರ ಅವಧಿಗಾಗಲೇ ಇದರ ಸ್ವರೂಪ ಭಿನ್ನವಾಗಿ ಗುರುತಿಸಿಕೊಂಡಿತ್ತು. ಮೊಗಲರ ಆಳ್ವಿಕೆಯಲ್ಲಿ ಸುಲ್ತಾನನಿಗೆ ಸಹಾಯ ಮಾಡಿದ ಕುಲೀನ ವರ್ಗದ ಸರದಾರರಿಗೆ, ಸುಲ್ತಾನನ ಆಪ್ತರಿಗೆ ಹಾಗೂ ಅಧೀನ ಅಧಿಕಾರಿಗಳಿಗೆ ಜಹಗೀರ ನೀಡುವ ಪರಿಪಾಠ ಬೆಳೆದು ಬಂದಿತು.[೯೭]

ಮೊಗಲರ ನಂತರ ಅಧಿಕಾರಕ್ಕೆ ಬಂದ ನಿಜಾಮರ ಆಡಳಿತದಲ್ಲಿ ಜಹಗೀರದಾರರು ಸುಲ್ತಾನನು ನೀಡಿದ ಜಹಗೀರ ಪ್ರದೇಶದಲ್ಲಿ ಆಡಳಿತ ನಡೆಸುತ್ತಿದ್ದು ಸರ್ಕಾರದ ಜವಾಬ್ದಾರಿಯನ್ನೂ ನಿರ್ವಹಿಸುತ್ತಿದ್ದರು. ಹಾಗಾಗಿ ಜಹಗೀರದಾರರು ನಿಜಾಮರ ಆಸ್ಥಾನದಲ್ಲಿಯೇ ಹೆಚ್ಚು ಸಮಯ ಕಳೆಯುತ್ತಿದ್ದರು. ನಿಜಾಮ್ ಸಂಸ್ಥಾನದ ವಿಸ್ತರಣಾ ಕಾರ್ಯದಲ್ಲೂ ಕೂಡ ಸಹಕಾರಿಯಾಗಿದ್ದರು. ತಮ್ಮ ಜಹಗೀರ ಪ್ರದೇಶದಲ್ಲಿ ಅವರ ಅಧೀನ ಅಧಿಕಾರಿಗಳು ಹಾಗೂ ಜಹಗೀರದಾರರ ಖಾಸಗಿ ಪ್ರತಿನಿಧಿಗಳು ಆಡಳಿತ ನಡೆಸುತ್ತಿದ್ದರು. ಇವರು ಜಹಗೀರ ಪ್ರದೇಶದಲ್ಲಿ ರೈತರ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸುತ್ತಿದ್ದರು, ಜಹಗೀರದಾರರಿಗೂ ತಮ್ಮ ಲಾಭದಲ್ಲಿ ಹೆಚ್ಚಿನ ಪ್ರಮಾಣವನ್ನು ನೀಡುತ್ತಿದ್ದರು.[೯೮]

ನಿಜಾಮ್ ಆಡಳಿತದಲ್ಲಿ ಒಟ್ಟು ಆರು ವಿಧದ ಜಹಗೀರ ಪ್ರದೇಶಗಳಿದ್ದವು. ಅವುಗಳೆಂದರೆ ಪೈಗಾ, ತಂಖಾ, ಇಲಾಖಾ, ಮಸೊತ್ರ, ಮದದ್ ಮತ್ತು ಸರ್ಫೆಖಾಸ್ ಜಹಗೀರುಗಳಿದ್ದವು.[೯೯] ಇವರು ನಿಜಾಮ ಸರ್ಕಾರದಲ್ಲಿ ಪ್ರಭಾವಶಾಲಿಗಳಾಗಿದ್ದರು. ಇವರು ಸಲ್ಲಿಸಿದ ಸೇವೆಗೆ ಪ್ರತಿಫಲವಾಗಿ

ಹಗೀರು ನೀಡಲಾಗುತ್ತಿತ್ತು. ಈ ರೀತಿಯಾಗಿ ಜಹಗೀರ ಪಡೆದುಕೊಂಡ ಪ್ರಧಾನ ಮಂತ್ರಿಗಳಾದ ಸಾಲಾರ್‌ಜಂಗ್, ಕಿಷಾನ ಪ್ರಸಾದ್, ಇನಾಮ್ ನವಾಬ್ ಎಂದು ಗುರುತಿಸಬಹುದು.[೧೦೦]

೫.೩.೨. ಜಮೀನ್ದಾರರು

ನಿಜಾಮ್ ಆಡಳಿತದಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಜಮೀನ್ದಾರರು ಸರ್ಕಾರ ನೀಡಿರುವ ಇನಾಮ್ ಭೂಮಿಯ ಮೇಲೆ ಸಂಪೂರ್ಣವಾದ ಅಧಿಕಾರವನ್ನು ಚಲಾಯಿಸುತ್ತಾ, ಹೊಸ ಭೂಮಾಲೀಕರಾಗಿ ಉದಯಿಸಿರುವುದು ಕಂಡುಬರುತ್ತದೆ.[೧೦೧] ಆ ಪ್ರದೇಶದಲ್ಲಿದ್ದ ಜನರಲ್ಲಿ ಭಯಭೀತಿ ಹುಟ್ಟಿಸಲಾಗುತ್ತಿತ್ತು. ಇದರಿಂದ ನಿಜಾಮ್ ಪ್ರಭುತ್ವಕ್ಕೆ ಅನುಕೂಲಕರವಾಗಿದ್ದರೆ, ಜಮೀನ್ದಾರರಿಗೆ ನಿಜಾಮ್ ಸರ್ಕಾರದಿಂದ ಹೆಚ್ಚಿನ ಇನಾಂ ಭೂಮಿ ಪಡೆಯಲು ಸಹಕಾರಿಯಾಗಿತ್ತು. ಸಾವಿರಾರು ಎಕರೆ ಭೂಮಿ ಹೊಂದಿರುವ ಜಮಿನ್ದಾರರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇಂದಿಗೂ ಕಂಡುಬರುತ್ತಾರೆ.[೧೦೨]

೫.೩.೩. ದೇಶಮುಖ

ಹೈದರಾಬಾದ್ ಸಂಸ್ಥಾನದ ಆಡಳಿತದಲ್ಲಿ ದೇಶಮುಖ ತಾಲೂಕಿನ ಎರಡನೆಯ ಪ್ರಮುಖ ಅಧಿಕಾರಿಯಾಗಿದ್ದು, ಕೆಲವು ಹಳ್ಳಿಗಳಿಂದ ಕೂಡಿದ ಪಟ್ಟಣ ಮತ್ತು ನಗರ ಪ್ರದೇಶಗಳ ಮೇಲೆ ಅಧಿಕಾರ ಹೊಂದಿದ್ದನು. ಈ ಪ್ರದೇಶಗಳಲ್ಲಿ ತೆರಿಗೆ ಸಂಗ್ರಹಣೆ ಮತ್ತು ಅದರ ಮೇಲ್ವಿಚಾರಣೆ ಅವನ ಕಾರ್ಯವಾಗಿತ್ತು. ತನ್ನ ಪ್ರದೇಶದಲ್ಲಿ ಎಲ್ಲ ತರಹದ ತೆರಿಗೆ ಮೇಲ್ವಿಚಾರಣೆ ಮಾಡುವುದು ಮತ್ತು ತೆರಿಗೆ ಬಾಕಿ ಉಳಿಯದಂತೆ ನೋಡಿಕೊಳ್ಳುವುದು ಈತನ ಪ್ರಮುಖ ಕರ್ತವ್ಯವಾಗಿತ್ತು. ದೇಶಮುಖನ ಸೇವೆಗೆ ಪ್ರತಿಯಾಗಿ ನಿಜಾಮ್ ಸರ್ಕಾರ ಸಣ್ಣ ಪ್ರಮಾಣದ ಜಹಾಗೀರು ನೀಡುತ್ತಿತ್ತು. ತಾವೂ ಪಡೆದ ಜಹಾಗೀರ ಪ್ರದೇಶದಲ್ಲಿ ಕೃಷಿ ಕಾರ್ಯ ಮಾಡಲು ಭೂರಹಿತ ಬಡ ರೈತರಿಗೆ ಗೇಣಿ ಆಧಾರದ ಮೇಲೆ ಭೂಮಿಯನ್ನು ಉಳುಮೆಗೆ ನೀಡುತ್ತಿದ್ದರು. ಗೇಣಿ ಭೂಮಿಯಲ್ಲಿ ರೈತರು ಹೆಚ್ಚಿನ ಬೆಳೆಯನ್ನು ದೇಶಮುಖರಿಗೆ ನೀಡಬೇಕಾಗಿತ್ತು. ದೇಶಮುಖರು ರೈತರಿಗೆ ಹಣಕಾಸಿನ ನೆರವು ನೀಡುವ ನೆಪದಲ್ಲಿ ಹೆಚ್ಚಿನ ಬಡ್ಡಿದರದಲ್ಲಿ ಸಾಲ ನೀಡಿ ಶೋಷಣೆ ಮಾಡುತ್ತಿದ್ದರು. ಇದ್ದ ಭೂಮಿಯನ್ನು ದೇಶಮುಖರಿಂದ ಪಡೆದ ಸಾಲ ತೀರಿಸಲು ಕಳೆದುಕೊಂಡು ತಮ್ಮ ಭೂಮಿಯಲ್ಲಿಯೇ ಕೃಷಿ ಕಾರ್ಮಿಕರಾಗುತ್ತಿದ್ದರು.[೧೦೩]

ದೇಶಮುಖರು ನಿಜಾಮ ಸರ್ಕಾರದಿಂದ ಪಡೆದ ಜಹಾಗೀರ ಪ್ರದೇಶದಲ್ಲಿ ಮರಿ ಪಾಳೆಯಗಾರರಂತೆ ಅಧಿಕಾರ ಚಲಾಯಿಸುತ್ತಿದ್ದರು. ಕೆಲವೊಮ್ಮೆ ದೇಶಮುಖರು ನಿಜಾಮರ ವಿಶ್ವಾಸ ಕಳೆದುಕೊಂಡ ಸಂದರ್ಭದಲ್ಲಿ ನಿಜಾಮ್ ಸರ್ಕಾರ ಜಹಾಗೀರ ಪ್ರದೇಶವನ್ನು ಹಿಂಪಡೆಯುತಿತ್ತು. ಹಾಗಾಗಿ

ದೇಶಮುಖರು ನಿಜಾಮರ ವಿಶ್ವಾಸವನ್ನು ನಿರಂತರ ಪಡೆಯಲು ಪ್ರತಿ ವರ್ಷ ಕಪ್ಪಕಾಣಿಕೆ ಸಲ್ಲಿಸುತ್ತಿದ್ದರು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ದೇಶಮುಖ ಮನೆತನಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಸ್ವಾತಂತ್ರ್ಯ ನಂತರ ತಮ್ಮಲ್ಲಿದ್ದ ಭೂಮಿಯನ್ನು ಇತರರ ಹೆಸರಿನಲ್ಲಿ ನೋಂದಾಯಿಸಿ ಆ ಭೂಮಿಯ ವಾರಸುದಾರರಾಗಿ ಇವತ್ತಿಗೂ ಕಂಡುಬರುತ್ತಾರೆ.[೧೦೪]

೫.೩.೪. ದೇಸಾಯಿ

ದೇಸಾಯಿ ತಾಲೂಕಿನ ಎರಡನೆಯ ಲೆಕ್ಕಾಧಿಕಾರಿಯಾಗಿದ್ದನು. ದೇಶಮುಖನ ಅಧೀನದಲ್ಲಿ ತೆರಿಗೆ ಸಂಗ್ರಹಣ ಮತ್ತು ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ಬರೆದಿಡುವುದು ಈತನ ಪ್ರಮುಖ ಕೆಲಸವಾಗಿತ್ತು. ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿನ ಖರ್ಚುವೆಚ್ಚಗಳ ದಾಖಲೆಗಳನ್ನು ದಾಖಲಿಸುತ್ತಿದ್ದನು. ದೇಸಾಯಿ ತನ್ನ ಅಧೀನದಲ್ಲಿ ಬರುವ ಪ್ರದೇಶದ ದಾಖಲೆಗಳನ್ನು ನಿಯಮಿತವಾಗಿ ಹಣಕಾಸಿನ ಮುಖ್ಯ ಅಧಿಕಾರಿಗೆ ಒಪ್ಪಿಸುವುದು ಈತನ ಕರ್ತವ್ಯವಾಗಿತ್ತು. ದೇಶಮುಖ ಮತ್ತು ದೇಸಾಯಿ ಜೊತೆಗೂಡಿ ರೈತರಿಂದ ಹೆಚ್ಚಿನ ತೆರಿಗೆಯನ್ನು ವಸೂಲಿ ಮಾಡುತ್ತಿದ್ದರು. ತೆರಿಗೆಯನ್ನು ನೀಡದ ರೈತರ ಭೂಮಿಯನ್ನು ಅವರಿಗೆ ತಿಳಿಯದೆ ದೇಸಾಯಿ ಮತ್ತು ದೇಶಮುಖರು ತಮ್ಮ ಹೆಸರಿಗೆ ಬದಲಾಯಿಸಿಕೊಳ್ಳುತ್ತಿದ್ದರು. ಆ ರೈತರು ಭೂವಂಚನೆಯಿಂದ ಕೂಲಿ ಕಾರ್ಮಿಕರಾಗಿ ಬದಲಾಗುತ್ತಿದ್ದರು. ದೇಶಮುಖ ಮತ್ತು ದೇಸಾಯಿ ಮನೆತನಗಳು ಹೈದರಾಬಾದ್ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇವತ್ತಿಗೂ ಇವೆ.[೧೦೫]

೫.೩.೫. ಪಟೇಲ

ಗ್ರಾಮದ ಮುಖ್ಯಸ್ಥನಾಗಿದ್ದ ಈತ ಗ್ರಾಮದ ಆಡಳಿತ, ತೆರಿಗೆ ಹಾಗೂ ನ್ಯಾಯಾಂಗ ಆಡಳಿತವನ್ನು ನೊಡಿಕೊಳ್ಳುತ್ತಿದ್ದನು. ಗ್ರಾಮದ ಜನತೆ ಹಾಗೂ ರಾಜ್ಯದ ಅಧಿಕಾರಿಗಳ ನಡುವೆ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಈತನ ಅಧಿಕಾರ ವಂಶಪರಂಪರೆಯಿಂದ ಕೂಡಿತ್ತು. ಗ್ರಾಮ ಮುಖ್ಯಸ್ಥನ ಈ ಹುದ್ದೆಯನ್ನು ಮೇಲ್‌ವರ್ಗದವರೇ, ಅದರಲ್ಲೂ ಹಿಂದೂಗಳೇ ಹೊಂದಿದ್ದುದು ಕಂಡುಬರುತ್ತದೆ. ಮುಸ್ಲಿಂ ಸಮುದಾಯಕ್ಕೆ ಸೇರಿದವರು ಗ್ರಾಮದ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸಿದ ಪ್ರಕರಣಗಳು ಕಡಿಮೆ.[೧೦೬] ಪಟೇಲನು ಗ್ರಾಮದ ತೆರಿಗೆಯನ್ನು ಸಂಗ್ರಹಿಸಿ ಕೇಂದ್ರ ಖಜಾನೆಗೆ ಕಳುಹಿಸುತ್ತಿದ್ದನು. ಗ್ರಾಮದ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದ ಪೊಲೀಸ್ ಪಾಟೀಲನೊಂದಿಗೆ ಸಹಕರಿಸುತ್ತಿದ್ದನು. ಗ್ರಾಮದಲ್ಲಿ ನಿಜಾಮ್ ಸರ್ಕಾರದ ಕಾಯಿದೆ-ಕಾನೂನುಗಳು ಜಾರಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದನು. ಸಂಸ್ಥಾನದ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾಮದ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿದ್ದನು.[೧೦೭]

೫.೩.೬. ಕುಲಕರ್ಣಿ

ಕುಲಕರ್ಣಿ ಗ್ರಾಮಗಳಲ್ಲಿ ಭೂಕಂದಾಯವನ್ನು ಸಂಗ್ರಹಿಸುವ ಕಾರ್ಯ ನಿರ್ವಹಿಸುತ್ತಿದ್ದನು. ಈತನು ಪಟೇಲನಿಗೆ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದನು. ಗ್ರಾಮಗಳ ಭೂಕಂದಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ದಾಖಲಿಸಿಡುವುದು ಈತನ ಕರ್ತವ್ಯವಾಗಿತ್ತು. ಕುಲಕರ್ಣಿ ಹುದ್ದೆಯನ್ನು ಹೆಚ್ಚಾಗಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರೇ ನಿರ್ವಹಿಸುತ್ತಿದ್ದರು. ಹೈದರಾಬಾದ್ ಕರ್ನಾಟಕದಲ್ಲಿ ಭೂಕಂದಾಯ ಸಂಗ್ರಹಿಸುವ ಅಧಿಕಾರಿಗೆ ಇವತ್ತಿಗೂ ಕೂಡ ಕುಲಕರ್ಣಿ ಎಂದು ಕರೆಯುವ ರೂಢಿ ಇದೆ.[೧೦೮]

೫.೩.೭. ಪೊಲೀಸ್ ಪಾಟೀಲ್

ಈತನು ಗ್ರಾಮಾಡಳಿತದ ಪೊಲೀಸ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಗ್ರಾಮಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಈತ ಪಟೇಲನೊಂದಿಗೆ ಜೊತೆಗೂಡಿ ಕಾರ್ಯನಿರ್ವಹಿಸು ತ್ತಿದ್ದನು. ಗ್ರಾಮಗಳಲ್ಲಿ ಆದ ಗಲಭೆಗಳನ್ನು ನಿಯಂತ್ರಿಸಿ ಸಮಸ್ಯೆಯನ್ನು ಬಗೆಹರಿಸುವುದು ಈತನ ಪ್ರಮುಖ ಕೆಲಸವಾಗಿತ್ತು. ಪೊಲೀಸ್ ಪಾಟೀಲನ ಅಧೀನದಲ್ಲಿ ಚೌಕಿದಾರನು ಕಾರ್ಯನಿರ್ವಹಿಸು ತ್ತಿದ್ದನು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪೊಲೀಸ್ ಪಾಟೀಲ ಎಂಬ ಸಮುದಾಯಗಳು ಇವತ್ತಿಗೂ ಇರುವುದನ್ನು ಕಾಣಬಹುದಾಗಿದೆ.[೧೦೯]

೫.೩.೮. ಮಾಲಿ ಪಾಟೀಲ

ಈತ ಗ್ರಾಮಾಡಳಿತದಲ್ಲಿ ತೆರಿಗೆಯನ್ನು ಸಂಗ್ರಹಿಸುವ ಪ್ರಮುಖ ಅಧಿಕಾರಿಯಾಗಿದ್ದನು. ಈತ ಕುಲಕರ್ಣಿಯ ಜೊತೆಗೂಡಿ ಕಂದಾಯ ಸಂಗ್ರಹಿಸುತ್ತಿದ್ದನು. ಮಾಲಿಪಾಟೀಲ ಸಮುದಾಯವನ್ನು ಇವತ್ತಿಗೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನೋಡಬಹುದಾಗಿದೆ.[೧೧೦]

೫.೩.೯. ಚೌಕಿದಾರ

ಹೈದರಾಬಾದ್ ನಿಜಾಮರ ಆಡಳಿತದ ಕೊನೆಯ ಹಂತದ ಅಧಿಕಾರಿ ಚೌಕಿದಾರ. ಈತನು ಪೊಲೀಸ್ ಪಾಟೀಲನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದನು. ಗ್ರಾಮಾಂತರ ಪ್ರದೇಶದ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಹೊಣೆಗಾರಿಕೆ ಈತನದಾಗಿತ್ತು. ಚೌಕಿದಾರ ಹುದ್ದೆಯನ್ನು ಬಹುತೇಕ ತಳವರ್ಗದ ಸಮುದಾಯದವರೇ ನಿರ್ವಹಿಸುತ್ತಿದ್ದುದು ವಿಶೇಷವಾಗಿದೆ.[೧೧೧]

೫.೪. ನ್ಯಾಯಾಂಗ ಆಡಳಿತ

ನಿಜಾಮರ ನ್ಯಾಯಾಂಗ ಆಡಳಿತವನ್ನು ಅಧ್ಯಯನದ ಅನುಕೂಲಕ್ಕಾಗಿ ಮೂರು ಹಂತದಲ್ಲಿ ವಿಭಾಗಿಸಿಕೊಂಡು ಈ ಕೆಳಗಿನಂತೆ ವಿವರಿಸಬಹುದಾಗಿದೆ.

೧. ಮೊಗಲರ ಉಪ ಪದ್ಧತಿಯಾಗಿ ನಿಜಾಮ್ ನ್ಯಾಯಾಂಗ ೧೭೨೪-೧೮೫೩

೨. ಅಸಫಿಯಾ ನ್ಯಾಯಾಂಗ ೧೮೫೩-೧೮೮೩

೩. ಸ್ವತಂತ್ರ ನ್ಯಾಯಾಂಗ ೧೮೮೩-೧೯೪೮

೧. ಮೊಗಲರ ಉಪ ಪದ್ಧತಿಯಾಗಿ ನಿಜಾಮ್ ನ್ಯಾಯಾಂಗ: ೧೭೨೪-೧೮೫೩ ಮೊಗಲರ ಆಡಳಿತದ ಪ್ರಕಾರ ಸುಬಾದ ನ್ಯಾಯಾಂಗದ ಮುಖ್ಯಸ್ಥನು ಸುಬೇದಾರನೇ ಆಗಿದ್ದನು. ಅವನಿಗೆ ಖಾಜಿ-ಇ-ಸುಬಾ ಎಂದು ಕರೆಯುತ್ತಿದ್ದರು.[೧೧೨] ಕೆಳಹಂತದಿಂದ ಮೇಲು ಹಂತದ ನ್ಯಾಯಾಲಯದ ವರೆಗೂ ಮೊಗಲರ ಆಡಳಿತವನ್ನೇ ಜಾರಿಗೆ ತಂದಿದ್ದು ಗಮನಿಸಬಹುದು. ಸುಬಾ ನ್ಯಾಯಾಂಗವಾದ ಖಾಜಿ-ಇ-ಸುಬಾವು ತನ್ನ ಆಡಳಿತ ಪ್ರದೇಶದಲ್ಲಿನ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಇತ್ಯರ್ಥ ಪಡಿಸುತ್ತಿತ್ತು. ಸುಬಾ ನ್ಯಾಯಾಲಯ ನೀಡಿದ ತೀರ್ಪನ್ನು ಕಕ್ಷಿದಾರನು ಸುಲ್ತಾನನ ಹತ್ತಿರ ಮೇಲ್ವಿಚಾರಣೆಗೆ ತೆಗೆದುಕೊಂಡು ಹೋಗಲು ಅವಕಾಶವಿತ್ತು. ಈ ಹಂತದಲ್ಲಿ ಕಕ್ಷಿದಾರನು ಅಪರಾಧಿಯೆಂದು ಸಾಬೀತಾಗಿದ್ದರೆ ಅವನಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು.[೧೧೩]

ನಿಜಾಮ್ ಅಲಿಖಾನನ ಆಳ್ವಿಕೆಯಲ್ಲಿ ಪ್ರಧಾನ ಮಂತ್ರಿಯ ಮೇಲುಸ್ತುವಾರಿಯಲ್ಲಿ ರಾಜಧಾನಿ ಕೇಂದ್ರಿತವಾದ ದಾರ-ಉಲ್-ಖಾಜಿ-ಇ-ಬಾಲ್ಡ್ ಎಂಬ ಪ್ರಮುಖ ನ್ಯಾಯಾಲಯವನ್ನು ಸ್ಥಾಪಿಸಲಾಯಿತು. ಇದರ ಮುಖ್ಯಸ್ಥನನ್ನು ಖಾಜಿ ಎಂದು ಕರೆಯುತ್ತಿದ್ದರು. ಈ ಖಾಜಿಗಳು ನ್ಯಾಯದಾನ ಮಾಡುವಾಗ ಪ್ರಧಾನ ಮಂತ್ರಿ ಮತ್ತು ನಿಜಾಮರ ಸಲಹೆಯಂತೆ ಅಧಿಕಾರ ಚಲಾಯಿಸುತ್ತಿದ್ದರು. ಖಾಜಿ-ಇ-ಅಸ್ಕರ್ ಎಂಬ ನ್ಯಾಯಾಲಯವೂ ರಾಜಧಾನಿಕೇಂದ್ರಿತ ನ್ಯಾಯಾಲಯವಾಗಿದೆ.[೧೧೪] ಹೈದರಾಬಾದ್ ಸಂಸ್ಥಾನದಲ್ಲಿದ್ದ ಸೈನಿಕ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವುದು ಇದರ ಪ್ರಮುಖ ಕಾರ್ಯವಾಗಿತ್ತು. ಸದರಾತ್-ಉಲ್-ಅಲಿಯಾ ಎಂಬ ನ್ಯಾಯಾಲಯ ಹೈದರಾಬಾದ್ ನಗರ ಪ್ರದೇಶದ ವ್ಯಾಜ್ಯಗಳನ್ನು ಬಗೆಹರಿಸುತ್ತಿತ್ತು. ದಾರ್-ಉಲ್-ಖಾಜಿ-ಇ-ಬಾಲ್ಡ್ ನ್ಯಾಯಾಲಯದ ಕೆಲಸದ ಒತ್ತಡ ಕಡಿಮೆ ಮಾಡಲು ಮತ್ತು ನಗರದ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲು ಈ ನ್ಯಾಯಾಲಯವು ಸಹಕಾರಿಯಾಯಿತು.[೧೧೫]

೧೮೨೧ರಲ್ಲಿ ಹೈದರಾಬಾದ್ ಸಂಸ್ಥಾನ ಆಡಳಿತದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡ ಹಾಗೆ ನ್ಯಾಯಾಂಗ ಪದ್ಧತಿಯಲ್ಲೂ ಅನೇಕ ಬದಲಾವಣೆಗಳಾದವು. ಬ್ರಿಟಿಶರ ಅಭಿಲಾಷೆಯಂತೆ ಪ್ರಧಾನ ಮಂತ್ರಿ ಚಂದೂಲಾಲನು ಆದಾಲ್-ಇ-ದಿವಾನಿ ಎಂಬ ನ್ಯಾಯಾಲಯವನ್ನು ಸ್ಥಾಪನೆ ಮಾಡಿದನು.[೧೧೬] ನಂತರ ಪ್ರಧಾನ ಮಂತ್ರಿಯಾದ ಸಿರಾಜ್-ಉಲ್- ಮುಲ್ಕನು ನ್ಯಾಯಾಂಗ ವ್ಯವಸ್ಥೆಯಲ್ಲಿ ಜಡ್ಡುಗಟ್ಟಿದ್ದ ವಾತಾವರಣವನ್ನು ನಿರ್ಮೂಲನೆ ಮಾಡಲು ನ್ಯಾಯಾಂಗ

ಸುಧಾರಣ ಸಮಿತಿಯನ್ನು ಸ್ಥಾಪನೆ ಮಾಡಿದನು. ಅಪರಾಧಿಯೆಂದು ಸಾಬೀತಾದ ನಂತರ ಆ ಅಪರಾಧಿಗೆ ಕಡಿಮೆ ಪ್ರಮಾಣದ ಶಿಕ್ಷೆಯನ್ನು ನೀಡುವ ಮೂಲಕ ತನ್ನ ತಪ್ಪನ್ನು ತಿದ್ದುಕೊಂಡು ಹೊಸ ಜೀವನ ನಡೆಸಲು ಈ ಸುಧಾರಣೆ ಅವಕಾಶ ಮಾಡಿಕೊಟ್ಟಿತು. ದೇಶದಲ್ಲಿ ಶಾಪವಾಗಿ ಪರಿಣಮಿಸಿದ್ದ ಸತಿ ಪದ್ಧತಿಯನ್ನು ನ್ಯಾಯಾಂಗದ ಮೂಲಕ ನಿರ್ಮೂಲನೆ ಮಾಡಲು ಪ್ರಯತ್ನಿಸಿದನು.[೧೧೭]

ಪ್ರಧಾನ ಮಂತ್ರಿ ಸಿರಾಜ್–ಉಲ್–ಮುಲ್ಕನು ಜಿಲ್ಲಾ ನ್ಯಾಯಾಲಯಗಳಲ್ಲಿ ಹೊಸ ನ್ಯಾಯಾಧೀಶರನ್ನು ನೇಮಕ ಮಾಡಿ ಅವರು ಕೇಂದ್ರ ಸ್ಥಳದಲ್ಲಿಯೇ ಇರುವ ವ್ಯವಸ್ಥೆಯನ್ನು ಮಾಡಿದನು. ನ್ಯಾಯಾಲಯದ ಕಲಾಪಗಳು ಸರಕಾರದ ಆಡಳಿತ ಭಾಷೆಯಲ್ಲಿ ನಡೆಯುತ್ತಿದ್ದರೂ ವ್ಯಾಪಾರಸ್ಥರು ಹಾಗೂ ಜಮೀನ್ದಾರರಿಗೆ ಸಂಬಂಧಪಟ್ಟ ವ್ಯಜ್ಯಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಭಾಷಾಂತರ ಮಾಡಲು ಗುಮಾಸ್ತನನ್ನು ನೇಮಕ ಮಾಡಲಾಗಿತ್ತು. ಜಿಲ್ಲಾ ನ್ಯಾಯಾಲಯದ ಸಂಪೂರ್ಣ ನ್ಯಾಯಾಂಗ ಅಧಿಕಾರ ತಾಲೂಕುದಾರನ ಅಧೀನದಲ್ಲಿತ್ತು. ಜಿಲ್ಲೆಯ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳು ಆತನ ನೇತೃತ್ವದಲ್ಲಿಯೇ ಇತ್ಯರ್ಥವಾಗುತ್ತಿದ್ದವು. ಜಿಲ್ಲಾ ನ್ಯಾಯಾಲಯದ ಅಧೀನದಲ್ಲಿ ಮುನ್ಸಿಫ್ ತಾಲೂಕು ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದ್ದವು. ನಗರ ಪ್ರದೇಶದಲ್ಲಿ ಪ್ರತ್ಯೇಕ ನ್ಯಾಯಾಲಯವನ್ನು ಸ್ಥಾಪಿಸಿ ಸಣ್ಣ ಪ್ರಮಾಣದ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲಾಗುತ್ತಿತ್ತು.[೧೧೮]

೨. ಅಸಫಿಯಾ ನ್ಯಾಯಾಂಗ ೧೮೫೩–೧೮೮೩ : ನಿಜಾಮ್ ನ್ಯಾಯಾಂಗದ ಎರಡನೆಯ ಹಂತವನ್ನು ೧೮೫೩ ರಿಂದ ೧೮೮೩ ರವರೆಗೆ ಎಂದು ಗುರುತಿಸಬಹುದು. ಈ ಹಂತವನ್ನು ನಿಜಾಮರ ನ್ಯಾಯಾಂಗದ ಸುಧಾರಣೆಯ ಹಂತವೆಂದು ಕರೆಯಬಹುದು. ಸಾಲಾರ್‌ಜಂಗ್‌ನು ರಾಜಧಾನಿ ಮಟ್ಟದ ನ್ಯಾಯಾಲಯಗಳಲ್ಲಿ ಬ್ರಿಟಿಶರ ನ್ಯಾಯಾಂಗ ಪದ್ಧತಿಯನ್ನು ಅಳವಡಿಸಿ ನ್ಯಾಯಾಂಗದಲ್ಲಿ ಹೊಸ ಬದಲಾವಣೆ ತಂದನು.[೧೧೯] ಸಂಸ್ಥಾನದ ಉನ್ನತ ನ್ಯಾಯಾಲಯವಾದ ಅದಾಲತ್–ಇ–ಬಾದಶಾಹ ನ್ಯಾಯಾಲಯದ ಕೆಲಸದೊತ್ತಡ ಕಡಿಮೆ ಮಾಡಲು ಅದಾಲತ್–ಇ–ಚಿನಿ–ಖಾನಾ ನ್ಯಾಯಾಲಯವನ್ನು ಸ್ಥಾಪಿಸಲಾಯಿತು.[೧೨೦] ಖಾಜಿ–ಇ–ಆಸ್ಕರ್ ನ್ಯಾಯಾಲಯ ಮಾಡುವ ಕಾರ್ಯವನ್ನು ಸಿಖಾ ನ್ಯಾಯಾಲಯ ನಿರ್ವಹಿಸಲು ಹೊಸದಾಗಿ ಸ್ಥಾಪಿಸಲಾಯಿತು. ಸೈನಿಕರ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವುದು ಇದರ ಪ್ರಮುಖ ಕಾರ್ಯವಾಗಿತ್ತು.[೧೨೧]

ಸಾಲಾರ್‌ಜಂಗ್‌ನ ಜಿಲ್ಲಾಬಂದಿ ಪದ್ಧತಿಯಂತೆ ಸಂಸ್ಥಾನವನ್ನು ಐದು ಭಾಗಗಳನ್ನಾಗಿಸಿದ್ದು, ಅದರಂತೆ ಹೈದರಾಬಾದ್ ಕರ್ನಾಟಕದ ಸುರಪುರ, ರಾಯಚೂರು, ಪಶ್ಚಿಮ ರಾಯಚೂರನ್ನು ಒಂದು ಜಿಲ್ಲಾಬಂದಿಯನ್ನಾಗಿಯೂ, ಬೀದರನ್ನು ಪಶ್ಚಿಮ ವಿಭಾಗಕ್ಕೂ ಸೇರಿಸಲಾಯಿತು. ಜಿಲ್ಲಾಬಂದಿಯಂತೆ ನ್ಯಾಯಾಂಗ ವ್ಯವಸ್ಥೆಯನ್ನು ಬ್ರಿಟಿಶ್ ಮಾದರಿಯಡಿ ಸ್ಥಾಪಿಸಲು ಪ್ರಯತ್ನಿಸ

ಲಾಯಿತು. ಜಿಲ್ಲಾ ಮಟ್ಟದಲ್ಲಿದ್ದ ನ್ಯಾಯಾಲಯಗಳನ್ನು ಹೊಸ ಪ್ರಯೋಗಗಳ ಮುಖಾಂತರ ಜಿಲ್ಲಾ ಮಟ್ಟದ ವ್ಯವಸ್ಥಿತ ನ್ಯಾಯಾಂಗವನ್ನಾಗಿ ರಚಿಸಲಾಯಿತು. ಜಿಲ್ಲಾ ನ್ಯಾಯಾಲಯಗಳ ಕೆಲಸದ ಹೊರೆಯನ್ನು ಕಡಿಮೆ ಮಾಡಲು ತಾಲೂಕು ನ್ಯಾಯಾಲಯಗಳನ್ನು ಸ್ಥಾಪಿಸಿ ಹೆಚ್ಚಿನ ಅಧಿಕಾರವನ್ನು ವಹಿಸಲಾಯಿತು.[೧೨೨]

ಸಾಲಾರ್‌ಜಂಗ್‌ನು ಸ್ಥಳೀಯ ಪಂಚಾಯಿತಿ ವ್ಯವಸ್ಥೆಯಲ್ಲಿ ಹೊಸ ನೀತಿ-ನಿಯಮಗಳನ್ನು ಜಾರಿಗೊಳಿಸಲು ಪ್ರಯತ್ನಿಸಿದನು. ಅಲ್ಲಿಯವರೆಗಿದ್ದ ಸಾಂಪ್ರದಾಯಿಕ ಪಂಚಾಯಿತಿ ಪದ್ಧತಿಯನ್ನು ನಿರ್ಮೂಲನೆಗೊಳಿಸಿ ಹೊಸ ಮಾದರಿಯ ಪಂಚಾಯಿತಿಗಳನ್ನು ಸ್ಥಾಪಿಸಿದನು.[೧೨೩] ಪಂಚಾಯಿತಿ ದಾವೆಯನ್ನು ಇತ್ಯರ್ಥ ಪಡಿಸಬೇಕಾದರೆ ಪಂಚಾಯಿತಿ ಒಳಗೊಂಡಿರಬೇಕಾದ ಸದಸ್ಯರ ಪ್ರಮಾಣವನ್ನು ನಿಯಮಿಸಬೇಕಿತ್ತು. ಇದರಿಂದ ಪಂಚಾಯಿತಿಯ ಕಾರ್ಯ ವಿಧಾನದಲ್ಲಿ ಈ ಪ್ರಯೋಗವು ವಿಫಲವಾದುದು ಕಂಡುಬರುತ್ತದೆ.[೧೨೪]

೩. ಸ್ವತಂತ್ರ ನ್ಯಾಯಾಂಗ : ೧೮೮೩–೧೯೪೮ ಅದಾಗಲೇ ಸಂಸ್ಥಾನಗಳು ಬ್ರಿಟಿಶ್ ಮಾದರಿ ಆಡಳಿತವನ್ನು ಅಳವಡಿಸಿಕೊಳ್ಳುವ ಮೂಲಕ ವಸಾಹತುಶಾಹಿಗೆ ತಮ್ಮನ್ನು ಒಪ್ಪಿಸಿಕೊಂಡಿದ್ದವು. ನಿಜಾಮ್ ಮೆಹಬೂಬ ಅಲಿಖಾನ್ ಕಾನೂನು ಬದ್ಧ ಆಡಳಿತ ಕಾಯಿದೆ ಜಾರಿಗೆ ತರುವ ಪ್ರಯತ್ನವಾಗಿ ೧೮೯೩ರಲ್ಲಿ "ಕಾನೊನ್ಚೆ ಮುಬಾರಕ" ಜಾರಿಗೆ ಬಂದಿತು.[೧೨೫] ಈ ಕಾನೂನು (ಕಾಯಿದೆ) ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಿ ಅದಕ್ಕೆ ತನ್ನದೇ ಚಹರೆಯನ್ನು ನೀಡಿತು. ನ್ಯಾಯಾಂಗವನ್ನು ವ್ಯವಸ್ಥಿತ ರೀತಿಯಲ್ಲಿ ಜಾರಿಗೆ ತರಲು ನಿಜಾಮ್ ಸರ್ಕಾರ ಮಂತ್ರಿಮಂಡಲದಲ್ಲಿ ನ್ಯಾಯಾಂಗ ಖಾತೆಯ ಮಂತ್ರಿಯನ್ನು ನೇಮಿಸಿ ಅವನಿಗೆ ವಿಶೇಷ ಅಧಿಕಾರ ಮತ್ತು ಕಾರ್ಯ ವಹಿಸಿತು. ನ್ಯಾಯಾಂಗ ಮಂತ್ರಿಗೆ ಸಹಾಯಕ್ಕಾಗಿ ಸಚಿವಾಲಯ ವ್ಯವಸ್ಥೆಗೊಳಿಸಲಾಯಿತು. ಸಾಮಾನ್ಯ ಜನರಿಗೂ ನ್ಯಾಯಾಂಗದ ಸೌಲಭ್ಯ ಒದಗುವಂತೆ ಮಾಡಲು ಶಾಸನ ರಚನಾ ಸಭೆ ಕೂಡ ಕೈಜೋಡಿಸಿತು.[೧೨೬]

ಹೈದರಾಬಾದಲ್ಲಿ ಅತ್ಯಂತ ಉನ್ನತ ಮಟ್ಟದ ಹೈಕೋರ್ಟ್‌ನ್ನು ಸ್ಥಾಪಿಸಲಾಯಿತು.[೧೨೭] ಅದಕ್ಕೆ ಸಲಹೆ ನೀಡಲು ನ್ಯಾಯಾಂಗ ಸಮಿತಿ ಇತ್ತು. ಆ ನ್ಯಾಯಾಂಗ ಸಮಿತಿ ಹೈಕೋರ್ಟ್ ನ್ಯಾಯ ತೀರ್ಮಾನ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನದ ಬಗೆಗೆ ಸಲಹೆ ನೀಡುತ್ತಿತ್ತು.[೧೨೮]

ದಾರೂಲ್-ಖಾಜಾ ನ್ಯಾಯಾಲಯ ನಿಜಾಮ್ ಆಳ್ವಿಕೆಯಲ್ಲಿದ್ದ ಹಳೆಯ ನಗರ ನ್ಯಾಯಾಲಯ ವಾಗಿತ್ತು. ಇದು ಕೇವಲ ಸಿವಿಲ್ ವ್ಯಾಜ್ಯಗಳನ್ನು ಮಾತ್ರ ಬಗೆಹರಿಸುತ್ತಿತ್ತು. ವಿಶೇಷವಾಗಿ ಮುಸ್ಲಿಂ ಸಮುದಾಯದ ವ್ಯಾಜ್ಯಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಚರ್ಚೆಗೆ ಎತ್ತಿಕೊಳ್ಳುತ್ತಿತ್ತು. ಮುಸ್ಲಿಂ ಸಮುದಾಯದ

ವಿವಾಹ ವಿಚ್ಛೇದನ, ವರದಕ್ಷಿಣೆ ಮುಂತಾದ ವಿಷಯಗಳ ಕುರಿತು ನ್ಯಾಯ ನೀಡುತ್ತಿತ್ತು. ಸಬರಬನ್ ನ್ಯಾಯಾಲಯ ಯುರೋಪಿಯನ್ ವ್ಯಾಜ್ಯಗಳನ್ನು ಮಾತ್ರ ಇತ್ಯರ್ಥಪಡಿಸುವ ಕಾರ್ಯ ಮಾಡುತ್ತಿತ್ತು. ನಿಜಾಮ ಸಂಸ್ಥಾನದಲ್ಲಿದ್ದ ಕ್ರೈಸ್ತರ ವ್ಯಾಜ್ಯಗಳನ್ನು ಪರಿಗಣಿಸಿ ನ್ಯಾಯ ನೀಡುತ್ತಿತ್ತು.[೧೩೧]

ಜಹಗೀರ ಮತ್ತು ಸರ್ಫ–ಏ–ಖಾಸ್ ಪ್ರದೇಶದ ನ್ಯಾಯಾಡಳಿತ: ಹೈದರಾಬಾದ್ ನಿಜಾಮರ ನ್ಯಾಯಾಡಳಿತದಲ್ಲಿ ಎರಡು ವಿಧ ಕಂಡುಬರುತ್ತದೆ. ೧. ದಿವಾನಿ ನ್ಯಾಯಾಡಳಿತ ಮತ್ತು ೨. ಜಹಗೀರ ಮತ್ತು ಸರ್ಫ–ಎ–ಖಾಸ್ ನ್ಯಾಯಾಡಳಿತ. ಜಹಾಗೀರ ಪ್ರದೇಶದ ಮುಖ್ಯಸ್ಥ ಜಹಾಗೀರನಾಗಿದ್ದರೆ, ಸರ್ಫ–ಎ–ಖಾಸ್ ಪ್ರದೇಶದ ಮುಖ್ಯಸ್ಥನು ನಿಜಾಮನೇ ಆಗಿರುತ್ತಿದ್ದನು. ಈ ಪ್ರದೇಶದಲ್ಲಿನ ವ್ಯಾಜ್ಯಗಳನ್ನು ತಾನೇ ಇತ್ಯರ್ಥಪಡಿಸುತ್ತಿದ್ದನು.[೧೩೨] ಜಹಾಗೀರ ಮತ್ತು ಸರ್ಫ–ಎ–ಖಾಸ್ ನ್ಯಾಯಾಲಯಗಳು ಸಂಸ್ಥಾನದ ದಿವಾನಿ ನ್ಯಾಯಾಡಳಿತದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಜಹಾಗೀರ ನ್ಯಾಯಾಲಯ ನೀಡಿದ ತೀರ್ಪಿನ ವಿರುದ್ಧ ಹೈಕೋರ್ಟಿಗೆ ಮಾತ್ರ ಮೇಲ್ಮನವಿ ಸಲ್ಲಿಸಬಹುದಿತ್ತು.[೧೩೩] ೧೮೮೪ರಲ್ಲಿ ಸಂಸ್ಥಾನದ ನ್ಯಾಯಾಂಗ ಸುಧಾರಣೆಗಾಗಿ ಮೌಲ್ವಿ ಮಹಾದಿ ಹುಸೇನ್ ಖಾನ್‌ನ ನೇತೃತ್ವದಲ್ಲಿ ಸಮಿತಿಯನ್ನು ನೇಮಿಸಲಾಯಿತು. ಇದು ಸಂಸ್ಥಾನದ ನ್ಯಾಯಾಡಳಿತ ಮತ್ತು ಜಹಾಗೀರ ಪ್ರದೇಶಗಳ ನ್ಯಾಯಾಂಗ ಕಾರ್ಯವಿಧಾನ ಕುರಿತು ವರದಿ ಸಲ್ಲಿಸಿತು.[೧೩೪]

ನಿಜಾಮರ ಆಳ್ವಿಕೆಯಲ್ಲಿ ಸುಬಾವಾಗಿದ್ದ ಗುಲಬರ್ಗಾದಲ್ಲಿ ಬೀದರ್, ರಾಯಚೂರು ಮತ್ತು ಗುಲಬರ್ಗಾ ಜಿಲ್ಲೆಗಳ ನ್ಯಾಯಾಂಗ ಮೇಲುಸ್ತುವಾರಿ ನೋಡಿಕೊಳ್ಳಲು ಸುಬಾ ನ್ಯಾಯಾಂಗ ಸ್ಥಾಪಿತವಾಗಿತ್ತು.[೧೩೫] ಇದಕ್ಕೆ ನಿಜಾಮಿ–ಇ–ಸುಬಾ ಅಥವಾ ವಿಭಾಗೀಯ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯವೆಂದು ಕರೆಯಲಾಗುತ್ತಿತ್ತು.[೧೩೬]

ಸುಬಾ ನ್ಯಾಯಾಲಯದ ಅಧೀನದಲ್ಲಿ ಜಿಲ್ಲಾ ನ್ಯಾಯಾಲಯ ಸ್ಥಾಪಿಸಲಾಯಿತು. ಅದಕ್ಕೆ ನಿಜಾಮಿ–ಇ–ದಿವಾನಿ ಎಂದು ಕರೆಯಲಾಗುತ್ತಿತ್ತು. ಇದರ ಮುಖ್ಯಸ್ಥನು ಪ್ರಥಮ ತಾಲೂಕು ದಾರನಾಗಿರುತ್ತಿದ್ದನು. ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಪ್ರತ್ಯೇಕವಾದ ನ್ಯಾಯಾಲಯ ಗಳಿದ್ದವು. ನಿಜಾಮಿ–ಇ–ದಿವಾನಿ ಅಂದರೆ ಜಿಲ್ಲಾ ನ್ಯಾಯಾಲಯಗಳ ಅಧೀನದಲ್ಲಿ ತಾಲೂಕು ನ್ಯಾಯಾಲಯಗಳು ಸ್ಥಾಪಿತವಾದವು. ಇದಕ್ಕೆ ಮುನ್ಸಿಫ್ ನ್ಯಾಯಾಲಯವೆಂದು ಕರೆಯಲಾಗುತ್ತಿತ್ತು. ಇದರ ಮುಖ್ಯಸ್ಥನು ತಹಶೀಲ್ದಾರ ಆಗಿರುತ್ತಿದ್ದನು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಿಜಾಮರ ಆಳ್ವಿಕೆಯಲ್ಲಿ ಒಟ್ಟು ೨೧ ತಾಲೂಕು ನ್ಯಾಯಾಲಯಗಳಿದ್ದವು.

ಪ್ರತಿಯೊಂದು ತಾಲೂಕು ಅಥವಾ ಮುನ್ಸಿಫ್ ನ್ಯಾಯಾಲಯಗಳು ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಇತ್ಯರ್ಥಪಡಿಸುತ್ತಿದ್ದವು. ಕಕ್ಷಿದಾರನಿಗೆ ಮುನ್ಸಿಫ್ ನ್ಯಾಯಾಲಯದಲ್ಲಿ ವ್ಯಾಜ್ಯ ಇತ್ಯರ್ಥ

ಆಗದಿದ್ದರೆ ನಿಜಾಮ್-ಇ-ದಿವಾನಿ ಅಥವಾ ನಿಜಾಮ್-ಇ-ಸುಬಾ ನ್ಯಾಯಾಲಯಗಳಿಗೆ ಮೇಲ್ಮನವಿ ಹೋಗಲು ಅವಕಾಶವಿತ್ತು. ಗ್ರಾಮೀಣ ಮಟ್ಟದಲ್ಲಿ ನ್ಯಾಯಕ್ಕಾಗಿ ಪಂಚಾಯಿತಿಗಳು ಕಾರ್ಯನಿರ್ವಹಿಸುತ್ತಿದ್ದವು. ಈ ಪಂಚಾಯಿತಿ ನ್ಯಾಯಾಲಯ ಪದ್ಧತಿ ಬಹುಕಾಲದಿಂದಲೂ ಪ್ರಚಲಿತವಿತ್ತು. ನಿಜಾಮರು ಗ್ರಾಮೀಣ ಮಟ್ಟದ ನ್ಯಾಯಾಲಯಗಳಿಗೆ ಹೆಚ್ಚಿನ ಮನ್ನಣೆ ನೀಡದೆ ಹಳೆಯ ಪದ್ಧತಿಯನ್ನು ಮುಂದುವರೆಸಿದ್ದರು. ಗ್ರಾಮದಲ್ಲಿ ಪಟೇಲನ ನೇತೃತ್ವದಲ್ಲಿ ಇತರ ಅಧಿಕಾರಿ ಸದಸ್ಯರಿಂದ ನ್ಯಾಯ ತೀರ್ಮಾನವಾಗುತ್ತಿತ್ತು. ೧೯೪೨ರಲ್ಲಿ ಗ್ರಾಮೀಣ ಪಂಚಾಯಿತಿ ಕಾಯಿದೆ ಜಾರಿಗೊಳಿಸುವ ಮೂಲಕ ಕಾನೂನುಬದ್ಧ ಪಂಚಾಯಿತಿಗಳನ್ನು ಸ್ಥಾಪಿಸಲಾಯಿತು. ಪಂಚಾಯಿತಿ ಸದಸ್ಯರನ್ನು ತಾಲೂಕುದಾರನು ನೇಮಿಸುತ್ತಿದ್ದನು. ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ನ್ಯಾಯಾಡಳಿತ ಕಾಲಕಾಲಕ್ಕೆ ಬದಲಾವಣೆಗೆ ಒಳಗಾಗಿ ನ್ಯಾಯಾಂಗ ಇಲಾಖೆಯನ್ನು ಬಲಪಡಿಸಲಾಯಿತು.[೧೩೮]

೫.೫. ಸೈನ್ಯಾಡಳಿತ

ಸೈನ್ಯಾಡಳಿತವು ರಾಜ್ಯಾಡಳಿತದ ಅತಿಮುಖ್ಯ ಆಧಾರಸ್ತಂಭವಾಗಿತ್ತು. ಸಂಸ್ಥಾನದ ರಕ್ಷಣೆ ಹಾಗೂ ಶಾಂತಿ ಸುವ್ಯವಸ್ಥೆಗಳಲ್ಲಿ ಇವರ ಪಾತ್ರ ತುಂಬ ಮಹತ್ವದ್ದಾಗಿತ್ತು. ಸೈನಿಕರು ಸೈನ್ಯದ ಇತರ ಅಂಗಗಳಾದ ಅಶ್ವದಳ, ಕಾಲ್ದಳ ಮತ್ತು ಫಿರಂಗಿದಳಗಳನ್ನು ಮುನ್ನಡೆಸುತ್ತಿದ್ದರು. ಹೈದರಾಬಾದ್ ಸಂಸ್ಥಾನದಲ್ಲಿ ನಿಜಾಮನೇ ಸೈನ್ಯಾಡಳಿತದ ಮುಖ್ಯಸ್ಥನಾಗಿದ್ದನು. ಇವನ ಅಧೀನದಲ್ಲಿ ಮಂತ್ರಿ, ಶಾಂಗಲ್ ಉಮ್ರಾ ಮತ್ತು ಅಮೀನ್ ಕಬೀರ್ ಮುಂತಾದವರು ಕಾರ್ಯನಿರ್ವಹಿಸುತ್ತಿದ್ದರು.

ಸಂಸ್ಥಾನದಲ್ಲಿ ಸೈನಿಕರಾಗಿ ಅರಬ್, ಸಿಂಧ್ ಮತ್ತು ಉತ್ತರ ಭಾರತದ ಪ್ರಮುಖರನ್ನು ನೇಮಕ ಮಾಡಲಾಗಿತ್ತು. ಸೈನ್ಯದಲ್ಲಿ ಪ್ರಮುಖ ಸ್ಥಾನವನ್ನು ನೀಡಿ ಅವರ ಅಧೀನದಲ್ಲಿ ಸ್ಥಳೀಯರನ್ನು ನೇಮಿಸಿಕೊಳ್ಳಲಾಗಿತ್ತು. ಸ್ವದೇಶಿಯರಲ್ಲದ ಸೈನಿಕರನ್ನು ರೋಹಿಲ್ಲರು ಎಂದು ಕರೆದರೆ ಸ್ಥಳೀಯರನ್ನು ವಾಲಾಸ ಎಂದು ಕರೆಯುತ್ತಿದ್ದರು.[೧೩೯]

ನಿಜಾಮರು ಸೈನ್ಯಾಡಳಿತವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡಿದ್ದರು. ಅವುಗಳೆಂದರೆ ೧. ನಿಜಾಮ ದಿವಾನಿ, ೨. ನಿಜಾಮ ಸರ್ಕಾರ ಮತ್ತು ೩. ಜಹಾಗೀರ ಸೈನ್ಯ. ನಿಜಾಮನು ತನ್ನ ಖಾಸಗಿ ಜೀವನ ಮತ್ತು ರಕ್ಷಣೆಗಾಗಿ ನೇಮಿಸಿಕೊಂಡಿದ್ದು ನಿಜಾಮ ದಿವಾನಿ ಸೈನ್ಯವಾಗಿತ್ತು. ನಿಜಾಮ್ ಸರ್ಕಾರದ ಸೈನ್ಯ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಈ ಸೈನ್ಯ ಸಂಸ್ಥಾನದ ಶಾಂತಿ ಸುವ್ಯವಸ್ಥೆ ಕಾಪಾಡುವ ಕರ್ತವ್ಯವನ್ನು ಹೊಂದಿತ್ತು. ಸಂಸ್ಥಾನದಲ್ಲಿದ್ದ ಜಹಾಗೀರದಾರರು

ತಮ್ಮ ಪ್ರದೇಶವನ್ನು ರಕ್ಷಿಸಿಕೊಳ್ಳಲು ಸ್ಥಾಪಿಸಿಕೊಂಡಿದ್ದು ಜಹಾಗೀರ ಸೈನ್ಯವಾಗಿತ್ತು. ಈ ಸೈನ್ಯವನ್ನು ನಿಜಾಮ್ ಸರ್ಕಾರಕ್ಕೆ ಅವಶ್ಯವಾದಾಗ ಕಳುಹಿಸಿಕೊಡಲಾಗುತ್ತಿತ್ತು.[೧೪೦]

ನಿಜಾಮರ ಸೇನಾ ವಿಭಾಗ ಈ ಕೆಳಕಂಡಂತಿದೆ.

೧. **ಕಾಲ್ದಳ** : ಸೈನ್ಯ ವ್ಯವಸ್ಥೆಯಲ್ಲಿ ಕಾಲ್ದಳದ ಪಾತ್ರ ತುಂಬ ಮಹತ್ವದ್ದಾಗಿದೆ. ಸೈನ್ಯವನ್ನು ಆರಂಭದಲ್ಲಿ ಸಾಂಪ್ರದಾಯಿಕ ಕ್ರಮದಲ್ಲಿ ಸಜ್ಜುಗೊಳಿಸಲಾಗಿತ್ತು. ಮೊದಲನೆಯ ಜಾಗತಿಕ ಯುದ್ಧದ ಪ್ರಭಾವದಿಂದಾಗಿ ನಿಜಾಮ್ ಸೈನಿಕರಿಗೆ ಬ್ರಿಟಿಶ್ ಮಾದರಿಯಲ್ಲಿ ತರಬೇತಿ ನೀಡಿ ಬ್ರಿಗೇಡ್‌ಗಳನ್ನು ನಿರ್ಮಿಸಲಾಯಿತು.

೨. **ಅಶ್ವದಳ** : ಮೊದಲನೆಯ ನಿಜಾಮ ಕಿಲಿಚಖಾನನು ತುರ್ಕಿ ರಾಷ್ಟ್ರಗಳಿಂದ ಅಶ್ವಗಳನ್ನು ತರಿಸಿ ಆಶ್ವದಳ ಸೈನ್ಯವನ್ನು ಉತ್ತಮ ರೀತಿಯಲ್ಲಿ ಬಲಿಷ್ಠಗೊಳಿಸಿದ್ದನು.

೩. **ಫಿರಂಗಿದಳ** : ನಿಜಾಮ ಆಡಳಿತದಲ್ಲಿ ಫಿರಂಗಿದಳ ಅತಿ ಮುಖ್ಯವಾದ ದಳವಾಗಿತ್ತು. ಬ್ರಿಟಿಶರ ಪರಿಣಾಮದಿಂದ ಸೈನ್ಯವನ್ನು ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸಿದ್ದರು. ಆಧುನಿಕ ಯುದ್ಧೋಪಕರಣಗಳನ್ನು ಖರೀದಿಸಲು ಆಸ್ಟ್ರೇಲಿಯಾದ ಜೊತೆ ಒಪ್ಪಂದ ಮಾಡಿಕೊಂಡಿದ್ದರು. ಅಲ್ಲಿಂದ ಬಂದೂಕು, ಫಿರಂಗಿ, ಯುದ್ಧ ಯಂತ್ರೋಪಕರಣಗಳನ್ನು ಅಮದು ಮಾಡಿಕೊಳ್ಳಲಾಗಿತ್ತು. ನಿಜಾಮರು ಮೊಗಲರಿಂದ ಹಿಡಿದು ಆಧುನಿಕ ಬ್ರಿಟಿಶರವರೆಗೆ ಯುದ್ಧ ನೀತಿಗಳನ್ನು ಅಳವಡಿಸಿಕೊಂಡು ಸುಸಜ್ಜಿತ ಸೈನ್ಯ ಕಟ್ಟಲು ಪ್ರಯತ್ನ ಮಾಡಿದ್ದರು. ಸಂಸ್ಥಾನದಲ್ಲಿ ಖಾಸಗಿಯಾಗಿ ಹುಟ್ಟಿಕೊಂಡ ರಜಾಕಾರ ಅರೆಸೇನಾ ಪಡೆ ಕಾಸಿಂ ರಜ್ವಿಯ ನೇತೃತ್ವದಲ್ಲಿ ಅಸ್ತಿತ್ವ ಪಡೆದಿತ್ತು. ಈ ಪಡೆಗೆ ನಿಜಾಮ್ ಉಸ್ಮಾನ್ ಅಲಿಖಾನ್ ಮೊದಲಿಗೆ ಒಪ್ಪಿಗೆ ವ್ಯಕ್ತಪಡಿಸದಿದ್ದರೂ ತನ್ನ ಅಧಿಕಾರ ಉಳಿಸಿಕೊಳ್ಳಲು ಬಳಸಿಕೊಂಡನು.[೧೪೧]

೫.೬. ಕಂದಾಯ ಆಡಳಿತ

ನಿಜಾಮರ ಕಂದಾಯ ಆಡಳಿತವು ಹೆಚ್ಚಾಗಿ ಮೊಗಲರ ಕಂದಾಯದ ತಳಪಾಯದ ಮೇಲೆ ಜಾರಿಗೆ ಬಂದಿತು. ಮೊದಲಿಗೆ ತೋದರಮಲ್ಲನ ತೆರಿಗೆ ಪದ್ಧತಿಯನ್ನು, ನಂತರ ಬ್ರಿಟಿಶರ ರೈತವಾರಿ ಪದ್ಧತಿಯ ತೆರಿಗೆ ನೀತಿಯನ್ನು ಅನುಸರಿಸಿತ್ತು. ಈ ಕಂದಾಯ ನೀತಿ ನಿಜಾಮರ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪರಿಣಾಮಕಾರಿಯಾಗಿ ಜಾರಿಯಲ್ಲಿತ್ತು. ಕಂದಾಯ ಆಡಳಿತದ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

೧. **ಭೂಕಂದಾಯ** : ನಿಜಾಮರ ಕಂದಾಯದ ಮೂಲ ಭೂಕಂದಾಯವಾಗಿತ್ತು. ಸಂಸ್ಥಾನದಲ್ಲಿ ನಿಗದಿತ ಭೂಮಿಯಲ್ಲಿ ಬಿತ್ತನೆಗೆ ಉಪಯೋಗಿಸುವ ಬೀಜದ ಪ್ರಮಾಣ ಅಥವಾ ಭೂಮಿಯ ಉತ್ಪಾದನೆ ಆಧಾರದ ಮೇಲೆ ಭೂಕಂದಾಯ ನಿಗದಿ ಮಾಡಲಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ ಒಣ

ಬೇಸಾಯದ ಭೂಮಿಯಲ್ಲಿ ಉತ್ಪಾದನೆಯ ನಾಲ್ಕನೆಯ ಒಂದು ಭಾಗ, ನೀರಾವರಿ ಜಮೀನಿಗೆ ಒಟ್ಟು ಉತ್ಪಾದನೆಯಲ್ಲಿ ಅರ್ಧದಿಂದ ಐದನೆಯ ಎರಡು ಭಾಗದಷ್ಟು ಪ್ರಮಾಣದಲ್ಲಿ ಕಂದಾಯ ವಸೂಲಿ ಮಾಡಲಾಗುತ್ತಿತ್ತು. ವಸ್ತುವನ್ನು ನಗದಾಗಿ ಪರಿವರ್ತಿಸಿದಾಗ ಬರುವ ಮೊಬಲಗು ಆ ಭೂಮಿಯ ನಿಗದಿತ ಕಂದಾಯವಾಗುತ್ತಿತ್ತು.[೧೪೨]

೨. ಭೂಮಾಪನ : ಮೊಗಲರ ಭೂಮಾಪನ ಕೂರ್ಗಿಯ ಘಟಕದ ಆಧಾರದ ಮೇಲೆ ಒಟ್ಟು ತೆರಿಗೆ ನಿಗದಿಯಾಗುತ್ತಿತ್ತು. ಮೊದಲನೆ ದರ್ಜೆಯ ಕೂರ್ಗಿಭೂಮಿಗೆ ೫ ರಿಂದ ೧೦ ರೂಪಾಯಿ, ಎರಡನೆಯದಕ್ಕೆ ೩ ರಿಂದ ೮ ರೂಪಾಯಿ, ಮೂರನೆಯದಕ್ಕೆ ೧ ರಿಂದ ೫ ರೂಪಾಯಿ, ನಾಲ್ಕನೆಯದು ೮ ಆಣೆಯಿಂದ ೩ ರೂಪಾಯಿ ಎಂದು ನಿಗದಿ ಪಡಿಸಲಾಗುತ್ತಿತ್ತು. ೧೮೫೩ರಲ್ಲಿ ಒಂದನೆಯ ಸಾಲಾರ್‌ಜಂಗ್‌ನು ಕೂರ್ಗಿ ಬದಲಾಗಿ ಎಕರೆಗೆ ಮಾಪನ ಪದ್ಧತಿಯನ್ನು ಜಾರಿಗೆ ತಂದನು.[೧೪೩]

೩. ಮಣ್ಣಿನ ವರ್ಗೀಕರಣ: ಹೈದರಾಬಾದ್ ಸಂಸ್ಥಾನದಲ್ಲಿ ಕಂದಾಯವು ಮಣ್ಣಿನ ವರ್ಗೀಕರಣದ ಮೂಲಕ ನಿಗದಿಯಾಗುತ್ತಿತ್ತು. ಮಣ್ಣನ್ನು ಮುಖ್ಯವಾಗಿ ನಾಲ್ಕು ಬಗೆಯನ್ನಾಗಿ ವಿಂಗಡಿಸಲಾಗಿತ್ತು. ೧. ರೆಗರ್ (ಕಪ್ಪು ಹತ್ತಿ ಮಣ್ಣು), ೨. ಮಿಲ್ವಾ (ಕಪ್ಪು ಮತ್ತು ಕೆಂಪು ಮಣ್ಣು), ೩. ಮಸದ (ಕೆಂಪು ಮಣ್ಣು), ೪. ಶೋರೆ (ಕ್ಷಾರ ಅಥವಾ ಚೌಳು ಮಣ್ಣು) ಎಂದು ವಿಂಗಡಿಸಲಾಗಿತ್ತು. ಮಣ್ಣಿನ ಫಲವತ್ತತೆಯ ಆಧಾರದ ಮೇಲೆ ಕಂದಾಯವನ್ನು ನಿಗದಿಗೊಳಿಸಲಾಗುತ್ತಿತ್ತು.[೧೪೪]

೪. ಬಟ್ವಾಯಿ ಪದ್ಧತಿ : ಹೈದರಾಬಾದ್ ನಿಜಾಮರ ಕಂದಾಯ ಆಡಳಿತದಲ್ಲಿ ಬಟ್ವಾಯಿ ಪದ್ಧತಿ ಜಾರಿಯಲ್ಲಿತ್ತು. ಕಂದಾಯವನ್ನು ವಸ್ತುರೂಪದಲ್ಲಿ ಕೊಡುವುದಕ್ಕೆ ಬಟ್ವಾಯಿ ಪದ್ಧತಿ ಎನ್ನುತ್ತಿದ್ದರು. ಕಂದಾಯ ಅಧಿಕಾರಿಗಳು ರೈತರು ಬೆಳೆದ ಬೆಳೆಯನ್ನು ಕಟಾವು ಮಾಡುವ ಸಂದರ್ಭದಲ್ಲಿ ಆಯಾ ಸ್ಥಳದಲ್ಲಿಯೇ ವಸ್ತು ರೂಪದಲ್ಲಿ ಕಂದಾಯ ವಸೂಲಿ ಮಾಡುತ್ತಿದ್ದರು. ಬಟ್ವಾಯಿ ಪದ್ಧತಿಯು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿತ್ತು.[೧೪೫]

೫. ಜಿಲ್ಲಾಬಂದಿ ವ್ಯವಸ್ಥೆ : ನಿಜಾಮರ ಸಂಸ್ಥಾನದಲ್ಲಿ ಜಿಲ್ಲಾಬಂದಿ ವ್ಯವಸ್ಥೆ ಪದ್ಧತಿ ಅಬ್ದುಲ್ ರಹಮಾನ್ ಕಾಲದಲ್ಲಿ ಆರಂಭವಾಯಿತು. ಇದು ಸಾಲಾರ್‌ಜಂಗ್‌ನ ಕಂದಾಯ ಸುಧಾರಣೆಯ ಮುಂದುವರೆದ ರೂಪವಾಗಿದೆ. ಕಂದಾಯ ಪದ್ಧತಿಯನ್ನು ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ಸುಧಾರಿಸುವಲ್ಲಿ ಇದೊಂದು ದಿಟ್ಟ ಹೆಜ್ಜೆಯಾಗಿತ್ತು. ಇದರ ಮುಖ್ಯ ಉದ್ದೇಶ ಭೂಮಿ ಮತ್ತು ಭೂಕಂದಾಯ ವಸೂಲಿಯನ್ನು ಉತ್ತಮಗೊಳಿಸುವುದು ಮತ್ತು ಸಂಸ್ಥಾನದ ಹಣಕಾಸು ಪರಿಸ್ಥಿತಿಯನ್ನು ಸುಭದ್ರಗೊಳಿಸುವುದಾಗಿತ್ತು. ಇದರ ಅನ್ವಯ ವ್ಯವಸಾಯಯೋಗ್ಯ ಭೂಮಿಯನ್ನು ಅಳೆದು ಗುರುತಿಸಿ ನೋಂದಾಯಿಸಲಾಗುತ್ತಿತ್ತು. ಭೂಕಂದಾಯವನ್ನು ಒಂದು ಭಿಘಾ ಭೂಮಿ ಅಂದರೆ ೩೬೦೦ ಚ.ಗಜಕ್ಕೆ ನಿಗದಿಗೊಳಿಸಲಾಗುತ್ತಿತ್ತು. ಪ್ರತಿ ಭೂಮಾಲಿಕನಿಗೂ ಸಾಗುವಳಿದಾರನಿಗೂ ಮಾಲಿಕತ್ವದ

ಹಕ್ಕನು ನೀಡಲಾಗುತ್ತಿತ್ತು. ಅಲ್ಲದೇ ಮೂರು ವರ್ಷಗಳ ಒಪ್ಪಂದ ಮೇರೆಗೆ ಹಿಂದಿನ ಹತ್ತು ವರ್ಷಗಳ ಸರಾಸರಿ ಆಧಾರದ ಮೇಲೆ ವಾರ್ಷಿಕ ಭೂಕಂದಾಯ ನಿಗದಿಗೊಳಿಸಲಾಗುತ್ತಿತ್ತು. ಜಿಲ್ಲಾಬಂದಿ ಸುಧಾರಣೆ ಅನ್ವಯ ಭೂಕಂದಾಯವನ್ನು ವಿವಿಧ ಐದು ಬಗೆಯ ಜಮೀನುಗಳಿಂದ ಸಂಗ್ರಹಿಸಲಾಗುತ್ತಿತ್ತು. ಭೂಕಂದಾಯವನ್ನು ಭೂಮಿಯ ವೈವಿಧ್ಯತೆಗೆ ಅನುಸಾರವಾಗಿ ಅಂದರೆ ಒಣಭೂಮಿ, ನೀರಾವರಿ ಭೂಮಿ ಮತ್ತು ಒಳಭೂಮಿ ಪ್ರಕಾರ ಬದಲಾವಣೆ ಮಾಡಲಾಗುತ್ತಿತ್ತು. ಭೂಮಿಯನ್ನು ಕಾಣಿಕೆಯಾಗಿ ನೀಡುವ ವ್ಯವಸ್ಥೆ ಜಾರಿಯಲ್ಲಿತ್ತು.

ನಿಜಾಮರ ಕಂದಾಯ ಆಡಳಿತದಲ್ಲಿ ಅನುಸರಿಸಿದ ತೆರಿಗೆ ನೀತಿಗಳು ಮತ್ತು ಅವುಗಳ ಮಾರ್ಪಾಡುಗಳನ್ನು ಸಂಸ್ಥಾನಕ್ಕೆ ಹೊಂದಾಣಿಕೆಯಾಗುವಂತೆ ಮಾಡಿಕೊಂಡು ತೆರಿಗೆ ಪದ್ಧತಿಯನ್ನು ಅಳವಡಿಸಿಕೊಂಡಿರುವುದು ಕಂಡುಬರುತ್ತದೆ.[೧೪೬]

ಉಪಸಂಹಾರ

ಹೈದರಾಬಾದ್ ನಿಜಾಮರು ಮೊಗಲರ ಆಡಳಿತವನ್ನು ತಮ್ಮ ಪ್ರದೇಶಕ್ಕೆ ಹೊಂದಾಣಿಕೆಯಾಗುವ ರೀತಿಯಲ್ಲಿ ಮಾರ್ಪಾಡು ಮಾಡಿ ಆಳ್ವಿಕೆ ಆರಂಭಿಸಿದರು. ನಂತರ ದಕ್ಷಿಣ ಭಾರತದ ರಾಜಕೀಯದಲ್ಲಿ ಆದ ಬದಲಾವಣೆಗೆ ಅನುಗುಣವಾಗಿ ತಮ್ಮ ಬದ್ಧ ವೈರಿಯಾದ ಮರಾಠರನ್ನು ಮಟ್ಟಹಾಕಲು ಮತ್ತು ಸ್ಥಳೀಯ ಸಣ್ಣಪುಟ್ಟ ಮನೆತನಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದರು. ಇದೇ ಸಂದರ್ಭದಲ್ಲಿ ದಕ್ಷಿಣ ಭಾರತದಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಲು ಹೊಂಚು ಹಾಕುತ್ತಿದ್ದ ಬ್ರಿಟಿಶರು ತಮ್ಮ ಧೋರಣೆಯನ್ನು ನಿಜಾಮರ ಮುಖಾಂತರ ಈಡೇರಿಸಿಕೊಳ್ಳಲು ಪ್ರಯತ್ನಿಸಿದರು. ಇದರ ಫಲವಾಗಿ ಬ್ರಿಟಿಶರ ಸಹಾಯಕ ಸೈನಿಕ ಪದ್ಧತಿಗೆ ಸಹಿ ಹಾಕುವಂತಾಯಿತು ಮತ್ತು ಬ್ರಿಟಿಶರ ಆಶ್ರಿತ ಸಂಸ್ಥಾನವಾಗಬೇಕಾಯಿತು. ಇದರಿಂದ ಅದಾಗಲೇ ಇದ್ದ ಮೊಗಲ್ ಆಡಳಿತ ಪದ್ಧತಿಯ ಬದಲಾಗಿ ಬ್ರಿಟಿಶ್ ಮಾದರಿಯ ಆಧುನಿಕ ಆಡಳಿತ ಪದ್ಧತಿ ಜಾರಿಗೆ ಬಂದಿತು. ಪ್ರಧಾನ ಮಂತ್ರಿ ಸಾಲಾರ್‌ಜಂಗ್ ಮತ್ತು ನಿಜಾಮ್ ಮೆಹಬೂಬ ಅಲಿಖಾನ್ ಬ್ರಿಟಿಶ್ ಮಾದರಿಯ ಕಾನೂನಬದ್ಧ ಕಾಯಿದೆಗಳನ್ನು ಜಾರಿಗೆ ತರುವಲ್ಲಿ ತೀವ್ರ ಆಸಕ್ತರಾಗಿದ್ದರು.

ಆಡಳಿತದಲ್ಲಿ ಉಂಟಾದ ಬದಲಾದ ಪರಿಸ್ಥಿತಿಗನುಗುಣವಾಗಿ ೧೯೧೯ರಲ್ಲಿ ಮತ್ತು ೧೯೩೯ರಲ್ಲಿ ಉಸ್ಮಾನ್ ಅಲಿಖಾನ್ ಜಾರಿಗೆ ತಂದ ಹೊಸ ಸಂವಿಧಾನ ಚುನಾಯಿತ ಶಾಸನ ಸಭೆಗೆ ಮಾನ್ಯತೆಯನ್ನು ನೀಡಿತು. ನಿಜಾಮರು ತಮ್ಮ ಪ್ರಭುತ್ವವನ್ನು ಉಳಿಸಿಕೊಳ್ಳಲು ಕಾಲಕಾಲಕ್ಕೆ ಆಡಳಿತದಲ್ಲಿ ಬದಲಾವಣೆಯನ್ನು ತಂದರಾದರೂ ಭಾರತ ಸ್ವತಂತ್ರವಾದ ನಂತರ ಹೈದರಾಬಾದ್ ಸಂಸ್ಥಾನ ಅದರಲ್ಲಿ ವಿಲೀನವಾಗುವುದು ಅನಿವಾರ್ಯವಾಗಿತ್ತು. ನಿಜಾಮ ವಿಲೀನವನ್ನು ವಿರೋಧಿಸಿದರೂ ಸೈನಿಕ ಕಾರ್ಯಾಚರಣೆ ಅವನ ವಿರೋಧವನ್ನು ತಣ್ಣಗಾಗಿಸಿತು.

ಕೊನೆಟಿಪ್ಪಣಿಗಳು

೧. ನಾಯಿಮ್ ಎಂ.ಎ, ೧೯೯೪, **ಮೊಗಲ್ ಅಡ್ಮಿನಿಸ್ಟ್ರೆಷನ್, ಅಂಡರ್ ದಿ ನಿಜಾಮ್ ಉಲ್ ಮುಲ್ಕ್ ಆಸಫ್ ಜಾಹ,** ಜೈಕೋ ಪಬ್ಲಿಕೇಶನ್, ಮುಂಬಯಿ, ಪು.೨೪

೨. ದೇವರಾಜು ಸಿ.ಬಿ, ೨೦೧೩, **ಹೈದರಾಬಾದ್ ರಾಜ್ಯದ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು: ಬೀದರ ಜಿಲ್ಲೆಯ ಒಂದು ಅಧ್ಯಯನ, (೧೯೦೫-೧೯೫೦), ಪಿಎಚ್.ಡಿ.ಮಹಾಪ್ರಬಂಧ,** ಮೈಸೂರು ವಿಶ್ವವಿದ್ಯಾನಿಲಯ, ಪು. ೬೨

೩. ಲಕಿಖಾನ್, ೧೯೯೮, **ಡೆಕ್ಕನ್ ಅಡ್ಮಿನಿಸ್ಟ್ರೇಷನ್, ಅಂಡರ್ ನಿಜಾಮ್-ಉಲ್-ಮುಲ್ಕ,** ಲಕಿಖಾನ್ (ಸಂ), ಇಂಟರ್ನ್ಯಾಷನಲ್ ಜರ್ನಲ್ ಆಫ್ ಸೋಶಿಯಲ್ ಸೈನ್ಸ್ ಆ್ಯಂಡ್ ಹ್ಯುಮಾಟಿಸ್ ಇನ್ವೆನ್ಸನ್, ಸಂಪುಟ ೩, ಸಂಚಿಕೆ ೧೪, ಪು.೨೦೦

೪. ದೇವರಾಜು ಸಿ.ಬಿ, **ಪೂರ್ವೋಕ್ತ,** ಪು.೬೨

೫. ಲಕಿಖಾನ್, **ಪೂರ್ವೋಕ್ತ,** ಪು.೧೯೯-೨೦೦

೬. ದೇವರಾಜು ಸಿ.ಬಿ, **ಪೂರ್ವೋಕ್ತ,** ಪು.೬೩-೬೪

೭. ಮಲ್ಲಪ್ಪ ಆರ್, ೧೯೯೭, **ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಇನ್ ಹೈದರಾಬಾದ್ ಕರ್ನಾಟಕ, ಪಿಎಚ್.ಡಿ ಮಹಾಪ್ರಬಂಧ,** ಗುಲಬರ್ಗಾ, ಪು.೧೪

೮. ನಾಯಿಮ್ ಎಂ.ಎ, **ಪೂರ್ವೋಕ್ತ,** ಪು.೫೫-೫೬

೯. ಮುದಿರಾಜ್, ೧೯೭೦, **ಪಿಕ್ಟೋರಿಯಲ್ ಹೈದರಾಬಾದ್, ಹೈದರಾಬಾದ್,** ಪುಟ- ೪೩೨

೧೦. ಅದೇ, ಪು.೪೩೮

೧೧. ದೇವರಾಜು ಸಿ.ಬಿ, **ಪೂರ್ವೋಕ್ತ,** ಪು.೬೫

೧೨. ವೈಕುಂಠಮ್, ೨೦೧೨, **ಸ್ಟೇಟ್ ಎಕೊನೋಮಿಕ್ಸ್ ಆ್ಯಂಡ್ ಟ್ರಾನ್ಸ್‌ಫಾರ್ಮ್‌ಮಿಷಿನ್ ಹೈದರಾಬಾದ್ ಸ್ಟೇಟ್,** (೧೭೨೪-೧೯೪೮), ಮನೋಹರ ಪಬ್ಲಿಕೇಶನ್ ನ್ಯೂದೆಹಲಿ, ಪು. ೨೩

೧೩. ಮಲ್ಲಪ್ಪ ಆರ್, **ಪೂರ್ವೋಕ್ತ,** ಪು.೨೦-೨೧

೧೪. ದೇವರಾಜು ಸಿ.ಬಿ, **ಪೂರ್ವೋಕ್ತ,** ಪು.೬೫-೬೬

೧೫. ಬಾವ ವಿ.ಕೆ., ೧೯೮೩, **ಸಾಲಾರಜಂಗ್ ಬಿಟ್ವೀನ್ ಮೊಗಲ್ ಆ್ಯಂಡ್ ಇಂಗ್ಲೀಶ್ ಹೈದರಾಬಾದ್**, ಪು.೩೦೨

೧೬. ಸೆಷನ್ ಕೆ.ಎಸ್.ಎಸ್., ೧೯೯೩, **ಹೈದರಾಬಾದ್ ೪೦೦- ಸಾಗ್ ಆಫ್ ಎ ಸಿಟಿ**, ಹೈದರಾಬಾದ್, ಪು.೨೧-೨೨

೧೭. ಬಾವಾ ವಿ.ಕೆ., ೧೯೮೦, **ದಿ ಲಾಸ್ಟ್ ನಿಜಾಮ್ - ದಿ ಲೈಫ್ ಆ್ಯಂಡ್ ಟೈಮ್ ಆಫ್ ಮಿರ್ ಉಸ್ಮಾನ್ ಅಲಿಖಾನ್**, ವೀಕಿಂಗ್, ನ್ಯೂ ದೆಹಲಿ, ಪು.೧೭೨-೧೭೩

೧೮. ಗೋಪಾಲರಾವ್ ಹೆಜೀಬ್, ೨೦೦೧, **ಹೈದರಾಬಾದ್ ಮುಕ್ತಿ ಸಂಘರ್ಷ**, ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು, ಪು.೧೨೨-೧೨೩

೧೯. ರಾಜೇಶ್ ಹಂ.ಗು.(ಸಂ), ೨೦೧೩, **ಇತಿಹಾಸ ದರ್ಪಣ-ತ್ರೈಮಾಸಿಕ ಚರಿತ್ರಾಸಕ್ತರ ಅಂಕಣ**, ಪುಸ್ತಕ ೧೭, ಏಪ್ರಿಲ್-ಜೂನ್ ೨೦೧೩, ಬೆಂಗಳೂರು, ಪು.೫೫

೨೦. ಜಾಗಿರದಾರ ಆರ್.ಜಿ., ಲಿಂಗಸುಗೂರ ವಿಠಲರಾವ (ಸಂ), ೧೯೪೧, **ಹೈದರಾಬಾದ ಕರ್ನಾಟಕ**, ಪ್ರೇಮಸಾಗರ ಮುದ್ರಣಾಲಯ, ಹೈದರಾಬಾದ್, ಪು.೭೦-೭೧

೨೧. ಗೋಪಾಲರಾವ್ ಹೇಜೀಬ್, **ಪೂರ್ವೋಕ್ತ**, ಪು.೭

೨೨. ಅದೇ, ಪು.೮-೯

೨೩. ದೇವರಾಜು ಸಿ.ಬಿ., **ಪೂರ್ವೋಕ್ತ**, ಪು.೬೮-೬೯

೨೪. ಸೆಷನ್ ಕೆ.ಎಸ್.ಎಸ್., **ಪೂರ್ವೋಕ್ತ**, ಪು.೨೧

೨೫. ರಘುನಂದರಾವ್ ಪಿ., **ಹಿಸ್ಟರಿ ಆ್ಯಂಡ್ ಕಲ್ಚರ್ ಆಫ್ ಆಂಧ್ರಪ್ರದೇಶ**, ಸ್ಟೆರ್ಲಿಂಗ್ ಪಬ್ಲಿಕೇಶನ್ ಹೈದರಾಬಾದ್, ಪು.೧೬೯-೧೭೦

೨೬. ಕಾಟೆ ಪಿ.ವಿ., ೧೯೮೭, **ಮರಾಠವಾಡ ಅಂಡರ್ ದಿ ನಿಜಾಮ್ಸ್, ೧೭೨೪-೧೯೪೮**, ಮಿತ್ತಲ್ ಪಬ್ಲಿಕೇಶನ್ ದೆಹಲಿ, ಪು.೧೯

೨೭. ಜಾಗಿರದಾರ ಆರ್.ಜಿ., ಲಿಂಗಸೂಗೂರ ವಿಠಲರಾವ, **ಪೂರ್ವೋಕ್ತ**, ಪು.೭೧

೨೮. ದೇವರಾಜು ಸಿ.ಬಿ, **ಪೂರ್ವೋಕ್ತ**, ಪು.೬೫

೨೯. ಜಾಗಿರದಾರ ಆರ್.ಜಿ., ಲಿಂಗಸುಗೂರ ವಿಠಲರಾವ, **ಪೂರ್ವೋಕ್ತ**, ಪು.೭೧

೩೦. **ನಿಜಾಮ್ ಗೌರ್‍ನಮೆಂಟ್ ರೂಲ್ಸ್**, ಪು.೬೦-೬೧

೩೧. ಜಾಗಿರದಾರ ಆರ್.ಜಿ., ಲಿಂಗಸುಗೂರ ವಿಠಲರಾವ, **ಪೂರ್ವೋಕ್ತ,** ಪು.೭೨

೩೨. ದೇವರಾಜು ಸಿ.ಬಿ, **ಪೂರ್ವೋಕ್ತ,** ಪು.೬೬

೩೩. ಫಾತುಲ್ಲಾ ಖಾನ್ ಎಮ್., ೧೯೩೫, **ಎ ಹಿಸ್ಟರಿ ಆಫ್ ಅಡ್ಮಿನಿಸ್ಟ್ರೇಷನ್ ರಿಫಾರ್ಮ್ಸ್ ಇನ್ ಹೈದರಾಬಾದ್ ಸ್ಟೇಟ್,** ನ್ಯೂ ಹೈದರಾಬಾದ್ ಪ್ರಡಸಿ, ಪು.೭೯–೮೦

೩೪. ಜಾಗಿರದಾರ ಆರ್.ಜಿ, ಲಿಂಗಸುಗೂರ ವಿಠಲರಾವ, **ಪೂರ್ವೋಕ್ತ,**, ಪು.೭೧

೩೫. ಅದೇ, ಪು.೭೨

೩೬. ಫಾತುಲ್ಲಾ ಖಾನ್ ಎಮ್., **ಪೂರ್ವೋಕ್ತ,** ಪು.೯೦–೯೧

೩೭. **ಕಾನ್ಸ್‌ಟಿಟ್ಯೂಶನಲ್ ರೂಲ್ಸ್ ಹೆಚ್.ಇ.ಹೆಚ್ ನಿಜಾಮ್ಸ್ ಗೌರ್ನಮೆಂಟ್,** ಪು.೭೯

೩೮. ಚಂದ್ರಯ್ಯ, ೨೦೦೧, **ಹೈದರಾಬಾದ್ ೪೦೦, ಗ್ಲೋರಿಯ್ಸ್ ಇಯರ್,** ಪು.೭೯

೩೯. ಕಾಟೆ ಪಿ.ವಿ, **ಪೂರ್ವೋಕ್ತ,** ಪು.೩೮

೪೦. ಜಾಗೀದಾರ ಆರ್.ಜಿ., ಲಿಂಗಸುಗೂರ ವಿಠಲರಾವ, **ಪೂರ್ವೋಕ್ತ,** ಪು.೭೧

೪೧. ಷೇಕ್ ಅಲಿ (ಪ್ರ.ಸ), ಸೆಬಾಸ್ಟಿನ್ ಜೋಸೆಫ್ (ಸ.ಸಂ), **ಕರ್ನಾಟಕ ಚರಿತ್ರೆ, ಸಂಪುಟ ೬,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.೧೭೧

೪೨. ಪಾಟೀಲ ಎಂ.ಬಿ., ೧೯೯೭, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲಬರ್ಗಾ ಜಿಲ್ಲೆ,** ಕರ್ನಾಟಕ ರಾಜ್ಯ ಸರ್ಕಾರ, ಪು.೪೦೩

೪೩. ಅದೇ, ಪು.೪೦೬

೪೪. ಫಾತುಲ್ಲಾ ಖಾನ್ ಎಮ್., **ಪೂರ್ವೋಕ್ತ,** ಪು.೮೫

೪೫. ನಾಯಿಮ್ ಎಂ.ಎ., **ಪೂರ್ವೋಕ್ತ,** ಪು.೧೭–೧೮

೪೬. **ಕಾನ್ಸ್‌ಟಿಟ್ಯೂಶನಲ್ ರೂಲ್ಸ್ ಹೆಚ್.ಇ.ಹೆಚ್ ನಿಜಾಮ್ಸ್ ಗೌರ್ನಮೆಂಟ್,** ಪು.೧೨೪

೪೭. ಶೇಷನ್ ಕೆ.ಎಸ್.ಎಸ್, **ಪೂರ್ವೋಕ್ತ,** ಪು.೨೨

೪೮. ಷೇಕ್ ಅಲಿ (ಪ್ರ.ಸಂ), ಸೆಬಾಸ್ಟಿನ್ ಜೋಸೆಫ್ (ಸ.ಸಂ), **ಪೂರ್ವೋಕ್ತ,** ಪು.೧೭೨

೪೯. **ಕಾನ್ಸ್‌ಟಿಟ್ಯೂಶನಲ್ ರೂಲ್ಸ್ ಹೆಚ್.ಇ.ಹೆಚ್ ದಿ ನಿಜಾಮ್, ಗೌರ್ನಮಂಟ್,** ಪು.೧೩೦

೫೦. ಜಾಗಿರದಾರ ಆರ್.ಜಿ, ಲಿಂಗಸುಗೂರ ವಿಠಲರಾವ (ಸಂ), **ಪೂರ್ವೋಕ್ತ,** ಪು.೭೧

೫೧. ಅನಿಸ್ ಸಿರಾಜ್ ಎಸ್., ೨೦೧೧, **ಇಂಪೀರಿಯಲ್ ಗ್ಯಾಸೆಟಿಯರ್ ಆಫ್ ಇಂಡಿಯಾ ಪ್ರಾವಿನ್ಸಿಯಲ್ ಸೀರೀಸ್, ಹೈದರಾಬಾದ್ ಸ್ಟೇಟ್** ರಾಯಚೂರು, ಕರ್ನಾಟಕ ಗ್ಯಾಜೆಟಿಯರ್ ಡಿಪಾರ್ಟ್‌ಮೆಂಟ್, ಬೆಂಗಳೂರು, ಪು.೭೬

೫೨. ಫತುಲ್ಲಾ ಖಾನ್ ಎಮ್., **ಪೂರ್ವೋಕ್ತ,** ಪು.೭೬

೫೩. ಜಾಗಿರದಾರ ಆರ್.ಜಿ, ಲಿಂಗಸುಗೂರ ವಿಠಲರಾವ(ಸಂ), **ಪೂರ್ವೋಕ್ತ,** ಪು. ೭೨

೫೪. ದಿ **ಹಾಫ್ ಇಯರ್ ಲಿಸ್ಟ್ ಆಫ್ ಆಫೀಸರ್ಸ್,** ಹಿಸ್ಸ್ ಹೈಲೆನ್ಸ್ ದಿ ನಿಜಾಮ್ಸ್ ಗೌರ್ನಮೆಂಟ್ **ಫೈಲ್ ೪, ಏಪ್ರಿಲ್ ೧೯೦೫,** ಪು.೩

೫೫. ಜಾಗಿರದಾರ ಆರ್.ಜಿ, ಲಿಂಗಸುಗೂರ ವಿಠಲರಾವ(ಸಂ), **ಪೂರ್ವೋಕ್ತ,** ಪು.೭೨-೭೩

೫೬. **ಕಾನ್ಸ್‌ಟಿಟ್ಯೂಶನಲ್ ರೂಲ್ಸ್ ಹೆಚ್.ಇ.ಹೆಚ್ ದಿ ನಿಜಾಮ್ ಗೌರ್ನಮೆಂಟ್,** ಪು.೯೫-೯೬

೫೭. ಫತುಲ್ಲಾ ಖಾನ್ ಎಮ್, **ಪೂರ್ವೋಕ್ತ,** ಪು.೯೬-೯೭

೫೮. ಸೆಷನ್ ಕೆ.ಎಸ್.ಎಸ್., **ಪೂರ್ವೋಕ್ತ,** ಪು.೨೩-೨೪

೫೯. ಜಾಗಿರದಾರ ಆರ್.ಜಿ, ಲಿಂಗಸುಗೂರ ವಿಠಲರಾವ(ಸಂ), **ಪೂರ್ವೋಕ್ತ,** ಪು.೭೩-೭೪

೬೦. ಶೇಷನ್ ಕೆ.ಎಸ್.ಎಸ್., **ಪೂರ್ವೋಕ್ತ,** ಪು.೨೯-೩೦

೬೧. ಗೋಪಾಲರಾವ್ ಹೇಜೀಬ್, **ಪೂರ್ವೋಕ್ತ,** ಪು.೩೦-೩೭

೬೨. ಜಾಗಿರದಾರ ಆರ್.ಜಿ, ಲಿಂಗಸುಗೂರ ವಿಠಲರಾವ(ಸಂ), **ಪೂರ್ವೋಕ್ತ,** ಪು.೭೩

೬೩. ನಾಯಿಮ್ ಎಂ.ಎ, ೨೦೦೨, **ದಿ ಸ್ಪ್ಲೆಂಡರ್ ಆಫ್ ಹೈದರಾಬಾದ್,** ಪು.೧೧೬

೬೪. ಲಕಿಖಾನ್, **ಪೂರ್ವೋಕ್ತ,** ಪು.೧೯೯-೨೦೦

೬೫. ಅನಿಸ್ ಸಿರಾಜ್ ಎಸ್, ೨೦೧೧, **ಇಂಪೀರಿಯಲ್ ಗ್ಯಾಸೆಟಿಯರ್ ಆಫ್ ಇಂಡಿಯಾ, ಪ್ರಾವಿನ್ಸಿಯಲ್ ಸೀರೀಸ್ ಹೈದರಾಬಾದ್ ಸ್ಟೇಟ್** ರಾಯಚೂರು, ಕರ್ನಾಟಕ ಗ್ಯಾಸೆಟಿಯರ್, ಬೆಂಗಳೂರು ಪು.೧೪೬

೬೬. ಅದೇ, ಪು.೧೪೬-೧೪೭

೬೭. ರಾಮಕೃಷ್ಣ ರೆಡ್ಡಿ ಎ, ೧೯೮೭, **ಎಕನಾಮಿಕ್ ಹಿಸ್ಟರಿ ಆಫ್ ಹೈದರಾಬಾದ್ ಸ್ಟೇಟ್,** ಗೇನ್ ಪಬ್ಲಿಕೇಷನ್ ದೆಹಲಿ, ಪು.೫೪

೬೮. ಜಯರಾಮ್ ಆರ್, ೧೯೯೮, **ಅಡ್ಮಿಸ್ಟ್ರೇಷನ್ ಸಿಸ್ಟಮ್ ಅಂಡರ್ ದಿ ನಿಜಾಮ್ಸ್**, ೧೮೫೩–೧೯೩೫, ಉಲ್ಹಾ ಪಬ್ಲಿಕೇಷನ್, ಬೆಂಗಳೂರು ಪು.೬೫

೬೯. ಅದೇ, ಪು.೭೧

೭೦. ಅನೀಸ್ ಸಿರಾಜ್ ಎಸ್, ೨೦೧೧, **ಇಂಪೀರಿಯಲ್ ಗ್ಯಾಸೆಟಿಯರ್ ಆಫ್ ಇಂಡಿಯಾ ಪ್ರಾವಿನ್ಸಿಯಲ್ ಸೀರೀಸ್, ಹೈದರಾಬಾದ್ ಸ್ಟೇಟ್, ಗುಲಬರ್ಗಾ**, ಕರ್ನಾಟಕ ಗ್ಯಾಸೆಟಿಯರ್, ಬೆಂಗಳೂರು ಪು.೧೪೬

೭೧. ಲಕಿಖಾನ್, **ಪೂರ್ವೋಕ್ತ**, ಪು.೨೦೦

೭೨. ಅನೀಸ್ ಸಿರಾಜ್ ಎಸ್., ಗುಲಬರ್ಗಾ, **ಪೂರ್ವೋಕ್ತ**, ಪು.೧೪೬

೭೩. ಮಜ್‌ರ ಹುಸೇನ, ೧೯೪೦, **ಹೈದರಾಬಾದ ಡಿಸ್ಟ್ರಿಕ್ಟ್ ಗ್ಯಾಸೆಟಿಯರ, ಗುಲಬರ್ಗಾ**, ೧೯೩೧–೧೯೩೬, ಸೆಂಟ್ರಲ್ ಪ್ರೆಸ್, ಹೈದರಾಬಾದ್, ಪು.೨

೭೪. ಅನೀಸ್ ಸಿರಾಜ್ ಎಸ್, ಗುಲಬರ್ಗಾ, **ಪೂರ್ವೋಕ್ತ**, ಪು.೧೫೦

೭೫. ಮಜ್‌ರ ಹುಸೇನ್, **ಪೂರ್ವೋಕ್ತ**, ಪು.೧೩೮

೭೬. ಅನೀಸ್ ಸಿರಾಜ್ ಎಸ್, ರಾಯಚೂರು, **ಪೂರ್ವೋಕ್ತ**, ಪು.೧೪೬

೭೭. ಮಜ್‌ರ ಹುಸೇನ, ೧೯೪೦, **ಹೈದರಾಬಾದ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್ ಬೀದರ**, ೧೯೩೧–೧೯೩೬, ಸೆಂಟ್ರಲ್ ಪ್ರೆಸ್ ಹೈದರಾಬಾದ್, ಪು.೪

೭೮. ಅನೀಸ್ ಸಿರಾಜ್ ಎಸ್, ರಾಯಚೂರು, **ಪೂರ್ವೋಕ್ತ**, ಪು.೧೪೬

೭೯. ಮಜ್‌ರ ಹುಸೇನ್, ೧೯೪೧, **ಹೈದರಾಬಾದ್ ಡಿಸ್ಟ್ರಿಕ್ಟ್ ಗ್ಯಾಸೆಟೆಯರು, ರಾಯಚೂರು** ೧೯೩೧–೧೯೩೬, ಸೆಂಟ್ರಲ್ ಪ್ರೆಸ್, ಹೈದರಾಬಾದ್ ಪು.೪

೮೦. ಜಾಗಿರದಾರ್ ಆರ್.ಜಿ, ಲಿಂಗಸುಗೂರ ವಿಠಲರಾವ(ಸಂ), **ಪೂರ್ವೋಕ್ತ**, ಪು.೭೧

೮೧. ಅನಿಸ್ ಸಿರಾಜ್ ಎಸ್, ಗುಲಬರ್ಗಾ, **ಪೂರ್ವೋಕ್ತ**, ಪು.೧೫೪

೮೨. ಜಯರಾಮ್ ಆರ್, ೧೯೯೮, **ಅಡ್ಮಿನಿಸ್ಟ್ರೇಷನ್ ಸಿಸ್ಟಮ್ ಅಂಡರ್ ದಿ ನಿಜಾಮ್ಸ್**, ೧೮೫೩–೧೯೩೫, ಉಲ್ಹಾ ಪಬ್ಲಿಕೇಶನ್, ಬೆಂಗಳೂರು ಪು.೭೩

೮೩. ಅದೇ, ಪು.೭೫–೭೭

೮೪. ಜಾಗೀರದಾರ್ ಆರ್.ಜಿ, ವಿಠಲರಾವ ಲಿಂಗಸುಗೂರ (ಸಂ) **ಪೂರ್ವೋಕ್ತ**, ಪು.೭೧

೮೫. ಭಾನುಮತಿ ಬಿ, ೧೯೮೦, **ದಿ ಡೆವಲಪ್‌ಮೆಂಟ್ ಆಫ್ ಲೋಕಲ್ ಗೌರ್ನಮೆಂಟ್ಸ್ ಇನ್ ದಿ ನಿಜಾಮ್ಸ್ ಡೊಮಿನಿಯನ್, ೧೮೮೯-೧೯೪೮,** ಎಂ.ಫಿಲ್, ಉಸ್ಮಾನಿಯಾ ಯುನಿವರ್ಸಿಟಿ, ಹೈದರಾಬಾದ್, ಪು.೩೧

೮೬. ಮಜ್‌ರ ಹುಸೇನ, ೧೯೪೦, **ಹೆಚ್.ಇ.ಹೆಚ್ ನಿಜಾಮ್, ಗೌರ್ನಮೆಂಟ್ ಹೈದರಾಬಾದ್ ಗ್ಯಾಸೆಟಿಯರ್,** ಹೈದರಾಬಾದ್ ಡೆಕ್ಕನ್ ಗೌರ್ನಮೆಂಟ್ ಪ್ರೆಸ್, ಪು.೩

೮೭. ಜಯರಾಮ್ ಆರ್, **ಪೂರ್ವೋಕ್ತ,** ಪು.೮೪

೮೮. ಫತುಲ್ಲಾ ಖಾನ್ ಎಮ್, **ಪೂರ್ವೋಕ್ತ,** ಪು.೧೨೯

೮೯. ಮೌಲ್ವಿ ಸೈಯದ್ ಮೊಹದಿ, ೧೮೮೫, **ಹೈದರಾಬಾದ್ ಅಫೇರ್ಸ್ ವಾಲ್ಯೂಮ್ಸ್,** ೩ ಸೆಂಟ್ರಲ್ ಪ್ರೆಸ್ ಹೈದರಾಬಾದ್, ಪು.೧೫೫-೧೫೬

೯೦. ಫತುಲ್ಲಾ ಖಾನ್ ಎಮ್, **ಪೂರ್ವೋಕ್ತ,** ಪು.೧೨೯

೯೧. **ದಿ ಹೈದರಾಬಾದ್ ಮುನ್ಸಿಪಲ್ ಆಕ್ಟ್ ೧೧ ಆಫ್ ೧೩೪೨ ಫೆಸ್ಲಿ**

೯೨. ಜಯರಾಮ್ ಆರ್, **ಪೂರ್ವೋಕ್ತ,** ಪು.೬೬

೯೩. ನಂದನ ಮೋಹನ್ ರೆಡ್ಡಿ, ೧೯೯೬, **ಇತಿಹಾಸ ಜರ್ನಲ್ ಆಫ್ ಆಂಧ್ರಪ್ರದೇಶ ಸ್ಟೇಟ್ ಆರ್ಕೈವೀಸ್,** ಪು.೯೩

೯೪. ಅದೇ, ಪು.೯೪-೯೫

೯೫. ರಾಮಕೃಷ್ಣ ರೆಡ್ಡಿ ವಿ, **ಪೂರ್ವೋಕ್ತ,** ಪು.೬೧

೯೬. ಪಾಟೀಲ್ ಎಂ.ಬಿ, ೧೯೯೭, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲಬರ್ಗಾ ಜಿಲ್ಲೆ,** ಗ್ಯಾಸೆಟಿಯರ್ ಇಲಾಖೆ, ಪು.೪೦೪

೯೭. ಅಮರೇಶ ಹನುಮಂತ, ೨೦೧೪, **ರಾಯಚೂರು ದೋ-ಅಬ್ ಪ್ರದೇಶ - ಅಧಿಕಾರ ಮತ್ತು ಹೋರಾಟ, ಪಿಎಚ್.ಡಿ ಮಹಾಪ್ರಬಂಧ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೨೨೫

೯೮. ಪಾಟೀಲ್ ಎಂ.ಬಿ, **ಪೂರ್ವೋಕ್ತ,** ಪು.೪೦೪

೯೯. ಭಾನುಮತಿರಾವ್ ಎಸ್, ೧೯೯೨, **ಲ್ಯಾಂಡ್ ರಿಮ್ಯಾನಿವ್ ಆಡ್ಮಿನಿಸ್ಟ್ರೇಷನ್ ಇನ್ ದಿ ನಿಜಾಮ್ ಡೊಮಿನಿಯನ್,** ೧೮೫೩-೧೯೪೮, ಉಸ್ಮಾನಿಯ ಯುನಿವರ್ಸಿಟಿ, ಹೈದರಾಬಾದ್, ಪು.೫೪-೫೭

೧೦೦. ಗೋಪಾಲರಾವ್ ಹೇಜೀಬ್, ೨೦೦೧, **ಹೈದರಾಬಾದ್ ಮುಕ್ತಿ ಸಂಘರ್ಷ**, ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು ಪು.೧೫

೧೦೧. ಕುಲಕರ್ಣಿ ಎ.ಆರ್, ನಾಯೀಮ್ ಎಮ್.ಎ, ಡಿಸೋಜಾ ಟಿ.ಆರ್, ೧೯೯೬, **ಮೆಡೀವೆಲ್ ಡೆಕ್ಕನ್ ಹಿಸ್ಟರಿ**, ಪಾಪ್ಯುಲರ್ ಪ್ರಕಾಶನ, ಬಾಂಬೆ ಪು.೧೯೨

೧೦೨. ಮುಕ್ಕಮುಲ್ ರಾಧಾಕೃಷ್ಣ ಶರ್ಮಾ, ೨೦೦೪, **ಗ್ಲಿಂಪ್ಸಸ್ ಆಫ್ ಒರ್ ಪಾಸ್ಟ್ ಹಿಸ್ಟೋರಿಕಲ್ ರಿಸರ್ಚ್, ಡಿಪಾರ್ಟ್‌ಮೆಂಟ್ ಆಫ್ ಹಿಸ್ಟರಿ**, ಉಸ್ಮಾನಿಯ ಯುನಿವರ್ಸಿಟಿ, ಹೈದರಾಬಾದ್ ಪು.೨೯೧

೧೦೩. ಭಾನುಮತಿರಾವ್ ಎಸ್, **ಪೂರ್ವೋಕ್ತ**, ಪು.೩೬-೩೭

೧೦೪. ಜಾಗಿರದಾರ ಆರ್.ಜಿ, ವಿಠಲರಾವ್ ಗಾಯಕವಾಡ (ಸಂ) **ಪೂರ್ವೋಕ್ತ**, ಪು.೭೧

೧೦೫. ಸುಂದರಯ್ಯ ಪಿ, (ಮೂಲ), ಸುಜ್ಞಾನಮೂರ್ತಿ (ಅನು), ೨೦೧೩, **ತೆಲಂಗಾಣ ಹೋರಾಟ**, ಪಲ್ಲವ ಪ್ರಕಾಶನ ಚನ್ನಪಟ್ಟಣ, ಪು.೯೧

೧೦೬. ನಂದಮೋಹನ್ ರೆಡ್ಡಿ, **ಪೂರ್ವೋಕ್ತ**, ಪು.೯೧

೧೦೭. ಸುಂದರಯ್ಯ ಪಿ, (ಮೂಲ), ಸುಜ್ಞಾನಮೂರ್ತಿ ಬಿ (ಅನು), **ಪೂರ್ವೋಕ್ತ**, ಪು. ೮-೯

೧೦೮. ಗೋಪಾಲರಾವ್ ಹೇಜೀಬ್, **ಪೂರ್ವೋಕ್ತ**, ಪು.೨೯

೧೦೯. ನಂದಮೋಹನ್ ರೆಡ್ಡಿ (ಸಂ), **ಪೂರ್ವೋಕ್ತ**, ಪು.೯೨

೧೧೦. ಗೋಪಾಲರಾವ್ ಹೇಜೀಬ್, **ಪೂರ್ವೋಕ್ತ**, ಪು.೨೯

೧೧೧. ನಂದಮೋಹನ್ ರೆಡ್ಡಿ (ಸಂ), **ಪೂರ್ವೋಕ್ತ**, ಪು.೯೨

೧೧೨. ಲಾಜಾನ್, ೧೯೧೪, **ಮಾರ್ಡನ್ ಹೈದರಾಬಾದ್**, ಕಲ್ಕತ್ತಾ, ಪು.೨೩

೧೧೩. ಮುತ್ತಾಲೀಬ್ ಎಮ್.ಎ, ೧೯೮೮, **ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಅಂಡರ್ ದಿ ನಿಜಾಮ್, ೧೭೨೪-೧೯೪೮**, ಸ್ಟೇಟ್ ಆರಕೈವ್ಜ್, ಆಂಧ್ರಪ್ರದೇಶ, ಪು.೭

೧೧೪. ಅದೇ, ಪು.೧೮-೧೯

೧೧೫. ಬಿಲ್‌ಗ್ರಾಮಿ ಆ್ಯಂಡ್ ವಿಲ್‌ಮೊಂಟ್, ೧೮೮೬, **ಹೈದರಾಬಾದ್ ಅಂಡರ್ ಸಾಲಾರಜಂಗ್**, ಬಾಂಬೆ ಎಜುಕೇಶನ್, ಸೊಸೈಟಿ, ಪು.೩೧೩

೧೧೬. ಮುತ್ತಾಲಿಬ್ ಎಂ.ಎ, **ಪೂರ್ವೋಕ್ತ**, ಪು.೪೦

೧೧೭. ಬ್ರಿಗ್ಸ್ ಹೆನ್ರಿ ಜಾರ್ಜ್, ೧೮೬೧, ದಿ ನಿಜಾಮ್ ವಾಲ್ಯೂಮ್ ೨, ಲಂಡನ್, ಪು.೨೪೧

೧೧೮. ಮುತ್ತಾಲಿಬ್ ಎಂ.ಎ, **ಪೂರ್ವೋಕ್ತ**, ಪು.೪೬

೧೧೯. ಅದೇ, ಪು.೪೮-೫೦

೧೨೦. ಬಿಲ್‌ಗ್ರಾಮಿ ಆ್ಯಂಡ್ ವಿಲ್‌ಮೊಂಟ್, **ಪೂರ್ವೋಕ್ತ**, ಪು.೫೪

೧೨೧. ಮುತ್ತಾಲಿಬ್ ಎಂ.ಎ, **ಪೂರ್ವೋಕ್ತ**, ಪು.೧೧೦-೧೧೧

೧೨೨. ಅದೇ, ಪು.೧೧೩-೧೧೫

೧೨೩. ಚಿರಾಗ್ ಅಲಿ, ೧೮೮೬, **ಹೈದರಾಬಾದ್ ಅಂಡರ್ ಸಾಲಾರಜಂಗ್ ವಾಲ್ಯೂಮ್ ೩**, ಬಾಂಬೆ ಎಜುಕೇಷನ್ ಸೊಸೈಟಿ, ಪು.೮೧-೮೩

೧೨೪. ಮುತ್ತಾಲಿಬ್ ಎಂ.ಎ, **ಪೂರ್ವೋಕ್ತ**, ಪು.೧೫೫-೧೫೭

೧೨೫. ಅದೇ, ಪು.೧೬೧-೧೬೨

೧೨೬. ಹೈದರ್ ನವಾಜ್ ಜಂಗ್, ೧೯೨೫, **ಕಾನ್‌ಸ್ಟಿಟ್ಯೂಷನ್ ರೂಲ್ ಆಫ್ ಹೆಚ್.ಇ.ಹೆಚ್ ದಿ ನಿಜಾಂ-ಗೌರ್ನಮೆಂಟ್**, ಪು.೪೩-೪೪

೧೨೭. ಡೆಸೆನ್ನಿಯಲ್ ರಿಪೋರ್ಟ್, **ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಹೆಚ್.ಇ.ಹೆಚ್-ದಿ ನಿಜಾಮ್ ಡೊಮಿನಿಯನ್**, ೧೯೧೨-೧೯೨೨, ಪು.೬

೧೨೮. ಮುತ್ತಾಲಿಬ್ ಎಂ.ಎ, **ಪೂರ್ವೋಕ್ತ**, ಪು.೨೬೧-೨೬೨

೧೨೯. **ಜಾನ್ ಲಾ, ೧೯೧೪, ಹೈದರಾಬಾದ್**, ಕಲ್ಕತ್ತಾ, ಪು.೧೬

೧೩೦. **ರಿಪೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ದ ಹೆಚ್.ಇ.ಹೆಚ್-ದಿ ನಿಜಾಮ್ ಡೊಮಿನಿಯನ್**, ಪು.೯೨

೧೩೧. ಅದೇ, ಪು.೯೬-೯೮

೧೩೨. ಮುತ್ತಾಲಿಬ್ ಎಂ.ಎ, **ಪೂರ್ವೋಕ್ತ**, ಪು.೨೬೮

೧೩೩. ಪಾಟೀಲ್ ಎಂ.ಬಿ, ೧೯೯೭, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲಬರ್ಗಾ ಜಿಲ್ಲೆ**, ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, ಪು.೪೨೪

೧೩೪. ಮುತ್ತಾಲಿಬ್ ಎಂ.ಎ, **ಪೂರ್ವೋಕ್ತ**, ಪು.೩೩೨-೩೩೩

೧೩೫. ಅದೇ, ಪು.೨೭೮

೧೩೬. ಅನೀಸ್ ಸಿರಾಜ್ ಎಸ್, **ಪೂರ್ವೋಕ್ತ,** ಪು.೧೫೪-೧೫೫

೧೩೭. ಪಾಟೀಲ್ ಎಂ.ಬಿ, **ಪೂರ್ವೋಕ್ತ,** ಪು.೪೨೪

೧೩೮. ಮಜರ್ ಹುಸೇನ್, **ಪೂರ್ವೋಕ್ತ,** ಪು.೧೨೬-೧೨೭

೧೩೯. ರಘುನಾಥರಾವ್, ೧೯೮೯. **ಹಿಸ್ಟರಿ ಆಫ್ ಮಾಡರ್ನ್ ಆಂಧ್ರ, ಹೈದರಾಬಾದ್,** ಪು.೧೧೬

೧೪೦. ಅದೇ, ಪು.೧೧೯-೧೨೦

೧೪೧. **ಅವಲಾಂಚು ಪತ್ರಿಕೆ,** ೨೦೧೬

೧೪೨. ಪಾಟೀಲ್ ಎಂ.ಬಿ, **ಪೂರ್ವೋಕ್ತ,** ಪು.೪೦೬

೧೪೩. ಷೇಕ್ ಅಲಿ ಬಿ.(ಪ್ರ.ಸಂ), ಸೆಬಾಸ್ಟಿಯನ್ ಜೋಸೆಫ್ (ಸ.ಸಂ) **ಕರ್ನಾಟಕ ಚರಿತ್ರೆ ಸಂಪುಟ ೬,** ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು.೧೭೩

೧೪೪. ಅದೇ, ಪು.೧೭೨

೧೪೫. ಷೇಕ್ ಅಲಿ ಬಿ.(ಪು.ಸಂ), ಸೆಬಾಸ್ಟಿಯನ್ ಜೋಸೆಫ್, (ಸ.ಸಂ), **ಪೂರ್ವೋಕ್ತ,** ಪು.೧೭೨

೧೪೬. ಪಾಟೀಲ್ ಎಂ.ಬಿ., **ಪೂರ್ವೋಕ್ತ,** ಪು.೪೦೩

ಅಧ್ಯಾಯ: ಆರು

ಸಮಾಜ

೬.೧. ಸಾಮಾಜಿಕ ರಚನೆ

೬.೨. ಊಳಿಗಮಾನ್ಯತೆ ಹಾಗೂ ಸಾಮಾಜಿಕ ಸಂಬಂಧಗಳು

೬.೩. ಸಮುದಾಯಗಳು ಹಾಗೂ ಅನನ್ಯತೆ

೬.೪. ನಂಬಿಕೆ ಮತ್ತು ಆಚರಣೆ

೬.೫. ಶಿಕ್ಷಣ

೬.೬. ಭಾಷಿಕ ಯಜಮಾನಿಕೆ

೬.೭. ಮುಲ್ಕಿ ಮೀಸಲಾತಿ

ಅಧ್ಯಾಯ: ಆರು

ಸಮಾಜ

ಪೀಠಿಕೆ

ನಿಜಾಮ್ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದ ಚರಿತ್ರೆಯನ್ನು ಅಧ್ಯಯನ ಮಾಡುವಾಗ ಕಾಲಾವಧಿಯ ಪ್ರಶ್ನೆ ವಿಶಿಷ್ಟವಾಗಿ ಕಂಡುಬರುತ್ತದೆ. ಈ ಅವಧಿಯಲ್ಲಿ ಅತ್ಯಂತ ಸಂಕೀರ್ಣತೆಯಿಂದ ಕೂಡಿದ ರಚನೆಯ ಸಮಾಜವಾಗಿತ್ತು. ಸಮಾಜದಲ್ಲಿ ಹಿಂದೂ ಹಾಗೂ ಮುಸ್ಲಿಮರು ತಮ್ಮದೇ ಸಾಮಾಜಿಕ ವಿಕಾಸಗಳನ್ನು ಹೊಂದಿದ್ದ ವಿವಿಧ ಸ್ವರೂಪಗಳಲ್ಲಿದ್ದರು. ಸಮಾಜದ ವಿಭಿನ್ನ ಸ್ತರಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳುವ ಒಟ್ಟೊಟ್ಟಿಗೆ ಇರುವ ಹಾಗೂ ಪ್ರತ್ಯೇಕವಾಗಿ ನಿಲ್ಲುವ ಸೂಚನೆಗಳು ಕಂಡುಬಂದವು. ಸಮಾಜದ ವಿವಿಧ ಸ್ತರಗಳೆಂದರೆ ಜಾತಿ, ಕುಟುಂಬ ಮತ್ತು ಧರ್ಮದ ವಿಷಯಗಳನ್ನು ಆಧರಿಸಿ ನಿರ್ಮಾಣಗೊಂಡ ವ್ಯವಸ್ಥೆಗಳು; ಇವುಗಳ ಅಧ್ಯಯನ ಕೈಗೊಂಡಾಗ ಅಂದಿನ ಸಮಾಜ ಏಕರೂಪದ್ದಾಗಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಮೇಲೆ ಹೇಳಿದ ಪ್ರತಿಯೊಂದು ವ್ಯವಸ್ಥೆಯಲ್ಲಿ ಆಂತರಿಕ ಭಿನ್ನತೆ, ಬಿಕ್ಕಟ್ಟುಗಳು ಕಾಣಿಸಿಕೊಂಡು ಸಾಮಾಜಿಕ ರಚನೆ ಭಿನ್ನ ಸ್ವರೂಪವನ್ನು ಪಡೆದುಕೊಳ್ಳಲಾರಂಭಿಸಿತು. ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಅಂಗೀಕೃತ ಅಂತರಗಳು ಏರ್ಪಟ್ಟವು. ನೂತನವಾಗಿ ಉದಯಿಸಿದ ಸಾಮಾಜಿಕ ವ್ಯವಸ್ಥೆ ಒಟ್ಟು ಸಮಾಜದ ಮೇಲೆ ತನ್ನ ಮುದ್ರೆಯನ್ನು ಒತ್ತಿ ಸಾಮಾಜಿಕ ಹಿಡಿತವನ್ನು ಸಾಧಿಸುವಲ್ಲಿ ಯಶಸ್ವಿಯಾಯಿತು. ಈ ರೀತಿಯಾಗಿ ರೂಪುಗೊಂಡ ಸಾಮಾಜಿಕ ರಚನೆ ಅನೇಕ ರೀತಿಯ ಪ್ರತಿಕ್ರಿಯೆಗಳನ್ನು ಎದುರಿಸ ಬೇಕಾಗಿಬಂತು. ಆದರೆ ಈ ಪ್ರತಿಕ್ರಿಯೆಗಳು ಶಾಶ್ವತ ಪರಿಣಾಮವನ್ನು ನೀಡುವಲ್ಲಿ ಎಡವಿ ಸಾಮಾಜಿಕ ಗೊಂದಲವನ್ನಷ್ಟೇ ಹುಟ್ಟುಹಾಕಿದವು. ಈ ಗೊಂದಲಗಳು ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಇನ್ನಷ್ಟು ಬಿಗಿಗೊಳಿಸಿದವು. ಹೀಗೆ ಸಮಾಜದ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿರುವ ಅಂಶಗಳನ್ನು ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ.

೬.೧ ಸಾಮಾಜಿಕ ರಚನೆ

ನಿಜಾಮರ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಮಾಜಿಕ ರಚನೆಯು ಅತ್ಯಂತ ಸಂಕೀರ್ಣತೆಯಿಂದ ಕೂಡಿತ್ತು. ಈ ಪ್ರದೇಶ ಪ್ರಾಚೀನ ಕಾಲದಿಂದಲೂ ಸಮಾಜದಲ್ಲಿ ವರ್ಗ, ವರ್ಣ ಮತ್ತು ಜಾತಿ ಎಂಬ ಅಂಶಗಳ ಆಧಾರದ ಮೇಲೆ ವಿಭಜನೆಗೊಂಡಿರುವುದನ್ನು ಗಮನಿಸಬಹುದು. ಆರಂಭದಲ್ಲಿ ವೃತ್ತಿ ಆಧಾರದ ಮೇಲೆ ವರ್ಗಗಳು ಹುಟ್ಟಿಕೊಂಡಿತು, ನಂತರ ವರ್ಣ ವ್ಯವಸ್ಥೆಗೆ ಪರಿವರ್ತನೆಗೊಂಡು ಜಾತಿ ವ್ಯವಸ್ಥೆಯಾಗಿ ಪರಿವರ್ತನೆ ಹೊಂದಿತು. ಹೀಗೆ ರಚನೆಯಾದ ಸಮಾಜವನ್ನು ಪುರೋಹಿತಶಾಹಿ ವರ್ಗ ತನ್ನ ಏಳಿಗೆಗಾಗಿ ಜಾತಿ ವ್ಯವಸ್ಥೆಯಡಿಯಲ್ಲಿ ಬಿಗಿಗೊಳಿಸಿತು. ಇದರಿಂದಾಗಿ ಜಾತಿಗಳಲ್ಲಿ ಮೇಲು-ಕೀಳು ಎಂಬ ಭಾವನೆ ಸೃಷ್ಟಿಯಾಯಿತು. ಮೇಲ್ವರ್ಗದಲ್ಲಿದ್ದ ಪುರೋಹಿತಶಾಹಿ ವರ್ಗ ಇತರ ವರ್ಗಗಳ ಮೇಲೆ ಧಾರ್ಮಿಕ ಆಚರಣೆಗಳ ಮೂಲಕ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿತು. ಈ ಮೂಲಕ ವೈದಿಕ ಸಮಾಜ ಉನ್ನತ ಸ್ಥಾನವನ್ನು ಪಡೆದುಕೊಂಡಿತು. ಹೈದರಾಬಾದ್ ಕರ್ನಾಟಕದ ಸಾಮಾಜಿಕ ರಚನೆಯ ಇದರಿಂದ ಹೊರತಾಗಿಲ್ಲ. ಸಾಮಾಜಿಕ ನಿರ್ಧಾರಕ ಅಂಶಗಳಾದ ಜಾತಿ, ಕುಟುಂಬ ಮತ್ತು ಶಿಕ್ಷಣ-ಈ ವ್ಯವಸ್ಥೆಗಳು ಸಾಮಾಜಿಕ ನಿರ್ಧಾರಿತ ಅಂಶಗಳಾಗಿದ್ದವು. ಇವು ಸಮಾಜದಲ್ಲಿ ವಹಿಸಿದ್ದ ಪಾತ್ರ ಹಾಗೂ ಅದರ ಪರಿಣಾಮಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

೬.೧.೧. ಶ್ರೇಣೀಕೃತ ಸಮಾಜ

ಜಾತಿ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೂ ಜಾರಿಯಲ್ಲಿದ್ದು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಜನರನ್ನು ಜಾತಿ ಎಂಬ ಮೂಢಚಾರದ ಬಲೆಯಲ್ಲಿ ಸಿಲುಕಿಸಿ ಗುಲಾಮರನ್ನಾಗಿ ಮಾಡುವ ವ್ಯವಸ್ಥೆಯೇ ಜಾತಿಪದ್ಧತಿ,[೧] ಆರಂಭದ ಹಂತದಲ್ಲಿ ವೃತ್ತಿ ಆಧರಿಸಿ ನಿರ್ಮಾಣಗೊಂಡ ಸಮಾಜ ಕ್ರಮೇಣ ವರ್ಣ ವ್ಯವಸ್ಥೆಗೆ ಪರಿವರ್ತನೆಗೊಂಡು ಜಾತಿ ವ್ಯವಸ್ಥೆಯಾಗಿ ರೂಪುಗೊಂಡಿತು. ಜಾತಿಗಳಲ್ಲಿ ಶ್ರೇಷ್ಠವೆಂದು ಕರೆಸಿಕೊಂಡ ಬ್ರಾಹ್ಮಣರು ತಮ್ಮ ಪುರೋಹಿತ ಕಾರ್ಯಚಟುವಟಿಕೆಗಳ ಮೂಲಕ ಜಾತಿ ವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳುತ್ತಿದ್ದರಲ್ಲದೆ ಜಾತಿ ರಕ್ಷಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಅಷ್ಟೇ ಅಲ್ಲದೆ ಜಾತಿಯನ್ನು ಧರ್ಮದ ಜೊತೆಗೆ ಬೆಸುಗೆಗೊಳಿಸಿ ಬ್ರಾಹ್ಮಣರು ಜಾತಿ ವ್ಯವಸ್ಥೆಯನ್ನು ಬ್ರಾಹ್ಮಣತ್ವದಿಂದ ಬೇರ್ಪಡಿಸಲು ಸಾಧ್ಯವಿಲ್ಲದ ಹಾಗೇ ರೂಪಿಸಿದರು. ಸಮಾಜದ ಇತರ ಜಾತಿಗಳ ಮೇಲೆ ಯಜಮಾನಿಕೆಯನ್ನು ಸ್ಥಾಪಿಸಿದರು.[೨]

ನಿಜಾಮರ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಮಾಜಿಕ ರಚನೆಯನ್ನು ಅಧ್ಯಯನ ಮಾಡುವಾಗ ಜಾತಿ ಪದ್ಧತಿಯು ಪ್ರಬಲ ರಚನೆಯಾಗಿ ಕಂಡುಬರುತ್ತದೆ. ಈ ಪ್ರದೇಶದಲ್ಲಿನ ಹಿಂದೂ ಮುಸ್ಲಿಮ್ ಧರ್ಮೀಯರು ಸೌಹಾರ್ದಯುತವಾದ ಜೀವನ ನಡೆಸುತ್ತಿದ್ದರು. ಜಾತಿ

ಶ್ರೇಣೀಕೃತ ವ್ಯವಸ್ಥೆ ಹಿಂದೂ ಧರ್ಮೀಯರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹಿಂದೂ ಧರ್ಮದ ಪುರೋಹಿತಶಾಹಿ ವರ್ಗ ಈ ಜಾತಿವ್ಯವಸ್ಥೆಯನ್ನು ಹುಟ್ಟುಹಾಕಿ ಸರ್ವ ವ್ಯಾಪ್ತಿಗೊಳಿಸುವ ಕಾರ್ಯದಲ್ಲಿ ಪ್ರಧಾನ ಪಾತ್ರವಹಿಸಿತು. ಪ್ರಾಚೀನ ಕಾಲದಿಂದಲೂ ನಿಜಾಮರ ಆಡಳಿತದ ಕಾಲಾವಧಿ ಗಷ್ಟೇ ಅಲ್ಲದೆ ಇವತ್ತಿನವರೆಗೂ ವ್ಯಾಪಿಸಿರುವುದು ಗಮನಿಸಬಹುದಾಗಿದೆ. ಜಾತಿ ವ್ಯವಸ್ಥೆಯ ಸ್ವರೂಪದಲ್ಲಿ ಬದಲಾವಣೆಗಳಾದರೂ ಅವುಗಳ ನಿಲುವುಗಳಲ್ಲಿ ಬದಲಾವಣೆಗಳಾಗಿಲ್ಲ. ಜಾತಿ ವ್ಯವಸ್ಥೆಯ ಬೇರುಗಳು ಅಂದಿನಿಂದ ಇಂದಿನವರೆಗೂ ವಿಸ್ತಾರವಾಗಿ ಪಸರಿಸಿಕೊಂಡೇ ಬಂದಿವೆ. ಇದಕ್ಕೆ ಪ್ರತಿಯೊಂದು ಸಂದರ್ಭದಲ್ಲಿ ಗೊಬ್ಬರ ಹಾಕಿ ಬೆಳೆಸುವ ವರ್ಗ ಹುಟ್ಟಿಕೊಂಡಿರುವುದು ಚರಿತ್ರೆಯಿಂದ ತಿಳಿದು ಬರುತ್ತದೆ.[೩]

ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವರ್ಣ ವ್ಯವಸ್ಥೆಗಿಂತ ಜಾತಿ ವ್ಯವಸ್ಥೆಯೇ ಪ್ರಮುಖವಾಗಿತ್ತೆಂಬುದು ಸ್ಪಷ್ಟ. ಸಮಾಜದಲ್ಲಿ ಬ್ರಾಹ್ಮಣರು ಜಾತಿಗಳಲ್ಲಿಯೇ ಶ್ರೇಷ್ಠ ಎಂಬುದಾಗಿ ಸಾರ್ವತ್ರಿಕವಾಗಿ ಒಪ್ಪಿತವಾಗಿದ್ದಿತು. ಇನ್ನುಳಿದ ಜಾತಿಗಳು ಶ್ರೇಣೀಕೃತವಾಗಿ ಒಂದರ ಕೆಳಗೆ ಒಂದು ತಮ್ಮ ಸ್ಥಾನವನ್ನು ಪಡೆದುಕೊಂಡಿರುವುದು ಕಂಡುಬರುತ್ತವೆ. ಕೊನೆಯ ಸಾಲಿನಲ್ಲಿ ನಿಲ್ಲುವುದೇ ಹೊಲೆಯ ಮಾದಿಗರು. ಈ ಜಾತಿಗಳು ಮೇಲ್ವರ್ಗದವರ ಸೇವೆಯನ್ನು ಮಾಡುವುದು ಇದರ ಶ್ರೇಷ್ಠತೆ–ಇದರಲ್ಲಿ ಇವರು ಶ್ರೇಷ್ಠತೆಯನ್ನು ಕಂಡುಕೊಳ್ಳುತ್ತಾರೆಂದು ವಾದಿಸಲಾಗು ತ್ತದೆ. ಈ ಅಸ್ಪೃಶ್ಯ ಸಮುದಾಯಗಳು ಸಮಾಜದಿಂದ ಬಹಿಷ್ಕೃತಗೊಂಡವರಂತೆ ಜೀವಿಸಬೇಕಾಯಿತು. ಅವರು ಹಳ್ಳಿ ಮತ್ತು ಪಟ್ಟಣ ಪ್ರದೇಶಗಳ ಹೊರವಲಯಗಳಲ್ಲಿ ಮೇಲ್ಜಾತಿಗಳಿಂದ ಪ್ರತ್ಯೇಕವಾಗಿ ವಾಸಮಾಡುವ ಒತ್ತಾಯಕ್ಕೊಳಗಾಗಿದ್ದರೂ ಇವರ ವೃತ್ತಿಗಳನ್ನು ಮೇಲ್ವರ್ಗಗಳೇ ನಿರ್ಧರಿಸುತ್ತಿದ್ದವು. ಅವು ಊರ ಕಸಗುಡಿಸುವುದು, ಸತ್ತ ದನವನ್ನು ಹೊತ್ತು ಸಾಗಿಸುವುದು, ಸ್ಮಶಾನದಲ್ಲಿ ಗುಂಡಿ ತೋಡುವುದು ಮುಂತಾದ ಕೆಲಸಗಳಾಗಿದ್ದವು. ಇಂಥ ಕೆಲಸವನ್ನು ಮಾಡಿಸುವುದಕ್ಕಾಗಿಯೇ ಪ್ರಾಚೀನ ಕಾಲದಿಂದಲೂ ಮಾನವರಲ್ಲಿಯೇ ಅಸ್ಪೃಶ್ಯರೆನ್ನುವ ವರ್ಗವೊಂದನ್ನು ಹುಟ್ಟುಹಾಕಿ, ಅವರನ್ನು ತೀರ ನಿಕೃಷ್ಟವಾಗಿ ನೋಡಿಕೊಳ್ಳಲಾಗುತ್ತಿತ್ತು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪುರೋಹಿತಶಾಹಿ ವರ್ಗವು ಇತರ ಜಾತಿಗಳ ಮೇಲೆ ಯಜಮಾನಿಕೆಯನ್ನು ಮಾಡುತ್ತಾ ನಂಬಿಕೆ ಮತ್ತು ಆಚರಣೆ ಎಂಬ ಅಂಶಗಳ ಮೂಲಕ ಅವುಗಳನ್ನು ನಿಯಂತ್ರಿಸುತ್ತಿತ್ತು. ಇದರಿಂದಾಗಿ ನಿಜಾಮ್ ಪ್ರಭುತ್ವವು ಕೂಡ ಪುರೋಹಿತಶಾಹಿ ಮತ್ತು ಇತರ ಶ್ರೀಮಂತ ಮೇಲ್ವರ್ಗದ ಸಮುದಾಯಗಳನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಪ್ರಭುತ್ವವನ್ನು ವಿಸ್ತರಿಸಿಕೊಂಡಿತು. ನಿಜಾಮರು ಕೂಡ ಸಮಾಜದಲ್ಲಿ ಈಗಾಗಲೇ ಜಾರಿಗೆಯಲ್ಲಿದ್ದ ಜಾತಿ ಪದ್ಧತಿಯನ್ನು ಯಥಾ ಪ್ರಕಾರವಾಗಿ ಮುಂದುವರೆಯುವಂತೆ ನೋಡಿಕೊಂಡರು. ಈ ಪ್ರದೇಶದಲ್ಲಿ

ಅತಿಯಾದ ಜಾತಿ ವ್ಯವಸ್ಥೆಯನ್ನು ಸರಿಮಾಡುವುದಕ್ಕೆ ಹೋಗದೆ, ಪ್ರಬಲ ಜಾತಿಗಳ ಸಹಕಾರ ಮತ್ತು ಬೆಂಬಲವನ್ನು ಪಡೆದುಕೊಂಡು ಅವರ ಮೂಲಕ ಇತರ ಕೆಳವರ್ಗದ ಸಮುದಾಯಗಳನ್ನು ನಿಯಂತ್ರಿಸುತ್ತಿತ್ತು. ಅಷ್ಟೇ ಅಲ್ಲದೇ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ಪ್ರಬಲ ಸಮುದಾಯಗಳಾದ ಬ್ರಾಹ್ಮಣ, ಲಿಂಗಾಯತ ಮತ್ತು ಒಕ್ಕಲಿಗ ಮುಂತಾದ ಜಾತಿಯವರನ್ನು ಪ್ರಭುತ್ವದ ಭಾಗವಾಗಿಸಿ ಅವರನ್ನು ಸ್ಥಳೀಯ ಆಡಳಿತ ಅಧಿಕಾರಿಗಳನ್ನಾಗಿ ನೇಮಿಸಲಾಯಿತು. ಅದಕ್ಕೆ ಪ್ರತಿಫಲವಾಗಿ ಜಹಾಗೀರ ಮತ್ತು ಇನಾಮ್ ಭೂಮಿಯನ್ನು ನೀಡಲಾಯಿತು. ಹೀಗೆ ನಿಜಾಮ್ ಪ್ರಭುತ್ವದಿಂದ ಭೂ ಒಡೆತನ ಪಡೆದುಕೊಂಡವರು ಜಹಾಗೀರ ಭೂಮಿಯ ಒಡೆಯರಾಗಿ ಜಹಗೀರದಾರರಾಗಿ ಮತ್ತು ಭೂಮಾಲೀಕರಾಗಿ ಗುರುತಿಸಿಕೊಂಡರು. ಈ ಪ್ರದೇಶದಲ್ಲಿದ್ದ ಜಾತಿವ್ಯವಸ್ಥೆಯ ಪ್ರಯೋಜನ ಪಡೆದ ನಿಜಾಮ್ ಪ್ರಭುತ್ವ ತಮ್ಮ ಆಡಳಿತದ ಅನುಕೂಲಕ್ಕಾಗಿ ಬಳಸಿಕೊಂಡಿರುವುದನ್ನು ಗಮನಿಸಬಹುದು. ನಿಜಾಮ್ ಸಂಸ್ಥಾನದಲ್ಲಿ ಜಮೀನ್ದಾರರು ಹಾಗೂ ಸ್ಥಳಿಯ ಅಧಿಕಾರಿಗಳು ಹೆಚ್ಚಾಗಿ ಮೇಲುಜಾತಿಗಳಿಗೆ ಸಂಬಂಧಿಸಿದವರೇ ಆಗಿದ್ದರು. ಅವರು ಪ್ರಭುತ್ವ ನೀಡಿದ ಅಧಿಕಾರವನ್ನು ಬಳಸಿಕೊಂಡು ಇತರ ಕೆಳವರ್ಗದ ಜಾತಿಗಳ ಮೇಲೆ ಯಜಮಾನಿಕೆಯನ್ನು ಸ್ಥಾಪಿಸಿದರು.[೪]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಿಂದೂ ಧರ್ಮೀಯರಂತೆ ವಾಸವಾಗಿದ್ದ ಮುಸ್ಲಿಮರಲ್ಲಿ ಈ ಮೇಲೆ ಚರ್ಚಿಸಿದಂತೆ ಜಾತಿ ಎಂಬ ಕಟ್ಟಳೆಗಳಿಂದ ಹೊರತಾಗಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿ ಬಹುತೇಕ ಮುಸ್ಲಿಮ್ ಸಮುದಾಯಗಳು ಜಾತಿಯನ್ನು ಆಚರಣೆ ಮಾಡದಿರುವುದು ಕಂಡುಬರುತ್ತದೆ. ಆದರೆ ಇವರಲ್ಲಿ ಪಂಗಡಗಳಿದ್ದುದು ಗಮನಿಸಬಹುದಾಗಿದೆ. ಈ ಪಂಗಡಗಳಲ್ಲಿ ಸೈಯ್ಯದ್ ಪಂಗಡದವರು ಶ್ರೇಷ್ಠರೆಂದು ಬಿಂಬಿಸಿದರೆ, ಫಕೀರ್ ಪಂಗಡ ಮುಸ್ಲಿಮ್ ಸಮುದಾಯಗಳಲ್ಲಿ ಕೆಳಹಂತದ ಸಮುದಾಯವೆಂದು ಪರಿಗಣಿಸಲಾಗುತ್ತದೆ.[೫]

೬.೧.೨. ಕೌಟುಂಬಿಕ ರಚನೆ

ಸಾಮಾಜಿಕ ರಚನೆಯಲ್ಲಿ ಕುಟುಂಬ ಒಂದು ಪ್ರಮುಖ ಘಟಕ. ಕುಟುಂಬದ ರಚನೆ ಅಪಾರ ವೈವಿಧ್ಯವನ್ನು ಹೊಂದಿದ್ದು ಯಾವುದೇ ಸರಳೀಕೃತ ವ್ಯಾಖ್ಯಾನದಿಂದ ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕುಟುಂಬದ ಯಜಮಾನಿಕೆ, ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳು, ಮಹಿಳೆಯರ ಸ್ಥಾನ, ವಿವಾಹ ಪದ್ಧತಿ ಮುಂತಾದ ಸಾಮಾನ್ಯ ಅರ್ಥದಲ್ಲಿ ಕುಟುಂಬವನ್ನು ಅರ್ಥೈಸಿಕೊಳ್ಳಬಹುದು. ಅದು ಖಾಯಂ ಆದ ಮತ್ತು ವ್ಯಾಪಕವಾದ ಸಾರ್ವತ್ರಿಕವಾದ ವ್ಯವಸ್ಥೆ. ಸಾಮಾಜಿಕವಾಗಿ ಅಂಗೀಕೃತವಾದ ಲೈಂಗಿಕ ಸಂಪರ್ಕ, ಸಂತಾನಕ್ರಿಯೆ ಸಮಾನ ವಸತಿ, ಕೌಟುಂಬಿಕ ಕಾರ್ಯಗಳು, ಆರ್ಥಿಕ ಸಹಕಾರ ಈ ಮುಂತಾದ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಕುಟುಂಬ ವ್ಯವಸ್ಥೆಗೆ ಬಹುಮಟ್ಟಿಗೆ ಸಾಂಪ್ರದಾಯಿಕ ವಿಧಗಳನ್ನು ಆಧರಿಸಿತ್ತು ಎಂದು

ತಿಳಿದುಬರುತ್ತದೆ. ಇಲ್ಲಿ ಪಿತೃ ಪ್ರಧಾನ ವ್ಯವಸ್ಥೆ, ಬಹು ಪತ್ನಿತ್ವ ಮುಂತಾದವು ಸಮಾಜದ ಪ್ರಧಾನ ಲಕ್ಷಣಗಳಾಗಿದ್ದವು.[೬]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಗರಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಅವಿಭಕ್ತ ಕುಟುಂಬಗಳು ಇರುವುದು ಸಾಮಾನ್ಯ. ಇತ್ತೀಚೆಗೆ ಜೀವನ ಶೈಲಿಯಲ್ಲಿನ ಬದಲಾವಣೆಯಿಂದಾಗಿ ಹಾಗೂ ಆರ್ಥಿಕ ಪರಿಸ್ಥಿತಿಯಲ್ಲಿನ ಪರಿವರ್ತನೆಯಿಂದಾಗಿ ಅವಿಭಕ್ತ ಕುಟುಂಬ ಪದ್ಧತಿ ಕ್ರಮೇಣ ನಶಿಸುವುದರಲ್ಲಿದೆ. ಪ್ರಾಚೀನ ಕಾಲದಿಂದಲೂ ಈ ಪದ್ಧತಿ ಬೇಸಾಯದ ಪದ್ಧತಿಯಿಂದಾಗಿ ರೂಢಿಯಲ್ಲಿತ್ತು. ಆದರೆ ಇಂದು ಈ ಪದ್ಧತಿ ಶಿಥಿಲಗೊಂಡು ರೂಪಾಂತರ ಹೊಂದಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿದ್ದ ಜಹಾಗೀರ ಮತ್ತು ಇನಾಮ್‌ಗಳು ನಿರ್ಮೂಲನೆಗೊಂಡು ದೊಡ್ಡ ಜಮೀನುಗಳು ತುಂಡರಿಸಿದ್ದರಿಂದ ಅವಿಭಕ್ತ ಕುಟುಂಬಗಳು ಚಿಕ್ಕ ಚಿಕ್ಕ ಕುಟುಂಬಗಳಾಗಿ ಪರಿವರ್ತನೆ ಹೊಂದುತ್ತಿವೆ.[೭]

ಈ ಪ್ರದೇಶದಲ್ಲಿನ ಹಿಂದೂ ಮತ್ತು ಮುಸ್ಲಿಮ್ ಸಮುದಾಯಗಳಲ್ಲಿನ ಕುಟುಂಬಕ್ಕೆ ಸಂಬಂಧಿಸಿದ ಆಚರಣೆ ಮತ್ತು ವಿಧಿ ವಿಧಾನಗಳನ್ನು ನೋಡಿದಾಗ ಅರಬ್ಬ ಮತ್ತು ಇತರೆ ಪ್ರದೇಶಗಳಿಂದ ಬಂದ ಮುಸ್ಲಿಮ್ ಸಮುದಾಯ ಆರಂಭದಲ್ಲಿ ಅಲ್ಪಸಂಖ್ಯಾತರಾಗಿದ್ದರು. ಇವರು ಹೆಚ್ಚಾಗಿ ಹಿಂದೂ ಧರ್ಮೀಯರ ಜೊತೆಗಿನ ಸಾಮಾಜಿಕ ಒಡನಾಟದಿಂದಾಗಿ ಅವರ ಕೌಟುಂಬಿಕ ಆಚರಣೆಗಳು ಇವರ ಮೇಲೆ ಪ್ರಭಾವ ಬೀರಿರುವುದನ್ನು ಗಮನಿಸಬಹುದಾಗಿದೆ. ಮುಸ್ಲಿಮರ ತಮ್ಮ ಧರ್ಮವಾದ ಇಸ್ಲಾಂ ತತ್ವಕ್ಕೆ ಅನುಗುಣವಾಗಿ ಕುಟುಂಬಗಳನ್ನು ರಚಿಸಿಕೊಂಡಿರುತ್ತಿದ್ದರು.[೮]

ಹಿಂದೂಗಳಲ್ಲಿ ಪಿತೃ ಪ್ರಧಾನ ಕುಟುಂಬ ಕಂಡುಬರುತ್ತದೆ. ಕೆಲವು ಸಂದರ್ಭದಲ್ಲಿ ಪಿತೃವಿನ ಮರಣದ ನಂತರ ಮನೆಯ ಹಿರಿಯರಾದ ಮಾತೃವು ಇತರ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದು ಕಂಡುಬರುತ್ತದೆ. ಕುಟುಂಬದ ಆರ್ಥಿಕತೆಯು ಮತ್ತು ಸಾಮಾಜಿಕ ವಿಚಾರಗಳಲ್ಲಿ ಮನೆಯ ಯಜಮಾನನ ತೀರ್ಮಾನವೇ ಅಂತಿಮವಾಗಿರುತ್ತಿತ್ತು. ಪುರುಷ ಪ್ರಧಾನವಾದ ಸಮಾಜ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವ್ಯಾಪಕವಾಗಿರುವುದನ್ನು ಗಮನಿಸಬಹುದು. ಇಲ್ಲಿ ಸ್ತ್ರೀ ಪುರುಷನ ಆಧೀನದಲ್ಲಿ ಇರಬೇಕಾಯಿತು. ವಾರಸುದಾರಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ವೀರಶೈವ ಸಮುದಾಯಗಳಲ್ಲಿ ಅಳಿಯನನ್ನು ಕುಟುಂಬದೊಳಕ್ಕೆ ಸೇರಿಸಿಕೊಳ್ಳುವ ಪದ್ಧತಿ ಕಂಡುಬರುತ್ತದೆ. ಹಾಗೇ ಪರಿಶಿಷ್ಟ ಜಾತಿಗಳಲ್ಲಿ ಮನೆ ಅಳಿಯನು ತನ್ನ ಮಾವನ ಆಸ್ತಿಯಲ್ಲಿ ತನ್ನ ಭಾವ-ಮೈದುನರಿಗೆ ಸಮಾನವಾಗಿ ಪಾಲನ್ನು ಪಡೆಯುತ್ತಾನೆ. ಈ ತರಹ ಕೆಲವು ಸಮುದಾಯಗಳಲ್ಲಿ ಪದ್ಧತಿ ಜಾರಿಗೆ ಇರುವುದು ಕಂಡುಬರುತ್ತದೆ.[೯]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ಕುಟುಂಬದ ಒಂದು ಭಾಗವಾಗಿದ್ದ ವಿವಾಹ ಮತ್ತು ಮಹಿಳೆಯರ ಸ್ಥಾನಮಾನವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೧. **ವಿವಾಹ:** ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಮಾಜಿಕ ಸ್ಥಿತಿಗಳಲ್ಲಿ ವಿವಾಹ ಸಂಬಂಧಗಳನ್ನು ಆಸಕ್ತಿದಾಯಕವಾಗಿ ಗಮನಿಸಬಹುದು. ವಿವಾಹ ಸಂಬಂಧಗಳಿಗೆ ಸಂಬಂಧಿಸಿದಂತೆ ವಿವಿಧ ಜಾತಿ ಸಮುದಾಯಗಳಲ್ಲಿ ಅನೇಕ ಮಿತಿಗಳಿವೆ. ಬಹುಸಂಖ್ಯಾತ ಜಾತಿ ಸಮುದಾಯಗಳಲ್ಲಿ ವಧುವಿನ ಸೋದರಮಾವನೊಂದಿಗೆ ಮದುವೆ ಮಾಡಬಹುದು. ತಮ್ಮ ಜಾತಿಗಳಲ್ಲಿಯೇ ಮದುವೆಗಳನ್ನು ಏರ್ಪಡಿಸಿಕೊಳ್ಳಬಹುದು. ಅಕ್ಕನ ಮಗಳನ್ನು ಅಥವಾ ಅಕ್ಕನ ಸಮಾನವಾದಂಥವರ ಮಕ್ಕಳನ್ನು ಮದುವೆ ಮಾಡಿಕೊಳ್ಳುವ ಪದ್ಧತಿ ವ್ಯಾಪಕವಾಗಿ ರೂಢಿಯಲ್ಲಿತ್ತು. ಲಿಂಗಾಯಿತರಲ್ಲಿ, ಮರಾಠಿಗರಲ್ಲಿ ತಮ್ಮ ಕುಲಗೋತ್ರಗಳಲ್ಲಿಯೇ ಮದುವೆಯಾಗುವ ಸಂಪ್ರದಾಯವಿದೆ. ಸಾಂಪ್ರದಾಯಿಕವಾಗಿ ಅನೇಕ ಜಾತಿಗಳಲ್ಲಿ ಬಾಲ್ಯ ವಿವಾಹಗಳು ಜಾರಿಯಲ್ಲಿದ್ದವು. ಬಾಲ್ಯ ವಿವಾಹಗಳು ಹೆಚ್ಚಾಗಿ ಕೆಳವರ್ಗದಲ್ಲಿದ್ದು ಈ ಜನರಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡುವುದು ಕಂಡುಬರುತ್ತದೆ.

ಸಾಮಾನ್ಯವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮದುವೆ ಸಮಾರಂಭಗಳು ಬಹುದಿನಗಳ ಕಾರ್ಯಕ್ರಮಗಳಾಗಿದ್ದವು. ಮದುವೆ ವಿಧಿವಿಧಾನವಾಗಿ ಎರಡು ಮೂರು ದಿನಗಳವರೆಗೆ ನಡೆಯುತ್ತಿದ್ದವು. ಮದುವೆ ಹೆಚ್ಚಾಗಿ ವಧುವಿನ ಮನೆಯಲ್ಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ದೇವಸ್ಥಾನ ಮತ್ತು ಮಠಗಳಲ್ಲಿ ನಡೆಯುತ್ತಿದ್ದವು. ವಿಧವೆಯ ಮರುವಿವಾಹಗಳು ಅಥವಾ ಎರಡನೆಯ ಮದುವೆ ನಡೆಯುವುದು ಹಿಂದೂ ಸಂಪ್ರದಾಯ ಪ್ರಕಾರ ಕಷ್ಟಕರವಾಗಿತ್ತು. ಮರುಮದುವೆಗಳು ಕೆಳವರ್ಗದ ಜಾತಿಗಳಲ್ಲಿ ಸರಳವಾಗಿ ನಡೆಯುತ್ತಿದ್ದವು. ಅದಕ್ಕೆ ಕೂಡಿಕೆ ಕುಡಿಕೆ ಎಂದು ಕರೆಯುತ್ತಿದ್ದರು. ಇಂತಹ ಮದುವೆಯ ಕಾರ್ಯದಲ್ಲಿ ವಿಧವೆಯರು ಮಾತ್ರ ಭಾಗವಹಿಸುತ್ತಿದ್ದರು. ಚಿಕ್ಕ ವಯಸ್ಸಿನ ಮಕ್ಕಳು ಹಾಗೂ ಮದುವೆಯಾಗದ ತರುಣ, ತರುಣಿಯರು ಭಾಗವಹಿಸುವುದಕ್ಕೆ ನಿರ್ಬಂಧವಿತ್ತು. ಹೀಗೆ ವಿಧವೆಯರು ಸಮಾಜದಲ್ಲಿ ಕೆಳಮಟ್ಟದ ಜೀವನವನ್ನು ಸಾಗಿಸುತ್ತಿದ್ದರು.[೧೦]

ನಿಜಾಮ್ ಸರ್ಕಾರ ಸಂಸ್ಥಾನದಲ್ಲಿದ್ದ ವಿಧವೆಯರ ಸ್ಥಿತಿಯನ್ನು ಮನಗಂಡು ಅವರಿಗೆ ಪುನರ್‌ವಿವಾಹವಾಗಲು ೧೯೩೮ರಲ್ಲಿ ಹಿಂದೂ ಪುನರ್‌ವಿವಾಹ ಕಾಯದೆ ಜಾರಿಗೆ ತಂದಿತು. ಈಗಾಗಲೇ ಬ್ರಿಟಿಶರು ವಸಾಹತು ಭಾರತದಲ್ಲಿ ಕಾರ್ಯರೂಪದಲ್ಲಿದ್ದ ಈ ವಿಧವೆಯರ ಶೋಷಣೆಯನ್ನು ಮನಗಂಡು ಅವರಿಗೆ ಮರುವಿವಾಹವಾಗಲು ಕಾನೂನು ಸಮ್ಮತಿಸುವ ರೀತಿಯಲ್ಲಿ ಕಾಯಿದೆ ಜಾರಿಗೆ ತಂದರು. ವಿಧವೆ ಆಚರಣೆಯನ್ನು ಕಾರ್ಯಗತ ಮಾಡುವವರ ವಿರುದ್ಧ ಕಠಿಣ ಕ್ರಮಕ್ಕೆ ಈ ಕಾಯಿದೆಯಲ್ಲಿ ಅವಕಾಶ ಕಲ್ಪಿಸಿತ್ತು. ನಿಜಾಮರು ಬ್ರಿಟಿಶರು ಜಾರಿಗೆ ತಂದ ಮಾದರಿಯಲ್ಲಿ ಹೈದರಾಬಾದ್ ಸಂಸ್ಥಾನದಲ್ಲಿ ಕಾರ್ಯರೂಪಕ್ಕೆ ತಂದರು. ಈ ಪ್ರದೇಶದಲ್ಲಿದ್ದ ಮುಸ್ಲಿಮ್ ಸಮುದಾಯಗಳಲ್ಲಿ ಸಾಮಾನ್ಯವಾಗಿ ವಿಧವಾ ಮರುವಿವಾಹ ಜಾರಿಯಲ್ಲಿತ್ತು. ವಿಧವೆ ಮರಣ ಹೊಂದಿದ ತನ್ನ ಗಂಡನ ಸಹೋದರನನ್ನೋ ಅಥವಾ ಬಂಧುವನ್ನೋ ಮದುವೆ ಮಾಡಿಕೊಳ್ಳಬಹುದಾಗಿತ್ತು.

ಹೀಗೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಿಂದೂ ಮತ್ತು ಮುಸ್ಲಿಮ್ ಧರ್ಮೀಯರಲ್ಲಿ ಮದುವೆಗಳು ತುಂಬಾ ಸರಳ ರೀತಿಯಲ್ಲಿ ನಡೆಯುತ್ತಿದ್ದವು. ಹಿಂದೂ ಧರ್ಮದ ಸಂಪ್ರದಾಯದ ಪ್ರಕಾರವಾಗಿ ಪುರೋಹಿತನ ಸಮ್ಮುಖದಲ್ಲಿ ಮಾಂಗಲ್ಯ ಧಾರಣೆ ನಡೆಯುವುದಾಗಿದೆ. ಮುಸ್ಲಿಮ್‌ರಲ್ಲಿ ಖಾಜಿಯ ನೇತೃತ್ವದಲ್ಲಿ ನಿಖಾ ಓದುವ ಮೂಲಕ ಮದುವೆಯನ್ನು ಪಕ್ಕ ಮಾಡಿಕೊಳ್ಳುತ್ತಿದ್ದರು.[೧೧]

೨. ಮಹಿಳೆಯರ ಸ್ಥಾನಮಾನ : ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಅಧೀನ ಸ್ವರೂಪದ್ದಾಗಿತ್ತು. ವೈದಿಕ ಮೂಲದ ಧರ್ಮಗ್ರಂಥಗಳು ಮಹಿಳೆಗೆ ಸ್ವಾತಂತ್ರ್ಯ ನೀಡುವುದನ್ನು ವಿರೋಧಿಸಿದ್ದವು. ಸಮಾಜ ಪುರುಷ ಪ್ರಧಾನವಾಗಿದ್ದು ಅದಕ್ಕೆ ಪೂರಕವಾದ ಕಾಯಿದೆ ಕಾನೂನು ರಚನೆಗೊಂಡವು. ಆದರೆ ಮಹಿಳೆಗೆ ಆ ಸ್ವಾತಂತ್ರ್ಯವಿರಲಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಇಲ್ಲೂ ಕೂಡ ಪುರುಷ ಪ್ರಧಾನ ಕೇಂದ್ರಿತ ಸಮಾಜದಿಂದಾಗಿ ಮಹಿಳೆ ಅವನ ಅಧೀನದಲ್ಲೇ ಜೀವನ ನಡೆಸಬೇಕೆಂಬ ರೀತಿಯಲ್ಲಿ ಒಪ್ಪಿತ ಸಮಾಜವಿತ್ತು. ಇದರಿಂದಾಗಿ ಬಾಲ್ಯವಿವಾಹ, ಬಹುಪತ್ನಿತ್ವ, ವಿಧವಾ ವಿವಾಹ ಮತ್ತು ದೇವದಾಸಿಯಂಥವರು ಅನಿಷ್ಟ ಪದ್ಧತಿಗಳು ಮುಂಚೂಣಿಗೆ ಬಂದವು. ಈ ರೀತಿ ಬಂಧಿತ ವಾತಾವರಣದಿಂದಾಗಿ ಮಹಿಳೆಯರು ಸ್ವಾತಂತ್ರ್ಯವಾಗಿ ಜೀವಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಯಿತು.[೧೨]

ಹೈದರಾಬಾದ್ ಕರ್ನಾಟಕ ಪ್ರದೇಶದ ಮಹಿಳೆಯರು ಚಿಂತಾಜನಕವಾದ ರೀತಿಯಲ್ಲಿ ಜೀವನ ನಡೆಸುತ್ತಿದ್ದರು. ನಿಜಾಮರ ಆಡಳಿತ ಪೂರ್ವದಿಂದಲೂ ಮಹಿಳೆಯರಿಗೆ ಯಾವುದೇ ಸ್ವಾತಂತ್ರ್ಯ ಲಭಿಸದೆ ಇರುವುದು ಗಮನಿಸಬಹುದಾಗಿದೆ. ನಿಜಾಮರ ಅಧಿಕಾರದ ಅವಧಿಯಲ್ಲಿ ಕೂಡ ಅಧೀನ ಪದ್ಧತಿಯೇ ಮುಂದುವರೆಯಿತು. ನಿಜಾಮರ ಆಡಳಿತದಲ್ಲಿದ್ದ ಭೂಮಾಲೀಕ ವರ್ಗ ಮತ್ತು ಅಧಿಕಾರ ಶಾಹಿ ವರ್ಗವು ಮಹಿಳೆಯರನ್ನು ಅತ್ಯಂತ ಕೆಳಮಟ್ಟದ ರೀತಿಯಲ್ಲಿ ನಡೆಸಿಕೊಂಡಿತ್ತು. ಅನೇಕ ಸಂದರ್ಭಗಳಲ್ಲಿ ಮಹಿಳೆಯರು ಈ ವರ್ಗದಿಂದ ಶೋಷಣೆಯನ್ನು ಎದುರಿಸಿದರು. ಈ ಘಟನೆಗಳು ಎಲ್ಲೂ ಕೂಡ ದಾಖಲಾಗದೇ ಇರುವುದು ಗಮನಿಸಬಹುದಾಗಿದೆ. ಏಕೆಂದರೆ ಭೂಮಾಲೀಕರ ವಿರುದ್ಧ ಇಂತಹ ಆರೋಪ ಮಾಡಿದ್ದರೆ ಈ ಕೂಲಿ ಕಾರ್ಮಿಕ ಮಹಿಳೆಯರಿಗೆ ಕೆಲಸ ಮಾಡಲು ಕೆಲಸವೇ ಇಲ್ಲದಂತಾಗುತ್ತಿತ್ತು. ಆದ್ದರಿಂದ ಅದೆಷ್ಟೋ ಹೆಣ್ಣುಮಕ್ಕಳು ಜಮೀನ್ದಾರ, ಭೂಮಾಲೀಕರು ಮತ್ತು ಆಡಳಿತ ವರ್ಗಕ್ಕೆ ಆಹುತಿಯಾಗಿದ್ದಾರೆ. ಇದರಿಂದಾಗಿ ಮಹಿಳೆಯರು ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಜೀವನ ನಡೆಸಬೇಕಾಯಿತು. ಹಿಂದೂ, ಮುಸ್ಲಿಮ್ ಎಂಬ ಬೇಧಭಾವವಿಲ್ಲದೆ ಮಹಿಳೆಯರು ಪುರುಷ ಪ್ರಧಾನ ಸಮಾಜದಿಂದ ದಬ್ಬಾಳಿಕೆಗೆ ಒಳಗಾದರು. ಹಿಂದೂ ಧರ್ಮೀಯರು ತಮ್ಮ ವೈದಿಕ ಧರ್ಮ ಗ್ರಂಥಗಳಂತೆ ಮಹಿಳೆ ಅಬಲೆಯಾಗಿದ್ದು ಅವಳಿಗೆ ಪುರುಷನ ಸಹಕಾರವಿಲ್ಲದೆ ಜೀವನ ನಡೆಸುವುದು ಸಾಧ್ಯವಿಲ್ಲ ಎಂದು ಹೇಳುತ್ತಾ ಮಹಿಳೆ ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿ,

ಪ್ರಾಯದಲ್ಲಿ ಗಂಡನ ಆಶ್ರಯದಲ್ಲಿ, ವೃದ್ಧಾಪ್ಯದಲ್ಲಿ ಮಕ್ಕಳ ಆಶ್ರಯದಲ್ಲಿ ಹಾಗೂ ಇವರಾರು ಇಲ್ಲದ ಸಂದರ್ಭದಲ್ಲಿ ಬಂಧುಗಳ ಆಶ್ರಯದಲ್ಲಿ ಇರತಕ್ಕದ್ದು ಎಂದು ಪ್ರತಿಪಾದಿಸಲಾಯಿತು. ಇದರಿಂದ ಮಹಿಳೆ ಪುರುಷನಿಲ್ಲದೆ ಅವಳ ಜೀವನವಿಲ್ಲ ಎಂಬ ರೀತಿಯಲ್ಲಿ ಹೇಳುತ್ತಾ ಮಹಿಳೆಯ ಮೇಲೆ ಪುರುಷ ಪ್ರಧಾನ ವ್ಯವಸ್ಥೆಯ ಹಿಡಿತವನ್ನೂ ಬಿಗಿಗೊಳಿಸಿರುವುದು ಕಂಡುಬರುತ್ತದೆ.[೧೩]

ಈ ರೀತಿಯಾದ ವಾತಾವರಣದಿಂದಾಗಿ ಈ ಪ್ರದೇಶದಲ್ಲಿ ಬಾಲ್ಯ ವಿವಾಹ ಪದ್ಧತಿಯೂ ಚಾಲ್ತಿಗೆ ಬಂದಿತು. ಹೆಣ್ಣು ಹುಟ್ಟುವುದರಿಂದ ನಮಗೆ ಹುಣ್ಣು ಹುಟ್ಟಿತು ಎಂದು ಹೇಳುತ್ತಾ, ಬಾಲ್ಯ ವಿವಾಹವನ್ನು ಮಾಡುತ್ತಿದ್ದರು. ಈ ಬಾಲ್ಯ ವಿವಾಹ ಪದ್ಧತಿ ಹೆಚ್ಚಾಗಿ ಕೆಳವರ್ಗದವರಲ್ಲಿಯೆ ಕಂಡುಬರುತ್ತದೆ. ಬಾಲ್ಯ ವಿವಾಹ ಪದ್ಧತಿಯು ಜಾರಿಗೆ ಬರುವುದಕ್ಕೆ ಎರಡು ಪ್ರಮುಖ ಕಾರಣಗಳನ್ನು ಗುರುತಿಸಬಹುದು. ಮಹಿಳೆಯರ ಮೇಲಿನ ದೌರ್ಜನ್ಯ ತಡೆಯುವುದಕ್ಕಾಗಿ ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡುವುದರಿಂದ ತಂದೆ ತಾಯಿಯರು ಋಣಭಾರ ಕಡಿಮೆ ಮಾಡಿಕೊಳ್ಳುವ ಸಲುವಾಗಿ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡುತ್ತಿದ್ದರು. ಹಾಗೇ ಈ ಪ್ರದೇಶದಲ್ಲಿ ಅವಿಭಕ್ತ ಕುಟುಂಬಗಳು ಹೆಚ್ಚಾಗಿರುವುದರಿಂದ ಕುಟುಂಬದಲ್ಲಿ ದುಡಿಯುವ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದಲೂ ಬಾಲ್ಯ ವಿವಾಹ ಪದ್ಧತಿ ಜಾರಿಯಲ್ಲಿ ಬಂದಿರುವುದು ಸ್ಪಷ್ಟವಾಗುತ್ತದೆ. ಈ ಪದ್ಧತಿಯ ಕೆಟ್ಟ ಪರಿಣಾಮವನ್ನು ಅರ್ಥೈಸದ ಜನರು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ತಂದರು. ಈ ರೀತಿಯಾಗಿ ಚಿಕ್ಕ ವಯಸ್ಸಿನಲ್ಲಿಯೇ ಬಾಲ್ಯ ವಿವಾಹಕ್ಕೆ ಒಳಗಾದ ಮಹಿಳೆಯರು ತಾಯ್ತನವನ್ನು ಕಂಡುಕೊಳ್ಳುತ್ತಾರೆ. ಹಾಗೇ ಕೆಲವು ಸಂದರ್ಭದಲ್ಲಿ ಹೆರಿಗೆ ಆಗದೆ ಪ್ರಾಣ ಕಳೆದುಕೊಂಡವರ ಸಂಖ್ಯೆಯನ್ನು ನೋಡಿದರೆ ಈ ಬಾಲ್ಯ ವಿವಾಹ ಪದ್ಧತಿಯಿಂದ ಆದ ಶೋಷಣೆ ಅರ್ಥವಾಗುತ್ತದೆ. ಇನ್ನೂ ಕೆಲವರು ಚಿಕ್ಕ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡವರ ಸ್ಥಿತಿ ಭೀಕರವಾಗಿ ಕಂಡುಬರುತ್ತದೆ. ವಿಧವೆಗೆ ಮರುಮದುವೆಗೆ ಅವಕಾಶವಿಲ್ಲದ್ದರಿಂದ ಅಂತಹ ವಿಧವೆಯನ್ನು ಈ ಸಮಾಜ ಅತ್ಯಂತ ನಿಕೃಷ್ಟವಾಗಿ ಕಾಣುತ್ತದೆ. ಬಾಲ್ಯ ವಿವಾಹ ಪದ್ಧತಿ ಹೆಚ್ಚಾಗಿ ಹಿಂದೂ ಧರ್ಮೀಯರಲ್ಲಿ ಕಂಡುಬರುತ್ತದೆ. ಮುಸ್ಲಿಮ್ ರಲ್ಲಿ ಇಲ್ಲವೆಂದಲ್ಲ; ಅವರಲ್ಲಿ ಕೂಡ ಜಾರಿಯಲ್ಲಿತು.

ಹೀಗೆ ಬಾಲ್ಯ ವಿವಾಹದ ಮಹಿಳೆಯರು ಚಿಕ್ಕ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ನಂತರ ಅವರು ಮರುಮದುವೆಗೆ ಅನರ್ಹರಾಗಿರುತ್ತಿದ್ದರು. ಆದರೆ ಪುರುಷನು ಮಾತ್ರ ಎರಡನೆಯ ಪತ್ನಿಯನ್ನು ಮಾಡಿಕೊಳ್ಳಬಹುದಾಗಿತ್ತು. ಹೀಗೆ ಪುರುಷರು ಮಹಿಳೆಯನ್ನು ಹತ್ತಿಕ್ಕುವ ಪ್ರಯತ್ನ ಮಾಡಿರುವುದು ಗಮನಿಸಬಹುದಾಗಿದೆ. ಗಂಡನು ವಿಚ್ಛೇದನ ನೀಡದ ಮಹಿಳೆಯರು ಮರುವಿವಾಹ ಆಗುವುದಕ್ಕೆ ಕೂಡ ಪುರುಷ ಸಮಾಜ ಮತ್ತು ವೈದಿಕ ಸಮಾಜದಲ್ಲಿ ಯಾವುದೇ ಅವಕಾಶಗಳು ಇರದಿರುವುದು ಗಮನಿಸಬಹುದು. ಈ ರೀತಿಯಾಗಿ ಪುರುಷ ಪ್ರಧಾನ ಸಮಾಜ ಮಹಿಳೆಯರನ್ನು

ತನಗೆ ಅನುಕೂಲವಾಗುವ ರೀತಿಯಲ್ಲಿ ಸಾಮಾಜಿಕ ರಚನೆಯ ನಿಯಮಗಳನ್ನು ಮಾಡಿಕೊಂಡಿರುವುದು ಕಂಡುಬರುತ್ತದೆ. ಇದೇ ರೀತಿಯಾಗಿ ಅದೇ ಪುರುಷನನ್ನು ಬಹುಪತ್ನಿತ್ವ ಮಾಡಿಕೊಳ್ಳುವುದಕ್ಕೆ ಅವಕಾಶ ನೀಡಿರುವುದನ್ನು ಗಮನಿಸಬಹುದು.[೧೪] ಹೀಗೆ ಹೈದರಾಬಾದ್ ಕರ್ನಾಟಕ ಪ್ರದೇಶದ ಮಹಿಳೆಯರ ಸ್ಥಾನಮಾನಕ್ಕೆ ಸಂಬಂಧಿಸಿದ ವಿಷಯವನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಘೋಷಾ ಪದ್ಧತಿ ಅಥವಾ ಪರದಾ ಪದ್ಧತಿ : ಪರದಾ ಪದ್ಧತಿ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಕಂಡುಬರುತ್ತದೆ. ಈ ಪದ್ಧತಿ ಕೂಡ ಮಹಿಳೆಯರ ಮೇಲಿನ ಶೋಷಣೆಯಾಗಿದೆ. ಇದು ದೆಹಲಿ ಸುಲ್ತಾನ, ಮೊಗಲ್ ಮತ್ತು ರಜಪೂತರ ಮುಂತಾದ ಮನೆತನಗಳಲ್ಲಿ ರೂಢಿಯಲ್ಲಿದ್ದುದನ್ನು ಗಮನಿಸಬಹುದಾಗಿದೆ. ಈ ಪದ್ಧತಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನಿಜಾಮರ ಆಳ್ವಿಕೆಯ ಕಾಲಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿತು. ಪರಪುರುಷನ ನೋಟ ಮಹಿಳೆಯರ ಮೇಲೆ ಬೀಳಬಾರದು ಎಂಬ ಉದ್ದೇಶದಿಂದ ಈ ಪದ್ಧತಿ ಕಾರ್ಯಗತಗೊಂಡಿದ್ದು ಎಂದು ಪುರುಷ ಪ್ರಧಾನ ಸಮಾಜ ಪ್ರತಿಪಾದಿಸುತ್ತಿದೆ. ಅಮಾನುಷ ಆಚರಣೆಯಾದ ಪರದಾ ಪದ್ಧತಿ ಮಹಿಳೆಯರ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತಾ ಮುಖವನ್ನು ತೆರೆದುಕೊಳ್ಳದ ಹಾಗೇ ಮಾಡಿರುವ ತಂತ್ರಗಾರಿಕೆ ಕಂಡುಬರುತ್ತದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರಜಾಕಾರ ಅರೆಸೇನಾ ಪಡೆಗಳಿಂದ ಯಾಗಿ ಎಸಗಿದ ದೌರ್ಜನ್ಯದಿಂದಾಗಿ ಈ ಪದ್ಧತಿ ಜಾರಿಗೆ ಬಂದಿದೆ. ನಿಜಾಮರ ಆಳ್ವಿಕೆಯ ಕೊನೆಯ ಘಟ್ಟದಲ್ಲಿ ರಜಾಕಾರ ಪಡೆ ಕಾಸಿಮ್ ರಜ್ವಿಯ ನೇತೃತ್ವದಲ್ಲಿ ಅತಿರೇಕದ ಹೋರಾಟಕ್ಕೆ ಅಣಿಯಾಯಿತು. ಜನರಲ್ಲಿ ಭಯದ ವಾತಾವರಣವನ್ನು ಸೃಷ್ಟಿಸುವುದರ ಮೂಲಕ ಸ್ವಾತಂತ್ರ್ಯ ಚಳವಳಿಯನ್ನು ಹತ್ತಿಕ್ಕುವ ಪ್ರಯತ್ನ ಮಾಡಿತು.[೧೫] ಸಂಸ್ಥಾನದಲ್ಲಿನ ಮಹಿಳೆಯರ ಮೇಲೆ ದೌರ್ಜನ್ಯ ಎಸಗುತ್ತಿತ್ತು. ಅದರಿಂದಾಗಿ ಮಹಿಳೆಯರಿಗೆ ರಜಾಕಾರರ ಅರೆಸೇನಾ ಪಡೆಯನ್ನು ಕಂಡರೆ ಭಯದ ವಾತಾವರಣವಿದ್ದುದು ಗೋಚರಿಸುತ್ತಿತ್ತು. ಮಹಿಳೆಯರು ಪರದಾ ಪದ್ಧತಿಯನ್ನು ಅಳವಡಿಸಿಕೊಂಡರು. ಮನೆಯಿಂದ ಹೊರಗಡೆ ಬರುವ ಸಂದರ್ಭದಲ್ಲಿ ಪರದಾವನ್ನು ಹಾಕಿ ಕೊಳ್ಳುತ್ತಿದ್ದರು. ಹೀಗೆ ಪುರುಷ ಪ್ರಧಾನ ಸಮಾಜ ಮಹಿಳೆಯರನ್ನು ಶೋಷಣೆ ಮಾಡಿರುವುದು ಕಂಡುಬರುತ್ತದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈಗಲೂ ಕೂಡ ಪರದಾ ಪದ್ಧತಿ ಜಾರಿಯಲ್ಲಿದೆ. ಅದು ವಿಶೇಷವಾಗಿ ಮುಸ್ಲಿಮ್ ಮಹಿಳೆಯರು ಮಾತ್ರ ಬುರ್ಖಾವನ್ನು ಧರಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ.[೧೬]

ರಾಣಿ ಲಕ್ಷ್ಮೀಬಾಯಿ ಜಹಗೀರ ಅಧಿಕಾರಿಯಾಗಿ: ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ಜಹಾಗೀರ ಪ್ರದೇಶಗಳಲ್ಲಿಯೇ ಚಿಂಚೋಳಿ ಜಹಾಗೀರ ಮನೆತನ ವಿಶೇಷವಾಗಿ ಕಂಡುಬರುತ್ತದೆ. ಈ ಜಹಾಗೀರ ಮನೆತನವನ್ನು ಆಳ್ವಿಕೆ ಮಾಡಿದ ರಾಣಿ ಲಕ್ಷ್ಮೀಬಾಯಿಯಿಂದಾಗಿ ಚಿಂಚೋಳಿ ಪಟ್ಟಣದಲ್ಲಿದ ಜಹಾಗೀರ ಮನೆತನ ಭೀಮಸೇನ ರಾಯ ನೇತೃತ್ವದಲ್ಲಿ ಸ್ಥಾಪನೆಯಾಯಿತು.

ಭೀಮಸೇನರಾಯರು ನಿಜಾಮ್ ಪ್ರಭುತ್ವದೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡು ನಿಜಾಮ ಪ್ರಭುತ್ವಕ್ಕೆ ಕಪ್ಪಕಾಣಿಕೆ ನೀಡುತ್ತಾ ಅಧೀನ ಮನೆತನವಾಗಿ ಅಧಿಕಾರ ಚಲಾಯಿಸುತ್ತಿದ್ದರು. ನಿಜಾಮ್ ಪ್ರಭುತ್ವ ಈತನ ಆಡಳಿತವನ್ನು ಮೆಚ್ಚಿಕೊಂಡು ಧರ್ಮಪಾಲ ಎಂಬ ಬಿರುದನ್ನು ನೀಡಿದನು. ಈ ಸಂದರ್ಭದಲ್ಲಿ ಭೀಮಸೇನ ರಾಯನ ಮಗನು ಮರಣ ಹೊಂದಿದನು. ಇದ್ದ ಒಬ್ಬ ಮಗನನ್ನು ಕಳೆದುಕೊಂಡ ದುಃಖದಿಂದ ಅನಾರೋಗ್ಯಕ್ಕೆ ಒಳಗಾಗಿ ಮರಣ ಹೊಂದಿದನು. ಅದರಿಂದಾಗಿ ಜಹಾಗೀರ ಮನೆತನದ ಆಡಳಿತವನ್ನು ರಾಣಿ ಲಕ್ಷ್ಮೀಬಾಯಿ ವಹಿಸಿಕೊಂಡಳು. ಜಹಾಗೀರ ಪ್ರದೇಶದ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಳು.[೧೭] ಅದರಲ್ಲಿ ವಿಶೇಷವಾಗಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಜಹಾಗೀರ ಪ್ರದೇಶದಲ್ಲಿದ್ದ ಉಸ್ಮಾನಿಯಾ ಶಾಲೆಯನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಆರ್ಥಿಕ ಧನಸಹಾಯ ಮಾಡಿದಳು. ಹಾಗೆಯೇ ಈ ಶಾಲೆಯಲ್ಲಿ ಮಹಿಳೆಯರು ಕೂಡ ಪ್ರವೇಶ ಪಡೆಯುವಂತೆ ಮಾಡಿದಳು. ಜಹಾಗೀರ ಪ್ರದೇಶದಲ್ಲಿದ್ದ ಮಹಿಳೆಯರ ಏಳಿಗೆಗಾಗಿ ಮಹಿಳಾ ಮಂಡಳಿಯನ್ನು ಸ್ಥಾಪಿಸಿದಳು. ಈ ಮಂಡಳಿಯ ಮೂಲಕ ಮಹಿಳೆಯರಲ್ಲಿ ಜಾಗೃತಿ ಮೂಡುವಂತೆ ಮಾಡಿದಳು. ಆದರೆ ರಾಣಿ ಲಕ್ಷ್ಮೀಬಾಯಿಯನ್ನು ಕುರಿತಾದ ಕೆಲವು ಆರೋಪಗಳು ಕಂಡುಬಂದವು. ಮಹಿಳೆಯ ಅಧೀನದಲ್ಲಿ ಕಾರ್ಯನಿರ್ವಹಿಸುವುದಕ್ಕೆ ಆಗದ ಮನಸ್ಸುಗಳು ರಾಣಿಯನ್ನು ಕುರಿತು ಆಪಾದನೆ ಮಾಡಿದವು. ಈ ರೀತಿ ಮಹಿಳೆಯರ ಆಡಳಿತ ವಿರುದ್ಧ ಪುರುಷ ಪ್ರಧಾನ ಸಮಾಜ ಅಪಾದನೆ ಮಾಡುವುದು ಚರಿತ್ರೆಯುದ್ದಕ್ಕೂ ಕಂಡುಬರುತ್ತದೆ.[೧೮]

ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆ : ಹೈದರಾಬಾದ್ ಕರ್ನಾಟಕ ಪ್ರದೇಶವು ಸ್ವಾತಂತ್ರ್ಯಕ್ಕಾಗಿ ಎರಡು ಹಂತದಲ್ಲಿ ಹೋರಾಟ ಮಾಡಬೇಕಾಯಿತು. ಆರಂಭದಲ್ಲಿ ಭಾರತವನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡ ಬ್ರಿಟಿಷರ ವಿರುದ್ಧ ಹಾಗೆ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದ ನಿಜಾಮ್ ಪ್ರಭುತ್ವದ ವಿರುದ್ಧ ಹೋರಾಡಬೇಕಾಯಿತು. ಈ ಪ್ರದೇಶದಲ್ಲಿ ನಡೆದ ಎರಡು ಹಂತದ ಸ್ವಾತಂತ್ರ್ಯ ಚಳವಳಿಯಲ್ಲಿ ಮಹಿಳೆಯರ ಪಾತ್ರ ಮಹತ್ವದಾಗಿದೆ. ಸ್ವಾತಂತ್ರ್ಯ ಚಳವಳಿಯನ್ನು ಕುರಿತು ರಾಷ್ಟ್ರನಾಯಕರ ಮಾತು ಮತ್ತು ಘೋಷ ವಾಕ್ಯಗಳಿಂದ ಪ್ರೇರಣೆ ಪಡೆದ ಮೈನಾತಾಯಿ ಖೇಣಿ ಸಂಗವ್ವ ರಟ್ಕಲ್, ಗುರುಬಸವ ಹತ್ತಿ ಅಕ್ಕಮಹಾದೇವಿ, ಜಯದೇವಿ ತಾಯಿ ಲಿಗಾಡೆ ಮುಂತಾದವರು ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಜಯದೇವಿ ತಾಯಿ ಲಿಗಾಡೆಯವರು ನಿಜಾಮ್ ಪ್ರಭುತ್ವದ ವಿರುದ್ಧ ಸ್ವಾತಂತ್ರ್ಯಕ್ಕಾಗಿ ನಡೆದ ಗಡಿಶಿಬಿರ ಹೋರಾಟದಲ್ಲಿ ಭಾಗವಹಿಸಿ ಆ ಹೋರಾಟಕ್ಕೆ ಸಂಪೂರ್ಣ ಸಹಕಾರ ನೀಡಿದರು. ಗಡಿ ಪ್ರದೇಶದಲ್ಲಿ ಮಹಿಳೆಯರಿಗೆ ನಿಜಾಮ್ ಪ್ರಭುತ್ವದ ಬಗೆಗೆ ಮನವರಿಕೆ ಮಾಡಿಕೊಟ್ಟು ಸ್ವಾತಂತ್ರ್ಯ ಚಳವಳಿ ಬಗ್ಗೆ ಹುರಿದುಂಬಿಸಿದರು. ಹಾಗೆ ಬೀದರನಲ್ಲಿ ಮೈನಾ ತಾಯಿ ಖೇಣಿಯವರು ಕೂಡ ಈ ಪ್ರದೇಶದ ಮಹಿಳೆಯರಿಗೆ ಜಾಗೃತಿಯನ್ನು

ಮೂಡಿಸಿದರು. ಹೀಗೆ ಹೈದರಾಬಾದ್ ಕರ್ನಾಟಕದಲ್ಲಿ ನಡೆದ ಚಲೇಜಾವ್ ಚಳವಳಿ ವಂದೇ ಮಾತರಂ ಮತ್ತು ಭಾರತ ದೇಶದಲ್ಲಿ ವಿಲೀನ ಚಳವಳಿಗಳಲ್ಲಿ ಮಹಿಳೆಯರು ಪ್ರತ್ಯಕ್ಷ-ಪರೋಕ್ಷವಾಗಿ ಬೆಂಬಲಿಸುವುದರ ಮೂಲಕ ಹೈದರಾಬಾದ್ ಸಂಸ್ಥಾನ ಭಾರತ ದೇಶದಲ್ಲಿ ವೀಲಿನವಾಗುವಲ್ಲಿ ಮಹಿಳೆಯರ ಪಾತ್ರ ಹಿರಿದಾಗಿದೆ.[೧೯]

೬.೨. ಊಳಿಗಮಾನ್ಯತೆ ಹಾಗೂ ಸಾಮಾಜಿಕ ಸಂಬಂಧಗಳು

ಊಳಿಗಮಾನ್ಯತೆ ಎನ್ನುವ ವಿಷಯ ವಿದ್ವಾಂಸರಲ್ಲಿ ಅನೇಕ ರೀತಿಯ ವಾದವಿವಾದಗಳಿಂದಾಗಿ ಅಂತಿಮ ತೀರ್ಮಾನಕ್ಕೆ ಬರುವುದು ಸಾಧ್ಯವಾಗುವುದಿಲ್ಲ. ಭಾರತದ ಚರಿತ್ರೆಗೆ ಸಂಬಂಧಿಸಿದಂತೆ ಊಳಿಗಮಾನ್ಯ ವ್ಯವಸ್ಥೆಯ ಕುರಿತು ಅನೇಕ ವಿದ್ವಾಂಸರು ಚರ್ಚೆ ನಡೆಸಿದ್ದಾರೆ. ಅವರಲ್ಲಿ ಡಿ.ಡಿ. ಕೊಸಾಂಬಿ, ಆರ್.ಎಸ್. ಶರ್ಮಾ ವಿಜಯಕುಮಾರ ಟಾಕೂರ್, ಹರ್ಬನ್ಸ್ ಮುಖಿ, ಸುಬ್ಬರಾಯಲು ಮುಂತಾದವರು ಪ್ರಮುಖರು. ಇವರು ನಡೆಸಿದ ಚರ್ಚೆ ಊಳಿಗಮಾನ್ಯತೆ ವ್ಯವಸ್ಥೆಯ ಅಸ್ತಿತ್ವ ಸ್ವರೂಪ ಹಾಗೂ ಸಮಾಜದ ಚಲನೆಯನ್ನು ಇಟ್ಟುಕೊಂಡು ಹೈದರಾಬಾದ್ ಕರ್ನಾಟಕ ಪ್ರದೇಶದ ಊಳಿಗಮಾನ್ಯತೆಯನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಸಾಮಾನ್ಯವಾಗಿ ಊಳಿಗಮಾನ್ಯತೆ ಎಂದರೆ ಭೂಮಾಲೀಕರು ಗೇಣಿಗಳನ್ನು ಹೊಂದಿ ಉತ್ಪಾದನೆ ಮಾಡುವುದು. ಭೂಮಿಯ ಮೇಲೆ ಹಕ್ಕು ಸಾಧಿಸುವವನ ಜಮೀನಿನಲ್ಲಿ ಗೇಣಿ ರೂಪದಲ್ಲಿ ಊಳಿಗೆ ಮಾಡುವ ಪದ್ಧತಿಗೆ ಊಳಿಗಮಾನ್ಯತೆ ಎಂದು ಕರೆಯುತ್ತಾರೆ. ಭೂಮಿ ಮೇಲೆ ಹಿಡಿತವನ್ನು ಸಾಧಿಸಿದ ಭೂಮಾಲೀಕ ವರ್ಗದಿಂದ ಕಾರ್ಯರೂಪಕ್ಕೆ ಬಂದಿರುವ ವ್ಯವಸ್ಥೆಯಾಗಿದೆ. ಊಳಿಗ ಮಾನ್ಯತೆಯಲ್ಲಿ ಭೂಮಾಲೀಕರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲ್ಪಟ್ಟ ವ್ಯವಸ್ಥೆ ಎಂದಾಗುತ್ತದೆ. ಪ್ರಭುತ್ವದಿಂದ ಭೂಮಿಯನ್ನು ದಾನದ ರೂಪದಲ್ಲಿ ಹಾಗೇ ಸರ್ಕಾರಿ ಅಧಿಕಾರಿಗಳಿಗೆ ನೀಡುತ್ತಿದ್ದ ಮಿತಿ ಮೀರಿದ ದಾನಗಳು ಊಳಿಗಮಾನ್ಯತೆಯ ಪೋಷಕಾಂಶಗಳಾಗಿವೆ ಎಂಬುದು ಆರ್.ಎಸ್. ಶರ್ಮಾ ಅವರ ಅಭಿಪ್ರಾಯ.[೨೦]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಊಳಿಗಮಾನ್ಯ ಪದ್ಧತಿ ರೂಪುಗೊಂಡಿದ್ದು ಶಾತವಾಹನರ ಕಾಲದಲ್ಲಿ. ನಂತರ ಅಧಿಕಾರಕ್ಕೆ ಬಂದ ಪ್ರಭುತ್ವಗಳು ತಮ್ಮ ಅಧೀನದಲ್ಲಿನ ಸಾಮಂತ ಮನೆತನಗಳು ಹಾಗೇ ಭೂಮಿಯನ್ನು ದಾನವಾಗಿ ಪಡೆದುಕೊಂಡ ಬ್ರಾಹ್ಮಣರು ಮತ್ತು ಆಡಳಿತದಲ್ಲಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದ ಅಧಿಕಾರಿಗಳಿಗೆ ನೀಡಿದ ದಾನಗಳ ಮೂಲಕ ಈ ವರ್ಗಗಳಿಗೆ ಭೂಮಿಯ ಮೇಲೆ ಅಧಿಕಾರ ನೀಡಿದ್ದರಿಂದ ಅವರು ಹೊಸ ಭೂಮಾಲೀಕರಾಗಿ ರೂಪುಗೊಂಡಿದರು. ಪ್ರಭುತ್ವದ ಅಧೀನದಲ್ಲಿದ್ದ ಈ ವರ್ಗಗಳು ಅರಸನನ್ನು ಆರಾಧಿಸುವ ಮೂಲಕ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡರು. ಈ ಭೂಮಾಲೀಕ ವರ್ಗ ತಾವು ಪಡೆದುಕೊಂಡ ಭೂಮಿಯಲ್ಲಿ ವ್ಯವಸಾಯ

ಮಾಡದೆ ಕೃಷಿ ಚಟುವಟಿಕೆಯನ್ನು ನಿರ್ವಹಿಸುವುದಕ್ಕಾಗಿ ರೈತಾಪಿ ವರ್ಗಕ್ಕೆ ಭೂಮಿಯನ್ನು ಉಳುಮೆ ಮಾಡುವುದಕ್ಕೆ ಗೇಣಿಗೆ ನೀಡಿತು. ಇಲ್ಲಿ ಭೂಮಿ ಉಳ್ಳವರು ಹಾಗೂ ಭೂಹೀನರು ಎಂಬ ಎರಡು ವರ್ಗಗಳು ಹುಟ್ಟಿಕೊಂಡವು. ಪ್ರಭುತ್ವದಿಂದ ಭೂಮಿಯನ್ನು ಪಡೆದುಕೊಂಡ ಭೂಮಾಲೀಕರು ತಮ್ಮ ಊಳಿಗಮಾನ್ಯತೆಯ ಪ್ರದೇಶದಲ್ಲಿ ನ್ಯಾಯ ತೀರ್ಮಾನದಿಂದ ಹಿಡಿದು ಆಡಳಿತ ನಡೆಸುವ ಪ್ರತಿಯೊಂದು ಹಂತದಲ್ಲೂ ಅಧಿಕಾರ ಪಡೆದುಕೊಂಡರು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವಿಜಯನಗದ ನಂತರ ಅಧಿಕಾರವನ್ನು ವಹಿಸಿಕೊಂಡ ಬಹಮನಿ ಮತ್ತು ಆದಿಲ್‌ಶಾಹಿಗಳು ಊಳಿಗಮಾನ್ಯತೆಯ ಪರಂಪರೆಯನ್ನು ಮುಂದುವರೆಸಿದರು. ಇವರು ಜಹಾಗೀರ ಪದ್ಧತಿ, ಮಕ್ಕುಂಗಳನ್ನು ಭೂಮಾಲೀಕರನ್ನಾಗಿ ನೇಮಕ ಮಾಡಿದ್ದರಿಂದ ಇವರು ಊಳಿಗಮಾನ್ಯತೆಯನ್ನು ಯಥಾವತ್ತಾಗಿ ಮುನ್ನಡೆಸಿಕೊಂಡು ಬಂದರು.

ನಂತರ ಅಧಿಕಾರಕ್ಕೆ ಬಂದ ಹೈದರಾಬಾದ್ ನಿಜಾಮರ ಕಾಲಾವಧಿಯಲ್ಲಿ ಊಳಿಗಮಾನ್ಯತೆ ವ್ಯವಸ್ಥೆಗೆ ಪೋಷಣೆ ದೊರೆಯಿತು. ನಿಜಾಮ್ ಪ್ರಭುತ್ವ ತನ್ನ ಅಧೀನದಲ್ಲಿದ್ದ ಸಾಮಂತ ಮನೆತನಗಳಾದ ನಾಡಗೌಡ, ದೇಸಾಯಿ, ದೇಶಮುಖ ಮತ್ತು ಜಹಾಗೀರದಾರರು ಪ್ರಸಿದ್ಧ ಭೂಮಾಲಿಕರಾದರು. ನಿಜಾಮ್ ಪ್ರಭುತ್ವ ತನ್ನ ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸೈನಿಕ ಅಧಿಕಾರಿಗಳಿಗೆ ಮತ್ತು ಇತರ ಅಧಿಕಾರಿಗಳಿಗೆ ಇನಾಮ್, ಪೈಗಾ ಮತ್ತು ಜಹಾಗೀರ ಪ್ರದೇಶಗಳನ್ನು ನೀಡುತ್ತಿತ್ತು. ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿ ಒಂದು ಕಡೆ ಸಾಮಂತರ ಮನೆತನಗಳ ಭೂಮಾಲೀಕರು ಹಾಗೂ ಅಧಿಕಾರಿ ವರ್ಗಗಳಿಂದ ಕೂಡದ ಭೂಮಾಲೀಕರನ್ನು ಒಳಗೊಂಡಿತು. ಪ್ರಭುತ್ವದಿಂದ ಪಡೆದುಕೊಂಡ ಭೂಮಿಯನ್ನು ಉಳುಮೆ ಮಾಡದೆ ಗೇಣಿಗೆ ನೀಡುತ್ತಿದ್ದರು. ಗೇಣಿಗೆ ಪಡೆದುಕೊಂಡ ಮಧ್ಯಮ ವರ್ಗದವರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರೂ ಕೂಡ ಕೆಳವರ್ಗದ ರೈತಾಪಿ ವರ್ಗದವರು ಕೃಷಿ ಚಟುವಟಿಕೆಯಲ್ಲಿ ತೊಡಗಿಸುವಂತೆ ಮಾಡುತ್ತಿದ್ದರು.[೨೧]

ಭೂರಹಿತ ರೈತಾಪಿ ವರ್ಗವಾದ ಕೆಳವರ್ಗದವರು ದುಡಿಯಲು ಗೇಣಿದಾರ ಭೂಮಿಯಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಮಾಧ್ಯಮ ವರ್ಗದಿಂದ ಬಂದ ಗೇಣಿದಾರ ಹೊಸ ಭೂಮಾಲೀಕ ವರ್ಗವಾಗಿ ಹುಟ್ಟಿಕೊಂಡಿತು. ಅಂತಹ ಭೂಮಾಲೀಕರು ಹೈದರಾಬಾದ್ ಕರ್ನಾಟಕದಲ್ಲಿ ಲಿಂಗಾಯಿತ, ಕುಡವ ಒಕ್ಕಲಿಗ, ಮುಸ್ಲಿಮರು ಎಂದು ಗುರುತಿಸಬಹುದಾಗಿದೆ. ಈ ವರ್ಗದಲ್ಲಿ ಲಿಂಗಾಯಿತ ಮತ್ತು ಕುಡವ ಒಕ್ಕಲಿಗ ಸಮುದಾಯ ಹೆಚ್ಚಿನ ಪ್ರಮಾಣದಲ್ಲಿ ಭೂಮಾಲೀಕರಾಗಿದ್ದುದು ಕಂಡುಬರುತ್ತದೆ. ಮುಸ್ಲಿಮ್ ಸಮುದಾಯಕ್ಕೆ ಸೇರಿದವರ ಪ್ರಮಾಣ ಅತ್ಯಂತ ಕಡಿಮೆ ಇರುವುದು ಗಮನಿಸಬಹುದಾಗಿದೆ. ಈ ಸಮುದಾಯಗಳು ಭೂಮಾಲೀಕರಾಗಿ ರೂಪುಗೊಂಡು ಮರಿ ಪಾಳೆಗಾರರಂತೆ ವರ್ತಿಸುತ್ತಿದ್ದರು.

ಇನಾಮ್ ಪಡೆದುಕೊಂಡ ಅಧಿಕಾರಿ ವರ್ಗಗಳು ಹೊಸ ಭೂಮಾಲೀಕರಾಗಿ ರೂಪುಗೊಂಡಿರುವುದು ಕಂಡುಬರುತ್ತದೆ. ಈ ವರ್ಗ ಭೂಮಿಯನ್ನು ಉಳುಮೆ ಮಾಡದೆ ರೈತಾಪಿ ವರ್ಗದಿಂದಲೇ ಕೃಷಿ ಚಟುವಟಿಕೆಗಳನ್ನು ಮಾಡಿಸುತ್ತಿತ್ತು. ಸಂಸ್ಥಾನದಲ್ಲಿದ್ದ ಒಟ್ಟು ಭೂಮಿಯಲ್ಲಿ ಶ್ರೇಣೀಕೃತವಾಗಿ ಹಂಚಿ ಹೋದಾಗ ಸಮಾಜದ ಕಟ್ಟಕಡೆಯ ಸಮುದಾಯಗಳಾದ ಕೆಳವರ್ಗದವರು ಭೂಮಿಯಿಂದ ವಂಚಿತರಾದರು. ದುಡಿಯುವುದಕ್ಕಾಗಿ ಈ ಭೂಮಾಲೀಕರ ಭೂಮಿಯನ್ನೇ ಅವಲಂಬಿಸಿದರು. ಅದರಿಂದ ಭೂಮಾಲೀಕರ ಇವರನ್ನು ಅತ್ಯಂತ ಕೀಳಾಗಿ ಕಾಣುತ್ತಿದ್ದರು. ದುಡಿಯುವ ವರ್ಗಕ್ಕೆ ಕೆಲಸ ಬೇಕಾಗಿದ್ದರಿಂದ ಭೂಮಾಲೀಕರ ಅಧೀನದಲ್ಲಿ ಉಳಿಯುವಂತಾಯಿತು. ಇದರಿಂದಾಗಿ ದಾಸ್ಯಾ ರೂಪಿ ಸಂಬಂಧ ಹುಟ್ಟಿಕೊಂಡಿತು. ರೈತಾಪಿ ವರ್ಗಕ್ಕೆ ದುಡಿಯಲು ಕೆಲಸ ಬೇಕಾದರೆ ಈ ಭೂಮಾಲೀಕ ವರ್ಗದವರ ದಾಸ್ಯನಾಗಬೇಕಾಯಿತು. ದಾಸ್ಯಾ ರೂಪ ಸಂಬಂಧ ವಿಸ್ತರಿಸುತ್ತಾ ಭೂಮಾಲೀಕರ ಮನೆಯಲ್ಲಿ ಬಿಟ್ಟಿಚಾಕರಿ ಮಾಡುವ ಪದ್ಧತಿ ಹುಟ್ಟಿಕೊಂಡಿತು. ದುಡಿಯಲು ಭೂಮಿ ಬೇಕಾದರೆ ಕೆಳವರ್ಗದ ರೈತರು ದಾಸ್ಯಾ ಮತ್ತು ಬಿಟ್ಟಿಚಾಕರಿ ಪದ್ಧತಿಗೆ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು.[೨೨]

ನಿಜಾಮರ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಭೂಮಾಲೀಕರ ಆಸೆಯಂತೆ ದಾಸ್ಯ ರೂಪಿ ಮತ್ತು ಬಿಟ್ಟಿಚಾಕರಿ ಜಾರಿಯಲ್ಲಿ ಬಂದಿದ್ದ ನಂತರ ಭೂಮಾಲೀಕರು ಭೂಮಿಯಲ್ಲಿ ದುಡಿಯುವ ರೈತರಿಗೆ ಮನುಷ್ಯರಂತೆ ಕಾಣುವುದನ್ನು ಬಿಟ್ಟು ಪ್ರಾಣಿಯಂತೆ ನೋಡಲು ಆರಂಭಿಸಿದರು. ಕೆಲವು ಸಂದರ್ಭದಲ್ಲಿ ಭೂಮಾಲಿಕನ ಮನೆಯಲ್ಲಿ ಮಗಳ ಮದುವೆ ಇದ್ದರೆ ಆ ಕಾರ್ಯಕ್ರಮದಲ್ಲಿ ಕಸಗುಡಿಸುವ ಕಾರ್ಯದಿಂದ ಕಟ್ಟಿಗೆ ಒಡೆಯುವ ಕೆಲಸದವರೆಗೆ ಬಿಟ್ಟಿಯಾಗಿಯೇ ಮಾಡಬೇಕಾಯಿತು. ಮದುವೆ ಮುಗಿದ ನಂತರ ತನ್ನ ಮಗಳ ಜೊತೆಗೆ ಮಕ್ಕಳನ್ನು ದಾಸ್ಯಾ ರೂಪದಲ್ಲಿ ಕಳುಹಿಸಿರುವ ಉದಾಹರಣೆಗಳು ಬೇಕಾದಷ್ಟು ಇವೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಭೂಮಾಲೀಕರು ದುಡಿಯುವ ರೈತಾಪಿ ವರ್ಗವನ್ನು ಮನಬಂದ ಹಾಗೆ ಬಳಸಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಪ್ರತಿಯೊಬ್ಬನ ಮನೆಯಿಂದ ಒಬ್ಬ ಪುರುಷನನ್ನು ಜೀತದಾಳುಗಳನ್ನಾಗಿ ನೇಮಿಸಿಕೊಳ್ಳುವ ಪದ್ಧತಿಯನ್ನು ಹುಟ್ಟುಹಾಕಿದರು. ಅದುವೇ ಜೀತಪದ್ಧತಿ. ಭೂಮಾಲೀಕರ ಭೂಮಿಯಲ್ಲಿ ಮತ್ತು ಮನೆಯಲ್ಲಿ ಜೀತದಾಳುಗಳಾಗಿ ದುಡಿಯುವ ಪುರುಷನ ಹೆಂಡತಿ ಕೂಡ ಭೂಮಾಲಿಕನ ಮನೆಯಲ್ಲಿಯೇ ಜೀತದಾಳಾಗಿ ಕಾರ್ಯನಿರ್ವಹಿಸಬೇಕಾಗಿತ್ತು. ಭೂಮಾಲೀಕರ ಮನೆಯಲ್ಲಿದ್ದ ದನದ ಕೊಟ್ಟಿಗೆಯಲ್ಲಿನ ಸೆಗಣಿ ಬಳಿಯುವುದಕ್ಕೆ ಜೀತದಾಳಿನ ಹೆಂಡತಿ ಹೋಗಬೇಕಾಗಿತ್ತು. ಹೋದ ಹೆಣ್ಣುಮಕ್ಕಳ ಮೇಲೆ

ಅದೆಷ್ಟು ಮಾನಭಂಗ ಮಾಡಿದಾರೋ. ಇಷ್ಟಾದರೂ ಕೂಡ ಈ ದುಡಿಯುವ ವರ್ಗ ಭೂಮಾಲಿಕನಿಗೆ ರುಣಿಯಾಗಿರುವುದು ಗಮನಿಸಿದರೆ ಈ ದುಡಿಯುವ ವರ್ಗಕ್ಕೆ ದುಡಿಯಲು ಕೆಲಸವೆಷ್ಟು ಮುಖ್ಯವಾಗಿತ್ತು ಎಂಬುದು ಅರ್ಥವಾಗುತ್ತದೆ.

ಭೂಮಾಲೀಕರು ದುಡಿಯುವ ರೈತಾಪಿ ವರ್ಗದವರು ಮಾಡಿದ ಶೋಷಣೆಯಿಂದ ಎಚ್ಚೆತ್ತುಕೊಂಡ ತೆಲಂಗಾಣದ ರೈತರು ಭೂಮಾಲೀಕರ ಶೋಷಣೆಯ ವಿರುದ್ಧ ತಿರುಗಿಬಿದ್ದು ಮಾಡಿರುವ ಹೋರಾಟವನ್ನು ಗಮನಿಸಬಹುದು. ಈ ಹೋರಾಟದ ಪ್ರಭಾವದಿಂದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ರೈತರು ಕೂಡ ಜಾಗೃತರಾದರು.[೨೩]

೬.೩. ಸಮುದಾಯಗಳು ಹಾಗೂ ಅನನ್ಯತೆ

ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಆಳ್ವಿಕೆ ಮಾಡಿದ ನಿಜಾಮರ ಕಾಲಘಟ್ಟದಲ್ಲಿನ ಸಮುದಾಯಗಳು ಅನ್ಯನ್ಯವಾಗಿ ಜೀವನ ಸಾಗಿಸುತ್ತಿದ್ದವು. ಪ್ರಾಚೀನ ಕಾಲದಿಂದಲೂ ಗ್ರಾಮೀಣ ಪ್ರದೇಶದಲ್ಲಿ ಸಮುದಾಯಗಳು ವರ್ಣ ವ್ಯವಸ್ಥೆಯನ್ನು ಒಪ್ಪಿಕೊಂಡು ನಾನು ಶ್ರೇಷ್ಠ ನೀನು ಕನಿಷ್ಠ ಎಂಬ ಪರಿಕಲ್ಪನೆಯಲ್ಲಿ ಜೀವನ ಸಾಗಿಸುತ್ತಿದ್ದರು. ಅದೇ ಸಮುದಾಯಗಳು ಮತ್ತೊಂದು ಕಡೆ ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಆಚರಣೆ ಮಾಡುವ ಸಂದರ್ಭದಲ್ಲಿ ಪ್ರತಿಯೊಂದು ಸಮುದಾಯ ತನ್ನದೇ ಸೇವೆಯನ್ನು ಸಲ್ಲಿಸುತ್ತಿದ್ದವು. ಗ್ರಾಮೀಣ ಪ್ರದೇಶದಲ್ಲಿ ಅನ್ಯೋನ್ಯವಾದ ಬದುಕನ್ನು ಸಾಗಿಸುತ್ತಿದ್ದವು. ನಿಜಾಮರ ಆಳ್ವಿಕೆಯ ಸಂದರ್ಭದಲ್ಲಿ ಸಮುದಾಯಗಳು ಅನ್ಯೋನ್ಯವಾಗಿ ದ್ದರು ಕೂಡ ವರ್ಣ ವ್ಯವಸ್ಥೆಯ ಚೌಕಟ್ಟಿನಿಂದ ಹೊರಬರಲು ಸಾಧ್ಯವಾಗಿರಲಿಲ್ಲ ಎಂಬ ವಿಷಯ ಕಂಡುಬರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಆದ ಬದಲಾವಣೆಯಿಂದ ಸಮುದಾಯಗಳ ಮಧ್ಯ ಅನ್ಯೋನ್ಯತೆ ಮೂಡಿರುವುದು ಗಮನಿಸಬಹುದು. ಕೆಲವು ದುಡಿಯುವ ವರ್ಗಗಳಲ್ಲಿನ ಸಮುದಾಯಗಳು ಕೂಡ ಅನ್ಯೋನ್ಯತೆ ಇರುವುದು ಕಂಡುಬರುತ್ತದೆ. ಆದರೆ ವರ್ಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಲ್ಲಗಳೆಯಲು ಸಾಧ್ಯವಿಲ್ಲ ಎಂಬ ಎಚ್ಚರಿಕೆಯನ್ನು ಕೂಡ ಗಮನಿಸಬೇಕಾಗುತ್ತದೆ. ಈ ಎಲ್ಲ ಎಚ್ಚರಿಕೆಯನ್ನಿಟ್ಟುಕೊಂಡು ನಿಜಾಮರ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಸಮುದಾಯಗಳ ಅನನ್ಯತೆಯನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

ನಿಜಾಮ್ ಆಳ್ವಿಕೆಯಲ್ಲಿನ ಗುಲಬರ್ಗಾ ಜಿಲ್ಲೆಯ ಜನಸಂಖ್ಯೆ ವರದಿ-೧೯೩೧

ಕ್ರಸಂ.	ಸಮುದಾಯಗಳ ವಿಭಾಗ	ಸಮುದಾಯ ಹೆಸರುಗಳು	ಸಮುದಾಯ ಸಂಖ್ಯೆ	
I	ಬ್ರಾಹ್ಮಣ ಹಿಂದೂ	೧. ಲಿಂಗಾಯಿತರು	೨,೩೫,೯೫೦	
		೨. ಬೇಡರ	೮೧,೫೧೦	
		೩. ಮರಾಠಿ	೫೦,೬೯೭	
		೪. ಕುಣಬಿ	೪೨,೮೪೬	
		೫. ಪಾಂಚಾಳ	೧೪,೬೬೭	
		೬. ಬ್ರಾಹ್ಮಣರು	೩೨,೮೯೨	
II	ಆದಿ ಹಿಂದೂ	೧. ಮಲಾ/ಮಹಾರ್/ ಹೊಲೆಯ	೧೦೧೪೦೪	
		೨. ಮಾದಿಗ/ ಮೋಚಿ	೯೦೧೧೧	
III	ಮುಸ್ಲಿಮ್	೧. ಶೇಖ	೧,೪೨,೮೬೯	
		೨. ಸೈಯದ್	೨೫,೩೩೨	
		೩. ಪಠಾಣ	೧೬,೧೩೧	
		೪. ಮೊಗಲ	೯,೪೨೭	
IV	ಕ್ರೈಸ್ತರು	೧. ಇಂಡಿಯನ್	೫೫೭೬	
		೨. ಆಂಗ್ಲೋ ಇಂಡಿಯನ್	೬೪	
		೩. ಯುರೋಪಿಯನ್	೫	ಅಫಜಲಪುರ ಗುಲಬರ್ಗಾ, ಯಾದಗಿರಿ, ಶಹಾಪುರ, ಗುಲಬರ್ಗಾ
V	ಬುಡಕಟ್ಟುಗಳು	೧. ಲಂಬಾಡಿ	೨೯,೩೪೯	
		೨. ಎರ್ಕಲಾ	೧೧,೧೧೯	
VI	ಇತರರು	೧. ಜೈನ್	೧,೯೪೮	
		೨. ಸಿಖ್	೩೨೯	
		೩. ಬೌದ್ಧ		೨೪

ನಿಜಾಮ್ ಆಳ್ವಿಕೆಯಲ್ಲಿನ ಬೀದರ ಜಿಲ್ಲೆಯ ಸಮುದಾಯಗಳ ಜನಸಂಖ್ಯೆ ವರದಿ ೧೯೩೧

ಕ್ರ.ಸಂ.	ಸಮುದಾಯಗಳ ವಿಭಾಗ	ಸಮುದಾಯ ಹೆಸರುಗಳು	ಸಮುದಾಯ ಸಂಖ್ಯೆ
I	ಬ್ರಾಹ್ಮಣ ಹಿಂದೂ	೧. ಮರಾಠಿ	೧,೬೭,೯೬
		೨. ಲಿಂಗಾಯಿತ	೧೨೪,೮೦೧
		೩. ಯಾದವ	೬೦,೩೭೬
		೪. ಬೆಸ್ತ	೪೪,೮೬೨
		೫. ಬ್ರಾಹ್ಮಣ	೨೧,೪೧೧
II	ಆದಿ ಹಿಂದೂ	೧. ಮಾಲಾ/ಮಹಾರ/ ಹೊಲೆಯ	೮೩,೭೦೧
		೨. ಮಾದಿಗ	೭೬,೯೭೮
III	ಮುಸ್ಲಿಮ್	೧. ಶೇಖ	೯೭,೬೩೭
		೨. ಸೈಯದ್	೧೯,೫೧೪
		೩. ಪಠಾಣ	೧೪,೪೧೦
		೪. ಮೊಗಲ	೪,೬೪೧
IV	ಕ್ರೈಸ್ತರು	೧. ಇಂಡಿಯನ್	೪೩೫೪
V	ಬುಡಕಟ್ಟುಗಳು	೧. ಲಂಬಾಡಿ	೧೨,೪೩೩
		೨. ಕೊರವ	೧,೩೦೪
VI	ಇತರರು	೧. ಜೈನ್	೯೯೭
		೨. ಸಿಖ್	೪೫ ೨೫

ನಿಜಾಮ್ ಆಳ್ವಿಕೆಯಲ್ಲಿನ ರಾಯಚೂರು ಜಿಲ್ಲೆಯ ಸಮುದಾಯಗಳ ಜನಸಂಖ್ಯೆ ವರದಿ ೧೯೩೧

ಕ್ರ.ಸಂ.	ಸಮುದಾಯಗಳ ವಿಭಾಗ	ಸಮುದಾಯ ಹೆಸರುಗಳು	ಸಮುದಾಯ ಸಂಖ್ಯೆ
I	ಬ್ರಾಹ್ಮಣ ಹಿಂದೂ	೧. ಬೇಡರ	೧,೪೩,೦೪೭
		೨. ಲಿಂಗಾಯಿತರು	೧,೪೦,೧೨೮
		೩. ಯಾದವ	೯೧,೪೪೫
		೪. ಬ್ರಾಹ್ಮಣ	೩೬,೯೪
		೫. ಬೆಸ್ತರು	೨೭,೧೮೬

II	ಆದಿ ಹಿಂದೂ	೧. ಮಾಲಾ/ ಮಹಾರ/ ಹೊಲೆಯ ೨. ಮಾದಿಗ	೧೯೦೮೨ ೯೩೪೧೧	
III	ಮುಸ್ಲಿಮ್	೧. ಶೇಖ ೨. ಸೈಯದ್ ೩. ಪಠಾಣ ೪. ಮೊಗಲ	೫೪,೬೭೭ ೧೯,೭೭೬ ೧೩,೦೮೯ ೫,೪೬೬	
IV	ಕ್ರೈಸ್ತರು	೧. ಇಂಡಿಯನ್ ೨. ಆಂಗ್ಲೋ ಇಂಡಿಯನ್ ೩. ಯುರೋಪಿಯನ್	೩೮೪೯ ೧೬ ೧೦	ರಾಯಚೂರು. ಲಿಂಗಸುಗೂರು
V	ಬುಡಕಟ್ಟುಗಳು	೧. ಲಂಬಾಡಿ	೧೧,೪೬೫	
VI	ಇತರರು	೧. ಜೈನ್ ೨. ಸಿಖ್ ೩. ಬೌದ್ಧ	೮೭೨ ೧೪ ೧೦	ಕೊಪ್ಪಳ, ಗದ್ವಾಲ್, ರಾಯಚೂರು [೨೬]

೬.೩.೧. ಲಿಂಗಾಯಿತರು

ಲಿಂಗಾಯಿತರನ್ನು ಲಿಂಗವಂತ, ವೀರಶೈವರೆಂದೂ ಕರೆಯುತ್ತಾರೆ. ಇವರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿಯೇ ಬಹುಸಂಖ್ಯಾತರಾಗಿದ್ದು ಇವರು ಕೃಷಿ, ವ್ಯಾಪಾರ, ವಾಣಿಜ್ಯ ಮೊದಲಾದ ಹತ್ತು ಹಲವಾರು ವಿವಿಧ ವೃತ್ತಿ ಕಾಯಕವನ್ನು ಮಾಡುವವರಾಗಿದ್ದಾರೆ. ಇವರಲ್ಲಿಯೇ ಜಂಗಮರು, ಪಂಚಮ ಸಾಲಿಗಳು, ಬಣಜಿಗರು, ಅಲ್ಲದೆ ಅನೇಕ ವೃತ್ತಿ ನಿರತ ಮಡಿವಾಳರು, ಜಾಡರು, ಗಾಣಿಗರು, ಹೂಗಾರರು ಮುಂತಾವರು ಕಂಡುಬರುತ್ತಾರೆ. ಇವರು ರಾಜಕೀಯವಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ ಮುಂದುವರೆದ ಸಮುದಾಯವಾಗಿದೆ.[೨೭] ಈ ಸಮುದಾಯ ನಿಜಾಮರ ಆಳ್ವಿಕೆಯ ಅವಧಿಯಲ್ಲಿನ ಆಡಳಿತ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದರು. ಗ್ರಾಮೀಣ ಪ್ರದೇಶದಲ್ಲಿನ ತೆರಿಗೆಯನ್ನು ವಸೂಲಿ ಮಾಡುವುದು, ಗ್ರಾಮೀಣ ಜನರಿಗೆ ರಕ್ಷಣೆ ನೀಡುತ್ತಾ ಇಡೀ ಗ್ರಾಮವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುತ್ತಿದ್ದರು. ಪ್ರಭುತ್ವ ಜಹಾಗೀರ ಮತ್ತು ಇನಾಮ್‌ಗಳನ್ನು ನೀಡಲಾಗುತ್ತಿತ್ತು. ಈ ರೀತಿಯಾಗಿ ಭೂಮಿಯನ್ನು ಪಡೆದುಕೊಂಡ ಲಿಂಗಾಯತರು ಹೊಸ ಭೂಮಾಲೀಕರಾಗಿ ಹೊರ ಬಂದರು. ಇವರು ತಮ್ಮ ಭೂಮಿಯನ್ನು ಗೇಣಿಗೆ ನೀಡಿ ಭೂಮಿ

ಇಲ್ಲದ ರೈತಾಪಿ ವರ್ಗದವರಿಂದ ಭೂಸಾಗುವಳಿ ಮಾಡಿಸುತ್ತಿದ್ದರು. ಅಷ್ಟೇ ಅಲ್ಲದೆ ಇತರ ಸಮುದಾಯಗಳ ಮೇಲೆ ತಮ್ಮ ಹಿಡಿತವನ್ನು ಇಟ್ಟುಕೊಂಡು ಆಳ್ವಿಕೆ ಮಾಡುವ ಪ್ರಭುತ್ವಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿರುತ್ತಿದ್ದರು. ಲಿಂಗಾಯಿತ ಸಮುದಾಯದವರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರು ಬಸವಣ್ಣನ ಆರಾಧಕರಾಗಿದ್ದಾರೆ.[೨೮]

೬.೩.೨. ಕೋಮಟಿಗ(ಶೆಟ್ಟಿಗಳು)

ಈ ಸಮುದಾಯ ಶೆಟ್ಟಿ ಅಥವಾ ಕೋಮಟಿಗ ಎಂದೇ ಪರಿಚಿತವಾಗಿದೆ. ಇವರು ವ್ಯಾಪಾರವನ್ನೇ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಇವರದು ಹೈದರಾಬಾದ್ ಕರ್ನಾಟಕದಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಸಮುದಾಯವಾಗಿದೆ. ಈ ಸಮುದಾಯದವರು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ವಾಸವಾಗಿದ್ದರು. ನಿಜಾಮರ ಆಳ್ವಿಕೆಯಲ್ಲಿ ಇವರು ಹೆಚ್ಚಾಗಿ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಇವರ ಬ್ರಾಹ್ಮಣ ಸಮುದಾಯದಲ್ಲಿದ್ದ ಹಾಗೇ ವಿವಿಧ ರೂಢಿ ಸಂಪ್ರದಾಯವನ್ನು ಅನುಸರಿಸುತ್ತಿದ್ದರು. ಧಾರ್ಮಿಕ ವಿಧಿ ವಿಧಾನಗಳನ್ನು ತಪ್ಪದೆ ಆಚರಿಸುತ್ತಿದ್ದರು. ಇವರು ಪ್ರಮುಖವಾಗಿ ಕನ್ನಿಕಾ ಪರಮೇಶ್ವರಿ, ವಾಸವಿ, ನಾಗೇಶ್ವರ ದೇವತೆಗಳನ್ನು ಪೂಜಿಸುತ್ತಿದ್ದರು. ಒಂದೇ ಬೆಡಗಿನಲ್ಲಿ ವಿವಾಹವಾಗುವುದಿಲ್ಲ. ವಿಧವೆಗೆ ಮರುಮದುವೆ ಆಗುವ ಅವಕಾಶ ಇರುವುದಿಲ್ಲ. ಈ ವಿಧವೆಯನ್ನು ಕೆಳಮಟ್ಟದ ಸ್ಥಾನದಿಂದ ನೋಡುತ್ತಿದ್ದರು. ಇವರು ಇತರ ಯಾವುದೇ ಸಮುದಾಯದವರನ್ನು ಮನೆಯಲ್ಲಿ ಕರೆದುಕೊಳ್ಳದೆ ಇರುವುದು ಕೂಡ ಕಂಡುಬರುತ್ತದೆ. ಈ ಕೋಮಟ್ಟಿಗ ಸಮುದಾಯ ಶ್ರೀಮಂತ ಸಮುದಾಯವಾಗಿದೆ. ಇವರಲ್ಲಿ ಬಡವರೇ ಇರುವುದಿಲ್ಲ ಎಂದರೆ ಅತಿಶಯವಾಗುವುದಿಲ್ಲ.[೨೯]

೬.೩.೩. ಗಾಣಿಗರು

ಗಾಣಿಗರು ಎಣ್ಣೆ ತೆಗೆಯುವುದು ಹಾಗೂ ತೆಗೆದ ಎಣ್ಣೆಯನ್ನು ತಾವೇ ಮಾರಾಟ ಮಾಡುತ್ತಿದ್ದರು. ಇದು ಇವರ ಸಾಂಪ್ರದಾಯಕ ಉದ್ಯೋಗವಾಗಿದೆ. ಇತ್ತೀಚೆಗೆ ಇವರು ಒಕ್ಕಲುತನ ಹಾಗೂ ಇತರ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ನಿಜಾಮರ ಆಡಳಿತ ಅವಧಿಯಲ್ಲಿ ಇವರು ಅನೇಕ ಎಣ್ಣೆ ತೆಗೆಯುವ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿರುವುದು ಕಂಡುಬರುತ್ತದೆ. ಇವರಲ್ಲಿ ಕರಿಗಾಣಿಗ ಮತ್ತು ಬಿಳಿಗಾಣಿಗ, ಸಜ್ಜನ ಗಾಣಿಗ ಎಂಬ ಪಂಗಡಗಳಿವೆ. ಇವರು ಮಾತನಾಡುವ ಭಾಷೆ ಕನ್ನಡ. ಗಾಣಿಗರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣರು ಅಥವಾ ಜಂಗಮರು ನೆರವೇರಿಸಿಕೊಡುತ್ತಾರೆ. ಇವರಲ್ಲಿ ವೀರಶೈವ ಮತದವರಿದ್ದಾರೆ. ಈ ಸಮುದಾಯದಲ್ಲಿ ಅನೇಕ ಬೆಡಗುಗಳಿವೆ. ಒಂದೇ ಬೆಡಗು ಹೊಂದಿರುವರೊಂದಿಗೆ ವಿವಾಹ ಸಂಬಂಧಗಳಿಗೆ ಅಸ್ಪದವಿಲ್ಲ.

ಇವರು ರಾಜಕೀಯವಾಗಿ, ಆರ್ಥಿಕವಾಗಿ ಮುಂದುವರೆದ ಸಮುದಾಯವಾಗಿದೆ. ಈ ಸಮುದಾಯ ಹೆಚ್ಚಾಗಿ ಗುಲಬರ್ಗಾದಲ್ಲಿ ಕಂಡುಬರುತ್ತದೆ.[೩೦]

೬.೩.೪. ನಾಯಕ(ಬೇಡರು)

ನಾಯಕರನ್ನು ಬೇಡರು ವಾಲ್ಮೀಕಿ ಮೊದಲಾದ ಹೆಸರುಗಳಿಂದಲೂ ಕರೆಯುತ್ತಾರೆ. ಇವರು ಹೈದರಾಬಾದ್ ಕರ್ನಾಟಕದಲ್ಲಿ ಬಹುಸಂಖ್ಯಾತರಾಗಿದ್ದಾರೆ. ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದ ಹಲವಾರು ರಾಜವಂಶಗಳ ಅಧೀನದಲ್ಲಿ ಬೇಟೆಯಾಡಲು ಹಾಗೂ ಸೈನಿಕ ಸೇವೆಯಲ್ಲಿ ಹೆಚ್ಚಾಗಿ ಬೇಡರೇ ಇರುತ್ತಿದ್ದರೆಂದು ತಿಳಿದುಬರುತ್ತದೆ. ನಿಜಾಮರ ಕಾಲದಲ್ಲಿ ಜಹಾಗೀರ ಪದ್ಧತಿ ಜಾರಿಗೆಯಲ್ಲಿದ್ದ ಕಾರಣ ಇವರು ಗ್ರಾಮ ಕಾವಲುಗಾರರಾಗಿದ್ದು ಹಾಗೂ ಜಾತಿಕಾರರಾಗಿಯೂ ಕೆಲಸ ನಿರ್ವಹಿಸುವ ಅವಕಾಶ ದೊರೆಯುತ್ತಿತ್ತೆಂದು ತಿಳಿದುಬರುತ್ತದೆ. ಇತ್ತೀಚೆಗೆ ಕೃಷಿ ಕಾರ್ಮಿಕರಾಗಿ ಬೇಸಾಯಗಾರ ರಾಗಿಯೂ ಹಾಗೂ ಮತ್ತಿತರ ಕ್ಷೇತ್ರಗಳಲ್ಲಿ ದುಡಿಯುತ್ತಿರುವರು. ಇವರಲ್ಲಿ ಗೋಸಲವರ್, ಗುಜ್ಜಲವರ, ಮೀನಗಲವರು, ಜಂಪಲವರು ಮುಂತಾದ ಬೆಡಗುಗಳು ಕಂಡುಬರುತ್ತದೆ.[೩೧]

೬.೩.೫. ಕಬ್ಬಲಿಗರು

ಇವರ ಸಾಂಪ್ರದಾಯಿಕ ಉದ್ಯೋಗ ಮೀನು ಹಿಡಿಯುವುದು ಮತ್ತು ದೋಣಿ ನಡೆಸುವುದಾಗಿದೆ. ಈ ಉದ್ಯೋಗಗಳಿಗೆ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತಿಯಾದ ಅವಕಾಶ ಇಲ್ಲದೆ ಇರುವುದರಿಂದ ಕೂಲಿ ಮಾಡುವುದು, ಒಕ್ಕಲುತನ ಮುಂತಾದ ಉದ್ಯೋಗಗಳಲ್ಲಿ ಇವರು ತೊಡಗಿಸಿಕೊಂಡಿದ್ದಾರೆ. ಈ ಸಮುದಾಯದಲ್ಲಿ ಅನೇಕ ಬೆಡಗುಗಳು ಕಂಡುಬರುತ್ತವೆ. ಒಂದೇ ಬೆಡಗು ಹೊಂದಿದವರೊಂದಿಗೆ ವಿವಾಹ ಸಂಬಂಧಗಳಿಗೆ ಆಸ್ಪದವಿರಲಿಲ್ಲ. ಇವರ ಧಾರ್ಮಿಕ ಮತ್ತು ಮದುವೆ ಕಾರ್ಯಗಳನ್ನು ಜಂಗಮರು ನೆರವೇರಿಸಿಕೊಡುತ್ತಾರೆ. ವಿಧವಾ ವಿವಾಹಕ್ಕೆ ಈ ಸಮುದಾಯದಲ್ಲಿ ಆಸ್ಪದವಿರಲಿಲ್ಲ. ಈ ಸಮುದಾಯ ರಾಜಕೀಯವಾಗಿ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಅತ್ಯಂತ ಹಿಂದುಳಿದ ಸಮುದಾಯವಾಗಿದೆ.[೩೨]

೬.೩.೬. ಈಡಿಗರು

ಇಚಲ ಗಿಡಗಳನ್ನು ಕೆತ್ತಿ ಹೆಂಡವನ್ನು ಇಳಿಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದೆ. ಇತ್ತೀಚೆಗೆ ಕೃಷಿ, ವ್ಯಾಪಾರ ಮೊದಲಾದ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಲ್ಲಿ ನಿರತರಾಗಿದ್ದಾರೆ. ಇವರಲ್ಲಿ ಕನ್ನಡ ಈಳಿಗೇರು ಮತ್ತು ತೆಲುಗು ಈಳಿಗೇರು ಎಂಬ ಎರಡು ಪಂಗಡಗಳಿವೆ. ತೆಲುಗು ಮತ್ತು ಕನ್ನಡ ಈಡಿಗೇರು ಮಧ್ಯ ವಿವಾಹ ಸಂಬಂಧಗಳು ಏರ್ಪಡುವುದಿಲ್ಲ. ಈ ಸಮುದಾಯದಲ್ಲಿ ಪುರೋಹಿತರು ಇಲ್ಲದ ಕಾರಣ ಬ್ರಾಹ್ಮಣರನ್ನು ಅವಲಂಬಿಸಿದ್ದಾರೆ. ಸಮಾಜದಲ್ಲಿ ಇವರದ್ದು ಮಧ್ಯಮ

ವರ್ಗ. ಈ ಸಮುದಾಯ ಹೆಚ್ಚಾಗಿ ಗುಲಬರ್ಗಾ ಮತ್ತು ರಾಯಚೂರಿನಲ್ಲಿ ಕಂಡುಬರುತ್ತದೆ. ತಲೆತಲಾಂತರದಿಂದಲೂ ಹೆಂಡವನ್ನೇ ತೆಗೆಯುವ ಉದ್ಯೋಗವನ್ನು ಮಾಡುತ್ತಿರುವುದರಿಂದ ಆರ್ಥಿಕವಾಗಿ ಬಲಹೀನರಾಗಿರುವುದು ಕಂಡುಬರುತ್ತದೆ.[೩೩]

೬.೩.೭. ಕುಂಬಾರರು

ಮಣ್ಣಿನಿಂದ ಮಡಿಕೆಗಳನ್ನು ಮಾಡುವುದು ಇವರ ಸಾಂಪ್ರದಾಯಿಕ ಕಸುಬಾಗಿದೆ. ಕುಂಬಾರರಲ್ಲಿ ಎರಡು ಪಂಗಡಗಳಿವೆ. ಅವುಗಳೆಂದರೆ ಲಿಂಗಾಯಿತ ಕುಂಬಾರರು ಹಾಗೂ ತೆಲುಗು ಕುಂಬಾರರು. ಈ ಎರಡು ಪಂಗಡಗಳಲ್ಲಿ ವೈವಾಹಿಕ ಸಂಬಂಧಗಳು ನಡೆಯುವುದಿಲ್ಲ. ಈ ಸಮುದಾಯ ಪ್ರಾಚೀನ ಕಾಲದಿಂದಲೂ ಮಡಿಕೆಯನ್ನು ಮಾಡುತ್ತಿತ್ತು. ಇದರಿಂದ ಇತರ ಸಮುದಾಯಗಳು ಕುಂಬಾರರ ಮೇಲೆ ಅವಲಂಬನೆ ಹೊಂದಿದ್ದರು. ಕೆಲವು ಸಂದರ್ಭದಲ್ಲಿ ವಾರ್ಷಿಕ ಆದಾಯಕ್ಕೆ ಅನುಗುಣವಾಗಿ ತಮ್ಮ ಮಡಿಕೆಗಳ ಉದ್ಯೋಗ ಮಾಡುತ್ತಿದ್ದರು. ಮೇಲು ವರ್ಗದವರ ಮನೆಗೆ ಹೋಗಿ ಮಡಿಕೆಗಳನ್ನು ವ್ಯಾಪಾರ ಮಾಡುತ್ತಿದ್ದರು. ನಂತರ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಬಂದ ಪಿಂಗಾಣಿ ವಸ್ತುಗಳಿಂದಾಗಿ ಇವರ ವ್ಯಾಪಾರ ನಷ್ಟದಲ್ಲಿ ಕಂಡುಬಂದಿತು. ಗ್ರಾಮಗಳಲ್ಲಿ ನಡೆಯುವ ಪ್ರತಿಯೊಂದು ಧಾರ್ಮಿಕ ಕಾರ್ಯಗಳಿಗೆ ಮಡಿಕೆಯನ್ನು ನೀಡುತ್ತಾ ಆ ಕಾರ್ಯದಲ್ಲಿ ತಮ್ಮ ಸಮುದಾಯದ ಪ್ರಾತಿನಿಧ್ಯವನ್ನು ತೋರಿಸುತ್ತಾರೆ. ಈ ಸಮುದಾಯ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯವಾಗಿದೆ.[೩೪]

೬.೩.೮. ಬಣಜಿಗರು

ಇವರು ವ್ಯಾಪಾರವನ್ನು ಸಾಂಪ್ರದಾಯಿಕ ಉದ್ಯೋಗವನ್ನಾಗಿಸಿಕೊಂಡಿದ್ದಾರೆ. ಇವರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಆರ್ಥಿಕವಾಗಿ ಪ್ರಮುಖವಾದ ಪಾತ್ರವನ್ನು ವಹಿಸಿರುವರು. ಬಣಜಿಗರು ಕಿರಾಣಿ ಅಂಗಡಿ, ಬಟ್ಟೆ ಅಂಗಡಿ ಮುಂತಾದ ವೃತ್ತಿಗಳಲ್ಲಿ ತೊಡಗಿದ್ದಾರೆ. ಒಕ್ಕಲುತನಕ್ಕೂ ಹೆಚ್ಚಿನ ಆದ್ಯತೆಯನ್ನು ನೀಡಿದ್ದಾರೆ. ಇವರು ನಿಜಾಮರ ಆಳ್ವಿಕೆಯಲ್ಲಿ ಲೇವಾದೇವಿಯಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣರು ಅಥವಾ ಜಂಗಮರು ನೆರವೇರಿಸಿ ಕೊಡುತ್ತಾರೆ.[೩೫]

೬.೩.೯. ಅಗಸರು

ಅಗಸರನ್ನು ಮಡಿವಾಳ, ದೋಬಿ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಬಟ್ಟೆಯನ್ನು ತೊಳೆಯುವುದು ಇವರ ವಂಶಪಾರಂಪರ್ಯ ಉದ್ಯೋಗವಾಗಿದೆ. ಗ್ರಾಮ ಸೇವಕರಲ್ಲಿ ಇವರೂ ಒಬ್ಬರಾಗಿದ್ದಾರೆ. ಇವರು ವಾರ್ಷಿಕ ಸಂಭಾವನೆ ಆಧಾರದ ಮೇಲೆ ಬಟ್ಟೆಯನ್ನು ತೊಳೆಯುತ್ತಾರೆ. ದುಡಿಮೆಯ ಕೂಲಿಯನ್ನು ವಸ್ತುವಿನ ರೂಪದಲ್ಲಿ ಇಲ್ಲವೇ ಹಣದ ರೂಪದಲ್ಲಿ ಪಡೆಯುತ್ತಾರೆ.

ಇವರು ದೇವರ ಉತ್ಸವ, ಹಿರಿಯರ ಪೂಜೆ, ಮದುವೆ ಮುಂತಾದ ಸಮಾರಂಭಗಳಲ್ಲಿ ಮಡಿಬಟ್ಟೆ ಹಾಸುವ ಕಾರ್ಯವನ್ನು ನಿರ್ವಹಿಸುತ್ತಾರೆ. ಒಂದು ವೇಳೆ ನಿರ್ದಿಷ್ಟ ಗ್ರಾಮದಲ್ಲಿ ಅಗಸ ಸಮುದಾಯದವರು ಇಲ್ಲದಿದ್ದರೆ ಆ ಗ್ರಾಮ ಯಾವ ಭಾಗಕ್ಕೆ ಬರುತ್ತದೆಯೋ ಅವರು ಅಲ್ಲಿಗೆ ಬಂದು ಬಟ್ಟೆಗಳನ್ನು ತೊಳೆಯುತ್ತಾರೆ. ಈ ಸಮುದಾಯದವರು ಬಹುಸಂಖ್ಯಾತರಿಲ್ಲದ ಕಾರಣ ಗ್ರಾಮಗಳನ್ನು ಹಂಚಿಕೊಂಡು ತಮ್ಮ ಕಾರ್ಯವನ್ನು ನಿರ್ವಹಿಸುತ್ತಾರೆ. ಹಂಚಿಕೊಂಡು ಅಗಸರೇ ಬಂದು ಬಟ್ಟೆ ತೊಳೆಯುತ್ತಾರೆ ವಿನಃ ಬೇರೆ ಅಗಸರು ಬರುವುದಿಲ್ಲ. ಬಟ್ಟೆಯನ್ನು ತೊಳೆಯುವ ಕಾರ್ಯದಲ್ಲಿ ಸ್ತ್ರೀ-ಪುರುಷರಿಬ್ಬರೂ ತೊಡಗಿಸಿಕೊಳ್ಳುತ್ತಾರೆ. ಇವರಲ್ಲಿ ಒಂದೇ ಬೆಡಗಿನಲ್ಲಿ ವಿವಾಹವಾಗುವ ಸಂಪ್ರದಾಯ ಇರುವುದಿಲ್ಲ. ಧಾರ್ಮಿಕ ಕಾರ್ಯಗಳನ್ನು ಲಿಂಗಾಯಿತ ಜಂಗಮರು ನೆರವೇರಿಸಿಕೊಡುತ್ತಾರೆ. ವರ್ಣ ವ್ಯವಸ್ಥೆ ವೃತ್ತಿ ಆಧಾರದ ಮೇಲೆ ಜಾತಿಯನ್ನು ಗುರುತಿಸಿ ಪುರೋಹಿತ ಶಾಹಿ ವರ್ಗ ಇತರ ಸಮುದಾಯಗಳಿಂದ ಎಲ್ಲ ತರಹದ ಕಾರ್ಯವನ್ನು ಮಾಡಿಸುತ್ತಾರೆ. ಈ ಅಗಸ ಸಮುದಾಯದವರು ದಲಿತ ವರ್ಗದ ಬಟ್ಟೆಯನ್ನು ತೊಳೆಯುವುದಿಲ್ಲ. ಕೆಲವು ಹಿಂದುಳಿದ ಜಾತಿಗಳ ಬಟ್ಟೆಯನ್ನು ತೊಳೆಯದೆ ಇರುವುದು ಗಮನಿಸಿದರೆ ಮೇಲುವರ್ಗದವರ ಈ ಸಮುದಾಯವನ್ನು ತಮ್ಮ ಕೆಲಸ ಮಾಡಿಸಿಕೊಳ್ಳುವ ಉದ್ದೇಶದಿಂದ ರೂಪಿಸಿರುವ ತಂತ್ರವೆನ್ನಬಹುದು.[೩೬]

೬.೩.೧೦. ನೇಕಾರರು

ನೇಕಾರರನ್ನು ನೇಯ್ಗೆಯವರೆಂದು, ಮಗ್ಗದವರೆಂದು ಕರೆಯುತ್ತಾರೆ. ಇವರಲ್ಲಿ ಪದ್ಮಶಾಲಿ, ಮೊದಲಾದ ಪಂಗಡಗಳಿದ್ದವು. ಈ ಸಮುದಾಯ ನಿಜಾಮರ ಕಾಲದಲ್ಲಿ ಹತ್ತಿಯಿಂದ ನೂಲು ತೆಗೆಯುವುದರೊಂದಿಗೆ ಬಟ್ಟೆಯನ್ನು ನೂಲುವ ಕಾರ್ಯವನ್ನು ನಿರ್ವಹಿಸುತ್ತಿತ್ತು. ಸಾಂಪ್ರದಾಯಿಕ ವಾಗಿ ಇವರು ನೇಕಾರರಾದಲ್ಲಿ ಹಲವಾರು ವ್ಯಾಪಾರ, ಕೃಷಿ, ಮತ್ತಿತರ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದರು. ಇವರು ಹೆಚ್ಚಾಗಿ ಗುಲಬರ್ಗಾ ಜಿಲ್ಲೆಯ ಶಹಪುರ, ಗುಲಬರ್ಗಾ, ಸುರಪುರಗಳಲ್ಲಿ ಅಲ್ಲದೆ ರಾಯಚೂರಿನಲ್ಲಿ ಮತ್ತು ಗದ್ವಾಲಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಾಸವಾಗಿದ್ದಾರೆ ಇವರಲ್ಲಿ ಶೈವ ಮತ್ತು ವೈಷ್ಣವ ಸಂಪ್ರದಾಯಗಳಿದ್ದು, ಅವಿಭಕ್ತ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ. ಇವರಲ್ಲಿ ಪುರೋಹಿತ ವರ್ಗವಿಲ್ಲದ ಕಾರಣ ನೇಕಾರರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣರು ನಡೆಸಿಕೊಡುತ್ತಾರೆ. ಇವರು ಯಾದಗಿರಿ ಮೈಲಾರಲಿಂಗ, ತುಳಜಾಪುರ, ಅಂಭಾಭವಾನಿ, ಮಲ್ಲಿಕಾರ್ಜುನ ಮತ್ತು ತಿರುಪತಿ ದೇವರುಗಳ ಆರಾಧಕರಾಗಿದ್ದರು.[೩೭]

೬.೩.೧೧. ಬ್ರಾಹ್ಮಣರು

ಬ್ರಾಹ್ಮಣ ಸಮುದಾಯ ಹೈದರಾಬಾದ್ ಕರ್ನಾಟಕ ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುವ ಸಮುದಾಯವಾಗಿದೆ. ಇವರು ತ್ರಿರುತಗಳಾಗಿ ಶಂಕರಚಾರ್ಯ ಅನುಯಾಯಿಗಳು ಮಧ್ವರು ಹಾಗೂ

ರಾಮಾನುಜಾಚಾರ್ಯರ ಅನುಯಾಯಿಗಾಗಿರುವುದನ್ನು ಗಮನಿಸಬಹುದಾಗಿದೆ. ಇವರಲ್ಲಿ ಅನೇಕ ಗೋತ್ರಗಳಿವೆ. ಕಾಶ್ಯಪ, ವಿಶ್ವಾಮಿತ್ರ, ಭಾರದ್ವಾಜ ಮೊದಲಾದ ಗೋತ್ರಗಳನ್ನು ಹೆಸರಿಸಬಹುದು. ಈ ಸಮುದಾಯದಲ್ಲಿ ಹದಿನಾರು ಸಂಸ್ಕಾರಗಳಿದ್ದು ಅದರಲ್ಲಿ ಉಪನಯನ ಅತಿಮುಖ್ಯವಾಗಿದ್ದು ಅಂದಿನಿಂದಲೇ ಜನಿವಾರ ಧರಿಸುತ್ತಿದ್ದಾರೆ. ಬ್ರಾಹ್ಮಣರಲ್ಲಿ ಎರಡು ವರ್ಗಗಳು ಕಂಡುಬರುತ್ತವೆ. ಅವುಗಳೆಂದರೆ ವೈದಿಕ ಮತ್ತು ಲೌಕಿಕ ವೈದಿಕ; ಎಂದರೆ ಪುರೋಹಿತ ಕಾರ್ಯವನ್ನು ನಿರ್ವಹಿಸುವವರು. ಲೌಕಿಕರೆಂದರೆ ವ್ಯಾಪಾರ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು. ನಿಜಾಮರ ಆಳ್ವಿಕೆಯಲ್ಲಿ ಇವರು ಜಮೀನ್ದಾರರಾಗಿ, ದೇಶಮುಖ, ದೇಶಪಾಂಡೆ, ಕುಲಕರ್ಣಿ ಮುಂತಾದವರಾಗಿ ಕಾರ್ಯ ನಿರ್ವಹಿಸಿರುವರು. ಈ ಸಮುದಾಯ ನಿಯಮ ನಿಷ್ಠೆಯಿಂದ ಜೀವನವನ್ನು ಸಾಗಿಸುತ್ತಾರೆ. ಇವರಲ್ಲಿ ವಧುವಿನ ತಂದೆ ವರನನ್ನು ಹುಡುಕುವ ಪದ್ಧತಿ ರೂಢಿಯಲ್ಲಿದೆ. ವಿವಾಹ ಕೂಡ ವಧುವಿನ ಮನೆಯಲ್ಲಿ ನಡೆಯುತ್ತದೆ. ಅದರಿಂದಾಗಿ ಬ್ರಾಹ್ಮಣ ಹೆಣ್ಣುಮಕ್ಕಳ ವಿವಾಹಗಳು ಬಹು ವರ್ಷಗಳ ನಂತರ ನಡೆಯುತ್ತವೆ. ಈ ಬ್ರಾಹ್ಮಣ ಸಮುದಾಯದವರು ತಮ್ಮ ಬುದ್ಧಿವಂತಿಕೆ ಮತ್ತು ಚಾಣಾಕ್ಷತನದಿಂದ ಪ್ರಭುತ್ವದಿಂದ ಮೆಚ್ಚುಗೆಯನ್ನು ಪಡೆದುಕೊಂಡು ತಮಗೆ ಬೇಕಾದ ಅನುಕೂಲಗಳನ್ನು ಪಡೆದು ಕೊಳ್ಳುತ್ತಿದ್ದರು.[೩೮]

೬.೩.೧೨. ಹೊಲೆಯ

ಇವರನ್ನು ಚಲವಾದಿಗಳು ಬ್ಯಾಗಾರರು ಮತ್ತು ಮಹಾರರು ಎಂದು ಕರೆಯುತ್ತಾರೆ. ಇದು ಸಮಾಜದ ಕಟ್ಟಕಡೆಯ ಸಮುದಾಯವಾಗಿದೆ. ಈ ಸಮುದಾಯ ಮೇಲವರ್ಗದವರಿಂದ ದೌರ್ಜನ್ಯ ಮತ್ತು ಶೋಷಣೆಗೆ ಒಳಗಾಗುತ್ತಲೇ ಬಂದಿದೆ. ಈ ಸಮುದಾಯ ಇರುವುದೇ ಮೇಲ್ವರ್ಗದವರ ಸೇವೆ ಮಾಡುವುದಕ್ಕಾಗಿ ಎಂಬ ರೀತಿಯ ಭಾವನೆಯನ್ನು ಸಮಾಜ ಹೊಂದಿದೆ. ಇವರು ಗ್ರಾಮದ ಕಸವನ್ನು ಗುಡಿಸಿ ಸ್ವಚ್ಛ ಮಾಡುವುದು, ಸತ್ತವರನ್ನು ಹೊಳಲು ಸಮಾಧಿಗಳನ್ನು ತೋಡುವುದು ಇವರ ಸಾಂಪ್ರದಾಯಿಕವಾದ ಕಸುಬಾಗಿದೆ. ಇತ್ತೀಚೆಗೆ ಇವರು ಕೃಷಿಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ. ಅದು ಕೂಡ ಸ್ವಂತ ಭೂಮಿಯಿಲ್ಲದೆ ಭೂಮಾಲೀಕರ ಭೂಮಿಯಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುತ್ತಾರೆ. ಜೊತೆಗೆ ಮೇಲ್ವರ್ಗದವರ ಮನೆಯಲ್ಲಿ ಮತ್ತು ಹೊಲದಲ್ಲಿ ಬಿಟ್ಟಿಚಾಕರಿ ಮಾಡುವ ಪದ್ಧತಿ ಕಂಡುಬರುತ್ತದೆ. ವಿವಾಹ ಮತ್ತು ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಜಂಗಮರು ನೆರವೇರಿಸಿಕೊಡುತ್ತಾರೆ. ವಿಧವಾ ವಿವಾಹ ಪದ್ಧತಿ ಮತ್ತು ವಿವಾಹ ಪದ್ಧತಿ ಇವರಲ್ಲಿ ಪ್ರಚಲಿತದಲ್ಲಿದೆ. ದೇವದಾಸಿ ಪದ್ಧತಿ ಈ ಸಮುದಾಯಗಳಲ್ಲಿ ಕಂಡುಬರುತ್ತದೆ. ದುರ್ಗಮ್ಮ, ಎಲ್ಲಮ್ಮ, ಮರಗಮ್ಮ ಮತ್ತು ಮಾರುತಿ ಮುಂತಾದ ದೇವತೆಗಳನ್ನು ಪೂಜಿಸುತ್ತಾರೆ.[೩೯]

೬.೩.೧೩. ಮಾದಿಗ

ಮಾದಿಗರನ್ನು ಹರಿಜನರೆಂದು ಕರೆಯುತ್ತಾರೆ. ಇವರು ಕೂಡ ಸಮಾಜದ ಕಟ್ಟಕಡೆಯ ಸಮುದಾಯಗಳಲ್ಲಿ ಒಂದಾಗಿದೆ. ಕೃಷಿ ಚಟುವಟಿಕೆಗೆ ಬೇಕಾದ ಪರಿಕರಗಳಾದ ಮಿಣೆ, ಬಾರಕೋಲು, ಕಪಲಗಳು ಅಲ್ಲದೆ ಹಲಗೆ, ಪಾದರಕ್ಷೆ ಮುಂತಾದ ಚರ್ಮದ ಸಾಮಗ್ರಿಗಳನ್ನು ಸಿದ್ಧಪಡಿಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿತ್ತು. ಇತ್ತೀಚಿನ ದಿನಗಳಲ್ಲಿ ಒಕ್ಕಲುತನ ಹೊಲಗದ್ದೆಗಳಲ್ಲಿ ಕೂಲಿ ಮಾಡುವುದು ಮತ್ತು ಮತ್ತಿತರ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ. ಇವರಲ್ಲಿ ಅನೇಕ ಬೆಡಗುಗಳಿವೆ. ಮಾದಿಗ ಸಮುದಾಯದಲ್ಲಿ ವಿವಾಹ ಮತ್ತು ವಿಧವಾ ವಿವಾಹಗಳು ಪ್ರಚಲಿತದಲ್ಲಿವೆ. ಇವರು ಮಾಂಸಾಹಾರವನ್ನು ಸೇವಿಸುವುದು ರೂಢಿಯಲ್ಲಿದೆ. ಇವರು ದೀಪಾವಳಿ ಹಬ್ಬದಂದು ತಮ್ಮ ವೃತ್ತಿ ಸಾಮಗ್ರಿಗಳಿಗೆ ಪೂಜೆ ಸಲ್ಲಿಸುತ್ತಾರೆ. ಅಂಬಾಭವಾನಿ, ದುರ್ಗಮ್ಮ, ಎಲ್ಲಮ್ಮ, ಪೂಚಮ್ಮ ದೇವರುಗಳನ್ನು ಪೂಜಿಸುತ್ತಾರೆ.[೪೦]

೬.೩.೧೪. ಮೇದರು

ಮೇದರ ಸಮುದಾಯ ಸಾಂಪ್ರದಾಯಿಕವಾಗಿ ಬಿದಿರಿನಿಂದ ತಯಾರಾಗುವ ಮರ, ಬುಟ್ಟಿ, ಬೀಸಣಿಗೆ, ಚಾಪೆ ಹೆಣೆಯುವುದು ಮುಂತಾದ ಕೈಕಸುಬುಗಳನ್ನು ಮಾಡುವರು. ವ್ಯಾಪಾರ, ಕೃಷಿ ಚಟುವಟಿಕೆ ಮತ್ತು ಕೂಲಿ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಾರೆ. ಇವರಲ್ಲಿ ಅನೇಕ ಬೆಡಗುಗಳಿವೆ. ಅವುಗಳೆಂದರೆ ಗೌಡರ, ದಾಸರ, ಹುಲೇರ್, ಪಾರಸಲೆ, ಸಣ್ಣದ ಕುಂಕುಮ ಮೊದಲಾದ ಬೆಡುಗಗಳಿವೆ. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣರು ಮತ್ತು ಪುರೋಹಿತರು ನೆರವೇರಿಸುತ್ತಾರೆ.[೪೧]

೬.೪. ನಂಬಿಕೆ ಮತ್ತು ಆಚರಣೆ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಆಚರಣೆ ಮತ್ತು ನಂಬಿಕೆಗಳು ಧಾರ್ಮಿಕ ಕೇಂದ್ರಿತವಾದ ಪದ್ಧತಿಗಳ ಮೂಲಕ ತಮ್ಮದೇಯಾದ ಪ್ರಭಾವವನ್ನು ಬೀರಿರುವುದು ಕಂಡುಬರುತ್ತದೆ. ಧರ್ಮ ಸಮಾಜದಲ್ಲಿ ಕೆಲವರ ಹಿತವನ್ನು ಕಾಪಾಡುವಂತೆ ಅವರ ಇಚ್ಛೆಗೆ ಅನುಸಾರವಾಗಿ ಇತರ ಬಹುಸಂಖ್ಯಾತ ಜನರ ಮೇಲೆ ಯಜಮಾನಿಕೆಯನ್ನು ಸ್ಥಾಪಿಸಿರುವುದು ಗಮನಿಸಬಹುದಾಗಿದೆ. ಮೇಲುವರ್ಗದ ಪ್ರಭುತ್ವ ಕೇಂದ್ರಿತ ಜನರು ತಮ್ಮ ಅನುಕೂಲಕ್ಕೆ ತಕ್ಕಂತೆ ಅದನ್ನು ಬಳಸಿಕೊಂಡು ಇತರೆ ಸಮುದಾಯಗಳನ್ನು ನಿಯಂತ್ರಿಸುತ್ತಾ ತಮ್ಮ ಇರುವಿಕೆಯನ್ನು ಗೋಚರಿಸುವಂತೆ ಮಾಡಿರುವುದು ಕೂಡ ಕಂಡುಬರುತ್ತದೆ. ನಂಬಿಕೆ ಮತ್ತು ಆಚರಣೆಗಳನ್ನು ಧರ್ಮದ ಮೂಲಕ ಬಹುಸಂಖ್ಯಾತರ ಮೇಲೆ ಹೇರುತ್ತಾ ಅದಕ್ಕೆ ಅನುಗುಣವಾಗಿ ತಮ್ಮ ಜೀವನವನ್ನು ನಡೆಯುವಂತೆ ನೀತಿ-ನಿಯಮಗಳನ್ನು

ಸೃಷ್ಟಿಸಿರುವುದು ನೋಡಿದರೆ ಅರ್ಥವಾಗುತ್ತದೆ. ಆಚರಣೆ ಎಂಬ ಅಸ್ತ್ರವನ್ನು ಬಳಸಿಕೊಂಡು ತಮ್ಮ ಏಳಿಗೆಗಾಗಿ ಧರ್ಮ ಆಧಾರಿತ ದೇವರುಗಳನ್ನು ಸೃಷ್ಟಿಸಿದರು. ಈ ದೇವಾಲಯಗಳಲ್ಲಿ ಸಮಾಜದಲ್ಲಿದ್ದ ವರ್ಣ ಪದ್ಧತಿಯಂತೆ ಮೇಲ್ವರ್ಗದ ದೇವರು ಹಾಗೂ ಕೆಳವರ್ಗದ ದೇವರೆಂದು ಸೃಷ್ಟಿಸಿದರು. ಕೆಳವರ್ಗದ ದೇವರುಗಳು ಕೋಪಿಷ್ಠ, ಕ್ರೂರ ಹಾಗೂ ಭಯಾನಕ ರೂಪವನ್ನು ಹೊಂದಿರುತ್ತಿದ್ದವು. ಶಾಪವನ್ನು ವಿಧಿಸುತ್ತಾ ಜನಸಾಮಾನ್ಯರಿಗೆ ಶೋಷಣೆಯನ್ನು ಮಾಡುತ್ತಿದ್ದವು ಎಂದು ಬಿಂಬಿಸಿ ಆ ದೇವರುಗಳ ಹೆಸರಿನಲ್ಲಿ ಹೊಸ ಆಚರಣೆ ಮತ್ತು ನಂಬಿಕೆಗಳನ್ನು ಜಾರಿಗೆ ತಂದರು. ಈ ಪದ್ಧತಿಗಳ ಮೂಲಕ ಆರ್ಥಿಕತೆಯನ್ನು ಹೆಚ್ಚಿಸಿಕೊಳ್ಳುತ್ತಾ ಪುರೋಹಿತಶಾಹಿ ವರ್ಗ ತಾನು ಪ್ರಬಲವಾಗುತ್ತಿತ್ತು. ಈ ಕೆಳವರ್ಗದ ಜನರು ಪುರೋಹಿತಶಾಹಿ ಸೃಷ್ಟಿಸಿದ ಧಾರ್ಮಿಕ ತಂತ್ರಗಳಿಂದ ಹೊರಬರಬೇಕಾದರೆ ಅವರು ಈ ವರ್ಗವನ್ನೇ ಅವಲಂಬಿಸುವಂತೆ ಮಾಡಿದರು. ಪುರೋಹಿತಶಾಹಿ ವರ್ಗ ತಲೆ ತಲಾಂತರದಿಂದ ಕಾರ್ಯವನ್ನು ನಿರ್ವಹಿಸುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ.[೪೨] ಅಂತಹ ಆಚರಣೆ ಮತ್ತು ನಂಬಿಕೆಗಳನ್ನು ಈ ಕೆಳಗಿನಂತೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

೬.೪.೧. ಆರಾಧನೆ ಮತ್ತು ಸಂಪ್ರದಾಯ

ಹೈದರಾಬಾದ್ ಕರ್ನಾಟಕ ಪ್ರದೇಶದ ಜನರು ಆರಾಧನೆ ಮತ್ತು ಸಂಪ್ರದಾಯ ಪ್ರಿಯರಾಗಿದ್ದರು. ಈ ಪದ್ಧತಿಗಳು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವುದು ಕಂಡುಬರುತ್ತದೆ. ಹಿಂದೂ ಧರ್ಮೀಯರು ತಮ್ಮ ಧಾರ್ಮಿಕ ಆರಾಧನೆ ಮತ್ತು ಸಂಪ್ರದಾಯಗಳಿಗೆ ಅನುಗುಣವಾಗಿ ಆಚರಣೆಗಳನ್ನು ಮಾಡುತ್ತಿದ್ದರು. ಕೆಲವು ಸಂದರ್ಭದಲ್ಲಿ ಮುಸ್ಲಿಮರು ಕೂಡ ಹಿಂದೂ ಸಂಪ್ರದಾಯ ಗಳನ್ನು ಪಾಲಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ದೇವಾಲಯ ಅಥವಾ ದರ್ಗಾಗಳಲ್ಲಿ ದೇವರ ಆರಾಧನೆ ಮಾಡುವಾಗ ದೀಡ್‌ನಮಸ್ಕಾರ ಹಾಕುವ ಪದ್ಧತಿಯು ಎರಡು ಧರ್ಮೀಯರಲ್ಲಿ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಆರಂಭದಿಂದ ಹಿಂದೂ ಧರ್ಮದ ಆಚರಣೆಗಳು ರೂಢಿಯಲ್ಲಿರು ವುದು. ನಂತರ ಆಗಮಿಸಿದ ಮುಸ್ಲಿಮರು ತಮ್ಮ ಸಂಪ್ರದಾಯಗಳನ್ನು ಕೂಡ ಕಾರ್ಯಗತಗೊಳಿಸಿದರು. ಗ್ರಾಮೀಣ ಮಟ್ಟದಲ್ಲಿದ್ದ ಈ ಎರಡು ಧರ್ಮೀಯರು ಒಂದರ ಮೇಲೆ ಇನ್ನೊಂದು ಪ್ರಭಾವ ಬೀರಿರುವುದು ಗಮನಿಸಬಹುದಾಗಿದೆ. ಹಿಂದೂ ಧರ್ಮದಲ್ಲಿ ಸಾಮಾಜಿಕ ಅಂತಸ್ತಿನ ಆಧಾರದ ಮೇಲೆ ಆಯಾ ಜಾತಿಗಳಿಗೆ ಆಯಾ ದೇವರುಗಳನ್ನು ಸೃಷ್ಟಿಸಿರುವುದು ಗಮನಿಸಬಹುದು.[೪೩] ಕೆಳವರ್ಗದ ಜನರ ದೇವರುಗಳು ಮಾಂಸಾಹಾರಿ ಗಳಾಗಿರುತ್ತಾರೆ. ಅವರು ಭಯಾನಕ ಸ್ವರೂಪವನ್ನು ಪಡೆದಿರುತ್ತಾರೆ. ಕೆಳವರ್ಗದವರಲ್ಲಿ ಶಾಪ ವಿಧಿಸುವವರಾಗಿದ್ದಾರೆ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿ ಮೇಲ್ವರ್ಗದ ದೇವರುಗಳು ಹಾಲು, ತುಪ್ಪ ಮತ್ತು ಸಿಹಿ ಪದಾರ್ಥಗಳನ್ನು ನೈವೇದ್ಯವಾಗಿ ಸ್ವೀಕರಿಸುವುದು. ಆ ದೇವರುಗಳು ಸರಳ ಹಾಗೂ ಮೃದು ಸ್ವಭಾವದವರು ಆಗಿರುತ್ತಾರೆ. ಇದನ್ನೆಲ್ಲ ನೋಡಿದರೆ ದೇವರುಗಳಲ್ಲಿ

ಕೂಡ ಸಾಮಾಜಿಕ ಅಂತಸ್ತು ಸೃಷ್ಟಿಸಿರುವುದು ಗೋಚರಿಸುತ್ತದೆ. ಕೆಳವರ್ಗದ ದೇವರುಗಳು ಹೆಚ್ಚಾಗಿ ಸ್ತ್ರೀ ದೇವತೆಗಳಾಗಿವೆ. ಅದರಲ್ಲಿ ಆ ದೇವತೆಗಳು ಹೆಚ್ಚಾಗಿ ರಕ್ತ ಮತ್ತು ಬಲಿಯನ್ನು ಮಾತ್ರ ತೆಗೆದುಕೊಳ್ಳುತ್ತವೆ ಎಂಬ ಕಥೆಯನ್ನು ಸೃಷ್ಟಿಸಿ ಪುರೋಹಿತ ವರ್ಗ ಇತರ ಬಹುಸಂಖ್ಯಾತ ಕೆಳವರ್ಗದ ಮೇಲೆ ಸವಾರಿ ಮಾಡುತ್ತಿರುತ್ತವೆ. ಈ ರೀತಿಯಾಗಿ ಆರಾಧನೆಯ ಹೆಸರಿನಲ್ಲಿ ಇತರೆ ವರ್ಗಗಳನ್ನು ಭಾವನಾತ್ಮಕವಾಗಿ ಕೇಂದ್ರಿಕರಿಸುವುದರ ಮೂಲಕ ಅವು ಶೋಷಣೆಯನ್ನು ಮಾಡುತ್ತಿರುವುದು ಕಂಡುಬರುತ್ತದೆ. ಆರಾಧನೆ ನೆಪದಲ್ಲಿ ಪುರೋಹಿತಶಾಹಿ ವರ್ಗ ಮಾಡಿರುವ ಧಾರ್ಮಿಕ ಹೆಸರಿನ ರಾಜಕಾರಣದ ಹೊಸ ಪದ್ಧತಿಗಳನ್ನು ಗಮನಿಸಬಹುದಾಗಿದೆ.[೪೪] ಹಿಂದೂ ಮುಸ್ಲಿಮ್ ಕೋಮಿನವರಲ್ಲಿದ್ದ ಆರಾಧನೆ ಮತ್ತು ಸಂಪ್ರದಾಯಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೬.೪.೧.೧. ಜಾತ್ರೆಗಳು ಹಾಗೂ ಹಬ್ಬಗಳು

ಹೈದರಾಬಾದ್ ಕರ್ನಾಟಕ ಪ್ರದೇಶದ ಸಮಾಜ ಜೀವನದಲ್ಲಿ ಹಬ್ಬ ಮತ್ತು ಜಾತ್ರೆಗಳ ಪಾತ್ರ ಮಹತ್ವದ್ದಾಗಿದೆ. ಕೃಷಿ ಪ್ರಧಾನ ವ್ಯವಸ್ಥೆಯನ್ನು ಹೊಂದಿದ್ದರಿಂದ ಹಬ್ಬ ಜಾತ್ರೆಗಳು ಹೆಚ್ಚಾಗಿ ನಡೆಯುತ್ತಿದ್ದದು ಸುಗ್ಗಿಯ ಕಾಲದಲ್ಲಿ. ಜಾತ್ರೆಗಳಲ್ಲಿ ವಸ್ತು ವಿನಿಮಯ ಸುಗ್ಗಿಯಾದರಿಂದ ಅನೇಕ ವಸ್ತುಗಳ ಖರೀದಿಗೆ ಇದು ಒಂದು ವೇದಿಕೆಯಾಗುತ್ತಿತ್ತು. ಹಾಗೇ ಸಂತೋಷ ಪಡೆಯುವುದಕ್ಕೆ ಸಮಯ ಅವಕಾಶವಿದ್ದರಿಂದ ಮಾರುಕಟ್ಟೆ, ಸಂಗೀತ, ನೃತ್ಯ, ಹಾವಾಡಿಗರ ಕಾರ್ಯಕ್ರಮಗಳಿಗೆ ಜನರು ಮಾರುಹೋಗುತ್ತಿದ್ದರು. ಒಂದು ವಾರ ಅಥವಾ ವಾರದಲ್ಲಿ ಎರಡು ಮೂರು ದಿನಗಳು ಇಂತಹ ಜಾತ್ರೆಗಳು ನಡೆಯುತ್ತಿದ್ದವು. ಪ್ರಭುತ್ವ ಇಂತಹ ಜಾತ್ರೆಗಳನ್ನು ಪ್ರೋತ್ಸಾಹಿಸುತ್ತಿತ್ತು. ಜಾತಿ, ವರ್ಗಗಳ ಬೇಧಭಾವವಿಲ್ಲದೆ ಎಲ್ಲ ಮನಸ್ಸಿನವರು ಲಿಂಗಭೇದ ತೊರೆದು ಭಕ್ತಿಪೂರ್ವಕವಾಗಿ ಭಾಗವಹಿಸುತ್ತಿದ್ದರು. ಜಾತ್ರೆಯಲ್ಲಿ ವಸ್ತುಗಳನ್ನು ಖರೀದಿಸುವಲ್ಲಿ ಹಾಗೂ ಇತರ ಕಾರ್ಯಕ್ರಮವನ್ನು ವೀಕ್ಷಿಸುವಲ್ಲಿ ಮಾತ್ರ ಎಲ್ಲ ವರ್ಗದವರಿಗೆ ಮುಕ್ತವಾಗಿ ಹೋಗಲು ಅವಕಾಶಗಳು ಇದ್ದವು. ದೇವಾಲಯದಲ್ಲಿ ನಡೆಯುವ ಆರಾಧನೆ ಮತ್ತು ಅಭಿಷೇಕಗಳಿಗೆ ಕೆಲವರಿಗೆ ಮಾತ್ರ ಮೀಸಲಾಗಿರುವ ವ್ಯವಸ್ಥೆಯನ್ನು ಮಾಡಿದರು.[೪೫]

ಜಾತ್ರೆಗಳಲ್ಲಿ ಸಾಮಾಜಿಕ ಅಂತಸ್ತಿನ ಆಚರಣೆಯು ಕಂಡುಬಂದರೂ ಉಳಿದ ಸಮಯದಷ್ಟು ಕಂಡುಬರುವುದಿಲ್ಲ. ಗ್ರಾಮದ ಎಲ್ಲ ಸಮುದಾಯದ ಜನರು ಒಂದುಗೂಡಿ ಆಚರಣೆ ಮಾಡುತ್ತಿರುವುದರಿಂದ ಇಲ್ಲಿ ವರ್ಣ ವ್ಯವಸ್ಥೆಯ ಪ್ರಭಾವ ಕಡಿಮೆ ಇರುವುದನ್ನು ಗಮನಿಸಬಹುದು. ಈ ಪ್ರದೇಶದಲ್ಲಿ ಜಾತ್ರೆ ಮತ್ತು ಹಬ್ಬಗಳು ಹಿಂದೂ ಮತ್ತು ಮುಸ್ಲಿಮ್ ಸಮುದಾಯಗಳಲ್ಲಿ ಸೌಹಾರ್ದತೆಯನ್ನು ಮೂಡಿಸುವ ಕಾರ್ಯ ಮಾಡುತ್ತಿದ್ದುದು ಗಮನಾರ್ಹ. ಹಿಂದೂ ಧರ್ಮಕ್ಕೆ ಸಂಬಂಧಿಸಿದ ದೇವರುಗಳ ಜಾತ್ರೆಯಲ್ಲಿ ಮುಸ್ಲಿಮರು ಭಾಗವಹಿಸುವುದು ಕಂಡುಬರುತ್ತದೆ. ಉದಾಹರಣೆಗೆ ಗುಲಬರ್ಗಾ ಶ್ರೀ

ಶರಣಬಸವೇಶ್ವರ ದೇವಸ್ಥಾನದಲ್ಲಿ ನಡೆಯುವ ಶರಣ ಉತ್ಸವಲ್ಲಿ ಆವತ್ತಿನಿಂದ ಇವತ್ತಿನವರೆಗೂ ಮುಸ್ಲಿಮರು ಭಾಗವಹಿಸುತ್ತಿರುವುದು ಗಮನಾರ್ಹವಾಗಿದೆ.[೪೬] ಕೊಪ್ಪಳ ಗವಿಸಿದ್ಧೇಶ್ವರ ಜಾತ್ರೆಗೆ ಕೂಡ ಮುಸ್ಲಿಮ್ ಸಮುದಾಯದವರು ಭಾಗವಹಿಸುತ್ತಿದ್ದರು. ಈ ಜಾತ್ರೆಯಲ್ಲಿ ವಿಶೇಷವಾಗಿ ನಿಜಾಮ್ ಪ್ರಧಾನಮಂತ್ರಿಯಾದ ಒಂದನೆಯ ಸಾಲಾರಜಂಗನು ಆಗಮಿಸುತ್ತಿದ್ದನು. ಕೊಪ್ಪಳ ಜಹಾಗೀರ ಅಧಿಕಾರಿಯಾದ ಮಿರಲಮ್ ಬಹಾದ್ದೂರನ ರೋಗವನ್ನು ಗುಣಪಡಿಸಿದ್ದರಿಂದ ಗವಿಮಠಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಆರ್ಥಿಕ ಮತ್ತು ಸಾಮಾಜಿಕವಾದ ಬೆಂಬಲವನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿದ್ದ ಹಿಂದೂ ದೇವಾಲಯಗಳಿಗೆ ಮುಸ್ಲಿಮರು ತೆಂಗಿನಕಾಯಿ, ಕರ್ಪೂರಗಳನ್ನು ತೆಗೆದುಕೊಂಡು ಅವರ ಆಚರಣೆಯಲ್ಲಿ ಭಾಗವಹಿಸುತ್ತಿದ್ದರು.[೪೭]

ಸಾಮಾನ್ಯವಾಗಿ ಜಾತ್ರೆ ನಡೆಯುವ ಸ್ಥಳಗಳು ನೀರು, ನೆರಳು ಸಾಕಷ್ಟು ಸ್ಥಳಾವಕಾಶ, ರಸ್ತೆ, ಆಹಾರ ಮುಂತಾದ ಸೌಕರ್ಯಗಳು ಸಿಗುವ ಸ್ಥಳಗಳಾಗಿದ್ದವು. ಅದೊಂದು ಕ್ಷೇತ್ರ ಮಹಿಮೆ ಇರುತ್ತದೆ. ಇಂತಹ ಸ್ಥಳಗಳಲ್ಲಿ ಜನರು ತಮ್ಮ ವರ್ಷದ ದುಡಿಮೆಯ ವಿರಾಮ ಸಿಗುವ ಕಾಲದಲ್ಲಿ ಜಾತ್ರೆ, ಉತ್ಸವಗಳನ್ನು ನೆರವೇರಿಸಿ ಸಂತೋಷ ಪಡುತ್ತಾರೆ. ಜಾತ್ರೆಗಳಿಂದ ಕೇವಲ ಮನರಂಜನೆಯಿಲ್ಲದೆ ಕೆಲವೊಮ್ಮೆ ಗ್ರಾಮಗಳಿಗೆ, ಗ್ರಾಮ ಗ್ರಾಮಗಳ ನಡುವೆ ಉಂಟಾದ ಕಲಹ ವ್ಯಾಜ್ಯಗಳನ್ನು ಜಾತ್ರೆಯಲ್ಲಿ ದೈವ ಸನ್ನಿಧಿಯ ಸಾಕ್ಷಿಯಲ್ಲಿ ಇತ್ಯರ್ಥಪಡಿಸುತ್ತಿದ್ದರು. ಜಾತ್ರೆಗಳು ಗ್ರಾಮೀಣ ಜನತೆಯ ವ್ಯಾಪಾರ ಕೇಂದ್ರಗಳು ಆಗಿರುತ್ತಿದ್ದವು. ತಾವು ಬೆಳೆದ ದವಸ ಧಾನ್ಯಗಳು ಉತ್ಪಾದಿಸಿದ ಅಪರೂಪದ ವಸ್ತುಗಳು, ಜಾನುವಾರುಗಳು ಇತ್ಯಾದಿ ಕೂಡಿಕೊಳ್ಳುವ ಕೇಂದ್ರಗಳಾಗಿಯೂ ಕೆಲವು ಜಾತ್ರೆಗಳು ಪ್ರಸಿದ್ಧಿ ಪಡೆದಿವೆ. ಅದಕ್ಕಾಗಿ ಜಾತ್ರೆ ಸೇರುವ ಸ್ಥಳದ ರಸ್ತೆ ಬದಿಗಳಲ್ಲಿ ಹಲವು ರೀತಿಯ ಅಂಗಡಿ ಮುಂಗಟ್ಟುಗಳು ಸೇರುತ್ತವೆ.[೪೮]

ಇನ್ನೊಂದು ಪ್ರಮುಖವಾದ ಸಂಗತಿಯೆಂದರೆ ಜಾತ್ರೆಯ ಗ್ರಾಮೀಣ ಕರಕುಶಲ ಕಲೆಗಳನ್ನು ಕೈಗಾರಿಕೆಗಳನ್ನು ಉಳಿಸುವ ಹಾಗೂ ಬೆಳೆಸುವ ದಿಸೆಯಲ್ಲಿ ಸಹಕಾರಿಯಾಗಿದೆ. ಜಾತ್ರೆಯ ಉತ್ಸವ ಮೂರ್ತಿಗಳನ್ನು ಮಾಡುವ ಅಕ್ಕಸಾಲಿಗ, ಜಿನಗಾರ, ಕರಗಳೆ ಮೊದಲಾದವರು ಮಡಿಕೆ ಕುಡಿಕೆಗಳು ಮಾಡುವಲ್ಲಿ ಕುಂಬಾರ, ತೇರು ನಿರ್ಮಿಸುವಲ್ಲಿ ಬಡಿಗ, ಕಬ್ಬಿಣದ ಪರಿಕಾರಗಳಿಗಾಗಿ ಕಂಬಾರ, ಮರ, ಬುಟ್ಟಿ ಮಾಡುವ ಮೇದಾರರು ಹಾಗೆ ಅನೇಕ ವೃತ್ತಿಗಾರರು ಜಾತ್ರೆಗೆ ವಿಧಿ ಪೂರ್ವಕವಾಗಿ ಆಮಂತ್ರಿತರಾಗಿರುತ್ತಾರೆ.

ಜಾತ್ರೆಗಳಿಂದ ಹಲವಾರು ಪ್ರಯೋಜನೆಗಳಿವೆ; ಹಾಗೆಯೇ ಕೆಲವು ತೊಡಕುಗಳಿವೆ. ಜಾತ್ರೆಯಲ್ಲಿ ನಡೆಯುವ ಆಚರಣೆಗಳು, ವೈಚಾರಿಕತೆಯನ್ನು ಬೆಳೆಸುವುದಿಲ್ಲ. ಬದಲಾಗಿ ಅಂಧಾನುಕರಣೆಯನ್ನು ಮೌಢ್ಯವನ್ನು ಬಿತ್ತುತ್ತವೆ. ಅನೇಕ ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ಬೆಳೆಸುತ್ತವೆ. ಈ ಹಿನ್ನೆಲೆಯಲ್ಲಿ

ಆಲೋಚಿಸುವಾಗ ಮೊದಲು ಕಾಣುವುದು ಬಸವಿ ಪದ್ಧತಿ ಮತ್ತು ಬೆತ್ತಲೆ ಸೇವೆಯಂತಹ ಅನಿಷ್ಟ ಪದ್ಧತಿಗಳು. ಇವನ್ನು ಆಚರಣೆಗೆ ತರುವ ಮೂಲಕ ದೇವರ ಹೆಸರಿನಲ್ಲಿ ಅಮಾಯಕ ಹೆಣ್ಣು ಮಕ್ಕಳ ಬೆತ್ತಲೆ ದೇಹವನ್ನು ನೋಡಿ ಆನಂದಿಸುವ ಪದ್ಧತಿಗಳನ್ನು ಆಚರಣೆಗೆ ತಂದಿರುವುದು ಗಮನಿಸಬಹುದು.

ಜಾತ್ರೆಗಳು ಹಿಂಸೆಯನ್ನು ಪ್ರತಿಪಾದಿಸುತ್ತವೆ. ದೇವರ ಹೆಸರಿನಲ್ಲಿ ಕುರಿ ಇಲ್ಲವೆ ಕೋಣ ಮುಂತಾದ ಜೀವ ಜಂತುಗಳನ್ನು ಬಲಿ ನೀಡುವುದು, ಹಾಗೇ ಸಿಡಿ ಆಡುವುದು, ಮುಳ್ಳು ಗದ್ದುಗೆ ಸೇವೆ, ಚಾವಡಿ ಸೇವೆ, ಗಾವು ಸಿಗಿಯುವುದು ಮುಂತಾದ ಆಚರಣೆ ಮೂಲಕ ಹಿಂಸೆಯನ್ನು ಬೆಂಬಲಿಸುತ್ತದೆ.[೪೯]

ಜಾತ್ರೆಯಲ್ಲಿ ಎಷ್ಟೇ ಏಕತೆ ಭಾವ ಮೂಡಿದರೂ ಗುಪ್ತಗಾಮಿನಿಯಾಗಿ ಇಲ್ಲವೆ ಪರೋಕ್ಷವಾಗಿ ವರ್ಣಾಶ್ರಮ ಪದ್ಧತಿಯನ್ನು ಜೀವಂತವಾಗಿರಿಸುವಲ್ಲಿ ತಕ್ಕಮಟ್ಟಿಗೆ ಪ್ರಯತ್ನ ಇರುತ್ತದೆ. ಜಾತ್ರೆಗಳಲ್ಲಿ ನಡೆಯುವ ಕೆಲ ಆಚರಣೆಗಳ ಮೂಲಕ ಯಾವ ಯಾವ ಜಾತಿಯವರು ಏನೇನು ವೃತ್ತಿ ಮಾಡಬೇಕು ಮತ್ತು ತಲೆಮಾರುಗಳವರೆಗೆ ಅದನ್ನೇ ಮುಂದುವರೆಸಿಕೊಂಡು ಹೋಗಬೇಕು ಎಂಬುದನ್ನು ಪ್ರತಿಪಾದಿಸುತ್ತದೆ. ಈ ಮೂಲಕ ಅಭಿರುಚಿಗೆ ತಕ್ಕ ವೃತ್ತಿಯ ಆಯ್ಕೆಯನ್ನು ಸ್ವಲ್ಪಮಟ್ಟಿಗೆ ನಿರ್ಬಂಧಿಸಿ ದಂತಾಗುತ್ತದೆ.[೫೦]

೬.೪.೧.೨. ಹರಕೆಗಳು

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಿಂದೂ ಮುಸ್ಲಿಮರು ದೇವರ ಆರಾಧನೆಯಲ್ಲಿ ಅನೇಕ ವಿಧಗಳು ಕಂಡುಬರುತ್ತವೆ. ಹಿಂದೂ ಸಂಪ್ರದಾಯಗಳು ಮುಸ್ಲಿಮ್ ಹಬ್ಬಗಳಲ್ಲಿ ಮತ್ತು ಆರಾಧನೆಯಲ್ಲಿ ಪ್ರಭಾವಿಸಿರುವುದು ಕೂಡ ಕಂಡುಬರುತ್ತದೆ. ಅಂತಹ ಆರಾಧನೆಗಳಲ್ಲಿ ಹರಕೆ ಕೂಡ ಒಂದಾಗಿದೆ. ದೇವರಲ್ಲಿ ಹರಕೆಯನ್ನು ಹೊತ್ತುಕೊಳ್ಳುವುದು ಹಿಂದೂ ಸಂಪ್ರದಾಯವಾಗಿದೆ. ಇದು ಮುಸ್ಲಿಮರಲ್ಲಿ ಕೂಡ ಕಂಡುಬರುತ್ತದೆ. ಅದರಲ್ಲಿ ವಿಶೇಷವಾಗಿ ಹಿಂದೂಗಳು ಮುಸ್ಲಿಮ್ ದೇವರಲ್ಲಿ ಹರಕೆಯನ್ನು ಹೊತ್ತುಕೊಳ್ಳುವುದು ವಿಶೇಷವಾಗಿ ಕಂಡುಬರುತ್ತದೆ. ಮುಸ್ಲಿಮ್ ದೇವರಿಗೆ ಹೆಚ್ಚಾಗಿ ಕೆಳವರ್ಗದ ಜನರು ಹರಕೆ ಹೊತ್ತುಕೊಂಡಿರುತ್ತಾರೆ. ಮೇಲ್ವರ್ಗದ ಜನರು ಹರಕೆ ಹೊತ್ತುಕೊಳ್ಳುವ ಸಂಖ್ಯೆ ತೀರಾ ಕಡಿಮೆ. ಹರಕೆ ಎಂದರೆ ದೇವರಲ್ಲಿ ತಮಗೆ ಕಷ್ಟದ ಸಮಯಕ್ಕೆ ಆ ಕೆಲಸವನ್ನು ಆಗಲಿ ಅದಕ್ಕೆ ನನ್ನ ಮಕ್ಕಳ ಹೆಸರು ಜೆಡೆ ತೆಗೆಯುವ ಕಾರ್ಯವನ್ನು ಮಾಡುತ್ತೇನೆ, ಇಲ್ಲವೇ ದೀಡ್ ನಮಸ್ಕಾರ ಹಾಕುತ್ತೇನೆಂದು ಹರಕೆಯನ್ನು ಹೊತ್ತುಕೊಂಡಿರುತ್ತಾರೆ. ಅಂತಹ ಹರಕೆಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೧. ಜವಳ ಕಾರ್ಯಕ್ರಮ : ಸಾಮಾನ್ಯವಾಗಿ ಇದರಲ್ಲಿ ಎರಡು ರೀತಿಯ ಹರಕೆಗಳಿವೆ. ಮೊದಲನೆಯದು ಮದುವೆಯಾದ ನವದಂಪತಿಗಳಿಗೆ ಮಕ್ಕಳಾಗಲೆಂದು ಹರಕೆ ಹೊತ್ತರೆ ಮಗುವಾದ ಮೇಲೆ ಅದು ಅನಾರೋಗ್ಯಕ್ಕೆ ತುತ್ತಾದರೆ ಹರಕೆ ಕಟ್ಟಿಕೊಳ್ಳುತ್ತಾರೆ. ನಮ್ಮ ಮಗುವಿನ ತಲೆ ಕೂದಲನ್ನು ನಿನಗೆ ಒಪ್ಪಿಸುತ್ತೇವೆ ಎಂದು ಹರಕೆ ಹೊತ್ತು ಜಾತ್ರೆಯ ಸಮಯದಲ್ಲಿ ತಮ್ಮ ಹರಕೆಯಂತೆ ಜವಳವನ್ನು ತೆಗೆಸುವುದನ್ನು ಗಮನಿಸಬಹುದು.[೫೧]

೨. ದೀಡು ನಮಸ್ಕಾರ : ಸಾಮರಸ್ಯದ ಕೇಂದ್ರದಲ್ಲಿ ಸಾಮಾನ್ಯವಾಗಿ ಎರಡು ಧರ್ಮೀಯರು ಮಾಡಿಕೊಳ್ಳುವ ಹರಕೆ ಎಂದರೆ ದೀಡು ನಮಸ್ಕಾರ. ಒಂದೂವರೆ ನಮಸ್ಕಾರ ಸಾಷ್ಟಾಂಗ ನಮಸ್ಕಾರ ಮಾಡಿ ಬಲಗೈಯನ್ನು ಮುಂದೆ ಚಾಚಿ ಕೈಯಲ್ಲಿ ಹಿಡಿದಿರುವ ದಂಡದ ಗೆರೆ ಹಾಕಿ ನಾಲ್ಕು ಹೆಜ್ಜೆ ಮುಂದೆ ಇಟ್ಟು ಅಡ್ಡ ಬೀಳುತ್ತಾರೆ. ಹೀಗೆ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಈ ಹರಕೆ ಒಪ್ಪಿಸುವವರ ಹಿಂದೆ ಅವರ ಸಂಬಂಧಿಕರು ಒಂದು ಬಿಂದಿಗೆಯಲ್ಲಿ ನೀರನ್ನು ತಂದು ದೇವಸ್ಥಾನದ ಹತ್ತಿರ ಅವರ ಮೇಲೆ ಸುರಿದು ಅವರು ಧರಿಸುವ ವಸ್ತ್ರಗಳನ್ನು ಒದ್ದೆಗೊಳಿಸುತ್ತಾರೆ. ಒದ್ದೆಗೊಳಿಸಿದ ನಂತರ ದೇವಸ್ಥಾನದ ಸುತ್ತ ಮೂರು ಬಾರಿ ದೀಡ್ ನಮಸ್ಕಾರ ಹಾಕುತ್ತಾರೆ.[೫೨]

೩. ತುಲಾಭಾರ ಹರಕೆ : ಹಿಂದೂ ಮುಸ್ಲಿಮ್ ಸಾಮರಸ್ಯದ ಎಲ್ಲ ಕೇಂದ್ರಗಳಲ್ಲಿ ಸಾಮಾನ್ಯವಾಗಿ ಮಾಡಿಕೊಳ್ಳುವ ಹರಕೆಗಳಲ್ಲಿ ಇದು ಕೂಡ ಒಂದು. ಹರಕೆ ಮಾಡಿಕೊಳ್ಳುವವರು ಹರಕೆಯು ಫಲಿಸಿದ ನಂತರ ಜಾತ್ರೆ ಸಮಯದಲ್ಲಿ ಅಥವಾ ಬಿಡುವಿನ ವೇಳೆಯಲ್ಲಿ ಬಂದು ತುಲಾಭಾರವನ್ನು ಮಾಡಿಸುತ್ತಾರೆ. ತುಲಾಭಾರ ಮಾಡಿಸಿದಾಗ ಅವರ ತೂಕದಷ್ಟು ಸಕ್ಕರೆಯನ್ನು ಅಥವಾ ಇತರೆ ಧಾನ್ಯಗಳ ಮೂಲಕ ದೇವರಿಗೆ ಅರ್ಪಿಸಿ ಹರಕೆಯನ್ನು ಪೂರ್ಣಗೊಳಿಸುತ್ತಾರೆ.[೫೩]

೪. ಗಲೀಫ್ ಕೂಡಿಸುವುದು: ಹರಕೆ ಮಾಡಿಕೊಂಡವರು ತಾವೂ ಮಾಡಿಕೊಂಡ ಹರಕೆ ಪೂರ್ಣವಾದಾಗ ಸಾಮರಸ್ಯ ಕೇಂದ್ರಗಳಲ್ಲಿ ಜರುಗುವ ಜಾತ್ರೆ ಉತ್ಸವಗಳಲ್ಲಿ ಪಾಲ್ಗೊಂಡು ಹರಕೆಯು ಭಾಗವಾದ ಗಲೀಫವನ್ನು ಕೂಡಿಸುವುದರ ಮೂಲಕ ತಮ್ಮ ಹರಕೆಯನ್ನು ಪೂರ್ಣಗೊಳಿಸುತ್ತಾರೆ. ಈ ರೀತಿಯ ಹರಕೆಯನ್ನು ಜಾತ್ರೆಯ ಸಮಯದಲ್ಲಿ ಭಕ್ತರು ದೇವರಿಗೆ ಅರ್ಪಿಸುತ್ತಾರೆ.[೫೪]

೫. ಉರುಳು ಸೇವೆ : ಉರುಳು ಸೇವೆಯ ಹರಕೆ ಹೊತ್ತಿರುವವರು ದೇವಾಲಯದ ಮುಂದೆ ಹರಕೆಯ ತೀರಿಸುವರ ಮೇಲೆ ನೀರನ್ನು ಹಾಕಿ ಸಂಪೂರ್ಣವಾಗಿ ಒದ್ದೆ ಮಾಡುತ್ತಾರೆ. ನಂತರ ಅವರು ದೇವಾಲಯದ ಸುತ್ತ ಉರುಳು ಸೇವೆಯನ್ನು ಮಾಡುತ್ತಾರೆ. ಉರುಳು ಸೇವೆಯನ್ನು ಮಾಡುವವರ ಮುಂದೆ ಕೆಲವರು ನೀರನ್ನು ಚಿಮುಕಿಸುತ್ತಾರೆ. ಸಂಪೂರ್ಣವಾಗಿ ದೇವಾಲಯದ ಸುತ್ತ ಮೂರು ಬಾರಿ ಅಥವಾ ಐದು ಬಾರಿ ಉರುಳು ಸೇವೆಯನ್ನು ಮಾಡುವುದರ ಮೂಲಕ ತಮ್ಮ ಹರಕೆ ತೀರಿಸಿಕೊಳ್ಳುತ್ತಾರೆ.[೫೫]

೬. ಬೆಳ್ಳಿಯ ಕುದುರೆಯನ್ನು ಮಾಡಿಸಿಕೊಡುವುದು : ಈ ರೀತಿಯ ಹರಕೆಯನ್ನು ಹೊತ್ತುಕೊಂಡಿರುವ ಭಕ್ತರು ಹರಕೆ ಪೂರ್ಣಗೊಂಡರೆ ಹರಸಿಕೊಂಡ ದೇವರ ಜಾತ್ರೆಗೆ ಅಥವಾ ಬಿಡುವಿನ ವೇಳೆಯಲ್ಲಿ ಆ ಕ್ಷೇತ್ರಕ್ಕೆ ಭೇಟಿ ನೀಡಿ ತಾವು ಅಂದುಕೊಂಡ ಹರಕೆಯನ್ನು ಅರ್ಪಿಸುತ್ತಾರೆ. ಬೆಳ್ಳಿಯ ಕುದುರೆಗಳನ್ನು ಅಥವಾ ತೊಟ್ಟಿಲು ಮುಂತಾದ ಹರಕೆಗಳನ್ನು ಮಾಡಿಸಿಕೊಡುವುದು ಕಂಡುಬರುತ್ತದೆ. ತಮಗೆ ಸಂತಾನ ಪ್ರಾಪ್ತಿಯಾದರೆ ನಿನಗೆ ಬೆಳ್ಳಿಯ ತೊಟ್ಟಿಲನ್ನು ಮಾಡಿಸಿಕೊಡುವೆ ಎಂಬುದಾಗಿ ಹರಕೆ ಮಾಡಿಕೊಂಡವರು ಅವರಿಗೆ ಸಂತಾನ ಪ್ರಾಪ್ತಿಯಾದಾಗ ಹರಕೆಯನ್ನು ತೀರಿಸುವ ಪದ್ಧತಿ ಕಂಡುಬರುತ್ತದೆ.[೫೬]

೬.೪.೧.೩. ಮೊಹರಂ

ಹೈದರಾಬಾದ್ ಕರ್ನಾಟಕದಲ್ಲಿ ಮೊಹರಂ ಹಬ್ಬದ ಆಚರಣೆ ಬಹಳ ವಿಶಿಷ್ಟವಾಗಿ ಆಚರಿಸುತ್ತಾರೆ. ಈ ಮೊಹರಂ ಹಬ್ಬದ ಮೂಲವು ಏಳನೇ ಶತಮಾನದಲ್ಲಿ ಅರಬಸ್ಥಾನದಲ್ಲಿ ನಡೆದ ದಾಯಾದಿ ಕಲಹದ ಹಿನ್ನೆಲೆಯನ್ನು ಹೊಂದಿದೆ. ರಕ್ತಸಿಕ್ತವಾಗಿದ್ದ ಈ ಕಲಹಗಳಲ್ಲಿ ಎಳೆಯ ಮಕ್ಕಳು ಸಹ ಪ್ರಾಣ ಕಳೆದುಕೊಳ್ಳಬೇಕಾಯಿತು. ಈ ಕುರಿತು ಜನಪದರು ಶೋಕಗೀತೆ ಹಾಡುವರು. ಅವನ್ನು ಮೊಹರಂ ಹಾಡುಗಳು, ರಿವಾಯತ್ ಪದಗಳು, ಕರ್ಬಾಲ ಪದಗಳು, ಜಂಗಿನ ಪದಗಳು, ಆಲಾವಿ ಹಾಡುಗಳೆಂದು ಕರೆಯುತ್ತಾರೆ. ಅರಬರ ಈ ದಾಯಾದಿ ಸಂಘರ್ಷದ ರಾಜಕೀಯ ಚರಿತ್ರೆ ಮೊಹರಂ ಆಚರಣೆಯ ರೂಪತಾಳಿದ ಬಳಿಕ ಇಸ್ಲಾಂ ನಾನಾ ಭಾಗಗಳಿಗೆ ಹೋಯಿತು ಮತ್ತು ಅರಬೇತರ ದೇಶಗಳಲ್ಲಿ ವಿಭಿನ್ನ ರೂಪಾಂತರ ಪಡೆಯಿತು. ಪ್ರಥಮ ಘಟ್ಟದಲ್ಲಿ ಭಾರತಕ್ಕೆ ಇದು ಇರಾನಿನಿಂದ ಶಿಯಾ ಪಂಗಡದ ದೊರೆ, ಅಧಿಕಾರಿ, ವ್ಯಾಪಾರಿ, ಸೈನಿಕ ಹಾಗೂ ವಿದ್ವಾಂಸರ ಜೊತೆ ಬಂದಿತು. ಭಾರತದಿಂದ ಕರ್ನಾಟಕಕ್ಕೆ ಬಂದಿತು. ಭಾರತಕ್ಕೆ ಶಿಯಾಗಳ ನಾಡಾದ ಇರಾನಿನ ಜತೆ ರಾಜಕೀಯ ಧಾರ್ಮಿಕ ಸಾಂಸ್ಕೃತಿಕ ಒಡನಾಟ ಮೊದಲಿಂದಲೂ ಇದ್ದ ಕಾರಣ ಮೊದಲ ಘಟ್ಟದ ಮೊಹಮ್ಮದಗೆ ಸಹಜವಾಗಿಯೇ ಪರ್ಶಿಯನ್ ಆಯಾಮವಿತ್ತು. ಆದರೆ ಮುಂದೆ ಅದು ಸ್ಥಳೀಯ ಸಮಾಜಗಳ ಜತೆ ಬೆರೆತು ಹೊಸ ರೂಪಾಂತರ ಪಡೆದುಕೊಂಡಿತು. ಹಾಡು ಸಂಗೀತ ಕುಣಿತ ಸೂಗುಗಳಿಂದ ಕೂಡಿ ಊರ ಹಬ್ಬವಾಗಿ ಮಾರ್ಪಟ್ಟಿತು. ಹೀಗೆ ಮೊಹರಂ ಸ್ಥಳೀಯ ರೂಪಾಂತರ ಪಡೆದುಕೊಂಡರೂ ಭಾರತದ ಶಿಯಾಗಳು ಇದನ್ನು ಪರ್ಶಿಯನ್ ಮೂಲರೂಪದಲ್ಲೇ ಆಚರಿಸುವರು. ಹೈದರಾಬಾದ್, ಲಖನೋ ಹಾಗೂ ಕರ್ನಾಟಕದಲ್ಲಿ ನಡೆಯುವ ಶಿಯಾಗಳ ಮೊಹರಂನಲ್ಲಿ ಇದನ್ನು ಕಾಣಬಹುದು. ಉಳಿದಂತೆ ಕರ್ನಾಟಕದ ಹೆಚ್ಚಿನ ಪ್ರದೇಶಗಳಲ್ಲಿ ಮುಸ್ಲಿಮೇತರ ಸಮುದಾಯಗಳು ಭಾಗವಹಿಸುವಿಕೆಯ ಕಾರಣದಿಂದ ಮೊಹರಂ ಸಾರ್ವಜನಿಕ ಆಚರಣೆಯಾಗಿದೆ.

ಕರ್ನಾಟಕದ ಸುಮಾರು ೧೦–೧೫ ಸಾವಿರ ಹಳ್ಳಿಗಳಲ್ಲಿ ಇದು ಊರ ಹಬ್ಬವಾಗಿ ನಡೆಯುತ್ತದೆ. ಇದರಲ್ಲಿ ಸಾವಿರಾರು ಶಾಹಿರರು ಮತ್ತು ಗಾಯಕರು ಹಾಡುವರು. ಅರಬಸ್ಥಾನ, ಭಾರತ ಹಾಗೂ ಕರ್ನಾಟಕದ ಧಾರ್ಮಿಕ ಚಾರಿತ್ರಿಕ ಸಾಂಸ್ಕೃತಿಕ ಸಂಗತಿಗಳನ್ನು ಹೊಟ್ಟೆಯೊಳಗೆ ಇರಿಸಿಕೊಂಡಂತೆ ತೋರುವ ಮೊಹರಂ ಏಕಕಾಲಕ್ಕೆ ಶೋಕಾಚರಣೆಯೂ ಸಂಭ್ರಮಾಚರಣೆಯೂ ಆಗಿದೆ. ಪ್ರಾದೇಶಿಕ ವಿಶಿಷ್ಟತೆಗಳನ್ನು ಮೈಗೂಡಿಸಿಕೊಳ್ಳಲು ಭಾರತ ಮತ್ತು ಕರ್ನಾಟಕದ ವಿವಿಧ ಪ್ರಭುತ್ವದ ಪಾಲೂ ಇದೆ.[೫೭]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಮುಸ್ಲಿಂ ಮನೆತನಗಳು ಶಿಯಾ ಪಂಥಕ್ಕೆ ಸೇರಿದವರಾಗಿದ್ದರು. ಅವುಗಳೆಂದರೆ ಬಹಮನಿ, ಆದಿಲ್‌ಶಾಹಿ, ಕುತುಬಶಾಹಿ ಮತ್ತು ಹೈದರಾಬಾದ್ ನಿಜಾಮರು. ಶಿಯಾ ಪಂಥ ಬಹಮನಿಯವರ ಕಾಲದಲ್ಲಿ ಬಲವಾಗಿ ನೆಲೆಯೂರಿತ್ತು. ಬಹಮನಿ ಕಾಲಾವಧಿಯಲ್ಲಿ ಗುಲಬರ್ಗಾಕ್ಕೆ ಸುಲ್ತಾನನ ಆಹ್ವಾನದ ಮೇರೆಗೆ ಆಗಮಿಸಿದ ಚಿಸ್ತಿ ಸೂಫಿ ಬಂದೇ ನವಾಜ್ ಘೇಸುದರಾಜ್ ಗೋಲ್ಕೊಂಡದ ಕುತುಬಶಾಹಿಗಳ ಬಳಿಕ ಆಳ್ವಿಕೆ ಮಾಡಿದ ಹೈದರಾಬಾದ್ ನಿಜಾಮರು ಶಿಯಾಗಳಾಗಿದ್ದು ಮಹಮ್ಮದ ಪೈಗಂಬರಗೆ ಪ್ರಭುತ್ವದ ಉತ್ತೇಜನ ಮುಂದು ವರೆಸಿದರು. ಈಗಲೂ ಹೈದರಾಬಾದಿನಲ್ಲಿ ಹುಸೇನರ ೭೨ ಅನುಯಾಯಿಗಳ ಹೆಸರಲ್ಲಿ ಅಲಂ ಕೂರಿಸುವ ಪದ್ಧತಿಯಿದೆ. ನವಾಜ್ ನಿಜಾಮ್ ನಾಸಿರು ದೌಲನು ಮೊಹರಂನಲ್ಲಿ ಖೀರು–ಖಿಚಡಿ ಹಂಚುವ ಪದ್ಧತಿಯನ್ನು ಆರಂಭಿಸಿದನು. ನವಾಬನು ಸ್ವತಃ ಮರ್ಸಿಯಾ ಕವಿಯಾಗಿದ್ದು, ಮಜಲಿಸಗಳು ಅವನ ವಾಚನದಿಂದ ಆರಂಭವಾಗುತ್ತಿದ್ದವು. ಭಾರತದಲ್ಲಿ ಲಖ್ನೋನ ಬಿಟ್ಟರೆ ಮೊಹರಂ ದೊಡ್ಡ ಪ್ರಮಾಣದಲ್ಲಿ ನಡೆಯುವುದು ಹೈದರಾಬಾದಿನಲ್ಲಿ. ಆಗ ಲಖ್ನೋ– ಹೈದರಾಬಾದ್ ನಗರಗಳ ಕವಿಗಳು ಕಪ್ಪು ಬಟ್ಟೆಯ ಮೇಲೆ ಶೋಕಗೀತೆ ಬರೆದು ತೂಗುಹಾಕುವ ಮರ್ಸಿಮಾ ಪಟಗಳಿಂದ ತುಂಬಿಹೋಗುತ್ತವೆ. ರಾಜಕೀಯ ಕದನದ ದುರಂತವೊಂದು ಜಗತ್ತಿನಾದ್ಯಂತ ಶಿಯಾಗಳಲ್ಲಿ ಕಾವ್ಯ ಪ್ರಜ್ಞೆಯನ್ನು ವೃದ್ಧಿಪಡಿಸಿರುವುದು ವಿಶೇಷವಾಗಿದೆ. ಕರ್ನಾಟಕದಲ್ಲಿ ಶಿಯಾ ಪಂಥದ ಮರ್ಸಿಯಾ ಕವಿಗಳು ಕೋಲಾರ ಸೀಮೆಯ ಶಿಯಾ ಗ್ರಾಮವಾದ ಅಲ್ಲಿಪುರದಲ್ಲಿದ್ದಾರೆ.

ಕುತುಬಶಾಹಿ ಹಾಗೂ ನಿಜಾಮರ ಕಾಲದಲ್ಲಿ ಮೊಹರಂ ತೆಲಂಗಾಣಕ್ಕೂ ರಾಯಲ ಸೀಮಾ ಪ್ರದೇಶಕ್ಕೂ ಹೈದರಾಬಾದ್ ಕರ್ನಾಟಕಕ್ಕೂ ಪಸರಿಸಿತು. ತೆಲುಗಿನಲ್ಲಿ ಮೊಹರಂ ಹಬ್ಬವನ್ನು ಪೀರಲ ಪಂಗಡವೆಂದೂ ಮಸೂತಿಯನ್ನು ಪೀರಲ ಚಾವಡಿಯೆಂದೂ ಕರೆಯುತ್ತಾರೆ. ತೆಲುಗಿನಲ್ಲಿ ಅಪಾರವಾದ ಅಲಾವಿ ಸಾಹಿತ್ಯವಿದೆ. ಅನಂತಪುರ ಜಿಲ್ಲೆಯ ಗೊಗೂಳ್ ಸುರಪುರ ಮೊಹರಂಗೆ ಖ್ಯಾತವಾಗಿದೆ. ಸೋಲಾಪುರದ ರಾಮಣ್ಣ ಎಂಬ ಕವಿ ತೆಲುಗಿನಲ್ಲಿ ಕರ್ಬಲಾ ಹಾಡು ರಚಿಸಿದನು. ಇಮಾಮಕ್ಕ–

ವನೂರಬೀ, ಗೀತಮ್ಮ ಎಂಬ ಮಹಿಳಾ ಶಾಹಿರರು ಕಾಣಿಸಿಕೊಂಡರು. ಈ ಭಾಗದಲ್ಲಿ ಹಿಂದೂಗಳು ಹುಸೇನರಾವ್, ಫಕೀರಪ್ಪ, ಹುಸೇನದಾಸ್, ಪೀರಲಯ್ಯ ಮುಂತಾದ ಕರ್ಬಲಾಕ್ಕೆ ಸಂಬಂಧಿಸಿದ ಹೆಸರಿಟ್ಟುಕೊಳ್ಳುವರು. ಹಬ್ಬದಲ್ಲಿ ಜಲಾಲಿ ಫಕೀರನ ಹರಕ ವೇಷ ಧರಿಸುವರು. ದೇವರಿಗೆ ಧಟ್ಟಿ (ಬಟ್ಟೆ) ಕಾಣಿಕೆ ಕೊಡುವರು. ತೆಲುಗು ಮತ್ತು ಉರ್ದು ಬಹುಕಾಲ ಜತೆಯಲ್ಲಿದ್ದ ಭಾಷೆಗಳಾದ ಕಾರಣ ಉರ್ದು ಪಾರಸಿಯಲ್ಲಿರುವ ಕರ್ಬಲಾ ಕಾಳಗದ ಮೇಲೆ ಹುಟ್ಟಿದ ಜಂಗಮಾ, ಪ್ರವಾದಿ, ಫಾತಿಮಾ, ಮೌಲಾ, ಹಸೇನ, ಹುಸೇನರ ಮೇಲೆ ಕಟ್ಟಲಾದ "ಪಂಜತನ ಪಾರ್" ಕಾವ್ಯ ತೆಲುಗಿಗೆ ಬಂದಿತು. ತೆಲುಗಿನಲ್ಲಿ ಕೋಲಾಟದ ಹಾಡುಗಳ ರೂಪದಲ್ಲಿ ಅಪರೂಪದ ಮರ್ಸಿಯಾ ಸಾಹಿತ್ಯ ಸೃಷ್ಟಿಯಾಗಿದೆ. ಇದಕ್ಕೆ ಹೋಲಿಸಿದರೆ ಕನ್ನಡ ಕರ್ಬಲಾ ಸಾಹಿತ್ಯಕ್ಕೆ ದಖನಿಯ ಜತೆ ನಡೆದಿರುವ ಕೊಳ್ಳುವಿಕೆ ಕಡಿಮೆ. ಆದರೆ ಹೈದರಾಬಾದ್ ನಿಜಾಮ್ ರಾಜ್ಯಕ್ಕೆ ಸೇರಿದ ಕನ್ನಡ ಪ್ರದೇಶಗಳಾದ ಬೀದರ, ಗುಲಬರ್ಗಾ, ರಾಯಚೂರು ಸೀಮೆಯಲ್ಲಿ ನಿಜಾಮರ ಸಭಾನಿ ಹಾಗೂ ತೆಲುಗಿನ ಜನಪದ ಎರಡು ಮೊಹರಂಗಳು ಪ್ರಭಾವ ಬೀರಿದ್ದವು. ಇವನ್ನು ಕರ್ನಾಟಕದ ಗಡಿಭಾಗದಲ್ಲಿ ಬರುವ ರಾಯಚೂರು ಜಿಲ್ಲೆಯ ಮುದಗಲ್ ಮತ್ತು ಕೊಪ್ಪಳ ಜಿಲ್ಲೆಯ ಕುದುರೆಮೊತಿಗಳಲ್ಲಿ ಕಾಣಬಹುದು.[೫೮]

ಜನರು ಊರೊಟ್ಟಿನ ಕಾರ್ಯವಾಗಿ ಅಲಂ ಕೂರಿಸುವಂತೆ ಪ್ರಭುತ್ವ ಕೂರಿಸುತ್ತಿತ್ತು. ಇದನ್ನು ಸರ್ಕಾರಿ ದೇವರು ಎಂದು ಜನ ಕರೆಯುತ್ತಿದ್ದರು. ಇದರ ಮೇಲ್ವಿಚಾರಣೆಯನ್ನು ಊರಲ್ಲಿನ ಸರ್ಕಾರದ ಪ್ರತಿನಿಧಿಗಳಾಗಿದ್ದ ಪೊಲೀಸ್ ಪಾಟೀಲ್, ಕುಲಕರ್ಣಿ ತಲಾಠಿಗಳು ನೋಡಿಕೊಳ್ಳುತ್ತಿದ್ದರು. ಈಗಲೂ ಗೋಲ್ಕೊಂಡದ ಕೋಟೆಯಲ್ಲಿರುವ ಅಶೂರಖಾನೆಯ ಕಾರ್ಯಕ್ರಮಗಳನ್ನು ಆಂಧ್ರ ಸರ್ಕಾರವೇ ತನ್ನ ಉಸ್ತುವಾರಿಯಲ್ಲಿ ನಡೆಸುತ್ತದೆ. ಮುದಗಲ್ ದೇವರನ್ನು ಹಿಡಿಯುವ ಕಾರ್ಯಕ್ಕೆ (ಅಲಂ ಬಂದಾರ) ಒಬ್ಬ ವ್ಯಕ್ತಿಯನ್ನು ನಿಜಾಮ ನೇಮಿಸುತ್ತಿದ್ದನು. ಆತನ ಸೇವೆಗಾಗಿ ಬೊಮ್ಮನಾಳ ಗ್ರಾಮದಲ್ಲಿ ಜಮೀನನ್ನು ಇನಾಮಾಗಿ ನೀಡಲಾಗುತ್ತಿತ್ತು. ಕರ್ನೂಲಿನ ನವಾಬರ ಮೊಹರಂ ಆಚರಣೆಗಳ ಪ್ರಭಾವವನ್ನು ರಾಯಚೂರು ಭಾಗದಲ್ಲಿ ಕಾಣಬಹುದಾಗಿದೆ. ಮುದಗಲಿನ ಫಾತಿಮಾ ದೇವರು ಕರ್ನೂಲ ನವಾಬರು ಮಾಡಿದ್ದು, ಮುದಗಲಿನ ಉಪಾರಪೇಟೆ ಮಸೂತಿಯಲ್ಲಿರುವ ಹಸನ ಅಲಂ ಸರ್ಕಾರಿ ದೇವರಾಗಿದ್ದು ಅದರ ವೆಚ್ಚ ನಿಜಾಮರ ಬೊಕ್ಕಸದಿಂದ ಬರುತ್ತಿತ್ತು.[೫೯]

೬.೪.೧.೪. ಧಾರ್ಮಿಕ ಆರಾಧನೆಗಳು

ಹೈದರಾಬಾದ್ ಕರ್ನಾಟಕ ಪ್ರದೇಶದ ಜನರ ಆರಾಧನೆ ವಿಶಿಷ್ಟತೆಯಿಂದ ಕೂಡಿರುವುದನ್ನು ಗಮನಿಸಬಹುದಾಗಿದೆ. ಪ್ರಾಚೀನ ಕಾಲದಿಂದಲೂ ಈ ಪ್ರದೇಶದಲ್ಲಿ ಸಾಮಾಜಿಕ ಶ್ರೇಣೀಕೃತ

ಸಮಾಜದಂತೆ ದೇವರಲ್ಲಿ ಕೂಡ ವಿಧಗಳನ್ನು ಗಮನಿಸಬಹುದಾಗಿದೆ. ಮೇಲ್ವರ್ಗದ ಸಮುದಾಯಗಳು ಹೆಚ್ಚಾಗಿ ಪುರುಷ ಕೇಂದ್ರಿತ ದೇವರನ್ನು ಆರಾಧಿಸಿದರೆ ಕೆಳವರ್ಗದವರು ಹೆಚ್ಚಾಗಿ ಸ್ತ್ರೀ ಕೇಂದ್ರಿತ ದೇವರುಗಳನ್ನು ಆರಾಧಿಸುತ್ತಾರೆ. ಪುರೋಹಿತಶಾಹಿಗಳು ತಮ್ಮ ಲಾಭಕ್ಕಾಗಿ ದೇವರಲ್ಲಿ ಕೂಡ ಭಿನ್ನತೆಯನ್ನು ಸೃಷ್ಟಿಸುವ ರೀತಿಯಲ್ಲಿ ವಿಭಜನೆಯನ್ನು ಮಾಡಿರುವುದನ್ನು ಗಮನಿಸಬಹುದಾಗಿದೆ. ಕೆಳವರ್ಗದ ಜನ ಸಮುದಾಯಗಳು ಹೆಚ್ಚಾಗಿ ಆರಾಧನೆ ಮತ್ತು ಭಯ ಭಕ್ತಿಯಿಂದ ನಡೆದುಕೊಳ್ಳುವುದು ಕಂಡುಬರುತ್ತದೆ. ಹಿಂದೂ ಧರ್ಮೀಯರಲ್ಲಿ ಬಹು ದೇವರಾಧನೆ ಚಾಲ್ತಿಯಲ್ಲಿದೆ.[೬೦] ಆದರೆ ಮುಸ್ಲಿಮರು ಧಾರ್ಮಿಕತೆಯಲ್ಲಿ ಏಕ ದೇವ ಆರಾಧನೆಯವರು. ಒಬ್ಬ ದೇವರನ್ನು ನಂಬಿಕೊಂಡವರು. ಅವರು ದಿನಾಲು ಐದು ಬಾರಿ ದಕ್ಷಿಣ ದಿಕ್ಕಿನಡೆಗೆ ಮುಖ ಮಾಡಿ ನಮಾಜ್ ಮಾಡುತ್ತಾರೆ. ಹಬ್ಬ ಹರಿದಿನಗಳಲ್ಲಿ ನಮಾಜ್ ಮಾಡಿದ ನಂತರವೇ ಆಹಾರ ಸೇವಿಸುತ್ತಾರೆ. ಪ್ರತಿವರ್ಷ ಅವರು ರಮ್‌ಜಾನ್ ಅಂಗವಾಗಿ ಉಪವಾಸ ಮಾಡುತ್ತಾರೆ. ಆ ಸಂದರ್ಭದಲ್ಲಿ ಸುಳ್ಳು ಹೇಳುವುದು, ಮೋಸ ಮಾಡುವುದು ಹಾಗೂ ಪರ ಸ್ತ್ರೀಯರ ಬಗೆಗೆ ಅಗೌರವ ಕಾರ್ಯ ಮಾಡದಂತೆ ಎಚ್ಚರ ವಹಿಸುತ್ತಾರೆ.[೬೧] ಹಿಂದೂಗಳು ಕೂಡ ಪುರೋಹಿತ ಶಾಹಿಯ ಆಜ್ಞೆಯಂತೆ ಅಥವಾ ಹೇಳಿಕೆಯಂತೆ ಜನರಲ್ಲಿ ದೇವರನ್ನು ಕುರಿತು ಭಯ ಹುಟ್ಟಿಸುವುದು, ದೇವರನ್ನು ಮೆಚ್ಚಿಸುವ ಉದ್ದೇಶದಿಂದ ಯಾಗಗಳನ್ನು ಮಾಡುವುದಿದೆ. ತಮ್ಮ ಇಷ್ಟ ಸಿದ್ಧಿಗಳನ್ನು ಏರ್ಪಡಿಸಿಕೊಳ್ಳುವುದಕ್ಕಾಗಿ ಹಿಂದೂಗಳಲ್ಲಿ ಕೂಡ ಉಪವಾಸ ಮಾಡುತ್ತಾರೆ.[೬೨] ಹೈದರಾಬಾದ್ ಕರ್ನಾಟಕದ ವಿಶೇಷ ಎಂದರೆ ಬಹಮನಿ ಕಾಲದಿಂದಲೂ ಧಾರ್ಮಿಕ ಆರಾಧನೆಯಲ್ಲಿ ವಿಶಿಷ್ಟತೆಯನ್ನು ಗಮನಿಸಬಹುದಾಗಿದೆ. ಉತ್ತರ ಭಾರತದಿಂದ ಕರ್ನಾಟಕಕ್ಕೆ ಆಗಮಿಸಿದ ಮುಸ್ಲಿಮರು ಅರಬ್ಬಿ ಕೇಂದ್ರಿತ ಆರಾಧನೆಯನ್ನು ಆರಂಭದಲ್ಲಿ ಪ್ರಚಾರ ಪಡಿಸಿದರು. ಸ್ಥಳೀಯ ಆರಾಧನೆ ಮತ್ತು ಜನಪದೀಯ ಪೂಜೆ ಪರಿಪಾಠಗಳು ಹಿಂದೂ ಮತ್ತು ಮುಸ್ಲಿಮರಲ್ಲಿ ಪ್ರಭಾವ ಬೀರಿ ಇಲ್ಲಿನ ಜನ ಸಮುದಾಯಗಳು ಸಮ್ಮಿಶ್ರ ಆರಾಧನ ಪದ್ಧತಿಯನ್ನು ರೂಢಿಸಿಕೊಂಡಿರುವುದು ಗಮನಿಸಬಹುದಾಗಿದೆ.[೬೩] ಮುಸ್ಲಿಮ್ ಆಚರಣೆ ಮತ್ತು ಆರಾಧನೆಗಳಾದ ಮೊಹರಂ ಆಚರಣೆಯಲ್ಲಿ ಪ್ರತಿಯೊಬ್ಬರ ಮನೆಯಲ್ಲಿ ಕೂಡ ಮಾಲ್ದಿ ಮಾಡುತ್ತಾರೆ. ಅಷ್ಟೆ ಅಲ್ಲದೇ ಆ ಮಾಲ್ದಿಯನ್ನು ಮುಸ್ಲಿಮ್ ಗೋರಿಯ ಹಾಗೇ ತಯಾರಿಸಿ ಗೆಜ್ಜೆ ಕಟ್ಟಿರುವ ಆರಾಧಕರನ್ನು ಕರೆದುಕೊಂಡು ದಿನ ದೋಸ್ತಾರ್ ಹೋದ್ದಿನ್ ಹೊಡೆದು ನಂತರವೇ ಊಟ ಮಾಡುವ ಪದ್ಧತಿ ಕಂಡುಬರುತ್ತದೆ. ಈ ಪದ್ಧತಿ ಹಿಂದೂಗಳಲ್ಲಿ ವಿಜಯ ದಶಮಿ ಹಬ್ಬದಂದು ಮಾತಂಗಿಯನ್ನು ಕರೆದುಕೊಂಡು ಬಂದು ದೇವಿಯ ಪೂಜೆ ಮಾಡಿಸಿದ ನಂತವೇ ಊಟ ಮಾಡುವ ಪದ್ಧತಿ ಹಾಗೇ ಕಂಡುಬರುವುದು ಗಮನಿಸಬಹುದಾಗಿದೆ. ಇದರಿಂದ ಹಿಂದೂ ಜನಪದೀಯ ಆಚರಣೆ ಮತ್ತು ಮುಸ್ಲಿಮ್ ಜನಪದ ಆಚರಣೆಗಳು ಒಂದರ ಮೇಲೆ ಮತ್ತೊಂದು ಪ್ರಭಾವ ಬೀರಿರುವುದು ಗಮನಿಸಬಹುದಾಗಿದೆ.[೬೪]

೬.೪.೧.೫. ದೇವಾಲಯ ಮತ್ತು ದೇವದಾಸಿ ಪದ್ಧತಿ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ದೇವಾಲಯಗಳ ಸಂಖ್ಯೆ ಅಧಿಕವಾಗಿರುವುದು ಗಮನಿಸಬಹುದಾಗಿದೆ. ಈ ದೇವಾಲಯಗಳಲ್ಲಿ ಎರಡು ರೀತಿಯಾಗಿ ಗುರುತಿಸಬಹುದು. ಅವುಗಳೆಂದರೆ ಶಿಷ್ಟ ದೇವಾಲಯಗಳು ಹಾಗೂ ಪರಿಶಿಷ್ಟ ದೇವಾಲಯಗಳು. ಶಿಷ್ಟ ದೇವಾಲಯಗಳು ಎಂದರೆ ಮೇಲ್ವರ್ಗದವರಿಗೆ ಸಂಬಂಧಿಸಿದ ದೇವಾಲಯಗಳಾಗಿವೆ. ಇವು ದೊಡ್ಡ ಪ್ರಮಾಣದಲ್ಲಿ ದೇವಾಲಯಗಳಾಗಿರುತ್ತವೆ. ಈ ದೇವಾಲಯ ಸಮಾಜದಲ್ಲಿದ್ದ ವರ್ಣಾಶ್ರಮ ಪದ್ಧತಿಯನ್ನು ಪೋಷಿಸಿಕೊಂಡು ಬಂದಿರುವುದು ಕಾಣಬಹುದಾಗಿದೆ. ಕೆಳವರ್ಗದವರು ಈ ದೇವಾಲಯಗಳನ್ನು ಪ್ರವೇಶಿಸಿದಂತೆ ನಿಷೇಧಿಸುವುದಲ್ಲದೆ ಮೇಲ್ವರ್ಗದವರು ದೇವಾಲಯಗಳ ಒಳಗಡೆ ಅವರನ್ನು ಪ್ರವೇಶಿಸುವುದನ್ನು ನಿರಾಕರಿಸುವಂತೆ ವ್ಯವಸ್ಥಿತವಾಗಿ ಪುರೋಹಿತಶಾಹಿ ಮಾಡಿರುವ ಹುನ್ನಾರಗಳನ್ನು ಗಮನಿಸಬಹುದಾಗಿದೆ. ಬ್ರಾಹ್ಮಣರು ಮಾತ್ರ ದೇವರ ಪ್ರಾಂಗಣಕ್ಕೆ ಪ್ರವೇಶಿಸುವುದಕ್ಕೆ ಅವಕಾಶ ಪಡೆದಿರುತ್ತಾರೆ. ಆಳ್ವಿಕೆ ಮಾಡುವ ಪ್ರಭು ಮೇಲೆ ಪ್ರಭಾವ ಬೀರಿ ಈ ಪುರೋಹಿತಶಾಹಿ ವರ್ಗವು ದೇವಾಲಯಕ್ಕಾಗಿಯೇ ಅನೇಕ ಭೂಮಿಯನ್ನು ದಾನದ ರೂಪದಲ್ಲಿ ಪಡೆದುಕೊಂಡಿದೆ. ಇನ್ನೂ ಪರಿಶಿಷ್ಟ ದೇವಾಲಯಗಳಲ್ಲಿ ದೇವರನ್ನು ಆರಾಧಿಸುವವರು ಕೆಳವರ್ಗದವರಾಗಿದ್ದಾರೆ. ಈ ದೇವಾಲಯಗಳು ಸರಿಯಾದ ಕಟ್ಟಡವಿಲ್ಲದೆ ಬಯಲು ಪ್ರದೇಶದಲ್ಲಿಯೇ ಇರುವುದು ಕಂಡುಬರುತ್ತದೆ.[೬೫] ಈ ದೇವಾಲಯವನ್ನು ಯಾರು ಬೇಕಾದರೂ ಪ್ರವೇಶಿಸಬಹುದಾಗಿದೆ. ಈ ಬಗೆಯ ದೇವಾಲಯಗಳಿಗೆ ಪ್ರಭುತ್ವಗಳಿಂದ ಯಾವುದೇ ಸಹಾಯ ಸಿಗದೆ ಇರುವುದನ್ನು ಗಮನಿಸಬಹುದಾಗಿದೆ. ಮೇಲು ವರ್ಗದ ಜನರು ದೇವಾಲಯ ಮತ್ತು ದೇವರ ಹೆಸರಿನಲ್ಲಿ ಕೆಳವರ್ಗದ ಹೆಣ್ಣು ಮಕ್ಕಳಿಗೆ ದೇವರ ಸೇವೆಯನ್ನು ಮಾಡುವುದಕ್ಕೆ ನೇಮಕ ಮಾಡುವ ಪರಿಪಾಠವನ್ನು ಜಾರಿಗೆ ತಂದರು. ಸೇವೆಯನ್ನು ದೇವದಾಸಿ ಎಂಬ ಹೆಸರಿನಿಂದ ಚಾಲ್ತಿಯಲ್ಲಿ ಬಂದಿತು. ಮೇಲ್ವರ್ಗದ ಸಮುದಾಯ ನೇಮಕ ಮಾಡಿದ ದೇವದಾಸಿ ಹಿಂದಿನ ರಾಜಕೀಯ ಬೇರೆಯಾಯಿತು. ದೇವರ ಹೆಸರಿನಲ್ಲಿ ಅಮಾಯಕ ಹೆಣ್ಣು ಮಕ್ಕಳನ್ನು ಶೋಷಣೆಗೆ ಒಳಪಡಿಸುವ ಹುನ್ನಾರ ಅಡಗಿರುವುದನ್ನು ಗಮನಿಸಬಹುದು.[೬೬] ಆದರೆ ಈ ಹುನ್ನಾರವನ್ನು ತಡೆಯುವಲ್ಲಿ ಪ್ರಭುತ್ವಗಳು ವಿಫಲವಾದವು. ಬಹುಸಂಖ್ಯಾತರಾದ ಮೇಲ್ವರ್ಗದವರನ್ನು ನಿರ್ಲಕ್ಷಿಸಿ ಆಡಳಿತ ಮಾಡಲು ಸಾಧ್ಯವಿಲ್ಲ ಎಂಬ ಆಲೋಚನೆಯಿಂದ ಇಂತಹ ಅನಿಷ್ಟ ಪದ್ಧತಿಗಳು ಜಾರಿಯಲ್ಲಿದ್ದರೂ ಕೂಡ ಪ್ರಭುತ್ವ ಜಾಣ ಕುರುಡನಂತೆ ವರ್ತಿಸಿರುವುದು ಚಾರಿತ್ರಿಕ ಘಟನೆಯಿಂದ ತಿಳಿದುಬರುವ ಸತ್ಯವಾಗಿದೆ. ದೇವರ ಹೆಸರಿನಲ್ಲಿ ದೇವದಾಸಿಯರು, ಬಸವಿಯರು ಕೆಳವರ್ಗದ ಹೆಣ್ಣು ಮಕ್ಕಳನ್ನೇ ಕೇಂದ್ರವಾಗಿಟ್ಟುಕೊಂಡು ಹುಟ್ಟಿಕೊಂಡ ಅನಿಷ್ಟ

ಪದ್ಧತಿಗಳಾಗಿವೆ. ಇದನ್ನು ಗಮನಿಸಿದ ನಿಜಾಮ್ ಪ್ರಭುತ್ವ ಕೆಲವು ಗ್ರಾಮಗಳಲ್ಲಿ ಈ ಪದ್ಧತಿಯನ್ನು ನಿಯಂತ್ರಿಸಲು ಪ್ರಯತ್ನಿಸಿತು. ಇನ್ನೂ ಕೆಲವು ಕಡೆ ಸ್ಥಳೀಯ ಮೇಲ್ವರ್ಗದವರ ರಾಜಕಾರಣ ಉದ್ದೇಶದಿಂದಾಗಿ ಗೊತ್ತಿದ್ದರು ಕೂಡ ಕ್ರಮವಹಿಸದಿರುವುದು ಕಂಡುಬರುತ್ತದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ದೇವಾಲಯಗಳು ಜಾತಿಯನ್ನು ಪೋಷಣೆ ಮಾಡುವ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.[೬೭]

೬.೪.೧.೬. ನಂಬಿಕೆ ಮತ್ತು ಮೂಢನಂಬಿಕೆ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅನಾದಿ ಕಾಲದಿಂದಲೂ ನಂಬಿಕೆ ಮತ್ತು ಮೂಢನಂಬಿಕೆ ಹೆಚ್ಚಿನ ಪ್ರಮಾಣದಲ್ಲಿ ಪ್ರಚಲಿತದಲ್ಲಿದ್ದವು. ಅದರಲ್ಲಿ ಮೂಢನಂಬಿಕೆಗೆ ಹೆಚ್ಚಾಗಿ ಬಲಿಯಾದವರು ಈ ಪ್ರದೇಶದವರಾಗಿದ್ದಾರೆ. ಅದರಲ್ಲಿ ವಿಶೇಷವಾಗಿ ದಲಿತ ಮತ್ತು ಹಿಂದುಳಿದ ವರ್ಗದವರು ಈ ಪದ್ಧತಿಗೆ ಒಳಗಾಗಿರುವುದು ಕಂಡುಬರುತ್ತದೆ. ಸ್ತ್ರೀಯರು ಕೂಡ ಮೂಢನಂಬಿಕೆಗೆ ಬಲಿಯಾಗಿದ್ದಾರೆ. ಯಾವುದೇ ಒಂದು ಹೊಸ ಕಾರ್ಯ ವಿಧಿವಿಧಾನಗಳು ಆರಂಭಿಸಬೇಕಾದರೆ ನಂಬಿಕೆ ಮತ್ತು ಮೂಢನಂಬಿಕೆ ಇವರಿಗೆ ಪ್ರಮುಖವಾಗಿ ಕಾಣುತ್ತವೆ. ಮೂಢನಂಬಿಕೆ ಅತಿ ಹೆಚ್ಚು ಕಾಣಲು ಅನಕ್ಷರತೆ ಕೂಡ ಒಂದು ಕಾರಣವಾಗಿದೆ. ಧಾರ್ಮಿಕ ಆರಾಧನೆ, ದೇವರು ಮತ್ತು ಮಾಟ ಮಂತ್ರ ಎಂಬ ಮೂಢನಂಬಿಕೆಗಳಿಗೆ ಬಲಿಯಾಗಿರುವುದು ನೋಡಬಹುದು. ಇವರೆಲ್ಲ ಮಾನಸಿಕವಾಗಿ ದುರ್ಬಲರಾಗಿದ್ದಾರೆ ಎಂದರೆ ತಪ್ಪಾಗಲಾರದು. ಮತ್ತೊಬ್ಬರು ಅಂದರೆ ಧಾರ್ಮಿಕ ಕೇಂದ್ರವೆನಿಸಿಕೊಂಡ ಮಠ ಮಾನ್ಯಗಳಲ್ಲಿನ ನಂಬಿಕೆಗಳು ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿರುತ್ತಾರೆ. ಆರೋಗ್ಯದಲ್ಲಿ ಏರುಪೇರಾದರೂ ಕೂಡ ಮೂಢನಂಬಿಕೆಯ ಮಾರ್ಗದಲ್ಲಿಯೇ ಆಲೋಚನೆ ಮಾಡುತ್ತಾರೆ ವಿನಃ ಪ್ರಗತಿಪರವಾಗಿ ಆಲೋಚಿಸುವುದಿಲ್ಲ. ಕೆಳವರ್ಗದ ಜನರ ಮನಸ್ಥಿತಿಯನ್ನು ಅರ್ಥೈಸಿಕೊಂಡ ಪುರೋಹಿತಶಾಹಿ ವರ್ಗ ಅವರಲ್ಲಿ ದೇವರು ಮತ್ತು ನಂಬಿಕೆಯ ಮೂಲಕ ಅವರನ್ನು ನಿಯಂತ್ರಿಸುವುದಲ್ಲದೆ ಅವರಿಂದ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಾರೆ. ದೇವಾಲಯ ಮತ್ತು ಮಠಗಳಿಗೆ ಬಿಟ್ಟಿಚಾಕರಿ ಮಾಡುವುದರಿಂದ ಒಳ್ಳೆಯದಾಗುತ್ತದೆ ಎಂದು ನಂಬಿಸಿ ಆ ಜನರಿಂದ ಕೆಲಸ ಮಾಡಿಸುವುದು ರೂಢಿಯಲ್ಲಿದೆ. ಮಠ ಹಾಗೂ ದೇವಾಲಯದ ಅಧೀನದಲ್ಲಿದ್ದ ಇನಾಮ್ ಭೂಮಿಗಳಲ್ಲಿ ಬಿತ್ತನೆ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಜನರಿಂದಲೇ ಮಾಡಿಸುತ್ತಾ ಊಳಿಗಮಾನ್ಯತೆ ಅಂಶಗಳನ್ನು ಜೀವಂತವಾಗಿ ಉಳಿದುಕೊಳ್ಳುವಂತೆ ದೇವಾಲಯಗಳು ನಡೆದುಕೊಳ್ಳುತ್ತಿರುವುದನ್ನು ನೋಡಬಹುದಾಗಿದೆ. ಮಠಗಳಿಗೆ ಹಾಗೂ ದೇವಾಲಯ ಗಳಿಗೆ ದಾನ ಮಾಡಬೇಕು ಮತ್ತು ದೇವರ ಜಾತ್ರೆಗೆ ಹಣಕಾಸಿನ ನೆರವು ಇಲ್ಲವೆ ದವಸ ಧಾನ್ಯಗಳನ್ನು

ನೀಡಬೇಕು. ಇದರಿಂದ ದೇವರ ಕಾರ್ಯ ನಮ್ಮೆಲ್ಲರ ಆದ್ಯ ಕರ್ತವ್ಯ ಎಂಬ ರೀತಿಯಲ್ಲಿ ನಂಬಿಕೆ ಹುಟ್ಟುವಂತೆ ನೋಡಿಕೊಳ್ಳುವುದು ಪುರೋಹಿತಶಾಹಿಯ ಕೆಲಸವಾಗಿದೆ. ಈ ವರ್ಗದ ಜನರು ನೀಡಿದ ದವಸ ಧಾನ್ಯಗಳಿಂದ ಮಾತ್ರ ಅವರ ಉಪಜೀವನ ಸಾಗುತ್ತಿರುತ್ತದೆ.[೬೮]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ಮಠಗಳು ಹಾಗೂ ದೇವಾಲಯಗಳು ಇವತ್ತಿಗೂ ತಮ್ಮ ಹಿತವನ್ನು ಇಟ್ಟುಕೊಂಡಿವೆ. ಇದಕ್ಕೆ ಮೂಲ ಕಾರಣ ಕೆಳವರ್ಗದವರು ದೇವರು ಮತ್ತು ಮಠ ಹಾಗೂ ಮಠಾಧೀಶರ ಬಗೆಗೆ ಅಪಾರವಾದ ನಂಬಿಕೆ ಮತ್ತು ಭಯ ಇರುವುದು ಮಠಗಳು ಇವತ್ತಿಗೂ ಕೂಡ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಮಠಗಳ ಅಸ್ತಿತ್ವವೇ ಈ ಕೆಳವರ್ಗದ ನಂಬಿಕೆ. ಮೇಲ್ವರ್ಗದವರು ಯಾರು ಕೂಡ ಮಠಾಧೀಶರನ್ನು ಮತ್ತು ಮಠಗಳಿಗೆ ಹೆಚ್ಚಾಗಿ ದೈವತ ಸ್ವರೂಪಕ್ಕೆ ತೆಗೆದುಕೊಳ್ಳದೆ ಇರುವುದು ಕೂಡ ಇದಕ್ಕೆ ಪ್ರಮುಖವಾಗಿದೆ. ಈ ರೀತಿಯಾಗಿ ಮೇಲ್ವರ್ಗಗಳು ದೇವಾಲಯಗಳು ಮತ್ತು ಮಠಗಳಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಈ ಕೆಳವರ್ಗದಲ್ಲಿ ದೇವರ, ಮಠ ಕುರಿತಾದ ಭಕ್ತಿ ಭಾವವನ್ನು ಸೃಷ್ಟಿಸುವುದರ ಮೂಲಕ ತಮ್ಮ ಆರ್ಥಿಕತೆಯನ್ನು ಸರಿದೂಗಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ.[೬೯]

೬.೪.೨. ಉರುಸುಗಳು

ಭಾರತದಲ್ಲಿರುವ ಹಿಂದೂ–ಮುಸ್ಲಿಮರ ಸಾಂಸ್ಕೃತಿಕ ಜೀವನದಲ್ಲಿ ಸೂಫಿಗಳ ಉಪದೇಶ ಮತ್ತು ಮಂದಿರಗಳು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿವೆ. ಧಾರ್ಮಿಕ ಶೋಷಣೆಗೆ ಹಾಗೂ ಗೊಂದಲಕ್ಕೊಳ್ಳಗಾಗಿದ್ದ ಭಾರತೀಯರಿಗೆ ಆಶಾಕಿರಣದಂತೆ ಅರಬ್ಬಸ್ಥಾನದಿಂದ ಆಗಮಿಸಿದ ಸೂಫಿ ಸಂತರು, ಇಸ್ಲಾಂ ಧರ್ಮದ ಪ್ರಸಾರದೊಂದಿಗೆ ಸಾಮಾಜಿಕ ಮೌಲ್ಯಗಳನ್ನು ಕುರಿತು ಉಪದೇಶಿಸಿದರು. ಧಾರ್ಮಿಕ ಹಾಗೂ ಸಾಮಾಜಿಕ ಆಚರಣೆಗಳಲ್ಲಿದ್ದ ಜಟಿಲತೆಗಳನ್ನು ನಿವಾರಿಸಿದರಲ್ಲದೆ, ಸೌಹಾರ್ದಯುತ ಜೀವನ ರೂಪಿಸುವ ಮಾರ್ಗವನ್ನು ತೋರಿಸಿದರು. ಇವರು ಹಿಂದೂ ಮುಸ್ಲಿಮ್ ಎಂಬ ಬೇಧವಿಲ್ಲದೆ ಜನಸಾಮಾನ್ಯರ ನಡುವೆ ಇರಲು ಬಯಸಿದರು. ಜನಸಾಮಾನ್ಯರ ಸಮಸ್ಯೆಗಳನ್ನು ಶಾಂತ ಚಿತ್ತದಿಂದ ಆಲಿಸಿ ಪರಿಹಾರ ಉಪಾಯಗಳನ್ನು ಸಾರುತ್ತಿದ್ದರು. ಕೆಲವು ಪವಾಡಗಳ ಮೂಲಕ ಜನರಿಗೆ ಸ್ಪಂದಿಸಿದ್ದರಿಂದ ಅಪಾರವಾದ ಭಕ್ತ ಸಮೂಹಗಳನ್ನು ಸಂಪಾದಿಸಿದರು. ಸೂಫಿಗಳು ದೇಹ ತ್ಯಾಗ ಮಾಡಿದಾಗ ಇವರ ಸಮಾಧಿಗಳನ್ನು ದರ್ಗಾವಾಗಿ ಪರಿವರ್ತನೆಗೊಂಡು ಹಿಂದೂ ಮುಸ್ಲಿಮ್ ಅನುಯಾಯಿಗಳು ಪ್ರತಿ ವರ್ಷ ಇವರ ನೆನಪಿಗಾಗಿ ಉರುಸ್ ಆಚರಿಸುವ ಪದ್ಧತಿ ಹುಟ್ಟುಹಾಕಿದರು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಸೂಫಿ ಸಂತರ ಉರುಸುಗಳನ್ನು ಹಿಂದೂ–ಮುಸ್ಲಿಮ್‌ರೆಂಬದೆ

ಒಗ್ಗೂಡುವ ಮೂಲಕ ಆಚರಿಸುವ ಪರಿಪಾಠ ಬೆಳೆದಿದೆ. ಈ ಉರುಸ್ ಆಚರಣೆ ಮತ್ತು ಸೂಫಿ ಸಂತರ ದರ್ಗಾಗಳು ಈ ಎರಡು ಧರ್ಮೀಯರಲ್ಲಿ ಸೌಹಾರ್ದತೆಯ ಸಾಮರಸ್ಯವನ್ನು ಬೆಸೆಯುವ ಕೊಂಡಿಯಂತೆ ಉರುಸುಗಳು ಆಚರಿಸಲ್ಪಡುತ್ತವೆ.[೨೦] ಈ ರೀತಿಯಾಗಿ ಸೌಹಾರ್ದತೆಯನ್ನು ಮೂಡಿಸುತ್ತಾ ಆಚರಿಸಲ್ಪಡುವ ಹೈದರಾಬಾದ್ ಕರ್ನಾಟಕದ ಪ್ರದೇಶದ ಉರುಸ್‌ಗಳ ಪಟ್ಟಿ ಈ ಕೆಳಗಿನಂತಿದೆ.

ನಿಜಾಮ್ ಆಳ್ವಿಕೆಯಲ್ಲಿನ ಗುಲಬರ್ಗಾ ಜಿಲ್ಲೆಯ ಉರುಸ್‌ಗಳ ವಿವರಣೆ ಪಟ್ಟಿ ೧೯೪೦

ತಾಲೂಕು	ಸ್ಥಳ	ಉರುಸ್	ಉರುಸ್ ನಡೆಯುವ ದಿನಗಳು	ನೆರೆಯುವ ಜನಸಂಖ್ಯೆ	ಉರುಸ್ ಅಂಗಡಿಗಳ	ಉರುಸ್‌ನಲ್ಲಿನ ಆದಾಯ ಮೂಲ
ಗುಲಬರ್ಗಾ	ಗುಲಬರ್ಗಾ	ಖಾಜಾಬಂದೇ ನವಾಜ್	೩	೯೦೦೦	೩೦೦	೧೦೦೦
	ಗುಲಬರ್ಗಾ	ಶೇಖ ಸಿರಾಜೋದ್ದೀನ್	೧	೧೦೦೦	೨೦	೫೦
	ಗುಲಬರ್ಗಾ	ಜುನ್ನೈದಿ				
	ಗುಲಬರ್ಗಾ	ಕುಬುಲುಲ್ಲಾ ಹುಸೇನಿ	೪	೫೦೦೦	೫೦	೨೦೦
	ಪಲ್ಲಾಪುರ	ರುಕ್ಕದ್ದೀನಿ ಸಾಹೇಬ	೪	೫೦೦೦	೫೦	೨೦೦
ಚಿಂಚೋಳಿ	ಚೆಂಗಚಾ	ಮಸ್ತಾನ್ ಖಾದ್ರಿ	೨	೨೦೦೦	–	–
ಕೊಡಂಗಲ್	ಕೊಡಂಗಲ್	ಮೌಲಾ ಅಲಿ	೧	೪೦೦	೬	೧೫೦
ಸೇರಂ	ಮುಧೋಳ್	ಖಾಜಾಬಂದೇ ನವಾಜ್	೨	೪೦೦	೬	೧೫೦
ಯಾದಗಿರಿ	ರಾಂಪುರ	ಶೇಖ್ ಅಲ್ಲಾವುದ್ದೀನ್ ಸಾಹೇಬ್	೨	೧೫೦೦	೨೦೦	೧೦೦೦
	ಯಾದಗಿರಿ	ಯಾಕುಬ್ ಬುಕಾರಿ	೨	೨೦೦೦	೨೫	೫೦೦
ಶಹಾಪುರ	ಬಂಡಿಬಿಮಳ್ಳಿ ಖಾದ್ರಿ	ಸೈಯದ್ ಜಮಾಲೋದ್ದಿನ್	೩	೫೦೦೦	೧೨೦	೪೦೦೦
	ಸಗರ್	ಶೇಖ ಸೂಫಿಷೇರಮಸ್ತಾ	೩	೧೦೦೦೦	೧೫೦	೬೦೦೦
ಚಿತ್ತಾಪುರ	ಲಾಡ್ಲಾಪುರ	ಹಾಜಿ ಸರವರ ಸಾಹೇಬ	೩	೨೦೦೦	೩೦	೩೦೦೦
ಆಳಂದ	ಅಳಂದ	ಖಾಜಾ ಉಮರ್ ಸಾಹೇಬ್	೩	೨೫೦೦	೧೫	೧೫೦
ಅಫಜಲಪುರ	ಅಫಜಲಪುರ	ಹಜ್‌ರತ ಸಾಹೇಬ್	೧	೧೦೦೦		

ನಿಜಾಮ್ ಆಳ್ವಿಕೆಯಲ್ಲಿನ ಬೀದರ್ ಜಿಲ್ಲೆಯ ಉರುಸ್‌ಗಳ ವಿವರಣೆ ಪಟ್ಟಿ ೧೯೪೦

ತಾಲೂಕು	ಸ್ಥಳ	ಉರುಸ್	ಉರುಸ್ ನಡೆಯುವ ದಿನಗಳು	ನೆರೆಯುವ ಜನಸಂಖ್ಯೆ	ಉರುಸ್ ಅಂಗಡಿಗಳ	ಉರುಸಿನ ಆದಾಯ ಮೌಲ್ಯ	ಉರುಸಿನ ಆದಾಯ ಮೂಲ
ಬೀದರ	ಬೀದರ	ಶಮ್‌ಶೋದ್ದೀನ್					
		ಮುಲ್ತಾನಿ ಸಾಹೇಬ್	೫	೫೦೦೦			
ಬೀದರ	ಬೀದರ	ಜೈನೋದ್ದೀನ್ ಕುಂಜ ನಶೀನ್	೨	೨೦೦೦			ಸರ್ಕಾರದ ಧನಸಹಾಯ
	ಬೀದರ	ಪೀರ ಪಾಶಾ ಆಲಿ	೧				ನರಕುಂಡಿ ಗ್ರಾಮದ ಆದಾಯ
	ಬೀದರ	ಶಾಹ ಖಲೀಲ್ ಶಿರ್ಮಾನಿ	೧				ಇನಾಂ ಭೂಮಿ
	ಅಷ್ಟೂರ	ಅಹಮ್ಮದ ಶಿಹಾವಲಿ	೬	೪೦೦೦			
	ಬೀದರ	ಖಾಜಾ ಅಬುಲ್ ಫಿಜಾ	೨	೨೦೦೦			
	ಬೀದರ	ಬಂದೇ ನವಾಜ್ ಖನಬಾ	೩	೧೦೦			ರೈಕೋಟರ ಗ್ರಾಮದ ಆದಾಯ
ಉದ್ಗಿರ	ಉದ್ಗಿರ	ಶರೋದ್ದೀನ್ ಸಾಹೇಬ್	೨	೫೦೦			ಎರಡು ಗ್ರಾಮದ ಇನಾಂ
ಹುಮನಾಬಾದ್	ಹುಮನಾಬಾದ್	ಶಮ್ ತಬರಾಜ್		೫೦೦೦	೨೦೦	೫೦೦೦	
	ನಿಯಾಕಲ್	ಪೀರ್ ಗೈಬ್ಸ್		೬೦೦೦	೨೫೦	೭೦೦೦	
ನಾರಾಯಣ ಖೇಡ	ನಾರಾಯಣ ಖೇಡ	ಬಂದೇ ನವಾಜ್	೧	೧೦೦			
ಜನವಾಡ	ಜನವಾಡ	ಫಕ್ರೋದಿನ ಸಾಹೇಬ್	೧	೧೫೦೦			

ನಿಜಾಮ್ ಆಳ್ವಿಕೆಯಲ್ಲಿನ ರಾಯಚೂರು ಜಿಲ್ಲೆಯ ಉರುಸ್‌ಗಳ ವಿವರಣೆ ಪಟ್ಟಿ–೧೯೪೦

ತಾಲೂಕು	ಸ್ಥಳ	ಉರುಸ್	ಉರುಸ್ ನಡೆಯುವ ದಿನಗಳು	ನೆರೆಯುವ ಜನಸಂಖ್ಯೆ	ಉರುಸ್ ಅಂಗಡಿಗಳ	ಉರುಸಿನ ಆದಾಯ ಮೌಲ್ಯ	ಉರುಸಿನ ಆದಾಯ ಮೂಲ
ರಾಯಚೂರು	ಗುಲ್‌ಬುರ್ಕಲ್	ಹಬೀಬ್ ಸಾಹೇಬ್	೨	೫೦೦		೧೦೦	
	ಇಂದವಾಸಿ	ಅಲ್ಲಾವೋದ್ದೀನ್ ಸಾಹೇಬ್	೨	೫೦೦		೧೦೦	
	ಮಟಮಾರಿ	ಸೈಯದ್ ಅಲಿಖಾದ್ರಿ	೨	೨೫೦		೧೦೦	
	ರಾಯಚೂರು	ಇಮ್ಸ್ ಆಲಂ ಹುಸೇನ್	೩	೫೦೦೦		೧೦೦೦	
	ರಾಯಚೂರು	ಶಾಹ ಅಲಿಬಾದಶಾಹಾ	೧	೫೦೦		೧೦೦	
	ರಾಯಚೂರು	ಮಸ್ತಾನ ಶಾಹಾ ವಲಿ	೧	೨೦೦			
	ರಾಯಚೂರು	ನಬಿ ಪೀರಖಾದ್ರಿ	೧	೧೦೦		೧೦	
ಕೊಪ್ಪಳ	ಕೊಪ್ಪಳ	ಬಾಗ್‌ಸ್ವರ ಸಾಹೇಬ್	೨	೩೦೦			ಇನಾಂ ಭೂಮಿ
ದೇವದುರ್ಗ	ದೇವದುರ್ಗ	ಝುರಿರೋದ್ದೀನ್ ಪಾಶ	೧	೫೦೦		೨೦೦	
ಗಂಗಾವತಿ	ಜಂತಕಲ್	ಶಾಹಾ ಕರಿಮುಲ್ಲಾ ಖಾದ್ರಿ	೧	೧೫೦			
	ಗಂಗಾವತಿ	ಮೌಲಾ ಅಲಿ	೩	೮೦೦	೧೦	೩೦೦	
ಕುಷ್ಟಗಿ	ಹನುಮ ಸಾಗರ್	ಮುರ್ತಾಜ್ ಖಾದ್ರಿ	೧	೧೦೦೦	೩೫	೧೦೦೦	
	ಕುಷ್ಟಗಿ	ಶಹಾ ಜಲಾತೋದ್ದಿನ	೩	೧೦೦೦			
ಲಿಂಗಸುಗೂರ	ಮುದಗಲ್	ಮೊಹರಂ	೧೩	೪೦೦೦	೧೫೦	೫೦೦೦	
ಮಾನ್ವಿ	ಮಾನ್ವಿ	ಶಹಾಬೀಜ್ ಅಲಿ ಶಹಾ	೧	೩೦೦	೨೫	೩೦೦	

ಕನ್ನಡದ ಉರುಸು ಎಂಬ ಪದವು ಹಿಂದಿಯಲ್ಲಿ ಉರುಸ್ ಎಂದೂ, ಮರಾಠಿಯಲ್ಲಿ ಉರೂಸ್ ಎಂದು ಬಳಕೆಯಾಗುತ್ತದೆ. ಉರುಸು ಎಂದರೆ ಜಾತ್ರೆ, ಉತ್ಸವ, ಮಹೋತ್ಸವ, ಪುಣ್ಯತಿಥಿ.[೭೧] ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಉರುಸು ಆಚರಣೆಯಲ್ಲಿ ಹಿಂದೂ ಮುಸ್ಲಿಮ ಎಂಬ ಬೇಧ ಭಾವವಿಲ್ಲದೆ ಭಾಗವಹಿಸುವುದರ ಮೂಲಕ ಆಚರಣೆಯಲ್ಲಿ ತೊಡಗಿಕೊಳ್ಳುತ್ತಾರೆ. ಉರುಸು ಆಚರಣೆಯಾಗುವ ಮುಂಚೆ ಸಂಧಲ್ ಎಂದರೆ ಶ್ರೀಗಂಧದ ಮೆರವಣಿಗೆ ಮಾಡುವುದರಿಂದ ಆರಂಭವಾಗುತ್ತದೆ. ಈ ಮೆರವಣಿಗೆಯಲ್ಲಿ ಒಂದು ಹೊಸ ಬುಟ್ಟಿಯಲ್ಲಿ ಶ್ರೀಗಂಧವನ್ನಿಟ್ಟುಕೊಂಡು ಅದರ ಮೇಲೆ ಹೊದಿಕೆಯನ್ನು ಹೊತ್ತುಕೊಂಡು ದರ್ಗಾದ ಫಕೀರರು ಅಥವಾ ಪ್ರಮುಖರು ತಲೆಯ ಮೇಲೆ ಹೊತ್ತುಕೊಂಡು ಊರು, ನಗರ, ಮುಖ್ಯ ಬೀದಿಯಲ್ಲಿ ಮೆರವಣಿಗೆ ಮಾಡಿಕೊಂಡು

ಬರುತ್ತಾರೆ. ಈ ಮೆರವಣಿಗೆಯಲ್ಲಿ ಹಿಂದೂ ಮತ್ತು ಮುಸ್ಲಿಮರೆಂಬದೇ ಎಲ್ಲಾ ವರ್ಗದ ಜನರು ಭಾಗವಹಿಸುತ್ತಾರೆ. ಸಂಧಲ್ ಬರುವ ರಸ್ತೆಯಲ್ಲಿ ಜನರು ಗಂಧ ಹೊತ್ತುಕೊಂಡ ವ್ಯಕ್ತಿಯ ಕಾಲಿಗೆ ನೀರನ್ನು ಹಾಕುತ್ತಾ ಸಕ್ಕರೆ ಲೋಬಾನದಿಂದ ಫಾತಿಹಾ ಓದಿಸುತ್ತಾರೆ. ಈ ಮೆರವಣಿಗೆಯಲ್ಲಿ ವಿಶೇಷವಾಗಿ ಹಿಂದೂಗಳು ದೀವಟಿಗೆ ಹಿಡಿದುಕೊಂಡು ಬರುವುದು ತಲೆತಲಾಂತರದಿಂದ ನಡೆದು ಬಂದಿದೆ. ಖ್ವಾಜಾ ಬಂದೇ ನವಾಜ್ ಉರುಸ್ ಮೆರವಣಿಗೆಯಲ್ಲಿ ಹಿಂದೂಗಳು ಇವತ್ತಿನವರೆಗೂ ದೀವಟಿಗೆ ಹಿಡಿಯುತ್ತಾರೆ. ಹೀಗೆ ಸಂಧಲ್ ಮೆರವಣಿಗೆ ದರ್ಗಾಕ್ಕೆ ಬಂದ ನಂತರ ಮೌಲಾನು ಫಾತಿಹಾ ಓದಿ ಒಳಗಡೆ ತೆಗೆದುಕೊಳ್ಳುತ್ತಾರೆ.[೨೨] ನಂತರ ಸಂಧಲ್ ಮೆರವಣಿಗೆಯ ಮಾರನೆಯ ದಿನವೇ ಉರುಸು ದಿನವಾಗಿದೆ. ಅಂದು ಬೆಳಿಗ್ಗೆ ದರ್ಗಾದ ಮಜಾರಕ್ಕೆ (ಗೋರಿ) ಪೀರರ ಶಿಷ್ಯರು ಹಾಗೂ ಭಕ್ತರಿಂದ ಪುಷ್ಪಗಳಿಂದ ಅಲಂಕರಿಸಿದ ಮೇಲೆ ಉರುಸಿನ ಸಮಾರಂಭಗಳಲ್ಲಿ ಜಾತಿ, ಮತ ಎಂಬ ಬೇಧ ಭಾವವಿಲ್ಲದೆ ಎಲ್ಲರೂ ಒಂದೇ ಎಂಬ ಭಾವನೆಯಿಂದ ಭಕ್ತ ಜನರೆಲ್ಲರೂ ಸೇರುತ್ತಾರೆ.[೨೩]

ಉರುಸುಗಳಲ್ಲಿ ಹಿಂದೂ ಮತ್ತು ಮುಸ್ಲಿಮ್ ಎಂಬ ಬೇಧ ಭಾವವಿಲ್ಲದೆ ಸಕ್ಕರೆ ಮಾಲ್ದಿ ಹೂವೂ, ಗಂಧವಿಟ್ಟು ಲೋಬಾನ ಊದುಬತ್ತಿ ಹಚ್ಚಿಸಿ ಫಾತೇಹಾ ಮಾಡಿಸುವರು. ಉತ್ತತ್ತಿ ಕಟ್ಟುವುದು, ದರ್ಗಾದ ಹೊರಗಡೆ ಕಾಯಿ ಒಡೆಯುವುದು. ಮಾಲ್ದಿ ಎಡೆ ಸಾಮಾನ್ಯವಾಗಿ ಕಂಡುಬರುತ್ತದೆ. ಬೇಟೆಕೊಟ್ಟು ಕಂದೂರಿ ಮಾಡಿದಾಗ ಮಾಂಸದಡುಗೆ ಎಡೆಯಾಗಿರುತ್ತದೆ. ಐದು ಫಕೀರರನ್ನು ಕರೆದು ಊಟ ಹಾಕುವುದು ಚೌಲ ತೆಗೆಯುವುದು, ಒದ್ದೆ ಬಟ್ಟೆಯಲ್ಲಿ ದೀಡ್ ನಮಸ್ಕಾರ ಹಾಕಿ ಮೈತೊಳೆದು ಹೊಸ ಬಟ್ಟೆ ಉಟ್ಟುಕೊಂಡು ದರ್ಗಾ ಪ್ರವೇಶಿಸುವುದು. ಈ ಆಚರಣೆ ವಿಶೇಷವಾಗಿ ಕೆಳಜಾತಿಯವರು, ದಲಿತರು ಮಾಡುತ್ತಾರೆ. ದರ್ಗಾ ಸುತ್ತುವುದು ದೀಪಕ್ಕೆ ಎಣ್ಣೆ ಹಾಕುವುದು ಗಮನಿಸಬಹುದಾಗಿದೆ.[೨೪]

ಉರುಸುಗಳಲ್ಲಿ ಸರ್ವಜಾತಿ ಅಂತಸ್ತುಗಳ ಜನ ಭಾಗವಹಿಸುವುದು ನಿಜ. ಆದರೆ ಸಾಮಾಜಿಕವಾಗಿ ಆರ್ಥಿಕವಾಗಿ ಕೆಳಸ್ತರದಲ್ಲಿದವರು ಪ್ರಧಾನವಾಗಿರುವುದು ಸ್ಪಷ್ಟ ಈ ವರ್ಗ ಆರಾಧನೆ, ಆಚರಣೆಯಲ್ಲಿ ನಂಬಿಕೆಯಿಟ್ಟುಕೊಂಡು ಬಂದಿದ್ದು ಆರಾಧಿಸುತ್ತದೆ. ಜಾತಿ ಬೇಧವನ್ನು ಹೆಚ್ಚಾಗಿ ನಂಬುವ ಸಮುದಾಯಗಳು ಕೂಡ ಸಂತರ ಆಚರಣೆಯಲ್ಲಿ ಭಾಗವಹಿಸುತ್ತಾರೆ. ಹಾಗೆ ಎಲ್ಲಾ ಸಮುದಾಯಗಳನ್ನು ದರ್ಗಾದಲ್ಲಿ ಬಿಟ್ಟು ಕೊಡುವುದು ಗಮನಿಸಬಹುದು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ನಗರ ಪ್ರದೇಶದಲ್ಲಿದ್ದ ದರ್ಗಾಗಳಿಗೆ ಮುಕ್ತವಾಗಿ ದಲಿತರು ಪ್ರವೇಶಿಬಹುದು. ಆದರೆ ಗ್ರಾಮೀಣ ಪ್ರದೇಶದಲ್ಲಿದ್ದ ದರ್ಗಾಗಳು ಪ್ರವೇಶ ನಿರಾಕರಿಸಲಾಗಿದೆ. ಮೇಲ್ವರ್ಗದ ಸಮುದಾಯಗಳೇ ಆ ದರ್ಗಾಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವುದರಿಂದ ಪ್ರವೇಶ ನಿರಾಕರಿಸಲಾಗಿದೆ. ಗುಲಬರ್ಗಾ

ಶರಣ ಬಸವೇಶ್ವರರ ಪುರಾಣಗಳಲ್ಲಿ ಆರಣ ಬಸವನನ್ನು ಒಳಗೆ ಬಾರದಂತೆ ತಡೆಯುವ ಪ್ರಸಂಗದ ವರ್ಣನೆ ಬರುತ್ತದೆ. ಅದನ್ನು ಶರಣಬಸವ ತನ್ನ ಪವಾಡದ ಮೂಲಕ ತಡೆಯಬಂದವರನ್ನು ನಿಯಂತ್ರಿಸಿ ದರ್ಗಾ ಪ್ರವೇಶಿಸುತ್ತಾನೆ. ಇದು ದರ್ಗಾ ಸಂಸ್ಕೃತಿಯ ಜಾತ್ಯಾತೀತ ಲಕ್ಷಣ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಮುಸ್ಲಿಂ ಸ್ತ್ರೀಯರು ದರ್ಗಾಗಳನ್ನು ಒಳಪ್ರವೇಶಿಸಬಹುದು. ಆದರೆ ಸಮಾಧಿ ಇರುವ ಸ್ಥಳಗಳನ್ನು ಪ್ರವೇಶಿಸುವುದಕ್ಕೆ ನಿರ್ಬಂಧವಿದೆ. ಗುಲಬರ್ಗಾ ಖ್ವಾಜಾ ಬಂದೇ ನವಾಜನ ಸಮಾಧಿ ಇರುವ ಮೂಲ ದರ್ಗಾಕ್ಕೆ ಯಾವುದೇ ಧರ್ಮಕ್ಕೆ ಸೇರಿದ ಹೆಣ್ಣು ಮಕ್ಕಳಿಗೆ ಪ್ರವೇಶವಿಲ್ಲ. ಆದರೆ ಖ್ವಾಜಾ ಬಂದೇ ನವಾಜನನ್ನು ಆರಾಧಿಸುವವರೇ ಸ್ತ್ರೀಯರಾಗಿದ್ದಾರೆ. ಈ ಸಂಪ್ರದಾಯ ತಲೆತಲಾಂತರದಿಂದಲೂ ಬೆಳೆದುಬಂದಿದೆ. ದರ್ಗಾಗಳಲ್ಲಿ ಹರಕೆಯನ್ನು ಕಟ್ಟಿಕೊಳ್ಳುವವರೇ ಸ್ತ್ರೀಯರಾಗಿದ್ದಾರೆ.

ಈ ರೀತಿಯಾಗಿ ಖ್ವಾಜಾ ಬಂದೇನವಾಜ್, ಶೇಖ್‌ರಾಜೋಧಿನ ಹಬೀಬ ಸಾಹೇಬ, ಸೈಯದ್ ಅಲಖಾದಿ, ದೌವುಲ ಮಲ್ಲಿಕ ಹೀಗೆ ಸುಮಾರು ಉರುಸುಗಳು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಂಡುಬರುತ್ತವೆ. ಈ ಉರುಸುಗಳ ಜನ ಸಾಮಾನ್ಯರ ಬದುಕಿನ ಮೇಲೆ ಪ್ರಭಾವ ಬೀರಿರುವುದನ್ನು ಗಮನಿಸಬಹುದಾಗಿದೆ.[೭೫]

೬.೪.೩. ಗ್ರಾಮದೇವತೆಗಳು

ಹೈದರಾಬಾದ್ ಕರ್ನಾಟಕ ಪ್ರದೇಶದ ಗ್ರಾಮದೇವತೆಗಳ ಆರಾಧನೆ ಎಂದರೆ ಅದೊಂದು ಕೇವಲ ಆಚರಣೆ ಅಥವಾ ಮನೋರಂಜನೆ ಆಗಿರದೆ ಬದುಕಿನ ಸುಖ ಹಾಗೂ ದುಃಖದ ಕ್ಷಣಗಳನ್ನು ಹಂಚಿಕೊಳ್ಳುವ ಹಾಗೂ ಮೌನ ಪ್ರತಿಭಟನೆಯ ವೇದಿಕೆಯೂ ಆಗಿದೆ. ಗ್ರಾಮೀಣ ಪ್ರದೇಶದಲ್ಲಿ ಜನರನ್ನು ಕಾಪಾಡುವ ಸಂತೈಸುವ ಹಾಗೂ ಆತ್ಮವಿಶ್ವಾಸವನ್ನು ತುಂಬುವ ಶಕ್ತಿಗಳು ಬೇರೆ ಯಾವುವೂ ಇರಲಿಲ್ಲ. ಗ್ರಾಮ ದೇವತೆಗಳು ಜನರಿಗೆ ಲೌಕಿಕ ಬದುಕಿಗೆ ಅಥವಾ ನಂಬಿಕೆಯ ಭಾಗವಾಗಿದ್ದವೇ ಹೊರತು ಮುಕ್ತಿಗೆ ದಾರಿಯಾಗಲಿ ಅಥವಾ ಮೂಢನಂಬಿಕೆಯಾಗಲಿ ಆಗಿರಲಿಲ್ಲ. ಗ್ರಾಮದೇವತೆಗಳನ್ನು ಅವೈದಿಕ ಅಥವಾ ಅಧೀನ ಎನ್ನುವ ನೆಲೆಯಲ್ಲಿ ವ್ಯಾಖ್ಯಾನಿಸಿ ಅವುಗಳನ್ನು ಉಗ್ರರೂಪಿ, ಭಯಾನಕ ಕ್ಷುದ್ರ ದೇವತೆಗಳು, ಭಯಂಕರ ರೋಗಗಳನ್ನು ಹರಡಿಸುವ ದೇವತೆಗಳು ಎನ್ನುವ ರೀತಿಯಲ್ಲಿ ಚಿತ್ರಿಸಿ ಶ್ರೇಣೀಕೃತ ಸಾಮಾಜಿಕ ರಚನೆಯಂತೆ ಧಾರ್ಮಿಕ ರಚನೆಯಲ್ಲೂ ಕೆಳಸ್ತರದಲ್ಲಿ ನೋಡಲಾಯಿತು. ಮೇಲ್ವರ್ಗದ ದೇವತೆಗಳು ವರಗಳನ್ನು ನೀಡುವ, ಅನುಗ್ರಹಿಸುವ ದೇವತೆಗಳು ಎಂಬುಗಿ ಚಿತ್ರಿಸಲಾಯಿತು. ದೇವತೆಗಳನ್ನು ಜಾತಿ ಅಥವಾ ವರ್ಗದ ಹಿನ್ನೆಲೆಯಿಂದ ನೋಡಲಾಗಿ, ಅವೂ ಕೂಡ ಜಾತಿ ವ್ಯವಸ್ಥೆಯ ಭಾಗವಾಗಿ ಮಾರ್ಪಾಡುಗೊಂಡವು. ವೈದಿಕ ದೇವರುಗಳ ದೇವಾಲಯಗಳು ಬೃಹತ್

ಹಾಗೂ ಆಕರ್ಷಕ ಶೈಲಿಯೊಂದಿಗೆ ನಿರ್ಮಾಣಗೊಂಡಿದ್ದ ಬಹುತೇಕ ಎಲ್ಲ ಗ್ರಾಮದೇವತೆಗಳ ಗುಡಿಗಳು ಜನಪದ ಗುಡಿಗಳ ಮಾದರಿಯಲ್ಲಿ ನಿರ್ಮಾಣಗೊಂಡವು. ದುಡಿಯುವ ಹಾಗೂ ದುಡಿಸುವ ವರ್ಗಗಳ ನಡುವಿನ ಸಂಬಂಧದ ಹಿನ್ನೆಲೆಯಲ್ಲಿಯೇ ಈ ಬಗೆಯ ಸಾಮಾಜಿಕ ಹಾಗೂ ಧಾರ್ಮಿಕ ಸ್ಥಿತಿಯನ್ನು ಅರ್ಥೈಸಿಕೊಳ್ಳಬಹುದಾಗಿದೆ.[೭೬]

ಗ್ರಾಮದೇವತೆಗಳು ಹೆಸರೇ ಸೂಚಿಸುವಂತೆ ಆಯಾ ಗ್ರಾಮದ ದೇವತೆಗಳು. ಗ್ರಾಮದೇವತೆಗಳ ಆಚರಣೆಗಳನ್ನು ಗ್ರಾಮದ ಎಲ್ಲ ಜಾತಿಯವರು ಸೇರಿ ನಡೆಸುವ ಪರಂಪರೆ ಇದೆ. ಗ್ರಾಮಗಳ ಸಾಮಾಜಿಕ ರಚನೆಗೆ ಅನುಗುಣವಾಗಿ ಗ್ರಾಮದೇವತೆಗಳ ಗುಡಿಗಳಲ್ಲಿ ವಾರ್ಷಿಕ ಉತ್ಸವ ಅಥವಾ ಜಾತ್ರೆಗಳು ನಡೆಯುತ್ತವೆ. ಆಚರಣೆ ಮತ್ತು ಆರಾಧನೆಯಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದ ಕಟ್ಟಳೆಗಳು ಮುಂದುವರೆದುಕೊಂಡಿವೆ. ಕೆಲವು ಸಂದರ್ಭದಲ್ಲಿ ಗ್ರಾಮದೇವತೆಗಳ ವೇಷ ತೊಡುವವನು ಕೆಳವರ್ಗದವನಾಗಿದ್ದರೆ ಅಂತಹ ಸಂದರ್ಭದಲ್ಲಿ ಮೇಲ್ವರ್ಗದವರು ಅನಿವಾರ್ಯವಾಗಿ ಅವನನ್ನು ಒಪ್ಪಿಕೊಂಡರೂ ಅದು ತಾತ್ಕಾಲಿಕವಾಗಿರುತ್ತದೆ. ಗ್ರಾಮದೇವತೆಗಳ ಮೂಲಕ ಸಮಾಜದ ಮೇಲ್ವರ್ಗ ಸಮುದಾಯ ತನ್ನ ಪಾರಂಪರಿಕ ಅಧಿಕಾರವನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುತ್ತದೆ. ಗ್ರಾಮಗಳಲ್ಲಿನ ಕುಟುಂಬ ಸಮಸ್ಯೆಗಳು, ಆಸ್ತಿಯ ಹಂಚಿಕೆಗೆ ಸಂಬಂಧಿಸಿದ ಪ್ರಶ್ನೆಗಳು ಹಾಗೂ ಇವೆಲ್ಲವುಗಳಿಗೆ ಸಂಬಂಧಿಸಿದ ನ್ಯಾಯ ತೀರ್ಮಾನ ಗ್ರಾಮ ದೇವತೆಗಳ ಗುಡಿಗಳಲ್ಲಿ ನಡೆಯುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಗ್ರಾಮ ಜೀವನದಲ್ಲಿ ದೇವತೆಗಳು ಪ್ರಧಾನ ಸ್ಥಾನವನ್ನು ಪಡೆಯುತ್ತವೆ.

ಹೈದರಾಬಾದ್ ಕರ್ನಾಟಕ ಶ್ರೇಣೀಕೃತ ಸಮಾಜದಲ್ಲಿ ದೇವತೆಗಳು ಮೇಲ್ನೋಟಕ್ಕೆ ಗ್ರಾಮ ಜೀವನಕ್ಕೆ ಸಂಬಂಧಿಸಿದಂತೆ ಕಂಡರೂ ಕೂಡ ಅವುಗಳಲ್ಲಿ ಕೂಡ ಜಾತಿ ಸಮೀಕರಣಕ್ಕೆ ಅನುಗುಣವಾಗಿ ಸ್ತರಗಳ ಶೈಲಿಯಲ್ಲಿರುವುದನ್ನು ಗಮನಿಸಬಹುದಾಗಿದೆ. ದುಡಿಯುವ ವರ್ಗದವರ ದೇವತೆಗಳು ಮತ್ತು ಭೂಮಾಲೀಕರ ದೇವತೆಗಳೆಂದು ಗುರುತಿಸಿಕೊಳ್ಳಬೇಕಾಯಿತು. ಈ ದೇವತೆಗಳಲ್ಲಿ ಬೃಹತ್ ಪ್ರಮಾಣದ ಗುಡಿಗಳು ನಿರ್ಮಾಣಗೊಂಡರೆ ಅವುಗಳು ಭೂಮಾಲೀಕರ ದೇವರುಗಳು ಇನ್ನು ಕೆಲವು ಕೆರೆಗೆ ಮಾತ್ರ ಸೀಮಿತಗೊಂಡವು ಅಥವಾ ಕುಟುಂಬಕ್ಕೆ ಸಂಬಂಧಿಸಿದ ದೈವಗಳಾಗಿ ಕಾಣಿಸಿಕೊಂಡವು. ಇನ್ನು ಕೆಲವು ಊರು ಪ್ರತಿನಿಧಿಸುವ ದೇವತೆಗಳಾಗಿ ಬೆಳೆದರೆ ಇನ್ನು ಕೆಲವು ಜಾತಿ/ ಸಮುದಾಯದ ಮಟ್ಟದಲ್ಲಿ ಗುರುತಿಸಿಕೊಂಡವು. ಧಾರ್ಮಿಕ ರಚನೆ ಮಾನವನ ರಚನೆಯಾಗಿದ್ದರಿಂದ ದೇವತೆಗಳಲ್ಲಿ ಶ್ರೀಮಂತ, ಮಧ್ಯಮವರ್ಗ ಮತ್ತು ಕೆಳವರ್ಗದ ದೇವರುಗಳೆಂದು ಕಾಣಿಸಿಕೊಳ್ಳುವ ಒತ್ತಡಕ್ಕೆ ದೇವರುಗಳೇ ಒಳಗಾದವು.[೭೭]

ಗ್ರಾಮದೇವತೆಗಳಲ್ಲಿ ಸ್ತ್ರೀ ದೇವತೆಗಳೇ ಹೆಚ್ಚಾಗಿ ಕಂಡುಬರುತ್ತವೆ. ಪುರುಷ ಪ್ರಧಾನವಾದ ವ್ಯವಸ್ಥೆಯಲ್ಲಿ ಸ್ತ್ರೀ ದೇವತೆ ಹೇಗೆ ಪ್ರಾಮುಖ್ಯತೆ ಪಡೆದುಕೊಂಡವು ಎಂಬ ಪ್ರಶ್ನೆ ಸಹಜವಾಗಿ ಹುಟ್ಟಿಕೊಳ್ಳುತ್ತದೆ. ಕೃಷಿ ಪ್ರಧಾನವಾದ ಸಮಾಜದಲ್ಲಿ ಹೆಣ್ಣನ್ನು ಫಲವಂತಿಕೆಯ ಅಥವಾ ಫಲೋತ್ಪತ್ತಿಯ ಸಂಕೇತವಾಗಿ ಪರಿಗಣಿಸಿರುವುದೇ ಈ ವ್ಯವಸ್ಥೆಯ ಹುಟ್ಟಿಗೆ ಕಾರಣ. ಕೃಷಿ ಸಮಾಜದಲ್ಲಿ ಸ್ತ್ರೀ ಆಹಾರ ಸಂಗ್ರಹಣೆ ಮತ್ತು ಉತ್ಪಾದನೆಯ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿತ್ತು. ಹೆಣ್ಣನ್ನು ಫಲೋತ್ಪತ್ತಿಯ ಸಂಕೇತ ಮತ್ತು ಮಾತೃ ದೇವತೆ ಎಂಬುದಾಗಿ ತೀರ್ಮಾನಿಸಿ ಹೆಣ್ಣು ಹಾಗೂ ಮಣ್ಣು ಇವೆರಡನ್ನು ಗಂಡು ತನ್ನ ಅಧೀನದಲ್ಲಿಟ್ಟುಕೊಳ್ಳುವ ಪುರುಷ ಪ್ರಧಾನ ವ್ಯವಸ್ಥೆ ಹುಟ್ಟಿಕೊಂಡಿತು. ಹೀಗೆ ಹುಟ್ಟಿಕೊಂಡ ಸ್ತ್ರೀ ದೇವತೆಯನ್ನು ಶಕ್ತಿ ಅಥವಾ ದುರ್ಗಿ ಅವತಾರವನ್ನಾಗಿ ನೋಡ ಬಹುದಾಗಿದೆ.[೨೮]

ಹೀಗೆ ರಚನೆಯಾದ ದೇವತೆಯನ್ನು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜಾನಪದ ಪೌರಾಣಿಕ ಪರಿಕಲ್ಪನೆಯ ಗ್ರಾಮದೇವತೆಗಳು ಮತ್ತು ಶಿಷ್ಟ ಪರಿಕಲ್ಪನೆಯ ಗ್ರಾಮದೇವತೆಗಳು ಆಗಿ ಕಂಡುಬರುತ್ತವೆ. ಪೌರಾಣಿಕ ಪರಿಕಲ್ಪನೆಯ ಗ್ರಾಮದೇವತೆಗಳು ಹೆಚ್ಚಾಗಿ ಕೆಳವರ್ಗದವರಿಂದ ಆರಾಧನೆಗೆ ಒಳಗಾಗಿರುವ ದೇವತೆಗಳಾಗಿವೆ. ಅಂತಹ ದೇವತೆಗಳೆಂದರೆ ದ್ಯಾವಮ್ಮನ ಗುಂಪಿಗೆ ಸೇರಿದ ದೇವತೆಗಳು ಮತ್ತು ಎಲ್ಲಮ್ಮನ ಗುಂಪಿಗೆ ಸೇರಿದ ದೇವತೆಗಳೆಂದು ವಿಭಾಗಿಸಿ ನೋಡಬಹುದು. ದ್ಯಾವಮ್ಮ ಗ್ರಾಮದೇವತೆಯಲ್ಲಿ ಆರೋಗ್ಯ ಮತ್ತು ಆರ್ಥಿಕ ಭಾಗ್ಯವಾಗಿ ಕಂಡುಬರುವುದರಿಂದ ದ್ಯಾವಮ್ಮನ ಆಚರಣೆಗೆ ಸಂಬಂಧಿಸಿದ ದೇವತೆಗಳು ಒಂದೇ ಆಗಿರುತ್ತವೆ. ಅವುಗಳೆಂದರೆ ಮರಗಮ್ಮ, ದುರ್ಗಮ್ಮ, ಪೊಚ್ಚಮ್ಮ ಮುಂತಾದ ದೇವತೆಗಳನ್ನು ಕುರಿತು ಭಯಾನಕ ಮತ್ತು ಉಗ್ರ ರೂಪಿಯಾಗಿ ಚಿತ್ರಿಸಲಾಗಿದೆ. ದೇವರ ಹೆಸರಿನಲ್ಲಿ ಪ್ರಮುಖ ಆಚರಣೆಗಳನ್ನು ಜಾರಿಗೆ ತಂದಿರುವುದನ್ನು ಗಮನಿಸಬಹುದಾಗಿದೆ. ಅದರಲ್ಲಿ ಕೋಣ ಬಲಿ ಕೊಡುವುದು ಪ್ರಮುಖವಾಗಿದೆ.[೨೯]

ಇನ್ನು ಎಲ್ಲಮ್ಮನ ಆಚರಣೆಗೆ ಸಂಬಂಧಿಸಿದ ದೇವತೆಗಳನ್ನು ಗಮನಿಸಿದರೆ, ಆರಂಭದಲ್ಲಿ ಎಲ್ಲಮ್ಮಳನ್ನು ಕೆಳವರ್ಗದ ದೇವತೆಯಾಗಿ ಪೂಜಿಸಲಾಗುತ್ತಿತ್ತು. ಆಕೆ ಮಾಂಸಹಾರಿ ದೇವತೆಯಾಗಿದ್ದಳು. ಇಂದು ಎಲ್ಲಮ್ಮನನ್ನು ಸಂಸ್ಕೃತೀಕರಣಗೊಳಿಸಿ ಪುರೋಹಿತಶಾಹಿ ವರ್ಗ ತನ್ನ ಹಿಡಿತದಲ್ಲಿಟ್ಟುಕೊಂಡು ಎಲ್ಲಮ್ಮನನ್ನು ವಿವಿಧ ಹೆಸರುಗಳಿಂದ ವಿವಿಧ ಜಾತಿಗಳು ಪೂಜಿಸುವಂತೆ ಮಾಡಿರುವುದನ್ನು ಗಮನಿಸಬಹುದಾಗಿದೆ. ಎಲ್ಲಮ್ಮಳು ಬ್ರಾಹ್ಮಣ ಎಲ್ಲಮ್ಮ, ವೀರಶೈವ ಎಲ್ಲಮ್ಮ, ಕೆಳವರ್ಗದ ಎಲ್ಲಮ್ಮ ಎಂದು ಹೆಸರಿಸಿ ಪೂಜಿಸುವ ಆಚರಣೆಯನ್ನು ಜಾರಿಗೆ ತಂದಿರುವುದು ಕಂಡುಬರುತ್ತದೆ. ಶಿಷ್ಟ ಪರಿಕಲ್ಪನೆಯ ದೇವತೆಗಳು ಎಂದರೆ ಮೇಲ್ವರ್ಗದವರಿಂದ ಆಚರಣೆಗೆ ಒಳಗಾಗಿರುವ ದೇವತೆಗಳಾಗಿ ಕಂಡುಬರುತ್ತವೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರೆದ ದೇವತೆಗಳಾದ್ದರಿಂದ

ಕಾಳಮ್ಮ ಮತ್ತು ಚೌಡಮ್ಮ ಈ ಎರಡೂ ದೇವತೆಗಳು ಮೇಲ್ವರ್ಗದ ದೇವತೆಗಳಾಗಿವೆ. ಆರಂಭದಲ್ಲಿ ಈ ದೇವತೆಗಳು ಮಾಂಸಹಾರಿಗಳಾಗಿದ್ದವು. ನಂತರ ಇಂದು ಶಾಖಹಾರಿಗಳಾದರಿಂದ ಮೇಲ್ವರ್ಗದ ದೇವತೆಗಳಾಗಿವೆ. ಕಾಳಮ್ಮ ಮತ್ತು ಚೌಡಮ್ಮ ದೇವತೆಗಳು ವಿವಿಧ ಹೆಸರುಗಳಿಂದ ಆರಾಧನೆಗೆ ಒಳಪಟ್ಟಿರುವುದನ್ನು ಗಮನಿಸಬಹುದಾಗಿದೆ.

ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳಲ್ಲಿ ಪುರೋಹಿತಶಾಹಿ ವರ್ಗ ದೇವರ ಹೆಸರಿನಲ್ಲಿ ನಂಬಿಕೆ ಮತ್ತು ಆಚರಣೆ ಎಂಬ ಅಸ್ತ್ರದ ಮೂಲಕ ಇತರ ಕೆಳವರ್ಗದ ಸಮುದಾಯಗಳನ್ನು ನಿಯಂತ್ರಿಸುತ್ತದೆ. ಆ ದೇವಾಲಯ ಮತ್ತು ದೇವರ ಹೆಸರಿನಲ್ಲಿ ತನ್ನ ಆರ್ಥಿಕ ಅಜೆಂಡವನ್ನು ಈಡೇರಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ. ಕೆಳವರ್ಗದ ಗ್ರಾಮದೇವತೆಗಳ ದೇವಾಲಯ ಆರ್ಥಿಕವಾಗಿ ಬಲಿಷ್ಠವಾದ ದೊಡ್ಡ ದೇವಾಲಯಗಳನ್ನು ವೈದಿಕದ ದೇವತೆಗಳ ಪ್ರಭಾವದ ಹೆಸರಿನಲ್ಲಿ ಪುರೋಹಿತಶಾಹಿ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿರುವುದನ್ನು ಗಮನಿಸಬಹುದು.[೮೦]

೬.೫. ಶಿಕ್ಷಣ

ಹೈದರಾಬಾದ್ ನಿಜಾಮರು ತಮ್ಮ ಆಡಳಿತದ ಅವಧಿಯಲ್ಲಿ ಶಿಕ್ಷಣ ಪದ್ಧತಿಗೆ ಅತ್ಯಂತ ಮಹತ್ವ ನೀಡಿದರು. ಆರಂಭದಲ್ಲಿ ಇವರು ಪ್ರಾಚೀನ ಕಾಲದಿಂದಲೂ ಬಳವಳಿಯಾಗಿ ಜಾರಿಗೆ ಬಂದ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಯಥಾವತ್ತಾಗಿ ಜಾರಿಗೆ ತಂದರು. ಏಕೆಂದರೆ ಆರಂಭದಲ್ಲಿ ನಿಜಾಮ್ ಕಮುರೋದ್ದಿನ್ ಕಿಲಿಚಖಾನನು ಶಿಕ್ಷಣಕ್ಕಿಂತ ಹೆಚ್ಚಾಗಿ ಆಡಳಿತಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದನು. ಆದರಿಂದಾಗಿ ಈಗಾಗಲೇ ಚಾಲ್ತಿಯಲ್ಲಿದ್ದ ಶಿಕ್ಷಣವನ್ನೇ ಮುಂದುವರೆಸಿದನು. ನಂತರ ಅಧಿಕಾರಕ್ಕೆ ಬಂದ ನಿಜಾಮ್ ಅಲಿಖಾನ್ ಮತ್ತು ಸಿಕಂದರ್ ಬಹಾದ್ದೂರ್‌ರ ಕಾಲಾವಧಿಯಲ್ಲಿ ಕೂಡ ಇದೇ ಪದ್ಧತಿ ಮುಂದುವರೆಯಿತು. ಸಿಕಂದರ್ ಬಹಾದ್ದೂರನ ಮರಣದ ನಂತರ ಅಧಿಕಾರಕ್ಕೆ ನಿಜಾಮ್ ಅಫ್ಜಲ–ಉದ್–ದೌಲ್ ಬಹಾದ್ದೂರನು ತನ್ನ ಆಳ್ವಿಕೆಯಲ್ಲಿ ಸಂಸ್ಥಾನದಲ್ಲಿ ಚಾಲ್ತಿಯಲ್ಲಿದ್ದ ಶಿಕ್ಷಣ ಪದ್ಧತಿಗೆ ಕೆಲವು ಮಾರ್ಪಾಡುಗಳನ್ನು ಮಾಡಿದನು. ಈ ಮಾರ್ಪಾಡು ಮೂಲಕ ಇಲ್ಲಿಯವರೆಗೆ ಕೆಲವೇ ವರ್ಗಗಳಿಗೆ ಸೀಮಿತವಾಗಿದ್ದ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಪ್ರಯತ್ನ ಮಾಡಿರುವುದು ಗಮನಿಸಬಹುದಾಗಿದೆ.[೮೧] ಬ್ರಿಟಿಶರು ಭಾರತದಲ್ಲಿ ಈಗಾಗಲೇ ಆಧುನಿಕ ಮಾದರಿಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದು ಹೊಸ ವಿಧಾನಗಳ ಮೂಲಕ ಏಕಮುಖವಾಗಿ ಸಾಗುತ್ತಿದ್ದ ಶಿಕ್ಷಣ ಪದ್ಧತಿಯನ್ನು ಬಹುಮುಖಗೊಳಿಸಿದರು. ಅಷ್ಟೇ ಅಲ್ಲದೇ ಭಾರತದಲ್ಲಿ ಶಿಕ್ಷಣವನ್ನು ಸಾರ್ವತ್ರಿಕರಣ ಗೊಳಿಸಲು ಶಿಕ್ಷಣ ತಜ್ಞರಿಂದ ವರದಿಯನ್ನು ಸಿದ್ಧಪಡಿಸಿದರು. ಈ ವರದಿಯು ನೀಡಿದ ಶಿಫಾರಸ್ಸಿನ ಮೂಲಕ ಶಿಕ್ಷಣದಲ್ಲಿ ಹೊಸ ಯುಗವನ್ನೇ ಆರಂಭಿಸಿದರು. ನಿಜಾಮ್ ಅಫ್ಜಲ–ಉದ್–ದೌಲ್‌ನು ಬ್ರಿಟಿಷರ ಶಿಕ್ಷಣ ನೀತಿಯಿಂದ ಪ್ರಭಾವಿತನಾಗಿ ಅದೇ ಮಾದರಿಯಲ್ಲಿ ತನ್ನ ಸಂಸ್ಥಾನದಲ್ಲಿ ಕೂಡ

ಜಾರಿಗೆ ತರಲು ಉತ್ಸುಕನಾಗಿದ್ದನು. ಇದಕ್ಕೆ ಬೆಂಬಲವಾಗಿ ಎಲ್ಲ ಹಂತದಲ್ಲಿ ಸಹಕರಿಸಿದವ ಪ್ರಧಾನಿ ಒಂದನೆಯ ಸಾಲರಜಂಗನು. ಹೀಗೆ ನಿಜಾಮ್ ಅಫ್ಜಲ್-ಉದ್-ದೌಲ್ ಮತ್ತು ಪ್ರಧಾನಮಂತ್ರಿ ಒಂದನೆಯ ಸಾಲಾರಜಂಗರ ಪ್ರಯತ್ನದ ಫಲವಾಗಿ ೧೮೫೪ರಲ್ಲಿ ಜಾರಿಗೆ ಬಂದ ಚಾರ್ಲ್ಸ್‌ವುಡ್ ವರದಿಯನ್ನು ಆಧರಿಸಿ ಹೈದರಾಬಾದ್ ಸಂಸ್ಥಾನದಲ್ಲಿ ದರೂಲ್ ಉಲೂಮ್ ಎಂಬ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಲಾಯಿತು. ಈ ಮಂಡಳಿಯ ಮೂಲಕ ನಿಜಾಮ್ ಪ್ರಭುತ್ವ ಶಿಕ್ಷಣದ ಎಲ್ಲ ಜವಾಬ್ದಾರಿಯನ್ನು ತೆಗೆದುಕೊಂಡಿತು. ಈ ರೀತಿಯಾಗಿ ನಿಜಾಮ್ ಪ್ರಭುತ್ವ ಸಾರ್ವತ್ರಿಕ ಶಿಕ್ಷಣದ ಕಡೆಗೆ ಮೊಟ್ಟಮೊದಲ ಹೆಜ್ಜೆಯಿಟ್ಟಿರುವುದು ಗಮನಿಸಬಹುದು.[೮೨]

ನಿಜಾಮ್ ಪ್ರಭುತ್ವ ದರೂಲ್ ಉಲೂಮ್ ಶಿಕ್ಷಣ ಮಂಡಳಿಯ ಅಧೀನದಲ್ಲಿ ಪ್ರಯೋಗಿಕವಾಗಿ ಹೈದರಾಬಾದ್ ನಗರ ಪ್ರದೇಶದಲ್ಲಿ ಶಾಲೆಯನ್ನು ಆರಂಭಿಸಲಾಯಿತು. ಈ ಪ್ರಾಯೋಗಿಕ ಶಾಲೆಯು ಯಶಸ್ವಿಯಾದ ಹಿನ್ನೆಲೆಯಲ್ಲಿ ನಿಜಾಮ್ ಅಫ್ಜಲ್-ಉದ್-ದೌಲ್ ಬಹಾದ್ದೂರನು ೧೮೫೯-೬೦ರಲ್ಲಿ ಒಂದು ಆದೇಶ ಹೋರಡಿಸಿದನು. ಆ ಆದೇಶದ ಪ್ರಕಾರ ಪ್ರತಿ ತಾಲೂಕು ಮತ್ತು ಜಿಲ್ಲಾ ಪ್ರದೇಶಗಳಿಗೆ ಒಂದೊಂದು ಶಾಲೆಯನ್ನು ಆರಂಭಿಸಲು ಅನುಕೂಲ ಮಾಡಿಕೊಡಲಾಯಿತು. ಶಾಲೆಗಳನ್ನು ಮತ್ತು ಶಿಕ್ಷಣವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಪ್ರತಿ ತಿಂಗಳಿಗೆ ತಾಲೂಕು ಶಾಲೆಗಳಿಗೆ ೮೨ ರೂಪಾಯಿ ಮತ್ತು ಜಿಲ್ಲಾ ಶಾಲೆಗಳಿಗೆ ೧೫೦ ರೂಪಾಯಿಯಲ್ಲಿ ಶಿಕ್ಷಣ ಮುಖ್ಯ ಕಚೇರಿಯನ್ನು ಸ್ಥಾಪಿಸುವುದಕ್ಕಾಗಿ ಆರ್ಥಿಕ ಸಹಾಯ ಮಾಡಿರುವುದು ನೋಡಿದರೆ ನಿಜಾಮರಿಗೆ ಶಾಲೆಯ ಮತ್ತು ಶಿಕ್ಷಣದ ಬಗೆಗಿನ ಉತ್ಸಾಹ ಎದ್ದು ಕಂಡುಬರುತ್ತದೆ. ಹೀಗೆ ನಿಜಾಮ್ ಪ್ರಭುತ್ವ ಸಂಸ್ಥಾನದಲ್ಲಿ ಆರಂಭಿಸಿದ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವುದಕ್ಕಾಗಿ ಉಸ್ತುವಾರಿ ಸಮಿತಿಯನ್ನು ನೇಮಕ ಮಾಡಲಾಯಿತು. ಈ ಸಮಿತಿ ತಹಶೀಲ್ದಾರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಸ್ಥಳೀಯ ಮಟ್ಟದಲ್ಲಿ ಸಹಾಯವನ್ನು ಒದಗಿಸುವ ಉದ್ದೇಶದಿಂದ ನಿಜಾಮ್ ಸರ್ಕಾರ ಸ್ಥಳೀಯ ಅಧಿಕಾರಿಗಳಾದ ಪಟೇಲ ಮತ್ತು ಪಟ್ವಾರಿಗಳನ್ನು ಗೌರ್ನರ್ ಆಗಿ ನೇಮಿಸಲಾಯಿತು. ಜಿಲ್ಲಾ ಪ್ರದೇಶದಲ್ಲಿ ಶಾಲೆಗಳಿಗೆ ತಹಶೀಲ್ದಾರ್, ಮೂರನೆಯ ತಾಲೂಕುದಾರ ಹಾಗೂ ಜಿಲ್ಲಾ ಪೋಲೀಸ್ ಅಧಿಕಾರಿಯ ನೇತೃತ್ವದಲ್ಲಿ ಉಸ್ತುವಾರಿ ಸಮಿತಿಯನ್ನು ನೇಮಿಸಲಾಯಿತು. ಸಂಸ್ಥಾನದ ಶಿಕ್ಷಣ ವ್ಯವಸ್ಥೆ ಉತ್ತಮ ರೀತಿಯಲ್ಲಿ ಕಾರ್ಯಗತಗೊಳಿಸುವ ಉದ್ದೇಶದಿಂದ ನಿಜಾಮ್ ಸರ್ಕಾರ ಇಂತಹ ಹತ್ತು ಹಲವಾರು ಸಮಿತಿಗಳನ್ನು ನೇಮಿಸಿತು. ಈ ಸಮಿತಿಗಳು ಶಿಕ್ಷಣವನ್ನು ಒಂದು ವ್ಯವಸ್ಥಿತ ಮತ್ತು ಕ್ರಮಬದ್ಧವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಮಾಡಿರುವ ಪ್ರಯತ್ನ ಕಂಡುಬರುತ್ತದೆ. ಹಾಗೇ ಪ್ರತಿಯೊಂದು ಶಾಲೆಯ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ತರಗತಿಗಳ ಮೌಲ್ಯಮಾಪನ ಮಾಡುವುದಕ್ಕಾಗಿ ಇನ್ಸ್‌ಪೆಕ್ಟರ್ ಎಂಬ ಅಧಿಕಾರಿಯನ್ನು ನಿಯೋಜಿಸ

ಲಾಯಿತು. ಈ ಅಧಿಕಾರಿಯು ಪ್ರತಿ ಶಾಲೆಗೆ ಭೇಟಿ ನೀಡಿ ಅವುಗಳ ಗುಣಮಟ್ಟವನ್ನು ಪರೀಕ್ಷಿಸಿ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ರವಾನಿಸುತ್ತಿದ್ದನು. ಈ ಮಾಹಿತಿಯನ್ನು ಪಡೆದುಕೊಂಡ ಅಧಿಕಾರಿಯು ಪ್ರಭುತ್ವಕ್ಕೆ ಮಾಹಿತಿಯನ್ನು ಒದಗಿಸುತ್ತಿದ್ದನು.[೮೩]

ನಿಜಾಮ್ ಪ್ರಭುತ್ವ ಜಮಾಬಂದಿ ಆಡಳಿತ ಪದ್ಧತಿ ಜಾರಿಗೆ ತಂದ ನಂತರ ಸರ್ಕಾರ ಪ್ರತಿಯೊಂದು ಇಲಾಖೆಗಳಿಗೆ ಪ್ರತ್ಯೇಕವಾದ ಮಂತ್ರಿಗಳನ್ನು ನೇಮಕ ಮಾಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಜಮಾಬಂದಿ ಪದ್ಧತಿಯಂತೆ ಇಲ್ಲಿಯವರೆಗೆ ಕಂದಾಯ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶಿಕ್ಷಣ ಇಲಾಖೆಯನ್ನು ಪ್ರತ್ಯೇಕಗೊಳಿಸಲಾಯಿತು. ಹಾಗೆಯೇ ಈ ಇಲಾಖೆಗೆ ಒಬ್ಬ ಶಿಕ್ಷಣ ಮಂತ್ರಿಯನ್ನು ನೇಮಕಗೊಳಿಸಲಾಯಿತು. ಮಂತ್ರಿಗೆ ಆಡಳಿತದಲ್ಲಿ ಸಹಕರಿಸುವ ಮತ್ತು ಅಧೀನದಲ್ಲಿ ಕಾರ್ಯನಿರ್ವಹಿಸುವ ಕಾರ್ಯದರ್ಶಿಗಳನ್ನು ನೇಮಿಸಲಾಯಿತು. ಈ ಕಾರ್ಯದರ್ಶಿ ಮಂತ್ರಿಯ ಅಧೀನದಲ್ಲಿ ಇಡೀ ಸಂಸ್ಥಾನದ ಶಿಕ್ಷಣ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದನು. ಇಂತಹ ಹುದ್ದೆಯನ್ನು ಅಲಂಕರಿಸಿ ಶಿಕ್ಷಣ ಇಲಾಖೆಯನ್ನು ಉನ್ನತ ಮಟ್ಟಕ್ಕೆ ಬೆಳೆಯುವುದಕ್ಕೆ ಮಾರ್ಗ ತೋರಿಸಿದ ಕೀರ್ತಿ ವಿಲ್ಕಿನ್‌ಸನ್ ಅವರಿಗೆ ಸಲ್ಲುತ್ತದೆ. ಈತನು ಅಧಿಕಾರವನ್ನು ವಹಿಸಿಕೊಂಡು ಸಂಸ್ಥಾನದಲ್ಲಿ ಈಗಾಗಲೇ ಜಾರಿಯಲ್ಲಿದ್ದ ದಾರೂಲ್ ಉಲೂಮ್‌ವನ್ನು ಆರು ವಿಭಾಗಗಳನ್ನಾಗಿ ವಿಭಾಗ ಮಾಡಿದನು. ಈ ರೀತಿಯಾಗಿ ವಿಭಾಗಿಸುವುದರ ಮೂಲಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಕಾರ್ಯಕ್ಕೆ ಮುನ್ನುಡಿ ಬರೆದನು. ಇಲ್ಲಿಂದಲೇ ಶಿಕ್ಷಣ ಮಹತ್ತರವಾದ ಬದಲಾವಣೆಯ ದಿಕ್ಕಿನಡೆಗೆ ನಡೆಯಿತು. ಸಂಸ್ಥಾನದಲ್ಲಿದ್ದ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಸಂಪೂರ್ಣವಾಗಿ ರದ್ದುಗೊಳಿಸಿ ಹೊಸ ನೀತಿ ನಿಯಮಗಳ ಮೂಲಕ ಒಂದು ವ್ಯವಸ್ಥಿತ ಮತ್ತು ಕ್ರಮಬದ್ಧವಾದ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಯಿತು.

ಈ ವಿಲ್ಕಿನ್‌ಸನ್‌ನು ಶಿಕ್ಷಣ ಪದ್ಧತಿಯಲ್ಲಿ ಮಾಡಿದ ಮತ್ತೊಂದು ಸುಧಾರಣೆಯೆಂದರೆ ಪರೀಕ್ಷೆ ಬರೆಯುವ ಪದ್ಧತಿಯನ್ನು ಜಾರಿಗೆ ತಂದಿರುವುದು. ಶಾಲೆಗಳ ಮೇಲ್ವಿಚಾರಣೆ ಮಾಡಲು ೧೮೭೩ರಲ್ಲಿ ಒಂದು ಅಧಿನಿಮಯವನ್ನು ರಚಿಸಿ ಆ ನಿಯಮಕ್ಕೆ ಅನುಗುಣವಾಗಿ ಪ್ರತಿ ಜಿಲ್ಲೆಗೆ ಐದು ಜನ ಡೆಪ್ಯುಟಿ ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಲಾಯಿತು. ಈ ಅಧಿನಿಯಮದಂತೆ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಕರನ್ನು ಶಿಕ್ಷಣ ನಿಯಮಗಳ ಬಗ್ಗೆ ಮತ್ತು ಬೋಧನೆಯ ಕುರಿತು ಮಾರ್ಗದರ್ಶನ ನೀಡುತ್ತಿದ್ದರು. ಜಿಲ್ಲೆಯಲ್ಲಿದ್ದ ಪ್ರತಿಯೊಂದು ಶಾಲೆಯಲ್ಲಿ ೩೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಪ್ರವೇಶ ಪಡೆಯುವುದು ಕಡ್ಡಾಯಗೊಳಿಸಿದರು. ಇದರಿಂದಾಗಿ ಶಿಕ್ಷಕರು ೩೦ ವಿದ್ಯಾರ್ಥಿಗಳನ್ನು ತೋರಿಸುವ ಸಲುವಾಗಿ ಜಾತಿ, ಮತ ಎನ್ನದೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದರು. ಈ ರೀತಿಯಾಗಿ ಶಿಕ್ಷಣದಲ್ಲಿ ಒಂದು ಹೊಸ ಹೆಜ್ಜೆಯನ್ನು ಇಡಲಾಯಿತು.[೮೪]

ನಿಜಾಮರು ಆರಂಭದಲ್ಲಿ ಪರ್ಶಿಯನ್ ಮತ್ತು ಸ್ಥಳೀಯ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ನಿಜಾಮ್ ಅಫ್ಜಲ್-ಉದ್-ದೌಲ್ ಬಹಾದ್ದೂರನು ಸಂಸ್ಥಾನ ಆಡಳಿತ ಭಾಷೆಯಾಗಿದ್ದ ಪರ್ಶಿಯನ್ ಭಾಷೆಗೆ ಬದಲಾಗಿ ಸ್ಥಳೀಯ ಮಟ್ಟದಲ್ಲಿ ಹುಟ್ಟಿಕೊಂಡಿದ್ದ ಉರ್ದು ಭಾಷೆಯನ್ನು ಸನ್ ೧೨೯೩ ಹಿಜರಿ ಅಂದರೆ ೧೮೭೪ರಲ್ಲಿ ಆಡಳಿತ ಭಾಷೆಯನ್ನಾಗಿ ಘೋಷಿಸಿದನು. ಅಂದಿನಿಂದ ಉರ್ದು ಭಾಷೆ ಆಡಳಿತ ಮತ್ತು ರಾಜ್ಯ ಭಾಷೆಯಾಗಿ ಪ್ರಾಮುಖ್ಯತೆ ಪಡೆಯಿತು. ಅದರಿಂದಾಗಿ ನಿಜಾಮರು ತಮ್ಮ ಸಂಸ್ಥಾನದ ಆಡಳಿತ ಸುಗಮವಾಗಿ ಸಾಗಬೇಕಾದರೆ ಉರ್ದು ಭಾಷೆಯನ್ನು ಕಲಿತ ಸಿಬ್ಬಂದಿಗಳ ಅವಶ್ಯಕತೆಯನ್ನು ಮನಗಂಡು ಹಾಗೂ ರಾಜ್ಯ ಭಾಷೆಯಾದ ಉರ್ದುವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಉದ್ದೇಶದಿಂದಾಗಿ ಉರ್ದುವನ್ನು ಶಿಕ್ಷಣದ ಮಾಧ್ಯಮವನ್ನಾಗಿ ಕಡ್ಡಾಯಗೊಳಿಸಿ ಆದೇಶ ಹೊರಡಿಸಿದರು ಅಂದಿನಿಂದ ಸಂಸ್ಥಾನದ ಶಿಕ್ಷಣವು ಉರ್ದು ಮಾಧ್ಯಮದಲ್ಲಿಯೇ ಜಾರಿಗೆ ಬಂದಿತು. ಜೊತೆಗೆ ಸಂಸ್ಥಾನದಲ್ಲಿದ್ದ ಸ್ಥಳೀಯ ಭಾಷೆಗಳನ್ನು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಲು ಅವಕಾಶವನ್ನು ಕಲ್ಪಿಸಲಾಯಿತು. ನಿಜಾಮರು ಉರ್ದುವನ್ನು ಆಡಳಿತ ಭಾಷೆ, ದೇಶಯ ಭಾಷೆಯನ್ನಾಗಿ ಬೆಳೆಸಿರುವುದು ಗಮನಿಸಬಹುದಾಗಿದೆ.[೮೫]

ಈ ರೀತಿಯಾಗಿ ನಿಜಾಮ್ ಪ್ರಭುತ್ವ ಶಿಕ್ಷಣ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಕಾರ್ಯದಲ್ಲಿ ತೊಡಗಿಕೊಂಡಿತು. ನಂತರ ಸಂಸ್ಥಾನದ ಶಿಕ್ಷಣವನ್ನು ಉನ್ನತೀಕರಿಸುವ ಉದ್ದೇಶದಿಂದ ಉನ್ನತ ಶಿಕ್ಷಣವನ್ನು ನೀಡುವ ಸಲುವಾಗಿ ೧೯೧೮ರಲ್ಲಿ ದೇಶಿಯ ಭಾಷೆಯಾದ ಉರ್ದು ಭಾಷೆಯಲ್ಲಿಯೇ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಈಗಾಗಲೇ ಸಂಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಲಾ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಅಧೀನಕ್ಕೆ ತಂದು ಅದರ ಮೇಲು ಉಸ್ತುವಾರಿಯಲ್ಲಿ ಶಿಕ್ಷಣ ಕಾರ್ಯ ಸಾಗುವಂತೆ ಮಾಡಿದರು. ಈ ರೀತಿಯ ಉದ್ದೇಶವನ್ನು ಇಟ್ಟುಕೊಂಡ ಸ್ಥಾಪನೆಯಾದ ವಿಶ್ವವಿದ್ಯಾಲಯ ಉನ್ನತ ಶಿಕ್ಷಣ ಕಲಿಯುವ ಮನಸ್ಸುಗಳಿಗೆ ಒಂದು ವರದಾನ ವಾಯಿತು.[೮೬] ಉಸ್ಮಾನಿಯಾ ವಿಶ್ವವಿದ್ಯಾಲಯ ವಿವಿಧ ವಿಭಾಗಗಳ ಮೂಲಕ ಕಾರ್ಯ ಆರಂಭ ಮಾಡಿತು. ಅದರಲ್ಲಿ ವಿಶೇಷವಾಗಿ ಭಾಷಾಂತರ ವಿಭಾಗದ ಕಾರ್ಯಸಾಧನೆ ಮಹತ್ವದಾಗಿದೆ. ವಿಜ್ಞಾನ, ತಂತ್ರಜ್ಞಾನ ಅದರಲ್ಲಿ ಭೌಗೋಳಶಾಸ್ತ್ರ ಮುಂತಾದ ಪಾಶ್ಚಿಮಾತ್ಯ ಜ್ಞಾನ ಹೊಂದಿರುವ ಪುಸ್ತಕಗಳನ್ನು ಉರ್ದುವಿನಲ್ಲಿ ಭಾಷಾಂತರ ಮಾಡುವ ಮೂಲಕ ಪಾಶ್ಚಿಮಾತ್ಯ ಜ್ಞಾನವನ್ನು ದೇಶಿಯ ವಿದ್ಯಾರ್ಥಿಗಳಿಗೆ ಉರ್ದುವಿನಲ್ಲಿ ಸಿಗುವಂತೆ ಮಾಡಿರುವುದರಲ್ಲಿ ಭಾಷಾಂತರ ವಿಭಾಗದ ಕೆಲಸ ಅಗಾಧವಾಗಿದೆ. ನಿಜಾಮ್ ಪ್ರಭುತ್ವ ಭಾಷಾಂತರ ವಿಭಾಗಕ್ಕೆ ಎಲ್ಲ ರೀತಿಯ ನೆರವು ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ತರ್ಜುಮೆ ಮಾಡಿಸಿರುವುದರ ಮೂಲಕ ದೇಶಿಯ ಭಾಷೆಯಾದ ಉರ್ದುವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋದ ಕಾರ್ಯ ಎದ್ದು ಕಾಣುತ್ತದೆ.[೮೭]

ವಿಶ್ವವಿದ್ಯಾಲಯ ಬಹುಶಿಸ್ತಿನ ಮೂಲಕ ಅನೇಕ ಸಂಶೋಧನೆಯನ್ನು ಕೈಗೊಂಡಿರು ವುದು ಗಮನಾರ್ಹ. ಭಾರತದ ಖ್ಯಾತ ವಿಜ್ಞಾನಿಯಾದ ಸಿ.ವಿ. ರಾಮನ್ ಅವರು ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದಾಗ ವಿಶ್ವವಿದ್ಯಾಲಯ ಕೈಗೊಂಡ ಸಂಶೋಧನೆ ಮತ್ತು ಭಾಷಾಂತರ ಸಾಹಿತ್ಯ ಕೃಷಿಯನ್ನು ಕಂಡು ಪ್ರಶಂಸೆ ವ್ಯಕ್ತಪಡಿಸಿದರು. ವಿಶ್ವವಿದ್ಯಾಲಯವನ್ನು ಕುರಿತು ಮಾತನಾಡುತ್ತಾ ಒಬ್ಬ ಸ್ಥಳೀಯ ಅಥವಾ ದೇಶಿಯ ಅರಸ ದೇಶಿಯ ಭಾಷೆಯಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪಿಸಿದ್ದಲ್ಲದೆ ದೇಶಿಯ ಭಾಷೆ ಬೆಳೆಸುವ ಕ್ರಮವನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದರು.[೮೮]

ನಿಜಾಮ್ ಪ್ರಭುತ್ವ ಇತರ ರಾಜ್ಯ ಅಥವಾ ಸಂಸ್ಥಾನಗಳಿಗೆ ಉನ್ನತ ಶಿಕ್ಷಣವನ್ನು ಕಲಿಯುವುದಕ್ಕೆ ತೆರಳುವ ತಮ್ಮ ಸಂಸ್ಥಾನದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡುವ ಕಾರ್ಯಕ್ರಮವನ್ನು ಜಾರಿಗೆ ತಂದಿರುವುದು ಗಮನಿಸಬಹುದಾಗಿದೆ. ಇದಕ್ಕೆ ಉದಾಹರಣೆ ಎಂದರೆ ಹೈದರಾಬಾದ್ ಕರ್ನಾಟಕದ ರಾಯಚೂರಿನ ಡಿ.ಕೆ. ಭೀಮಸೇನರಾಯರು ಕನ್ನಡ ಭಾಷೆಯಲ್ಲಿ ಉನ್ನತ ಶಿಕ್ಷಣ ಪಡೆಯಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ತೆರಳಿದಾಗ ಅವರಿಗೆ ನಿಜಾಮ್ ಸರ್ಕಾರ ವಿದ್ಯಾರ್ಥಿ ವೇತನ ಮಂಜೂರು ಮಾಡಿತು. ಈ ರೀತಿಯಾಗಿ ಮೈಸೂರು ವಿಶ್ವವಿದ್ಯಾನಿಲಯ ದಲ್ಲಿ ಎಂ.ಎ.ಪದವಿ ಪಡೆದ ನಂತರ ಅವರು ನಿಜಾಮ್ ಪ್ರಭುತ್ವ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಿದ ಕನ್ನಡ ವಿಭಾಗಕ್ಕೆ ಮೊದಲ ಅಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡರು. ಈ ರೀತಿಯಾಗಿ ನಿಜಾಮ್ ಪ್ರಭುತ್ವ ಶಿಕ್ಷಣ ಕ್ಷೇತ್ರದಲ್ಲಿ ನೀಡಿರುವ ಕೊಡುಗೆ ಅಗಾಧವಾಗಿದೆ.[೮೯] ನಿಜಾಮರ ಅಧೀನದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನಿಜಾಮ್ ಪ್ರಭುತ್ವ ಜಾರಿಗೆ ತಂದ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶ ನಿಜಾಮರ ಆಳ್ವಿಕೆಯಲ್ಲಿ ಸೇರ್ಪಡೆಗೊಳ್ಳುವ ಪೂರ್ವದಲ್ಲಿ ಗುಲಬರ್ಗಾ ಮತ್ತು ಬೀದರ ಜಿಲ್ಲಾ ಪ್ರದೇಶಗಳು ಮರಾಠ ಪೇಶ್ವೆಗಳ ವಶದಲ್ಲಿದ್ದವು. ಅದರಿಂದಾಗಿ ಪೇಶ್ವೆಗಳು ತಮ್ಮ ಆಡಳಿತ ಅವಧಿಯಲ್ಲಿ ಅವರ ಆಡಳಿತ ಭಾಷೆಯಾದ ಮರಾಠಿಯನ್ನು ಶಿಕ್ಷಣ ಭಾಷೆಯನ್ನಾಗಿ ಜಾರಿಗೊಳಿಸಿದ್ದರು. ಇದರಿಂದಾಗಿ ಈ ಪ್ರದೇಶಗಳ ವಿದ್ಯಾರ್ಥಿಗಳು ಮರಾಠಿ ಭಾಷೆಯ ಶಿಕ್ಷಣವನ್ನು ಕಲಿಯುವುದು ಅನಿವಾರ್ಯವಾಯಿತು. ಗುಲಬರ್ಗಾ ಮತ್ತು ಬೀದರ ಪ್ರದೇಶಗಳಲ್ಲಿ ಮರಾಠಿ ಭಾಷೆ ಶಿಕ್ಷಣದ ಶಾಲೆಗಳು ಆರಂಭಗೊಂಡವು. ನಂತರ ಈ ಹೈದರಾಬಾದ್ ಕರ್ನಾಟಕ ಪ್ರದೇಶ ರಾಜಕೀಯಲ್ಲಾದ ಬದಲಾವಣೆಯಿಂದ ಹೈದರಾಬಾದ್ ನಿಜಾಮರ ಅಧೀನಕ್ಕೆ ಒಳಗಾಯಿತು. ಆರಂಭದಲ್ಲಿ ನಿಜಾಮರು ಶಿಕ್ಷಣಕ್ಕೆ ಒತ್ತು ನೀಡದೆ ಕೇವಲ ಆಡಳಿತಾತ್ಮಕ ವಿಷಯಗಳಿಗೆ ಹೆಚ್ಚಿನ ಗಮನಹರಿಸಿದ್ದರಿಂದಾಗಿ ಗುಲಬರ್ಗಾ ಮತ್ತು ಬೀದರ ಪ್ರದೇಶಗಳಲ್ಲಿ ಮರಾಠಿ ಶಿಕ್ಷಣ

ಪದ್ಧತಿಯೇ ಮುಂದುವರೆಯಿತು. ಆದರೆ ರಾಯಚೂರ ಜಿಲ್ಲಾ ಪ್ರದೇಶದಲ್ಲಿ ಕನ್ನಡ ಶಾಲೆಗಳು ಆರಂಭಗೊಂಡು ಬೋಧನೆಯಲ್ಲಿ ತೊಡಗಿದ್ದವು. ರಾಯಚೂರು ಪ್ರದೇಶ ಮರಾಠಿಗರ ಅಧೀನದಲ್ಲಿ ಇರದ ಕಾರಣ ಕನ್ನಡ ಶಾಲೆಗಳು ಆರಂಭಗೊಂಡಿದ್ದವು. ನಿಜಾಮ್ ಕಿಲಿಚಖಾನನ ನಂತರ ಅಧಿಕಾರಕ್ಕೆ ಬಂದ ನಿಜಾಮ್ ನಸೀರ ದೌಲ್ ಬಹಾದ್ದೂರನ ಆಡಳಿತ ಅವಧಿಯಲ್ಲಿ ಸಂಸ್ಥಾನದಲ್ಲಿದ್ದ ಶಿಕ್ಷಣ ಪದ್ಧತಿಯಲ್ಲಿ ಮಹತ್ವದ ಬದಲಾವಣೆ ಕಂಡುಬಂದವು. ಶಿಕ್ಷಣ ಪದ್ಧತಿಯಲ್ಲಿ ಮಾರ್ಪಾಡು ಮಾಡಿಕೊಂಡು ಪ್ರಭುತ್ವ ಪರ್ಶಿಯನ್ ಮತ್ತು ಸ್ಥಳೀಯ ಭಾಷೆಗಳಲ್ಲಿ ಬೋಧಿಸುವ ಶಾಲೆಗಳನ್ನು ಆರಂಭಗೊಳಿಸಿ ತದನಂತರ ಅಫ್ಜಲ್-ಉದ್-ದೌಲ್‌ನ ಅಧಿಕಾರ ಅವಧಿಯಲ್ಲಿ ಆಡಳಿತ ಮತ್ತು ರಾಜ್ಯಭಾಷೆಯಾಗಿ ಉರ್ದುವನ್ನು ಸ್ವೀಕರಿಸಿದ್ದರಿಂದ ಶಿಕ್ಷಣ ಕೂಡ ಉರ್ದು ಮಾಧ್ಯಮದಲ್ಲಿಯೇ ಕಡ್ಡಾಯಗೊಳಿಸಲಾಯಿತು. ಹೀಗೆ ಹೈದರಾಬಾದ್ ಕರ್ನಾಟಕ ಪ್ರದೇಶದ ಜನರ ಮೇಲೆ ಆಳ್ವಿಕೆ ಮಾಡಿದ ಪ್ರಭುತ್ವಗಳು ತಮ್ಮ ಭಾಷೆಗಳನ್ನು ಬಲವಂತವಾಗಿ ಹೇರಲು ಪ್ರಯತ್ನಿಸಿದ್ದವು. ಪೇಶ್ವೆಗಳ ಆಳ್ವಿಕೆಯಲ್ಲಿ ಮರಾಠಿ ಭಾಷೆ ಮತ್ತು ನಿಜಾಮರ ಆಳ್ವಿಕೆಯಲ್ಲಿ ಉರ್ದು ಭಾಷೆಯ ಶಿಕ್ಷಣವನ್ನು ಕಲಿಯಬೇಕಾಯಿತು. ಬಹುಸಂಖ್ಯಾತ ಜನರು ಈ ಅನ್ಯಭಾಷೆಗಳನ್ನು ಕಲಿಯಲು ಆಗದೆ ಶಿಕ್ಷಣದಿಂದ ದೂರವೇ ಉಳಿಯಬೇಕಾಯಿತು. ಇನ್ನು ಕೆಲವು ಮೇಲ್ವರ್ಗದ ಸಮುದಾಯಗಳು ಮತ್ತು ಪುರೋಹಿತ ಶಾಹಿ ವರ್ಗ ಪ್ರಭುತ್ವದ ಜೊತೆಗೆ ಗುರುತಿಸಿಕೊಂಡಿದ್ದರಿಂದ ಮರಾಠಿ ಮತ್ತು ಉರ್ದು ಭಾಷೆಯಲ್ಲಿ ಶಿಕ್ಷಣ ಪಡೆದುಕೊಂಡು ಪ್ರಭುತ್ವಕ್ಕೆ ಹತ್ತಿರವಾಗುತ್ತಾ ಆಡಳಿತದಲ್ಲಿ ಗುರುತಿಸಿಕೊಂಡಿರುವುದು ಕಂಡುಬರುತ್ತದೆ.[೯೦]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜನರು ನಿಜಾಮ್ ಪ್ರಭುತ್ವ ಜಾರಿಗೊಳಿಸಿದ ಶಿಕ್ಷಣವನ್ನು ಕಲಿಯಲು ಆಸಕ್ತಿ ತೋರಿಸಿದವರು ಕೆಲವೇ ವರ್ಗಕ್ಕೆ ಸೇರಿದ ಜನರು ಮಾತ್ರ ಇನ್ನುಳಿದ ಬಹುಸಂಖ್ಯಾತ ಜನರು ತಮ್ಮ ಆಡುಭಾಷೆಯಾದ ಮನೆಭಾಷೆಯಾಗಿದ್ದ ಕನ್ನಡವನ್ನು ಬಿಟ್ಟು ಪರಿಚಯವೇ ಇಲ್ಲದ ಉರ್ದು ಭಾಷೆಯನ್ನು ಕಲಿಯುವುದು ಕಷ್ಟವಾಗಿ ಅನೇಕ ಕೆಳವರ್ಗದ ಸಮುದಾಯಗಳು ಮತ್ತು ಹಿಂದುಳಿದ ಸಮುದಾಯಗಳು ಶಿಕ್ಷಣದಿಂದ ದೂರವೇ ಉಳಿದವು. ಮೇಲ್ವರ್ಗದ ಸಮುದಾಯಗಳಾದ ಬ್ರಾಹ್ಮಣ, ಲಿಂಗಾಯಿತ, ಕೋಮ್ಮಿಟಗ, ಕುಟವ ಒಕ್ಕಲಿಗ ಸಮುದಾಯಗಳು ಉರ್ದು ಶಿಕ್ಷಣವನ್ನು ಪಡೆದುಕೊಂಡು ನಿಜಾಮ್ ಸರ್ಕಾರದಲ್ಲಿ ಸ್ಥಳೀಯ ಅಧಿಕಾರಿಗಳಾಗಿ, ತೆರಿಗೆ ವಸೂಲಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು.[೯೧] ನಂತರ ನಿಜಾಮ್ ಸರ್ಕಾರ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಉರ್ದು ಕೇಂದ್ರಿತ ಶಿಕ್ಷಣವನ್ನು ಬೋಧಿಸುವ ಪಾಠ ಶಾಲೆಗಳನ್ನು ಆರಂಭಿಸಿತು. ನಿಜಾಮ್ ಪ್ರಭುತ್ವದ ಸಂಸ್ಥಾನದಲ್ಲಿ ಉರ್ದು ಬೋಧಿಸುವ ೪೮೪೨ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿತು.

ಅದರಲ್ಲಿ ಸುಮಾರು ಶಾಲೆಗಳು ಕನ್ನಡ ಪ್ರದೇಶಗಳಾದ ಗುಲಬರ್ಗಾ, ಬೀದರ ಮತ್ತು ರಾಯಚೂರು ಜಿಲ್ಲಾ ಪ್ರದೇಶಗಳಲ್ಲಿ ಕಂಡುಬರುತ್ತವೆ. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿ ನೋಡಿದರೆ ಪ್ರಭುತ್ವ ಸ್ಥಾಪನೆ ಮಾಡಿರುವ ಶಾಲೆಗಳ ಸಂಖ್ಯೆ ಅತ್ಯಂತ ಕಡಿಮೆಯಾಗಿದ್ದವು. ಶಾಲೆಗಳು ಕೇವಲ ಜಿಲ್ಲಾ, ತಾಲ್ಲೂಕು ಮತ್ತು ನಗರ ಪ್ರದೇಶದಲ್ಲಿ ಸ್ಥಾಪನೆಯಾಗಿದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರಿಗೆ ಶಾಲೆಗಳು ಇಲ್ಲದ್ದರಿಂದ ಶಿಕ್ಷಣದಿಂದ ವಂಚಿತರಾದರು. ಹೈದರಾಬಾದ್ ನಿಜಾಮ್ ಪ್ರಭುತ್ವ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸ್ಥಾಪಿಸಿರುವ ಒಟ್ಟು ಪ್ರಾಥಮಿಕ ಶಾಲೆಯಿಂದ ಹಿಡಿದು ಕಾಲೇಜು ಹಂತದವರೆಗಿನ ಶಾಲೆಗಳ ವಿವರವನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಶಿಕ್ಷಣ ಸಂಸ್ಥೆಗಳು ೧೯೩೧

ಕ್ರಸಂ.	ಜಿಲ್ಲೆಯ ಹೆಸರು	ಕಾಲೇಜು ಸಂಖ್ಯೆ	ಪ್ರೌಢಶಾಲೆ ಸಂಖ್ಯೆ	ಮಾಧ್ಯಮಿಕ ಶಾಲೆ ಸಂಖ್ಯೆ	ಪ್ರಾಥಮಿಕ ಶಾಲೆ ಸಂಖ್ಯೆ	ತರಬೇತಿ ಶಾಲೆ ಸಂಖ್ಯೆ
೧	ಗುಲಬರ್ಗಾ	೧	೨	೧೧	೩೮೪	೨
೨	ಬೀದರ	–	೧	೯	೧೯೮	
೩	ರಾಯಚೂರು		೧	೭	೨೨೯	
ಒಟ್ಟು		೧	೪	೨೭	೮೧೧	೨

ನಿಜಾಮ್ ಅಧೀನದಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಶಿಕ್ಷಣ ಸಂಸ್ಥೆಗಳನ್ನು ಈ ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ. ೧೯೩೧ ಜನಸಂಖ್ಯೆ ವರದಿಯ ಅನುಗುಣವಾಗಿ ನಿಜಾಮ್ ಆಳ್ವಿಕೆಯಲ್ಲಿನ ಶಾಲೆಗಳ ಸಂಖ್ಯೆಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.[೯೨] ಒಟ್ಟಾರೆಯಾಗಿ ಹೈದರಾಬಾದ್ ಕರ್ನಾಟಕದಲ್ಲಿ ಒಂದು ಕಾಲೇಜು ೪ ಪ್ರೌಢಶಾಲೆಗಳು ೨೭ ಮಾಧ್ಯಮಿಕ ಶಾಲೆಗಳು ಮತ್ತು ೮೧೧ ಪ್ರಾಥಮಿಕ ಶಾಲೆಗಳನ್ನು ಗಮನಿಸಬಹುದಾಗಿದೆ.[೯೩] ನಿಜಾಮರ ಆಡಳಿತದ ಸುಬಾಗಳಲ್ಲಿ ಒಂದೊಂದು ಕಾಲೇಜು ಸ್ಥಾಪಿಸಲಾಯಿತ್ತು. ಅದರಂತೆ ಗುಲಬರ್ಗಾದಲ್ಲಿ ಕೂಡ ಒಂದು ಕಾಲೇಜು ಸ್ಥಾಪನೆಯಾಯಿತು.[೯೪] ೧೮೮೨ರಲ್ಲಿ ನಿಜಾಮ್ ಸರ್ಕಾರ ಪ್ರತಿಯೊಂದು ಜಿಲ್ಲೆಗೆ ಒಂದೊಂದು ಪ್ರೌಢಶಾಲೆಯನ್ನು ಆರಂಭಿಸಲು ತೀರ್ಮಾನಿಸಲಾಯಿತು. ಗುಲಬರ್ಗಾ ಜಿಲ್ಲೆಯ ವಿಸ್ತೀರ್ಣವಾದ್ದರಿಂದ ಮಾಧ್ಯಮಿಕ ಶಾಲೆ ಒಂದನ್ನು ಪ್ರೌಢಶಾಲೆಯನ್ನಾಗಿ ಮೇಲ್ದರ್ಜೆಗೆ ಏರಿಸ ಲಾಯಿತು. ಬೀದರ ಮತ್ತು ರಾಯಚೂರಿನಲ್ಲಿ ತಲಾ ಒಂದರಂತೆ ಪ್ರೌಢಶಾಲೆಯನ್ನು ಆರಂಭಿಸಲಾಯಿತು. ಗ್ರಾಮೀಣ ಮಟ್ಟದ ಜನರು ಪ್ರೌಢಶಾಲೆಯಲ್ಲಿ ಪ್ರವೇಶ ಪಡೆಯಬೇಕಾದರೆ ಜಿಲ್ಲಾ ಕೇಂದ್ರಗಳನ್ನು

ಅವಲಂಬಿಸಬೇಕಾಯಿತು. ಅದರಿಂದಾಗಿ ದೂರ ಪ್ರದೇಶಗಳಿಂದ ಹೋಗುವುದಕ್ಕೆ ಸಾಧ್ಯವಾಗದ ಕಾರಣ ಅನೇಕ ವಿದ್ಯಾರ್ಥಿಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಶಿಕ್ಷಣವನ್ನು ಕೊನೆಗೊಳಿಸುತ್ತಿದ್ದರು.[೯೫] ೧೮೮೯ರಲ್ಲಿ ನಿಜಾಮ್ ಸರ್ಕಾರ ಗುಲಬರ್ಗಾದಲ್ಲಿ ನಾರ್ಮಲ್ ಎಂಬ ಹೆಸರಿನಲ್ಲಿ ಶಿಕ್ಷಕರ ತರಬೇತಿ ಶಾಲೆಯನ್ನು ಆರಂಭಿಸಿತು. ೧೯೧೪ರಲ್ಲಿ ಗುಲಬರ್ಗಾದಲ್ಲಿಯೇ ರೆ॥ ಜೆ.ವಿ. ಬುಟ್ರಿಕ ಅವರು ರೂರಲ್ ಟೀಚರ್ಸ್ ಟ್ರೈನಿಂಗ್ ಶಾಲೆಯನ್ನು ಆರಂಭಿಸಿರುವುದು ಗಮನಿಸಬಹುದು.[೯೬]

ಹೈದರಾಬಾದ್ ಕರ್ನಾಟಕ ಗ್ರಾಮೀಣ ಪ್ರದೇಶದಿಂದ ಕೂಡಿಕೊಂಡಿದ್ದರಿಂದ ನಿಜಾಮ್ ಸರ್ಕಾರ ಸ್ಥಾಪನೆ ಮಾಡಿರುವ ಶಾಲೆಗಳು ಬಹುತೇಕವಾಗಿ ನಗರ ಮತ್ತು ತಾಲೂಕು ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಸ್ಥಾಪನೆಗೊಂಡಿದವು. ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದ ಬಹುಸಂಖ್ಯಾತ ಜನರು ಶಿಕ್ಷಣ ಪಡೆಯಬೇಕಾದರೆ ತಾಲೂಕು ಇಲ್ಲವೇ ಜಿಲ್ಲಾ ಪ್ರದೇಶಗಳನ್ನು ಅವಲಂಬಿಸಬೇಕಿತ್ತು. ಅದರಿಂದಾಗಿ ಬಹುತೇಕ ಗ್ರಾಮೀಣ ಜನರು ಶಿಕ್ಷಣದಿಂದ ಹೊರಗುಳಿಯಬೇಕಾಯಿತು. ನಿಜಾಮ್ ಪ್ರಭುತ್ವ ವಿಶಾಲವಾದ ಭೂಪ್ರದೇಶ ಹೊಂದಿರುವ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಅತ್ಯಂತ ಕಡಿಮೆ ಪ್ರಮಾಣದ ಶಾಲೆಗಳನ್ನು ಆರಂಭಿಸಿದ್ದರಿಂದ ಶಿಕ್ಷಣವನ್ನು ಕಲಿಯುವ ಹಂಬಲವಿದ್ದ ಅದೆಷ್ಟೋ ವಿದ್ಯಾರ್ಥಿಗಳು ಶಾಲೆಗಳ ಕೊರತೆಯಿಂದಾಗಿ ಶಿಕ್ಷಣದಿಂದ ವಂಚಿತರಾದರು. ನಿಜಾಮ್ ಸರ್ಕಾರವು ಸ್ಥಾಪಿಸಿರುವ ಶಾಲೆಗಳು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ಗ್ರಾಮಗಳ ಸಂಖ್ಯೆಯನ್ನು ಒಳಗೊಂಡ ಸಾಕ್ಷರತೆ ಪ್ರಮಾಣವನ್ನು ವಿವರಿಸುವ ಕೋಷ್ಟಕವನ್ನು ಈ ಕೆಳಗೆ ವಿವರಿಸಲಾಗಿದೆ.

ನಿಜಾಮ್ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದ ಗ್ರಾಮಗಳು ಮತ್ತು ಶಾಲೆಗಳ ಸಂಖ್ಯೆಯ ಕೋಷ್ಟಕ ೧೯೪೧

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮಗಳ ಸಂಖ್ಯೆ	ಶಾಲೆಗಳ ಸಂಖ್ಯೆ	ಸಾಕ್ಷರತಾ ಪ್ರಮಾಣ
೧	ಗುಲಬರ್ಗಾ	೧೧೨೬	೪೫೦	೩.೭
೨	ಬೀದರ	೧೪೨೨	೨೪೩	೨.೫
೩	ರಾಯಚೂರು	೧೭೪೮	೨೬೯	೪.೮
ಒಟ್ಟು		೪೨೯೬	೯೬೨	

ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಗ್ರಾಮಗಳ ಸಂಖ್ಯೆಯನ್ನು ನೋಡಿದರೆ ಒಂದೊಂದು ಗ್ರಾಮಕ್ಕೆ ಒಂದು ಶಾಲೆ ಇರದಿರುವುದು ಗಮನಿಸಬಹುದು. ಗುಲಬರ್ಗಾ ಜಿಲ್ಲೆ ನಿಜಾಮ್ ಆಡಳಿತದಲ್ಲಿ ಸುಬಾ ಆದ್ದರಿಂದ ಈ ಜಿಲ್ಲೆಗೆ ಸುಮಾರು ೪೫೦ ಶಾಲೆಗಳು ಕಂಡುಬರುತ್ತವೆ. ಆದರೆ ಜಿಲ್ಲೆಯ ಸಾಕ್ಷರತೆಯ ಪ್ರಮಾಣ ನೋಡಿದರೆ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಈ ಕೋಷ್ಟಕದಲ್ಲಿನ ಮಾಹಿತಿಯ ಆಧಾರದ ಮೇಲೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಾಕ್ಷರತೆ ಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿತ್ತೆಂದು ತಿಳಿದುಬರುತ್ತದೆ. ಪ್ರಭುತ್ವದಲ್ಲಿ ಕಾರ್ಯನಿರ್ವಹಿಸುವವರ ಕುಟುಂಬ ಮತ್ತು ಮನೆತನದವರೇ ಹೆಚ್ಚಾಗಿ ಶಿಕ್ಷಣವನ್ನು ಪಡೆದಿದ್ದಾರೆ. ಅದರಲ್ಲಿ ನಗರವಾಸಿಗಳು ಅಲ್ಪ ಪ್ರಮಾಣವಾದರೂ ಶಿಕ್ಷಣ ಪಡೆದುಕೊಂಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿನ ಕೆಳವರ್ಗದ ಜನರು ದುಡಿಯುವ ವರ್ಗವು ಶಿಕ್ಷಣವನ್ನು ಪಡೆದುಕೊಳ್ಳದೆ ಅನಕ್ಷರಸ್ಥರಾಗಿ ಇನ್ನೊಂದು ಸಮುದಾಯಗಳ ತಾಳಕ್ಕೆ ತಕ್ಕಂತೆ ಜೀವನ ಸಾಗಿಸುತ್ತಿದ್ದರು.[೬೭]

ನಿಜಾಮ್ ಸರ್ಕಾರ ಸಂಸ್ಥಾನದಲ್ಲಿ ಉರ್ದು ಮಾಧ್ಯಮ ಶಿಕ್ಷಣವನ್ನು ಕಡ್ಡಾಯಗೊಳಿಸಿತು. ಅಂದಿನಿಂದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಶಾಲೆಗಳು ಉರ್ದು ಭಾಷೆಯಲ್ಲಿಯೇ ಬೋಧನೆಯನ್ನು ಮಾಡುವ ಪರಿಪಾಠ ಬೆಳೆಸಿಕೊಂಡವು. ಇದೇ ನಿಜಾಮ್ ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ಅವರವರ ಮಾತೃಭಾಷೆಯಲ್ಲಿ ಕಲಿಯುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿತು. ಹೈದರಾಬಾದ್ ಕರ್ನಾಟಕ ಪ್ರದೇಶದ ಬಹುಸಂಖ್ಯಾತರು ಆರಂಭದ ಪ್ರಾಥಮಿಕ ಹಂತದ ಶಾಲೆಯನ್ನು ಮಾತೃ ಭಾಷೆಯಲ್ಲಿ ಕಲಿಯುತ್ತಿದ್ದರು. ಮಾಧ್ಯಮಿಕ ಶಾಲೆಗೆ ಸೇರ್ಪಡೆಗೊಂಡ ನಂತರ ಕಡ್ಡಾಯವಾಗಿ ಉರ್ದು ಮಾಧ್ಯಮದಲ್ಲಿಯೇ ಅಭ್ಯಾಸ ಮಾಡಬೇಕಾಯಿತು. ಇದರಿಂದ ಅದೆಷ್ಟೋ ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಣ ಕಲಿತು ಮುಂದಿನ ಅಭ್ಯಾಸಕ್ಕೆ ಹೋಗದೆ ಶಾಲೆಯಿಂದ ಹೊರಗಡೆ ಉಳಿಯುವಂತಾಯಿತು. ಏಕೆಂದರೆ ಇಲ್ಲಿಯವರೇ ಮಾತೃಭಾಷೆಯಲ್ಲಿ ಕಲಿತ ವಿದ್ಯಾರ್ಥಿಗಳು ಮುಂದೆ ಉರ್ದು ಭಾಷೆಯನ್ನು ಕಲಿಯುವುದು ಕಷ್ಟವಾದ್ದರಿಂದ ಬಹುಸಂಖ್ಯಾತ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾದರು.[೬೮]

ನಿಜಾಮ್ ಸರ್ಕಾರ ಉರ್ದು ಭಾಷೆಯನ್ನು ಕಡ್ಡಾಯಗೊಳಿಸಿದ ನಂತರ ಆಯಾ ಮಾತೃ ಭಾಷೆಯನ್ನು ಕಲಿಯುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಅಂದರೆ ಇನ್ನೊಂದು ಐಚ್ಛಿಕ ವಿಷಯವಾಗಿ ಕನ್ನಡವನ್ನು ಕಲಿಯುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಕನ್ನಡವನ್ನು ಐಚ್ಛಿಕ ವಿಷಯವನ್ನು ಆಯ್ಕೆ ಮಾಡಿಕೊಂಡರೆ ವಿಜ್ಞಾನ ಮತ್ತು ಗಣಿತ ವಿಷಯವನ್ನು ಕಳೆದುಕೊಳ್ಳಬೇಕಿತ್ತು. ಇಲ್ಲವೆ ವಿಜ್ಞಾನ ಮತ್ತು ಗಣಿತ ವಿಷಯವನ್ನು ತೆಗೆದುಕೊಂಡರೆ ಕನ್ನಡ ವಿಷಯವನ್ನು ಕಳೆದುಕೊಳ್ಳಬೇಕಾಗುತಿತ್ತು. ಈ ರೀತಿಯ ಗೊಂದಲದಿಂದಾಗಿ ಇನ್ನೂ ಕೆಲವು ವಿದ್ಯಾರ್ಥಿಗಳು ಶಾಲೆಯಿಂದ ಹೊರಗಡೆ

ಉಳಿಯಬೇಕಾಯಿತು. ಯಾವುದು ತೆಗೆದುಕೊಳ್ಳಬೇಕು. ಯಾವುದು ಬಿಡಬೇಕು ಎನ್ನುವ ಗೊಂದಲದಿಂದ ಅದೆಷ್ಟೋ ವಿದ್ಯಾರ್ಥಿಗಳು ಶಾಲೆಯಿಂದ ದೂರವಾದರು.[೯೯]

ಇನ್ನೂ ಕೆಲವು ವಿದ್ಯಾರ್ಥಿಗಳು ಕನ್ನಡ ಭಾಷೆಗಿಂತ ಉದ್ಯೋಗವನ್ನು ನೀಡುವ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದರು. ಕನ್ನಡ ಐಚ್ಛಿಕ ವಿಷಯವನ್ನು ಬಿಟ್ಟುಕೊಟ್ಟು ಉರ್ದು ಮತ್ತು ಗಣಿತ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಂಡರು. ಯುವಕರಿಗೆ ಕನ್ನಡ ಭಾಷೆಗಿಂತ ಉದ್ಯೋಗದ ಭಾಷೆಯನ್ನು ಆಯ್ಕೆ ಮಾಡಿಕೊಂಡು ನಿಜಾಮ್ ಪ್ರಭುತ್ವದಲ್ಲಿ ಉದ್ಯೋಗವನ್ನು ಪಡೆದುಕೊಳ್ಳುವ ಅಭಿಲಾಷೆ ಹೊಂದಿದ್ದರು. ಈಗಾಗಲೇ ಪ್ರಭುತ್ವದ ಜೊತೆಗೆ ಗುರುತಿಸಿಕೊಂಡ ವರ್ಗವೇ ಈ ನಿರ್ಧಾರವನ್ನು ತೆಗೆದುಕೊಂಡಿತು. ಅವರು ಮಾತ್ರ ಸರ್ಕಾರದ ಉದ್ಯೋಗದ ಬಗ್ಗೆ ಜ್ಞಾನ ಹೊಂದಿದವರಾಗಿದ್ದರು. ಇನ್ನುಳಿದ ದುಡಿಯುವ ವರ್ಗ ಹಾಗೂ ರೈತಾಪಿ ವರ್ಗ ಉದ್ಯೋಗದ ಬಗೆಗೆ ಜ್ಞಾನವಿಲ್ಲದ್ದರಿಂದ ಮೇಲ್ವರ್ಗದವರ ಅಧೀನದಲ್ಲಿಯೇ ದುಡಿಯಬೇಕಾಯಿತು. ಭಾಷೆಗೆ ಸಂಬಂಧಿಸಿದ ಗೊಂದಲದಿಂದಾಗಿ ಅನೇಕ ವಿದ್ಯಾರ್ಥಿಗಳು ಹಿಂದೂ ಮುಸ್ಲಿಮ್ ಎನ್ನದೇ ಸ್ತ್ರೀಯರು ಕೂಡ ಶಾಲೆಯನ್ನು ಬಿಟ್ಟುಕೊಟ್ಟರು. ಇದರಿಂದಾಗಿ ಸಂಸ್ಥಾನದ ಸಾಕ್ಷರತೆ ಪ್ರಮಾಣ ಕಡಿಮೆಯಾಯಿತು. ಪ್ರತಿವರ್ಷ ಭಾಷೆಗೆ ಸಂಬಂಧಿಸಿದ ಗೊಂದಲದಿಂದ ಅನೇಕ ವಿದ್ಯಾರ್ಥಿ ಶಿಕ್ಷಣದಿಂದ ವಂಚಿತರಾದರು. ಭಾಷೆಯಿಂದ ಸಾಕ್ಷರತೆ ಪ್ರಮಾಣದಲ್ಲಾದ ಸಮಸ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರ ನೀಡಲಾಗಿದೆ.[೧೦೦]

ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕದ ಸಾಕ್ಷರತೆ ಪ್ರಮಾಣ

ವರ್ಷ	ಹಿಂದೂ ಸ್ತ್ರೀಯರ ಸಾಕ್ಷರತೆ ಪ್ರಮಾಣ	ಮುಸ್ಲಿಮ್ ಸ್ತ್ರೀಯರ ಸಾಕ್ಷರತೆ ಪ್ರಮಾಣ	ಹಿಂದೂ ಪುರುಷರ ಸಾಕ್ಷರತೆ ಪ್ರಮಾಣ	ಮುಸ್ಲಿಮ್ ಪುರುಷರ ಸಾಕ್ಷರತೆ ಪ್ರಮಾಣ
೧೮೮೧	.೦೪	.೦೨	೨.೯	೪.೯
೧೮೯೧	.೧	.೩	೩.೪	೬.೨
೧೯೦೧	.೧೯	.೧	೨.೫	೫.೫
೧೯೧೧	.೧೯	೧.೨	೨.೩	೫.೯
೧೯೨೧	.೩	೩	೨.೬	೮.೯
೧೯೩೧	.೬	೩.೪	೩.೩	೧೦.೪


ಮೇಲಿನ ಕೋಷ್ಟಕದಲ್ಲಿ ನೀಡಿರುವ ಅಂಕಿ–ಅಂಶಗಳನ್ನು ಗಮನಿಸಿದಾಗ ಈ ಕೋಷ್ಟಕದಲ್ಲಿ ಆರು ಜನಸಂಖ್ಯಾ ವರದಿಯನ್ನು ಆಧರಿಸಿ ಮಾಹಿತಿಯನ್ನು ಸಿದ್ಧಪಡಿಸಲಾಗಿದೆ. ಅದರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಸಾಕ್ಷರತೆ ಪ್ರಮಾಣವನ್ನು ನೋಡಿದಾಗ ಸಂಸ್ಥಾನದಲ್ಲಿ ಹಿಂದೂ ಮತ್ತು ಮುಸ್ಲಿಮ್ ಸ್ತ್ರೀಯರ ಸಾಕ್ಷರತೆ ಪ್ರಮಾಣ ಮತ್ತು ಪುರುಷರ ಸಾಕ್ಷರತೆ ಪ್ರಮಾಣದನ್ವಯ ಶಿಕ್ಷಣ ಅತ್ಯಂತ ಕೆಳಮಟ್ಟದಲ್ಲಿದ್ದು ಕಂಡುಬರುತ್ತದೆ. ಅದರಲ್ಲೂ ಸ್ತ್ರೀಯರಿಗೆ ಸಂಬಂಧಿಸಿದ ಸಾಕ್ಷರತೆ ಪ್ರಮಾಣ ಸಂಪೂರ್ಣವಾಗಿ ಕೆಳಮಟ್ಟದಲ್ಲಿದ್ದರಿಂದ ಸ್ತ್ರೀಯರಿಗೆ ಶಿಕ್ಷಣದಲ್ಲಿ ಸ್ವಾತಂತ್ರ್ಯವಿರಲಿಲ್ಲ ಎಂಬುದು ತಿಳಿದುಬರುತ್ತದೆ.[೧೦೧]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಉರ್ದು ಕಡ್ಡಾಯ ಶಿಕ್ಷಣ ಮತ್ತು ಕನ್ನಡ ಐಚ್ಛಿಕ ವಿಷಯ ನಡುವಿನ ಚರ್ಚೆಯಿಂದ ಬಹುಸಂಖ್ಯಾತ ಸಮುದಾಯಗಳು ತಮ್ಮ ಆಡುಭಾಷೆಯಾದ ಕನ್ನಡ ಐಚ್ಛಿಕ ವಿಷಯವಾದ್ದರಿಂದ ಉರ್ದುವನ್ನು ಕಲಿಯುವಲ್ಲಿ ನಿರಾಸಕ್ತಿ ತೋರಿಸಿದವು. ಆದರೆ ಬ್ರಾಹ್ಮಣ, ಲಿಂಗಾಯಿತ, ಕುಡುವ ಒಕ್ಕಲಿಗ ಮತ್ತು ಮುಸ್ಲಿಮ್ ಸಮುದಾಯದಲ್ಲಿನ ಕೆಲವರು ಸರ್ಕಾರದ ಆದೇಶದಂತೆ ಉರ್ದುವನ್ನೇ ಶಿಕ್ಷಣ ಮಾಧ್ಯಮವಾಗಿ ಆಯ್ಕೆ ಮಾಡಿಕೊಂಡರು. ಉರ್ದು ಭಾಷೆಯನ್ನು ಕಲಿಯುವುದರ ಮೂಲಕ ನಿಜಾಮ್ ಪ್ರಭುತ್ವದಲ್ಲಿ ಉದ್ಯೋಗವನ್ನು ಪಡೆದುಕೊಂಡರು. ಉರ್ದು ಶಿಕ್ಷಣವನ್ನು ಪಡೆದವರಲ್ಲಿ ಬ್ರಾಹ್ಮಣರೇ ಮೊದಲಿಗರು. ಏಕೆಂದರೆ ನಿಜಾಮ್ ಸರ್ಕಾರ ಸ್ಥಾಪನೆ ಆಗುವುದಕ್ಕಿಂತ ಮುಂಚೆ ಗುಲಬರ್ಗಾ ಮತ್ತು ಬೀದರ ಪ್ರದೇಶಗಳು ಮರಾಠರ ಅಧೀನ ದಲ್ಲಿದ್ದರಿಂದ ಮರಾಠರ ಆಡಳಿತ ಭಾಷೆಯಾದ ಮೋಡಿ ಲಿಪಿಯನ್ನು ಕಲಿತವರು ಇದೇ ಬ್ರಾಹ್ಮಣರು. ನಂತರ ನಿಜಾಮ್ ಸರ್ಕಾರ ಜಾರಿಗೆ ತಂದ ಆಡಳಿತ ಭಾಷೆ ಉರ್ದು ಕೂಡ ಕಲಿತವರು ಇದೇ ಬ್ರಾಹ್ಮಣರು. ಅವರು ತಮಗೆ ಯಾವ ಭಾಷೆಯ ಸರ್ಕಾರ ಅಥವಾ ಪ್ರಭುತ್ವದ ಆಡಳಿತ ಕೇಂದ್ರದಲ್ಲಿ ಉದ್ಯೋಗ ಸಿಗುತ್ತದೆಯೋ ಆ ಭಾಷೆಯನ್ನು ಕಲಿಯುವುದರ ಮೂಲಕ ತಮ್ಮ ಶ್ರೇಷ್ಠತೆ ಅಥವಾ ಬುದ್ಧಿವಂತಿಕೆ ಎಂಬ ಭಾವನೆಯನ್ನು ಮೂಡಿಸುವುದಾಗಿದೆ.[೧೦೨]

ಉದ್ಯೋಗವನ್ನು ಪಡೆಯುವುದಕ್ಕಾಗಿ ಉರ್ದು ಮತ್ತು ಇಂಗ್ಲೀಷ್ ಭಾಷೆಯಲ್ಲಿ ಶಿಕ್ಷಣ ಪಡೆಯುವುದರ ಜೊತೆಗೆ ಉದ್ಯೋಗವನ್ನು ಕೂಡ ಪಡೆದುಕೊಳ್ಳುತ್ತಿದ್ದರು. ಇನ್ನು ಕೆಲವು ಮೇಲ್ವರ್ಗದ ಸಮುದಾಯಗಳು ಕೂಡ ಉರ್ದು ಶಿಕ್ಷಣವನ್ನು ಪಡೆಯುವುದರಿಂದ ಸಮಾಜದಲ್ಲಿ ಗೌರವಯುತ ಜೀವನ ಸಾಗಿಸಲು ಸಾಧ್ಯ ಎಂಬ ಮನೋಭಾವನೆ ತಳೆದಿದ್ದವು. ಕೆಳವರ್ಗದ ದುಡಿಯುವ ಜನರು ಮಾತನಾಡುವ ಭಾಷೆ ಕನ್ನಡವೇ ಆಗಿದ್ದರಿಂದ ಶಿಕ್ಷಣ ಭಾಷೆಯಾದ ಉರ್ದು ಕಲಿಯುವುದು ಕಷ್ಟವಾಯಿತು. ಇನ್ನು ಕೆಲವರು ಶಿಕ್ಷಣವೆಂದರೆ, ಏನೆಂದು ತಿಳಿಯದೆ ಇದ್ದವರು ಜಮೀನ್ದಾರ, ದೇಸಾಯಿ, ದೇಶಮುಖ ಮತ್ತು ಜಹಾಗೀರದಾರರ ಮನೆಯಲ್ಲಿ ಜೀತಪದ್ಧತಿ ಹಾಗೂ ಬಿಟ್ಟಿಚಾಕರಿ

ಮಾಡಿಕೊಂಡು ಶೋಷಣೆಯಲ್ಲಿಯೇ ಜೀವನ ಸಾಗಿಸುತ್ತಿದ್ದರು.[೧೦೩] ಇದಕ್ಕೆ ಮೇಲ್ವರ್ಗ ಕೂಡ ಬೆಂಬಲಿಸಿರುವುದು ಕಂಡುಬರುತ್ತದೆ. ದುಡಿಯುವ ವರ್ಗ ಶಿಕ್ಷಣ ಕಲಿಯುವುದರಿಂದ ಇದ್ದ ಸರ್ಕಾರಿ ಉದ್ಯೋಗಗಳಲ್ಲಿ ಅವರಿಂದ ಪ್ರತಿಸ್ಪರ್ಧೆ ಉಂಟಾದರೆ ಎಂಬ ಉದ್ದೇಶದಿಂದ. ಹಾಗೇ ತಮ್ಮ ಜಮೀನಿನಲ್ಲಿ ಕೆಲಸ ಮಾಡುವ ಜೀತದಾಳನ್ನು ಕಳೆದುಕೊಳ್ಳುವುದಕ್ಕೆ ಸಿದ್ಧರಿಲ್ಲದ ಇವರು ದುಡಿಯುವ ವರ್ಗವನ್ನು ಶಿಕ್ಷಣದಿಂದ ದೂರವಿಡುವ ಹುನ್ನಾರವನ್ನು ಮಾಡಿರುವುದು ಕಂಡುಬರುತ್ತದೆ.[೧೦೪] ಹೈದರಾಬಾದ್ ಕರ್ನಾಟಕದಲ್ಲಿ ನಿಜಾಮರ ಆಳ್ವಿಕೆಯಲ್ಲಿ ಶಿಕ್ಷಣ ಪಡೆದ ಸಮುದಾಯಗಳ ಸಾಕ್ಷರತೆ ಪ್ರಮಾಣವನ್ನು ತೋರಿಸುವ ಗ್ರಾಫನ್ನು ಈ ಕೆಳಗಿನಂತೆ ತೋರಿಸಲಾಗಿದೆ.

ನಿಜಾಮ್ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕದ ಸಮುದಾಯಗಳ ಸಾಕ್ಷರತಾ ಪ್ರಮಾಣ ೧೯೪೧



ಈ ಮೇಲಿನ ರೇಖಾಚಿತ್ರವನ್ನು ನೋಡಿದಾಗ ನಿಜಾಮರ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಸಮುದಾಯಗಳ ಸಾಕ್ಷರತೆ ಪ್ರಮಾಣವನ್ನು ವಿವರಿಸುವುದಾಗಿದೆ. ೧೯೪೧ರ ಜನಗಣತಿಯ ವರದಿಯ ಪ್ರಕಾರವಾಗಿ x–೦ ರೇಖೆಯು ಸಾಕ್ಷರತಾ ಪ್ರಮಾಣವನ್ನು ಸೂಚಿಸಿರುವ ರೇಖೆಯಾಗಿದೆ. y–೦ ರೇಖೆಯ ಸಮುದಾಯಗಳನ್ನು ಸೂಚಿಸುತ್ತದೆ. ಈ ರೇಖಾಚಿತ್ರದಲ್ಲಿ ಕಂಡುಬರುವಂತೆ ಇತರ ಹಿಂದುಗಳು ಬ್ರಾಹ್ಮಣ ಹಿಂದೂಗಳು[೧೦೫] ಮತ್ತು ಮುಸ್ಲಿಮ್ ಸಮುದಾಯಗಳ ಶಿಕ್ಷಣ ಪ್ರಮಾಣ ಉತ್ತಮ ರೀತಿಯಯಾಗಿ ಕಂಡುಬರುತ್ತದೆ.[೧೦೬] ಇನ್ನುಳಿದ ಸಮುದಾಯಗಳ ಸಾಕ್ಷರತಾ ಪ್ರಮಾಣ ಅತ್ಯಂತ ಕಡಿಮೆ ಮಟ್ಟದಲ್ಲಿರುವುದು ತಿಳಿಯಬಹುದಾಗಿದೆ.[೧೦೭]

೬.೬. ಭಾಷಿಕ ಯಜಮಾನಿಕೆ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸುಮಾರು ಆರು ನೂರು ವರ್ಷಗಳಿಂದ ವಿವಿಧ ಭಾಷೆಗಳು ಪ್ರವೇಶಿಸುವ ಮೂಲಕ ಆಡಳಿತ ಭಾಷೆ ಮತ್ತು ಉದ್ಯೋಗದ ಭಾಷೆಗಳಾಗಿ ಸ್ಥಳೀಯ

ಭಾಷೆ ಮತ್ತು ಜನರ ಮೇಲೆ ಯಜಮಾನಿಕೆ ಭಾಷೆಯಾಗಿ ರೂಪುಗೊಂಡವು ಸ್ಥಳೀಯ ಭಾಷೆಯಾದ ಕನ್ನಡಕ್ಕೆ ಪ್ರಭುತ್ವದ ಮನ್ನಣೆ ಸಿಗದೆ ಹಿನ್ನಡೆಯಾಗಿರುವುದು ಗಮನಿಸಬಹುದು. ವಿಜಯನಗರ ಪತನದ ನಂತರ ಈ ಪ್ರದೇಶವನ್ನು ಆಳ್ವಿಕೆ ಮಾಡಿದ ಬಹಮನಿ, ಆದಿಲ್‌ಶಾಹಿ ಮತ್ತು ಪೇಶ್ವೆಗಳ ಕಾಲದಲ್ಲಿ ಫಾರಸಿ ಮತ್ತು ಮರಾಠಿ ಭಾಷೆಗಳು ಆಡಳಿತ ಭಾಷೆಯಾಗಿ ರೂಪುಗೊಂಡು ಯಜಮಾನಿಕೆ ಮಾಡಿರುವುದು ಕಂಡುಬರುತ್ತದೆ. ಈ ಪ್ರಭುತ್ವಗಳು ಭಾಷೆಗಳ ಮೂಲಕ ಪ್ರಭಾವ ಬೀರಿ ತನ್ನ ವಲಯಗಳನ್ನು ವಿಸ್ತರಿಸಿಕೊಳ್ಳುತ್ತಾ ಅನ್ಯ ಭಾಷಿಕರನ್ನು ಮತ್ತು ಸ್ಥಳೀಯ ಭಾಷಿಕರನ್ನು ತನ್ನ ಪ್ರಭಾವಲಯದಲ್ಲಿ ಸೇರಿಸಿಕೊಂಡು ಹಂತ ಹಂತವಾಗಿ ಯಜಮಾನಿಕೆ ಭಾಷೆಗಳಾಗಿ ಬೆಳವಣಿಗೆ ಹೊಂದುತ್ತಾ ಹೋಗಿರುವುದನ್ನು ಗಮನಿಸಬಹುದಾಗಿದೆ.[೧೦೮]

ನಂತರ ಈ ಪ್ರದೇಶ ಆಳ್ವಿಕೆ ಮಾಡಿದ ಹೈದರಾಬಾದ್ ನಿಜಾಮರು ಆರಂಭದಲ್ಲಿ ಫಾರಸಿ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ರೂಪಿಸಿಕೊಂಡರು. ಆದರೆ ಸಂಸ್ಥಾನದಲ್ಲಾದ ಬದಲಾವಣೆ ಯಿಂದಾಗಿ ಫಾರಸಿಯ ಬದಲಾಗಿ ಉರ್ದು ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಸ್ವೀಕರಿಸಿದರು. ಇದರಿಂದಾಗಿ ಉರ್ದು ಭಾಷೆ ಪ್ರಭುತ್ವದ ಆಡಳಿತ ಭಾಷೆಯಾಯಿತು.[೧೦೯] ಪ್ರಭುತ್ವ ತನ್ನ ಅಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಬಲಪ್ರಯೋಗ ಇರಲೇಬೇಕು ಎಂದೇನಿಲ್ಲ. ಬಲಪ್ರಯೋಗದಿಂದಲೇ ಯಜಮಾನಿಕೆ ಯನ್ನು ಸ್ಥಾಪಿಸಲು ಸಾಧ್ಯವಿಲ್ಲ. ಹಾಗೇನಾದರೂ ಸ್ಥಾಪಿಸಿದರೂ ಅದು ತಾತ್ಕಾಲಿಕವಾಗಿರುತ್ತದೆ ಅಷ್ಟೇ. ಜನರನ್ನು ನಂಬಿಸಿ, ಒಪ್ಪಿಸುವ ಹಾಗೂ ಮನವೂಲಿಸುವ ರೀತಿಯಲ್ಲಿ ಯಜಮಾನಿಕೆ ಸ್ಥಾಪಿಸುತ್ತದೆ. ಈ ರೀತಿಯಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಿಜಾಮರು ಆಡಳಿತ ಭಾಷೆಯಾಗಿ ಉರ್ದು ಹೇರುತ್ತ ಸ್ಥಳೀಯರ ಮನವೊಲಿಸುವ ತಂತ್ರವನ್ನು ಮಾಡಿರುವುದನ್ನು ಗಮನಿಸಬಹುದು. ಸಂಸ್ಥಾನದಲ್ಲಿ ಯಾವಾಗ ಉರ್ದು ಆಡಳಿತ ಭಾಷೆಯಾಯಿತೋ ಆವಾಗ ಸ್ಥಳೀಯರಿಗೆ ಉರ್ದು ಭಾಷೆ ಅನಿವಾರ್ಯವಾಯಿತು. ನಿಜಾಮ್ ಪ್ರಭುತ್ವದಲ್ಲಿ ಉದ್ಯೋಗವನ್ನು ಪಡೆಯಬೇಕಾದರೆ ಉರ್ದು ಭಾಷೆಯು ಕಲಿಯಬೇಕಾಯಿತು. ಇದರಿಂದಾಗಿ ಸ್ಥಳೀಯರು ಉದ್ಯೋಗವನ್ನು ಪಡೆಯುವುದಕ್ಕಾಗಿ ಉರ್ದು ಭಾಷೆಯನ್ನು ಕಲಿಯಲು ಆರಂಭಿಸಿದರು.[೧೧೦] ಅದಕ್ಕೆ ತಕ್ಕಂತೆ ನಿಜಾಮ್ ಪ್ರಭುತ್ವ ಕೂಡ ಶಾಲೆಗಳನ್ನು ಆರಂಭಿಸಿ ಉರ್ದು ಕಡ್ಡಾಯವನ್ನಾಗಿ ಮಾಡಿತು. ಪ್ರಭುತ್ವ ಜನರಿಗೆ ಪ್ರತಿಹಂತದಲ್ಲಿ ಉರ್ದುವನ್ನು ಅನಿವಾರ್ಯ ಎಂಬ ರೀತಿಯಲ್ಲಿ ರೂಪಿಸಿತು. ಪ್ರಭುತ್ವ ಅದಕ್ಕೆ ತಕ್ಕಂತೆ ಉರ್ದುವನ್ನು ಕಲಿಯುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಹೈದರಾಬಾದ್ ಕರ್ನಾಟಕ ಪ್ರದೇಶದ ಜನರು ಕೂಡ ಶಿಕ್ಷಣವನ್ನು ಪಡೆದು ನಂತರ ಉದ್ಯೋಗವನ್ನು ಪಡೆಯಬೇಕಾದರೆ ಉರ್ದು ಮಾಧ್ಯಮದಲ್ಲಿ ಕಲಿಯಬೇಕೆಂದು ಕಲಿಯಲು ಆರಂಭಿಸಿದರು. ಆರಂಭದಲ್ಲಿ

ಬ್ರಾಹ್ಮಣ, ಲಿಂಗಾಯಿತ, ಕುಡುವ ಒಕ್ಕಲಿಗ ಮತ್ತು ರೆಡ್ಡಿ ಸಮುದಾಯಗಳು ಉರ್ದುವನ್ನು ಕಲಿಯುವುದರ ಜೊತೆಗೆ ಪ್ರಭುತ್ವದಲ್ಲಿ ಉದ್ಯೋಗವನ್ನು ಪಡೆದುಕೊಂಡರು.[೧೧೧]

ಸ್ಥಳೀಯರು ಆಡು ಭಾಷೆಯಾದ ಕನ್ನಡವನ್ನು ಕಲಿಯುವುದಕ್ಕಿಂತ ಉದ್ಯೋಗವನ್ನು ಪಡೆಯಲು ಅನುಕೂಲವಾದ ಭಾಷೆ ಕಲಿಯುವುದಕ್ಕೆ ಮುಂದೆ ಬಂದರು. ಕಪಟಳ ಕೃಷ್ಣರಾವ್‌ರು ಕನ್ನಡವನ್ನು ಕಲಿಯುವ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಅವರ ಮನೆಯವರು ಹಾಗೂ ಹಿತೈಷಿಗಳು "ಕಲಿತರೆ ಮರಾಠಿ ಕಲಿ ಇಲ್ಲವೇ ಉರ್ದು ಕಲಿ" ಎಂದು ಹೇಳಿರುವ ಮಾತನ್ನು ನೋಡಿದರೆ ಸ್ಥಳೀಯ ಜನರು ಭಾಷೆಗಿಂತ ಉದ್ಯೋಗ ನೀಡುವ ಭಾಷೆಯ ಕಡೆಗೆ ಗಮನಹರಿಸಿರುವುದು ಕಂಡುಬರುತ್ತದೆ. ಹೈದರಾಬಾದ್ ಕರ್ನಾಟಕದ ಸಿದ್ದಯ್ಯ ಪುರಾಣಿಕ, ವಿರೂಪಾಕ್ಷಪ್ಪ ಮತ್ತು ಜಯತೀರ್ಥ ರಾಜಪುರೋಹಿತ ಅಂತಹ ವಿದ್ಯಾರ್ಥಿಗಳು ಉರ್ದು ಶಿಕ್ಷಣನ್ನು ಪಡೆದು ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ರ್‍ಯಾಂಕ್‌ಗಳಿಸಿದ್ದಾರೆ. ಹೀಗೆ ಭಾಷೆ ಉದ್ಯೋಗವನ್ನು ನೀಡುವ ಮೂಲಕ ಪ್ರಥಮ ಆದ್ಯತೆಯಾಗಿ ಕಂಡುಬಂದಿತು. ಇದರಿಂದ ಆಡುಭಾಷೆಯಾದ ಕನ್ನಡಕ್ಕಿಂತ ಉದ್ಯೋಗವನ್ನು ನೀಡುವ ಭಾಷೆ ಉರ್ದು ಮುಖ್ಯವಾಯಿತು. ಇದರಿಂದಾಗಿ ಸ್ಥಳೀಯ ಸಹಕಾರವಿಲ್ಲದ ಕನ್ನಡ ಕೇವಲ ದುಡಿಯುವ ಮತ್ತು ಕಾರ್ಮಿಕರ ಭಾಷೆಯಾಗಿ, ಮನೆಯ ಆಡುಭಾಷೆಯಾಗಿ ಉಳಿಯಿತು. ಯಾವ ಭಾಷೆ ಉದ್ಯೋಗವನ್ನು ನೀಡುವುದಿಲ್ಲವೋ ಅಂತಹ ಭಾಷೆಯನ್ನು ಕಲಿಯಲು ಯುವಶಕ್ತಿಯೂ ಒಪ್ಪುವುದಿಲ್ಲ ಎಂಬುದು ಅರ್ಥವಾಗುತ್ತದೆ. ಕನ್ನಡ ಭಾಷೆ ಉರ್ದು ಭಾಷೆಯ ಯಜಮಾನಿಕೆಯ ಮುಂದೆ ಕೇವಲ ಆಡುಭಾಷೆಯಾಗಿ ಉಳಿಯಿತು. ಉರ್ದುವನ್ನು ಕಲಿತ ಕನ್ನಡಿಗರು ಮನೆಯಿಂದ ಹೊರಗಡೆ ಬಂದಾಗ ಉರ್ದುವನ್ನು ಮಾತನಾಡುತ್ತಾ ಭಾಷೆಯ ಮೂಲಕ ಗೌರವವನ್ನು ಹೆಚ್ಚಿಸಿಕೊಳ್ಳುತ್ತಾ ಉರ್ದು ಅನಿವಾರ್ಯತೆಯನ್ನು ತೋರಿಸಿತು. ಆದರಿಂದಾಗಿ ಕನ್ನಡ ಭಾಷೆಯು ಕೇವಲ ಮನೆಯ ಭಾಷೆಯಾಯಿತು.

ನಿಜಾಮ್ ಪ್ರಭುತ್ವ ಉರ್ದು ಭಾಷೆಯನ್ನು ಆಡಳಿತ ಭಾಷೆಯಾಗಿ ರೂಪಿಸಿದ್ದಲ್ಲದೆ ಅದಕ್ಕೆ ರಾಜಕೀಯ ಮತ್ತು ಆರ್ಥಿಕವಾದ ಸಾಮರ್ಥ್ಯವನ್ನು ತುಂಬುವ ಮೂಲಕ ಉರ್ದು ಭಾಷೆಯನ್ನು ಉನ್ನತೀಕರಿಸಿದರು. ಅದೇ ಕನ್ನಡ ಭಾಷೆಯನ್ನು ಶಿಕ್ಷಣದಲ್ಲಿ ಐಚ್ಛಿಕ ವಿಷಯವನ್ನಾಗಿ ಮಾಡುವ ಮೂಲಕ ಆಡಳಿತದಲ್ಲಿ ಮಾನ್ಯತೆ ಪಡೆಯದೆ ಹಿನ್ನಡೆಯಿಂದ ಕೇವಲ ಆಡುಭಾಷೆಯಾಗಿ ರೂಪ ಗೊಂಡಿತು.[೧೧೨]

೬.೭. ಮುಲ್ಕಿ ಮೀಸಲಾತಿ

ಹೈದರಾಬಾದ್ ನಿಜಾಮ್ ಉಸ್ಮಾನ್ ಆಲಿಖಾನ್ ಬಹಾದ್ದೂರನ ಅಧಿಕಾರ ಅವಧಿಯಲ್ಲಿ ಸ್ಥಳೀಯರ ಬಹುದಿನದ ಒತ್ತಾಸೆಯಂತೆ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಆದ್ಯತೆಯನ್ನು

ನೀಡುವ ಉದ್ದೇಶದಿಂದ ಜಾರಿಗೊಳಿಸಿದ ಕಾಯಿದೆಯೇ ಮುಲ್ಕಿ ಮೀಸಲಾತಿ. ಮುಲ್ಕಿ ಎಂಬ ಪದವು ಉರ್ದು ಪದವಾಗಿದ್ದು ದೇಶೀಯ ಅಥವಾ ಸ್ಥಳೀಯ ಎಂಬ ಅರ್ಥವನ್ನು ನೀಡುತ್ತದೆ. ನಿಜಾಮ್ ಸರ್ಕಾರದ ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಹುತೇಕ ಅಧಿಕಾರಿ ವರ್ಗದವರು ಉತ್ತರ ಭಾರತದಿಂದ ವಲಸೆ ಬಂದಿರುವವರಾಗಿದ್ದರು. ಇವರು ಆಡಳಿತದಲ್ಲಿದ್ದ ಪ್ರಮುಖ ಹುದ್ದೆಗಳನ್ನು ತಾವೇ ಪಡೆದುಕೊಂಡಿದ್ದರಿಂದ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ಸಿಗದೆ ಹೋಯಿತು. ಇದರಿಂದಾಗಿ ಸ್ಥಳೀಯರು ಉತ್ತರ ಭಾರತದ ಅಧಿಕಾರಗಳ ಅಧೀನದಲ್ಲಿ ಕೆಳಮಟ್ಟದ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಬೇಕಾಯಿತು. ಕೆಲವು ಸಂದರ್ಭದಲ್ಲಿ ಸ್ಥಳೀಯರು ಈ ಅಧಿಕಾರಿಗಳಿಂದ ಶೋಷಣೆಯನ್ನು ಎದುರಿಸಬೇಕಾಯಿತು. ಆಡಳಿತದಲ್ಲಿ ಸ್ಥಳೀಯ ಮತ್ತು ಸ್ಥಳಿಯೇತರರೆಂಬ ಎರಡು ವರ್ಗಗಳ ಉದಯವಾಯಿತು. ಸ್ಥಳೀಯರಲ್ಲಿ ಜಾತಿ ಮತ ಎಂಬ ಬೇಧ ಭಾವವಿಲ್ಲದೆ ಉತ್ತರ ಭಾರತದ ಅಧಿಕಾರಿಗಳ ಧೋರಣೆಯ ವಿರುದ್ಧ ಒಗ್ಗಟ್ಟಾಗಿ ಹೋರಾಟಕ್ಕೆ ಧುಮುಕಿದರು.[೧೧೩] ಆರನೆಯ ನಿಜಾಮ್ ಮೆಹಬೂಬ ಅಲಿಖಾನ್ ಬಹದ್ದೂರನ ಆಳ್ವಿಕೆಯ ಅವಧಿಯವರೆಗೂ ಈ ಹೋರಾಟದ ಸ್ವರೂಪ ವಿಸ್ತರಿಸಿತು. ಇದನ್ನು ನಿಜಾಮ್ ಮೆಹಬೂಬ ಅಲಿಖಾನ್ ಆಡಳಿತಾತ್ಮಕ ಕಾಯಿದೆ ಮತ್ತು ಸಂವಿಧಾನಾತ್ಮಕ ಕಾನೂನುಗಳನ್ನು ಜಾರಿಗೆ ತರುವ ಸಮಯದಲ್ಲಿ ಸ್ಥಳಿಯರಿಗೆ ಪ್ರಮುಖ ಹುದ್ದೆಗಳಲ್ಲಿ ನೇಮಕ ಮಾಡುವುದಕ್ಕೆ ಮನ್ನಿಸಿದನು. ಆದರೆ ಕಾನೂನಾತ್ಮಕ ಜಾರಿಗೆ ತರಲಿಲ್ಲ. ಇದರಿಂದ ತೃಪ್ತ ರಾಗದ ಸ್ಥಳೀಯರು ಮತ್ತೆ ಹೋರಾಟವನ್ನು ಮುಂದುವರೆಸಿದರು. ನಂತರ ಅಧಿಕಾರಕ್ಕೆ ಬಂದ ನಿಜಾಮ್ ಉಸ್ಮಾನ್ ಅಲಿಖಾನ್ ಆರಂಭದಲ್ಲಿ ಈ ಬೇಡಿಕೆಗೆ ಹೆಚ್ಚಿನ ಮಹತ್ವವನ್ನು ನೀಡದೆ ಆಡಳಿತದ ಕಡೆ ಗಮನಹರಿಸಿದನು.

ನಿಜಾಮ್ ಆಡಳಿತದಲ್ಲಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಉತ್ತರ ಭಾರತೀಯರು ಸರ್ಕಾರದಿಂದ ಜಹಾಗೀರ, ಇನಾಮ್ ಮತ್ತು ಇತರ ಸೌಲಭ್ಯಗಳನ್ನು ಪಡೆದುಕೊಂಡು ಪ್ರಭುತ್ವಕ್ಕೆ ಹೆಚ್ಚಿನ ಮನ್ನಣೆ ನೀಡದೆ ತಮ್ಮ ಜಹಾಗೀರ ಮತ್ತು ಪೈಗಾ ಪ್ರದೇಶಗಳಲ್ಲಿ ಕಾಲ ಕಳೆಯುತ್ತಿದ್ದರು. ಇದನ್ನು ಗಮನಿಸಿದ ನಿಜಾಮ್ ಉಸ್ಮಾನ್ ಆಲಿಖಾನನು ಸ್ಥಳಿಯರ ಬಗೆಗೆ ಒಲವು ತೋರಿಸಿದನು. ಇದಕ್ಕೆ ಪ್ರಮುಖ ಕಾರಣವೆಂದರೆ ಈಗಾಗಲೇ ಭಾರತದಲ್ಲಿ ಬ್ರಿಟಿಶರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಟಗಳು ಆರಂಭಗೊಂಡಿದ್ದವು. ಈ ಹೋರಾಟದ ಸ್ವರೂಪಗಳು ಹೈದರಾಬಾದ್ ಸಂಸ್ಥಾನಕ್ಕೆ ವ್ಯಾಪಿಸಿದ್ದವು. ಇದರಿಂದಾಗಿ ನಿಜಾಮನು ಸ್ಥಳಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಆಡಳಿತದಲ್ಲಿ ಮತ್ತು ಶಿಕ್ಷಣದಲ್ಲಿ ಮುಲ್ಕಿ ಮೀಸಲಾತಿ ಕಾಯಿದೆ ಜಾರಿಗೆ ತರುವುದಕ್ಕ ಮನ್ನಿಸಿದನು. ಏಕೆಂದರೆ ಇದು ಉಸ್ಮಾನ್ ಅಲಿಖಾನನಿಗೆ ಅನಿವಾರ್ಯವಾಗಿತ್ತು. ಸ್ಥಳೀಯರ ಒಲವನ್ನು ಗಳಿಸುವುದರ ಮೂಲಕ ಸ್ವಾತಂತ್ರ್ಯ ಚಳವಳಿಯ ಸ್ವರೂಪವನ್ನು ನಿಯಂತ್ರಿಸುವ ತಂತ್ರಗಾರಿಕೆ ಅಡಗಿರುವುದು ಗಮನಿಸಬಹುದಾಗಿದೆ.[೧೧೪]

ಇದೇ ಕಾಲಘಟ್ಟದಲ್ಲಿ ಭಾರತದಲ್ಲಿ ಬದಲಾವಣೆಯ ಪ್ರಯತ್ನಗಳು ಜಾರಿಯಲ್ಲಿದ್ದವು. ಹೈದರಾಬಾದ್ ಸಂಸ್ಥಾನದ ಗಡಿ ಸಂಸ್ಥಾನವಾದ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣರಲ್ಲಿಯೇ ಕೇಂದ್ರೀಕೃತವಾಗಿದ್ದ ಆಡಳಿತ ಅಧಿಕಾರವನ್ನು ತಮಗೂ ಪರಿಗಣಿಸಬೇಕೆಂದು ಇತರ ಹಿಂದುಳಿದ ವರ್ಗಗಳು ಬ್ರಾಹ್ಮಣೇತರ ಎಂಬ ಹೆಸರಿನಲ್ಲಿ ದಂಗೆ ಎದ್ದರು. ಬ್ರಿಟಿಶರು ಜಾರಿಗೆ ತಂದ ವಸಾಹತು ಮಾದರಿ ಆಡಳಿತದ ಪ್ರಭಾವದಿಂದಾಗಿ ನಿಜಾಮ್ ಉಸ್ಮಾನ್ ಅಲಿಖಾನನು ಉದ್ಯೋಗದಲ್ಲಿ ಮೀಸಲಾತಿ ನೀಡುವ ಸಲುವಾಗಿ ೨೫ನೇ ರಮ್‌ಜಾನ್ ೧೩೩೭ ಫಸಲಿ ಅಂದರೆ ೧೯೧೯ ಜೂನ್ ೨೪ ರಂದು "ಮುಲ್ಕಿ ರೂಲ್" ಎಂಬ ಕಾಯಿದೆಯನ್ನು ಜಾರಿಗೆ ತಂದನು.

ಈ ಕಾಯಿದೆಯ ವಿರುದ್ಧ ಈಗಾಗಲೇ ಸಂಸ್ಥಾನದಲ್ಲಿ ಅಧಿಕಾರವನ್ನು ಅನುಭವಿಸಿದ ಸ್ಥಳಿಯೇತರರು ಅನೇಕ ಹೋರಾಟಗಳನ್ನು ಮಾಡಿದರು. ಜೊತೆಗೆ ನಿಜಾಮನ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿ ವಿಫಲರಾದರು, ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆಯನ್ನು ಕಾಣದೆ ಅನಿವಾರ್ಯವಾಗಿ ಒಪ್ಪಿಕೊಂಡಿದ್ದರು. ಇನ್ನೂ ಕೆಲವು ಅಧಿಕಾರಿಗಳು ಮತ್ತೆ ತಮ್ಮ ಮೂಲ ನೆಲೆಯಾದ ಉತ್ತರ ಭಾರತದ ಕಡೆಗೆ ಪ್ರಯಾಣ ಬೆಳೆಸಿದರು.[೧೧೫]

ಈ ಕಾಯಿದೆಗೆ ಅನುಗುಣವಾಗಿ ಸ್ಥಳೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಲಿಂಗಾಯಿತರು, ಕುಡವ ಒಕ್ಕಲಿಗರು ಮತ್ತು ರೆಡ್ಡಿ ಸಮುದಾಯದವರು ಉನ್ನತವಾದ ಹುದ್ದೆಗಳನ್ನು ಪಡೆದುಕೊಂಡರು. ಬಹುಸಂಖ್ಯಾತರಾದ ದಲಿತರು, ಹಿಂದುಳಿದ ವರ್ಗದವರು ಮತ್ತು ಕಾರ್ಮಿಕರು ಈ ಮೀಸಲಾತಿಯ ಲಾಭವನ್ನು ಪಡೆಯದೇ ಮತ್ತೆ ಅದೇ ಮೇಲ್ವರ್ಗದವರ ಅಧೀನದಲ್ಲಿಯೇ ಉಳಿಯುವಂತೆ ಆಯಿತು. ಮೀಸಲಾತಿಯ ಲಾಭವನ್ನು ಪಡೆದು ಮೇಲ್ವರ್ಗದವರು ಉನ್ನತ ಶಿಕ್ಷಣದ ಜೊತೆಗೆ ಉದ್ಯೋಗವನ್ನು ತಮ್ಮದಾಗಿಸಿಕೊಂಡರು. ಸಂಸ್ಥಾನದ ಆಡಳಿತದಲ್ಲಿ ಮೇಲ್ವರ್ಗದ ಸಮುದಾಯಗಳು ಹಾಗೂ ಮುಸ್ಲಿಮ್ ಸಮುದಾಯದವರ ಪಾರಮ್ಯವೇ ಹೆಚ್ಚಿನದಾಗಿ ಕಂಡುಬರುತ್ತದೆ. ಅನಕ್ಷರಸ್ಥರಾದ ಕಾರ್ಮಿಕರು ಮತ್ತು ಅಸ್ಪೃಶ್ಯರು ಮೇಲ್ವರ್ಗದವರ ಭೂಮಿಯಲ್ಲಿ ಕೂಲಿ ಕಾರ್ಮಿಕರಾಗಿ, ಜೀತದಾಳು ಗಳಾಗಿ ಮತ್ತು ಬಿಟ್ಟಿಚಾಕರಿಯಲ್ಲಿ ತೊಡಗಿಕೊಂಡಿದ್ದರು.[೧೧೬]

ಈ ಕಾಯಿದೆಯು ಜಾರಿಗೆ ಬಂದ ಆರಂಭದಲ್ಲಿ ಮೀಸಲಾತಿ ಪಡೆಯುವವರ ಅರ್ಹತೆಗೆ ಸಂಬಂಧಿಸಿದ ಗೊಂದಲ ಕಂಡುಬಂದಿತ್ತು. ಆದ್ದರಿಂದ ಪ್ರಭುತ್ವ ಮೀಸಲಾತಿ ಯಾರು ಪಡೆಯಲು ಅರ್ಹರು ಎಂಬ ಕ್ರಮಾನುಗತ ಮತ್ತು ವ್ಯವಸ್ಥಿತವಾದ ಅರ್ಹತೆಗಳನ್ನು ಜಾರಿಗೆ ತರುವುದಕ್ಕಾಗಿ ಮುಲ್ಕಿ ಮೀಸಲಾತಿ ಕಾಯಿದೆಯನ್ನು ೧೯೩೯ರಲ್ಲಿ ತಿದ್ದುಪಡಿಗೆ ಒಳಪಡಿಸಿತು. ಅರ್ಹತೆಯನ್ನು ನಿರ್ಧರಿಸುವುದಕ್ಕಾಗಿ ಸಮಿತಿಯನ್ನು ನೇಮಿಸಲಾಯಿತು. ನವಾಜ್ ಯಾರಜಂಗ ಬಹಾದ್ದೂರ್ ಅವರ ಅಧ್ಯಕ್ಷತೆಯಲ್ಲಿ ನಾಲ್ಕು ಸದಸ್ಯರನ್ನೊಳಗೊಂಡಿತು. ಈ ಸಮಿತಿಯು ಸಭೆ ಸೇರಿ ಸ್ಥಳಿಯರೆಂದು

ಗುರುತಿಸಲು ಇರಬೇಕಾದ ಮಾನದಂಡವನ್ನು ನಿರ್ಧರಿಸಿತು. ಅದರಂತೆ ಸಂಸ್ಥಾನದಲ್ಲಿ ಸುಮಾರು ೧೫ ವರ್ಷಗಳಿಂದ ವಾಸವಾಗಿರುವರು ಸ್ಥಳೀಯರೆಂದು ನಿರ್ಧರಿಸಲಾಯಿತು. ಈ ಪ್ರದೇಶದಲ್ಲಿ ಜನಿಸಿದ ಮಗುವಿಗೆ ಹುಟ್ಟಿನಿಂದಲೇ ಅನ್ವಯವಾಗುವಂತೆ ಸ್ಥಳೀಯರಿಗೆ ಮದುವೆಯಾದ ಹೆಣ್ಣು ಮಕ್ಕಳಿಗೂ ಕೂಡ ಸ್ಥಳೀಯರೆಂದು ಪರಿಗಣಿಸಲು ಶಿಫಾರಸ್ಸು ಮಾಡಿತು. ಅಲ್ಲದೇ ಸ್ಥಳಿಯರೆಂದು ನಿರ್ಧರಿಸಿ ಅವರಿಗೆ ಸ್ಥಳೀಯ ಪ್ರಮಾಣ ಪತ್ರವನ್ನು ನೀಡುವ ಅಧಿಕಾರ ತಾಲೂಕುದಾರನಿಗೆ ನೀಡಲಾಯಿತು.[೧೧೭]

ಹೀಗೆ ಪ್ರಭುತ್ವ ಜಾರಿಗೆ ತಂದ ಮೀಸಲಾತಿಯ ಲಾಭವನ್ನು ಪಡೆಯಲು ಮೇಲ್ವರ್ಗಕ್ಕೆ ಸೇರಿದ ಸಮುದಾಯಗಳೇ ಮುಂದೆ ಬಂದವು. ಮುಲ್ಕಿ ಮೀಸಲಾತಿ ಬಗೆಗೆ ಹೊಂದಿರುವ ಮತ್ತು ಅಕ್ಷರಸ್ಥರಾದ ಸಮುದಾಯಗಳು ಇದರ ಸೌಲಭ್ಯವನ್ನು ಪಡೆಯಲು ಮುಂದೆ ಬಂದಿದವು. ಆದರೆ ಅಕ್ಷರಸ್ಥರಲ್ಲದ ದಲಿತರು, ಹಿಂದುಳಿದ ವರ್ಗದವರು ಮತ್ತು ಕಾರ್ಮಿಕರು ಈ ಕಾನೂನಿನ ಪ್ರಜ್ಞೆಯೆ ಇಲ್ಲದೆ ಇವರು ದುಡಿಯುವ ವರ್ಗವಾಗಿಯೇ ಉಳಿಯಬೇಕಾಯಿತು.

ನಿಜಾಮ್ ಪ್ರಭುತ್ವ ಜಾರಿಗೆ ತಂದ ಮುಲ್ಕಿ ಮೀಸಲಾತಿ ಕಾನೂನು ಹೈದರಾಬಾದ್ ಸಂಸ್ಥಾನ ಸ್ವಾತಂತ್ರ್ಯಗೊಂಡು ಭಾರತದಲ್ಲಿ ವಿಲೀನವಾಗುವರೆಗೂ ಜಾರಿಯಲ್ಲಿದ್ದುದನ್ನು ಗಮನಿಸಬಹುದಾಗಿದೆ. ನಂತರ ೧೯೫೬ರವರೆಗೂ ಈ ಪ್ರದೇಶದಲ್ಲಿ ಇದರ ಛಾಯೆಯನ್ನು ಗುರುತಿಸಬಹುದು. ಸ್ವತಂತ್ರ ಭಾರತದ ಸಂವಿಧಾನದ ರಚನಾ ಸಮಿತಿ ನಿರ್ಧರಿಸಿದಂತೆ ಪ್ರಾದೇಶಿಕವಾಗಿ ಜಾರಿಯಲ್ಲಿರುವ ಕಾಯಿದೆ ಕಾನೂನುಗಳು ಯಥಾ ಪ್ರಕಾರವಾಗಿ ಮುಂದುವರೆಸಬೇಕೆಂದು ತಿಳಿಸಲಾಗಿತ್ತು.[೧೧೮] ಆದರೆ ಇದರ ಲಾಭವನ್ನು ಪಡೆದುಕೊಂಡಿದ್ದು ನಿಜಾಮ್ ಆಳ್ವಿಕೆಯಲ್ಲಿದ್ದ ತೆಲಂಗಾಣ ಮತ್ತು ಮರಾಠವಾಡ ಪ್ರದೇಶಗಳು ಮಾತ್ರ, ಕನ್ನಡ ಪ್ರದೇಶ ಇದರಿಂದ ವಂಚಿತವಾಯಿತು. ತೆಲಂಗಾಣ ಪ್ರದೇಶ ಭಾರತ ದೇಶದಲ್ಲಿ ವಿಲೀನವಾದ ಸಂದರ್ಭದಿಂದಲೇ ಇಲ್ಲಿನ ಹೋರಾಟಗಾರರು ಮತ್ತು ರಾಜಕಾರಣಿಗಳ ಪ್ರಯತ್ನದಿಂದಾಗಿ ತೆಲಂಗಾಣ ಪ್ರದೇಶವನ್ನು ಆಂಧ್ರಪ್ರದೇಶಕ್ಕೆ ಸೇರಿಸುವಾಗ ಹೈದರಾಬಾದ್ ರಾಜ್ಯದ ಮುಖ್ಯಮಂತ್ರಿಯಾದ ಡಾ. ಬಿ. ರಾಮಕೃಷ್ಣರಾವ್ ಹಾಗೂ ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾದ ಬಿ. ಗೋಪಾಲರೆಡ್ಡಿ ಅವರ ಜಂಟಿಯಾಗಿ "ಜಂಟಲ್ ಮಾನ್ಯ ಅಗ್ರೀಮೆಂಟ್"ಗೆ ಸಹಿ ಹಾಕಿದರು. ಈ ಜಂಟಿ ಒಪ್ಪಂದದಲ್ಲಿ ಮುಖ್ಯವಾಗಿ ಮುಲ್ಕಿ ಕಾನೂನು ಮುಂದುವರೆಸುವ ಒಪ್ಪಂದ ಕೂಡ ಇರುವುದು ಗಮನಿಸಬಹುದು. ಹಾಗೆಯೇ ತೆಲಂಗಾಣ ಪ್ರಾದೇಶಿಕ ಸ್ಥಾಯಿ ಸಮಿತಿ ರಚನೆ ಮಾಡುವುದರ ಜೊತೆಗೆ ತೆಲಂಗಾಣಕ್ಕೆ ಸಂಬಂಧಿಸಿದ ಎಲ್ಲ ಅಭಿವೃದ್ಧಿ ಕಾರ್ಯಗಳು ಈ ಸಮಿತಿಯ ಮುಖಾಂತರವೇ ನಡೆಯಬೇಕು. ಈಗಾಗಲೇ ಜಾರಿಯಲ್ಲಿದ್ದ ಉರ್ದು ಭಾಷೆಯ ಸ್ಥಾನಮಾನವನ್ನು ಐದು ವರ್ಷಗಳವರೆಗೆ ಮುಂದುವರೆಸಬೇಕು. ರಾಜ್ಯ ಸಚಿವ ಸಂಪುಟದಲ್ಲಿ ಶೇ.೪೦ರಷ್ಟು ಸಚಿವರು ತೆಲಂಗಾಣದವರಾಗಿರಬೇಕು

ಎಂದು ಒಪ್ಪಂದ ಮಾಡಿಕೊಂಡರು. ಆದರೆ ಕೆಲವೇ ವರ್ಷಗಳಲ್ಲಿ ಜಂಟಲ್ ಮ್ಯಾನ್ಸ ಅಗ್ರಿಮೆಂಟ್ ಸರಿಯಾದ ರೀತಿಯಲ್ಲಿ ಅನುಷ್ಠಾನ ಆಗದಿದ್ದುದರಿಂದ ಈ ಪ್ರದೇಶದ ರಾಜಕೀಯ ಮುತ್ಸದ್ಧಿಗಳು ಮತ್ತು ಹೋರಾಟಗಾರರು ಮಾಡಿರುವ ಹೋರಾಟದ ಪ್ರತಿಫಲವಾಗಿ ೧೯೫೭ರಲ್ಲಿ ಕೇಂದ್ರ ಸರ್ಕಾರ ಸಂವಿಧಾನದ ೩೭೧ನೇ ಕಲಂ ಉಪಬಂಧ ೧ರ ಅಡಿಯಲ್ಲಿ ತೆಲಂಗಾಣಕ್ಕೆ ವಿಶೇಷ ಸ್ಥಾನಮಾನ ನೀಡಲಾಯಿತು. ಆದರೆ ನಿಜಾಮ್ ಸರ್ಕಾರದ ಅಧೀನದಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶ ಈ ಸ್ಥಾನಮಾನದಿಂದ ವಂಚಿತವಾಯಿತು. ಸಂವಿಧಾನದ ರಚನಾ ಸಮಿತಿಯ ಸಭೆಯಲ್ಲಿ ಸಂವಿಧಾನ ೩೭೧ನೇ ಕಲಮ್‌ನ ಸವಲತ್ತುಗಳನ್ನು ಯಾರಿಗೆ ಕೊಡಬೇಕು ಎಂಬ ಚರ್ಚೆ ನಡೆದಾಗ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ೩೭೧ನೇ ಕಲಮ್‌ನ ಸವಲತ್ತುಗಳು ನೀಡಬೇಕೋ ಬೇಡವೋ ಎನ್ನುವ ವಿಷಯವು ಚರ್ಚೆಗೆ ಬಂದಿತು. ಆಗ ಮೈಸೂರು ಸಂಸ್ಥಾನ ಈಗಾಗಲೇ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅಭಿವೃದ್ಧಿ ಹೊಂದಿರುವ ಪ್ರದೇಶವಾಗಿದ್ದರಿಂದ. ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಮೈಸೂರು ರಾಜ್ಯಕ್ಕೆ ಸೇರಿಸಿದ್ದರಿಂದ, ಮೈಸೂರು ರಾಜ್ಯ ಈ ಪ್ರದೇಶವನ್ನು ಅಭಿವೃದ್ಧಿ ಪಡಿಸುತ್ತದೆ ಎಂದು ನಿರ್ಧರಿಸಿ ಈ ಪ್ರದೇಶಕ್ಕೆ ವಿಶೇಷ ಸ್ಥಾನಮಾನದ ಅಗತ್ಯವಿಲ್ಲ ಎಂದು ನಿರ್ಣಯ ಮಾಡಿರುವುದು ನಿಜಕ್ಕೂ ಖೇದಕರವಾಗಿದೆ.[೧೧೯]

ಹೈದರಾಬಾದ್ ಕರ್ನಾಟಕ ಪ್ರದೇಶದ ರಾಜಕೀಯ ನಾಯಕರ ಇಚ್ಛಾಶಕ್ತಿ ಕೊರತೆಯನ್ನು ಎತ್ತಿ ತೋರಿಸುತ್ತದೆ. ಹಾಗೇ ಫಜಲ್ ಅಲಿ ಆಯೋಗ ಕನ್ನಡ ಮಾತನಾಡುವ ನಿಜಾಮ್ ಪ್ರದೇಶಕ್ಕೆ ಪ್ರಜಾಪ್ರಭುತ್ವ ಸರ್ಕಾರಗಳು ವಿಶೇಷ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಪ್ರತಿಪಾದಿಸಿದರು. ಆದರೆ ಅಧಿಕಾರಕ್ಕೆ ಬಂದ ಸರ್ಕಾರಗಳು ಹಾಗೂ ಈ ಭಾಗದ ಪ್ರಮುಖರು ಹೈದರಾಬಾದ್ ಕರ್ನಾಟಕ ಪ್ರದೇಶದ ವಿಶೇಷ ಸವಲತ್ತಿನ ಬೇಡಿಕೆ ಬಗ್ಗೆ ಉದಾಸೀನ ತೋರಿದ್ದೇ ದೊಡ್ಡ ಶಾಪವಾಗಿ ಪರಿಣಮಿಸಿತು. ಈ ಪ್ರದೇಶದ ರಾಜಕಾರಣಿಗಳು ಸರ್ಕಾರದ ಮೇಲೆ ಪ್ರಭಾವ ಬೀರಿ ಜಾರಿಗೆ ತರುವಲ್ಲಿ ವಿಫಲರಾಗಿರುವುದು ಕಂಡುಬರುತ್ತದೆ.[೧೨೦]

ಈ ಎಲ್ಲಾ ಚಾರಿತ್ರಿಕ ಘಟನೆಯಿಂದ ಈ ಭಾಗದ ಜನರು ತೆಲಂಗಾಣ ಮತ್ತು ಮರಾಠವಾಡದ ಮಾದರಿಯಲ್ಲಿ ತಮಗೂ ಕೂಡ ವಿಶೇಷ ಸ್ಥಾನಮಾನ ನೀಡಬೇಕೆಂದು ಹೋರಾಟ ಆರಂಭಿಸಿದರು. ಆದರೆ ಈ ಹೋರಾಟಕ್ಕೆ ರಾಜಕೀಯ ಬಲವಿಲ್ಲದ್ದರಿಂದ ಗೌಣ್ಯವಾಗಿಯೇ ಉಳಿಯಿತು. ಆದರೂ ಎದೆಗುಂದದೆ ಜನರು ಮತ್ತು ವಿವಿಧ ಪ್ರಗತಿಪರ ಸಂಘಟನೆಗಳು ನಿರಂತರವಾಗಿ ಸುಮಾರು ೬೦ ವರ್ಷಗಳ ಕಾಲ ಮಾಡಿರುವ ಹೋರಾಟದ ಪ್ರತಿಫಲವಾಗಿ ೨೦೧೨ರಲ್ಲಿ ಕೇಂದ್ರ ಸರ್ಕಾರ ಸಂವಿಧಾನ ೩೭೧ನೇ ವಿಧಿಯನ್ನು ತಿದ್ದುಪಡಿಗೆ ಒಳಪಡಿಸಿ ೩೭೧(ಜೆ) ವಿಧಿಯಲ್ಲಿ ಅವಕಾಶ ಕಲ್ಪಿಸಿಕೊಟ್ಟಿದೆ. ಆದರೆ ಈಗ ಈ ವಿಧಿಯಿಂದ ಅಭಿವೃದ್ಧಿ ಸಾಧ್ಯವೇ ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಪಕ್ಕದ

ರಾಜ್ಯವಾದ ತೆಲಂಗಾಣ ಪ್ರದೇಶ ಸುಮಾರು ೬೦ ವರ್ಷಗಳಿಂದಲೂ ಕೇಂದ್ರ ಸರ್ಕಾರದ ವಿಶೇಷ ಸ್ಥಾನಮಾನದ ಸವಲತ್ತುಗಳನ್ನು ಪಡೆದುಕೊಂಡಿದೆ. ಆ ಪ್ರದೇಶಕ್ಕೆ ಒಂದು ವಿಶೇಷವಾದ ಕೇಂದ್ರ ವಿಶ್ವವಿದ್ಯಾಲಯವು ಸ್ಥಾಪನೆಯಾಗಿದೆ. ಆದರೂ ತೆಲಾಂಗಣ ಪ್ರದೇಶದ ಗ್ರಾಮೀಣ ಜನರ ಸ್ಥಿತಿಗತಿಯು ಇನ್ನು ಶೋಚನೀಯವಾಗಿದೆ. ಗ್ರಾಮೀಣ ಮಟ್ಟದಲ್ಲಿ ಜಮೀನ್ದಾರರು, ಭೂಮಾಲೀಕರಲ್ಲಿದ್ದ ಭೂಮಿಯನ್ನು ದುಡಿಯುವ ವರ್ಗದವರಿಗೆ ನೀಡದೆ ಕೇವಲ ಕಾಯಿದೆ ಮೂಲಕವೇ ಬದಲಾವಣೆ ಆಗುತ್ತದೆ ಎಂದರೆ ಸಾಧ್ಯವೆ ಎಂಬ ಅನುಮಾನ ಕಾಡುತ್ತದೆ. ದುಡಿಯುವ ಜನರಿಗೆ ದುಡಿಯಲು ಕೆಲಸವಿಲ್ಲದೆ ಬೇರೊಂದು ಪ್ರದೇಶಕ್ಕೆ ಗುಳೆ ಹೋಗುತ್ತಿದ್ದಾರೆ. ಅವರಿಗೆ ಈ ೩೭೧ನೇ ಕಲಮ್‌ದಿಂದ ಏನು ಸಾಧ್ಯ ಎಂಬ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುವಂತಾಗಿದೆ. ಪ್ರಭುತ್ವಗಳು ಮಾತ್ರ ನಾವೂ ನೀಡಿದ್ದೇವೆ ತಾವೂ ನೀಡಿದ್ದೇವೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿವೆ ವಿನಃ ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂಬ ಸತ್ಯವನ್ನು ಮರೆಮಾಚುತ್ತಿವೆ.

ಸ್ವಾತಂತ್ರ್ಯ ಬಂದು ೭೦ ವರ್ಷಗಳು ಸಂದಿದರು ಇವತ್ತಿಗೂ ಜೀತಪದ್ಧತಿ, ಗುಲಾಮಗಿರಿ ಮತ್ತು ಬಿಟ್ಟಿಚಾಕರಿಯಂತಹ ಊಳಿಗಮಾನ್ಯತೆಯ ಅಂಶಗಳು ಜೀವಂತವಿರುವಾಗ ಅಭಿವೃದ್ಧಿಯನ್ನು ನಿರೀಕ್ಷಿಸುವುದು ಹೇಗೆ ಸಾಧ್ಯ ಎಂಬುದನ್ನು ಮನಗಾಣಬೇಕಾಗಿದೆ. ಇದರಿಂದಾಗಿ ನಮ್ಮನ್ನಾಳುವ ಪ್ರಭುತ್ವಗಳು ಜಾರಿಗೆ ತಂದ ಕಾಯಿದೆ ಕಾನೂನುಗಳು ಸಮಾಜದ ತಳಮಟ್ಟದ ಅಂಚಿನಲ್ಲಿರುವ ಸಮುದಾಯಗಳಿಗೆ ಎಷ್ಟು ಪ್ರಮಾಣದಲ್ಲಿ ಮುಟ್ಟುತ್ತಿವೆ ಎಂಬುದನ್ನು ಪರಿಶೀಲನೆ ಮಾಡದೆ ಕೇವಲ ಯೋಜನೆಗಳನ್ನು ಪ್ರಕಟಿಸುವುದರಿಂದ ಅಭಿವೃದ್ಧಿಯನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಪ್ರಭುತ್ವ ಜಾರಿಗೆ ತಂದ ಯೋಜನೆಯನ್ನು ಯಾರಿಗೆ ತಲುಪಿವೆ, ಮತ್ತು ವಿಶೇಷವಾಗಿ ಯಾರಿಗೆ ತಲುಪಬೇಕು ಎಂಬುದನ್ನು ಕಾಳಜಿಯಿಂದ ಕಾರ್ಯಗತಗೊಳಿಸಿದರೆ ಈ ಪ್ರದೇಶ ಕೂಡ ಇತರ ಪ್ರದೇಶಗಳಂತೆ ಅಭಿವೃದ್ಧಿಯತ್ತ ಸಾಗಲು ಸಾಧ್ಯ. “ಹೈದರಾಬಾದ್ ಕರ್ನಾಟಕ ಪ್ರದೇಶ ಹೊಂದಿರುವ ಭೌಗೋಳಿಕತೆ ಯಲ್ಲಿಯೇ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಹೊಸ ಹೊಸ ಪ್ರಯೋಗಗಳನ್ನು ಮಾಡುವುದರ ಮೂಲಕ ಕೃಷಿ ಮತ್ತು ಕೈಗಾರಿಕೆಯಲ್ಲಿ ಹೆಚ್ಚಿನ ಆದ್ಯತೆ ನೀಡುತ್ತಾ ಅಭಿವೃದ್ಧಿಯ ಕಡೆಗೆ ದಾಪುಗಾಲು ಹಾಕುವುದಕ್ಕೆ ಪ್ರಯತ್ನಿಸಬೇಕಾಗಿದೆ. ಇದರಿಂದ ಸ್ವಲ್ಪ ಮಟ್ಟಿಗಾದರೂ ಬದಲಾವಣೆಯನ್ನು ನಿರೀಕ್ಷಿಸಬಹುದಾಗಿದೆ.”[೧೨೧]

ಉಪಸಂಹಾರ : ನಿಜಾಮರ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದ ಸಮಾಜವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಪ್ರಾಚೀನ ಕಾಲದಿಂದ ಇಂದಿನವರೆಗೂ ಸಾಮಾಜಿಕ ರಚನೆ ಸ್ವರೂಪದಲ್ಲಿ ಬದಲಾವಣೆಗಳಾಗಿದ್ದರೂ ಅವುಗಳ ನಿಲುವಿನ ಯಾವುದೇ ಬದಲಾವಣೆಗಳು ಆಗಿರುವುದಿಲ್ಲ.

ಆದರಲ್ಲಿ ಜಾತಿವ್ಯವಸ್ಥೆ ಅಂದಿನಿಂದ ಇಂದಿನವರೆಗೂ ವಿಸ್ತಾರವಾಗಿ ಬೆಳೆದುಕೊಂಡು ಬಂದಿದೆ. ಇದನ್ನು ಒಂದು ವರ್ಗ ಪೋಷಿಸುತ್ತಿದೆ. ಸಮಾಜದಲ್ಲಿನ ಜಾತಿಗಳು ಇವತ್ತು ಜಾತಿಯ ಮೂಲಕ ಐಡೆಂಟಿಟಿ ಮಾಡಿಕೊಳ್ಳುವ ಸ್ವರೂಪಕ್ಕೆ ಬಂದಿರುವುದು ಕಂಡುಬರುತ್ತದೆ. ಸಾಮಾಜಿಕ ರಚನೆಯ ಕುಟುಂಬ ಮತ್ತು ಶಿಕ್ಷಣದಲ್ಲಿ ಬದಲಾವಣೆಗಳಾಗಿ ಸಂದರ್ಭಕ್ಕೆ ತಕ್ಕಂತೆ ಅವುಗಳ ಸ್ವರೂಪವನ್ನು ರೂಪಿಸಿಕೊಳ್ಳುತ್ತಿವೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಊಳಿಗಮಾನ್ಯ ವ್ಯವಸ್ಥೆ ಭೀಕರವಾಗಿ ಕಂಡುಬರುತ್ತದೆ. ಭೂಹಿಡುವಳಿದಾರರು ಹೊಂದಿರುವ ಭೂಮಿಯಿಂದಾಗಿ ಭೂರಹಿತ ಜನರು ಭೂಮಾಲೀಕರ ಅಧೀನದಲ್ಲಿ ಕಾರ್ಯನಿರ್ವಹಿಸಬೇಕಾಯಿತು. ಇದು ಭೂರಹಿತರಿಗೆ ಅನಿವಾರ್ಯವಾಗಿದ್ದನ್ನು ಮನಗಂಡ ಭೂಹಿಡುವಳಿದಾರರು ಅದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಇವತ್ತಿನವರೆಗೂ ತಮ್ಮ ಹಿಡಿತವನ್ನು ಸಾಧಿಸಿಕೊಂಡು ಬಂದಿದ್ದಾರೆ. ಸಮಾಜದ ಸಮುದಾಯಗಳು ತಮ್ಮ ಕಸುಬುಗಳ ಮೂಲಕ ಗುರುತಿಸಿಕೊಂಡಿದರು. ಆದರೆ ಇವತ್ತಿನ ಬದಲಾವಣೆಯಿಂದಾಗಿ ವಿವಿಧ ಸಮುದಾಯಗಳು ಪರ್ಯಾಯ ಕಸುಬುಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಸಾಮಾಜಿಕ ರಚನೆಯ ಬಂದಾಗ ಮತ್ತೆ ಅವರು ಶ್ರೇಷ್ಠ ಕನಿಷ್ಠ ಎಂದು ಜಾಗೃತವಾಗುತ್ತದೆ.

ಈ ಪ್ರದೇಶದ ಜನರು ನಂಬಿಕೆ ಮತ್ತು ಆಚರಣೆ ಪ್ರಿಯರಾಗಿದ್ದಾರೆ. ಅದರಿಂದಾಗಿ ಹಿಂದೂ ಮತ್ತು ಮುಸ್ಲಿಮ್ ಸಮುದಾಯಗಳಲ್ಲಿ ಪ್ರತ್ಯೇಕವಾದ ಆಚರಣೆಗಳು ಕಂಡುಬಂದು ಒಂದರ ಮೇಲೆ ಮತ್ತೊಂದು ಪ್ರಭಾವ ಬೀರುವ ಮೂಲಕ ಸಮ್ಮಿಶ್ರ ಸಂಸ್ಕೃತಿಯ ಆಚರಣೆ ಕಂಡುಬರುತ್ತದೆ. ಜಾತ್ರೆ ಮತ್ತು ಉರುಸುಗಳು ಗ್ರಾಮೀಣ ಪ್ರದೇಶ ವಸ್ತುವಿನಿಮಯ ಕೇಂದ್ರವಾಗಿದ್ದದೆ. ಆದರೆ ಇವು ಇಂದು ಜಾಗತೀಕರಣ ಪ್ರಭಾವಕ್ಕೆ ಒಳಗಾಗಿ ತನ್ನ ಮೂಲ ತಿರುಳನ್ನು ಕಳೆದುಕೊಳ್ಳುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಜನರ ಜೀವನ ಶೈಲಿ ಕೂಡ ಬದಲಾವಣೆಯಾಗಿದೆ. ಇಲ್ಲಿಯವರೆಗೆ ಆಚರಣೆಯಲ್ಲಿದ್ದ ಗ್ರಾಮದೇವತೆಗಳ ಉತ್ಸವಗಳು ಇಂದು ಸಾರ್ವಜನಿಕವಾಗಿ ಕಂಡುಬಂದರೂ ಬೂದಿಮುಚ್ಚಿದ ಕೆಂಡದಂತೆ ಜಾತಿ ವ್ಯವಸ್ಥೆಯನ್ನು ಪೋಷಿಸುತ್ತಿವೆ. ಹೈದರಾಬಾದ್ ಕರ್ನಾಟಕ ಪ್ರದೇಶ ಬಹು ಭಾಷೆಗಳ ಯಜಮಾನಿಕೆಗೆ ಒಳಗಾಗಿತ್ತು. ಇಂದು ಇಂಗ್ಲೀಷ್ ಎಂಬ ಮಾಯೆಯಿಂದ ತತ್ತರಿಸಿ ಇದು ಅನಿವಾರ್ಯ ಎಂದು ಒಪ್ಪಿಕೊಂಡಿದೆ. ಹೀಗೆ ನಿಜಾಮರು ತಮ್ಮ ಸಂಸ್ಥಾನದ ಆಡಳಿತದಲ್ಲಿ ಅಸಮಾನತೆಯನ್ನು ಸರಿಪಡಿಸುವ ಉದ್ದೇಶದಿಂದಾಗಿ ಮೀಸಲಾತಿ ಜಾರಿಗೆ ತಂದಿದ್ದರು. ಆದರೆ ಮತ್ತೆ ಯಾವ ವರ್ಗ ಇದರ ಲಾಭ ಪಡೆದುಕೊಂಡಿತೋ ಅಂತಹದೇ ಹೊಸ ವರ್ಗದ ಉದಯವಾಯಿತು.

ಕೊನೆಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ ಕೆ, ೨೦೦೪, **ಪ್ರಭುತ್ವ ಮತ್ತು ಜನತೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೯–೬೦

೨. ಇರ್ಫಾನ್ ಹಬೀಬ್ (ಮೂಲ), ಕಕ್ಕಿಲ್ಲಾಯ ಬಿ.ವಿ (ಅನು), ೨೦೧೩, **ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ**, ನವಕರ್ನಾಟಕ ಪ್ರಕಾಶನ ಬೆಂಗಳೂರು ಪು.೧೩–೧೪

೩. ಕಾಟೆ ಪಿ.ವಿ, ೧೯೮೭, **ಮರಾಠವಾಡ್ ಅಂಡರ್ ದಿ ನಿಜಾಮ್ ೧೭೨೪–೧೭೪೮** ಮಿತ್ತಲ್ ಪಬ್ಲಿಕೇಷನ್, ದೆಹಲಿ, ಪು.೧೪೯

೪. ಅದೇ, ಪು.೧೫೦೦–೧೫೭

೫. ಶೀಲಾರಾಜ, ೧೯೮೭, **ಮೆಡಿವಲಿಸ್ಂ ಆ್ಯಂಡ್ ಮಾರ್ಡೆನ್‌ಸಿಂ ಸೋಶಿಯೋ ಎಕಾನೊಮಿಕ್ ಆ್ಯಂಡ್ ಕಲ್ಚರ್ ಹಿಸ್ಟರಿ ಆಫ್ ಹೈದರಾಬಾದ್ ೧೮೬೯–೧೯೧೧**, ಪಾಪುಲರ್ ಪಬ್ಲಿಕೇಷನ್ ಬಾಂಬೆ, ಪು.೬೭–೬೮

೬. ಮೋಹನ್‌ಕೃಷ್ಣ ರೈ ಕೆ., **ಪೂರ್ವೋಕ್ತ**, ಪು.೬೮–೬೯

೭. ಕಾಟೆ ಪಿ.ವಿ., **ಪೂರ್ವೋಕ್ತ**, ಪು.೧೫೦–೧೫೧

೮. ಷೇಕ್ ಅಲಿ ಬಿ (ಪ್ರ.ಸಂ), ಸೆಬಾಸ್ಟಿಯನ್ ಜೋಸೆಫ್ (ಸಂ.ಸಂ), ೧೯೯೭, **ಕರ್ನಾಟಕ ಚರಿತ್ರೆ ಸಂಪುಟ ೬**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು.೧೭೮

೯. ಅದೇ, ಪು.೧೭೬–೧೭೮

೧೦. ದೇವರಾಜು ಸಿ.ಬಿ., ೨೦೧೩, **ಹೈದರಾಬಾದ್ ರಾಜ್ಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು: ಬೀದರ ಜಿಲ್ಲೆಯ ಒಂದು ಅಧ್ಯಯನ ೧೯೦೫–೧೯೫೬**, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಪು.೧೧೩

೧೧. **ದಿ ಹಿಂದೂ ವಿಂಡೋಸ್, ರಿಮ್ಯಾರೇಜ್ ಆಕ್ಟ್ ನಂ ೧ ಆಫ್ ೧೩೪೭ ಫಸಲಿ**

೧೨. ಮೋಹನ್‌ಕೃಷ್ಣ ರೈ ಕೆ., **ಪೂರ್ವೋಕ್ತ**, ಪು.೬೯–೭೦

೧೩. ಕಾಟೆ ಪಿ.ವಿ., **ಪೂರ್ವೋಕ್ತ**, ಪು.೧೫೧–೧೫೨

೧೪. ಅದೇ, ಪು.೧೫೩–೧೫೪

೧೫. ಅಮರೇಶ ಆಲ್ಕೋಡ, ೨೦೧೨, **ದೇವದುರ್ಗ ಚಾರಿತ್ರಿಕ ಅಧ್ಯಯನ**, ಚಿಂತನ ಪುಸ್ತಕ, ಬೆಂಗಳೂರು, ಪು.೮೯

೧೬. ಕಾಟಿ ಪಿ.ವಿ., **ಪೂರ್ವೋಕ್ತ**, ಪು.೧೫೨

೧೭. ಬಸವರಾಜ ಕೋಡಗುಂಟಿ(ಸಂ), ೨೦೧೫, **ಊರು**, ಬಂಡಾರ ಪ್ರಕಾಶನ ಮಸ್ಕಿ, ಪು.೩೩-೩೪

೧೮. ಜಾಗಿರದಾರ ಆರ್.ಜಿ., ವಿಠಲ್‌ರಾವ್ ಲಿಂಗಸುಗೂರು, (ಸಂ), ೧೯೪೧, **ಹೈದರಾಬಾದ್ ಕರ್ನಾಟಕ**, ಪ್ರೇಮಸಾಗರ ಹೈದರಾಬಾದ್, ಪು.೪

೧೯. ಮಹಾಬಲೇಶ್ವರಪ್ಪ ಬಿ.ಸಿ., ೧೯೯೭, **ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು** ೧೯೪೬-೨೦೦೦, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ, ಪು.೬೮-೬೯

೨೦. ಮೋಹನ್‌ಕೃಷ್ಣ ರೈ ಕೆ., **ಪೂರ್ವೋಕ್ತ**, ಪು.೩೮

೨೧. ಮೋಹನ್‌ಕೃಷ್ಣ ರೈ ಕೆ., (ಸಂ), ೨೦೧೩, **ಚರಿತ್ರೆ ಅಧ್ಯಯನ ಸಂಪುಟ ೭, ಸಂಚಿಕೆ ೨, ಜನವರಿ ಜೂನ್ ೨೦೧೨**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೫೫

೨೨. ಅದೇ, ಪು.೧೫೬-೧೫೭

೨೩. ಅಮರೇಶ ನುಗಡೋಣಿ, ೨೦೧೬, **ಪೂರ್ವೋಕ್ತ**, ಪು.೫೬-೫೮

೨೪. ಅಮರೇಶ ಆಲ್ಕೋಡ, **ಪೂರ್ವೋಕ್ತ**, ಪು.೫೭-೫೮

೨೫. ಮಜ್‌ರ ಹುಸೇನ, ಗುಲಬರ್ಗಾ, **ಪೂರ್ವೋಕ್ತ**, ಪು.೩೨-೩೫

೨೬. ಮಜ್‌ರ ಹುಸೇನ, ಬೀದರ, **ಪೂರ್ವೋಕ್ತ**, ಪು.೩೨-೩೫

೨೭. ಮಜ್‌ರ ಹುಸೇನ, ರಾಯಚೂರು, **ಪೂರ್ವೋಕ್ತ**, ಪು.೩೨-೩೫

೨೮. ಪಾಟೀಲ್ ಎಂ.ಬಿ., (ಮು.ಸಂ), **ಪೂರ್ವೋಕ್ತ**, ಪು.೧೫೮

೨೯. ಅಮರೇಶ ನುಗಡೋಣಿ, ೨೦೦೩, **ಪೂರ್ವೋಕ್ತ**, ಪು.೬೯

೩೦. ಅಮರೇಶ ಆಲ್ಕೋಡ, **ಪೂರ್ವೋಕ್ತ**, ಪು.೭೯-೮೦

೩೧. ಪಾಟೀಲ್ ಎಂ.ಬಿ., (ಮು.ಸಂ), **ಪೂರ್ವೋಕ್ತ**, ಪು.೧೫೨

೩೨. ಅದೇ, ಪು.೧೫೫

೩೩. ಅಮರೇಶ ಆಲ್ಕೋಡ, **ಪೂರ್ವೋಕ್ತ**, ಪು.೭೮

೩೪. ಅದೇ, ಪು.೭೭

೩೫. ಅದೇ, ಪು.೮೦

೩೬. ಸೂರ್ಯನಾಥ ಯು ಕಾಮತ್ (ಮು.ಸಂ), ೧೯೮೪, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ಒಂದು,** ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ಪು.೩೬೩

೩೭. ಅದೇ, ಪು.೩೬೩

೩೮. ಪಾಟೀಲ್ ಎಂ.ಬಿ., (ಮು.ಸಂ), **ಪೂರ್ವೋಕ್ತ,** ಪು.೧೫೪

೩೯. ದೇವರು ಸಿ.ಬಿ., **ಪೂರ್ವೋಕ್ತ,**ಪು.೧೧೬

೪೦. ಪಾಟೀಲ್ ಎಂ.ಬಿ., (ಮು.ಸಂ), **ಪೂರ್ವೋಕ್ತ,** ಪು.೧೬೦

೪೧. ಸೂರ್ಯನಾಥ ಯು ಕಾಮತ್ (ಮು.ಸಂ), **ಪೂರ್ವೋಕ್ತ,** ಪು.೩೭೨

೪೨. ಪಾಟೀಲ್ ಎಂ.ಬಿ., (ಮು.ಸಂ), **ಪೂರ್ವೋಕ್ತ,** ಪು.೧೫೭

೪೩. ದಾಸೇಗೌಡ ಜಿ.ವಿ., (ಸಂ), ೨೦೦೭, **ನಮ್ಮ ಜನಪದ ನಂಬಿಕೆಗಳು,** ಚೇತನ ಬುಕ್ ಹೌಸ್, ಬೆಂಗಳೂರು, ಪು.೨-೩

೪೪. ಮಂಜುನಾಥ ಬೇವಿನಕಟ್ಟಿ, ೨೦೦೭, **ಕನ್ನಡ ಜನಪದ ನಂಬಿಕೆಗಳು,** ಜ್ಯೋತಿ ಪ್ರಕಾಶನ, ಮೈಸೂರು, ಪು.೧೩-೧೩೬

೪೫. ಅದೇ, ಪು.೧೩೯-೧೪೦

೪೬. ಹಿರೇಮಠ ಎಸ್.ಎಸ್., **ಕೊಪ್ಪಳ ಜಿಲ್ಲೆಯ ಜಾತ್ರೆಗಳು,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.೯

೪೭. ಪಾಟೀಲ್ ಎಂ.ಬಿ.(ಮು.ಸಂ), **ಪೂರ್ವೋಕ್ತ,** ಪು.೧೭೩

೪೮. ಹಿರೇಮಠ ಎಸ್.ಎಸ್., **ಪೂರ್ವೋಕ್ತ,** ಪು.೭

೪೯. ಸೂರ್ಯನಾಥ ಯು ಕಾಮತ್ (ಮು.ಸಂ), **ಪೂರ್ವೋಕ್ತ,** ಪು.೩೯೮

೫೦. ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ. (ಸಂ) ರಾಜೇಶ್ ಹಂಗು (ಸ.ಸಂ), ೨೦೧೬, **ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ನೆಲೆಗಳು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಪು.೧೮೯

೫೧. ವಾಲೀಕರ ಚೆನ್ನಣ್ಣ, ೧೯೯೮, **ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳು ಜನಪದೀಯ ಅಧ್ಯಯನ,** ದಲಿತ ಬಂಡಾಯ ಪ್ರಕಾಶನ, ಕಲಬುರ್ಗಿ, ಪು.೧೧೦

೫೨. ರವಿಕುಮಾರ, ೨೦೦೭, **ಮಧ್ಯಕಾಲೀನ ಕರ್ನಾಟಕದಲ್ಲಿ ಹಿಂದೂ- ಮುಸ್ಲಿಮ್ ಸಾಮರಸ್ಯ**

ಒಂದು ಐತಿಹಾಸಿಕ ಹಾಗೂ ಪ್ರಾಕ್ತನ ಶಾಸ್ತ್ರೀಯ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಪು.೧೧೯

೫೩. ಇಬ್ರಾಹಿಂ ಮುಲ್ಲಾ ಎಂ., ೨೦೦೮, **ಕರ್ನಾಟಕದ ಉರುಸುಗಳು,** ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ಪು.೧೯೭

೫೪. ರವಿಕುಮಾರ, **ಪೂರ್ವೋಕ್ತ,** ಪು. ೧೨೧

೫೫. ಅದೇ, ಪು.೧೨೧

೫೬. ಇಬ್ರಾಹಿಂ ಮುಲ್ಲಾ ಎಂ., **ಪೂರ್ವೋಕ್ತ,** ಪು.೧೯೮

೫೭. ರವಿಕುಮಾರ, **ಪೂರ್ವೋಕ್ತ,** ಪು.೧೨೨

೫೮. ರಾಜೇಶ್ ಹಂಗು, (ಸಂ), ೨೦೧೩, **ಇತಿಹಾಸ ದರ್ಪಣ ತ್ರೈಮಾಸಿಕ ಪುಸ್ತಕ ೧೯,** ಅಕ್ಟೋಬರ್, ಡಿಸೆಂಬರ್ ೨೦೧೩, ಇತಿಹಾಸ ದರ್ಪಣ ಬೆಂಗಳೂರು, ಪು.೩೬–೩೭

೫೯. ಅದೇ, ಪು.೩೬

೬೦. ಅದೇ, ಪು.೩೭–೩೮

೬೧. ವಾಲೀಕರ ಚೆನ್ನಣ್ಣ, ೧೯೯೮, **ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ,** ದಲಿತ ಬಂಡಾಯ ಸಾಹಿತ್ಯ ಪ್ರಕಾಶನ, ಗುಲಬರ್ಗಾ, ಪು.೨೭೨–೨೭೩

೬೨. ಪಾಟೀಲ್ ಎಂ.ಬಿ., (ಮು.ಸಂ), **ಪೂರ್ವೋಕ್ತ,** ಪು.೧೪೫

೬೩. ಅದೇ, ಪು.೧೪೪

೬೪. ಬಸವರಾಜ ಕೋಡಗುಂಟಿ, ೨೦೧೬, **ಹೈದರಾಬಾದ್ ಕರ್ನಾಟಕ,** ಬಂಡಾರ ಪ್ರಕಾಶನ ಮಸ್ಕಿ, ಪು.೨೨–೨೩

೬೫. ರಹಮತ್ ತರೀಕೆರೆ, ೨೦೧೧, **ಕರ್ನಾಟಕದ ಸೂಫಿಗಳು,** ಅಭಿನವ, ಬೆಂಗಳೂರು, ಪು. ೧೮೩–೧೮೫

೬೬. ವಾಲೀಕರ ಚೆನ್ನಣ್ಣ, **ಪೂರ್ವೋಕ್ತ,** ಪು.೧೧೫

೬೭. ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ. (ಸಂ), ರಾಜೇಶ್ ಹಂಗು (ಸ.ಸಂ), ೨೦೧೬, **ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ನೆಲೆಗಳು, ಸಂಪುಟ ೨,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಪು.೧೯೦–೧೯೧

೬೮. ಅದೇ, ಪು.೧೯೦

೭೯. ಮಹಾದೇವಿ ಮುಲಗಿ, ೨೦೧೧, **ಬೀದರ ಜಿಲ್ಲೆಯ ದೇವರೋತ್ಸವಗಳು,** ಅಖಿಲ ಭಾರತ ಜನಪದ, ಬೀದರ್, ಪು.೧೩-೧೪

೭೦. ಅದೇ, ಪು.೬-೭

೭೧. ಗೋವಿಂದರಾಜು ಸಿ.ಆರ್., (ಸಂ), ೨೦೦೭, **ಚರಿತ್ರೆ ಅಧ್ಯಯನ ಸಂಪುಟ ೨ ಸಂಚಿಕೆ ೨, ಜನವರಿ-ಜೂನ್ ೨೦೦೭,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೧೦-೧೧೧

೭೨. ಇಬ್ರಾಹಿಂ ಮುಲ್ಲಾ ಎಂ. **ಪೂರ್ವೋಕ್ತ,** ಪು.೧೨೬

೭೩. ಅದೇ, ಪು.೧೩೦-೧೩೧

೭೪. ಅದೇ, ಪು.೧೩೬

೭೫. ರಹಮತ್ ತರೀಕೆರೆ, **ಪೂರ್ವೋಕ್ತ,** ಪು.೧೫೮

೭೬. ಅದೇ, ಪು.೧೬೮-೧೭೯

೭೭. ಮೋಹನ್‌ಕೃಷ್ಣ ರೈ ಕೆ. **ಪೂರ್ವೋಕ್ತ,** ಪು.೪೮-೪೯

೭೮. ಅದೇ, ಪು.೫೪-೫೫

೭೯. ಸಿದ್ದಲಿಂಗಯ್ಯ, ೨೦೦೫, **ಗ್ರಾಮದೇವತೆಗಳು ಜಾನಪದೀಯ ಅಧ್ಯಯನ,** ಅಂಕಿತ ಪುಸ್ತಕ, ಬೆಂಗಳೂರು, ಪು.೧೭-೧೮

೮೦. ವಾಲೀಕಾರ ಚೆನ್ನಣ್ಣ, **ಪೂರ್ವೋಕ್ತ,** ಪು.೧೧೫-೧೧೬

೮೧. ಅದೇ, ಪು.

೮೨. ಕಾಟೆ ಪಿ.ವಿ., **ಪೂರ್ವೋಕ್ತ,** ಪು.೧೧೦-೧೧೧

೮೩. ಶೀಲಾರಾಜ, **ಪೂರ್ವೋಕ್ತ,** ಪು.೨೪೯-೨೪೦

೮೪. ಪಾಟೀಲ ಎಂ.ಬಿ., ಮ.ಸಂ, ೧೯೯೭, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಗುಲಬರ್ಗಾ ಜಿಲ್ಲೆ,** ಕರ್ನಾಟಕ ರಾಜ್ಯ ಸರಕಾರದ ಪ್ರಕಟಣೆ, ಪು.೫೧೪-೫೧೫

೮೫. ದೇವರಾಜು ಸಿ.ಬಿ., **ಪೂರ್ವೋಕ್ತ,** ಪು.೧೩೪-೧೩೫

೮೬. ಅದೇ, ಪು.೧೩೪-೧೩೬

೮೭. ಧ್ರುವನಾರಾಯಣ ಎಂ(ಸಂ)., ೨೦೧೧, **ಹೈದರಬಾದ್ ಕರ್ನಾಟಕದಲ್ಲಿ ಕನ್ನಡ ಕಟ್ಟಿದವರು,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೯-೧೦

೮೮. ಜಾಗಿರದಾರ ಆರ್.ಜಿ., ಲಿಂಗಸುಗೂರು ವಿಠಲರಾವ (ಸಂ), **ಪೂರ್ವೋಕ್ತ,** ಪು.೪೪-೪೫

೮೯. ಅಮರೇಶ ನುಗಡೋಣಿ, ೨೦೦೩, **ಹೈದರಾಬಾದ್ ಕರ್ನಾಟಕ ಹಾಡು ಪಾಡು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು.೭೧-೭೨

೯೦. ಅದೇ, ಪು.೭೩

೯೧. ರಾಘವೇಂದ್ರರಾವ್ ಕೆ., ೨೦೦೧, **ಪ್ರೊ. ಡಿ.ಕೆ. ಭೀಮಸೇನರಾಯರು ಬದುಕು-ಬರಹ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೩-೫

೯೨. ಅಮರೇಶ ನುಗಡೋಣಿ, **ಪೂರ್ವೋಕ್ತ,** ಪು.೪೨-೪೩

೯೩. ಅದೇ, ಪು.೭೧-೭೨

೯೪. ಮಜ್ಹರ ಹುಸೇನ್, ೧೯೪೧, **ಹೈದರಾಬಾದ್ ಡಿಸ್ಟ್ರಿಕ್ ಗ್ಯಾಜೆಟಿಯರ್ ಗುಲಬರ್ಗಾ ೧೩೪೦-೧೩೪೫ ಫಸಲಿ,** ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, ಪು.೨೨೪

೯೫. ಮಜ್ಹರ ಹುಸೇನ್, ೧೯೪೧, **ಹೈದರಾಬಾದ್ ಡಿಸ್ಟ್ರಿಕ್ ಗ್ಯಾಜೆಟಿಯರ್ ಬೀದರ ೧೩೪೦-೧೩೪೫ ಫಸಲಿ,** ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್ ಪು.೨೨೬-೨೨೭

೯೬. ಮಜ್ಹರ ಹುಸೇನ್, ೧೯೪೧, **ಹೈದರಾಬಾದ್ ಡಿಸ್ಟ್ರಿಕ್ ಗ್ಯಾಜೆಟಿಯರ್ ರಾಯಚೂರು ೧೩೪೦-೧೩೪೫ ಫಸಲಿ,** ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, ಪು.೨೨೪-೨೨೫

೯೭. ಪಾಟೀಲ್ ಎಂ.ಬಿ., (ಪ್ರ.ಸಂ), **ಪೂರ್ವೋಕ್ತ,** ಪು.೫೧೫

೯೮. ಅದೇ, ಪು.೫೩೫

೯೯. ಜಾಗಿರದಾರ ಆರ್.ಜಿ., ಲಿಂಗಸುಗೂರ ವಿಠಲರಾವ(ಸಂ), **ಪೂರ್ವೋಕ್ತ,** ಪು.೪೬

೧೦೦. ಅದೇ, ಪು.೪೯

೧೦೧. ಅದೇ, ಪು.೪೮

೧೦೨. ಅಮರೇಶ ನುಗಡೋಣಿ, ೨೦೧೬, **ಸಾಮಾಜಿಕ ವಾಸ್ತವ ಹೈದರಾಬಾದ್ ಕರ್ನಾಟಕ ಕಥಾ ಸಾಹಿತ್ಯ ಅನುಲಕ್ಷಿಸಿ,** ವಿಜಯ ಕಲ್ಯಾಣ ಪ್ರಕಾಶನ, ಹೊಸಪೇಟೆ, ಪು.೧೧-೧೨

೧೦೩. ಜಾಗಿರದಾರ ಆರ್.ಜಿ., ಲಿಂಗಸುಗೂರು ವಿಠಲರಾವ, (ಸಂ) **ಪೂರ್ವೋಕ್ತ**, ಪು.೪೮–೪೯

೧೦೪. ಅಮರೇಶ ನುಗಡೋಣಿ, ೨೦೦೩, **ಪೂರ್ವೋಕ್ತ**, ಪು.೭೩–೭೪

೧೦೫. ಮಜ್‌ರ ಹುಸೇನ್, ಗುಲಬರ್ಗಾ, **ಪೂರ್ವೋಕ್ತ**, ಪು.೨೮–೨೯

೧೦೬. ಮಜ್‌ರ ಹುಸೇನ, ಬೀದರ, **ಪೂರ್ವೋಕ್ತ**, ಪು.೨೬–೨೭

೧೦೭. ಮಜ್‌ರ ಹುಸೇನ, ರಾಯಚೂರು, **ಪೂರ್ವೋಕ್ತ**, ಪು.೨೮–೨೯

೧೦೮. ಅಮರೇಶ ನುಗಡೋಣಿ, ೨೦೦೩, **ಪೂರ್ವೋಕ್ತ**, ಪು.೪೨–೪೩

೧೦೯. ಧ್ರುವನಾರಾಯಣ ಎಂ(ಸಂ), **ಪೂರ್ವೋಕ್ತ**, ಪು. ೯

೧೧೦. ರಾಜೇಶ್ ಹಂಗು, **ಪೂರ್ವೋಕ್ತ**, ಪು.೮೯

೧೧೧. ಅಮರೇಶ ನುಗಡೋಣಿ, ೨೦೧೬, **ಪೂರ್ವೋಕ್ತ**, ಪು.೧೧–೧೨

೧೧೨. ಅಮರೇಶ ನುಗಡೋಣಿ, ೨೦೦೩, **ಪೂರ್ವೋಕ್ತ**, ಪು.೫೧–೫೨

೧೧೩. ರಝಾಕ್ ಉಸ್ತಾದ, ೨೦೧೧, **ಹೈದರಾಬಾದ್ ಕರ್ನಾಟಕ ಕಥೆ–ವ್ಯಥೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೬–೭

೧೧೪. ಜನಾರ್ದನ್, ೨೦೧೪, **ತೆಲುಗು ಜಾತಿ, ಜರ್ನಲ್**, ಹೈದರಾಬಾದ್ ಪು ೩೪–೩೫

೧೧೫. ಪ್ರಜಾವಾಣಿ, ದಿನಾಂಕ ೧೦–೯–೨೦೧೨, ಪು.೫

೧೧೬. ಅಂತರಜಾಲದಿಂದ ಪಡೆದ ಮಾಹಿತಿ **ಮುಲ್ಕಿ ರೂಲ್ಕ್, ತೆಲಂಗಾಣ ಇತಿಹಾಸ ಮುಲ್ಕಿ ನಿಜಾಮ್**

೧೧೭. **ಕಾನ್ಫಿಡೆನ್ಸ್ಲ್ ನಿಜಾಮ್ ಪೊಲಿಟಿಕಲ್ ಡಿಪಾರ್ಟ್‌ಮೆಂಟ್ ಮುಲ್ಕಿ ಫೈಲ್**

೧೧೮. ಚಿನ್ನಸ್ವಾಮಿ ಸೋಸಲೆ, (ಸಂ), **ಚರಿತ್ರೆ ಅಧ್ಯಯನ, ಸಂಪುಟ ೫, ಸಂಚಿಕೆ ೨**, ಜನವರಿ ೨೦೧೦, ಪು.೭೧–೭೨

೧೧೯. ರಝಾಕ್ ಉಸ್ತಾದ, **ಪೂರ್ವೋಕ್ತ**, ಪು.೭–೮

೧೨೦. ಚಿನ್ನಸ್ವಾಮಿ ಸೋಸಲೆ (ಸಂ), **ಪೂರ್ವೋಕ್ತ**, ಪು.೭೩

೧೨೧. **ವಿಜಯ ಕರ್ನಾಟಕ** ದಿನಾಂಕ ೧–೧–೨೦೧೩,

ಅಧ್ಯಾಯ: ಏಳು

ಆರ್ಥಿಕತೆ

೭.೧. ನಿಜಾಮ್ ಆರ್ಥಿಕ ನೀತಿ
೭.೨. ಕೃಷಿ ವ್ಯವಸ್ಥೆ
೭.೩. ನಗರ ವ್ಯವಸ್ಥೆ
೭.೪. ಆರ್ಥಿಕ ಸುಧಾರಣೆಗಳು
೭.೫. ಕೈಗಾರಿಕೆಗಳು
೭.೬. ಕ್ಷಾಮ
೭.೭. ಅಭಿವೃದ್ಧಿ ಮತ್ತು ಅನಭಿವೃದ್ಧಿ

ಅಧ್ಯಾಯ: ಏಳು

ಆರ್ಥಿಕತೆ

ಪೀಠಿಕೆ

ಹೈದರಾಬಾದ್ ನಿಜಾಮರು ಆರ್ಥಿಕ ನೀತಿಯನ್ನು ರೂಪಿಸಿಕೊಳ್ಳುವಲ್ಲಿ ಮೊಗಲ್ ಮತ್ತು ಬ್ರಿಟಿಶ್ ಆರ್ಥಿಕ ಅಂಶಗಳಿಂದ ಪ್ರಭಾವಿತರಾಗಿದ್ದನ್ನು ಗಮನಿಸಬಹುದು. ಸಂಸ್ಥಾನ ಭೂಮಿಯ ಮೇಲೆ ವಿಧಿಸುತ್ತಿದ್ದ ಕಂದಾಯವನ್ನು ಸಂಗ್ರಹಿಸುತ್ತಿತ್ತು. ಕೃಷಿಯೇ ಇಲ್ಲಿನ ಜನರ ಜೀವನದ ಆಧಾರವಾಗಿತ್ತು. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಏರ್ಪಾಟಾಗಿದ್ದ ಸಂತೆ, ಪೇಟೆ–ಪಟ್ಟಣಗಳು ಹಾಗೂ ಮಾರುಕಟ್ಟೆಗಳ ಮೂಲಕ ನಗರಗಳು ಉಗಮಗೊಂಡವು. ಬ್ರಿಟಿಶರ ವ್ಯಾಪಾರ ನೀತಿಯಿಂದಾಗಿ ಕೃಷಿಯಲ್ಲಿ ವಾಣಿಜ್ಯೀಕರಣ ಬೆಳವಣಿಗೆ ಕಂಡುಬಂದು ಮಾರುಕಟ್ಟೆಗಳ ಸ್ಥಾಪನೆ ಮಾಡಲಾಯಿತು. ಸಂಸ್ಥಾನದಲ್ಲಿ ಉತ್ಪಾದನೆಯಾದ ವಸ್ತುಗಳನ್ನು ದೇಶ–ವಿದೇಶಗಳಿಗೆ ರಫ್ತು ಮಾಡುವ ಮೂಲಕ ಆರ್ಥಿಕ ಸ್ಥಿತಿಗತಿಯನ್ನು ವಿಸ್ತರಿಸಿಕೊಂಡ ಕ್ರಮವನ್ನು ಗಮನಿಸಬಹುದಾಗಿದೆ. ಸಂಸ್ಥಾನದ ಗೃಹ ಕೈಗಾರಿಕೆಗಳು ಮತ್ತು ಬೃಹತ್ ಕೈಗಾರಿಕೆಗಳು ಉತ್ಪಾದಿಸಿದ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡಿ, ಅವಶ್ಯಕ ಸರಕುಗಳನ್ನು ಆಮದು ಮಾಡಿಕೊಂಡು ಸಂಸ್ಥಾನದ ಆರ್ಥಿಕತೆಯನ್ನು ವೃದ್ಧಿಸಿಕೊಳ್ಳಲಾಗಿತ್ತು. ನಿಜಾಮರ ಆರ್ಥಿಕತೆಯ ವಿಸ್ತರಣೆಯಲ್ಲಿ ಸಾರಿಗೆ, ಸಂಪರ್ಕ, ಬ್ಯಾಂಕ್ ಮತ್ತು ನಾಣ್ಯ ಪದ್ಧತಿ ಮುಖ್ಯಪಾತ್ರ ವಹಿಸಿದವು. ಕೃಷಿ, ಭೂ ಕಂದಾಯ, ನಗರ ವ್ಯವಸ್ಥೆ, ವ್ಯಾಪಾರ ಮತ್ತು ವಾಣಿಜ್ಯ, ಸಾರಿಗೆ ಚಟುವಟಿಕೆ, ಬ್ಯಾಂಕು ಮುಂತಾದವುಗಳ ಮೂಲಕ ಸ್ವತಂತ್ರ ಆರ್ಥಿಕತೆಯೊಂದನ್ನು ಹೊಂದುವ ಪ್ರಯತ್ನವನ್ನು ನಿಜಾಮರು ಮಾಡಿದರು.

೭.೧. ನಿಜಾಮ್ ಆರ್ಥಿಕ ನೀತಿ

ಹೈದರಾಬಾದ್ ನಿಜಾಮರು ಕೃಷಿ, ವ್ಯಾಪಾರ, ವಾಣಿಜ್ಯ ಮತ್ತು ಉದ್ದಿಮೆಗಳಲ್ಲಿ ಮಹತ್ವದ ಬದಲಾವಣೆಯನ್ನು ಬದಲಾವಣೆ ಮಾಡಿ ತಮ್ಮದೇ ಆರ್ಥಿಕ ನೀತಿ ರೂಪಿಸಿಕೊಂಡರು.[೧] ನಿಜಾಮ್

ಕಿಲಿಚಖಾನನ ಮರಣದ ನಂತರ ಸಂಸ್ಥಾನದಲ್ಲಿ ಉತ್ತರಾಧಿಕಾರಕ್ಕಾಗಿ ನಡೆದ ಹೋರಾಟದ ಲಾಭ ಪಡೆದ ವಸಾಹತುಶಾಹಿ ರಾಷ್ಟ್ರಗಳು ಐರೋಪ್ಯಕೇಂದ್ರಿತ ಆರ್ಥಿಕತೆಯನ್ನು ಬ್ರಿಟಿಶರ ಮೂಲಕ ಬಲವಂತವಾಗಿ ಹೇರುವಲ್ಲಿ ಯಶಸ್ವಿಯಾದವು. ಬ್ರಿಟಿಶರು ಹೈದರಾಬಾದ್ ಸಂಸ್ಥಾನದಲ್ಲಿ ಬ್ರಿಟಿಶ್ ಆರ್ಥಿಕತೆಯನ್ನು ಪ್ರಚುರಪಡಿಸಿದ ಫಲವಾಗಿ ನಿಜಾಮರು ಬ್ರಿಟಿಶರ ಸಹಾಯಕ ಸೈನ್ಯ ಪದ್ಧತಿಯನ್ನು ಸ್ವೀಕರಿಸಿ ವಸಾಹತು ಧೋರಣೆಗೆ ಒಳಗಾದರು. ಅಂದಿನಿಂದ ಹೈದರಾಬಾದ್ ಸಂಸ್ಥಾನದಲ್ಲಿದ್ದ ಮೊಗಲ್ ಆರ್ಥಿಕ ನೀತಿಯ ಮೇಲೆ ಬ್ರಿಟಿಶ್ ನೀತಿಯ ಪ್ರಭಾವವನ್ನು ಗಮನಿಸಬಹುದಾಗಿದೆ. ನಿಜಾಮ್ ಸಂಸ್ಥಾನದ ಆರ್ಥಿಕತೆಯಲ್ಲಾದ ಈ ಬದಲಾವಣೆಗಳು ಸಮ್ಮಿಶ್ರ ಆರ್ಥಿಕತೆಯೊಂದರ ಹುಟ್ಟಿಗೂ ಕಾರಣವಾದವು.

೭.೧.೧. ಮೊಗಲ್ ಪ್ರಭಾವಿತ ಆರ್ಥಿಕ ನೀತಿ

ಭಾರತದಲ್ಲಿ ಹಲವು ವರ್ಷಗಳ ಕಾಲ ಚಾಲ್ತಿಯಲ್ಲಿದ್ದ ಮೊಗಲರ ಆರ್ಥಿಕ ವ್ಯವಸ್ಥೆಗೆ ಕೃಷಿಯೇ ಪ್ರಮುಖ ಮೂಲವಾಗಿತ್ತು. ಮೊಗಲರು ಕೃಷಿಗೆ ಹೆಚ್ಚಿನ ಮಹತ್ವ ನೀಡಿ ಕೃಷಿ ಉತ್ಪಾದನೆಯಲ್ಲಿ ಅಧಿಕ ಉತ್ಪನ್ನ ಮಾಡುವ ಹೊಸ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ಮೊಗಲರ ಕಾಲದಲ್ಲಿ ಬಹುಪಾಲು ರೈತಾಪಿ ವರ್ಗವೇ ಪ್ರಮುಖವಾಗಿತ್ತು. ಕೃಷಿಯಲ್ಲಿ ಉತ್ಪನ್ನ ಹೆಚ್ಚಿಸಲು ಸಾಮ್ರಾಜ್ಯದಲ್ಲಿದ್ದ ಪಾಳುಭೂಮಿಯನ್ನು ಕೃಷಿ ಭೂಮಿಯನ್ನಾಗಿ ಪರಿವರ್ತನೆ ಮಾಡಲಾಯಿತು. ಕೃಷಿಭೂಮಿ ವಿಸ್ತರಿಸಲು ಪಾಳುಬಿದ್ದ ಭೂಮಿಯ ಮೇಲೆ ವಿಧಿಸಿದ್ದ ತೆರಿಗೆಯಲ್ಲಿ ವಿನಾಯ್ತಿ ನೀಡಿ ರೈತರನ್ನು ಕೃಷಿಯಲ್ಲಿ ಹೆಚ್ಚು ಹೆಚ್ಚು ತೊಡಗಿಸಲಾಯಿತು.[೩]

ಮೊಗಲ್ ಸುಲ್ತಾನರ ಅರ್ಥಮಂತ್ರಿಯಾದ ತೋದರಮಲ್ಲನ ಕಂದಾಯ ನೀತಿಗೆ ಅನುಗುಣವಾಗಿ ಭೂಮಿಯ ಫಲವತ್ತತೆ ಆಧಾರದ ಮೇಲೆ ಭೂ ಕಂದಾಯವನ್ನು ವಿಧಿಸುವ ಪದ್ಧತಿ ಜಾರಿಗೆ ತರಲಾಗಿತ್ತು. ಭೂಮಿಯ ಅಳತೆ ಮತ್ತು ಭೂಮಿಯ ಫಲವತ್ತತೆ ಆಧಾರದ ಮೇಲೆ ತೆರಿಗೆ ನಿಗದಿಗೊಳಿಸುವ ಜೊತೆಗೆ, ತೆರಿಗೆ ಸಲ್ಲಿಸಿದ ದಾಖಲೆ ಪುಸ್ತಕವನ್ನು ಜಾರಿಗೆ ತರುವ ಮೂಲಕ ತೆರಿಗೆ ಪೋಲಾಗದಂತೆ ಎಚ್ಚರವಹಿಸಲಾಗಿತ್ತು. ರೈತರು ಸರಕಾರಕ್ಕೆ ಕೊಡಬೇಕಾದ ಕಂದಾಯ, ಜಮೀನಿನ ವಿಸ್ತೀರ್ಣ ಮತ್ತು ಪಾವತಿಸಿದ ಕಂದಾಯದ ಮಾಹಿತಿಯನ್ನು ದಾಖಲೆ ಪುಸ್ತಕದಲ್ಲಿ ಒದಗಿಸಿ ರೈತರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವನೆಯನ್ನು ಹೆಚ್ಚಿಸುವ ಮೂಲಕ ಕೃಷಿ ಉತ್ಪನ್ನವನ್ನು ಹೆಚ್ಚಿಸಲಾಗಿತ್ತು.[೪]

ರೈತರು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ವ್ಯವಸ್ಥಿತ ಮಾರುಕಟ್ಟೆ ಜಾರಿಗೆ ತಂದು, ಕೃಷಿ ಉತ್ಪನ್ನಗಳ ಮೇಲೆ ಮಾರಾಟ ತೆರಿಗೆ ವಿಧಿಸಲಾಗುತ್ತಿತ್ತು. ಇದು ಸಾಮ್ರಾಜ್ಯದಲ್ಲಿ ಮಾರುಕಟ್ಟೆಗಳ

ಮೂಲಕ ನಾಗರಿಕ ವ್ಯವಸ್ಥೆಯೊಂದು ಬೆಳವಣಿಗೆಯಾಗಲು ಕಾರಣವಾಯಿತು. ನಗರಗಳ ಮೂಲಕ ಮೊಗಲ್ ಸಾಮ್ರಾಜ್ಯ ಕೃಷಿ, ವ್ಯಾಪಾರ ಮತ್ತು ಕೈಗಾರಿಕೆಗಳಲ್ಲಿ ಪ್ರಗತಿ ಸಾಧಿಸಿತು. ಕೃಷಿ ಆಧಾರಿತ ಕೈಗಾರಿಕೆಗಳು ಸ್ಥಾಪನೆಯಾಗಿ ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು ರೈತರು ಉತ್ಪಾದಿಸುವಂತಾಯಿತು. ಈ ಮೂಲಕ ದೇಶಿ ವ್ಯಾಪಾರವನ್ನು ವೃದ್ಧಿಗೊಳಿಸಲಾಯಿತು. ಕೃಷಿ ಆಧಾರಿತ ಕೈಗಾರಿಕೆಗಳು ಉತ್ಪಾದನೆ ಮಾಡಿದ ವಸ್ತುಗಳನ್ನು ಮಾರಾಟ ಮಾಡಲು ಮೊಗಲ್ ಸಾಮ್ರಾಜ್ಯದಲ್ಲಿ ಆಂತರಿಕ ಮತ್ತು ವಿದೇಶಿ ವ್ಯಾಪಾರ ಪ್ರಾಮುಖ್ಯತೆ ಪಡೆಯಿತು.[೫]

ಮೊಗಲರ ಕಾಲದಲ್ಲಿ ಪೂರ್ವ ಮತ್ತು ಪಶ್ಚಿಮ ತೀರದ ಪ್ರದೇಶಗಳ ಮೂಲಕ ಏಷ್ಯಾ ಮತ್ತು ಯುರೋಪಿನ ದೇಶಗಳೊಂದಿಗೆ ಹತ್ತಿ, ಬಟ್ಟೆ ಮುಂತಾದ ಕೃಷಿ ಮತ್ತು ಕೈಗಾರಿಕಾ ಉತ್ಪನ್ನಗಳ ವಿದೇಶಿ ವ್ಯಾಪಾರ ನಡೆಯುತ್ತಿತ್ತು. ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯಗಳ ಮೂಲಕ ಮೊಗಲರು ತಮ್ಮ ಆರ್ಥಿಕ ಸ್ವರೂಪವನ್ನು ವಿಸ್ತರಿಸಿಕೊಂಡಿರುವುದು ಕಂಡುಬರುತ್ತದೆ. ಅಸಮರ್ಥ ಮೊಗಲ್ ಸುಲ್ತಾನರ ಕಾಲದಲ್ಲಿ ಸ್ವತಂತ್ರರಾದ ನಿಜಾಮರು ಆರಂಭದಲ್ಲಿ ಈ ಮೇಲಿನ ಮೊಗಲ್ ಆರ್ಥಿಕ ನೀತಿಯನ್ನು ಯಥಾವತ್ತಾಗಿ ಅಳವಡಿಸಿಕೊಂಡಿದ್ದರೆಂಬುದು ಗಮನಾರ್ಹವಾಗಿದೆ.[೬]

೭.೧.೨. ವಸಾಹತುಶಾಹಿ ಆರ್ಥಿಕ ನೀತಿ

ಭಾರತಕ್ಕೆ ವ್ಯಾಪಾರ ಮಾಡಲು ಬಂದ ಬ್ರಿಟಿಶ್ ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರ ಸಂಸ್ಥೆಯಾಗಿತ್ತು. ಅದು ಭಾರತದಲ್ಲಿ ಸಾಂಬಾರ ಪದಾರ್ಥ ಮತ್ತು ಕೃಷಿ ಉತ್ಪನ್ನ ಖರೀದಿ ಮಾಡುತ್ತಿತ್ತು ಮತ್ತು ವಿದೇಶದ ಅಮೂಲ್ಯ ಲೋಹಗಳನ್ನು ಭಾರತದಲ್ಲಿ ಮಾರಾಟ ಮಾಡುತ್ತಿತ್ತು. ಭಾರತದಲ್ಲಿ ಕಂಪನಿ ಸರ್ಕಾರ ಆರಂಭವಾದ ಮೇಲೆ ಅದಕ್ಕೆ ಈ ವ್ಯಾಪಾರವೇ ಪ್ರಮುಖ ಆದಾಯದ ಮೂಲವಾಯಿತು. ವ್ಯಾಪಾರವನ್ನೇ ಬಂಡವಾಳ ಮಾಡಿಕೊಂಡ ಬ್ರಿಟಿಶರು ಭಾರತದ ಹತ್ತಿಬಟ್ಟೆ, ಸಾಂಬಾರ ಪದಾರ್ಥಗಳ ಜೊತೆಗೆ ಇತರ ಸಂಪತ್ತನ್ನು ಅಧಿಕ ಪ್ರಮಾಣದಲ್ಲಿ ಬ್ರಿಟನ್ನಿಗೆ ರಫ್ತು ಮಾಡತೊಡಗಿದ್ದರು. ಭಾರತದ ಹತ್ತಿಬಟ್ಟೆಗೆ ಬ್ರಿಟನಿನಲ್ಲಿ ಭಾರಿ ಬೇಡಿಕೆ ಉಂಟಾದ ಪರಿಣಾಮವಾಗಿ ಬ್ರಿಟಿಶ್ ಸರಕಾರ ಹತ್ತಿಬಟ್ಟೆ ನೇಯುವ ಗುಡಿ ಕೈಗಾರಿಕೆ ಮತ್ತು ಹತ್ತಿಬಟ್ಟೆ ವ್ಯಾಪಾರವನ್ನು ನಿಷೇಧಿಸಿತು. ಬ್ರಿಟನ್ನಿನಲ್ಲೂ ಭಾರತೀಯ ವಸ್ತುಗಳ ಮೇಲೆ ನಿಷೇಧ ಹೇರಿತು.[೭] ಭಾರತೀಯ ಗುಡಿ ಕೈಗಾರಿಕೆಗಳು ಆರ್ಥಿಕವಾಗಿ ಚೇತರಿಸಿಕೊಳ್ಳದ ಹಾಗೆ ಭಾರಿ ಪೆಟ್ಟು ತಿಂದವು. ಬ್ರಿಟಿಶರು ವಸಾಹತು ನಿಯಮಗಳನ್ನು ಜಾರಿಗೆ ತರುವ ಮೂಲಕ ಭಾರತದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರು. ಈ ಬೆಳವಣಿಗೆಯಿಂದ ಸ್ಥಳೀಯ ಅರಸರು ಬ್ರಿಟಿಶರ ವಿರುದ್ಧ ೧೮೫೭ರಲ್ಲಿ ದಂಗೆ ಎದ್ದು ಸೋತುಹೋದರು. ಭಾರತದ ರಾಜಕೀಯದಲ್ಲಿ ಅಧಿಕೃತ ಶಕ್ತಿಯಾಗಿ ರೂಪತಳೆದ ಬ್ರಿಟಿಶರು ಭಾರತವನ್ನು ತಮ್ಮದೊಂದು ವಸಾಹತುವನ್ನಾಗಿ ಮಾಡಿಕೊಂಡಿದ್ದು ಇತಿಹಾಸದ ಭಾಗವಾಗಿದೆ.[೮]

ಸಹಾಯಕ ಸೈನ್ಯ ಪದ್ಧತಿ ಒಪ್ಪಂದದ ಮೂಲಕ ಸೈನಿಕ ನೆರವು ನೀಡುವ ನೆಪದಲ್ಲಿ ಬ್ರಿಟಿಶರು ಸ್ಥಳೀಯ ಅರಸರ ಆಂತರಿಕ ವಿಷಯಗಳಲ್ಲಿ ಮೂಗುತೂರಿಸತೊಡಗಿದರು. ಬ್ರಿಟಿಶರ ಸಂಚಿಗೆ ಬಲಿಯಾದ ಮೊದಲ ದೇಶಿಯ ದೊರೆ ಹೈದರಾಬಾದ್ ನಿಜಾಮ್ ಆಗಿದ್ದಾನೆ. ವಸಾಹತು ಧೋರಣೆ ಗಟ್ಟಿಗೊಳಿಸುವ ಪ್ರಯತ್ನದಲ್ಲಿ ಈ ಒಪ್ಪಂದವನ್ನು ಇತರ ದೇಶಿಯ ಅರಸರ ಮೇಲೆ ಬಲವಂತವಾಗಿ ಹೇರಲಾಯಿತು.[೯] ಬ್ರಿಟಿಶರು ಭಾರತೀಯ ರಾಜಕೀಯದಲ್ಲಿ ನೇರವಾಗಿ ಭಾಗವಹಿಸಿ ಸ್ಥಳೀಯ ಅರಸರಲ್ಲಿ ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿಕಟ್ಟಿ ತಮ್ಮ ಅಸ್ತಿತ್ವದ ಅನಿವಾರ್ಯತೆಯನ್ನು ಸೃಷ್ಟಿಸಿಕೊಂಡರು, ಮಾತ್ರವಲ್ಲದೆ ದೇಶಿಯ ಅರಸರು ಹಾಗೂ ವ್ಯಾಪಾರಸ್ಥರ ಸಹಾಯದಿಂದ ತಮಗೆ ಅನುಕೂಲವಾಗುವಂತೆ ಆರ್ಥಿಕ ಸ್ವರೂಪವನ್ನು ರೂಪಿಸಿಕೊಂಡರು.[೧೦] ಕೃಷಿ ಪ್ರಧಾನ ದೇಶವಾದ ಭಾರತ ತನ್ನದೇ ಆರ್ಥಿಕತೆಯನ್ನು ಹೊಂದಿತ್ತು. ಭಾರತದ ಪಾರಂಪರಿಕ ಆರ್ಥಿಕ ನೆಲೆಯನ್ನು ಬೇಧಿಸಲು ಬ್ರಿಟಿಶರು ಆಧುನಿಕತೆ ಎಂಬ ಪರಿಕಲ್ಪನೆಯನ್ನು ಬಳಸಿ ವಸಾಹತು ನೀತಿಯನ್ನು ಗಟ್ಟಿಗೊಳಿಸಿದರು.[೧೧] ಭಾರತದಲ್ಲಿದ್ದ ಗುಡಿ ಕೈಗಾರಿಕೆಗಳಿಗೆ ದೇಶೀಯ ಅರಸರಿಂದ ಪ್ರೋತ್ಸಾಹ ಸಿಗದ ಹಾಗೆ ಮಾಡಿದರು. ಗುಡಿಕೈಗಾರಿಕೆಗಳ ಸ್ಥಾನದಲ್ಲಿ ಬ್ರಿಟಿಶ್‌ಕೇಂದ್ರಿತ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವಂತೆ ಮಾಡಿದರು.[೧೨] ಬ್ರಿಟನ್ನಿನ ಕೈಗಾರಿಕೆಗಳಿಗೆ ಮೂಲವಸ್ತುಗಳು ಮತ್ತು ಕಚ್ಚಾ ಸರಕುಗಳನ್ನು ಸಾಗಿಸಲು ಭಾರತದಲ್ಲಿ ರಸ್ತೆ ಮತ್ತು ರೈಲು ಸಾರಿಗೆಯನ್ನು ಅಭಿವೃದ್ಧಿಪಡಿಸಿದರು.[೧೩] ಭಾರತದಲ್ಲಿದ್ದ ಪಾರಂಪರಿಕ ಆಹಾರ ಕೃಷಿ ಪದ್ಧತಿಯ ಸ್ಥಾನದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುವಂತೆ ಮಾಡಿದರು. ಈ ಮೂಲಕ ಬ್ರಿಟನ್ನಲ್ಲಿದ್ದ ಕೈಗಾರಿಕೆಗಳಿಗೆ ಅಗತ್ಯವಾಗಿದ್ದ ಕಚ್ಚಾ ವಸ್ತುಗಳನ್ನು ಪೂರೈಸಲು ಭಾರತದ ಕೃಷಿ ಕ್ಷೇತ್ರವನ್ನು ಬದಲಾವಣೆಗೆ ಒಳಪಡಿಸಿದರು. ಹತ್ತಿ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆದು ಬ್ರಿಟನ್ನಿಗೆ ಸಾಗಿಸಲಾಯಿತು. ಕೃಷಿ ಕ್ಷೇತ್ರದಲ್ಲಿ ಸ್ಥಳೀಯ ಪದ್ಧತಿಗಳು ಮೂಲೆಗುಂಪಾದವು. ವಸಾಹತು ನೀತಿಯನ್ವಯ ಶಾಶ್ವತ ಭೂಕಂದಾಯ, ರೈತವಾರಿ ಮತ್ತು ಗೇಣಿ ಪದ್ಧತಿಗಳನ್ನು ಜಾರಿಗೊಳಿಸಲಾಯಿತು. ಬ್ರಿಟಿಶರು ಪ್ರಬಲರಾಗುವ ಹಾದಿಯಲ್ಲಿ ಮುನ್ನಡೆದು ದೇಶೀಯ ಅರಸರನ್ನು ನಿಷ್ಕ್ರೀಯಗೊಳಿಸುವತ್ತ ಸಾಗಿ ಭಾರತೀಯ ಆರ್ಥಿಕ ವ್ಯವಸ್ಥೆಯ ಮೇಲೆ ತಮ್ಮ ಹಿಡಿತ ಸಾಧಿಸಿದರು.[೧೪]

೭.೧.೩. ನಿಜಾಮ್ ಆರ್ಥಿಕ ನೀತಿ

ನಿಜಾಮರು ಮೊಗಲರ ಆರ್ಥಿಕ ಅಂಶಗಳನ್ನು ಅಳವಡಿಸಿಕೊಂಡು ತಮ್ಮ ಆರ್ಥಿಕ ವ್ಯವಸ್ಥೆಯನ್ನು ಗಟ್ಟಿಗೊಳಿಸಿಕೊಂಡರು. ದಕ್ಷಿಣ ಭಾರತದಲ್ಲಾದ ರಾಜಕೀಯ ಸಂಘರ್ಷದಲ್ಲಿ ಹೈದರಾಬಾದ್ ಸಂಸ್ಥಾನವು ಸಂಪೂರ್ಣ ಬ್ರಿಟಿಶ್ ಆಶ್ರಿತ ಸಂಸ್ಥಾನವಾಗಿ ಕಾರ್ಯನಿರ್ವಹಿಸತೊಡಗಿತ್ತು. ಬ್ರಿಟಿಶ್ ಆರ್ಥಿಕ ನೀತಿಯಿಂದ ಪ್ರಭಾವಿತರಾಗಿದ್ದ ನಿಜಾಮರು ಸಂಸ್ಥಾನದ ಅಗತ್ಯಗಳಿಗೆ ಅನುಗುಣವಾಗಿ ಸ್ವಂತ ಆರ್ಥಿಕ ರೂಪುರೇಷೆಯನ್ನು ರೂಪಿಸಿಕೊಂಡರು.

ನಿಜಾಮರ ಸಂಸ್ಥಾನ ಕೃಷಿ ಆಧಾರಿತವಾಗಿದ್ದು, ಪ್ರಮುಖ ಆದಾಯ ಕೂಡ ಕೃಷಿಯನ್ನು ಅವಲಂಬಿಸಿತ್ತು. ಕೃಷಿ ಉತ್ಪಾದನೆಯಲ್ಲಿ ಇಳುವರಿ ಹೆಚ್ಚಿಸಲು ಬ್ರಿಟಿಶ್ ಮಾದರಿಯ ಮಣ್ಣಿನ ಫಲವತ್ತತೆ ಪರೀಕ್ಷೆ ಮತ್ತು ಅದಕ್ಕೆ ಅನುಗುಣವಾಗಿ ಉಳುಮೆ ಮಾಡುವ ಕ್ರಮವನ್ನು ಪ್ರೋತ್ಸಾಹಿಸಲಾಯಿತು. ಮಳೆಯಾಧಾರಿತ ಕೃಷಿಯಲ್ಲಿ ಉತ್ಪಾದನೆಯ ಪ್ರಮಾಣ ಕಡಿಮೆಯಿತ್ತು. ನೀರಾವರಿ ಮೂಲಕ ಉತ್ಪಾದನೆಯನ್ನು ಹೆಚ್ಚಿಸಲು ಸಂಸ್ಥಾನದ ಪ್ರದೇಶದಲ್ಲಿ ಹರಿಯುವ ನದಿಗಳಿಗೆ ಅಣೆಕಟ್ಟು ಕಟ್ಟಿಸುವ ಪ್ರಯತ್ನ ಮಾಡಲಾಯಿತು. ನೀರಾವರಿ ಭೂಪ್ರದೇಶವನ್ನು ವಿಸ್ತರಿಸಲು ಕೆರೆ ನಿರ್ಮಾಣ ಮತ್ತು ಬಾವಿಗಳನ್ನು ತೋಡಿಸುವ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು.[೧೫]

ನಿಜಾಮರು ತೋದರಮಲ್ಲನ ನೀತಿಗೆ ಅನುಗುಣವಾಗಿ ಸಂಸ್ಥಾನದಲ್ಲಿ ಭೂಮಿಯನ್ನು ವರ್ಗೀಕರಿಸಿ ತೆರಿಗೆ ವಿಧಿಸಿದ್ದರು. ಭೂಮಿಯನ್ನು ಸರಿಯಾದ ರೀತಿಯಲ್ಲಿ ಮಾಪನ ಮಾಡಿ ಎಕರೆವಾರು ತೆರಿಗೆ ವಿಧಿಸಲಾಯಿತು. ಸಂಸ್ಥಾನದಲ್ಲಿ ಲಭ್ಯವಿದ್ದ ಸಂಪನ್ಮೂಲಗಳನ್ನು ಆಧರಿಸಿ ಬ್ರಿಟಿಶ್ ಮಾದರಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಹೀಗೆ ನಿಜಾಮರು ಸಮ್ಮಿಶ್ರ ಆರ್ಥಿಕತೆಯನ್ನು ಅಳವಡಿಸಿಕೊಳ್ಳುವ ಮೂಲಕ ಸಂಸ್ಥಾನದ ಆರ್ಥಿಕತೆಯನ್ನು ಗಟ್ಟಿಗೊಳಿಸಿಕೊಂಡರು. ಸಮ್ಮಿಶ್ರ ಆರ್ಥಿಕ ನೀತಿಯಂತೆ ಕೃಷಿಯಲ್ಲಿನ ಬೆಳೆಗಳನ್ನು ವಾಣಿಜ್ಯೇತರ ಬೆಳೆಗಳ ಜೊತೆಗೆ ವಾಣಿಜ್ಯ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹಿಸಲಾಯಿತು. ರಾಯಚೂರು ದೋ-ಆಬ್ ಪ್ರದೇಶದಲ್ಲಿ ಅಮೇರಿಕ ಹತ್ತಿ ಬೀಜಗಳನ್ನು ಬಿತ್ತನೆ ಮಾಡುವ ಮೂಲಕ ಹತ್ತಿ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಗತಗೊಳಿಸಿದರು. ಸಂಸ್ಥಾನದಲ್ಲಿ ಕೃಷಿಯೇತರ ಭೂಮಿಯನ್ನು ಕೃಷಿ ಭೂಮಿಯನ್ನಾಗಿ ಪರಿವರ್ತನೆ ಮಾಡುವ ಮೂಲಕ ಕೃಷಿ ಉತ್ಪನ್ನವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮಕೈಗೊಂಡಿದ್ದರು. ಜೊತೆಗೆ ಕೃಷಿಯಲ್ಲಿದ್ದ ಭೂಕಂದಾಯ ಪದ್ಧತಿಯಲ್ಲಿ ಅನೇಕ ಬದಲಾವಣೆಯನ್ನು ಮಾಡಿಕೊಳ್ಳುವ ಮೂಲಕ ಹೊಸ ಪದ್ಧತಿಗಳನ್ನು ಅಳವಡಿಸಿಕೊಂಡರು. ಭೂ ಕಂದಾಯವನ್ನು ವ್ಯವಸ್ಥಿತವಾಗಿ ಜಾರಿಗೊಳಿಸುವ ಉದ್ದೇಶದಿಂದ ತೆರಿಗೆ ಸಂಗ್ರಹಿಸುವ ಅಧಿಕಾರಿಗಳನ್ನು ನೇಮಿಸಿಕೊಳ್ಳುವ ಮೂಲಕ ಸಂಗ್ರಹಿಸಿದ ತೆರಿಗೆಯನ್ನು ಕುರಿತು ದಾಖಲಿಸುವ ಪದ್ಧತಿಯನ್ನು ಜಾರಿಗೆ ತಂದರು.

ಸಂಸ್ಥಾನದಲ್ಲಿದ್ದ ಸಂಪನ್ಮೂಲಗಳಿಗೆ ಅನುಗುಣವಾಗಿ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾ, ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದರು. ಉತ್ಪಾದನೆ ಮಾಡಿದ ಉತ್ಪನ್ನಗಳನ್ನು ದೇಶಿ ಮತ್ತು ವಿದೇಶಿ ವ್ಯಾಪಾರದಲ್ಲಿ ತೊಡಗಿಸಿಕೊಳ್ಳುವ ಮೂಲಕ ಆಮದಕ್ಕಿಂತ ರಫ್ತು ಪ್ರಮಾಣವನ್ನು ಹೆಚ್ಚಿಸಿಕೊಂಡಿದ್ದರು. ವ್ಯಾಪಾರ ಮಾಡುವುದಕ್ಕೆ ದೇಶೀಯ ಮಟ್ಟದಲ್ಲಿ ವ್ಯಾಪಾರ ನೀತಿಗಳನ್ನು ರೂಪಿಸಿಕೊಂಡರು. ನಿಜಾಮ್ ಪ್ರಭುತ್ವವು ಆಂತರಿಕ ವ್ಯಾಪಾರದ ಮೇಲೆ ಹಿಡಿತ ಸಾಧಿಸುತ್ತಾ ಏಕಸ್ವಾಮ್ಯತೆಯನ್ನು ಪಡೆಯಿತು. ನಿಜಾಮರು ವಸಾಹತುಶಾಹಿ ನೀತಿಗೆ ಅನುಗುಣವಾಗಿ ಆರ್ಥಿಕ ನೀತಿಗಳು ಅಳವಡಿಸಿಕೊಂಡಿರುವುದು ಗಮನಿಸಬಹುದಾಗಿದೆ.[೧೬]

ನಿಜಾಮರ ಸಂಸ್ಥಾನದಲ್ಲಿ ಉತ್ಪಾದನೆ ಮಾಡಿದ ಉತ್ಪನ್ನಗಳನ್ನು ವಿದೇಶಿಗಳೊಂದಿಗೆ ವ್ಯಾಪಾರ ವಹಿವಾಟು ನಡೆಸುವುದಕ್ಕಾಗಿ ವಿದೇಶಿ ವ್ಯಾಪಾರ ನೀತಿಯನ್ನು ಜಾರಿಗೊಳಿಸುವ ಮೂಲಕ ವ್ಯಾಪಾರವನ್ನು ವಿಸ್ತರಿಸಿಕೊಳ್ಳುತ್ತಾ ತನ್ನ ಆರ್ಥಿಕತೆಯನ್ನು ಹೆಚ್ಚಿಸಿಕೊಳ್ಳಲಾಯಿತು. ದೇಶೀಯ ವ್ಯಾಪಾರದಲ್ಲಿನ ವರ್ತಕ ಸಮುದಾಯಗಳಿಗೆ ಪ್ರೋತ್ಸಾಹ ನೀಡುತ್ತಾ ಸಂಸ್ಥಾನದ ಆರ್ಥಿಕ ನೀತಿ ವಿಸ್ತರಿಸಿಕೊಂಡಿದ್ದರು.

ನಿಜಾಮರು ತಮ್ಮ ಆರ್ಥಿಕ ನೀತಿಯು ವಿಸ್ತಾರಗೊಳಿಸುವುದಲ್ಲದೆ ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಿಸುವುದಕ್ಕಾಗಿ ಸ್ವತಂತ್ರವಾಗಿ ಹಣವನ್ನು ಚಲಾವಣೆಗೆ ತಂದರು. ಹೀಗೆ ಜಾರಿಗೆ ತಂದ ಹಣವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದುಕೊಂಡಿತು. ಈ ಹಣವು ವಿದೇಶಿ ಹಣವಾದ ಡಾಲರ್‌ಗಳಿಗೆ ಬದಲಾಯಿಸಿಕೊಳ್ಳುವುದಕ್ಕೆ ಮಾನ್ಯತೆ ಪಡೆದಿರುವುದು ವಿಶೇಷವಾಗಿದೆ. ಹೀಗೆ ನಿಜಾಮರು ತಮ್ಮ ಸಮ್ಮಿಶ್ರ ಆರ್ಥಿಕ ನೀತಿಯ ಮೂಲಕ ಸಂಸ್ಥಾನದ ಆರ್ಥಿಕತೆಯನ್ನು ವೃದ್ಧಿಸಿಕೊಂಡರು.[೧೭]

೭.೨. ಕೃಷಿ ವ್ಯವಸ್ಥೆ


ಮಾನವನ ಜೀವನ ಕ್ರಮದಲ್ಲಿ ಕೃಷಿ ಅನೇಕ ಬದಲಾವಣೆಗಳಿಗೆ ಅನುವು ಮಾಡಿಕೊಟ್ಟಿತು. ಅಲೆಮಾರಿಯಾಗಿದ್ದ ಮಾನವ ಒಂದೆಡೆ ನೆಲೆನಿಂತು ತನ್ನ ಜೀವನಾವಶ್ಯಕ ವಸ್ತುಗಳನ್ನು ತಾನೇ ಬೆಳೆದುಕೊಳ್ಳಲು ಪ್ರಯತ್ನಿಸಿದ. ಈ ಉತ್ಪಾದನಾ ಕ್ರಮ ಮಾನವನ ನಾಗರಿಕ ಬದುಕಿಗೆ ತಳಹದಿಯಾಯಿತು. ನಾಗರಿಕತೆ ಬೆಳೆದಂತೆ ಪ್ರಭುತ್ವ ಕಲ್ಪನೆಯೂ ನೆಲೆಯೂರತೊಡಗಿತು. ಈ ಎರಡೂ ಕಲ್ಪನೆಗಳು ಮಾನವನ ಸಂಪದ್ಭರಿತ ಜೀವನದೊಂದಿಗೆ ತಳಕುಹಾಕಿಕೊಂಡಿವೆ. ಕೃಷಿಯನ್ನು ಅವಲಂಬಿಸಿದ ರೈತಾಪಿ ವರ್ಗ ಆಯಾ ಪ್ರದೇಶದ ಸಂಪತ್ತು ಹೆಚ್ಚು ಮಾಡುವ ಮೂಲ ವರ್ಗವಾಯಿತು. ದುಡಿಯುವ ವರ್ಗವಾದ ರೈತರು ರಾಜ್ಯವೊಂದರ ಆರ್ಥಿಕ ಶಕ್ತಿಯಾಗಿ ಸೈನಿಕ ಶಕ್ತಿಯಾಗಿ ಅದರ ಏಳುಬೀಳುಗಳಿಗೆ ಕಾರಣಕರ್ತರೂ ಆಗಿ ಚರಿತ್ರೆಯ ಭಾಗವಾಗಿದ್ದರು. ಈ ಮೂಲಕ ರಾಜ್ಯದ ಆರ್ಥಿಕ ವ್ಯವಸ್ಥೆ ಕೃಷಿ ಮತ್ತು ಅದರ ಉತ್ಪಾದನೆಯನ್ನು ಅವಲಂಬಿಸುವಂತಾಯಿತು ಮತ್ತು ಪ್ರಮುಖ ಮೂಲವಾಯಿತು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಕೃಷಿ ರೂಪುಗೊಂಡಿರುವುದು ಕಂಡುಬರುತ್ತದೆ. ಮೌರ್ಯರು ಕಾಡನ್ನು ಕಡಿದು ಕೃಷಿ ಭೂಮಿಯ ವಿಸ್ತರಣೆಗಾಗಿ ಯುದ್ಧ ಖೈದಿಗಳನ್ನು ಬಳಸಿಕೊಂಡಿದ್ದರು. ರಾಯಚೂರು ದೋ-ಅಬ್ ಪ್ರದೇಶ ಮತ್ತು ಗುಲಬರ್ಗಾ ಪ್ರದೇಶಗಳು ಮೌರ್ಯ ಅರಸ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು. ಈ ಪ್ರದೇಶ ಜನವಸತಿಯನ್ನು

ಹೊಂದಿ ಕೃಷಿ ವ್ಯವಸ್ಥೆಯನ್ನು ರೂಢಿಸಿಕೊಂಡಿತ್ತು. ಕೃಷಿ ವಿಧಾನದಲ್ಲಿ ಕೃಷಿ ಭೂಮಿ, ನೀರಾವರಿ ವ್ಯವಸ್ಥೆ, ಭೂಮಾಲೀಕ ವರ್ಗ, ಪ್ರಮುಖ ಬೆಳೆಗಳು, ಕಂದಾಯ ವ್ಯವಸ್ಥೆ ಮತ್ತು ಕೃಷಿ ಕಾರ್ಮಿಕರು ಎಂಬ ಕಲ್ಪನೆಗಳೊಂದಿಗೆ ಹೈದ್ರಾಬಾದ್ ಕರ್ನಾಟಕದ ಕೃಷಿ ವ್ಯವಸ್ಥೆಗೆ ಸಂಬಂಧಿಸಿದ ಅಂಶಗಳನ್ನು ಈ ಕೆಳಗೆ ಗಮನಿಸಲಾಗಿದೆ.[೧೮]

೭.೨.೧. ಕೃಷಿ ಭೂಮಿಯ ವಿಂಗಡಣೆ

ಹೈದರಾಬಾದ್ ನಿಜಾಮರು ತಮ್ಮ ಆಳ್ವಿಕೆಯಲ್ಲಿ ಕೃಷಿ ಭೂಮಿಯನ್ನು ದಿವಾನಿ ಅಥವಾ ಖಾಲ್ಸಾ, ಜಹಗೀರ ಮತ್ತು ಸರ್ಫೆ-ಎ-ಖಾಸ್ ಎಂದು ವಿಭಾಗಿಸಿಕೊಂಡಿದ್ದರು. ಈ ಮೂರು ಪ್ರದೇಶಗಳನ್ನು ರೇಖಾಚಿತ್ರದ ಮೂಲಕ ತೋರಿಸಲಾಗಿದೆ.



ಈ ಮೇಲಿನ ರೇಖಾಚಿತ್ರದಂತೆ ನಿಜಾಮರ ದಿವಾನಿ ಅಥವಾ ಖಾಲ್ಸಾ ಭೂಮಿ ಸರಕಾರದ ಒಡೆತನದಲ್ಲಿದ್ದು ಆ ಭೂಮಿಯ ಮೇಲೆ ಸರಕಾರವೇ ಕಂದಾಯ ಸಂಗ್ರಹಿಸುತ್ತಿತ್ತು. ದಿವಾನಿ ಭೂಮಿ ಸಂಸ್ಥಾನದ ಭೂಪ್ರದೇಶದಲ್ಲಿ ಸುಮಾರು ಶೇ.೬೦ರಷ್ಟಿದ್ದು ಕಂದಾಯ ವಿಧಿಸುತ್ತಿದ್ದ ಭೂಮಿಯಾಗಿತ್ತು, ಆಡಳಿತ ಅಧಿಕಾರಿಗಳಿಗೆ ಹಾಗೂ ನಿಜಾಮ್ ಸಂಬಂಧಿಕರಿಗೆ ನೀಡಿದ್ದ ಜಹಾಗೀರ ಭೂಪ್ರದೇಶ ಶೇ.೪೦ರಷ್ಟಿತ್ತು ಮತ್ತು ನಿಜಾಮನ ಖಾಸಗಿ ಜೀವನಕ್ಕಾಗಿ ನೀಡಿದ್ದ ಸರ್ಫೆ-ಎ-ಖಾಸ್ ಭೂಮಿ ಶೇ.೧೦ರಷ್ಟಿತ್ತು. ಈ ಮೂರು ಬಗೆಯ ಭೂಪ್ರದೇಶಗಳು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಂಡುಬರುತ್ತವೆ. ದಿವಾನಿ ಅಥವಾ ಖಾಲ್ಸಾ ಭೂಮಿ ಶೇ.೭೦ರಷ್ಟು ಇದ್ದರೆ ಜಹಾಗೀರ ಭೂಪ್ರದೇಶ ಶೇ.೨೦ರಷ್ಟು ಹಾಗೂ ಸರ್ಫೆ-ಎ-ಖಾಸ್ ಭೂಮಿ ಶೇ.೧೦ರಷ್ಟಿತ್ತು.[೧೯]

ದಿವಾನಿ ಅಥವಾ ಖಾಲ್ಸಾ

ನಿಜಾಮ್ ಸರ್ಕಾರದ ಒಡೆತನದಲ್ಲಿರುತ್ತಿದ್ದ ದಿವಾನಿ ಭೂಪ್ರದೇಶವನ್ನು ಮೊಗಲರ ಕಾಲದಿಂದಲೂ ಗುರುತಿಸಬಹುದಾಗಿದೆ. ಈ ಭೂಮಿಯ ಮೇಲೆ ಕಂದಾಯ ವಿಧಿಸುವ ಸಂಪೂರ್ಣ ಅಧಿಕಾರ ಸರಕಾರದ್ದಾಗಿತ್ತು. ಇದು ನಿಜಾಮ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿಯೂ ಕಂಡುಬರುತ್ತದೆ. ಗುಲಬರ್ಗಾ ಮತ್ತು ರಾಯಚೂರು ಜಿಲ್ಲಾ ಪ್ರದೇಶಗಳಲ್ಲಿ ದಿವಾನಿ ಅಥವಾ ಖಾಲ್ಸಾ ಭೂಮಿ ಹೆಚ್ಚಿನ ಪ್ರಮಾಣದಲ್ಲಿಯೂ ಬೀದರ ಜಿಲ್ಲೆಯಲ್ಲಿದ್ದ ಖಾಲ್ಸಾ ಭೂ ಪ್ರದೇಶ ಕಡಿಮೆ ಪ್ರಮಾಣದಲ್ಲಿಯೂ ಇದ್ದು, ಪೈಗಾ ಮತ್ತು ಜಹಾಗೀರ ಪ್ರದೇಶಗಳ ವಿಸ್ತರಣೆ ಹೆಚ್ಚಿನ ಪ್ರಮಾಣದಲ್ಲಿತ್ತು.[೨೦]

ದಿವಾನಿ ಭೂಮಿಯಲ್ಲಿ ನಿಜಾಮರು ಮೊಗಲರ ತೆರಿಗೆ ಪದ್ಧತಿಯಂತೆ ತೆರಿಗೆಯನ್ನು ವಿಧಿಸುತ್ತಿದ್ದರು. ನಂತರ ವತನದಾರ ಪದ್ಧತಿಯನ್ವಯ ತೆರಿಗೆ ಸಂಗ್ರಹಿಸಲು ನೇಮಕವಾಗಿದ್ದ ದೇಶಮುಖ–ದೇಸಾಯಿ, ದೇಶಪಾಂಡೆ, ಸರದೇಶಪಾಂಡೆ ಎಂಬ ವತನದಾರರು ಕಂದಾಯ ಸಂಗ್ರಹಿಸುವ ವಿಧಾನದಲ್ಲಿ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದರು. ಇವರು ಸರಕಾರವು ತೆರಿಗೆ ನಿಗದಿಪಡಿಸಿದ್ದರೂ ಪಾವತಿಸದ ರೈತರ ಕೃಷಿ ಭೂಮಿಯನ್ನು ವಶಪಡಿಸಿಕೊಂಡು ಹೊಸ ಜಮೀನ್ದಾರರಾಗಿ ಮೆರೆಯುತ್ತಿದ್ದರು. ಈ ಸಂದರ್ಭದಲ್ಲಿ ಒಂದನೆಯ ಸಾಲಾರ್‌ಜಂಗ್‌ನು ಸಂಸ್ಥಾನದ ದಿವಾನಿ ಕಂದಾಯ ಆಡಳಿತದಲ್ಲಿದ್ದ ಲೋಪದೋಷಗಳನ್ನು ತಿದ್ದುಪಡಿಗೆ ಒಳಪಡಿಸಿ ವತನದಾರರು ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ಪದ್ಧತಿಯನ್ನು ರದ್ದುಪಡಿಸಿದನು.[೨೧] ನಂತರ ಗುತ್ತಿಗೆ ಆಧಾರಿತ ಕಂದಾಯ ಪದ್ಧತಿ ಜಾರಿಗೆ ಬಂದಿತು. ಇದರನ್ವಯ ದಿವಾನಿ ಭೂಮಿಯ ಕಂದಾಯ ಸಂಗ್ರಹಿಸಲು ಗುತ್ತಿಗೆ ನೀಡುವ ಪರಿಪಾಠ ಬೆಳೆಯಿತು. ಗುತ್ತಿಗೆ ಪಡೆದ ಭೂಮಾಲೀಕರು ಸಾಗುವಳಿದಾರರಿಗೆ ಅಧಿಕ ಗೇಣಿ ದರದಲ್ಲಿ ಭೂಮಿಯನ್ನು ನೀಡಿ ಗೇಣಿ ಪದ್ಧತಿಯನ್ನು ಹುಟ್ಟುಹಾಕಿದರು. ರೈತರಿಂದ ಭೂಮಿಯ ಮೇಲೆ ಗೇಣಿ ಪಡೆಯುತ್ತಿದ್ದ ವರ್ಗ ಕಾಲಕ್ರಮದಲ್ಲಿ ಹೊಸ ಜಮೀನ್ದಾರ ವರ್ಗವಾಗಿ ಬೆಳೆಯಿತು. ಈ ಪದ್ಧತಿಯಿಂದಲೂ ಸಂಸ್ಥಾನದಲ್ಲಿ ಕೃಷಿ ಹಿನ್ನಡೆಯನ್ನು ಅನುಭವಿಸುವಂತಾಯಿತು. ಸಾಲಾರ್‌ಜಂಗ್‌ನು ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಿ[೨೨] ದಿವಾನಿ ಭೂಮಿಯ ಕಂದಾಯ ಆಡಳಿತವನ್ನು ಮತ್ತು ತೆರಿಗೆ ಸಂಗ್ರಹವನ್ನು ಸರಕಾರದ ನೇರ ಅಧೀನಕ್ಕೆ ತೆಗೆದುಕೊಂಡು ತೆರಿಗೆ ಸಂಗ್ರಹಕ್ಕಾಗಿ ಸರಕಾರದ ಅಧಿಕಾರಿಗಳನ್ನು ನೇಮಿಸಿದನು. ಹೀಗೆ ನೇಮಕಗೊಂಡ ಅಧಿಕಾರಿಗಳಾದ ತಾಲೂಕುದಾರ, ಅವಲ್ ತಾಲೂಕುದಾರ, ನವಿ ತಾಲೂಕುದಾರ, ತಹಶೀಲ್ದಾರ್ ಮತ್ತು ನವಿ ತಹಶೀಲ್ದಾರರು ಸರ್ಕಾರದ ನೀತಿ ನಿಯಮಗಳಿಗೆ ಅನುಸಾರವಾಗಿ ತೆರಿಗೆಯನ್ನು ವಿಧಿಸುತ್ತಿದ್ದರು. ಇದರಿಂದ ರೈತರು ನೇರವಾಗಿ ಸರ್ಕಾರಕ್ಕೆ ತೆರಿಗೆ ಪಾವತಿಸುವ ಕ್ರಮ ಜಾರಿಗೆ ಬಂದಿತು.[೨೩]

ಜಹಗೀರ ಭೂಮಿ

ಜಹಗೀರ ಪದ್ಧತಿಯು ಬಿಜಾಪುರ ಆದಿಲ್‌ಶಾಹಿಗಳ ಕಾಲದಲ್ಲಿ ಅಸ್ತಿತ್ವಕ್ಕೆ ಬಂದು ಮೊಗಲರ ಆಡಳಿತ ಅವಧಿಯಲ್ಲಿ ಹೆಮ್ಮರವಾಗಿ ಬೆಳೆದುಕೊಂಡಿತು. ಆಡಳಿತದಲ್ಲಿ ಮತ್ತು ಕಂದಾಯ ನೀತಿಯಲ್ಲಿ ಮೊಗಲರನ್ನು ಅನುಸರಿಸಿದ್ದ ನಿಜಾಮರು ಜಹಗೀರ ಪದ್ಧತಿಯನ್ನು ಅಳವಡಿಸಿಕೊಂಡಿದ್ದುದು ಗಮನಿಸಬಹುದು.[೨೪] ನಿಜಾಮರು ತಮ್ಮ ಸಂಸ್ಥಾನದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಅಧಿಕಾರಿಗಳ ಸೇವೆಗೆ ಪ್ರತಿಯಾಗಿ ಒಂದು ನಿರ್ದಿಷ್ಟ ಭೂ ಪ್ರದೇಶವನ್ನು ಜಹಗೀರಾಗಿ ನೀಡುತ್ತಿದ್ದರು. ಈ ಜಹಗೀರ ಪ್ರದೇಶಗಳು ಖಾಯಂ ಜಹಗೀರ ಮತ್ತು ವಂಶಪಾರಂಪರಿಕ ಜಹಗೀರಗಳನ್ನು ಒಳಗೊಂಡಿತ್ತು. ಜಹಗೀರಗಳಲ್ಲಿ ಹತ್ತು ಬಗೆಗಳಿದ್ದವು. ಅವುಗಳೆಂದರೆ ೧. ಪೈಗಾ, ೨.ಅಲ್ತುಮಹಾ, ೩. ಮಶ್ರೂತಿ, ೪. ಮರಾದ ಮಹಮ್ಸ್, ೫.ತನಖಾ, ೬.ಚೌಹಲ್, ೭.ಮುದಸಾ ೮. ಇಲಾಖಾ, ೯. ಜಾತ್, ೧೦. ಸಂಸ್ಥಾನಗಳಾಗಿದ್ದವು. ಇವುಗಳಲ್ಲಿ ಪೈಗಾ ಅತ್ಯಂತ ದೊಡ್ಡ ಮತ್ತು ಪ್ರಬಲವಾದ ಜಹಗೀರ್ ಆಗಿತ್ತು. ಪೈಗಾ ಜಹಗೀರ್ ಪ್ರದೇಶ ಸಂಸ್ಥಾನದ ಸೇವೆಯಲ್ಲಿದ್ದ ಸೈನ್ಯಾಧಿಕಾರಿಗಳಿಗೆ ನೀಡುತ್ತಿದ್ದ ಭೂ ಪ್ರದೇಶವಾಗಿತ್ತು.[೨೫] ಪೈಗಾ ಮುಖ್ಯಸ್ಥನು ನಿಜಾಮನಿಗೆ ವಿಧೇಯನಾಗಿದ್ದು ಅಗತ್ಯ ಸಂದರ್ಭದಲ್ಲಿ ಸೈನ್ಯಾಧಿಕಾರಿಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದನು. ಇಂತಹ ವ್ಯಕ್ತಿಗಳಿಗೆ ಮಾತ್ರ ಪೈಗಾ ಜಹಗೀರನ್ನು ನೀಡಲಾಗುತ್ತಿತ್ತು. ಇನ್ನುಳಿದ ಜಹಾಗೀರ ಪ್ರದೇಶಗಳನ್ನು ಸಂಸ್ಥಾನದಲ್ಲಿ ಸೇವೆಸಲ್ಲಿಸಿದ್ದ ಇತರ ಅಧಿಕಾರಿಗಳಿಗೆ ನೀಡಲಾಗುತ್ತಿತ್ತು.[೨೬] ನಿಜಾಮನಿಂದ ಇನಾಮು ಪಡೆದ ಜಹಗೀರದಾರರು ಆಡಳಿತ, ಕಂದಾಯ ಮತ್ತು ನ್ಯಾಯಾಂಗ ಇಲಾಖೆಗಳಲ್ಲಿ ಸಂಬಂಧಿಸಿದ ಅಧಿಕಾರ ಪಡೆದಿದ್ದರು. ನಿಜಾಮ ಸರಕಾರ ಜಾರಿಗೆ ತಂದ ಕಾಯಿದೆಗಳು ದಿವಾನಿ ಅಥವಾ ಖಾಲ್ಸಾ ಭೂಮಿಗಳಂತೆ ಜಹಗೀರ್ ಪ್ರದೇಶಗಳಿಗೂ ಅನ್ವಯವಾಗುತ್ತಿತ್ತು. ಕಂದಾಯವನ್ನು ವಿಧಿಸುವ ಮತ್ತು ಸಂಗ್ರಹಿಸುವ ಅಧಿಕಾರ ಮಾತ್ರ ಜಹಾಗೀರದಾರರಲ್ಲಿತ್ತು. ಜಹಗೀರದಾರರು ತಮ್ಮ ಜಹಗೀರ್ ಭೂಮಿಯಲ್ಲಿ ದಿವಾನಿ ಅಥವಾ ಖಾಲ್ಸಾ ಭೂಕಂದಾಯಕ್ಕಿಂತ ಅಧಿಕ ಪ್ರಮಾಣದ ಕಂದಾಯವನ್ನು ವಿಧಿಸುತ್ತಿದ್ದರು. ಇವರು ಕಂದಾಯ ಪಾವತಿ ನಿರಾಕರಿಸಿದ ಮತ್ತು ಕಂದಾಯ ನೀಡಲು ಅಸಮರ್ಥರಾದ ರೈತರ ಭೂಮಿಗಳನ್ನು ವಶಪಡಿಸಿಕೊಳ್ಳುತ್ತಿದ್ದರು.[೨೭]

ಜಹಗೀರದಾರರು ತಮ್ಮ ಜಹಗೀರುಗಳ ಅಧೀನದಲ್ಲಿ ಆಡಳಿತ ನಡೆಸುತ್ತಿದ್ದ ಸ್ಥಳೀಯ ಅಧಿಕಾರಿಗಳು ಸಂಗ್ರಹಿಸುತ್ತಿದ್ದ ಕಂದಾಯದ ವಾರ್ಷಿಕ ಆದಾಯವನ್ನು ಹರಾಜು ಹಾಕುತ್ತಿದ್ದರು. ಜಹಗೀರದಾರರು ಹರಾಜು ಹಣ ಪಡೆದು ಆಡಳಿತ ಕೇಂದ್ರವಾದ ಹೈದರಾಬಾದ್‌ನಿಂದ ಆಡಳಿತ ನಡೆಸುತ್ತಿದ್ದರು. ಜಹಗೀರದಾರರಿಂದ ತೆರಿಗೆ ಸಂಗ್ರಹ ಅಧಿಕಾರ ಪಡೆದ ಕೆಳಹಂತದ ಅಧಿಕಾರಿ ವರ್ಗ ರೈತರ ಮೇಲೆ ಅಧಿಕ ತೆರಿಗೆ ವಿಧಿಸಿ ಶೋಷಿಸುತ್ತಿತ್ತು. ಬರಗಾಲದ ಸಂದರ್ಭದಲ್ಲಿಯೂ

ತೆರಿಗೆ ವಸೂಲಿ ಮಾಡಲಾಗುತ್ತಿತ್ತು.[೨೮] ನಿಜಾಮರು ಇಂದಿನ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪೈಗಾ ಮತ್ತು ಇತರ ಜಹಗೀರಗಳನ್ನು ನೀಡಿದ್ದು ಕಂಡುಬರುತ್ತದೆ. ಬೀದರ್ ಜಿಲ್ಲಾ ಪ್ರದೇಶದಲ್ಲಿ ಪೈಗಾ ಜಹಗೀರ ಭೂಮಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಸುಮಾರು ಎಂಟು ತಾಲೂಕುಗಳಲ್ಲಿದ್ದವು. ಗುಲಬರ್ಗಾ ಜಿಲ್ಲೆಯಲ್ಲಿಯೂ ಚಿತ್ತಾಪುರ, ತಾಂಡೂರು ಮತ್ತು ಕಲ್ಯಾಣಗಳಲ್ಲಿ ಜಹಗೀರಗಳಿದ್ದವು.[೨೯] ರಾಯಚೂರು ಜಿಲ್ಲೆಯ ಕೊಪ್ಪಳ ಮತ್ತು ಯಲಬುರ್ಗಾಗಳಲ್ಲಿ ಸಾಲಾರ್‌ಜಂಗ್‌ನ ಜಹಗೀರು ಇತ್ತು.[೩೦] ಹೈದರಾಬಾದ್ ಕರ್ನಾಟಕದ ಅತಿದೊಡ್ಡ ಜಹಗೀರ ಪ್ರದೇಶ ಬೀದರ ಜಿಲ್ಲೆಯಲ್ಲಿದ್ದ ಪೈಗಾ ಜಹಗೀರ್ ಸರ್. ಅಸಮ್ ಜಹಾ, ಖುರ್ಷದಜಹಾ ಮತ್ತು ವಿಕ್ರ-ಉಲ್-ಉಮ್ರಾ ಎಂಬುವಾಗಿವೆ.[೩೧]

ಸರ್ಫೆ-ಏ-ಖಾಸ್

ನಿಜಾಮನ ಖಾಸಗಿ ಜೀವನ ಮತ್ತು ಅರಮನೆಯ ವೆಚ್ಚಗಳಿಗಾಗಿ ಮೀಸಲಿಟ್ಟ ಸಂಸ್ಥಾನದ ಭೂಪ್ರದೇಶವನ್ನು ಸರ್ಫೆ-ಏ-ಖಾಸ್ ಭೂಮಿ ಎನ್ನಲಾಗುತ್ತಿತ್ತು. ಮೊಗಲ ಸುಲ್ತಾನರು ತಮ್ಮ ಅರಮನೆಯ ಆದಾಯಕ್ಕಾಗಿ ನಿರ್ದಿಷ್ಟ ಭೂಪ್ರದೇಶವನ್ನು ಮೀಸಲಿರಿಸಿದ್ದಂತೆ ನಿಜಾಮರು ಆಯ್ದ ಭೂಪ್ರದೇಶವನ್ನು ಸರ್ಫೆ-ಏ-ಖಾಸ್ ಇಲಾಖೆಗೆ ಬಿಟ್ಟುಕೊಟ್ಟಿದ್ದರು. ರಾಜಪರಿವಾರದ ಜಹಾಗೀರದಾರರು ಮರಣ ಹೊಂದಿದಾಗ ಅವರ ಭೂಮಿ ಸರ್ಫೆ-ಏ-ಖಾಸ್ ಇಲಾಖೆಗೆ ಸೇರುತ್ತಿತ್ತು. ಬ್ರಿಟಿಶರೊಂದಿಗಿನ ಒಪ್ಪಂದದ ಅನ್ವಯ ಆಯಾ ಭೂಪ್ರದೇಶ ನಿಜಾಮನ ಖಾಸಗಿ ಆಸ್ತಿಗೆ ಸೇರುತ್ತಿತ್ತು. ನಿಜಾಮನು ಸರ್ಫೆ-ಏ-ಖಾಸ್ ಇಲಾಖೆಯಲ್ಲಿ ಒಟ್ಟು ೧೮ ತಾಲೂಕು ಪ್ರದೇಶಗಳಲ್ಲಿ ೮,೧೧೦ ಚದರ ವಿಸ್ತೀರ್ಣವಿದ್ದ ವ್ಯಾಪ್ತಿಯ ಪ್ರದೇಶವನ್ನು ಹೊಂದಿದ್ದನು. ಈ ಪ್ರದೇಶದ ಆಡಳಿತ ಮತ್ತು ಕಂದಾಯಕ್ಕೆ ಸಂಬಂಧಿಸಿದ ಅಧಿಕಾರವನ್ನು ನಿಜಾಮ ನೇಮಿತ ಅಧಿಕಾರಿಗಳು ನಿರ್ವಹಿಸುತ್ತಿದ್ದರು.[೩೨]

ಸರ್ಫೆ-ಏ-ಖಾಸ್ ಭೂಪ್ರದೇಶ ಗುಲಬರ್ಗಾ ಜಿಲ್ಲೆಯ ಶಹಾಪುರ, ಸುರಪುರ, ಜೇವರ್ಗಿ ತಾಲೂಕುಗಳಲ್ಲಿ ಮತ್ತು ಬೀದರ ಜಿಲ್ಲೆಯ ಜನವಾಡ ತಾಲೂಕಿನಲ್ಲಿದ್ದುದನ್ನು ಗಮನಿಸಬಹುದು. ನಿಜಾಮನಿಂದ ನೇಮಕವಾದ ನಂಬಿಕಸ್ಥ ಅಧಿಕಾರಿಗಳು ಈ ಪ್ರದೇಶಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಮುಗಲಾಯಿ ಪದ್ಧತಿಯಂತೆ ಹೈದರಾಬಾದ್ ಕರ್ನಾಟಕ ಪ್ರದೇಶದ ಕಂದಾಯವನ್ನು ವಸೂಲಿ ಮಾಡಲಾಗುತ್ತಿತ್ತು.[೩೩]

೭.೨.೨. ನೀರಾವರಿ ವ್ಯವಸ್ಥೆ

ಹೈದರಾಬಾದ್ ಕರ್ನಾಟಕ ಪ್ರದೇಶ ಮಳೆಯಾಶ್ರಿತ ಕೃಷಿಯನ್ನು ಅವಲಂಬಿಸಿತ್ತು. ಕೃಷ್ಣಾ, ಭೀಮಾ ಮತ್ತು ತುಂಗಭದ್ರಾ ನದಿಗಳು ಈ ಪ್ರದೇಶದಲ್ಲಿ ಹರಿಯುತ್ತಿದ್ದರೂ ಅವು ಕೃಷಿ ಭೂಮಿಗೆ

ನೀರಾವರಿ ಒದಗಿಸುತ್ತಿರಲಿಲ್ಲ. ಮಳೆಯಾಧಾರಿತ ಕೃಷಿ ವಿಧಾನದಲ್ಲಿ ಇಳುವರಿ ಕಡಿಮೆ ಇದ್ದು ಆಗಾಗ ಬರಗಾಲಕ್ಕೆ ತುತ್ತಾಗುತ್ತಿದ್ದುದು ಸಾಮಾನ್ಯವಾಗಿತ್ತು. ಮಳೆಯಾಧಾರಿತ ಕೃಷಿ ಭೂಮಿಗೆ ನೀರಾವರಿ ಕಲ್ಪಿಸಿದರೆ ಮಾತ್ರ ಕೃಷಿಯಿಂದ ರಾಜ್ಯದ ಆದಾಯ ವೃದ್ಧಿಗೊಳ್ಳುತ್ತದೆ ಎಂಬ ಅಂಶವನ್ನು ಮನಗಂಡು ನೀರಾವರಿ ವ್ಯವಸ್ಥೆಗೆ ಹೆಚ್ಚಿನ ಮಹತ್ವ ನೀಡಿದ್ದಂತೆ ತೋರುತ್ತದೆ. ಕೆರೆ, ಬಾವಿ ಮತ್ತು ನದಿಗಳ ಮೂಲಕ ನೀರಾವರಿ ಕೃಷಿ ಭೂಮಿಯನ್ನು ವಿಸ್ತರಿಸಲು ಪ್ರಯತ್ನಿಸಿದ ಫಲವಾಗಿ ನಿಜಾಮರು ಸಂಸ್ಥಾನದಲ್ಲಿ ಕೆರೆಗಳನ್ನು ಮತ್ತು ಬಾವಿಗಳನ್ನು ನಿರ್ಮಿಸಲು ಹೆಚ್ಚಿನ ಆದ್ಯತೆ ನೀಡಿದ್ದರು. ಖಾಸಗಿ ವ್ಯಕ್ತಿಗಳೂ ಕೆರೆ ನಿರ್ಮಾಣ ಮತ್ತು ಬಾವಿ ತೋಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು ಗಮನಾರ್ಹವಾಗಿದೆ.

ಹೈದರಾಬಾದ್ ಕರ್ನಾಟಕದ ಪ್ರತಿಯೊಂದು ಗ್ರಾಮದಲ್ಲಿ ಕೆರೆಗಳಿದ್ದುದು ಸಾಮಾನ್ಯವಾಗಿತ್ತು. ಸರಕಾರಿ ಮತ್ತು ಖಾಸಗಿ ವ್ಯಕ್ತಿಗಳಿಂದ ನಿರ್ಮಿತವಾಗಿದ್ದ ಕೆರೆ ಮತ್ತು ಬಾವಿಗಳ ಸಂಖ್ಯೆ ಅಧಿಕವಾಗಿದ್ದುದು ಕಂಡುಬರುತ್ತದೆ. ನಿಜಾಮರ ಆಡಳಿತದಲ್ಲಿದ್ದ ಕೆರೆ, ಬಾವಿ ಮತ್ತು ಕಾಲುವೆ ನೀರಾವರಿ ವ್ಯವಸ್ಥೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.[೩೪]

೧. ಕೆರೆ ನೀರಾವರಿ

ಹೈದರಾಬಾದ್ ಕರ್ನಾಟಕವನ್ನು ಆಳ್ವಿಕೆ ಮಾಡಿದ ಅರಸು ಮನೆತನಗಳು ಅನೇಕ ಕೆರೆಗಳನ್ನು ಕಟ್ಟಿಸಿರುವುದು ತಿಳಿದುಬರುತ್ತದೆ.[೩೫] ಅವರಲ್ಲಿ ನಿಜಾಮರು ಕೃಷಿ ಉತ್ಪಾದನೆ ಹೆಚ್ಚಿಸಲು ನೀರಾವರಿ ವ್ಯವಸ್ಥೆ ಜಾರಿಗೆ ತರಲು ಅನೇಕ ಪ್ರಯೋಗಗಳನ್ನು ಮಾಡಿದರು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಿಜಾಮ ಸರಕಾರ ಮತ್ತು ಖಾಸಗಿ ವ್ಯಕ್ತಿಗಳಿಂದ ನಿರ್ಮಿತವಾದ ಕೆರೆಗಳ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

ಹೈದರಾಬಾದ್ ಕರ್ನಾಟಕದಲ್ಲಿ ನಿಜಾಮ್ ಆಳ್ವಿಕೆಯಲ್ಲಿ ನಿರ್ಮಿತವಾದ ಕೆರೆಗಳು–೧೯೪೧

ದೊಡ್ಡ ಕೆರೆಗಳು					
ಕ್ರಸಂ.	ಜಿಲ್ಲಾ ಹೆಸರು	೨೫೦ ಎಕರೆಗಿಂತ ಹೆಚ್ಚಿನ ನೀರಾವರಿ	೧೦೦ರಿಂದ ೨೫೦ ನೀರಾವರಿ ಕೆರೆ	೫೦ರಿಂದ ೧೦೦ ಎಕರೆ ನೀರಾವರಿ ಕೆರೆ	ಸಣ್ಣಕೆರೆಗಳು
೧	ಗುಲಬರ್ಗಾ	೨೩	೧೦೨	೨೦೮	೩೩೩ ೩೫
೨	ಬೀದರ	೪	೧೧	೮	೨೪ ೩೬
೩	ರಾಯಚೂರು	೧೧	೩೭	೪೦	೩೮ ೩೭
	ಒಟ್ಟು ಕೆರೆಗಳು	೩೮	೧೫೦	೨೫೬	೩೯೫

ಮೇಲಿನ ಕೋಷ್ಟಕದಲ್ಲಿ ವಿವರಿಸಿದಂತೆ ಕೆರೆಗಳು ಎರಡು ವಿಧಗಳಲ್ಲಿ ಕಂಡುಬರುತ್ತವೆ. ಅವು ದೊಡ್ಡ ಕೆರೆಗಳು ಮತ್ತು ಸಣ್ಣ ಕೆರೆಗಳು. ದೊಡ್ಡ ಕೆರೆಗಳು ೨೫೦ ಎಕರೆಗಿಂತ ಹೆಚ್ಚಿನ ಭೂಪ್ರದೇಶಕ್ಕೆ ನೀರನ್ನು ಒದಗಿಸುತ್ತಿದ್ದವು. ಸಣ್ಣ ಕೆರೆಗಳು ೨೫೦ ಎಕರೆಗಿಂತ ಕಡಿಮೆ ಭೂಪ್ರದೇಶಕ್ಕೆ ನೀರನ್ನು ಒದಗಿಸುತ್ತಿದ್ದವು. ಹೈದರಾಬಾದ್ ಕರ್ನಾಟಕ ಪ್ರದೇಶದ ಗುಲಬರ್ಗಾ ಜಿಲ್ಲೆಯಲ್ಲಿ ೨೩೩ ಸಂಖ್ಯೆಯಲ್ಲಿ ದೊಡ್ಡ ಕೆರೆಗಳು ಮತ್ತು ೩೩೩ ಸಂಖ್ಯೆಯಲ್ಲಿ ಸಣ್ಣ ಕೆರೆಗಳು ಕಂಡುಬರುತ್ತವೆ.[೩೬] ಬೀದರ್ ಜಿಲ್ಲೆಯಲ್ಲಿ ಕೆರೆಗಳ ಸಂಖ್ಯೆ ಅತ್ಯಂತ ಕಡಿಮೆ ಇರುವುದು ಕೋಷ್ಟಕದಿಂದ ತಿಳಿದುಬರುತ್ತದೆ.[೩೭] ಅದೇ ರೀತಿ ರಾಯಚೂರು ಜಿಲ್ಲೆಯಲ್ಲಿ ಕೂಡ ಕೆರೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡದಿರುವುದು ಈ ಸಂಖ್ಯೆಗಳ ಮೂಲಕ ತಿಳಿದುಬರುತ್ತದೆ.[೩೮] ಈ ಕೆರೆಗಳ ಮೂಲಕ ನೀರಾವರಿ ವ್ಯವಸ್ಥೆ ಮಾಡಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಯತ್ನಿಸಲಾಗಿತ್ತು. ಹೈದರಾಬಾದ್ ಕರ್ನಾಟಕ ಪ್ರದೇಶಲ್ಲಿ ಬೀಳುವ ಮಳೆ ಪ್ರಮಾಣ ಕಡಿಮೆಯಿದ್ದು, ಕೆರೆಗಳಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಸಾಮರ್ಥ್ಯವೂ ಕಡಿಮೆಯಿತ್ತು. ಈ ಪ್ರದೇಶದಲ್ಲಿ ಕೆರೆಗಳ ನಿರ್ಮಾಣ ಹೆಚ್ಚಿನ ಸಂಖ್ಯೆಯಲ್ಲಿ ಮಾಡಿದರೂ ಮಳೆಯ ಪ್ರಮಾಣ ಕಡಿಮೆಯಾಗಿದ್ದುದರಿಂದ ಕೃಷಿ ಉತ್ಪಾದನೆಯಲ್ಲಿ ಇಳುವರಿ ಕಡಿಮೆ ಇದ್ದುದು ಕಂಡುಬರುತ್ತದೆ. ಇದಕ್ಕೆ ಹೈದರಾಬಾದ್ ಕರ್ನಾಟಕ ಪ್ರದೇಶದ ಭೌಗೋಳಿಕ ಲಕ್ಷಣಗಳೂ ಪ್ರಮುಖ ಕಾರಣ. ನಿಜಾಮರು ಕೆರೆ ನೀರಾವರಿ ಪದ್ಧತಿಯನ್ನು ಜಾರಿಗೆ ತಂದರೂ ಈ ಪದ್ಧತಿ ಶಾಶ್ವತ ಪದ್ಧತಿಯಾಗಿ ಉಳಿದಿರುವುದಿಲ್ಲ.[೩೯]

೨. ಬಾವಿ ನೀರಾವರಿ

ಮಧ್ಯಕಾಲೀನ ಅವಧಿಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬಾವಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿತ್ತೆಂದು ತಿಳಿದುಬರುತ್ತದೆ. ಬಹಮನಿ ಮತ್ತು ಬಿಜಾಪುರದ ಆದಿಲಶಾಹಿಗಳ ಅವಧಿಯಲ್ಲಿ ಬಾವಿ ನೀರಾವರಿ ಅಸ್ತಿತ್ವದಲ್ಲಿತ್ತು.[೪೦] ನಂತರ ಈ ಪ್ರದೇಶವನ್ನು ಆಳ್ವಿಕೆ ಮಾಡಿದ ನಿಜಾಮರ ಕಾಲಾವಧಿಯಲ್ಲಿ ಬಾವಿಗಳ ಸಂಖ್ಯೆ ಮತ್ತಷ್ಟು ಅಧಿಕವಾಗಿದ್ದು, ಈ ಮೂಲಕವೇ ನೀರಾವರಿ ವ್ಯವಸ್ಥೆ ಚಾಲ್ತಿಯಲ್ಲಿದ್ದುದು ಗಮನಿಸಬಹುದು. ಈ ಪ್ರದೇಶದ ರೈತರು ಬರಗಾಲದ ಹೊಡೆತ ತಾಳಲಾರದೆ ವೈಯಕ್ತಿಕವಾಗಿ ಸ್ವಂತ ಬಾವಿಗಳನ್ನು ತೋಡಿಸುತ್ತಿದ್ದರು. ನಿಜಾಮ್ ಸರಕಾರವೂ ಬಾವಿಗಳನ್ನು ತೋಡಿಸಿದ್ದು, ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಸರಕಾರಿ ಬಾವಿಗಳಿಗಿಂತ ಖಾಸಗಿ ಬಾವಿಗಳ ಸಂಖ್ಯೆ ಅಧಿಕವಾಗಿರುವುದು ಕಂಡುಬರುತ್ತದೆ. ಈ ಮೂಲಕ ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರಯತ್ನಗಳು ನಡೆದಿದ್ದರೂ ಮಳೆಯ ಅಭಾವದಿಂದ ಅಂತರ್ಜಲ ಪ್ರಮಾಣ ತೀರಾ ಕಡಿಮೆ ಮಟ್ಟದಲ್ಲಿರುವ ಕಾರಣ ಈ ನೀರಾವರಿ ಪದ್ಧತಿ ಯಶಸ್ವಿಯಾಗಲು ಸಾಧ್ಯವಾಗಿಲ್ಲ.[೪೧]

೩. ಕಾಲುವೆ ನೀರಾವರಿ

ಹೈದರಾಬಾದ್ ಕರ್ನಾಟಕದಲ್ಲಿ ಹರಿಯುತ್ತಿರುವ ಕೃಷ್ಣಾ, ಭೀಮಾ, ತುಂಗಭದ್ರಾ ಮತ್ತಿತರ ನದಿಗಳ ಮೂಲಕ ನೀರಾವರಿ ವ್ಯವಸ್ಥೆ ರೂಪುಗೊಂಡಿತ್ತು.[೪೨] ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ನದಿ ನೀರನ್ನು ಕಾಲುವೆಗಳ ಮೂಲಕ ಹರಿಸಿ ಭತ್ತದ ಬೆಳೆ ಬೆಳೆಯುತ್ತಿದ್ದುದು ಕೃಷಿ ಆಡಳಿತ ವರದಿಗಳಿಂದ ತಿಳಿದುಬರುತ್ತದೆ. ನಿಜಾಮ ಸರಕಾರವೂ ಕಾಲುವೆಗಳ ಸ್ವಚ್ಚತೆಗಾಗಿ ತನ್ನ ವಾರ್ಷಿಕ ಆಯವ್ಯಯದಲ್ಲಿ ೨೦ ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದ್ದ ಅಂಶ ಕಾಲುವೆ ನೀರಾವರಿ ಯೋಜನೆಗಳಿಗೆ ನೀಡಿದ್ದ ಆದ್ಯತೆಯನ್ನು ತೋರಿಸುತ್ತದೆ.[೪೩] ಸುರಪುರದ ಬಳಿ ಹರಿದು ಹೋಗುವ ಕೃಷ್ಣಾ ನದಿಗೆ ಬ್ರಿಟಿಶ್ ಅಧಿಕಾರಿ ಮೆಡೋಸ್ ಟೇಲರ್ ಬ್ಯಾರೇಜ್ ಕಟ್ಟುವ ಮೂಲಕ ನೀರಾವರಿ ಉಪಯೋಗ ಮಾಡಿಕೊಳ್ಳಬಹುದೆಂದು ನಿಜಾಮ್ ಸರಕಾರಕ್ಕೆ ಬರೆದ ಪತ್ರದನುಸಾರ ಕೃಷ್ಣಾ ನದಿಗೆ ಬ್ಯಾರೇಜ್ ಕಟ್ಟಲು ಮದ್ರಾಸ್ ಪ್ರೆಸಿಡೆನ್ಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿತು. ಅದೇ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿ ತೀವ್ರ ಸ್ವರೂಪ ಪಡೆದುದರಿಂದ ಈ ಯೋಜನೆಯನ್ನು ಕೈಬಿಡಲಾಯಿತು.[೪೪]

ರಾಯಚೂರು ಜಿಲ್ಲೆಯಲ್ಲಿನ ಕೊಪ್ಪಳ ತಾಲೂಕಿನ ಜನರು ಬರಗಾಲದಿಂದ ತತ್ತರಿಸಿ ಹೋಗಿದ್ದರು. ಅದರಿಂದಾಗಿ ಜನರು ಈ ಪ್ರದೇಶದಲ್ಲಿ ಹರಿದುಹೋಗುವ ತುಂಗಾಭದ್ರಾ ನದಿಗೆ ಅಣೆಕಟ್ಟು ಕಟ್ಟುವ ಮೂಲಕ ಕಾಲುವೆ ನೀರಾವರಿಗೆ ಅವಕಾಶ ಮಾಡಿಕೊಡಬೇಕೆಂದು ನಿಜಾಮ್ ಪ್ರಭುತ್ವಕ್ಕೆ ಮನವಿ ಮಾಡಿಕೊಂಡರು. ಆದರೆ ಪ್ರಭುತ್ವವು ಗಮನಹರಿಸದೆ ಹೋಯಿತು. ಇದರಿಂದಾಗಿ ಕೊಪ್ಪಳ ಪ್ರದೇಶದಲ್ಲಿನ ರೈತಾಪಿ ಜನರು ೧೯೪೭ರಲ್ಲಿ ಶಿರೂರು ವೀರಭದ್ರಪ್ಪ ಅವರ ನಾಯಕತ್ವದಲ್ಲಿ ಕೊಪ್ಪಳ ಬಜಾರದಲ್ಲಿ ಸಾವಿರಾರು ಜನಸಂಖ್ಯೆಯಲ್ಲಿ ಸಭೆ ಸೇರಿದರು. ಈ ಸಭೆಯಲ್ಲಿ ತುಂಗಭದ್ರಾ ನದಿಗೆ ಅಣೆಕಟ್ಟು ಕಟ್ಟುವ ವಿಧೇಯಕವನ್ನು ಚರ್ಚಿಸಿ ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು. ಇದನ್ನು ಕೊಪ್ಪಳ ತಾಲೂಕಿನ ಮೊದಲನೆಯ ರೈತ ಹೋರಾಟವೆಂದು ಕರೆಯಬಹುದಾಗಿದೆ.[೪೫]

ನಿಜಾಮ್ ಸರ್ಕಾರವು ಅಣೆಕಟ್ಟೆಗಾಗಿ ನಡೆದ ಹೋರಾಟ ಮತ್ತು ಮನವಿ ಪತ್ರಗಳಿಗೆ ಸ್ಪಂದಿಸಿ ಮದ್ರಾಸ್ ಪ್ರೆಸಿಡೆನ್ಸಿ ಜೊತೆಗೆ ಸೇರಿ ಕಟ್ಟುವುದಕ್ಕಾಗಿ ಪೂರ್ವ ತಯಾರಿ ಮಾಡಿಕೊಂಡಿತು. ಅದರಂತೆ ಮದ್ರಾಸ್ ಸರ್ಕಾರವು ಕರ್ನಾಟಕದಲ್ಲಿ ಅಣೆಕಟ್ಟೆ ಕಟ್ಟುವುದಕ್ಕೆ ಒಪ್ಪಿಕೊಂಡಿತು. ಈ ರೀತಿಯಾಗಿ ಒಪ್ಪಿಗೆ ಪಡೆದುಕೊಂಡ ನಿಜಾಮ್ ಸರ್ಕಾರವು ೧೯೪೫ರಂದು ಜಂಟಿಯಾಗಿ ಅಣೆಕಟ್ಟೆಗೆ ಅಡಿಗಲ್ಲು ಹಾಕಿದವು. ಅಷ್ಟೇ ಅಲ್ಲದೆ ಅಣೆಕಟ್ಟು ಕಟ್ಟುವ ಸಲುವಾಗಿ ೧೮.೯೮ ಕೋಟಿ ರೂಪಾಯಿ ವೆಚ್ಚವಾಗಿರುವುದು ಗಮನಿಸಬಹುದಾಗಿದೆ. ಆದರೆ ಇದೇ ಸಮಯಕ್ಕೆ ಭಾರತದ ಸ್ವಾತಂತ್ರ್ಯ ಚಳವಳಿಯು

ತೀವ್ರಗತಿ ಸ್ವರೂಪ ಪಡೆದುಕೊಂಡಿತು. ಇದರ ಫಲವಾಗಿ ನಿಜಾಮ್ ಸರ್ಕಾರವು ತುಂಗಾಭದ್ರಾ ಅಣೆಕಟ್ಟು ಯೋಜನೆಗೆ ಹೆಚ್ಚಿನ ಆದ್ಯತೆ ನೀಡದೇ ಸಂಸ್ಥಾನದಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟವನ್ನು ನಿಯಂತ್ರಿಸುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಹೆಚ್ಚಿನ ಸಮಯವನ್ನು ನೀಡಬೇಕಾಗಿತ್ತು. ಅದರ ಪ್ರತಿಫಲವಾಗಿ ಅಣೆಕಟ್ಟು ಕಾಮಗಾರಿಯು ನಿಧಾನಗತಿ ಪಡೆಯಿತು.

ಹೀಗೆ ಸಂಸ್ಥಾನದಲ್ಲಿ ಒಂದು ಕಡೆ ಸ್ವಾತಂತ್ರ್ಯಕ್ಕಾಗಿ ಚಳವಳಿ ಮತ್ತೊಂದು ಕಡೆ ನಿಜಾಮ್ ಆಳ್ವಿಕೆಯ ವಿರುದ್ಧ ಹೋರಾಟಗಳು ದಿನದಿಂದ ದಿನಕ್ಕೆ ತೀವ್ರ ಸ್ವರೂಪವನ್ನು ಪಡೆದುಕೊಂಡಿತ್ತು. ಕೊನೆಗೆ ಭಾರತಕ್ಕೆ ಬ್ರಿಟಿಶರಿಂದ ಸ್ವಾತಂತ್ರ್ಯ ಲಭಿಸಿತು. ಜೊತೆಗೆ ನಿಜಾಮ್ ಪ್ರಭುತ್ವವು ಕೂಡ ಭಾರತ ದೇಶದಲ್ಲಿ ವಿಲೀನವಾಯಿತು. ಈ ರೀತಿಯಾದ ಹೋರಾಟದ ಸ್ವರೂಪದಿಂದಾಗಿ ತುಂಗಭದ್ರಾ ಅಣೆಕಟ್ಟು ಕಾಮಗಾರಿಕೆ ನಿಧಾನವಾಗಿತ್ತು. ನಂತರ ಬಂದ ಪ್ರಜಾಪ್ರಭುತ್ವ ಸರ್ಕಾರವು ಈ ಕಾಮಗಾರಿಕೆಯು ಮುಂದುವರೆಸಿ ಪೂರ್ಣಗೊಳಿಸಿತು. ಹೀಗೆ ನಿಜಾಮ್ ಸರ್ಕಾರವು ತುಂಗಭದ್ರ ನದಿಗೆ ಅಣೆಕಟ್ಟು ಕಟ್ಟುವ ದೂರದೃಷ್ಟಿ ಹೊಂದಿದ್ದರಿಂದ ಈ ನೀರಾವರಿ ಯೋಜನೆಯ ಫಲವಾಗಿ ಈ ಭಾಗದಲ್ಲಿ ಕಾಲುವೆ ನೀರಾವರಿ ಸಫಲವಾಗಿರುವುದನ್ನು ಗಮನಿಸಬಹುದಾಗಿದೆ.[೪೭]

೭.೨.೩ ಭೂ ಮಾಪನ

ಬಹಮನಿ ಸುಲ್ತಾನರ ಮತ್ತು ಮೊಗಲರ ಭೂಮಾಪನ ಪದ್ಧತಿಯನ್ನು ಹೈದರಾಬಾದ್ ನಿಜಾಮರು ಅಳವಡಿಸಿಕೊಂಡಿದ್ದರು. ಮೊಗಲರು ಭೂಮಿಯ ಅಳತೆಗಾಗಿ ಕೂರಿಗೆ ಮಾಪನವನ್ನು ಗುರುತಿಸಿದ್ದರು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಒಂದು ದಿನದಲ್ಲಿ ಮೂರು ಜನ ರೈತರು ಆರು ಎತ್ತುಗಳ ಸಹಾಯದಿಂದ ಮೂರು ಸೇರು ಜೋಳದ ಬೀಜವನ್ನು ಬಿತ್ತುವ ಭೂವಿಸ್ತೀರ್ಣವನ್ನು ಕೂರಿಗೆ ಎಂದು ಕರೆಯುವುದು ಪ್ರತೀತಿ. ಭೂಕಂದಾಯವನ್ನು ಇಳುವರಿ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು.[೪೮]

ಒಂದನೆಯ ಸಾಲಾರ್‌ಜಂಗ್ ಭೂಮಾಪನ ಪದ್ಧತಿಯನ್ನು ಸುಧಾರಣೆಗೊಳಪಡಿಸಿದನು. ಮೊಗಲರ ಕಾಲದಿಂದಲೂ ಜಾರಿಯಲ್ಲಿದ್ದ ಕೂರಿಗೆ ಅಳತೆ ಪದ್ಧತಿ ಮುಂದುವರೆದ ಭಾಗವಾಗಿ ಕೂರಿಗೆಯಲ್ಲಿ ಎಕರೆ ಭೂಮಾಪನ ಪದ್ಧತಿಯನ್ನು ಜಾರಿಗೆ ತಂದನು. ಒಂದು ಕೂರಿಗೆ ಭೂಮಿಯನ್ನು ನಾಲ್ಕು ಎಕರೆಯನ್ನಾಗಿ ವಿಭಾಗಿಸಿ ಪ್ರತಿ ಎಕರೆ ಮಾನದಂಡದ ಮೇಲೆ ಭೂಮಾಪನ ಮಾಡುವ ಪದ್ಧತಿ ಇದಾಗಿತ್ತು. ಇದೇ ಮಾದರಿಯಲ್ಲಿ ಸಾಗುವಳಿ ಮಾಡದ ಭೂಮಿಯನ್ನು ಕೂಡ ಮಾಪನ ಮಾಡಲಾಗುತ್ತಿತ್ತು. ಭೂಮಾಪನ ಮಾಡಿದ ಪ್ರದೇಶಗಳಿಗೆ ಸರ್ವೇ ನಂಬರ್ ನೀಡಲಾಯಿತು. ಪ್ರತಿ ಸರ್ವೇ ನಂಬರ್ ಭೂಮಿಯನ್ನು ಆಯಾ ಹಿಡುವಳಿದಾರನ ಒಡೆತನಕ್ಕೆ ಒಪ್ಪಿಸಿ ಅದರ ಸರಹದ್ದನ್ನು ನಿಗದಿಗೊಳಿಸಲಾಯಿತು.[೪೯]

೧೮೭೫ರಲ್ಲಿ ಭೂಮಾಪನ ಪದ್ಧತಿಯನ್ನು ಬ್ರಿಟಿಶ್ ಪದ್ಧತಿಯಂತೆ ಬದಲಾವಣೆಗೊಳಪಡಿಸಿ ಜಾರಿಗೊಳಿಸಲಾಯಿತಾದರೂ ಹೈದರಾಬಾದ್ ಕರ್ನಾಟಕದ ಗುಲಬರ್ಗಾ, ಬೀದರ ಮತ್ತು ರಾಯಚೂರು ಪ್ರದೇಶಗಳಲ್ಲಿ ಮುಂಬಯಿ ಪ್ರೆಸಿಡೆನ್ಸಿ ಭೂಮಾಪನ ಪದ್ಧತಿಯನ್ನೇ ಮುಂದುವರೆಸಲಾಯಿತು. ಮುಂಬಯಿ ಕದಸ್ತ್ರಲ್ ಭೂಮಾಪನ ಪದ್ಧತಿ ಮುಖಾಂತರ ಭೂಮಾಪನ ಮಾಡಿ ಸಾಗುವಳಿದಾರನ ನೇರ ಸಂಪರ್ಕಕ್ಕೆ ಒದಗಿಸಲಾಯಿತು ಮತ್ತು ಮಧ್ಯವರ್ತಿ ಮಾಲೀಕರ ಪದ್ಧತಿಯನ್ನು ರದ್ದುಗೊಳಿಸಲಾಯಿತು.[೫೦] ೧೯೦೯ರಲ್ಲಿ ತಿದ್ದುಪಡಿಗೊಳಪಡಿಸಿದ ಮುಂಬಯಿ ಭೂಮಾಪನ ಕಾಯಿದೆಯನ್ವಯ ಭೂಮಾಪನ ತೆರಿಗೆ ವಿಧಿಸಲಾಯಿತು. ಒಂದು ಎಕರೆ ಭೂಮಾಪನ ಮಾಡಲು ೧ ಆಣೆ ೯೧/೩ ಪೈಸೆ ತೆರಿಗೆ ನಿಗದಿಪಡಿಸಲಾಯಿತು. ಈ ಪದ್ಧತಿ ಎಂಟು ವರ್ಷಗಳ ಕಾಲ ಜಾರಿಯಲ್ಲಿತ್ತು. ನಂತರ ತೆರಿಗೆ ಪರಿಷ್ಕರಿಸಿ ಎಕರೆಗೆ ೨ ಅಣೆ ೮೧/೨ ಪೈಸೆ ನಿಗದಿಪಡಿಸಲಾಯಿತು. ಹೊಸ ಭೂಮಾಪನ ಸಾಗುವಳಿದಾರರಿಗೆ ತುಂಬ ಉಪಯುಕ್ತವಾಗಿದ್ದು ಕಾಲಕ್ರಮೇಣ ಭೂಮಾಪನ ತೆರಿಗೆ ಹೆಚ್ಚಿಸಿ ರೈತಾಪಿ ವರ್ಗದ ಮೇಲೆ ಹೇರಲಾಯಿತು.[೫೧]

ನಿಜಾಮ್ ಸರಕಾರ ಪ್ರತಿಯೊಂದು ತಾಲೂಕಿಗೂ ಭೂಮಾಪನ ಅಧಿಕಾರಿಗಳನ್ನು ನೇಮಕ ಮಾಡಿತು. ಈ ಅಧಿಕಾರಿಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಭೂಮಾಪನ ಮಾಡಿ ಆಯಾ ಪ್ರದೇಶದ ಸೀಮಾರೇಖೆಯನ್ನು ಸಿದ್ಧಪಡಿಸುತ್ತಿದ್ದರು. ಸರಕಾರ ವಿಧಿಸಿದ ಸೀಮಾರೇಖೆಯನ್ನು ಭೂ ಹಿಡುವಳಿದಾರರು ಮೀರದ ಹಾಗೆ ನಿಯಮಗಳನ್ನು ರೂಪಿಸಿ ಸೀಮಾರೇಖೆಗೆ ಸಂಬಂಧಪಟ್ಟ ವ್ಯಾಜ್ಯಗಳು ಉಂಟಾದಲ್ಲಿ ವ್ಯಾಜ್ಯಗಳನ್ನು ಇತ್ಯರ್ಥ ಪಡಿಸಲು ಅಧಿಕಾರ ನೀಡಲಾಯಿತು.

ಸಂಸ್ಥಾನದ ಭೂಮಾಪನ ಇಲಾಖೆ ಸಿಬ್ಬಂದಿಗಳಿಗೆ ಮೊದಲಿಗೆ ಪೂರ್ವಜ್ಞಾನವಿರಲಿಲ್ಲ. ನಂತರ ನಿಜಾಮ ಸರಕಾರ ಸಿಬ್ಬಂದಿಗಳ ನೇಮಕಪೂರ್ವದಲ್ಲಿ ತರಬೇತಿ ನೀಡಲು ಭೂಮಾಪನ ತರಬೇತಿ ಶಾಲೆ ಆರಂಭಿಸಿತು. ಆರಂಭದಲ್ಲಿ ೩೦೦ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಯಿತು. ತರಬೇತಿ ಪಡೆದವರಲ್ಲಿ ಕೇವಲ ೪ ಅಭ್ಯರ್ಥಿಗಳು ಉತ್ತೀರ್ಣರಾಗಿ ಇಬ್ಬರು ಮಾತ್ರ ಭೂಮಾಪನ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದರು. ನಿಜಾಮರು ಭೂಮಾಪನ ಕಾರ್ಯ ನಿಖರವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯಬೇಕೆಂದು ಬಯಸಿದ್ದರಿಂದ ತರಬೇತಿ ಶಾಲೆ ಆರಂಭಿಸುವ ಮಹತ್ವದ ಕಾರ್ಯ ಕೈಗೊಂಡರೆಂಬುದನ್ನು ಗಮನಿಸಬಹುದು.[೫೨]

೭.೨.೪. ತೆರಿಗೆ

ಹೈದರಾಬಾದ್ ಸಂಸ್ಥಾನದ ಆದಾಯ ಮೂಲಗಳಲ್ಲಿ ತೆರಿಗೆ ಮೊದಲ ಸ್ಥಾನ ಪಡೆದಿದೆ. ತೆರಿಗೆಯನ್ನು ಅನೇಕ ಮೂಲಗಳಿಂದ ಸಂಗ್ರಹಿಸಲಾಗುತ್ತಿತ್ತು. ಅವು ಭೂತೆರಿಗೆ, ವಸ್ತುಗಳ ತೆರಿಗೆ,

ವಾಣಿಜ್ಯ ತೆರಿಗೆ, ಉದ್ದಿಮೆ ತೆರಿಗೆ ಮುಂತಾದವು. ಸಂಸ್ಥಾನದ ಅರ್ಥ ವ್ಯವಸ್ಥೆಯಲ್ಲಿ ಭೂಮಿ ಪ್ರಮುಖ ಪಾತ್ರವಹಿಸುತ್ತಿತ್ತು. ರಾಜ್ಯಾದಾಯದಲ್ಲಿ ಭೂಕಂದಾಯದ ಮೊತ್ತ ದೊಡ್ಡ ಪ್ರಮಾಣದಲ್ಲಿರುತ್ತಿತ್ತು. ಕೃಷಿ ಪ್ರಧಾನವಾದ ಪ್ರದೇಶಗಳೆಲ್ಲಕ್ಕೂ ಇದು ಅನಿವಾರ್ಯವೂ ಆಗಿತ್ತು. ತೆರಿಗೆಯನ್ನು ವಿಧಿಸುವ ಮೊದಲು ಭೂಮಿಯನ್ನು ವಿಂಗಡಿಸುವ ಮತ್ತು ನಿರ್ದಿಷ್ಟ ಬೆಳೆಗಳನ್ನು ಬೆಳೆಯಲು ಭೂಮಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಗಳು ನಡೆಯುತ್ತಿದ್ದವು. ಭೂಮಿಯ ಫಲವತ್ತತೆ ಮತ್ತು ಬೆಳೆಗಳ ಆಧಾರದ ಮೇಲೆ ಭೂತೆರಿಗೆಯನ್ನು ವಿಧಿಸಲಾಗುತ್ತಿತ್ತು.

ಹೈದರಾಬಾದ್ ಕರ್ನಾಟಕದಲ್ಲಿ ಮೊಗಲರ ತೋದರಮಲ್ಲನ ತೆರಿಗೆ ಪದ್ಧತಿಯನ್ವಯ ಕಂದಾಯ ನಿಗದಿಗೊಳಿಸಲಾಗಿತ್ತು. ಬಿತ್ತನೆ ಬೀಜ ಪ್ರಮಾಣದ ಆಧಾರದ ಮೇಲೆ ತೆರಿಗೆಯನ್ನು ನಿರ್ಧರಿಸಲಾಗುತ್ತಿತ್ತು. ಒಣಬೇಸಾಯ ಉತ್ಪನ್ನದ ೧/೪ ಭಾಗ ಸರಕಾರದ ಪಾಲಾಗಿತ್ತು. ನೀರಾವರಿ ಭೂಮಿಯ ಮೇಲೆ ಉತ್ಪನ್ನದ ೧/೨ ರಿಂದ ೨/೫ ರವರೆಗೆ ತೆರಿಗೆ ವಿಧಿಸಲಾಗುತ್ತಿತ್ತು. ಒಣಬೇಸಾಯ ಭೂಮಿಯ ಕಂದಾಯವನ್ನು ಹಣದ ರೂಪದಲ್ಲಿ ಪಡೆದರೆ ನೀರಾವರಿ ಪ್ರದೇಶದ ತೆರಿಗೆಯನ್ನು ಧಾನ್ಯದ ರೂಪದಲ್ಲಿ ಪಡೆಯಲಾಗುತ್ತಿತ್ತು. ಭೂಕಂದಾಯವನ್ನು ಫಲವತ್ತತೆಯ ಆಧಾರದ ಮೇಲೆ ನಿಗದಿಗೊಳಿಸುತ್ತಿದ್ದ ಸರಕಾರ ಕೃಷಿ ಭೂಮಿಯನ್ನು ನಾಲ್ಕು ವಿಧಗಳಾಗಿ ವರ್ಗೀಕರಿಸಿತ್ತು. ಅವು ರೇಗರ್(ಕಪ್ಪು ಮಣ್ಣು), ಮಿಲ್ವಾ(ಕಪ್ಪು ಮತ್ತು ಕೆಂಪು ಮಣ್ಣು), ಮಸಬ್(ಕೆಂಪು ಮಣ್ಣು) ಮತ್ತು ಶೋರೆ(ಕ್ಷಾರ ಅಥವಾ ಚೌಳುಮಣ್ಣು).[೫೩]

ಕೃಷಿ ಭೂಮಿಯನ್ನು ಕೂರಿಗಿ ಘಟಕದ ಆಧಾರದ ಮೇಲೆ ಭೂಮಾಪನ ಮಾಡಲಾಗುತ್ತಿತ್ತು. ಭೂಕಂದಾಯವನ್ನೂ ಕೂರಿಗಿ ಘಟಕ ಆಧರಿಸಿಯೇ ತೆರಿಗೆ ನಿಗದಿಗೊಳಿಸುತ್ತಿತ್ತು. ಮೊದಲ ದರ್ಜೆಯ ಕೂರಿಗಿ ಭೂಮಿಗೆ ೫ ರಿಂದ ೧೦ ರೂಪಾಯಿ, ಎರಡನೆಯ ದರ್ಜೆಯ ಭೂಮಿಗೆ ೩ ರಿಂದ ೮ ರೂಪಾಯಿ, ಮೂರನೆಯ ದರ್ಜೆಯ ಭೂಮಿಗೆ ೧ ರಿಂದ ೫ ರೂಪಾಯಿ, ನಾಲ್ಕನೆಯ ದರ್ಜೆಯ ಭೂಮಿಗೆ ೮ ಅಣೆಯಿಂದ ೨ ರೂಪಾಯಿ ನಿಗದಿಯಾಗಿತ್ತು. ನೀರಾವರಿ ಭೂಮಿಯ ಕಂದಾಯ ನೀರು ಬಳಕೆ ಪ್ರಮಾಣ ಆಧರಿಸಿತ್ತು. ಮಳೆಯಾಧಾರಿತ ಕೃಷಿ ಭೂಮಿಯ ಕಂದಾಯವನ್ನು ನಗದು ರೂಪದಲ್ಲಿ ಪಡೆಯಲಾಗುತ್ತಿತ್ತು. ಆದರೆ ನೀರಾವರಿ ಭೂಮಿಯ ತೆರಿಗೆಯನ್ನು ವಸ್ತು ರೂಪದಲ್ಲಿ ಪಾವತಿಸುವ ಪದ್ಧತಿ ಜಾರಿಯಲ್ಲಿತ್ತು. ವಸ್ತು ರೂಪದ ಭೂಕಂದಾಯವನ್ನು ಬಡಾಯಿ ಪದ್ಧತಿ ಎಂದು ಕರೆಯುತ್ತಿದ್ದರು. ನೀರಾವರಿ ಬೆಳೆ ಕೊಯಿಲು ಮಾಡಿದ ಸಂದರ್ಭದಲ್ಲಿ ತೆರಿಗೆ ಅಧಿಕಾರಿಗಳು ತೆರಿಗೆಯ ಪಾಲನ್ನು ನಿಗದಿಪಡಿಸುತ್ತಿದ್ದರು ಮತ್ತು ಆ ಧಾನ್ಯವನ್ನು ಸ್ಥಳದಲ್ಲಿಯೇ ಮಾರಾಟ ಮಾಡುತ್ತಿದ್ದರು. ತೆರಿಗೆ ಅಧಿಕಾರಿಗಳು ರೈತರನ್ನು ಶೋಷಣೆ ಮಾಡುತ್ತಿದ್ದು ಬಡಾಯಿ ಪದ್ಧತಿಯಲ್ಲಿ ಸರಕಾರ ನಿಗದಿಪಡಿಸಿದ ತೆರಿಗೆಯ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೊಯಿಲಾದ ಬೆಳೆಯನ್ನು ಒತ್ತಾಯಪೂರ್ವಕವಾಗಿ ಪಡೆಯುತ್ತಿದ್ದರು.[೫೪]

ಒಂದನೆಯ ಸಾಲಾರ್‌ಜಂಗ್‌ನು ಬಡಾಯಿ ಪದ್ಧತಿಯನ್ನು ರದ್ದುಪಡಿಸಿ ಭೂಕಂದಾಯ ಪದ್ಧತಿಯಲ್ಲಿ ವ್ಯವಸ್ಥಿತ ಮತ್ತು ಕ್ರಮಬದ್ಧವಾದ ಬ್ರಿಟಿಶ್ ಮಾದರಿಯನ್ನು ಜಾರಿಗೆ ತಂದನು.[೫೫] ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ಕೃಷಿ ಸಾಗುವಳಿ ಭೂಮಿಯನ್ನು ಸ್ಥೂಲವಾಗಿ ಅಳತೆ ಮಾಡಿ ಕೂರಿಗಿ ಘಟಕಗಳನ್ನು ಎಕರೆಗಳಾಗಿ ಪರಿವರ್ತಿಸಿದನು. ಈ ಪ್ರದೇಶದ ಬಂಜರು ಭೂಮಿಯನ್ನು ಅಳತೆ ಮಾಡಲು ಪರಿಗಣಿಸದೆ ಕೃಷಿ ಭೂಮಿಯನ್ನು ಮಾತ್ರ ವ್ಯವಸ್ಥಿತವಾಗಿ ಭೂಮಾಪನ ಮಾಡಿ ದಾಖಲಿಸಿದನು. ಪ್ರತಿಯೊಂದು ಭೂಮಿಯ ಸರ್ವೇ ನಂಬರ್, ಭೂವಿಸ್ತೀರ್ಣ ಮತ್ತು ಭೂಕಂದಾಯ ಪಾವತಿ ನಮೂದಾಗುತ್ತಿತ್ತು. ಸಾಲಾರ್‌ಜಂಗ್‌ನು ಸಾಗುವಳಿ ಭೂಮಿ ಹೆಚ್ಚುತ್ತಿದ್ದುದರಿಂದ ಬಂಜರು ಭೂಮಿ ಸಾಗುವಳಿ ನಿಯಮ ರೂಪಿಸಿದನು ಮತ್ತು ಬಂಜರು ಭೂಮಿಯನ್ನು ಸಾಗುವಳಿ ಮಾಡುವ ಮೊದಲ ವರ್ಷ ಕಂದಾಯದಿಂದ ವಿನಾಯಿತಿ ನೀಡಿದನು. ನಂತರದ ವರ್ಷದಲ್ಲಿ ಪ್ರತಿ ಎಕರೆ ಉತ್ಪನ್ನದ ೧/೮ ರಷ್ಟು ತೆರಿಗೆ ವಿಧಿಸಿದನು. ಸಾಲಾರ್‌ಜಂಗ್ ಭೂಕಂದಾಯ ವ್ಯವಸ್ಥೆಯಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಿ ಜಿಲ್ಲಾಬಂದಿ ವ್ಯವಸ್ಥೆಯನ್ನು ಜಾರಿಗೆ ತಂದನು. ಗರಿಷ್ಠ ಮಟ್ಟದಲ್ಲಿ ಭೂಕಂದಾಯ ಸಂಗ್ರಹ ಮತ್ತು ಸಂಸ್ಥಾನದ ಆರ್ಥಿಕ ಸ್ಥಿತಿಗತಿಯ ಅಭಿವೃದ್ಧಿ ಈ ನೂತನ ವ್ಯವಸ್ಥೆಯ ಉದ್ದೇಶವಾಗಿತ್ತು.[೫೬]

ಭೂಸರ್ವೇಕ್ಷಣೆ ಮಾಡಿ ತೆರಿಗೆ ನಿಗದಿಪಡಿಸುತ್ತಿದ್ದ ಅಧಿಕಾರಿಗಳನ್ನು ನಿಜಾಮ ಅಧಿಕಾರಿಗಳೆಂದು ಕರೆಯಲಾಗುತ್ತಿತ್ತು. ನಿಜಾಮರು ಭೂಮಾಲೀಕರಾಗಿದ್ದ ಕೆಲವು ಗಣ್ಯರನ್ನು ಸರಕಾರದ ನಿಯೋಗಿಗಳಾಗಿ ತೆರಿಗೆ ವಸೂಲು ಮುಂತಾದ ಸರಕಾರಿ ಕೆಲಸಗಳಲ್ಲಿ ನಿಯೋಜಿಸುತ್ತಿದ್ದು, ಇವರು ತಮ್ಮ ಅಧೀನ ಅಧಿಕಾರಿಗಳ ಮೂಲಕ ತೆರಿಗೆ ಸಂಗ್ರಹಿಸುತ್ತಿದ್ದರು.[೫೭] ಹೈದರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ಅಧಿಕಾರಿಗಳಾದ ಪಟೇಲ, ಮಾಲಿಪಾಟೀಲ್, ದೇಸಾಯ, ಪೊಲೀಸ್‌ಪಾಟೀಲ್ ಮುಂತಾದವರಿಗೆ ತೆರಿಗೆ ವಸೂಲಿ ಮಾಡುವ ಅಧಿಕಾರ ನೀಡಲಾಗಿತ್ತು. ಇವರೆಲ್ಲ ಜಮೀನ್ದಾರರ ಕುಟುಂಬಕ್ಕೆ ಸೇರಿದವರಾಗಿದ್ದು, ಇವರಲ್ಲಿ ತೆರಿಗೆ ಸಂಗ್ರಹಕಾರರು ಯಾರೇ ಆಗಿದ್ದರೂ ತೆರಿಗೆದಾರರ ಸಮಸ್ಯೆಗಳಿಗೆ ಸ್ಪಂದಿಸುತ್ತಿರಲಿಲ್ಲ. ಇವರು ಅಧಿಕಾರಶಾಹಿಯ ದರ್ಪಿಷ್ಟ ಪ್ರವೃತ್ತಿಯವರಾಗಿದ್ದು ತೆರಿಗೆದಾರರಲ್ಲಿ ಭಯ ಹುಟ್ಟಿಸುತ್ತಿದ್ದರು. ಈ ಅಧಿಕಾರಿಗಳು ಅಧಿಕ ತೆರಿಗೆ ವಿಧಿಸುವ ಮೂಲಕ ಹಳ್ಳಿಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು.[೫೮]

೭.೩. ನಗರ ವ್ಯವಸ್ಥೆ

ನಗರ ಜೀವನದ ಸುವ್ಯವಸ್ಥೆ ನಗರಾಡಳಿತದ ಮೂಲ ಉದ್ದೇಶವಾಗಿದೆ. ನಗರ ಜೀವನ ಬಹುತ್ವದ ನೆಲೆಯಿಂದ ರೂಪಗೊಂಡಿದ್ದು ಕ್ರಮೇಣ ನಗರ ಸಮಾಜ ಅಥವಾ ನಗರ ಸಂಸ್ಕೃತಿ

ಮೈತಳೆಯಲಾರಂಭಿಸುತ್ತದೆ. ವ್ಯಾಪಾರ–ವಾಣಿಜ್ಯ, ಸಾರಿಗೆ, ವರ್ತಕ ಸಮುದಾಯ, ವರ್ತಕ ಸಂಘ, ಮಾರುಕಟ್ಟೆ, ಅಧಿಕಾರಿ ವರ್ಗ ಈ ಮುಂತಾದವು ರೂಪತಳೆದ ನಗರ ಪ್ರದೇಶಗಳು ಗ್ರಾಮೀಣ ಪ್ರದೇಶಗಳಿಗಿಂತ ಭಿನ್ನವಾಗಿ ಕಂಡು ಬರಲಾರಂಭಿಸಿದವು.. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೌರ್ಯರ ಕಾಲದಿಂದಲೂ ನಗರ ಚರಿತ್ರೆಯನ್ನು ಗುರುತಿಸಬಹುದಾಗಿದೆ. ಮೌರ್ಯರ ಅರಸನಾದ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ನಗರಾಡಳಿತ ಕುರಿತು ಮಾಹಿತಿಯಿದೆ. ಆತನ ಅವಧಿಯಲ್ಲಿ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸನ್ನತಿ ಪ್ರಮುಖ ನಗರವಾಗಿತ್ತು. ಇದು ಆರಂಭಿಕ ಹಂತದ ನಗರ ವ್ಯವಸ್ಥೆಯ ಸ್ವರೂಪವನ್ನು ತಿಳಿಸುತ್ತದೆ.[೫೯] ನಗರ ವ್ಯವಸ್ಥೆ ಬಹಮನಿ ಸುಲ್ತಾನರ ಕಾಲದಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ವ್ಯವಸ್ಥಿತ ರೀತಿಯಲ್ಲಿ ರೂಪ ಪಡೆದಿರುವುದನ್ನು ಗಮನಿಸಬಹುದು.[೬೦]

ಮೊಗಲರ ಕಾಲದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ನಗರ ವ್ಯವಸ್ಥೆ ಗಮನಾರ್ಹ ಬೆಳವಣಿಗೆ ಹೊಂದಿತು.[೬೧] ಮೊಗಲರ ನಂತರ ಅಧಿಕಾರಕ್ಕೆ ಬಂದ ಸುಬೇದಾರ ನಿಜಾಮ್ ಕಿಲಿಚಖಾನನು ಮೊಗಲ ನಗರ ವ್ಯವಸ್ಥೆಯನ್ನೇ ಮುಂದುವರೆಸಿದನು.[೬೨] ನಿಜಾಮ ಕಿಲಿಚಖಾನನ ಮರಣದ ನಂತರ ಯುರೋಪಿಯನ್ನರ ಪ್ರಭಾವದಿಂದ ನಗರ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಾದವು. ನಿಜಾಮ ಅಲಿಖಾನನು ಬ್ರಿಟಿಶರೊಂದಿಗೆ ಮಾಡಿಕೊಂಡ ಒಪ್ಪಂದದಿಂದಾಗಿ ಹೈದರಾಬಾದ್ ಸಂಸ್ಥಾನ ಬ್ರಿಟಿಶರ ಪರೋಕ್ಷ ವಸಾಹತುವಾಗಿ ಪರಿವರ್ತನೆಗೊಂಡು ನಗರ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳು ಉಂಟಾದವು. ವಸಾಹತುಪೂರ್ವ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಪೇಟೆ ಪಟ್ಟಣಗಳು ಮತ್ತು ಕೈಗಾರಿಕೆಗಳು ವಸಾಹತುಶಾಹಿಯ ಪರೋಕ್ಷ ಪ್ರಭಾವಕ್ಕೊಳಗಾಗಿ ಬದಲಾವಣೆಗೆ ಒಳಗಾದವು. ದರ್ಬಾರ ಕೇಂದ್ರಿತ ಪಟ್ಟಣಗಳು ಬದಲಾದ ಸ್ಥಿತಿಯಲ್ಲಿ ತಮ್ಮ ನೆಲೆಗಳನ್ನು ಕಳೆದುಕೊಳ್ಳಬೇಕಾಯಿತು. ವ್ಯಾಪಾರ ಕೇಂದ್ರಗಳು ಬದಲಾವಣೆಗಳೊಂದಿಗೆ ಮುಂದುವರಿದವು. ಬ್ರಿಟಿಶರ ಸಾಮ್ರಾಜ್ಯಶಾಹಿ ಧೋರಣೆ ಹಾಗೂ ವ್ಯಾಪಾರದಲ್ಲಿ ಏಕಸ್ವಾಮ್ಯ ನೀತಿಗೊಳಪಟ್ಟು ಈ ಕೇಂದ್ರಗಳು ಕಾರ್ಯನಿರ್ವಹಿಸಿದವು. ಹೈದರಾಬಾದ್ ಸಂಸ್ಥಾನ ಬ್ರಿಟಿಶ್ ಆಶ್ರಿತ ಸಂಸ್ಥಾನವಾಗಿ ಬದಲಾವಣೆಗೊಂಡು ಬ್ರಿಟಿಶ್ ಮಾದರಿಯ ಆಧುನೀಕರಣಕ್ಕೆ ಒಳಗಾಯಿತು. ಬ್ರಿಟನ್ ಕೈಗಾರಿಕಾ ದೇಶವಾಗಿದ್ದು ಭಾರತದ ಸಂಸ್ಥಾನಗಳನ್ನು ಕೈಗಾರಿಕೆಗಳಿಗೆ ಕಚ್ಚಾವಸ್ತು ಪೂರೈಸುವ ಪ್ರದೇಶಗಳನ್ನಾಗಿ ಮಾತ್ರ ಅಭಿವೃದ್ಧಿಪಡಿಸಲು ಬ್ರಿಟಿಶ್ ಸರಕಾರ ಮುಂದಾಯಿತು. ಯುರೋಪಿನ ಕೈಗಾರಿಕೀಕರಣ ಮತ್ತು ನಗರೀಕರಣಕ್ಕೆ ಪೂರಕವಾದ ವ್ಯವಸ್ಥೆಯೊಂದನ್ನು ಭಾರತದಲ್ಲಿ ಹುಟ್ಟುಹಾಕುವುದು ಬ್ರಿಟಿಶರ ಉದ್ದೇಶವಾಗಿತ್ತು. ಕೃಷಿ ಕ್ಷೇತ್ರದಲ್ಲಿ ಕೆಲವೊಂದು ಪ್ರಯೋಗಗಳು ನಡೆದು ಪರೋಕ್ಷ ಕೈಗಾರಿಕೆಗಳ ಹುಟ್ಟಿಗೆ ಹಾಗೂ ನಗರ ಪ್ರದೇಶಗಳ ಅಭಿವೃದ್ಧಿಗೆ ಕಾರಣವಾಯಿತು. ಹಳ್ಳಿ ರಸ್ತೆಗಳ ದುರಸ್ತಿಯೊಂದಿಗೆ ಹೊಸ ರಸ್ತೆಗಳು ಮತ್ತು ರೈಲ್ವೆ ಮಾರ್ಗಗಳು ನಿರ್ಮಾಣವಾದವು.[೬೩]

ನಿಜಾಮರು ಬ್ರಿಟಿಶರ ಸಹಕಾರದಿಂದ ಸಂಸ್ಥಾನದ ನಗರ ವ್ಯವಸ್ಥೆಯನ್ನು ವಿಸ್ತರಣೆ ಮಾಡಿ ಬ್ರಿಟಿಶ್ ಆರ್ಥಿಕ ನೀತಿಗೆ ತಮ್ಮನ್ನು ತಾವೇ ಒಡ್ಡಿಕೊಂಡಿದ್ದರು. ಸಂಸ್ಥಾನದಲ್ಲಿ ರೈಲ್ವೆ, ರಸ್ತೆ ಸಾರಿಗೆ, ಅಂಚೆ ಮತ್ತು ತಂತಿ ಮುಂತಾದ ಬ್ರಿಟಿಶ್‌ಕೇಂದ್ರಿತ ವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕ ಬ್ರಿಟಿಶ್ ಮಾದರಿಯ ಆಧುನೀಕರಣವನ್ನು ಅನುಸರಿಸಲಾಯಿತು. ಕೊನೆಯ ನಿಜಾಮ ಉಸ್ಮಾನ್ ಅಲಿಖಾನನು ಸಂಪೂರ್ಣವಾಗಿ ಯುರೋಪ್‌ಕೇಂದ್ರಿತವಾದ ಜೀವನ ಶೈಲಿಯನ್ನೇ ರೂಪಿಸಿ ಕೊಂಡಿದ್ದನ್ನು ಗಮನಿಸಬಹುದು.[೬೪]

೭.೩.೧. ವರ್ತಕ ಸಮುದಾಯ

ವ್ಯಾಪಾರವನ್ನು ವೃತ್ತಿಯಾಗಿಸಿಕೊಂಡ ವರ್ತಕರಲ್ಲಿ ಎರಡು ವಿಧದ ವರ್ಗಗಳು ಕಂಡುಬರುತ್ತವೆ. ಒಂದು–ವಿನಿಮಯ ವರ್ತಕರು ಮತ್ತು ಎರಡು–ಉತ್ಪಾದಿತ ವರ್ತಕರು. ಮಾರವಾಡಿ, ಲಿಂಗಾಯಿತ, ಕೋಮಟಿಗ, ಬಣಜಿಗ, ಗುಜರಾತಿ, ಭಾಟಿಯ ಮುಂತಾದ ಸಮುದಾಯಗಳು ವಿನಿಮಯ ವರ್ತಕರಾಗಿದ್ದರು. ಕುಂಬಾರರು, ಚಮ್ಮಾರರು, ಸಮಗಾರರು, ಮೇದರು ಮೊದಲಾದ ಸಮುದಾಯಗಳು ಉತ್ಪಾದಕ ವಿನಿಮಯ ವರ್ತಕರಾಗಿದ್ದರು. ಈ ವರ್ತಕ ಸಮುದಾಯಗಳು ವ್ಯಾಪಾರದ ಮೂಲಕ ಗ್ರಾಮಗಳನ್ನು ಪೇಟೆಗಳನ್ನಾಗಿ ಹಾಗೂ ಪೇಟೆಗಳನ್ನು ನಗರಗಳನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು.[೬೫]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೌರ್ಯರಿಂದ ಬಹಮನಿ ಕಾಲದವರೆಗೂ ಇಂತಹ ವರ್ತಕ ಸಮುದಾಯಗಳು ವ್ಯಾಪಾರದಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಬಹಮನಿ ಸುಲ್ತಾನರ ಆಳ್ವಿಕೆಯಲ್ಲಿ ಅರೇಬಿಯನ್ನರು ಮತ್ತು ಪರ್ಶಿಯನ್ನರು ವ್ಯಾಪಾರ ಮಾಡಲು ಆಗಮಿಸಿ ಸ್ಥಳೀಯ ವ್ಯಾಪಾರಿಗಳೊಂದಿಗೆ ಸೇರಿ ನಿಜಾಮರ ಕಾಲದಲ್ಲೂ ವ್ಯಾಪಾರ ವಹಿವಾಟು ನಡೆಸುತ್ತಿದ್ದುದ್ದನ್ನು ಗಮನಿಸಬಹುದಾಗಿದೆ.[೬೬]

ನಂತರ ಅರೇಬಿಯನ್ನರು, ಪರ್ಶಿಯನ್ನರು ಹಾಗೂ ಉತ್ತರ ಭಾರತದ ವರ್ತಕ ಸಮುದಾಯಗಳು ಹೈದ್ರಾಬಾದ್ ಸಂಸ್ಥಾನದಲ್ಲಿ ಪ್ರಮುಖವಾಗಿದ್ದವು. ನಿಜಾಮ ಕಮುರೋದಿನ ಕಿಲಿಚಖಾನನು ವ್ಯಾಪಾರವನ್ನು ಅಭಿವೃದ್ಧಿಪಡಿಸಲು ಮೊಗಲರ ಆಸ್ಥಾನದಲ್ಲಿದ್ದ ಗುಜರಾತಿ, ಮರಾಠಿ, ಅರಬ್ಬಿಯನ್, ಮುಸ್ಲಿಮ್ ಪ್ರಮುಖ ವರ್ತಕ ಸಮುದಾಯಗಳನ್ನು ಆಹ್ವಾನ ನೀಡಿ ಅವರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿದನು. ಉತ್ತರ ಭಾರತದ ವರ್ತಕ ಸಮುದಾಯಗಳು ನಿಜಾಮ ಸಂಸ್ಥಾನದಲ್ಲಿ ವ್ಯಾಪಾರ ದೊಂದಿಗೆ ಆಡಳಿತದಲ್ಲೂ ಪ್ರಭಾವ ಹೊಂದಿದ್ದವು. ಕಿಲಿಚಖಾನನ ನಂತರದ ಅವಧಿಯಲ್ಲಿ ಆಡಳಿತದ ಆಯಾಕಟ್ಟಿನ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತ ಆಡಳಿತ ವರ್ಗವಾಗಿ ರೂಪುಗೊಂಡಿದ್ದರು. ಈ

ಬೆಳವಣಿಗೆಯನ್ನು ಸ್ಥಳೀಯರು ಸಹಿಸದೆ ಆಡಳಿತದ ಪ್ರಮುಖ ಹುದ್ದೆಗಳಿಗೆ ತಮ್ಮನ್ನು ಪರಿಗಣಿಸಲು ನಿಜಾಮನಲ್ಲಿ ಮನವಿ ಮಾಡಿಕೊಂಡ ಫಲವಾಗಿ ಮುಖ್ಯ ಕಾನೂನು ಜಾರಿಗೆ ಬಂದಿತು.[೬೭]

ಸಂಸ್ಥಾನದ ಆರಂಭ ಕಾಲಘಟ್ಟದಲ್ಲಿದ್ದ ಮುಸ್ಲಿಂ ವರ್ತಕ ಸಮುದಾಯಗಳಲ್ಲಿ ದಖ್ಖನಿ ಮುಸ್ಲಿಮರು ಪ್ರಮುಖ ವ್ಯಾಪಾರಿಗಳಾಗಿದ್ದರು. ನಿಜಾಮರ ಸಂಸ್ಥಾನದಲ್ಲಿ ದಖ್ಖನಿ ಮುಸ್ಲಿಮ್ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದ್ದು ಇವರನ್ನು ತುರ್ಕಿಯರೆಂದೂ ಕರೆಯಲಾಗುತ್ತಿತ್ತು. ಇವರು ಕುದುರೆ ವ್ಯಾಪಾರಿಗಳೂ, ಬಟ್ಟೆ ವ್ಯಾಪಾರಿಗಳೂ ಆಗಿದ್ದು ನಗರಪ್ರದೇಶ, ಪೇಟೆ ಪಟ್ಟಣಗಳಲ್ಲಿ ಕಂಡುಬರುತ್ತಿದ್ದರು.[೬೮]

ಈ ವರ್ತಕ ಸಮುದಾಯಗಳಲ್ಲದೆ ಇನ್ನೂ ಹತ್ತು ಹಲವು ಸಮುದಾಯಗಳು ವಸ್ತುಗಳ ಉತ್ಪಾದನೆ ಮತ್ತು ಮಾರಾಟ ಮಾಡುವ ವ್ಯವಹಾರದಲ್ಲಿ ತೊಡಗಿದ್ದವು. ಕುಶಲಕರ್ಮಿಗಳು ವಸ್ತುಗಳ ಉತ್ಪಾದನೆಯೊಂದಿಗೆ ಅವುಗಳ ಮಾರಾಟದಲ್ಲಿ, ಗಾಣಿಗರು ಎಣ್ಣೆ ತಯಾರಿಕೆಯೊಂದಿಗೆ ಎಣ್ಣೆ ವ್ಯಾಪಾರದಲ್ಲಿ, ಸಮಗಾರರು ಚರ್ಮ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟದಲ್ಲಿ ತೊಡಗಿಸಿ ಕೊಂಡಿದ್ದರು. ಈ ಯಾವ ಸಮುದಾಯವೂ ಪೂರ್ಣಪ್ರಮಾಣದಲ್ಲಿ ವ್ಯಾಪಾರಿ ಸಮುದಾಯ ವಾಗಿರಲಿಲ್ಲ. ಲಿಂಗಾಯಿತರು, ರಜಪೂತರು, ಕೋಮಟಿಗರು ಮುಂತಾದ ವ್ಯಾಪಾರಿ ಸಮುದಾಯಗಳು ವಾಣಿಜ್ಯ ವ್ಯವಹಾರ ನಡೆಸುತ್ತಿದ್ದ ಪೂರ್ಣಕಾಲಿಕ ವರ್ತಕ ಸಮುದಾಯಗಳಾಗಿದ್ದವು.[೬೯]

೭.೩.೨. ವ್ಯಾಪಾರ ಮತ್ತು ವಾಣಿಜ್ಯ

ಬಹಮನಿ ಸುಲ್ತಾನರ ಆಳ್ವಿಕೆಯಲ್ಲಿ ಪರ್ಶಿಯನ್ನರು, ಟರ್ಕಿ, ಅರೇಬಿಯಾ, ಮಧ್ಯ ಏಷ್ಯಗಳಿಂದ ವಿದೇಶಿ ವ್ಯಾಪಾರಿಗಳು ಆಗಮಿಸಿ ನಗರಗಳಲ್ಲಿದ್ದರು. ನಿಜಾಮರ ಕಾಲಾವಧಿಯಲ್ಲಿ ಗುಲಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲಾ ಪ್ರದೇಶಗಳು ವ್ಯಾಪಾರ ಕೇಂದ್ರಗಳಾಗಿದ್ದವು. ಜೋಳ, ತೊಗರಿ, ಉದ್ದು, ಹೆಸರು, ಎಳ್ಳು, ಅಲಸಂದಿ, ಹತ್ತಿ ಮುಂತಾದ ಆಹಾರ ಬೆಳೆಗಳ ಜೊತೆಗೆ ಕೈಗಾರಿಕೆ ಉತ್ಪನ್ನಗಳಾದ ಹತ್ತಿಬಟ್ಟೆ, ರೇಷ್ಮೆಬಟ್ಟೆ, ಚರ್ಮದ ವಸ್ತುಗಳು, ರಗ್ಗು ಹಾಗೂ ಸಿಮೆಂಟ್ ಮುಂತಾದ ವ್ಯಾಪಾರದಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿದ್ದವು.[೭೦]

ಬ್ರಿಟಿಶರ ವಾಣಿಜ್ಯ ಕೃಷಿ ಮಾರುಕಟ್ಟೆ ಕೇಂದ್ರಿತ ಅರ್ಥವ್ಯವಸ್ಥೆಯಿಂದ ವ್ಯಾಪಾರ-ವಾಣಿಜ್ಯ ನೀತಿ ಜಾರಿಗೆ ಬಂದಿತು. ಕೃಷಿ ವಾಣಿಜ್ಯೀಕರಣದಿಂದ ವಾಣಿಜ್ಯ ಬೆಳೆಗಳು ಮಾರುಕಟ್ಟೆಗೆ ಪ್ರವೇಶಿಸಿ ಅನೇಕ ಪೇಟೆ-ಪಟ್ಟಣಗಳು ಬಿರುಸಿನ ವ್ಯಾಪಾರ ಚಟುವಟಿಕೆಗಳ ಕೇಂದ್ರವಾಗಿ ಪರಿವರ್ತನೆಗೊಂಡವು. ವ್ಯಾಪಾರ ಸಾಮಗ್ರಿಗಳ ಸಾಗಾಣಿಕೆಯ ಹಿತದೃಷ್ಟಿಯಿಂದ ಸಾರಿಗೆ ಸಂಪರ್ಕ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳಾದವು. ಅನೇಕ ರಸ್ತೆಗಳು, ರೈಲ್ವೆಮಾರ್ಗಗಳು ನಿರ್ಮಾಣವಾಗಿ ವ್ಯಾಪಾರದಲ್ಲಿ

ಹೆಚ್ಚಳವಾಯಿತು. ರೈತರು ಮತ್ತು ವರ್ತಕರ ಮಧ್ಯೆ ಕೊಂಡಿಗಳಾಗಿ ವ್ಯವಹರಿಸುವ ಏಜೆಂಟರು ಅಥವಾ ಲೇವಾದೇವಿಗಾರರ ವರ್ಗವೊಂದು ಹುಟ್ಟಿಕೊಂಡಿತು. ಈ ಮಧ್ಯವರ್ತಿ ವರ್ಗ ಕೃಷಿಕರಿಗೆ ಮತ್ತು ವರ್ತಕರಿಗೆ ಹಣಕಾಸಿನ ನೆರವು ಒದಗಿಸುತ್ತಿತ್ತು. ಹೊಸದಾಗಿ ಅಸ್ತಿತ್ವಕ್ಕೆ ಬಂದ ಬ್ಯಾಂಕುಗಳು ವ್ಯಾಪಾರಸ್ಥರಿಗೆ ಹಾಗೂ ವಾಣಿಜ್ಯ ಬೆಳೆ ಕೃಷಿಕರಿಗೆ ಹಣಕಾಸು ನೆರವು ನೀಡಲಾರಂಭಿಸಿದವು. ವ್ಯಾಪಾರಸ್ಥರ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶದಿಂದ ವ್ಯಾಪಾರಿ ಸಂಘಗಳು ಹುಟ್ಟಿಕೊಂಡವು. ಇವೆಲ್ಲವೂ ಹಂತ ಹಂತವಾಗಿ ಬೆಳೆದು ವ್ಯಾಪಾರ-ವಾಣಿಜ್ಯ ವ್ಯವಸ್ಥಿತವಾಗಿ, ಲಾಭದಾಯಕವಾಗಿ ನಡೆದು ಶ್ರೀಮಂತ ವರ್ತಕ ವರ್ಗ, ಖಾಸಗಿ ಕಂಪನಿಗಳು, ಮಧ್ಯವರ್ತಿಗಳು ಗರಿಷ್ಠ ಪ್ರಮಾಣದಲ್ಲಿ ಲಾಭ ಗಳಿಸಲಾರಂಭಿಸಿದವು.[೭೧]

ನಿಜಾಮರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೊಸ ಮಾರುಕಟ್ಟೆಗಳನ್ನು ಸ್ಥಾಪನೆ ಮಾಡಿದರು. ವಾಣಿಜ್ಯ ಬೆಳೆಗಳು ಬೆಳೆಯಲು ಸಾಧ್ಯವಿದ್ದ ಜಿಲ್ಲಾ ಪ್ರದೇಶಗಳಲ್ಲಿ ಬೃಹತ್ ಪ್ರಮಾಣದ ನಿಯಂತ್ರಿತ ಮಾರುಕಟ್ಟೆಗಳನ್ನು ಕಾರ್ಯಗತಗೊಳಿಸಿದರು.[೭೨]

೧. ಆಮದು ಮತ್ತು ರಫ್ತು

ಗುಲಬರ್ಗಾ ಜಿಲ್ಲೆ ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪಾರ ಕೇಂದ್ರ ಬಿಂದುವಾಗಿದ್ದು, ಬೀದರ್ ಮತ್ತು ರಾಯಚೂರು ಮೂಲಕ ರಫ್ತು ಮತ್ತು ಆಮದು ವ್ಯಾಪಾರ ನಡೆಯುತ್ತಿತ್ತು. ಸ್ಥಳೀಯ ಉತ್ಪನ್ನಗಳನ್ನು, ಸರಕು ಸಾಮಗ್ರಿಗಳನ್ನು ರಫ್ತು ಮಾಡಿ, ಅವಶ್ಯಕ ಸರಕು ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ರಫ್ತು ಮಾಡುವ ಸರಕುಗಳಲ್ಲಿ ಆಹಾರ ಧಾನ್ಯಗಳು, ಎಕ್ಕದ ಹತ್ತಿ, ಒರಟು ಹತ್ತಿ. ಎಣ್ಣೆ ಪದಾರ್ಥಗಳು, ಎಳ್ಳು, ತಂಬಾಕು, ಧೋತ್ರಗಳು, ಕಂಬಳಿಗಳು, ಚರ್ಮದಿಂದ ತಯಾರಿಸಿದ ಸರಕುಗಳು ಹಾಗೂ ಮೆಣಸಿನಕಾಯಿ ಮುಂತಾದವು ಸೇರಿತ್ತು. ಇವನ್ನು ಮದ್ರಾಸ್ ಮತ್ತು ಮುಂಬಯಿ ಪ್ರೆಸಿಡೆನ್ಸಿ ಮೂಲಕ ದೇಶ ವಿದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು.[೭೩] ಮೈಸೂರು ಮತ್ತು ಬೆಂಗಳೂರು ಪ್ರದೇಶಗಳಿಗೂ ಹೈದರಾಬಾದ್ ಕರ್ನಾಟಕದಲ್ಲಿ ಉತ್ಪಾದನೆಯಾದ ಧೋತ್ರಗಳು, ಕಂಬಳಿಗಳು ಮತ್ತು ಕಾರಟಗಿಯ ಕೆಂಪು ಬಣ್ಣ ರಫ್ತಾಗುತ್ತಿತ್ತು. ಹತ್ತಿಯನ್ನು ಕಚ್ಚಾ ರೂಪದಲ್ಲಿ ಅಹಮದಾಬಾದ್, ಮದ್ರಾಸ್ ಮತ್ತು ಮುಂಬಾಯಿ ಮೂಲಕ ಇಂಗ್ಲೆಂಡಿಗೆ ರಫ್ತು ಮಾಡಲಾಗುತ್ತಿತ್ತು. ಇಲ್ಲಿನ ಕೈಗಾರಿಕಾ ಉತ್ಪನ್ನಗಳು ಕೂಡ ಮುಂಬಯಿ ಮತ್ತು ಮದ್ರಾಸಗೆ ರಫ್ತಾಗುತ್ತಿದ್ದವು.[೭೪]

ಮುಂಬಯಿ ಮತ್ತು ಮದ್ರಾಸ್ ಪ್ರೆಸಿಡೆನ್ಸಿ ಮೂಲಕ ಉಪ್ಪು, ಮೀನು, ಬಟ್ಟೆ, ಉಣ್ಣೆ ಬಟ್ಟೆಗಳು, ಸೀಮೆಎಣ್ಣೆ, ಉಕ್ಕು, ಅಫೀಮು, ತೆಂಗಿನೆಣ್ಣೆ ಮುಂತಾದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಸಂಸ್ಥಾನದ ಆಮದು ಮತ್ತು ರಫ್ತು ವ್ಯಾಪಾರ ನಗದು ರೂಪದಲ್ಲಿ ನಡೆಯುತ್ತಿದ್ದುದು ಕಂಡುಬರುತ್ತದೆ.[೭೫]

೨. ವ್ಯಾಪಾರ ಕೇಂದ್ರಗಳು

ಕೃಷಿ ಹಾಗೂ ಕೃಷಿಯೇತರ ಉತ್ಪಾದನೆಯ ಹೆಚ್ಚಳದಿಂದ ಹುಟ್ಟಿಕೊಂಡಿದ್ದ ವ್ಯಾಪಾರ ಕೇಂದ್ರಗಳಾದ ಸಂತೆ ಮತ್ತು ಮಾರುಕಟ್ಟೆಗಳು ಇಂದಿಗೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಂಡುಬರುತ್ತವೆ. ಸಂಸ್ಥಾನದಲ್ಲಿನ ಆಂತರಿಕ ವ್ಯಾಪಾರ ಪ್ರದೇಶವನ್ನು ಸಂತೆ, ಅಂಗಡಿ, ಪೇಟೆ, ಪಟ್ಟಣ ಎಂದು ಕರೆಯಲಾಗುತ್ತಿತ್ತು. ನಿಜಾಮರ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಸಂತೆಗಳು ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. ಹತ್ತಿರದ ಪಟ್ಟಣ ಪ್ರದೇಶದಲ್ಲಿ ವಾರಕ್ಕೊಮ್ಮೆ ವ್ಯಾಪಾರ ನಡೆಸುವ ವ್ಯವಸ್ಥೆ ಸಂತೆಯೆಂದೂ–ವ್ಯಾಪಾರ ನಡೆಯುವ ಸ್ಥಳವನ್ನು ಸಂತೆ ಪ್ರದೇಶವೆಂದೂ ಕರೆಯಲಾಗುತ್ತಿತ್ತು. ಹೊಸದಾಗಿ ಆರಂಭಿಸಿದ ಸಂತೆಗೆ ವರ್ತಕರನ್ನು ಆಕರ್ಷಿಸಲು ಸರಕುಗಳ ಮೇಲೆ ಸುಂಕ ರಿಯಾಯ್ತಿ ನೀಡಲಾಗುತ್ತಿತ್ತು. ಸಂತೆಗಳಲ್ಲಿ ಸ್ಥಳೀಯ ವ್ಯಾಪಾರಿಗಳೊಂದಿಗೆ ಹೊರಗಿನ ವ್ಯಾಪಾರಸ್ಥರು ವ್ಯವಹಾರ ನಡೆಸುತ್ತಿದ್ದರು. ಸಂತೆಗಳು ನಿತ್ಯ ಬಳಕೆಯ ವಸ್ತುಗಳನ್ನು ವ್ಯಾಪಾರ ನಡೆಸುತ್ತಿದ್ದವಲ್ಲದೆ ಅವನ್ನು ಆಮದು ಮಾಡಿಕೊಂಡ ವಸ್ತುಗಳೊಂದಿಗೆ ಇತರ ಪೇಟೆ ಪಟ್ಟಣಗಳಿಗೂ ವಿತರಿಸುವ ಕೆಲಸ ಮಾಡುತ್ತಿದ್ದವು. ಗ್ರಾಮಗಳ ನಡುವೆ ಸಂತೆಗಳು ಏರ್ಪಟ್ಟು ಗ್ರಾಮೀಣ ಪ್ರದೇಶ ಪಟ್ಟಣದ ಲಕ್ಷಣಗಳನ್ನು ಪಡೆದುಕೊಳ್ಳುತ್ತಿತ್ತು. ಇದು ನಗರೀಕರಣ ಪ್ರಕ್ರಿಯೆಯನ್ನು ಸೂಚಿಸುತ್ತದೆ.[೭೬] ಮಾರುಕಟ್ಟೆ ವ್ಯಾಪಾರ ನಡೆಸುತ್ತಿದ್ದ ಇನ್ನೊಂದು ಪ್ರಮುಖ ಕೇಂದ್ರವಾಗಿತ್ತು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ನಿಯಂತ್ರಿತ ಮಾರುಕಟ್ಟೆಗಳು ಇರಲಿಲ್ಲವಾದ್ದರಿಂದ ಸಂತೆಗಳಲ್ಲಿ ನೇರವಾಗಿ ಇಲ್ಲವೆ ದಲ್ಲಾಳಿಗಳ ಮೂಲಕ ಮಾರಾಟ ಮಾಡಲಾಗುತ್ತಿತ್ತು. ದಲ್ಲಾಳಿಗಳಿಂದ ವಂಚನೆಗೆ ಒಳಗಾಗುತ್ತಿದ್ದ ರೈತರಿಗೆ ಸರಿಯಾದ ಬೆಲೆ ಸಿಗದೆ ನಷ್ಟವಾಗುತ್ತಿತ್ತು. ೧೯೨೮ರಲ್ಲಿ ಕೃಷಿ ವರದಿ ಸಿದ್ಧಪಡಿಸಲು ನೇಮಕವಾದ ರಾಯಲ್ ಆಯೋಗ ತನ್ನ ವರದಿಯಲ್ಲಿ ಕೃಷಿಕರು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ಕಾನೂನಾತ್ಮಕ ನಿಯಂತ್ರಿತ ಮಾರುಕಟ್ಟೆ ಸ್ಥಾಪಿಸಬೇಕೆಂದು ಶಿಫಾರಸ್ಸು ಮಾಡಿತು.[೭೭] ನಿಜಾಮ್ ಉಸ್ಮಾನ್ ಅಲಿಖಾನನು ೧೯೩೦ರಲ್ಲಿ ಪ್ರಥಮ ಬಾರಿಗೆ ಹೈದರಾಬಾದ್ ಕೃಷಿ ಮಾರುಕಟ್ಟೆ ಅಧಿನಿಯಮವನ್ನು ಜಾರಿಗೆ ತಂದನು. ಈ ಕಾಯಿದೆಯನ್ವಯ ಪ್ರತಿಯೊಂದು ಜಿಲ್ಲೆಯಲ್ಲೂ ಮಾರುಕಟ್ಟೆ ಸ್ಥಾಪಿತವಾಯಿತು. ಹೈದರಾಬಾದ್ ಕರ್ನಾಟಕ ಪ್ರದೇಶದ ರಾಯಚೂರು, ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ೧೯೪೦ರಲ್ಲಿ ಮಾರುಕಟ್ಟೆ ಸ್ಥಾಪನೆಯಾಯಿತು. ಇವುಗಳಲ್ಲಿ ರಾಯಚೂರು ಮಾರುಕಟ್ಟೆ ಅತಿದೊಡ್ಡ ಮಾರುಕಟ್ಟೆಯಾಗಿತ್ತು.[೭೮]

ನಿಜಾಮ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಸಂತೆ ಮತ್ತು ಮಾರುಕಟ್ಟೆಗಳು–೧೯೪೦

ಕ್ರಸಂ.	ಜಿಲ್ಲೆಯ ಹೆಸರು	ಮಂಡಿಸ್	ಗಂಜ್	ನಿಯಂತ್ರಣಕ್ಕೆ ಒಳಪಟ್ಟ ಮಾರುಕಟ್ಟೆ	ವಾರದ ಸಂತೆ	ನಿಯತಕಾಲಿಕ ಸಂತೆ
೧	ಗುಲಬರ್ಗಾ	೫	೩	೧	೧೦೫	೨
೨	ರಾಯಚೂರು	೩	೩	೧	೭೫	೨
೩	ಬೀದರ್	೪	೩		೧೦೧	೨
	ಒಟ್ಟು	೧೨	೯	೨	೨೮೧	೬

ಆಕರ : ವೈಕುಂಠಮ್ ವೈ, ಸ್ಟೇಟ್ ಎಕಾನಮಿ ಆ್ಯಂಡ್ ಸೋಶ್ಯಲ್ ಟ್ರಾನ್ಸ್‌ಫಾರ್ಮೇಷನ್, ಹೈದರಾಬಾದ್

ಕೋಷ್ಟಕದಲ್ಲಿ ವಿವರಿಸಿರುವ ಹಾಗೆ ೧೯೪೦ರ ವರದಿ ಪ್ರಕಾರ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸುಮಾರು ೧೨ ಮಂಡಿ ಮಾರುಕಟ್ಟೆಗಳನ್ನು ಸ್ಥಾಪಿಸಲಾಯಿತು. ದಿನಸಿ ಸರಕುಗಳ ಮಾರಾಟ ಮಂಡಿ ಮಾರುಕಟ್ಟೆಯಲ್ಲಿ ನಡೆಯುತ್ತಿತ್ತು. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ರೈತರಿಗೆ ಸಹಾಯವಾಗುವ ದೃಷ್ಟಿಯಿಂದ ಸುಮಾರು ೯ ಗಂಜ್ ಮಾರುಕಟ್ಟೆಗಳನ್ನು ಸ್ಥಾಪನೆ ಮಾಡಲಾಯಿತು. ಗಂಜ್ ಮಾರುಕಟ್ಟೆಗೆ ಅಡತ ಎಂದೂ ಕರೆಯಲಾಗುತ್ತದೆ. ಇಂತಹ ಗಂಜ್ ಮಾರುಕಟ್ಟೆಗಳು ಇಂದಿಗೂ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಬಹುದು. ನಿಜಾಮ್ ಸರಕಾರ ಮಾರುಕಟ್ಟೆ ಕಾಯಿದೆ ಮೂಲಕ ಸರಕಾರಿ ನಿಯಂತ್ರಿತ ಮಾರುಕಟ್ಟೆಗಳನ್ನು ರಾಯಚೂರು ಮತ್ತು ಗುಲಬರ್ಗಾದಲ್ಲಿ ಸ್ಥಾಪಿಸಿತು. ಇವನ್ನು ನಿಯಂತ್ರಿಸಲು ಮಾರುಕಟ್ಟೆ ಅಧಿಕಾರಿಯನ್ನು ನೇಮಿಸಿತು. ಏಕರೀತಿ ಬೆಲೆ ಮತ್ತು ದಲ್ಲಾಳಿ ಮುಕ್ತ ವ್ಯಾಪಾರ ನಡೆಸುವ ಉದ್ದೇಶದಿಂದ ಮಾರುಕಟ್ಟೆ ಸ್ಥಾಪಿಸಲಾಗಿತ್ತು. ಸುಮಾರು ೨೮೧ ವಾರದ ಸಂತೆಗಳು ಇದ್ದುದು ದಾಖಲಾಗಿವೆ. ನಿಯತಕಾಲಿಕ ಸಂತೆಗಳೂ ಈ ಪ್ರದೇಶದಲ್ಲಿ ಕಂಡುಬರುತ್ತಿದ್ದವು.[೭೯]

೩. ವ್ಯಾಪಾರ ಮಾರ್ಗಗಳು

ನಿಜಾಮರ ಕಾಲಾವಧಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ವಿದೇಶಗಳೊಂದಿಗೆ ವ್ಯಾಪಾರ ವಿಸ್ತರಿಸಿಕೊಳ್ಳಲು ಒಂಬತ್ತು ವಿಭಾಗಗಳಲ್ಲಿ ವ್ಯಾಪಾರ ಮಾರ್ಗಗಳನ್ನು ರಚಿಸಿಕೊಂಡಿತ್ತು. ಇವುಗಳಲ್ಲಿ ಐದು ಮಾರ್ಗಗಳು ನಿಧಾನವಾಗಿ ಚಲಿಸುವ ರಸ್ತೆ ಮಾರ್ಗಗಳಾಗಿದ್ದರೆ, ಉಳಿದ ನಾಲ್ಕು ವಿಭಾಗಗಳು ವೇಗವಾಗಿ ಚಲಿಸುವ ರೈಲ್ವೆ ಮಾರ್ಗಗಳಾಗಿದ್ದವು.[೮೦] ಈ ನಾಲ್ಕು ರೈಲ್ವೆ ಮಾರ್ಗಗಳಲ್ಲಿ ಗುಲಬರ್ಗಾವೂ ಸೇರಿತ್ತು. ಈ ಎರಡು ಬಗೆಯ ವ್ಯಾಪಾರ ಮಾರ್ಗಗಳು ಭೂಮಾರ್ಗಗಳಾಗಿದ್ದವು.[೮೧] ಕರಾವಳಿ ಪ್ರದೇಶವನ್ನು ಹೈದರಾಬಾದ್ ಸಂಸ್ಥಾನ ಹೊಂದಿರಲಿಲ್ಲವಾದ

ಕಾರಣ ಜಲಮಾರ್ಗಗಳು ಇರಲಿಲ್ಲ. ಭೂವ್ಯಾಪಾರ ಮಾರ್ಗಗಳ ಮೂಲಕ ಮದ್ರಾಸ್, ಮುಂಬಯಿಗಳಿಂದ ಹಿಡಿದು ವಿದೇಶಗಳವರೆಗೆ ಸಂಬಂಧ ಹೊಂದಿತ್ತು. ವಿಸ್ತರಣೆಗೊಂಡ ಪ್ರಮುಖ ವ್ಯಾಪಾರ ಮಾರ್ಗಗಳ ವಿವರಣೆಯನ್ನು ಈ ಕೆಳಗಿನಂತೆ ನೀಡಲಾಗಿದೆ.[೮೧]

೧. ಮುಂಬಾಯಿ–ಮದ್ರಾಸ್ ಬ್ರಾಡ್‌ಗೇಜ್ ರೈಲ್ವೆ ಮಾರ್ಗ: ಈ ಮಾರ್ಗ ರಾಯಚೂರು ಮತ್ತು ಗುಲಬರ್ಗಾದಿಂದ ಮುಂಬಾಯಿ ಹಾಗೂ ಮದ್ರಾಸ್‌ಗೆ ಸಂಪರ್ಕ ಕಲ್ಪಿಸುತ್ತಿತ್ತು.[೮೨]

೨. ಹೈದರಾಬಾದ್–ವಾಡಿ ರೈಲ್ವೆ ಮಾರ್ಗ: ಇದು ಹೈದರಾಬಾದ್‌ನಿಂದ ಇತರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುತ್ತಿತ್ತು.[೮೩]

೩. ಭಾರತದ ಪರ್ಯಾಯ ರೈಲ್ವೆ ಮಾರ್ಗಗಳಲ್ಲಿ ರಾಯಚೂರು ಮುಖಾಂತರ ಸಾಗುವ ಮಾರ್ಗ ಮದ್ರಾಸ್‌ಗೆ ಸಂಪರ್ಕ ಕಲ್ಪಿಸುತ್ತಿತ್ತು.[೮೪]

೪. ಹೈದರಾಬಾದ್–ಮುಂಬೈಯಿ ರೈಲ್ವೆ ಮಾರ್ಗ ಬೀದರ ಮೂಲಕವೂ ರಸ್ತೆ ಮಾರ್ಗ ಔರಂಗಬಾದ್ ಮೂಲಕವೂ ಸಾಗುತ್ತಿತ್ತು.

ಹೈದರಾಬಾದ್ ಕರ್ನಾಟಕ ಪ್ರದೇಶದ ಈ ಎಲ್ಲ ವ್ಯಾಪಾರ ಮಾರ್ಗಗಳು ದೇಶ ವಿದೇಶಗಳ ಬೇರೆ ಬೇರೆ ಪ್ರದೇಶಗಳಿಂದ ರಫ್ತು ಮತ್ತು ಆಮದು ವಹಿವಾಟು ನಡೆಸಲು ತುಂಬ ಉಪಯುಕ್ತ ವಾಗಿದ್ದವು.[೮೫]

೭.೩.೩. ಸಾರಿಗೆ ವ್ಯವಸ್ಥೆ

ಹೈದರಾಬಾದ್ ಸಂಸ್ಥಾನವು ನಿಜಾಮ್ ಆಳ್ವಿಕೆಯ ಪೂರ್ವದಲ್ಲಿಯೂ ಭಾರತದ ಉತ್ತರ ಮತ್ತು ದಕ್ಷಿಣ ಪ್ರದೇಶಗಳೊಂದಿಗೆ ಸಂಪರ್ಕ ಹೊಂದಿತ್ತು. ಭಾರತದ ವಿವಿಧ ಪ್ರದೇಶಗಳನ್ನು ಪರಸ್ಪರ ಜೋಡಿಸುವ ರಸ್ತೆಗಳಿದ್ದವು. ಆರಂಭದಲ್ಲಿ ನಿಜಾಮರು ಮೊಗಲ್ ಕಾಲದ ಸಾರಿಗೆ ವ್ಯವಸ್ಥೆಯ ಬಳಕೆಯನ್ನು ಮುಂದುವರೆಸಿದರು.[೮೬] ನಿಜಾಮ್ ಸಂಸ್ಥಾನ ಬ್ರಿಟಿಶ್ ಆಶ್ರಿತ ಸಂಸ್ಥಾನವಾಗಿ ಬದಲಾದ ನಂತರ ಸಾರಿಗೆ ವ್ಯವಸ್ಥೆ ವಸಾಹತು ಧೋರಣೆಗೆ ಪೂರಕವಾಗಿ ಬ್ರಿಟಿಶ್ ಮಾದರಿಯ ಸಾರಿಗೆ ವ್ಯವಸ್ಥೆ ಜಾರಿಗೆ ಬಂದುದು ಕಂಡುಬರುತ್ತದೆ.[೮೭]

ಸಾರಿಗೆ ವ್ಯವಸ್ಥೆಯಿಂದಾಗಿ ಸಂಸ್ಥಾನದ ಪೇಟೆ–ಪಟ್ಟಣಗಳಲ್ಲಿ ಬಿರುಸಿನ ವ್ಯಾಪಾರ ಚಟುವಟಿಕೆಗಳು ಆರಂಭಗೊಂಡವು. ಒಟ್ಟಾರೆಯಾಗಿ ಸಾರಿಗೆ ವ್ಯವಸ್ಥೆಯಿಂದ ನಿಜಾಮ್ ಸರಕಾರ ಆರ್ಥಿಕವಾಗಿ ಉತ್ತಮವಾದ ವ್ಯಾಪಾರ ವಹಿವಾಟು ನಡೆಸಲು ಉಪಯುಕ್ತವಾಯಿತು. ಬ್ರಿಟಿಶರ ವಸಾಹತು

ನೀತಿಗೆ ಅನುಗುಣವಾದ ರಸ್ತೆ ಸಾರಿಗೆ ರೂಪುಗೊಂಡು ನಿಜಾಮರು ಸಂಸ್ಥಾನದಲ್ಲಿ ಎರಡು ವಿಧದ ಸಾರಿಗೆ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರು.[೮೮]

೧. ರಸ್ತೆ ಸಾರಿಗೆ

ಪ್ರದೇಶವೊಂದರ ಆರ್ಥಿಕ ಮತ್ತು ವಾಣಿಜ್ಯ ಬೆಳವಣಿಗೆಯಲ್ಲಿ ಸಂಪರ್ಕ ಸಾಧನೆಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಿಜಾಮ್ ಆಳ್ವಿಕೆಯ ಅವಧಿಯಲ್ಲಿ ರಸ್ತೆ ಸಾರಿಗೆ ವ್ಯವಸ್ಥೆ ಪ್ರಮುಖವಾದ ಬದಲಾವಣೆಯನ್ನು ಕಂಡಿತು. ಮೊಗಲ್ ಸಾಮ್ರಾಜ್ಯದ ಅವನತಿಯಿಂದಾಗಿ ಸಂಪರ್ಕ ವ್ಯವಸ್ಥೆಯಲ್ಲೂ ಕುಸಿತ ಉಂಟಾಗಿತ್ತು. ನಿಜಾಮ್ ಕಿಲಿಚಖಾನನು ರಸ್ತೆ ಸಂಪರ್ಕಗಳಲ್ಲಿ ಸ್ವಲ್ಪಮಟ್ಟಿನ ಸುಧಾರಣೆಯನ್ನು ತಂದನು. ಹೈದರಾಬಾದ್ ಕರ್ನಾಟಕದಲ್ಲಿದ್ದ ಪ್ರಮುಖ ರಸ್ತೆಗಳಲ್ಲಿ ಕೊಟ್ಟೂರು–ನಂದಿಕೇರಿ, ಸಿರಾರು ಮತ್ತು ಫರತಾಬಾದ್ ಮೂಲಕ ಹಾದು ಹೋಗುತ್ತಿದ್ದ ಗುಲಬರ್ಗಾ–ಫಿರೋಜಾಬಾದ್ ರಸ್ತೆ ಪ್ರಮುಖವಾಗಿತ್ತು. ಇದು ಗುಲಬರ್ಗಾದಿಂದ ದಕ್ಷಿಣ ಕಡೆಗೆ ಹಾದು ಹೋಗುತ್ತಿತ್ತು.[೮೯] ಗುಲಬರ್ಗಾದಿಂದ ಸುರಪುರಕ್ಕೆ ಸೈನಿಕರ ಸಂಚಾರಕ್ಕೂ ಇದೇ ರಸ್ತೆ ಉಪಯೋಗವಾಗುತ್ತಿತ್ತು. ಇದನ್ನು ದಂಡಿನ ರಸ್ತೆ ಎಂದು ಕರೆಯುತ್ತಿದ್ದರು.[೯೦] ನಿಜಾಮರು ವಸಾಹತು ನೀತಿಯ ಸಾರಿಗೆ ವ್ಯವಸ್ಥೆಯಿಂದ ಪ್ರಭಾವಿತರಾಗಿ ೧೮೭೭ರಲ್ಲಿ ಬ್ರಿಟಿಶ್ ಮಾದರಿ ರಸ್ತೆ ಸಾರಿಗೆಯನ್ನು ರೂಪಿಸಿಕೊಂಡ ಕಾಲದಿಂದ ಹೈದರಾಬಾದ್ ಸಂಸ್ಥಾನದಲ್ಲಿ ರಸ್ತೆ ಸಾರಿಗೆ ವ್ಯವಸ್ಥೆ ಸುಧಾರಣೆಯನ್ನು ಕಂಡಿತು.[೯೧]

ಸಂಸ್ಥಾನದ ಕಂದಾಯ ಮಂಡಳಿ ಅಧೀನದಲ್ಲಿ ರಸ್ತೆ ಸಾರಿಗೆ ಇಲಾಖೆ ಕಾರ್ಯ ನಿರ್ವಹಿಸುತ್ತಿತ್ತು. ೧೯೩೭ರಲ್ಲಿ ಸಂಸ್ಥಾನದಲ್ಲಿನ ಒಟ್ಟು ೫೧೬೦ ಮೈಲಿಗಳ ಉದ್ದದ ರಸ್ತೆ ನಿರ್ಮಾಣ ಮಾಡಲಾಯಿತು. ಅದೇ ವರ್ಷದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿಯೂ ಜಲ್ಲಿ ರಸ್ತೆ ಮತ್ತು ಮಣ್ಣಿನ ರಸ್ತೆ ನಿರ್ಮಾಣ ಕಾರ್ಯ ಆರಂಭವಾಯಿತು.[೯೨] ೧೯೩೯ರಲ್ಲಿ ಗುಲಬರ್ಗಾದಲ್ಲಿ ಭೀಮಾ ನದಿಗೆ, ರಾಯಚೂರಿನಲ್ಲಿ ಕೃಷ್ಣಾ ನದಿಗೆ ಹಾಗೂ ಬೀದರ್‌ನಲ್ಲಿ ಮಂಜ್ರಾ ನದಿಗಳಿಗೆ ಮೇಲುಸೇತುವೆ ನಿರ್ಮಿಸುವ ಮುಖಾಂತರ ಈ ಜಿಲ್ಲೆಗಳಲ್ಲಿ ಉತ್ತಮ ರಸ್ತೆ ಸಾರಿಗೆ ವ್ಯವಸ್ಥೆಯಾಯಿತು. ಹೈದರಾಬಾದ್ ಯಾದಗಿರಿ ಮಾರ್ಗವಾಗಿ ಬಿಜಾಪುರಕ್ಕೆ ಹೋಗುವ ರಸ್ತೆಗೆ ಮೇಲುಸೇತುವೆಯನ್ನು ಭೀಮಾನದಿಗೆ ನಿರ್ಮಾಣ ಮಾಡಲಾಯಿತು. ಹೈದರಾಬಾದ್‌ದಿಂದ ರಾಯಚೂರು ಮಾರ್ಗವಾಗಿ ಬಳ್ಳಾರಿ ತಲುಪುವ ರಸ್ತೆಗೆ ಮೇಲುಸೇತುವೆಯನ್ನು ಕೃಷ್ಣಾ ನದಿಗೆ ನಿರ್ಮಾಣ ಮಾಡಲಾಯಿತು. ನಿಜಾಮ್ ಸರಕಾರ ನಿರ್ಮಿಸಿದ ಮೇಲುಸೇತುವೆಗಳ ವಿವರಗಳ ಪಟ್ಟಿ ಈ ಕೆಳಗಿನಂತಿದೆ.[೯೩]

ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ನಿರ್ಮಿಸಿದ ಮೇಲುಸೇತುವೆ ವಿವರ ಪಟ್ಟಿ

ಕ್ರಸಂ.	ಜಿಲ್ಲೆಯ ಹೆಸರು	ಮೇಲು ಸೇತುವೆ ಹೆಸರು	ನದಿ ಹೆಸರು	ಖರ್ಚಾದ ವೆಚ್ಚ
೧	ಗುಲಬರ್ಗಾ	ಭೀಮಾ ಬ್ರಿಡ್ಜ್	ಭೀಮಾನದಿ	೯.೩೭ ಲಕ್ಷ
೨	ಗುಲಬರ್ಗಾ	ಬೆಣೆತೋರ ಬ್ರಿಡ್ಜ್	ಕಾಗಿಣೆನದಿ	೨.೯೮ ಲಕ್ಷ
೩	ಗುಲಬರ್ಗಾ	ಕಾಗಿಣಬ್ರಿಡ್ಜ್	ಕಾಗಿಣನದಿ	೦.೪೩ ಲಕ್ಷ
೪	ಬೀದರ	ಮಾಂಜ್ರಾ ಬ್ರಿಡ್ಜ್	ಮಾಂಜ್ರಾನದಿ	೧.೩೨ ಲಕ್ಷ
೫	ಬೀದರ	ಕಾರಂಜಿ		೦.೫೮ ಲಕ್ಷ
೬	ರಾಯಚೂರು	ಕೃಷ್ಣಾ ಬ್ರಿಡ್ಜ್	ಕೃಷ್ಣಾನದಿ	೯.೫೦ ಲಕ್ಷ

ಆಕರ: ವೈಕುಂಠಂ ವೈ, ೨೦೦೨, ಸ್ಟೇಟ್ ಎಕಾನಮಿ ಆ್ಯಂಡ್ ಸೋಶಿಯಲ್ ಟ್ರಾನ್ಸ್‌ಫಾರ್ಮೇಷನ್, ಹೈದರಾಬಾದ್

ಮೇಲಿನ ಕೋಷ್ಟಕದಲ್ಲಿ ವಿವರಿಸಿರುವ ಮಾಹಿತಿ ಆಧರಿಸಿ ನಿಜಾಮ್ ಸರ್ಕಾರ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರಸ್ತೆ ಸಾರಿಗೆಯನ್ನು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ನದಿಗಳಿಗೆ ಮೇಲುಸೇತುವೆ ನಿರ್ಮಾಣ ಮಾಡಿದ್ದು ಕಂಡುಬರುತ್ತದೆ. ನಿಜಾಮ್ ಸಂಸ್ಥಾನದ ವ್ಯಾಪಾರ ಮತ್ತು ವಾಣಿಜ್ಯದ ಉಪಯುಕ್ತತೆ ದೃಷ್ಟಿಯಿಂದ ರಸ್ತೆಗಳನ್ನು ಅಚ್ಚುಕಟ್ಟಾಗಿ ನಿರ್ಮಿಸಲಾಯಿತು. ಆಡಳಿತ ನಡೆಸಲು ಅನುಕೂಲವಾಗಿದ್ದ ಪ್ರದೇಶಗಳಿಗೆ, ಕೈಗಾರಿಕಾ ಪ್ರದೇಶಗಳಿಗೆ, ಗುಡಿಕೈಗಾರಿಕೆ ಪ್ರದೇಶಗಳಿಗೆ ಆದ್ಯತೆಯ ಮೇರೆಗೆ ರಸ್ತೆ ನಿರ್ಮಾಣ ಕಾರ್ಯ ಕೈಗೊಂಡಿದ್ದು ಕಂಡುಬರುತ್ತದೆ. ವ್ಯಾಪಾರ ಕೇಂದ್ರಗಳಿಂದ ಕೃಷಿ ಉತ್ಪನ್ನಗಳನ್ನು ಸಾಗಿಸಲು ಸಹಾಯವಾಗುವ ಉದ್ದೇಶದಿಂದ ಅಂತಹ ಪ್ರದೇಶಗಳಿಗೆ ಮೊದಲ ಆದ್ಯತೆ ನೀಡಿ ರಸ್ತೆ ನಿರ್ಮಾಣ ಮಾಡಲಾಯಿತು. ರಸ್ತೆ ಸಾರಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ೧೯೩೫ರಲ್ಲಿ ಪ್ರತ್ಯೇಕ ರಸ್ತೆ ಸಾರಿಗೆ ಇಲಾಖೆ ಸ್ಥಾಪಿತವಾಗಿದ್ದು ಇದರಿಂದ ನಿಜಾಮ್ ಸರಕಾರ ರಸ್ತೆ ಸಾರಿಗೆಗೆ ನೀಡಿದ್ದ ಮಹತ್ವವನ್ನು ಅರ್ಥೈಸಿಕೊಳ್ಳಬಹುದು.[೪]

೨. ರೈಲ್ವೆ ಸಾರಿಗೆ

ಹೈದರಾಬಾದ್ ಸಂಸ್ಥಾನದ ವ್ಯಾಪಾರ ಮತ್ತು ವಾಣಿಜ್ಯ ಅಭಿವೃದ್ಧಿಗೆ ರೈಲ್ವೆ ಮಾರ್ಗಗಳು ತುಂಬ ಉಪಯುಕ್ತವಾಗಿದ್ದವು ಎಂಬುದನ್ನು ಮನಗಂಡು ರೈಲ್ವೆ ಸಾರಿಗೆ ಕಾಮಗಾರಿ ಕಾರ್ಯ ಆರಂಭವಾಯಿತು.[೫] ಬ್ರಿಟಿಶ್ ವಸಾಹತು ಪ್ರದೇಶಗಳಾದ ಮದ್ರಾಸ್ ಮತ್ತು ಮುಂಬೈ ಪ್ರೆಸಿಡೆನ್ಸಿಗಳ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರ ನಡೆಯಲು ಅಗತ್ಯವಾದ ಸರಕು-ಸಾಮಗ್ರಿಗಳ ಸಾಗಾಣಿಕೆಗಾಗಿ ನಿಜಾಮನ ಮುಖಾಂತರ ಬ್ರಿಟಿಶರು ತಮ್ಮ ಉದ್ದೇಶವನ್ನು ಈಡೇರಿಸಿಕೊಂಡಿದ್ದು ಕಂಡುಬರುತ್ತದೆ. ನಿಜಾಮರು ಬ್ರಿಟಿಶರ ಸಹಾಯ ಪಡೆದು ರೈಲ್ವೆ ಮಾರ್ಗಗಳನ್ನು ಆರಂಭಿಸಿದ್ದರಿಂದ ಸಂಸ್ಥಾನದ

ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳಿಗೆ ಉತ್ತೇಜನ ದೊರೆಯಿತು. ನಿಜಾಮ್ ಮತ್ತು ಬ್ರಿಟಿಶರು ತಮ್ಮ ಹಿತಾಸಕ್ತಿಗಳಿಗನುಗುಣವಾಗಿ ರೈಲ್ವೆಯನ್ನು ಸ್ಥಾಪನೆ ಮಾಡಿದ್ದು ಗುರುತಿಸಬಹುದು.[೯೬] ಸಂಸ್ಥಾನದ ರೈಲ್ವೆ ಸಾರಿಗೆ ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲೂ ವಿಸ್ತರಿಸಿದ್ದು ಗಮನಿಸಬಹುದು.[೯೭] ಹೈದರಾಬಾದ್ ಸಂಸ್ಥಾನದಲ್ಲಿ ರೈಲ್ವೆ ಸಾರಿಗೆಯನ್ನು ಸ್ಥಾಪನೆ ಮಾಡಲು ೧೮೬೦ರಲ್ಲಿ ಪೂರ್ವ ಯೋಜನೆ ಹಾಕಿಕೊಳ್ಳಲಾಯಿತು. ೧೮೭೪ ಅಕ್ಟೋಬರ್‌ರಂದು ಸಿಕಂದರಾಬಾದ್‌ರಿಂದ ವಾಡಿಯವರೆಗೆ ಸುಮಾರು ೧೨೧ ಮೈಲು ಉದ್ದದ ಬ್ರಾಡ್‌ಗೇಜ್ ರೈಲು ಸಂಪರ್ಕ ಅರಂಭವಾಗಿತ್ತು. ನಂತರ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಎರಡು ಬ್ರಾಡ್‌ಗೇಜ್ ರೈಲುಗಳನ್ನು ಓಡಿಸಲಾಯಿತು. ಒಂದು ಸಿಕಂದರಾಬಾದರಿಂದ ಗುಲಬರ್ಗಾ ಮಾರ್ಗವಾಗಿ ಮುಂಬಯಿಗೆ ಸಂಪರ್ಕ ಕಲ್ಪಿಸಿದರೆ, ಮತ್ತೊಂದು ಸಿಕಂದರಾಬಾದ್‌ದಿಂದ ರಾಯಚೂರು ಮಾರ್ಗವಾಗಿ ಮದ್ರಾಸಿಗೆ ಸಂಪರ್ಕ ಕಲ್ಪಿಸಿತು. ಮದರಾಸ್ ಮತ್ತು ಮುಂಬಯಿ ಪ್ರೆಸಿಡೆನ್ಸಿಗಳ ನಡುವೆ ರೈಲ್ವೆ ಮಾರ್ಗಗಳ ನಿರ್ಮಾಣ ವ್ಯಾಪಾರ ಸರಕು ಸಾಗಾಣಿಕೆಗೆ, ರಫ್ತು ಮತ್ತು ಆಮದು ಸರಕುಗಳ ಸಾಗಣೆಗೆ ಉಪಯುಕ್ತವಾಗಿ ಪರಿಣಮಿಸಿದ್ದನ್ನು ಗಮನಿಸಬಹುದು.[೯೮]

ಹೈದರಾಬಾದ್ ಸಂಸ್ಥಾನದ ರೈಲ್ವೆ ಸಾರಿಗೆ ಆರಂಭದಲ್ಲಿ ಸ್ಟೇಟ್ ರೈಲ್ವೆ ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುತ್ತಿತ್ತು. ನಂತರ ಅದನ್ನು ನಿಜಾಮ್ ಸರ್ಕಾರವು ಪ್ರತ್ಯೇಕವಾದ ಇಲಾಖೆಯನ್ನು ಆರಂಭಿಸುವುದರ ಮೂಲಕ ಇಲಾಖೆಯ ಅಧೀನಕ್ಕೆ ವರ್ಗಾಯಿಸಲಾಯಿತು. ಈ ಇಲಾಖೆ ಸುಮಾರು ೧೮೮೫ರಿಂದ ೧೯೩೦ರವರೆಗೆ ಕಾರ್ಯ ನಿರ್ವಹಿಸಿತು. ರೈಲ್ವೆ ಇಲಾಖೆಯನ್ನು ಸಂಪೂರ್ಣವಾಗಿ ೧೯೩೦ ಏಪ್ರಿಲ್ ೧ ರಂದು ಸರಕಾರದ ಅಧೀನಕ್ಕೆ ತೆಗೆದುಕೊಂಡು ನಿಜಾಮ್ ರಾಜ್ಯ ರೈಲ್ವೆ ಎಂದು ಹೆಸರಿಸಲಾಯಿತು.

ಗುಲಬರ್ಗಾದಲ್ಲಿದ್ದ ಸಿಮೆಂಟ್ ಕಾರ್ಖಾನೆ ಮತ್ತು ಹತ್ತಿಬಟ್ಟೆ ಕೈಗಾರಿಕೆಗಳಿಗೆ, ರಾಯಚೂರಿನಲ್ಲಿದ್ದ ಹತ್ತಿಬಟ್ಟೆ ಮತ್ತು ಬಂಗಾರದ ಕೈಗಾರಿಕೆಗಳಿಗೂ ರೈಲ್ವೆ ಸಾರಿಗೆ ವ್ಯವಸ್ಥೆಯಿಂದ ಅನುಕೂಲವಾಯಿತು. ಇತರ ಪ್ರದೇಶಗಳೊಂದಿಗೆ ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಳವಾಗಿ ಪೇಟೆ ಪಟ್ಟಣಗಳು ಅಭಿವೃದ್ಧಿಯಾದರೆ ಬಂಡವಾಳಶಾಹಿಗಳ ಬೆಳವಣಿಗೆಗೂ ರೈಲ್ವೆ ಅನುಕೂಲಕರ ವಾತಾವರಣ ನಿರ್ಮಿಸಿತು.[೯೯]

೭.೩.೪. ಬ್ಯಾಂಕ್ ಮತ್ತು ಹಣಕಾಸಿನ ವ್ಯವಹಾರ

ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆಯ ರೂಪಿಕೆ ಮತ್ತು ಅಭಿವೃದ್ಧಿಯಲ್ಲಿ ಕೃಷಿ ಮತ್ತು ಕೈಗಾರಿಕಾ ವಲಯಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಈ ವಲಯಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಬೇಕಾಗಿರುವ ಬಂಡವಾಳ ಮತ್ತು ಹಣಕಾಸಿನ ನೆರವು ಒದಗಿಸುವುದು ಸಂಘಟಿತ ಮತ್ತು ಅಸಂಘಟಿತ ವಲಯದ ಹಣಕಾಸಿನ ಸಂಸ್ಥೆಗಳಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ

ವ್ಯವಸಾಯ ಮತ್ತು ವ್ಯವಸಾಯೇತರ ಚಟುವಟಿಕೆಗಳನ್ನು ಉತ್ತೇಜಿಸುತ್ತಿರುವ ಸಹಕಾರಿ ಮಾರಾಟ ವ್ಯವಸ್ಥೆ ಸಾಂಸ್ಕೃತಿಕ ಜೀವನದ ಮೇಲೆ ತನ್ನದೇ ಪ್ರಭಾವ ಬೀರುತ್ತದೆ. ನಿಜಾಮ್ ಆಳ್ವಿಕೆಯ ಕಾಲಘಟ್ಟದಲ್ಲೂ ಹಣಕಾಸು ಸಂಸ್ಥೆಗಳು ಮತ್ತು ಲೇವಾದೇವಿ ಸಂಸ್ಥೆಗಳು ಹುಟ್ಟಿಕೊಂಡಿದ್ದವು. ಅವು ಕೃಷಿಕ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಅಧಿಕ ಮಟ್ಟದ ಹಣಕಾಸು ನೆರವು ಒದಗಿಸುತ್ತಿದ್ದುದಲ್ಲದೆ ಈ ಸಂಸ್ಥೆಗಳಿಂದ ರೈತಕಾರ್ಮಿಕರು ಮತ್ತು ಕುಶಲಕರ್ಮಿಗಳು ಶೋಷಣೆಗೆ ಒಳಗಾಗುತ್ತಿದ್ದುದು ಕಂಡುಬರುತ್ತದೆ. ನಿಜಾಮ್ ಸರಕಾರ ಈ ಪ್ರದೇಶದಲ್ಲಿ ಸಹಕಾರಿ ಸಂಘಗಳ ಸ್ಥಾಪನೆ ಮಾಡುವುದರೊಂದಿಗೆ ಅವುಗಳ ಆರ್ಥಿಕ ವ್ಯವಹಾರ ನಿಯಂತ್ರಣ ಕಾಯಿದೆಗಳನ್ನು ಜಾರಿಗೆ ತಂದಿತ್ತು.

ಸಾಹುಕಾರರು, ವರ್ತಕರು, ಶ್ರೀಮಂತ ಜಮೀನ್ದಾರರು, ದೇಶಪಾಂಡೆ, ದೇಶಮುಖ-ಇನಾಮದಾರ ಮುಂತಾದ ಖಾಸಗಿ ಲೇವಾದೇವಿದಾರರು ಕೃಷಿಕರಿಗೆ ಸಾಲ ನೀಡುವ ಮೂಲಕ ಗ್ರಾಮೀಣ ಪ್ರದೇಶದ ಹಣಕಾಸು ವ್ಯವಹಾರ ನಡೆಸುತ್ತಿದ್ದರು. ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಹಣಕಾಸಿನ ಖಾಸಗಿ ವ್ಯವಹಾರಗಳು ಯಾವುದೇ ನಿರ್ಬಂಧವಿಲ್ಲದೆ ರೂಢಿಗತ ಖಾಸಗಿ ನಿಯಮಗಳೊಂದಿಗೆ ಮುಂದುವರೆದಿತ್ತು. ಇದರೊಂದಿಗೆ ಆಂತರಿಕ ಲೇವಾದೇವಿ ಸಂಸ್ಥೆಯೂ ಕೈ ಜೋಡಿಸಿತ್ತು.

ಖಾಸಗಿ ಸಾಹುಕಾರರು ಪರಂಪರಾಗತವಾಗಿ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಬಹು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತ ಬಂದಿದ್ದು ಲೇವಾದೇವಿಗಾರರು ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವ್ಯಾಪಿಸಿಕೊಂಡಿದ್ದು ಕಂಡುಬರುತ್ತದೆ.[೧೦೦]

೭.೩.೫. ನಾಣ್ಯಗಳು

ಹೈದರಾಬಾದ್ ನಿಜಾಮರು ನಾಣ್ಯ ಮುದ್ರಣ ಮತ್ತು ಚಲಾವಣೆಯನ್ನು ವ್ಯವಸ್ಥಿತವಾಗಿ ಜಾರಿಗೆ ತಂದಿದ್ದರು. ನಿಜಾಮರು ಚಲಾವಣೆಗೆ ತಂದಿದ್ದ ನಾಣ್ಯಗಳನ್ನು ಕುರಿತು ೧೮೫೭ರ ವರೆಗೂ ಖಚಿತ ದಾಖಲೆಗಳು ದೊರೆಯುತ್ತಿರಲ್ಲಿಲ್ಲ. ಈ ನಂತರದಲ್ಲಿ ಸಿಕ್ಕಿರುವ ನಾಣ್ಯಗಳ ಆಧಾರದ ಮೇಲೆ ನಿಜಾಮರ ನಾಣ್ಯ ವ್ಯವಸ್ಥೆ ಕುರಿತ ಮಾಹಿತಿಯನ್ನು ವಿವರಿಸಲಾಗಿದೆ. ಮೊಗಲರ ನಾಣ್ಯ ಪದ್ಧತಿಯಂತೆ ನಿಜಾಮರ ನಾಣ್ಯಗಳಲ್ಲೂ ಅಸಫಜಾಹ ಎಂಬ ಅಲೇಕ ಮುದ್ರೆ ಮತ್ತು ಸಂವತ್ಸರ ಮುದ್ರಿಸುವ ಪದ್ಧತಿ ಮುಂದುವರೆದಿತ್ತು. ಪ್ರಧಾನಮಂತ್ರಿ ಸಾಲಾರ್‌ಜಂಗ್‌ನು ನಾಣ್ಯ ಪದ್ಧತಿಯಲ್ಲಿ ಅನೇಕ ಸುಧಾರಣೆಗಳನ್ನು ತಂದನು. ಹೈದರಾಬಾದಿನಲ್ಲಿ ನಾಣ್ಯ ಟಂಕಿಸುವ ಕಮ್ಮಟಶಾಲೆ ಸ್ಥಾಪಿಸಿದನು. ಟಂಕಶಾಲೆಯಲ್ಲಿ ವ್ಯಾಪಾರಸ್ಥರು, ಸರದಾರರು, ಅಧಿಕಾರಿ ವರ್ಗದವರು, ಅರಸು ಮನೆತನದವರು

ತಮ್ಮಲ್ಲಿದ್ದ ಬೆಳ್ಳಿಯನ್ನು ನೀಡಿ ಬೆಳ್ಳಿ ನಾಣ್ಯಗಳನ್ನು ಪಡೆಯುತ್ತಿದ್ದರು. ಈ ಬಗೆಯ ವಿನಿಮಯ ಕಾರ್ಯಕ್ಕೆ ಸೇವಾಶುಲ್ಕವನ್ನು ವಿಧಿಸಲಾಗುತ್ತಿತ್ತು. ನಾಣ್ಯ ಟಂಕಿಸುವ ಕಾರ್ಯ ೧೮೯೩ರವರೆಗೂ ಮುಂದುವರೆದಿತ್ತು. ನಿಜಾಮರ ಅವಧಿಯಲ್ಲಿ ಸುಮಾರು ೨೪ ಬಗೆಯ ನಾಣ್ಯಗಳು ಚಲಾವಣೆಯಲ್ಲಿದ್ದವು ಎಂದು ತಿಳಿದುಬರುತ್ತದೆ. ನಿಜಾಮರ ಆರು ಬಗೆಯ ನಾಣ್ಯಗಳು ಪ್ರಸ್ತುತ ಬಿಜಾಪುರ ಪಟ್ಟಣ ಮತ್ತು ಗದಗ ಜಿಲ್ಲೆಯಲ್ಲಿ ದೊರಕಿದ್ದು ಅವುಗಳ ವಿವರ ಈ ಕೆಳಗಿನಂತಿದೆ.

ಧಾತು: ತಾಮ್ರ, ನಿಕ್ಕಲ್

ಆಕಾರ: ಗೋಲಾಕಾರ, ಚೌಕಾಕಾರ

ತೂಕ: ೧೪, ೪, ಮತ್ತು ೫ ಗ್ರಾಂ

ಮುಂಭಾಗ: ನಿಜಾಮ್ ಮುಲ್ಕ್ ಅಸಫಜಹಾ

ಹಿಂಭಾಗ: ಜುಲುಸ್–ಎ–ಮೈಮನತ್ ಮಾನಸ್ ಜರ್ಬ–ಎ– ಫರ್ಖುಂದಾ ಬುನಯಾದ್–ಎ–ಹೈದ್ರಾಬಾದ್

ಚಿಹ್ನೆ: ಚಾರಮಿನಾರ್(ಕೇವಲ ಒಂದು ನಾಣ್ಯದ ಮೇಲಿದೆ)

ಮೌಲ್ಯ: ದೋ–ಪೈ, ಎಕ–ಅನ್ನಾ–ಚಾರ್–ಅನ್ನಾ

ಭಾಷೆ: ಪರ್ಶಿಯನ್[೧೦೧]

ಹೈದರಾಬಾದ್‌ನ ಮಹತ್ವದ ಐತಿಹಾಸಿಕ ಕಟ್ಟಡ ಚಾರ್‌ಮಿನಾರ್ ಮುದ್ರೆ ಹೊಂದಿದ ನಾಣ್ಯ ಕ್ರಿಶ ೧೯೧೪ರಲ್ಲಿ ಬಳಕೆಯಲ್ಲಿದ್ದುದು ಹೈದರಾಬಾದ್ ಸಂಸ್ಥಾನದ ನಾಣ್ಯದ ಕ್ರಮ ಪದ್ಧತಿ ಕುರಿತ ಅರಿವನ್ನು ಬಲಪಡಿಸುತ್ತದೆ. ನಾಣ್ಯದ ಒಂದು ಬದಿಯಲ್ಲಿ ಐತಿಹಾಸಿಕ ಚಾರ್‌ಮಿನಾರ್ ಚಿತ್ರ ಇನ್ನೊಂದು ಬದಿಯಲ್ಲಿ ಅರೇಬಿಕ್ ಲಿಪಿಯಲ್ಲಿ 'ಮೀಮ' ಎಂಬ ಅಂದಿನ ಆಳರಸರ ಹೆಸರನ್ನೂ ಅದರ ಮುಖಬೆಲೆಯನ್ನೂ ಹೊಂದಿರುವುದು ಈ ನಾಣ್ಯದ ವಿಶೇಷ ಲಕ್ಷಣವಾಗಿದೆ. ಕಾಲಾನಂತರದಲ್ಲಿ ಮೀಮ ಪದದ ಬಳಕೆಯ ಬದಲಾಗಿ 'ಐನ್' ಪದ ಬಳಕೆಯಲ್ಲಿದ್ದುದು ತಿಳಿದುಬರುತ್ತದೆ. ಯಂತ್ರಗಳಿಂದ ತಯಾರಿಸಿದ ನಾಣ್ಯಗಳನ್ನು ಸಾಮಾನ್ಯವಾಗಿ ಹಾಲಸಿಕ್ಕ ನಾಣ್ಯಗಳು ಎಂದು ಕರೆಯಲಾಗುತ್ತಿತ್ತು. ನಂತರ ಅವನ್ನು ಮೆಹಬೂಬಮಾ ಸಿಕ್ಕ, ಉಸ್ಮಾನಿಯ ಸಿಕ್ಕ ಎಂದೂ ಹೆಸರಿಸಲಾಗುತ್ತಿತ್ತು.

ನಿಜಾಮ್ ಸರಕಾರದ ನಾಣ್ಯ ಮತ್ತು ಬ್ರಿಟಿಶ್ ಸರಕಾರ ನಾಣ್ಯ ನಡುವೆ ವಿನಿಮಯ ದರ ಬ್ರಿಟಿಶ್ ಸರಕಾರದ ೧೦೦ ರೂಗೆ ಉಸ್ಮಾನಿಯಾ ನಾಣ್ಯ ೧೧೬.೧೦ (ಸುಮಾರು ೧೧೭) ಆಗಿತ್ತು. ೧೯೧೨ರಲ್ಲಿ ಹೈದರಾಬಾದ್ ಕರೆನ್ಸಿ ಅಧಿನಿಯಮದ ಅನ್ವಯ ನಾಣ್ಯಪದ್ಧತಿಯಲ್ಲಿ ಗರಿಷ್ಠ ಮತ್ತು ಕನಿಷ್ಠ ವಿನಿಮಯ ದರ ನಿಗದಿಗೊಳಿಸಲಾಯಿತು.[೧೦೨]

ಹೈದರಾಬಾದ್ ಸರಕಾರದ ಒಂದು ರೂಪಾಯಿ ಬ್ರಿಟಿಶ್ ಇಂಡಿಯಾದ ೧೩೧/೨ ಆಣೆಗೆ ವಿನಿಮಯವಾಗುತ್ತಿತ್ತು. ಬೆಳ್ಳಿಯ ನಾಣ್ಯಗಳನ್ನು ರೂಪಾಯಿ ಎಂದು ಕರೆದರೆ ಚಿನ್ನದ ನಾಣ್ಯವನ್ನು 'ಅಸರ್ಫಿ' ಎಂದು ಕರೆಯಲಾಗುತ್ತಿತ್ತು. ೧೯೧೯ರಲ್ಲಿ ಚಲಾವಣೆಗೆ ಬಂದ ನಿಕ್ಕಲ್ ಲೋಹದಲ್ಲಿ ಟಂಕಿಸಿದ ಒಂದು ಆಣೆ ನಾಣ್ಯ ೧೯೫೭ರವರೆಗೂ ಈ ಪ್ರದೇಶದಲ್ಲಿ ಚಲಾವಣೆಯಲ್ಲಿತ್ತು. ಒಂದಾಣೆ ನಾಣ್ಯದ ಹಿಂಬದಿಯಲ್ಲಿ ಅದರ ಮುಖಬೆಲೆಯನ್ನು ಇಂಗ್ಲಿಶ್, ಕನ್ನಡ, ತೆಲುಗು ಮತ್ತು ಮರಾಠಿ ಭಾಷೆಗಳ ಅಂಕಿ ಬಳಸಿ ನಾಲ್ಕು ಮೂಲಗಳಲ್ಲಿ ಮುದ್ರಿಸಿದ್ದುದು ಕಂಡುಬರುತ್ತದೆ. ೧೯೧೭ರಲ್ಲಿ ಜಾರಿಗೆ ಬಂದ ಹೈದರಾಬಾದ್ ಪೇಪರ್ ಕರೆನ್ಸಿ ಕಾನೂನಿನನ್ವಯ ೧೯೧೮ರಲ್ಲಿ ಪೇಪರ್ ಕರೆನ್ಸಿ ವಿಭಾಗವನ್ನು ಆರಂಭಿಸಿ ಒಂದು, ಐದು, ಹತ್ತು, ನೂರು ರೂಪಾಯಿ ಮುಖಬೆಲೆಯ ಕಾಗದ ಹಣವನ್ನು ಚಲಾವಣೆಗೆ ತರಲಾಯಿತು. ಇದು ೧೯೪೮ರವರೆಗೆ ಯಶಸ್ವಿಯಾಗಿ ಮುಂದುವರೆಯಿತು.[೧೦೩]

೭.೪. ಆರ್ಥಿಕ ಸುಧಾರಣೆ ಕ್ರಮಗಳು

ಸಾಲಾರ್‌ಜಂಗ್ ಮೊಗಲರ ಕಾಲದಿಂದಲೂ ಜಾರಿಯಲ್ಲಿದ್ದ ಕೃಷಿ, ಭೂಕಂದಾಯ ಪದ್ಧತಿಗಳಲ್ಲಿ ಕೆಲವು ಮಾರ್ಪಾಡು ಮಾಡಿ ಕಾರ್ಯರೂಪಕ್ಕೆ ತಂದನು. ಭೂಕಂದಾಯವನ್ನು ಕ್ರಮಬದ್ಧ ಮತ್ತು ವ್ಯವಸ್ಥಿತ ರೀತಿಯಲ್ಲಿ ಜಾರಿಗೊಳಿಸುವ ಮೂಲಕ ಸಂಸ್ಥಾನದ ಆರ್ಥಿಕತೆಗೆ ಉತ್ತೇಜನ ನೀಡಿದನು.[೧೦೪] ಸಾಲಾರ್‌ಜಂಗ್‌ನು ಕಾರ್ಯರೂಪಕ್ಕೆ ತಂದಿದ್ದ ಯೋಜನೆಗಳಿಗೆ ನಂತರ ಸಾಂವಿಧಾನಿಕ ಕಾನೂನು ರೂಪ ನೀಡಲಾಯಿತು. ಕೃಷಿ ವ್ಯವಸ್ಥೆ ಮತ್ತು ವ್ಯಾಪಾರ-ವಾಣಿಜ್ಯ ಕ್ಷೇತ್ರಕ್ಕೆ ಹೊಸ ಚೈತನ್ಯ ತುಂಬಲಾಯಿತು.[೧೦೫] ಉಸ್ಮಾನ್ ಅಲಿಖಾನನು ತನ್ನ ತಂದೆಯ ಯೋಜನೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಕೃಷಿ ಸಮಸ್ಯೆ ಅಧ್ಯಯನ ಮಾಡಲು ಕೃಷಿ ನಿಯೋಗಗಳು, ಕೃಷಿ ಸುಧಾರಣ ಸಮಿತಿಗಳನ್ನು ನೇಮಕ ಮಾಡಿದನು. ಆರ್ಥಿಕ ಸುಧಾರಣೆ ತರುವ ನಿಟ್ಟಿನಲ್ಲಿ ಕೃಷಿಕರಿಗೆ ಸಾಲ ನೀಡುವ ಪದ್ಧತಿ ಜಾರಿಗೊಳಿಸಿ ಕೃಷಿ ಉತ್ಪಾದನೆ ಹೆಚ್ಚಿಸಲು ಪ್ರೋತ್ಸಾಹಿಸಿದನು ಮತ್ತು ಕೃಷಿ ಮಾರುಕಟ್ಟೆಗಳನ್ನು ಸ್ಥಾಪಿಸಿದನು. ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಯ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಲು ನಿಜಾಮರು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದುದು ಗಮನಾರ್ಹವಾಗಿದೆ.[೧೦೬]

೭.೪.೧. ಸಾಲಾರ್‌ಜಂಗ್‌ನ ಸುಧಾರಣೆಗಳು

ಸಾಲಾರ್‌ಜಂಗ್ ಶೋಚನೀಯ ಸ್ಥಿತಿಯಲ್ಲಿದ್ದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕ್ರಮ ಬದ್ಧವಲ್ಲದ ಭೂಕಂದಾಯ ವಸೂಲಿ ಮತ್ತು ಪ್ರಬಲ ಜಹಾಗೀರದಾರರು, ವರ್ತಕ ಸಮುದಾಯಗಳನ್ನು ನಿಯಂತ್ರಿಸಲು ಪ್ರತ್ಯೇಕ ಇಲಾಖೆ ಆರಂಭಿಸಿ ಅದನ್ನು ಇನಾಮಿ ಎಂದು ಕರೆದನು. ಕೃಷಿ ಭೂಮಿಯನ್ನು ವಿಸ್ತರಿಸಲು ಪಾಳು-ಭೂಮಿ ಸಾಗುವಳಿ ಮಾಡುವ ನಿಯಮಗಳನ್ನು ಜಾರಿಗೊಳಿಸಿದನು.

ಗುತ್ತಿಗೆದಾರ ಕಂದಾಯ ಪದ್ಧತಿಯನ್ನು ಹಾಗೂ ಸರ್‌ಬಸ್ಥದಾರ ಪದ್ಧತಿಯನ್ನು ರದ್ದುಪಡಿಸಿದನು. ಕಂದಾಯ ವಸೂಲಾತಿಯನ್ನು ಸರಕಾರದ ನೇರ ಅಧೀನಕ್ಕೆ ತೆಗೆದುಕೊಂಡು ಕಂದಾಯ ಅಧಿಕಾರಿಗಳನ್ನು ನೇಮಕ ಮಾಡಿದನು.[೧೦೭]

ಗ್ರಾಮೀಣ ಮಟ್ಟದಲ್ಲಿ ಭೂಕಂದಾಯ ಸಂಗ್ರಹಿಸುತ್ತಿದ್ದ ಸ್ಥಳೀಯ ಅಧಿಕಾರಿಗಳಾದ ಪೊಲೀಸ್ ಪಾಟೀಲ್, ಮಾಲಿಪಾಟೀಲ್, ಪಟೇಲ, ಗಿರದವಾರ, ಪಟ್ವಾರಿ ಗ್ರಾಮಾಧಿಕಾರಿಗಳಿಗೆ ಸರಕಾರ ನೀಡಿದ್ದ ಇನಾಮು ಭೂಮಿಯನ್ನು ಅವರಿಂದ ಮರಳಿ ಪಡೆದನು. ಸಾಗುವಳಿದಾರರಿಗೆ ಸರಕಾರ ನಿಗದಿಪಡಿಸಿದ್ದ ತೆರಿಗೆಗಿಂತ ಗ್ರಾಮಾಧಿಕಾರಿ ಅಧಿಕ ತೆರಿಗೆಯನ್ನು ವಿಧಿಸಿ ಶೋಷಣೆ ಮಾಡುತ್ತಿದ್ದರು. ಇದನ್ನು ಮನಗಂಡ ಸಾಲಾರ್‌ಜಂಗ್‌ನು ಕಂದಾಯ ವಸೂಲಿ ಅಧಿಕಾರಿಗಳಿಗೆ ಕಂದಾಯ ವಿವರ ಪಟ್ಟಿ ನಿಗದಿಪಡಿಸಿ ಅದಕ್ಕನುಗುಣವಾಗಿ ಕಂದಾಯ ಸಂಗ್ರಹಿಸಲು ಆದೇಶ ನೀಡಿ ಗ್ರಾಮಾಧಿಕಾರಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದನು.[೧೦೮]

ಸಾಲಾರ್‌ಜಂಗ್‌ನು ಕೃಷಿ ಭೂಮಿಯನ್ನು ಸ್ಥೂಲವಾಗಿ ಅಳತೆ ಮಾಡಿ ಕೂರಿಗಿ ಘಟಕವನ್ನು ಎಕರೆಯಾಗಿ ಪರಿವರ್ತಿಸಿ, ಮಣ್ಣಿನ ಫಲವತ್ತತೆ ಆಧಾರದ ಮೇಲೆ ಭೂಕಂದಾಯ ನಿಗದಿಪಡಿಸಿದನು. ಹತ್ತು ವರ್ಷಗಳಿಗೊಮ್ಮೆ ಕಂದಾಯ ಪರಿಷ್ಕರಿಸುವ ಪದ್ಧತಿಯನ್ನು ಜಾರಿಗೊಳಿಸಿದನು. ರೈತರಿಗೆ ಭೂಕಂದಾಯ ಪಾವತಿ ಪುಸ್ತಕವನ್ನು ನೀಡಿ ಅವರು ಪಾವತಿ ಮಾಡಿದ ಕಂದಾಯ ವಿವರದೊಂದಿಗೆ ಭೂವಿಸ್ತೀರ್ಣ ದಾಖಲಿಸುವ ಕ್ರಮ ಜಾರಿಗೆ ತಂದನು. ಸಾಲಾರ್‌ಜಂಗ್‌ನು ಆರ್ಥಿಕ ಸ್ಥಿತಿ ಸುಧಾರಣೆಯ ಅನೇಕ ಕ್ರಮಗಳನ್ನು ಕೈಗೊಂಡಿದ್ದುದು ಇದರಿಂದ ತಿಳಿದುಬರುತ್ತದೆ.[೧೦೯]

೭.೪.೨. ಕೃಷಿ ಸುಧಾರಣೆ ಕ್ರಮಗಳು

ಸಂಸ್ಥಾನದ ಆದಾಯದಲ್ಲಿ ಕೃಷಿ ಕ್ಷೇತ್ರದ ಪಾಲು ಅಗ್ರಗಣ್ಯವಾಗಿದ್ದು, ಈ ಕ್ಷೇತ್ರವನ್ನು ಸುಧಾರಿಸಲು ಅನೇಕ ಕ್ರಮಗಳನ್ನು ಜಾರಿಗೆ ತರಲಾಗಿತ್ತು. ನಿಜಾಮರು ಕೃಷಿ ಉತ್ಪನ್ನವನ್ನು ಹೆಚ್ಚಿಸಲು ಕೃಷಿ ಸಂಶೋಧನಾ ಮಂಡಳಿಯನ್ನು ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶಗಳಾದ ಗುಲಬರ್ಗಾ, ಬೀದರ್ ಮತ್ತು ರಾಯಚೂರು ಪ್ರದೇಶಗಳಿಗೆ ಪ್ರತ್ಯೇಕ ವಿಭಾಗೀಯ ಮಂಡಳಿಯನ್ನು ಸ್ಥಾಪಿಸಿದ್ದರು. ಸಂಶೋಧನಾ ಪ್ರಯೋಗ ಮಂಡಳಿ ಕೃಷಿ ಜಮೀನಿನ ಮಣ್ಣನ್ನು ಪರೀಕ್ಷಿಸಿ ಮಣ್ಣಿನ ಫಲವತ್ತತೆಯ ಆಧಾರದ ಮೇಲೆ ಬೆಳೆಗಳನ್ನು ಬೆಳೆಯಲು ರೈತರಿಗೆ ಸಲಹೆ ನೀಡುತ್ತಿತ್ತು. ಸಂಶೋಧನಾ ಪ್ರಯೋಗ ಮಂಡಳಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಖರೀಫ ಮತ್ತು ರಾಬಿ ಬೆಳೆಗಳನ್ನು ಅಳವಡಿಸಿತು. ಜೋಳ, ಕಡಲೆಕಾಯಿ, ಬಜರಾ ಮತ್ತು ಹತ್ತಿ ಖರೀಫ ಬೆಳೆಗಳಾಗಿದ್ದವು. ಹತ್ತಿ, ರಾಬಿ ಜೋಳ, ಗೋಧಿ ಬೆಳೆಗಳು ರಾಬಿ ಬೆಳೆಗಳಾಗಿದ್ದು ಇವನ್ನು ಸಂಶೋಧನಾತ್ಮಕ ಪ್ರಯೋಗದಲ್ಲಿ ಒಳಪಡಿಸಿ

ಇಳುವರಿ ಹೆಚ್ಚಿಸಲು ಅನೇಕ ಕ್ರಮಗಳನ್ನು ಜಾರಿಗೊಳಿಸಲಾಯಿತು. ಈ ಬೆಳೆಗಳನ್ನು ಬೆಳೆಯುವ ಪೂರ್ವದಲ್ಲಿ ಭೂಮಿಯನ್ನು ಹದಮಾಡಿ ಅದಕ್ಕೆ ಸರಿಯಾದ ಕ್ರಮದಲ್ಲಿ ಗೊಬ್ಬರ ಸಿಂಪಡಿಸಿ ಬಿತ್ತನೆ ಮಾಡಲು, ಕಳೆ ತೆಗೆಸಿ ಗೊಬ್ಬರ ಹಾಕಿ, ಕೃಷಿ ಉತ್ಪಾದನೆಯಲ್ಲಿ ಇಳುವರಿ ಹೆಚ್ಚಿಸುವ ಮಾಹಿತಿ ನೀಡುತ್ತಿತ್ತು.[೧೧೦]

ನಿಜಾಮನು ಕೃಷಿ ಉತ್ಪಾದನೆ ಹೆಚ್ಚಿಸಲು ರೈತರಿಗೆ ಕೃಷಿ ಸಾಲ ವಿತರಿಸಲು, ತಕ್ಕಾವಿ ಸಾಲ ಯೋಜನೆ ಜಾರಿಗೊಳಿಸಿದನು. ಭೂಮಿಯ ಆಧಾರದ ಮೇಲೆ ರೈತರಿಗೆ ಕೃಷಿ ಸಾಲ ವಿತರಿಸಲಾಗುತ್ತಿತ್ತು. ಹೈದರಾಬಾದ್ ಕರ್ನಾಟಕ ಪ್ರದೇಶದ ಗುಲಬರ್ಗಾ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ತಕ್ಕಾವಿ ಕೃಷಿ ಸಾಲ ಪಡೆದುಕೊಂಡಿದ್ದನ್ನು ಗಮನಿಸಬಹುದು.[೧೧೧]

ನಿಜಾಮ್ ಸರಕಾರ ಕೃಷಿ ಸಮಸ್ಯೆ ಅಧ್ಯಯನ ಮಾಡಲು ಕೃಷಿ ಸುಧಾರಣ ಸಮಿತಿಯನ್ನು ೧೯೪೦ರಲ್ಲಿ ನೇಮಿಸಿತು. ಎನ್.ಮಾಧವರಾವ್ ಅಧ್ಯಕ್ಷತೆಯ ಈ ಸಮಿತಿಯಲ್ಲಿ ಗುಲಾಂ ಹೈದರ, ಆರ್.ವಿ.ರಾವ್ ಸದಸ್ಯರಿದ್ದು, ಶ್ರೀನಿವಾಸರಾವ್ ಮತ್ತು ವಾಸುದೇವರಾವ್ ಕಾರ್ಯದರ್ಶಿಗಳಾಗಿದ್ದರು. ಭೂಹಿಡುವಳಿದಾರರು, ಕೃಷಿ ಉತ್ಪಾದನೆ, ಗೇಣಿ ಪದ್ಧತಿ ಮತ್ತು ಗ್ರಾಮೀಣ ಕೈಗಾರಿಕೆ ಕುರಿತು ವರದಿ ಶಿಫಾರಸ್ಸು ಮಾಡಿತು.[೧೧೨] ಗ್ರಾಮೀಣ ಕೃಷಿ ವ್ಯವಸ್ಥೆಗೆ ಗ್ರಾಮೀಣ ಮಟ್ಟದಲ್ಲಿಯೇ ಸಾಲ ವಿತರಿಸುವ ಮೂಲಕ ಉತ್ತೇಜನ ನೀಡಬೇಕು, ಹೊಸ ಯೋಜನೆಗಳ ಮೂಲಕ ಉತ್ಪನ್ನಗಳ ಮಾರಾಟ ಮಾಡಲು ನಿಯಂತ್ರಿತ ಮಾರುಕಟ್ಟೆ ಸ್ಥಾಪಿಸಬೇಕು[೧೧೩] ಹಾಗೂ ಕೃಷಿ ಆಧಾರಿತ ಗ್ರಾಮೀಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಚೈತನ್ಯ ತುಂಬಬೇಕೆಂದು ಈ ಸಮಿತಿ ಶಿಫಾರಸ್ಸು ಮಾಡಿತ್ತು.[೧೧೪]

೭.೪.೩. ಸಹಕಾರಿ ಸಂಘ ಕಾರ್ಯಾರಂಭ

ಸಂಸ್ಥಾನದ ಆರ್ಥಿಕತೆಯನ್ನು ಬಲಪಡಿಸುವ ಜೊತೆಗೆ ಜನಸಾಮಾನ್ಯರಿಗೂ ಆರ್ಥಿಕ ಸಹಾಯ ಮಾಡುವ ಉದ್ದೇಶದಿಂದ ೧೯೧೪ರಲ್ಲಿ ಸಹಕಾರಿ ಸಂಘ ಸ್ಥಾಪನೆ ಮಾಡಲು ಸಹಕಾರಿ ಸಂಘ ಕಾಯಿದೆಯನ್ನು ಜಾರಿಗೆ ತರಲಾಯಿತು. ಈ ಮೂಲಕ ಸಂಸ್ಥಾನದಲ್ಲಿ ಸಹಕಾರ ಸಂಘಗಳ ಪ್ರವೇಶವಾಯಿತು. ಸರಕಾರ ಈ ಸಂಘಗಳ ಕುರಿತು ವಿಶೇಷ ಅಧ್ಯಯನ ಮಾಡಲು ಫಜಲುಲ್ಲಾ ಎಂಬ ಅಧಿಕಾರಿಯನ್ನು ಜರ್ಮನಿಗೆ ಕಳುಹಿಸಿತು. ಸಂಸ್ಥಾನದ ಕೆಲವು ಅಧಿಕಾರಿಗಳಿಗೆ ಸಹಕಾರ ಸಂಘ ಕುರಿತು ತರಬೇತಿ ಪಡೆಯಲು ಮುಂಬಾಯಿ ಮತ್ತು ಮದ್ರಾಸ್ ಪ್ರೆಸಿಡೆನ್ಸಿಗಳಿಗೆ ಕಳುಹಿಸಿಕೊಡಲಾಯಿತು. ತರಬೇತಿ ಮತ್ತು ವಿಶೇಷ ಅಧ್ಯಯನ ಮೂಲಕ ಸಹಕಾರ ಸಂಘಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿದ ಕಾರ್ಯ ಅತಿ ಮಹತ್ವದಾಗಿದೆ.[೧೧೫]

ಈ ಸಂಘಗಳ ಅಧೀನದಲ್ಲಿ ಕೇಂದ್ರ ಬ್ಯಾಂಕು, ಕೃಷಿ ಸಂಘ ಮತ್ತು ಕೃಷಿಯೇತರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದವು. ಇವು ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿ ಕೃಷಿಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಿ ಕೃಷಿ ಉತ್ಪಾದನೆ ಅಧಿಕಗೊಳಿಸುವ ಉದ್ದೇಶ ಹೊಂದಿದ್ದವು.[೧೧೬] ಸಹಕಾರಿ ಸಂಘ ೧೯೧೭ರಲ್ಲಿ ಹೈದರಾಬಾದ್ ಕರ್ನಾಟಕದ ಗುಲಬರ್ಗಾದಲ್ಲಿ ಸ್ಥಾಪನೆಯಾಗಿ ತನ್ನ ಆರಂಭಿಕ ವರ್ಷದಲ್ಲಿ ೩೩೨೨ ವ್ಯವಹಾರ ನಡೆಸಿ ಕಾರ್ಯಚಟುವಟಿಕೆ ವಿಸ್ತರಿಸಿಕೊಂಡಿತ್ತು. ಸಹಕಾರ ಸಂಘದಡಿ ಸ್ಥಾಪನೆಯಾದ ಜಿಲ್ಲಾ ಸಹಕಾರ ಬ್ಯಾಂಕು ಹೈದರಾಬಾದ್ ಕರ್ನಾಟಕದಲ್ಲಿಯೇ ಮೊದಲನೆಯದಾಗಿತ್ತು.[೧೧೭]

ಸಹಕಾರಿ ಸಂಘದ ಅಧೀನದಲ್ಲಿ ಗುಲಬರ್ಗಾದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ರಚನೆಗೊಂಡವು. ಇವುಗಳ ಹಾಗೆ ಪ್ರಾಥಮಿಕ ವ್ಯವಸಾಯ ಸಂಘಗಳು ಹುಟ್ಟಿಕೊಂಡವು. ಇವನ್ನು "ಅಂಜುಮನ್ ಇಮದಾದೆ ಬಹಮನಿ" ಎಂದು ಕರೆಯಲಾಯಿತು. ೧೯೨೫ರಲ್ಲಿ ಸೇವಾ ಸಹಕಾರ ಸಂಘ ಯಾದಗಿರಿಯಲ್ಲಿ ಸ್ಥಾಪನೆಯಾಯಿತು. ಇದರ ಅಧೀನದಲ್ಲಿ ಸಂಘಗಳು ರೈತರಿಗೆ ಕೃಷಿ ಸಾಲ ನೀಡುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿದ್ದವು.

೧೯೩೪ರಲ್ಲಿ ನಿಜಾಮ್ ಸರಕಾರ ಸಹಕಾರ ಸಂಘಗಳ ಗುಣಮಟ್ಟ ಮತ್ತು ಕಾರ್ಯ ವಿಧಾನದಲ್ಲಿ ಸುಧಾರಣೆ ತರಲು ಹೈದರಾಬಾದ್ ಸಹಕಾರಿ ಸಂಸ್ಥೆಗಳ ಹಣಕಾಸು ವಿಚಾರಣಾ ಸಮಿತಿ ನೇಮಿಸಿತು. ಈ ಸಮಿತಿಯ ವರದಿ ಮಾಡಿದ ಶಿಫಾರಸ್ಸಿನನ್ವಯ ಸಹಕಾರಿ ಸಂಘಗಳ ಆರ್ಥಿಕ ಸ್ಥಿತಿ ಬಲಪಡಿಸುವ ನಿಟ್ಟಿನಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ರಾಜ್ಯ ಸರಕಾರ ಹಣಕಾಸಿನ ನೆರವು ಒದಗಿಸಿತು. ಇದರಿಂದ ಪ್ರಾಥಮಿಕ ಸಹಕಾರಿ ಸಂಘಗಳಿಗೆ ಸಾಲ ನೀಡುವ ಸಾಮರ್ಥ್ಯ ವೃದ್ಧಿಯಾಯಿತು. ಸಮಿತಿಯ ಶಿಫಾರಸ್ಸಿನಂತೆ ತಾಲೂಕು ಅಭಿವೃದ್ಧಿಪಡಿಸಲು ತಾಲೂಕು ಯೂನಿಯನ್‌ಗಳು ಮತ್ತು ಗ್ರಾಮೀಣ ಅರ್ಥ ವ್ಯವಸ್ಥೆ ಸುಧಾರಿಸಲು ಗ್ರೇನ್ ಬ್ಯಾಂಕುಗಳು ಆರಂಭವಾದವು. ಇವು ಕೃಷಿ ಮತ್ತು ಕೃಷಿಯೇತರ ಕ್ಷೇತ್ರದಲ್ಲಿ ಸಾಲ ನೀಡಿ ಆರ್ಥಿಕವಾಗಿ ಉತ್ತೇಜಿಸುವ ದಿಕ್ಕಿನಲ್ಲಿ ನಡೆದಿದ್ದವು.[೧೧೮]

೭.೪.೪. ರೈತರ ಪರಿಹಾರ ಯೋಜನೆಗಳು

ಹೈದರಾಬಾದ್ ಸಂಸ್ಥಾನದಲ್ಲಿ ಮಳೆಯ ಪ್ರಮಾಣ ಕಾಲಕ್ರಮೇಣ ಕ್ಷೀಣಿಸುತ್ತಿತ್ತು. ಮಳೆಯಾಧಾರಿತ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ರೈತಾಪಿ ವರ್ಗ ಅನೇಕ ಸಮಸ್ಯೆಗಳಿಗೆ ತುತ್ತಾಗಿತ್ತು. ಇದನ್ನು ಮನಗಂಡ ಸರಕಾರ ರೈತರ ಸಮಸ್ಯೆ ಪರಿಹರಿಸಲು ಮತ್ತು ಕೃಷಿಗೆ ಉತ್ತೇಜನ ನೀಡಲು ಅನೇಕ ಪರಿಹಾರ ಯೋಜನೆ ಜಾರಿಗೊಳಿಸಿತು. ಇದರನ್ವಯ ರೈತರಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆ ಜಾರಿಗೊಳಿಸಿ ಶೇಕಡಾ ೬ರಷ್ಟು ಬಡ್ಡಿ ವಿಧಿಸಿತು. ಮಳೆ

ಸಂಪೂರ್ಣ ವಿಫಲವಾಗಿ ಬೆಳೆ ಹಾನಿಯಾದ ಸಂದರ್ಭದಲ್ಲಿ ಸರಕಾರ ಬರಗಾಲಕ್ಕೆ ತುತ್ತಾದ ರೈತರ ಸಾಲದ ಬಡ್ಡಿಗೆ ವಿನಾಯ್ತಿ ನೀಡಿತು.[೧೧೯]

ಸರಕಾರ ಕೃಷಿ ಸಾಲ ನೀಡುವ ಪೂರ್ವದಲ್ಲಿ ರೈತರು ಖಾಸಗಿ ಲೇವಾದೇವಿಗಾರ ಅಥವಾ ಸಾಹುಕಾರರ ಹತ್ತಿರ ಅಧಿಕ ಬಡ್ಡಿ ದರದಲ್ಲಿ ಸಾಲ ಪಡೆಯುತ್ತಿದ್ದರು. ಲೇವಾದೇವಿಗಾರರು ರೈತರಿಗೆ ಭೂಮಿ ಅಡವಿಟ್ಟುಕೊಂಡು ಸಾಲ ನೀಡುವ ಪದ್ಧತಿಯಿತ್ತು. ಸರಿಯಾದ ಸಮಯಕ್ಕೆ ಮಳೆ ಬರದಿದ್ದಲ್ಲಿ ಕೃಷಿ ಉತ್ಪಾದನೆ ಕುಂಠಿತಗೊಳ್ಳುತ್ತಿತ್ತು. ರೈತರು ಪಡೆದ ಸಾಲವನ್ನು ಹಿಂದಿರುಗಿಸಲಾಗದಿದ್ದ ಸಂದರ್ಭದಲ್ಲಿ ಬಡ್ಡಿಗೆ ಚಕ್ರಬಡ್ಡಿ ಸೇರಿಸಿ ಅವರ ಭೂಮಿ ಪರಭಾರೆ ಮಾಡಿಕೊಳ್ಳಲಾಗುತ್ತಿತ್ತು. ನಿಜಾಮ್ ಸರಕಾರ ೧೯೩೬ರಲ್ಲಿ ರೈತರ ಹಿತ ಕಾಪಾಡಲು ಪರಭಾರೆ ನಿಯಂತ್ರಣ ಕಾಯಿದೆ ಜಾರಿಗೊಳಿಸಿತು. ಈ ಕಾಯಿದೆ ಲೇವಾದೇವಿಗಾರರು ರೈತರ ಭೂಮಿ ಕಬಳಿಸುವುದನ್ನು ನಿಯಂತ್ರಿಸಿತ್ತು.[೧೨೦]

ನಿಜಾಮ ಸರಕಾರ ರೈತರ ಹಿತ ಕಾಪಾಡುವ ಉದ್ದೇಶದಿಂದ ಸಾಲ ನೀಡುವ ಯೋಜನೆಯೊಂದಿಗೆ ಲೇವಾದೇವಿಗಾರರಿಂದ ಮುಕ್ತಿ ನೀಡುವ ಕಾರ್ಯಕ್ರಮವನ್ನೂ ಕಾರ್ಯಗತಗೊಳಿಸಿತು. ಕೃಷಿ ಸಲಕರಣೆಗಳು ಹಾಗೂ ಬಿತ್ತನೆ ಬೀಜಗಳನ್ನು ಕೃಷಿ ಇಲಾಖೆ ವಿತರಿಸತೊಡಗಿತು. ಇಳುವರಿ ಹೆಚ್ಚು ಮಾಡುವ ಉದ್ದೇಶದಿಂದ ಕೃಷಿಯ ಹೊಸ ವಿಧಾನಗಳ ಕುರಿತು ಮಾಹಿತಿ ಒದಗಿಸಲು ಪ್ರತ್ಯೇಕ ಇಲಾಖೆ ತೆರೆಯಿತು. ಬಿತ್ತನೆ ವಿಧಾನ ಮತ್ತು ಕ್ರಮಗಳ ಕುರಿತು ಅಧ್ಯಯನ ಮಾಡಲು ಕೃಷಿ ಸಂಶೋಧನೆ ಮಂಡಳಿ ಸ್ಥಾಪಿಸಿತು.[೧೨೧]

೭.೫. ಕೈಗಾರಿಕೆಗಳು

ಮಧ್ಯಕಾಲದವರೆಗೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನಗಳು ಗೃಹಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಿ ದೇಶೀಯ ಉದ್ಯಮ ಬೆಳೆಸುವ ಜೊತೆಗೆ ಗ್ರಾಮೀಣ ಪ್ರದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿದ ಪ್ರಯತ್ನ ಕಂಡುಬರುತ್ತದೆ. ಬಹಮನಿ ಸುಲ್ತಾನರು ಮತ್ತು ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿಯೂ ಕುಶಲಕರ್ಮಿಗಳು ಮತ್ತು ಗೃಹ ಕೈಗಾರಿಕೆಗಳಾದ ಉಣ್ಣೆ ನೇಕಾರಿಕೆ, ಚರ್ಮ ಹದ ಮಾಡುವುದು, ಬಟ್ಟೆ ನೇಯುವುದು ಮುಂತಾದವು ಅಸ್ತಿತ್ವದಲ್ಲಿತ್ತು. ಕುಂಬಾರಿಕೆ, ಮರಗೆಲಸ, ಚಿನ್ನದ ಕೆಲಸ, ಕಮ್ಮಾರಿಕೆ ಮುಂತಾದವು ಹೈದರಾಬಾದ್ ಕರ್ನಾಟಕದಾದ್ಯಂತ ಮಧ್ಯಯುಗದ ಗ್ರಾಮೀಣ ವ್ಯವಸ್ಥೆಯ ಭಾಗವಾಗಿತ್ತು. ಮೊಗಲರ ಕಾಲದಲ್ಲಿ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರೆಯಿತು.[೧೨೨] ನಂತರ ನಿಜಾಮರು ಗ್ರಾಮೀಣ ಮತ್ತು ಗೃಹ ಕೈಗಾರಿಕೆಗಳ ಮೂಲಕ ಸಂಸ್ಥಾನದ ಗ್ರಾಮೀಣ ಆರ್ಥಿಕತೆಯನ್ನು ಸದೃಢಗೊಳಸಲು ಯತ್ನಿಸಿದರು. ಚಂದೋಲಾಲನ ಕಾಲದಲ್ಲಿ ಬ್ರಿಟಿಶರ ಆರ್ಥಿಕ ನೀತಿಗೆ ಅನುಗುಣವಾಗಿ ಸಂಸ್ಥಾನದಲ್ಲಿ ಯಂತ್ರ

ನಿರ್ಮಿತ ವಸ್ತುಗಳು ಮಾರುಕಟ್ಟೆ ಪ್ರವೇಶಿಸಿದವು. ದೇಶೀಯ ಕೈಗಾರಿಕೆಗಳಾದ ಗ್ರಾಮೀಣ ಮತ್ತು ಗೃಹ ಕೈಗಾರಿಕೆಗಳ ಉತ್ಪನ್ನಗಳಿಗೆ ಪ್ರೋತ್ಸಾಹ ದೊರೆಯದೆ ಅವು ಅವನತಿ ಹೊಂದಿದವು. ಬ್ರಿಟಿಶರ ಕೈಗಾರಿಕಾ ನೀತಿಯಂತೆ ನಿಜಾಮರು ಸಂಸ್ಥಾನದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಯೋಜನೆ ರೂಪಿಸಿದರು. ಹೈದರಾಬಾದ್ ಕರ್ನಾಟಕದಲ್ಲಿ ಸ್ಥಾಪನೆ ಮಾಡಿದ ಕೈಗಾರಿಕೆಗಳಲ್ಲಿ ಎರಡು ವಿಧಗಳಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. ಅವು ೧. ಗುಡಿಕೈಗಾರಿಕೆಗಳು, ೨. ಬೃಹತ್ ಕೈಗಾರಿಕೆಗಳು.[೧೨೩]

೭.೫.೧. ಗೃಹಕೈಗಾರಿಕೆಗಳು

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಗೃಹ ಕೈಗಾರಿಕೆಗಳಿಗೆ ಮತ್ತು ಕೃಷಿ ಆಧಾರಿತ ಗ್ರಾಮೀಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ಗ್ರಾಮೀಣ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವ ಪ್ರಯತ್ನ ನಡೆದಿರುವುದು ಕಂಡುಬರುತ್ತದೆ. ಗೃಹ ಕೈಗಾರಿಕೆಗಳಾದ ಕುಂಬಾರಿಕೆ, ಮರಗೆಲಸ, ಬಟ್ಟೆ ನೇಯುವುದು, ಉಣ್ಣೆ ನೇಕಾರಿಕೆ ಮುಂತಾದವು ಗ್ರಾಮೀಣ ಅರ್ಥ ವ್ಯವಸ್ಥೆಯ ಭಾಗವಾಗಿದ್ದವು.[೧೨೪]

ರಾಯಚೂರು ದೋ-ಅಬ್ ಮತ್ತು ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕು ಹತ್ತಿ ಬೆಳೆಯುವ ಭೂ ಪ್ರದೇಶವಾಗಿದ್ದು ಗ್ರಾಮೀಣ ಜನರು ಕೈಮಗ್ಗದಂತಹ ಗೃಹಕೈಗಾರಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಇವರು ದಿನನಿತ್ಯ ಅಗತ್ಯವಾದ ಬಟ್ಟೆ ತಯಾರಿಸಿ ಮಾರಾಟ ಮಾಡುವ ಮೂಲಕ ಬೇಡಿಕೆಗನುಗುಣವಾದ ಉತ್ಪಾದನೆಯಲ್ಲಿ ನಿರತವಾಗಿದ್ದುದು ಕಂಡುಬರುತ್ತದೆ. ರಾಯಚೂರು ಜಿಲ್ಲೆಯ ಕುಷ್ಟಗಿ, ಕಲಬುರಗಿ ಜಿಲ್ಲೆಯ ಸುರಪುರ, ಅಲಂಪುರ ಮತ್ತು ಗದ್ವಾಲ ಪ್ರದೇಶಗಳಲ್ಲಿ ನೇಕಾರಿಕೆ ಪ್ರಸಿದ್ಧಿಯಾಗಿತ್ತು. ನಿಜಾಮ್ ಸರಕಾರ ಗುಲಬರ್ಗಾದಲ್ಲಿ ಹತ್ತಿಬಟ್ಟೆ ಗಿರಣಿಯನ್ನು ಸ್ಥಾಪಿಸಿದ್ದರಿಂದ ಗೃಹ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಉದ್ಯೋಗ ಕಳೆದು ಕೊಳ್ಳುವಂತಾಯಿತು.[೧೨೫] ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಸುಲೇಪೇಟ ಪಟ್ಟಣ ಕಂಬಳಿ ಉತ್ಪಾದನೆ ಮಾಡುತ್ತಿದ್ದು ವ್ಯಾಪಕ ಮಾರುಕಟ್ಟೆಯನ್ನು ಹೊಂದಿತ್ತು.[೧೨೬] ಮಸ್ಕಿ, ಕಿನ್ನಾಳ, ಹನುಮಸಾಗರ, ಬಳಗಾನೂರ, ಸುರಪುರ, ಮೇಣದಾಳ ಪಟ್ಟಣಗಳಲ್ಲಿ ತಯಾರಾಗುತ್ತಿದ್ದ ಸೀರೆಗಳು, ಯರಗೇರಿಯಲ್ಲಿನ ಧೋತರ, ಅಂಗಿ ಬಟ್ಟೆಗಳು ಪ್ರಸಿದ್ಧಿ ಪಡೆದಿದ್ದವು. ರಾಯಚೂರು ಜಿಲ್ಲೆಯ ಮಾನ್ವಿ, ಬೀದರ ಜಿಲ್ಲೆಯ ಚರ್ಮದ ಉತ್ಪನ್ನಗಳಿಗೆ ಬೇಡಿಕೆಯಿತ್ತು. ಗಂಗಾವತಿಯ ಕನಕಗಿರಿ ಮತ್ತು ಕಲಬುರ್ಗಿಯ ಸುರಪುರ ಆಟದ ಸಾಮಾನುಗಳ ತಯಾರಿಕಾ ಕೇಂದ್ರಗಳಾಗಿದ್ದವು. ಬೀದರಿನಲ್ಲಿ ತಯಾರಿಸಲಾಗುತ್ತಿದ್ದ ಪಾತ್ರೆಗಳು, ಬಿಂದಿಗೆಗಳಿಗೆ ಸಂಸ್ಥಾನದಲ್ಲಿ ಅಪಾರ ಬೇಡಿಕೆಯಿತ್ತು. ಬೀದರಿನ ಬಿದರಿಕಲೆಯ ವಸ್ತುಗಳು ನಿಜಾಮರ ಮನಸ್ಸನ್ನು ಗೆದ್ದಿದ್ದವು.[೧೨೭]

೭.೫.೨. ಬೃಹತ್ ಕೈಗಾರಿಕೆಗಳು

ಮೌರ್ಯರ ಕಾಲದಿಂದ ನಿಜಾಮರ ಕಾಲದವರೆಗೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಯಾವುದೇ ಬೃಹತ್ ಕೈಗಾರಿಕೆಗಳಿರಲಿಲ್ಲ. ನಿಜಾಮರು ದೇಶೀಯ ಕೈಗಾರಿಕೆಗಳಿಗೆ ಹೆಚ್ಚಿನ ಮಹತ್ವ ನೀಡಿದ್ದರು. ಸಂಸ್ಥಾನದಲ್ಲಿ ಹೇರಳವಾಗಿ ಸಿಗುವ ಸಂಪನ್ಮೂಲವನ್ನು ಗಮನದಲ್ಲಿಟ್ಟುಕೊಂಡು ಅದಕ್ಕನುಗುಣವಾಗಿ ಅನೇಕ ಬೃಹತ್ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರು. ಬಂಡವಾಳದಾರರು ನಿಜಾಮನ ಪರವಾನಗಿ ಪಡೆದು ಖಾಸಗಿ ಒಡೆತನದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮುಂದೆ ಬಂದರು. ಸರಕಾರಿ ಮತ್ತು ಖಾಸಗಿ ಒಡೆತನದಲ್ಲಿದ್ದ ಕೈಗಾರಿಕೆಗಳನ್ನು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿಯೂ ಗಮನಿಸಬಹುದಾಗಿದೆ.[೧೨೮]

ನಿಜಾಮ್ ಆಳ್ವಿಕೆಯ ಹೈದರಾಬಾದ್ ಕರ್ನಾಟಕದಲ್ಲಿದ್ದ ಕೈಗಾರಿಕೆಗಳ ಪಟ್ಟಿ

ಕ್ರ.ಸಂ.	ಜಿಲ್ಲೆಯ ಹೆಸರು	ಕೈಗಾರಿಕೆಯ ಹೆಸರು	ಸ್ಥಾಪನೆ ವರ್ಷ	ಕಾರ್ಮಿಕರ ಸಂಖ್ಯೆ
೧	ಗುಲಬರ್ಗಾ	ಎಂ.ಎಸ್.ಕೆ.ಮಿಲ್ ಲಿಮಿಟೆಡ್ ಗುಲಬರ್ಗಾ	೧೮೮೪	೨೦೦೦
೨	ರಾಯಚೂರು	ಹೈದರಾಬಾದ್ ಗೋಲ್ಡ್ ಮೈನ್ಸ್ ಕಂಪನಿ	೧೯೦೧	
೩	ಗುಲಬರ್ಗಾ	ಹೆಚ್.ಎಂ.ಟಿ ಸಿಮೆಂಟ್ ಶಹಾಬಾದ್	೧೯೨೫	೧೯೪೭
೪	ಗುಲಬರ್ಗಾ	ಗುಂಡಿ ಕೈಗಾರಿಕೆ ಯಾದಗಿರಿ		೮೦
೫	ಬೀದರ	ಜಿನಿಂಗ್ ಕೈಗಾರಿಕೆ ಉದಗಿರ		೨೧೨
೬	ಬೀದರ	ಅಕ್ಕಿ ಮತ್ತು ದ್ವಿದಳ ದಾನ್ಯ ಮಿಲ್ ಬೀದರ		೧೭೮
೭	ರಾಯಚೂರ	ಎಣ್ಣೆ ಮಿಲ್ ಮಾನ್ವಿ		೧೬೮

ಈ ಮೇಲಿನ ಕೋಷ್ಟಕದಲ್ಲಿ ನಿಜಾಮರ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸ್ಥಾಪಿಸಿರುವ ಕೈಗಾರಿಕೆಗಳನ್ನು ಕುರಿತಾದ ಮಾಹಿತಿಯನ್ನು ನೀಡಲಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಹತ್ತಿ ಬಟ್ಟೆ, ಸೀಮೆಂಟ್ ಕೈಗಾರಿಕೆ ಮತ್ತು ಯಾದಗಿರಿಯಲ್ಲಿ ಗುಂಡಿಗಳನ್ನು ಉತ್ಪಾದಿಸುವ ಕೈಗಾರಿಕೆಯನ್ನು ಸ್ಥಾಪಿಸಲಾಯಿತು.[೧೨೯] ಬೀದರ್ ಜಿಲ್ಲೆಯಲ್ಲಿ ಜಿನಿಂಗ್ ಮತ್ತು ದ್ವಿದಳ ಧಾನ್ಯಗಳ ಮಿಲ್‌ಗಳು ಖಾಸಗಿ ಒಡೆತನದಲ್ಲಿ ಸ್ಥಾಪನೆಗೊಂಡವು. ಇವುಗಳಿಗೆ ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯ ವಾಗಿತ್ತು.[೧೩೦] ಜೊತೆಗೆ ರಾಯಚೂರು ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಕಾರ್ಯಾರಂಭ ಮಾಡುತ್ತಿರುವ ಚಿನ್ನದ ಗಣಿಗಾರಿಕೆಯನ್ನು ಪುನಃ ಆರಂಭಿಸಲಾಯಿತು. ಹಾಗೇ ಈ ಜಿಲ್ಲೆಯಲ್ಲಿ ಬೆಳೆಯುವ ದ್ವಿದಳ ಧಾನ್ಯಗಳಿಂದ ಎಣ್ಣೆ ಉತ್ಪಾದಿಸುವ ಕೈಗಾರಿಕೆಯನ್ನು ಮಾನ್ವಿಯಲ್ಲಿ ಸ್ಥಾಪಿಸ ಲಾಯಿತು.[೧೩೧]

ಕೋಷ್ಟಕದಲ್ಲಿ ತೋರಿಸಿದಂತೆ ನಿಜಾಮ್ ಆಳ್ವಿಕೆಯಲ್ಲಿದ್ದ ಪ್ರಮುಖ ಕೈಗಾರಿಕೆಗಳನ್ನು ಕುರಿತು ಈ ಕೆಳಗೆ ವಿವರಿಸಿದೆ.

ಹತ್ತಿಬಟ್ಟೆ ಗಿರಣಿ

ಹೈದರಾಬಾದ್ ಕರ್ನಾಟಕ ಪ್ರದೇಶದ ಭೌಗೋಳಿಕತೆಯು ಹತ್ತಿ ಬೆಳೆಯುವುದಕ್ಕೆ ಪೂರಕವಾದ ವಾತಾವರಣ ಇರುವುದರಿಂದ ಈ ಪ್ರದೇಶದಲ್ಲಿ ಹತ್ತಿ ಹೇರಳವಾಗಿ ಬೆಳೆಯುತ್ತಿದ್ದರು. ಹೀಗೆ ಬೆಳೆದಂಥ ಹತ್ತಿಯನ್ನು ಹೈದರಾಬಾದ್, ಅಹಮದ್‌ಬಾದ್, ಮುಂಬಯಿ ಮತ್ತು ಮದ್ರಾಸ್ ನಗರಗಳಿಗೆ ರಫ್ತು ಮಾಡಲಾಗುತ್ತಿತ್ತು. ರೈತರು ತಾವು ಬೆಳೆದ ಹತ್ತಿಯನ್ನು ಕಡಿಮೆ ಬೆಲೆಗೆ ರಫ್ತು ಮಾಡುತ್ತಿದ್ದರು. ಹತ್ತಿ ಗಿರಗಣಿಗಳು ಉತ್ಪಾದಿಸಿದ ಬಟ್ಟೆಯನ್ನು ಹೆಚ್ಚಿನ ಬೆಲೆ ಕೊಟ್ಟು ಕೊಳ್ಳಬೇಕಾಯಿತು. ತಾವು ಬೆಳೆದ ಹತ್ತಿಯನ್ನು ರಫ್ತು ಮಾಡುವುದಕ್ಕಿಂತ ತಮ್ಮಲ್ಲಿಯೇ ಬಟ್ಟೆ ತಯಾರಿಸುವ ಕೈಗಾರಿಕೆಯನ್ನು ಸ್ಥಾಪಿಸಬೇಕೆಂದು ಮನವರಿಕೆಯಾಗಿ ಬೆಂಗಳೂರಿನವರಾದ ಸಭಾಪತಿ ಆಯ್ಯ ಮತ್ತು ಅಖಿಲಾಂಡಯ್ಯ ಎನ್ನುವವರು ಹೈದರಾಬಾದ್ ನಿಜಾಮ್ ಪ್ರಭುತ್ವಕ್ಕೆ ಮನವಿ ಮಾಡಿಕೊಂಡವರು. ಈ ಮನವಿಗೆ ಸ್ಪಂದಿಸಿದ ನಿಜಾಮ್ ಮೆಹಬೂಬ ಆಲಿಖಾನ್ ಬಹಾದ್ದೂರ್‌ನು ಸರ್ಕಾರದ ನೆರವಿನಿಂದ ಹತ್ತಿ ಬಟ್ಟೆ ಗಿರಣಿಯನ್ನು ಸ್ಥಾಪಿಸಲು ಒಪ್ಪಿಗೆ ನೀಡಿದನು.[೧೨]

ಯಾವುದೇ ಕೈಗಾರಿಕೆಯು ಅಧಿಕೃತವಾಗಿ ಕಾರ್ಯಾರಂಭ ಮಾಡಬೇಕಾದರೆ ಬ್ರಿಟಿಶ್ ಭಾರತದ ನಿಯಮದ ಪ್ರಕಾರ ಭಾರತದ ಕೈಗಾರಿಕಾ ಕಾಯಿದೆಗೆ ಅನುಗುಣವಾಗಿ ಹೆಸರು ನೋಂದಾಯಿಸಿ ಕೊಳ್ಳಬೇಕಾಗಿತ್ತು. ಅದರಂತೆ ೧೮೮೩ರಲ್ಲಿ ಮೆಹಬೂಬ್ ಷಾಹಿ ಕಲಬುರ್ಗಿ ಮಿಲ್ ಕಂಪನಿ ಲಿಮಿಟೆಡ್ ಎಂಬ ಹೆಸರಿನಿಂದ ನೋಂದಾಯಿಸಿಕೊಂಡಿತು. ಕೈಗಾರಿಕೆಯನ್ನು ಸ್ಥಾಪಿಸಲು ಅಧಿಕೃತ ಬಂಡವಾಳವಾದ ೧೨ ಲಕ್ಷ ರೂಪಾಯಿಯನ್ನು ಐದು ನೂರು ರೂಪಾಯಿಗಳ ಎರಡು ನೂರು ಷೇರುಗಳನ್ನು ವಿಭಾಗಿಸಿಕೊಳ್ಳಲಾಯಿತು. ಜನವರಿ ೧೦, ೧೮೮೪ರಂದು ಅಡಿಗಲ್ಲು ಹಾಕಲಾಯಿತು. ಆದರೆ ಕೈಗಾರಿಕೆ ಕಾಯಿದೆಯಲ್ಲಿನ ದೋಷದಿಂದಾಗಿ ಸ್ಥಾಪನೆಯ ಕಾರ್ಯ ಕೈಬಿಟ್ಟು ಕೊಡಲಾಯಿತು. ನಂತರ ೧೮೮೪ ಆಗಸ್ಟ್ ೨೪ರಂದು ಮುಂಬಯಿಯಲ್ಲಿ ನೋಂದಾಯಿಸಿ ಕೊಂಡು ಕಾರ್ಯಾರಂಭ ಮಾಡಿತು.[೧೩]

ಹೀಗೆ ಆರಂಭವಾದ ಕೈಗಾರಿಕೆಯ ಮೇಲ್‌ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕಾಗಿ ನಿಜಾಮ್ ಸರ್ಕಾರವು ಆಡಳಿತ ನಿರ್ದೇಶಕ ಮಂಡಳಿಯನ್ನು ನೇಮಿಸಿತು. ಹೀಗೆ ನೇಮಕವಾದ ಪ್ರಥಮ ನಿರ್ದೇಶಕ ಮಂಡಳಿಯ ಸದಸ್ಯರಾದ ಇಮಾಹ ಉಸ್ಮಾನ್, ಡಾ.ಅಘೋರನಾಥ, ಚಟ್ಟೋಪಾಧ್ಯಾಯ, ಲಕ್ಷ್ಮಿದಾಸ ಬುಕ್ ಮೆನದಾಸ, ಅಖಿಲಾಂಡಯ್ಯ, ಮಾರಿಮಾಜಲ್, ಖಾನ

ಬಹದ್ದೂರ್, ಶರ್ಪೂಜಿ, ಜಿನ್ನಯಿ ಮುಂತಾದವರು. ಈ ನಿರ್ದೇಶಕ ಮಂಡಳಿಯಲ್ಲಿ ಸದಸ್ಯರಾಗಿ ಸ್ಥಾನವನ್ನು ಪಡೆದುಕೊಂಡ ಸದಸ್ಯರು ಬಹುತೇಕವಾಗಿ ವರ್ತಕ ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಸಿದ್ಧ ವರ್ತಕ ಸಮುದಾಯದ ಮತ್ತು ವರ್ತಕ ಮಂಡಳಿಯ ಪಾಲುದಾರರಾಗಿರುವುದು ಗಮನಾರ್ಹವಾಗಿದೆ.

ಈ ರೀತಿಯಾಗಿ ಸ್ಥಾಪನೆಯಾದ ಹತ್ತಿಬಟ್ಟೆ ಕೈಗಾರಿಕೆಯು ಆರಂಭದಲ್ಲಿ ಸಣ್ಣ ಪ್ರಮಾಣದ ಯಂತ್ರಗಳಿಂದಾಗಿ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗಿತ್ತು. ಆದರೆ ಪ್ರದೇಶದಲ್ಲಿ ಬೆಳೆಯುವ ಹತ್ತಿ ಪ್ರಮಾಣ ಅಧಿಕವಾಗಿದ್ದರಿಂದ ಉತ್ಪಾದನೆ ಮಾಡುವ ಸಾಮರ್ಥ್ಯ ಕಡಿಮೆಯಾಗಿದ್ದರಿಂದ ಹತ್ತಿ ಬೆಳೆದ ರೈತರು ತೊಂದರೆಗೆ ಒಳಗಾಗಿದ್ದರು. ಇದನ್ನು ಗಮನಿಸಿದ ನಿಜಾಮ್ ಪ್ರಭುತ್ವವು ಹೆಚ್ಚಿನ ಉತ್ಪಾದನಾ ಸಾಮರ್ಥ್ಯವುಳ್ಳ ಯಂತ್ರೋಪಕರಣಗಳನ್ನು ಅಳವಡಿಸುವ ಮೂಲಕ ಮಿಲ್‌ನ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲಾಯಿತು.[೧೩೪]

ಆರಂಭದಲ್ಲಿ ಮಿಲ್‌ಗೆ ವಿದ್ಯುತ್ತನ್ನು ಪೂರೈಯಿಸಲು ಸ್ಕೀಮ್ ಎಂಜಿನ್(ಉಗಿಯಂತ್ರ) ಬಳಸಲಾಗುತ್ತಿತ್ತು. ಆದರೆ ದೊಡ್ಡ ಕೈಗಾರಿಕೆಯಾದ ಬಟ್ಟೆ ಮಿಲ್ಲನ್ನು ಸಂಪೂರ್ಣವಾಗಿ ವಿದ್ಯುತ್ ಪೂರೈಯಿಸಲು ಸಾಧ್ಯವಿಲ್ಲವೆಂದು ಭೀಮಾ ವಿದ್ಯುತ್ ಗೃಹ ಸ್ಥಾಪಿಸಿದರು. ೧೦-೧೧-೧೯೩೭ರಂದು ಸ್ಥಾಪನೆಯಾದ ವಿದ್ಯುತ್ ಗೃಹದಿಂದ ವಿದ್ಯುತ್ ಪೂರೈಸಲು ಸಾಧ್ಯವಾಯಿತು. ಹಾಗೇ ಕೈಗಾರಿಕೆ ಮತ್ತು ಕಾರ್ಮಿಕ ವಸತಿ ಗೃಹಗಳಿಗೆ ನೀರನ್ನು ಸರಬರಾಜು ಮಾಡುವುದಕ್ಕಾಗಿ ಲೋಕೋಪಯೋಗಿ ಇಲಾಖೆಯಿಂದ ಭೀಮಾ ಪಂಪಿಂಗ್ ಸ್ಟೇಶನ್ ಸ್ಥಾಪಿಸುವುದರ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿತ್ತು.[೧೩೫]

ಮಿಲ್ ಉತ್ಪಾದಿಸಿದ ಕಾಟನ್ ಸೀರೆ, ಪಂಚೆ ಹಾಗೂ ಹತ್ತಿಯಿಂದ ತಯಾರಿಸಿದ ನೂಲು, ಎಳೆಗಳು ಅಹಮದ್‌ಬಾದ್, ಮುಂಬಯಿ ಮತ್ತು ಕಲ್ಕತ್ತಗಳಿಗೆ ರಫ್ತು ಮಾಡಲಾಗುತ್ತಿತ್ತು. ಹಾಗೆ ರಷ್ಯ ಮತ್ತು ಜಪಾನ್ ದೇಶಗಳಿಗೆ ರಫ್ತು ಮಾಡುತ್ತಿರುವುದು ಗಮನಾರ್ಹವಾಗಿದೆ. ಮಿಲ್ ಉತ್ಪಾದಿಸಿದ ಬಟ್ಟೆಯನ್ನು ಮಾರಾಟ ಮಾಡುವುದಕ್ಕೆ ನಿಜಾಮ್ ಸರ್ಕಾರವು ಸಂಸ್ಥಾನದಲ್ಲಿ ವ್ಯಾಪಾರ ಗೃಹಗಳನ್ನು ಸ್ಥಾಪಿಸುವುದರ ಮೂಲಕ ಬಟ್ಟೆ ಕೈಗಾರಿಕೆಗೆ ಮತ್ತು ವರ್ತಕ ಸಮುದಾಯಗಳಿಗೆ ಪ್ರೋತ್ಸಾಹಿಸಿರುವುದನ್ನು ಗಮನಿಸಬಹುದಾಗಿದೆ.

ಮಿಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಡಿಮೆ ಬೆಲೆಗೆ ದಿನಸಿ ವಸ್ತುಗಳನ್ನು ಮಾರಾಟ ಮಾಡುವುದಕ್ಕಾಗಿ ಕಿರಾಣಿ ಅಂಗಡಿ ಸ್ಥಾಪಿಸಲಾಯಿತು. ಈ ಅಂಗಡಿಗಳು ಸರ್ಕಾರ ಮತ್ತು ಕಂಪನಿಯು ಮುತುವರ್ಜಿಯಿಂದಾಗಿ ಸ್ಥಾಪನೆಗೊಂಡವು. ಕಾರ್ಮಿಕರಿಗೆ ಅತ್ಯಂತ ಕಡಿಮೆ ಬೆಲೆಗೆ ದಿನಸಿ ವಸ್ತುಗಳನ್ನು ಖರೀದಿಸಲು ಅನುಕೂಲವಾಯಿತು. ಈ ರೀತಿಯಾಗಿ

ನಿಜಾಮ್ ಸರ್ಕಾರವು ಹತ್ತಿ ಬಟ್ಟೆ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಿರುವುದು ಗಮನಿಸ ಬಹುದಾಗಿದೆ.[೧೩೬]

ಹಟ್ಟಿ ಚಿನ್ನದ ಗಣಿಗಾರಿಕೆ

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಹಟ್ಟಿ ಗ್ರಾಮದ ಚಿನ್ನದ ಗಣಿಗಾರಿಕೆಯು ಕ್ರಿ.ಪೂ.೪ ಮತ್ತು ೩ನೆಯ ಶತಮಾನದಷ್ಟು ಪ್ರಾಚೀನ ಕಾಲದ್ದು. ಈ ಗಣಿಗಾರಿಕೆಯು ಮೌರ್ಯ ಮತ್ತು ಶಾತವಾಹನ ಅರಸು ಮನೆತನಗಳಿಗೆ ಚಿನ್ನ ಪೂರೈಕೆ ಮಾಡುತ್ತಿತ್ತು. ಕಾಲಾನಂತರ ಈ ಗಣಿಗಾರಿಕೆಯು ಚಿನ್ನ ಉತ್ಪಾದನೆಯನ್ನು ಸ್ಥಗಿತಗೊಳಿಸಿತು. ನಿಜಾಮ್‌ರ ಆಳ್ವಿಕೆಗೆ ಒಳಗಾದ ನಂತರ ಈ ಪ್ರದೇಶದಲ್ಲಿದ್ದ ಗಣಿಗಾರಿಕೆಗಳ ಬಗೆಗೆ ಕ್ಯಾಪ್ಟನ್ ಲಿಯೋನಾರ್ಡ್‌ಮನ್ ಎಂಬ ಬ್ರಿಟಿಶ್ ಅಧಿಕಾರಿಯು ಪತ್ತೆ ಹಚ್ಚಿದನು. ಹೀಗೆ ಈ ಅಧಿಕಾರಿಯು ಚಿನ್ನದ ಗಣಿಗಾರಿಕೆಯ ಬಗ್ಗೆ ಸಂಶೋಧನೆ ಕೈಗೊಂಡು ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಚಿನ್ನದ ಗಣಿಗಾರಿಕೆಗಳ ಬಗೆಗೆ ವರದಿಯನ್ನು ಸಿದ್ಧಪಡಿಸಿ ನಿಜಾಮ್ ಪ್ರಭುತ್ವಕ್ಕೆ ಸಲ್ಲಿಸಿದನು. ಈ ವರದಿಯ ಆಧಾರದ ಮೇಲೆ ೧೮೭೪ರಲ್ಲಿ ರಾಬರ್ಟ್ ಬ್ರೂಸಪೂಟ್ ಚಿನ್ನದ ನಿಕ್ಷೇಪವನ್ನು ಗುರುತಿಸಿ ಅದರ ಬಗೆಗೆ ವಿವರಣೆಯನ್ನು ನೀಡಿದನು. ನಂತರ ಹೈದರಾಬಾದ್ ನಿಜಾಮ್ ಸರ್ಕಾರವು ಈ ಮಾಹಿತಿಯನ್ನು ಆಧರಿಸಿ ೧೮೭೭ರಲ್ಲಿ ಹೈದರಾಬಾದ್ ಡೆಕ್ಕನ್ ಕಂಪನಿಗೆ ಗುತ್ತಿಗೆ ನೀಡಿತು.[೧೩೭]

ಹೀಗೆ ಗುತ್ತಿಗೆ ಪಡೆದುಕೊಂಡ ಈ ಕಂಪನಿಯು ಹಟ್ಟಿ ಚಿನ್ನದ ಗಣಿಗಾರಿಕೆಯ ಸುತ್ತಮುತ್ತ ಪ್ರದೇಶದಲ್ಲಿ ರಾಯಚೂರು ದೋ-ಅಬ್ ಗೋಲ್ಡ್‌ಫಿಲ್ಡ್ ಹೆಸರಿನಲ್ಲಿ ಚಿನ್ನ ನಿಕ್ಷೇಪವಿರುವ ಪ್ರದೇಶವನ್ನು ಶೋಧಿಸಲು ಆರಂಭಿಸಿತು. ಈ ರೀತಿಯಾದ ಶೋಧನೆಯ ಮೂಲಕ ಖಚಿತತೆಯನ್ನು ಮಾಡಿಕೊಂಡ ಸರ್ಕಾರವು ೧೮೬೭-೧೯೦೦ರಲ್ಲಿ ಡೆಕ್ಕನ್ ಗೋಲ್ಡ್‌ಫಿಲ್ಡ್ ಕಂಪನಿಯ ಹೆಸರಿನಲ್ಲಿ ಚಿನ್ನ ಉತ್ಪಾದನೆ ಯನ್ನು ಮಾಡಲು ಆರಂಭಿಸಿತು. ಜೊತೆಗೆ ಹಟ್ಟಿ ಚಿನ್ನದ ಗಣಿಗಾರಿಕೆ ಪ್ರದೇಶಕ್ಕೆ ಹೊಂದಿಕೊಂಡ ಸುರಪುರ ತಾಲೂಕಿನ ವಂದಲಿಯಲ್ಲಿ ಕೂಡ ೧೮೯೮ರಲ್ಲಿ ಗಣಿಗಾರಿಕೆ ಆರಂಭಿಸಿತು. ಆದರೆ ಈ ವಂದಲಿ ಗಣಿಯಲ್ಲಿನ ಚಿನ್ನದ ನಿಕ್ಷೇಪ ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದರಿಂದ ಚಿನ್ನದ ಉತ್ಪಾದನೆಗೆ ಭರಿಸುವ ವೆಚ್ಚವು ಉತ್ಪಾದನ ಚಿನ್ನಕ್ಕಿಂತ ಹೆಚ್ಚಿನ ಪ್ರಮಾಣದ ವೆಚ್ಚವಾಗುತ್ತಿದ್ದರಿಂದ ನಿಜಾಮ್ ಸರ್ಕಾರವು ಈ ಗಣಿಯನ್ನು ಆರಂಭದಲ್ಲಿಯೇ ಸ್ಥಗಿತಗೊಳಿಸಿತು.[೧೩೮]

೧೯೦೧ರಲ್ಲಿ ಹಟ್ಟಿ ಚಿನ್ನದ ಗಣಿಗಾರಿಕೆಯನ್ನು ನಿಜಾಮ್ ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್ ಎಂಬ ಹೆಸರಿನಲ್ಲಿ ನಾಮಕರಣಗೊಂಡಿತು. ಹೀಗೆ ಈ ಕಂಪನಿಯು ೧೯೦೨-೧೯೨೦ರ ನಡುವೆ ಸುಮಾರು ೭೩೨೧ ಕಿ.ಗ್ರಾಂ. ಚಿನ್ನವನ್ನು ಉತ್ಪಾದಿಸಿತು.[೧೩೯] ಆದರೆ ಚಿನ್ನ ಆರಂಭದಲ್ಲಿದ್ದ ಚಿನ್ನ

ಉತ್ಪಾದನೆಯ ಪ್ರಮಾಣ ಕಡಿಮೆಯಾಗುತ್ತಿದ್ದರಿಂದ ೧೯೩೨ರಲ್ಲಿ ನಿಜಾಮ್ ಸರ್ಕಾರದ ಗೋಲ್ಡ್ ಡೆವಲಪ್‌ಮೆಂಟ್ ಸಿಂಡಿಕೇಟ್ ಜಾನ್‌ಟೇಲರ ಕಂಪನಿಯ ಸಹಯೋಗದಲ್ಲಿ ಗಣಿಗಳ ಬಗೆಗೆ ಅಧ್ಯಯನ ಕೈಗೊಳ್ಳಲಾಯಿತು. ಈ ಅಧ್ಯಯನದಿಂದ ಯಾವುದೇ ಪರಿಹಾರ ಸಿಗದಿದ್ದರಿಂದ ಹಟ್ಟಿ ಚಿನ್ನದ ಗಣಿಯನ್ನು ಮತ್ತೆ ಸ್ಥಗಿತಗೊಳಿಸಲಾಯಿತು.

ಹೀಗೆ ನಿಜಾಮ್ ಸರ್ಕಾರವು ಚಿನ್ನದ ಗಣಿಗಾರಿಕೆಯ ಉತ್ಪಾದನೆಯನ್ನು ಆರಂಭಿಸಿ ನಷ್ಟವನ್ನು ಅನುಭವಿಸಿ ಸ್ಥಗಿತಗೊಳಿಸುತ್ತ ಅನೇಕ ಏಳು–ಬೀಳುಗಳನ್ನು ಕಂಡಿತು. ಈ ಪ್ರದೇಶವು ಭೀಕರವಾದ ಬರಗಾಲಕ್ಕೆ ತುತ್ತಾದಾಗ ಪರಿಹಾರ ಕಾರ್ಯವಾಗಿ ನಿಜಾಮ್ ಸರ್ಕಾರವು ಮತ್ತೆ ಹಟ್ಟಿ ಚಿನ್ನದ ಗಣಿಗಾರಿಕೆ ಆರಂಭಿಸಿತು. ಹೀಗೆ ೧೯೪೮ರವರೆಗೆ ನಿಜಾಮ್ ಸರ್ಕಾರದ ಅಧೀನದಲ್ಲಿದ್ದ ಹಟ್ಟಿ ಚಿನ್ನದ ಗಣಿಯು ಕಾರ್ಯನಿರ್ವಹಿಸುತ್ತಿತ್ತು. ನಂತರ ಕರ್ನಾಟಕದ ಏಕೀಕರಣದಿಂದ ಹಟ್ಟಿ ಚಿನ್ನದ ಗಣಿಯು ಮೈಸೂರು ರಾಜ್ಯಕ್ಕೆ ಸೇರ್ಪಡೆಗೊಂಡ ನಂತರವೂ ಏಳು–ಬೀಳುಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ.[೧೪೦]

ಸಿಮೆಂಟ್ ಮತ್ತು ಸುಣ್ಣದ ಕಲ್ಲು

ನೈಸರ್ಗಿಕ ಸುಣ್ಣದ ಕಲ್ಲು ಸಿಮೆಂಟ್ ಉತ್ಪಾದನೆಯಲ್ಲಿ ಕಚ್ಚಾ ವಸ್ತುವಾಗಿ ಬಳಕೆಯಾಗುತ್ತದೆ. ಗುಲಬರ್ಗಾ ಜಿಲ್ಲೆಯ ಶಾಹಾಬಾದ, ಚಿಂಚೋಳಿ, ಸೇಡಂ ಮತ್ತು ಚಿತ್ತಾಪುರ ಪ್ರದೇಶಗಳಲ್ಲಿ ಸುಣ್ಣದಕಲ್ಲು ಹೇರಳವಾಗಿದ್ದು ಮುಂಬೈ, ಹೈದರಾಬಾದ್, ಗೋವಾ ಮುಂತಾದ ನಗರಗಳಿಗೆ ರಫ್ತು ಆಗುತ್ತಿತ್ತು. ಶಾಹಾಬಾದ್‌ನಲ್ಲಿ ನಿಜಾಮ್ ಸರಕಾರದ ಪರವಾನಗಿ ಪಡೆದು ೧೯೭೪ರಲ್ಲಿ ಎಸಿಸಿ ಸಿಮೆಂಟ್ ಕಾರ್ಖಾನೆ ಪ್ರಾರಂಭವಾಗಿದ್ದು ದಕ್ಷಿಣ ಭಾರತದಲ್ಲಿನ ಮೊದಲ ಸಿಮೆಂಟ್ ಕಾರ್ಖಾನೆಯಾಗಿದೆ. ಈ ಪ್ರದೇಶದಲ್ಲಿ ಖಾಸಗಿ ಮತ್ತು ಸರಕಾರ ಒಡೆತನದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ನಿಜಾಮ್ ಸರಕಾರ ಸನ್ನದು ನೀಡಿ ಅವುಗಳಿಗೆ ಎಲ್ಲ ರೀತಿಯ ನೆರವು ನೀಡಿರುವುದು ಕಂಡುಬರುತ್ತದೆ.[೧೩೨]

೨.೬. ಕ್ಷಾಮ

ಹೈದರಾಬಾದ್ ಕರ್ನಾಟಕ ಪ್ರದೇಶವು ಸದಾ ಕ್ಷಾಮಕ್ಕೆ ತುತ್ತಾಗುವ ಪ್ರದೇಶವಾಗಿದೆ. ಇಲ್ಲಿನ ಭೂ ಪ್ರದೇಶವು ಮತ್ತು ಭೌಗೋಳಿಕತೆಯು ಕೃಷಿಗೆ ಪೂರಕವಾದ ವಾತಾವರಣ ಇಲ್ಲದ ಕಾರಣವು ಕ್ಷಾಮವು ಆವರಿಸುತ್ತದೆ. ಫಲವತ್ತಾದ ಭೂಮಿಯಿಲ್ಲದ ಈ ಪ್ರದೇಶದಲ್ಲಿ ಸಾಧಾರಣ ಮಳೆಯಾಗುತ್ತದೆ. ಮಳೆಯನ್ನೇ ನಂಬಿಕೊಂಡು ಕೃಷಿ ಚಟುವಟಿಕೆ ಮಳೆಯ ಅಭಾವದಿಂದಾಗಿ ಕ್ಷಾಮ ಉಂಟಾಗುತ್ತದೆ. ಕೆಲವು ಸಂದರ್ಭದಲ್ಲಿ ಅತಿಯಾದ ಮಳೆಯಿಂದಾಗಿ ನಷ್ಟವುಂಟಾಗುತ್ತದೆ.

ಅದರ ಅತಿವೃಷ್ಟಿ ಪ್ರಮಾಣ ಈ ಪ್ರದೇಶದಲ್ಲಿ ಕಡಿಮೆ ಕಂಡುಬರುತ್ತದೆ. ಮಳೆಯು ಕನಿಷ್ಠ ಪ್ರಮಾಣದಲ್ಲಿ ಬರುವುದರಿಂದಾಗಿ ಅತಿವೃಷ್ಟಿಕ್ಕಿಂತ ಮಳೆ ರಹಿತ ಕ್ಷಾಮತೆ ಹೆಚ್ಚಾಗಿ ಕಂಡುಬರುತ್ತದೆ. ನಿಜಾಮ್ ಆಳ್ವಿಕೆಯ ಅವಧಿಯಲ್ಲಿ ಈ ಪ್ರದೇಶವು ಹಲವು ಬಾರಿ ಕ್ಷಾಮಕ್ಕೆ ತುತ್ತಾಗಿರುವುದನ್ನು ಗಮನಿಸ ಬಹುದಾಗಿದೆ. ಅದರಲ್ಲಿ ಭೀಕರವಾದ ಸ್ವರೂಪವನ್ನು ಹೊಂದಿರುವ ದೊಡ್ಡ ಮಟ್ಟದ ಕ್ಷಾಮ ಜನರು ಮತ್ತು ಜಾನುವಾರುಗಳ ಪ್ರಾಣ ಹಾನಿಗೂ ಕೂಡ ಕಾರಣವಾಗಿದೆ.[೧೪೧]

ಕ್ಷಾಮ ಉಂಟಾದಾಗ ಆಹಾರದ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತದೆ. ಮಳೆಯ ಅಭಾವದಿಂದಾಗಿ ಕೃಷಿ ಚಟುವಿಕೆಗಳು ಸ್ಥಗಿತಗೊಂಡಿದ್ದರಿಂದಾಗಿ ಉತ್ಪಾದನಾ ಸಾಮರ್ಥ್ಯ ಇಲ್ಲದರಿಂದ ಆಹಾರದ ಸಮಸ್ಯೆಯಾಯಿತು. ಉತ್ಪಾದನೆ ಮಾಡಿದ ಆಹಾರವನ್ನು ದಾಸ್ತಾನು ಮಾಡಿದ್ದರಿಂದ ಅವಶ್ಯಕತೆಗೆ ಅನುಗುಣವಾದ ಆಹಾರ ಕೊರತೆಯಿಂದಾಗಿ ಜನರು ತಮ್ಮ ಉಪಜೀವನಕ್ಕಾಗಿ ಉದ್ಯೋಗ ಮತ್ತು ಆಹಾರವನ್ನು ಪಡೆಯುವುದಕ್ಕಾಗಿ ವಲಸೆ ಹೋಗುತ್ತಾರೆ. ಈ ರೀತಿಯಾಗಿ ವಲಸೆ ಹೋಗುವ ಪ್ರಮಾಣ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದಾಗಿದೆ.[೧೪೨]

ನಿಜಾಮರ ಆಳ್ವಿಕೆಯ ಅವಧಿಯಲ್ಲಿ ಆವರಿಸಿದ ಕ್ಷಾಮಗಳಲ್ಲಿ ಜನರ ಮೇಲೆ ಹೆಚ್ಚಿನ ಪರಿಣಾಮ ಬೀರಿರುವ ಕ್ಷಾಮಗಳು ೧೮೦೪, ೧೮೧೩, ೧೮೧೯, ೧೮೪೬, ೧೮೫೪, ೧೮೬೬, ೧೮೭೧, ೧೮೭೬, ೧೮೮೨, ೧೮೯೯ ಮತ್ತು ೧೯೦೦ನೇ ವರ್ಷಗಳಲ್ಲಿ ಅತಿ ಭೀಕರವಾಗಿ ಆವರಿಸಿತು. ಅದರಿಂದ ಕೃಷಿ ಚಟುವಟಿಕೆಗೆ ಹಿನ್ನಡೆಯಾಯಿತು. ಕೃಷಿಯನ್ನು ಉದ್ಯೋಗವನ್ನಾಗಿ ಮಾಡಿಕೊಂಡವರು ಬಹುತೇಕ ಜನರು ದುಡಿಯುವುದಕ್ಕೆ ಕೆಲಸವಿಲ್ಲದೆ ಕೆಲಸವನ್ನು ಹುಡುಕಿಕೊಂಡು ವಲಸೆ ಹೋಗುತ್ತಿದ್ದರು. ನಿಜಾಮ್ ಕಾಲದಲ್ಲಿ ಕೂಡ ಜನರು ಉದ್ಯೋಗವನ್ನು ವರಸಿಕೊಂಡು ವಲಸೆ ಹೋಗುತ್ತಿದ್ದರು. ಹೀಗೆ ಒಂದರ ಮೇಲೆ ಮತ್ತೊಂದು ಎನ್ನುವ ರೀತಿಯಲ್ಲಿ ಕ್ಷಾಮವು ಉಂಟಾಗುತ್ತಿರುವುದರಿಂದ ಅಭಿವೃದ್ಧಿಯಲ್ಲಿ ಕೂಡ ಹಿನ್ನಡೆಯನ್ನು ಕಾಣಬಹುದಾಗಿದೆ.[೧೪೩]

ಮಳೆಯ ಅಭಾವದಿಂದ ಕೃಷಿ ಬೆಳೆಗಳು ನಾಶವಾಗಿ ಜನತೆ ವಲಸೆ ಹೋಗಲು ಆರಂಭಿಸಿದರು. ಉಪಜೀವನಕ್ಕಾಗಿ ದರೋಡೆ, ಕಳ್ಳತನ ಮತ್ತು ಮೋಸತನ ಮುಂತಾದ ಸಾಮಾಜಿಕ ಸಮಸ್ಯೆಗಳು ಹೆಚ್ಚಾದವು. ಸಂಸ್ಥಾನದಲ್ಲಿ ಕುಡಿಯುವ ನೀರಿನ ಅಭಾವ ಉಂಟಾಯಿತು, ನದಿ ಹಳ್ಳಕೊಳ್ಳಗಳು ಬತ್ತಿಹೋಗಿದ್ದವು. ಮೇವು ಮತ್ತು ನೀರಿನ ಅಭಾವದಿಂದ ಜಾನುವಾರುಗಳ ಸಾವು ವ್ಯಾಪಕವಾಗಿತ್ತು. ಗುಲಬರ್ಗಾ ಜಿಲ್ಲೆಯೊಂದರಲ್ಲಿಯೇ ಸುಮಾರು ೮೨,೦೦೦ ಜಾನುವಾರುಗಳು ಸಾವು ಹೊಂದಿದ್ದವು. ಕೃಷಿ ಉತ್ಪಾದನೆ ಇಲ್ಲದೆ ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಕುಶಲ ಕೈಗಾರಿಕೆಗಳು ಕೂಡ ಕೆಲಸವಿಲ್ಲದೆ ಹಿನ್ನಡೆ ಅನುಭವಿಸಿ ಆರ್ಥಿಕ ಮಟ್ಟ ಕುಸಿತ ಕಂಡಿತು.[೧೪೪]

ಕ್ಷಾಮ ಪರಿಹಾರ ಕಾರ್ಯಗಳು

ಹೈದರಾಬಾದ್ ಸಂಸ್ಥಾನದಲ್ಲಿ ಆಗಾಗ ಉಂಟಾಗುತ್ತಿದ್ದ ಕ್ಷಾಮ ಡಾಮರುಗಳಿಂದ ಅನೇಕ ಸಮಸ್ಯೆಗಳು ಉಂಟಾಗಿದ್ದವು. ನಿಜಾಮ್ ಸರಕಾರ ಕ್ಷಾಮ ಪರಿಹಾರ ಕಾರ್ಯಗಳಿಗಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿತು. ಸಂಸ್ಥಾನದಲ್ಲಿ ಉಂಟಾಗಿದ್ದ ಆಹಾರ ಸಮಸ್ಯೆಯನ್ನು ಪರಿಹರಿಸಲು ಸರಕಾರದ ಉಗ್ರಾಣದಲ್ಲಿದ್ದ ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿತು. ದಿನಸಿ ಧಾನ್ಯಗಳು ಮತ್ತು ದಿನನಿತ್ಯ ಬಳಸುವ ವಸ್ತುಗಳನ್ನು ಏಕಬೆಲೆಗೆ ಮಾರಾಟ ಮಾಡಲು ಸರಕಾರ ಆದೇಶ ಹೊರಡಿಸಿತು. ಕೃಷಿ ನಷ್ಟವನ್ನು ಭರಿಸಲು ಕೃಷಿ ಕಾರ್ಮಿಕರಿಗೆ ಮತ್ತು ರೈತಾಪಿ ಜನರಿಗೆ ದಿನಗೂಲಿ ಕೆಲಸ ನೀಡುವ ಪರಿಹಾರ ಯೋಜನೆ ಜಾರಿಗೆ ತಂದಿತು. ಕ್ಷಾಮ ಪರಿಹಾರ ಯೋಜನೆಯಡಿ ರಸ್ತೆ ನಿರ್ಮಾಣ ಮಾಡುವುದು, ಕುಡಿಯುವ ನೀರಿನ ಬಾವಿ ತೋಡುವುದು, ಸರಕಾರಿ ಕಚೇರಿಗಳ ಕಟ್ಟಡ ನಿರ್ಮಿಸುವುದು ಮುಂತಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಯಿತು. ಕೂಲಿಗಾರರಿಗೆ ಪ್ರತಿದಿನ ಪುರುಷನಿಗೆ ಎರಡು ಆಣೆ, ಸ್ತ್ರೀಯರಿಗೆ ಒಂದೂವರೆ ಆಣೆ, ಮಕ್ಕಳಿಗೆ ಒಂದು ಆಣೆ ಕೂಲಿ ನೀಡುತ್ತಿತ್ತು. ಅಂಗವಿಕಲರು, ವೃದ್ಧರು ಮತ್ತು ಬಲಹೀನರಿಗೆ ಸಹಾಯಧನ ನೀಡಲಾಯಿತು.

ಜಿಲ್ಲಾಡಳಿತಗಳ ಉಸ್ತುವಾರಿಯಲ್ಲಿ ಸರಕಾರ ಪರಿಹಾರ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿತು. ಜಿಲ್ಲಾಧಿಕಾರಿಯಾದ ತಾಲೂಕುದಾರ ತನ್ನ ಜಿಲ್ಲೆಯ ವ್ಯಾಪ್ತಿಯಲ್ಲಿ ಕ್ಷಾಮ ಪರಿಹಾರ ಕುರಿತು ಕೈಗೊಂಡ ಕ್ರಮಗಳನ್ನು ಪ್ರತಿವಾರ ಸರಕಾರಕ್ಕೆ ವರದಿ ಸಲ್ಲಿಸಬೇಕಿತ್ತು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬರ ಪರಿಹಾರ ಕಾರ್ಯಕ್ರಮದಡಿ ದಿನಗೂಲಿ ಕೆಲಸಗಾರರು ನಿರ್ಮಿಸಿದ ಬಾವಿಗಳನ್ನು ಇಂದಿಗೂ ಕಾಣಬಹುದಾಗಿದೆ. ಈ ಬಾವಿಗಳನ್ನು ಬರಗಾಲದ ಬಾವಿ ಅಥವಾ ಬರಗಾಲದ ನಿಜಾಮ್ ಬಾವಿ ಎಂದು ಕರೆಯಲಾಗುತ್ತದೆ. ಕ್ಷಾಮದಿಂದಾಗಿ ಕೃಷಿ ಚಟುವಟಿಕೆಗಳು ಸ್ಥಗಿತಗೊಂಡಿದ್ದ ಸಂದರ್ಭದಲ್ಲಿ ಸರಕಾರ ರೈತರಿಗೆ ಕೃಷಿಸಾಲ ನೀಡಿ ಕೃಷಿ ವ್ಯವಸ್ಥೆಗೆ ಉತ್ತೇಜನ ನೀಡಿತ್ತು.[೧೪೫]

೭.೭. ಅಭಿವೃದ್ಧಿ ಹಾಗೂ ಅನಭಿವೃದ್ಧಿ

ಅಭಿವೃದ್ಧಿಯನ್ನು ಅಧ್ಯಯನ ಮಾಡುವಾಗ ಮೊಟ್ಟಮೊದಲು ಸಾಂಪ್ರದಾಯಿಕ ಸಿದ್ಧಾಂತಗಳನ್ನು ಆಧರಿಸಿ ಅಭಿವೃದ್ಧಿಯನ್ನು ನೋಡಲಾಗುತ್ತಿತ್ತು. ಇದರಲ್ಲಿ ಪ್ರದೇಶ ಎನ್ನುವುದು ಅಭಿವೃದ್ಧಿಯನ್ನು ನಿರ್ಧರಿಸುವ ಸಂಗತಿಯನ್ನಾಗಿ ಪರಿಗಣಿಸಿಲ್ಲ. ಏಕೆಂದರೆ ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳೆಲ್ಲವೂ ಅಖಂಡ ನೆಲೆಯಲ್ಲಿ ರೂಪುಗೊಂಡ ಸಿದ್ಧಾಂತಗಳಾಗಿವೆ. ಅಬಿವೃದ್ಧಿ ತನ್ನಷ್ಟಕ್ಕೆ ತಾನು ಆರ್ಥಿಕತೆಯ ಎಲ್ಲ ಪ್ರದೇಶಗಳನ್ನು ಮತ್ತು ಸಮಾಜ ಎಲ್ಲ ವರ್ಗಗಳನ್ನು ಒಳಗೊಳ್ಳುವ ಗುಣವಿದೆ ಎಂದು ಪ್ರತಿಪಾದಿಸಿಕೊಂಡು ಬರಲಾಗಿದೆ. ಹೀಗೆ ನೋಡುವುದರಿಂದ ರಾಜ್ಯ ಅಥವಾ ಸಂಸ್ಥಾನದ ಆಡಳಿತ

ಕೇಂದ್ರದ ಅಭಿವೃದ್ಧಿಯಾಗುತ್ತದೆ ವಿನಃ ಗ್ರಾಮೀಣ ಪ್ರದೇಶದ ಅಭಿವೃದ್ಧಿಯನ್ನು ನೋಡಲು ಸಾಧ್ಯವಿಲ್ಲ. ಆದ್ದರಿಂದ ಅಭಿವೃದ್ಧಿಯ ಅಧ್ಯಯನ ಮಾಡುವ ಕ್ರಮಗಳು ಇಂದು ಬದಲಾಗಿರುವುದು ಕಂಡುಬರುತ್ತದೆ. ಏಕೆಂದರೆ ರಾಜ್ಯ ಅಥವಾ ಸಂಸ್ಥಾನ ಅಭಿವೃದ್ಧಿಯನ್ನು ನೋಡಿದರೆ ಆ ಅಭಿವೃದ್ಧಿಯಲ್ಲಿ ಪ್ರದೇಶ ಮತ್ತು ಗ್ರಾಮೀಣ ಮಟ್ಟದ ಅಭಿವೃದ್ಧಿಯನ್ನು ಗುರುತಿಸಲು ಸಾಧ್ಯವಿಲ್ಲದ ಕಾರಣ ಇಂದು ಪ್ರದೇಶದ ಮೂಲಕ ಅಭಿವೃದ್ಧಿಯನ್ನು ನೋಡುವ ಅಧ್ಯಯನ ಕ್ರಮಗಳು ಹುಟ್ಟಿಕೊಂಡಿವೆ.

ರಾಜ್ಯ ಅಥವಾ ಸಂಸ್ಥಾನವನ್ನು ಪರಿಗಣನೆಗೆ ತೆಗೆದುಕೊಂಡು ಆ ರಾಜ್ಯ ಅಥವಾ ಅರಸು ಮನೆತನದ ಎಲ್ಲ ಭಾಗಗಳಲ್ಲಿ ಅಭಿವೃದ್ಧಿಯು ಒಂದೇ ರೀತಿಯಲ್ಲಿ ಇರುವುದಿಲ್ಲ. ಆ ಪ್ರದೇಶದಲ್ಲಿ ಸಿಗುವ ನೈಸರ್ಗಿಕ ಸಂಪನ್ಮೂಲಗಳು, ಭೌಗೋಳಿಕ ಅಂಶಗಳು ಹಾಗೂ ಮಾನವ ಸಂಪನ್ಮೂಲಗಳು ಭಿನ್ನ ಭಿನ್ನವಾಗಿರುವುದರಿಂದ ಅಭಿವೃದ್ಧಿಯು ಎಲ್ಲ ಪ್ರದೇಶಗಳಿಗೂ ಮತ್ತು ಎಲ್ಲ ಜನರಿಗೂ ಒದಗುವಂತೆ ಇರಬೇಕು ಎಂಬುದನ್ನು ಮನಗಾಣಬೇಕಾಗಿದೆ. ಹೀಗೆ ನಿಜಾಮ್ ಸಂಸ್ಥಾನದ ಅಭಿವೃದ್ಧಿಯನ್ನು ನೋಡುವ ಕ್ರಮದಲ್ಲಿ ಬದಲಾವಣೆಯಾಗಬೇಕಾಗಿದೆ. ಹೈದರಾಬಾದ್ ಕರ್ನಾಟಕ ಆಡಳಿತ ಕೇಂದ್ರವಾದ ಪ್ರದೇಶ ಇರುವುದರಿಂದ ಸಹಜವಾಗಿ ಪ್ರಭುತ್ವವು ಹೆಚ್ಚಿನ ಒತ್ತು ನೀಡುತ್ತದೆ. ಇದೇ ಮಾನದಂಡವನ್ನಿಟ್ಟುಕೊಂಡು ನಿಜಾಮರ ಅಧೀನದಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಯನ್ನು ನೋಡಿದ್ದೇಯಾದರೆ ವಸ್ತುನಿಷ್ಠವಾದ ಅಭಿವೃದ್ಧಿಯನ್ನು ನೋಡಲು ಸಾಧ್ಯವಿಲ್ಲ. ಆದ್ದರಿಂದಾಗಿ ನಿಜಾಮರ ಆಳ್ವಿಕೆಯಲ್ಲಿದ್ದ ತೆಲಂಗಾಣ, ಮರಾಠವಾಡ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳ ಅಭಿವೃದ್ಧಿಯನ್ನು ಪ್ರತ್ಯೇಕವಾಗಿ ನೋಡುವ ಮೂಲಕ ವಾಸ್ತವ ಚರಿತ್ರೆಯನ್ನು ಗ್ರಹಿಸಲು ಸಾಧ್ಯವಾಗುತ್ತದೆ. ನಿಜಾಮರು ಸಂಸ್ಥಾನದಲ್ಲಿ ಅಭಿವೃದ್ಧಿಗಾಗಿ ಜಾರಿಗೆ ತಂದ ಕಾಯಿದೆ ಕಾನೂನುಗಳು ಮತ್ತು ಯೋಜನೆಗಳನ್ನು ಇಟ್ಟುಕೊಂಡು ಪ್ರದೇಶವಾಗಿ ಆಗಿರುವ ಅಭಿವೃದ್ಧಿಯನ್ನು ಚರ್ಚೆಗೆ ಒಳಪಡಿಸುವುದರ ಮೂಲಕ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಯ ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ.[೧೪೬]

ನಿಜಾಮರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಅರಸೊತ್ತಿಗೆ ಮತ್ತು ಸಾಮ್ರಾಜ್ಯಶಾಹಿ ಅಭಿವೃದ್ಧಿ ಮಾದರಿಯನ್ನು ಅಳವಡಿಸಿಕೊಳ್ಳುವ ಮೂಲಕ ಸಂಸ್ಥಾನದ ಅಭಿವೃದ್ಧಿಯನ್ನು ಕೈಗೊಂಡಿರುವುದನ್ನು ಗಮನಿಸಬಹುದಾಗಿದೆ. ನಿಜಾಮರು ಆರಂಭದಲ್ಲಿ ಮೊಗಲರ ಅಭಿವೃದ್ಧಿ ಮಾದರಿಯನ್ನೇ ಮುಂದುವರೆಸಿ ಕೊಂಡು ಅಭಿವೃದ್ಧಿಯನ್ನು ಕಂಡುಕೊಳ್ಳಲು ಪ್ರಯತ್ನಿಸಿದರು. ಸಂಸ್ಥಾನದ ಕೃಷಿ, ನೀರಾವರಿ, ಗೃಹ ಕೈಗಾರಿಕೆ, ವ್ಯಾಪಾರ ಮುಂತಾದ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಜಾರಿಗೆ ತಂದಿರುವುದು ಗಮನಿಸಬಹುದಾಗಿದೆ. ಜೊತೆಗೆ ದಕ್ಷಿಣ ಭಾರತದಲ್ಲಿ ಆದ ರಾಜಕೀಯ ಧ್ರುವೀಕರಣದ ಫಲವಾಗಿ

ನಿಜಾಮರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಬ್ರಿಟಿಶರ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದರು. ಅದರಿಂದ ನಿಜಾಮರು ಬ್ರಿಟಿಶ್ ಆಶ್ರಿತ ಸಂಸ್ಥಾನವಾಗಿ ಅಧಿಕಾರ ನಡೆಸಬೇಕಾಯಿತು.[೧೪೭]

ನಿಜಾಮರು ಬ್ರಿಟಿಶರ ಅಭಿವೃದ್ಧಿ ಮಾದರಿಯಿಂದ ಪ್ರಭಾವಿತರಾಗಿ ಸಂಸ್ಥಾನದಲ್ಲಿ ರಸ್ತೆ ಸಾರಿಗೆ, ರೈಲ್ವೆ ಸಾರಿಗೆ, ವಿಮಾನ ಸಾರಿಗೆ ಮತ್ತು ನೀರಾವರಿಯಲ್ಲಿ ಅಭಿವೃದ್ಧಿ ಕಂಡುಕೊಳ್ಳಲು ಪ್ರಯತ್ನಿಸಿದರು. ಹಾಗೆ ಸಂಸ್ಥಾನದಲ್ಲಿ ಹರಿಯುವ ನದಿಗಳಿಗೆ ಬ್ರಿಟಿಶರ ಸಹಕಾರದೊಂದಿಗೆ ಅಣೆಕಟ್ಟನ್ನು ಕಟ್ಟುವ ಮೂಲಕ ಕೃಷಿ ನೀರಾವರಿ ಭೂಮಿ ವಿಸ್ತರಣೆ ಮಾಡಿರುವುದು ಕಂಡುಬರುತ್ತದೆ. ಅಂತಹ ನೀರಾವರಿ ಯೋಜನೆಗಳೆಂದರೆ ನಿಜಾಮ ಸಾಗರ, ನಾಗಾರ್ಜುನ ಸಾಗರ ಮತ್ತು ತುಂಗಭದ್ರಾ ಮತ್ತು ರಾಜ್ಯಗಳಲ್ಲಿ ಶಿಕ್ಷಣ ಮತ್ತು ದೇವಾಲಯಗಳಿಗೆ ದಾನ ನೀಡಿರುವುದು ಕೂಡ ಗಮನಿಸ ಬಹುದಾಗಿದೆ.[೧೪೮]

ಹೀಗೆ ನಿಜಾಮರು ಅಳವಡಿಸಿಕೊಂಡ ಈ ಅಭಿವೃದ್ಧಿ ಮಾದರಿಗೆ ಅನುಗುಣವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೂಡ ಅನೇಕ ಹೊಸ ಹೊಸ ಯೋಜನೆಗಳನ್ನು ಕಾರ್ಯಗತಗೊಳಿಸಿರುವುದು ಗಮನಿಸಬಹುದಾಗಿದೆ. ಈ ಪ್ರದೇಶದಲ್ಲಿ ಹೇರಳವಾಗಿ ಸಿಗುವ ನೈಸರ್ಗಿಕ ಸಂಪನ್ಮೂಲಗಳ ಆಧಾರದ ಮೇಲೆ ಹತ್ತಿ ಬಟ್ಟೆ ಕೈಗಾರಿಕೆ, ಸಿಮೆಂಟ್ ಕೈಗಾರಿಕೆ, ಚಿನ್ನ ಗಣಿಗಾರಿಕೆ, ಗುಂಡಿ ಕೈಗಾರಿಕೆ ಮತ್ತು ಬಣ್ಣದ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರ ಮೂಲಕ ಜನರಿಗೆ ಉದ್ಯೋಗವನ್ನು ನೀಡಿರುವುದು ಗಮನಿಸಬಹುದಾಗಿದೆ.

ನಿಜಾಮ್ ಪ್ರಭುತ್ವವು ಕೈಗಾರಿಕೆಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಂಸ್ಥಾನದಲ್ಲಿ ರಸ್ತೆ ಸಾರಿಗೆ, ರೈಲ್ವೆ ಸಾರಿಗೆಯಲ್ಲಿ ಸರ್ಕಾರವೇ ಬಂಡವಾಳ ಹೂಡುವುದರ ಮೂಲಕ ಕಾರ್ಯಗತ ಗೊಳಿಸಿರುವುದು ಗಮನಿಸಬಹುದಾಗಿದೆ. ಇದರಿಂದಾಗಿ ಗುಲಬರ್ಗಾ ಮತ್ತು ರಾಯಚೂರು ಪ್ರದೇಶಗಳು ರೈಲ್ವೆ ಸಂಪರ್ಕ ಪಡೆದುಕೊಳ್ಳುವ ಮೂಲಕ ಮುಂಬೈ ಮತ್ತು ಮದ್ರಾಸ್ ನಗರಗಳೊಂದಿಗೆ ವ್ಯಾಪಾರ–ವಾಣಿಜ್ಯಕ್ಕೆ ಅನುಕೂಲವಾಯಿತು.[೧೪೯]

ಈ ಪ್ರದೇಶದಲ್ಲಿ ಹರಿಯುವ ನದಿಗಳಿಗೆ ಅಣೆಕಟ್ಟನ್ನು ಕಟ್ಟುವುದರ ಮೂಲಕ ನೀರಾವರಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ನೀರಾವರಿ ಯೋಜನೆಗಳು ಜಾರಿಗೆ ತಂದಿರುವುದು ಗಮನಿಸ ಬಹುದಾಗಿದೆ. ಮದ್ರಾಸ್ ಸರ್ಕಾರ ಜೊತೆಗೂಡಿ ತುಂಗಭದ್ರಾ ನದಿಗೆ ಅಣೆಕಟ್ಟೆಯನ್ನು ಕಟ್ಟುವ ಮೂಲಕ ಕೃಷಿ ಭೂಮಿಗೆ ನೀರಾವರಿಗೆ ಒಳಪಡಿಸಿತ್ತು. ಹಾಗೆಯೇ ಕೃಷ್ಣಾ ನದಿಗೆ ಅಣೆಕಟ್ಟೆಯನ್ನು ಕಟ್ಟುವ ಪೂರ್ವ ಯೋಜನೆಯನ್ನು ಸಿದ್ಧಪಡಿಸಲಾಯಿತು. ಆದರೆ ಸ್ವಾತಂತ್ರ್ಯ ಚಳವಳಿಯ ಪ್ರಭಾವ ಸಂಸ್ಥಾನಕ್ಕೆ ವ್ಯಾಪಿಸಿದ್ದರಿಂದ ಈ ಯೋಜನೆಯನ್ನು ಕೈಬಿಡಲಾಯಿತು. ಹೀಗೆ ನಿಜಾಮರು

ವಸಾಹತುಶಾಹಿ ಸರ್ಕಾರದ ಸಹಕಾರದಿಂದ ಸಂಸ್ಥಾನದ ಉದ್ದಿಮೆ, ವ್ಯಾಪಾರ, ಶಿಕ್ಷಣ, ನಾಗರಿಕ ಸೌಲಭ್ಯದ ಜೊತೆಗೆ ಸಾಧಿಸಿ ವ್ಯವಸ್ಥೆ, ಕೈಗಾರಿಕೆ, ಕೃಷಿ ನೀರಾವರಿ ಮುಂತಾದ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಜಾರಿಗೆ ತಂದಿರುವುದು ಗಮನಿಸಬಹುದಾಗಿದೆ.

ನಿಜಾಮರು ತಮ್ಮ ಸಂಸ್ಥಾನದಲ್ಲಿ ಅಭಿವೃದ್ಧಿಯನ್ನು ಜಾರಿಗೆ ತಂದರೂ ಕೂಡ ಅನೇಕ ಕ್ಷೇತ್ರಗಳಲ್ಲಿ ಅನಭಿವೃದ್ಧಿ ಗಮನಿಸಬಹುದಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಭೌಗೋಳಿಕತೆಯು ಅಭಿವೃದ್ಧಿಗೆ ಪೂರಕವಾದ ವಾತಾವರಣ ಇಲ್ಲದ್ದರಿಂದ ಕ್ಷೇತ್ರಗಳಲ್ಲಿ ಅಬಿವೃದ್ಧಿಗೆ ಹಿನ್ನಡೆಯಾಯಿತು. ನಿಜಾಮ್ ಪ್ರಭುತ್ವವು ಕೂಡ ಹೆಚ್ಚಾಗಿ ನಗರ ಪ್ರದೇಶಗಳನ್ನು ಕೇಂದ್ರವಾಗಿಟ್ಟುಕೊಂಡು ಅಭಿವೃದ್ಧಿ ರೂಪುರೇಷೆಗಳನ್ನು ರಚಿಸಿಕೊಂಡಿದ್ದರಿಂದಾಗಿ ಗ್ರಾಮೀಣ ಮಟ್ಟದಲ್ಲಿನ ಅಭಿವೃದ್ಧಿ ಕುಂಠಿತವಾಯಿತು. ಇದಕ್ಕೆ ಪರೋಕ್ಷವಾಗಿ ಗ್ರಾಮೀಣ ಮಟ್ಟದಲ್ಲಿದ್ದ ಸ್ಥಳೀಯ ಅಧಿಕಾರಿಗಳೇ ಕಾರಣ. ಏಕೆಂದರೆ ಈ ಆಡಳಿತ ವರ್ಗದ ಅಧಿಕಾರಿಗಳೇ ಭೂಮಾಲೀಕರಾಗಿದ್ದರಿಂದ ಬಹುಸಂಖ್ಯಾತ ಜನರು ಈ ಭೂಮಾಲೀಕರ ಭೂಮಿಯಲ್ಲಿ ದುಡಿಯುತ್ತಿದ್ದರು. ಇದರಿಂದಾಗಿ ಪ್ರಭುತ್ವವು ಜಾರಿಗೆ ತಮ್ಮದೇ ಅಭಿವೃದ್ಧಿ ಕಾರ್ಯಗಳು ಗ್ರಾಮೀಣ ಮಟ್ಟದಲ್ಲಿ ರೂಪುಗೊಂಡರೆ ಭೂ ಮಾಲೀಕರು ಭೂಮಿಯಲ್ಲಿ ದುಡಿಯುವ ವರ್ಗವನ್ನು ಕಳೆದುಕೊಳ್ಳಲು ಸಿದ್ಧರಿಲ್ಲದೆ ಈ ಭೂಮಾಲೀಕರು ಗ್ರಾಮೀಣ ಮಟ್ಟದಲ್ಲಿನ ಅಭಿವೃದ್ಧಿಯನ್ನು ಕುಂಠಿತಗೊಳ್ಳುವಂತೆ ಮಾಡಿದರು. ಹೀಗೆ ಹೈದರಾಬಾದ್ ಕರ್ನಾಟಕ ಪ್ರದೇಶವು ನಿಜಾಮ್ ಮತ್ತು ಸ್ಥಳೀಯ ಆಡಳಿತ ಅಧಿಕಾರಿಗಳ ಸ್ವಹಿತಾಸಕ್ತಿಯಿಂದಾಗಿ ಅಭಿವೃದ್ಧಿ ಹೊಂದಿರುವುದನ್ನು ಗಮನಿಸಬಹುದಾಗಿದೆ.[೧೫೦]

ಉಪಸಂಹಾರ

ಹೈದರಾಬಾದ್ ಕರ್ನಾಟಕದಲ್ಲಿ ಮೊಗಲರ ಆರ್ಥಿಕ ನೀತಿಯನ್ನು ಅನುಸರಿಸಿ ಕೆಲವು ಮಾರ್ಪಾಡುಗಳೊಂದಿಗೆ ನಿಜಾಮರು ತಮ್ಮ ಆರ್ಥಿಕ ನೀತಿಯನ್ನು ಜಾರಿಗೊಳಿಸಿದರು. ಬ್ರಿಟಿಶರು ವಸಾಹತು ಧೋರಣೆಗನುಗುಣವಾಗಿ ಸಹಾಯಕ ಸೈನ್ಯ ಪದ್ಧತಿ ಮೂಲಕ ಸಂಸ್ಥಾನದ ಮೇಲೆ ಪರೋಕ್ಷವಾಗಿ ಆರ್ಥಿಕ ಹಿಡಿತವನ್ನು ಸಾಧಿಸಿದರು.

ನಿಜಾಮ ಸಂಸ್ಥಾನದಲ್ಲಿ ಬ್ರಿಟಿಶರ ಭೂಕಂದಾಯ ನೀತಿಗಳಾದ ರೈತವಾರಿ ಮತ್ತು ಮಹಲ್ವಾರಿ ಪದ್ಧತಿಗಳನ್ನು ಜಾರಿಗೆ ತರುವ ಮೂಲಕ ಸಂಸ್ಥಾನದಲ್ಲಿದ್ದ ಜಹಾಗೀರದಾರರನ್ನು ನಿಯಂತ್ರಿಸಲಾಯಿತು. ಸಣ್ಣಮಟ್ಟ ಜಹಾಗೀರದಾರರ ಉದಯಕ್ಕೆ ಕಾರಣವಾಯಿತು. ಇವರು ಭೂಮಾಲೀಕ ವರ್ಗವಾಗಿ ಮಾರ್ಪಟ್ಟರು. ನಿಜಾಮರು ಕೃಷಿ, ಕೃಷಿ ಉತ್ಪಾದನೆ, ನೀರಾವರಿ, ವಾಣಿಜ್ಯ ಮತ್ತು ವ್ಯಾಪಾರ, ನಗರೀಕರಣ ಮತ್ತು ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದು ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಯ ಕಡೆಗೆ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರು. ಕೃಷಿ, ನೀರಾವರಿ, ಭೂಕಂದಾಯ ವ್ಯವಸ್ಥೆಯಲ್ಲಿ

ಅನೇಕ ಮಾರ್ಪಾಡು ಮಾಡಿ ಕೃಷಿಯನ್ನು ವಾಣಿಜ್ಯೀಕರಣಕ್ಕೆ ಅನುಗುಣವಾಗಿ ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿಗೆ ತಂದರು.

ಸಂಸ್ಥಾನದಲ್ಲಿ ಕೃಷಿಯಾಧಾರಿತ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದು ಅವುಗಳೊಂದಿಗೆ ಗೃಹ ಕೈಗಾರಿಕೆ ಮತ್ತು ಕುಶಲ ಕೈಗಾರಿಕೆಗಳಿಗೆ ಉತ್ತೇಜನ ನೀಡಲಾಗಿತ್ತು. ನಿಜಾಮರು ಸಂಸ್ಥಾನದಲ್ಲಿನ ನೈಸರ್ಗಿಕ ಸಂಪನ್ಮೂಲಗಳಿಂದ ಉತ್ತೇಜಿತರಾಗಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗಾವಕಾಶ ಸೃಷ್ಟಿಸಿದರು. ನಿಜಾಮರು ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಅನೇಕ ಸುಧಾರಣೆ ಕ್ರಮಗಳನ್ನು ಜಾರಿಗೆ ತಂದಿದ್ದರೂ ಪದೇ ಪದೇ ಉಂಟಾದ ಕ್ಷಾಮದಿಂದ ಆರ್ಥಿಕ ಬೆಳವಣಿಗೆ ಕುಂಠಿತಗೊಂಡಿತು.

ಮೊಗಲ್, ಬಹಮನಿ, ಆದಿಲಾಶಾಹಿ ಹಾಗೂ ಬ್ರಿಟಿಶ್ ಆರ್ಥಿಕ ನೀತಿಗಳ ಚಹರೆಗಳು ನಿಜಾಮ್ ಆರ್ಥಿಕ ನೀತಿಯಲ್ಲಿ ಕಾಣಿಸಿಕೊಂಡವು. ಆದರೆ ನಿಜಾಮರ ಆಳ್ವಿಕೆಯ ಸಂದರ್ಭದಲ್ಲಿ ಇಂಗ್ಲಿಶ್ ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರ–ವಾಣಿಜ್ಯದ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸುವ ತನ್ನ ಪ್ರಯತ್ನದಲ್ಲಿ ಯಶಸ್ಸನ್ನು ಕಂಡಿದ್ದರಿಂದಾಗಿ ನಿಜಾಮರ ಆರ್ಥಿಕ ನೀತಿಯು ಸ್ಪಷ್ಟವಾಗಿ ರೂಪುಗೊಳ್ಳಲು ಸಾಧ್ಯವಾಗಲಿಲ್ಲ. ಟಿಪ್ಪು ಸುಲ್ತಾನನ ಪತನದ ಬಳಿಕ ಕಂಪನಿಯು ಸ್ಥಳೀಯ ಆರ್ಥಿಕತೆಯ ಮೇಲೆ ನಿಯಂತ್ರಣ ಸಾಧಿಸಿ, ಸ್ಥಳೀಯ ರಾಜಕಾರಣವನ್ನು ತನ್ನ ಹಿತಾಸಕ್ತಿಗಳಿಗೆ ಅನುಗುಣವಾಗಿ ಬಳಸಿಕೊಂಡಿತು. ಇದು ಸ್ಥಳೀಯ ಸಂಸ್ಥಾನಗಳಿಗೆ ದೊಡ್ಡ ಹಿನ್ನಡೆಯಾಗಿ ಪರಿಣಮಿಸಿತು. ಹೈದರಾಬಾದ್ ಸಂಸ್ಥಾನಕ್ಕೆ ಬ್ರಿಟಿಶ್ ಮಾದರಿಯ ಆಧುನೀಕರಣದ ನೇರ ಪ್ರವೇಶವೂ ಆಗಲಿಲ್ಲ, ಅದೇ ರೀತಿ ಸಂಸ್ಥಾನದ ಅಭಿವೃದ್ಧಿ ಮಾದರಿಯೂ ಸಂಸ್ಥಾನದಾದ್ಯಂತ ಅನುಷ್ಠಾನಗೊಳ್ಳಲೂ ಇಲ್ಲ. ಇನ್ನು ಸಂಸ್ಥಾನದ ಭೌಗೋಳಿಕ ವಾತಾವರಣವೂ ಅಭಿವೃದ್ಧಿಗೆ ಪೂರಕವಾಗಿರಲಿಲ್ಲ. ಹೈದರಾಬಾದ್ ಕರ್ನಾಟಕದಲ್ಲಿ ಅಭಿವೃದ್ಧಿಯು ಸೀಮಿತ ನೆಲೆಯಲ್ಲಿ ನಡೆದು ಬಹುತೇಕ ಪ್ರದೇಶಗಳು ಅನಭಿವೃದ್ಧಿಯನ್ನೇ ಅನುಭವಿಸಬೇಕಾಗಿ ಬಂತು. ಇದಕ್ಕೆ ನಿಜಾಮ್ ಆಳ್ವಿಕೆಯಲ್ಲಿನ ಮಿತಿಗಳು ಒಂದಷ್ಟು ಕಾರಣವಾದರೆ, ಅಂದಿನ ಸಂದರ್ಭದ ರಾಜಕಾರಣ, ಸಾಮಾಜಿಕ ಶ್ರೇಣೀಕರಣ ಹಾಗೂ ಭೌಗೋಳಿಕ ವಾತಾವರಣ ಪ್ರಮುಖ ಕಾರಣಗಳಾಗಿ ಕಂಡುಬರುತ್ತವೆ.

ಕೊನೆಟಿಪ್ಪಣಿಗಳು

೧. ನಾಯೀಮ್ ಎಮ್.ಎ, ೧೯೮೫, **ಮೊಗಲ್ ಅಡ್ಮಿನಿಸ್ಟ್ರೇಷನ್ ಆಫ್ ಡೆಕ್ಕನ್ ಅಂಡರ್ ನಿಜಾಮ್ ಮುಲ್ಕ ಅಸಫ್ ಜಹಾ ೧೭೨೦–೧೭೪೮,** ಜಾಕೋ ಪಬ್ಲಿಕೇಷನ್ ಬಾಂಬೆ. ಪು. ೯೯–೧೦೦

೨. ರಘುನಾಥರಾವ್ ಪಿ, ೨೦೦೭, **ಹಿಸ್ಟರಿ ಆ್ಯಂಡ್ ಕಲ್ಚರ್ ಆಫ್ ಆಂಧ್ರಪ್ರದೇಶ,** ಸ್ಟ್ರೆಲಿಂಗ್ ಪಬ್ಲಿಕೇಷನ್, ಹೈದರಾಬಾದ್. ಪು.೧೯೬–೧೭೦

೩. ಮಜುಂದಾರ ಆರ್.ಸಿ, (ಪ್ರ.ಸಂ), ಮೂಲ), ನರಸಿಂಹಮೂರ್ತಿ (ಪ್ರ.ಸಂ.ಅನು), ೨೦೦೩, **ಮೊಗಲ ಸಾಮ್ರಾಜ್ಯ, ಸಂಪುಟ ೧೫**, ಭಾರತೀಯ ವಿದ್ಯಾಭವನ, ಬೆಂಗಳೂರು. ಪು. ೨೪೬-೨೪೮

೪. ಮುಜುಮ್‌ದಾರ ಆರ್.ಸಿ, ರಾಯಚೌಧುರಿ ಎಚ್.ಸಿ.(ಮೂಲ), ಶಾರದಾ ಪ್ರಸಾದ್ (ಅನು), ೨೦೧೨, **ಭಾರತದ ಪ್ರೌಢ ಇತಿಹಾಸ**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ಪು. ೪೯೩-೪೯೪

೫. ಅಹಮ್ಮದ ರಜಾಖಾನ್, ೧೯೮೨, **ಸುಬಾ ಆಫ್ ಬಿಹಾರ್ ಅಂಡರ್ ದಿ ಮೊಗಲ್ ೧೫೮೨-೧೭೦೭**, ದೆಹಲಿ, ಪು.೨೩೭-೨೩೮

೬. ಮುನ್ನಿ ಫಾರನಾಕ್ ಡಿ., ೨೦೧೨, **ದಿ ಪ್ರಿನ್ಸ್ ಆಫ್ ದಿ ಮೊಗಲ್ ಎಂಪಾಯಿರ್**, ಕೇಂಬ್ರಿಡ್ ಯುನಿವರ್ಸಿಟಿ, ದೆಹಲಿ, ಪು.೧೧೩-೧೧೫

೭. ಸವ್ಯಸಾಚಿ ಭಟ್ಟಾಚಾರ್ಯ, ೨೦೧೧, **ಭಾರತದಲ್ಲಿ ಬ್ರಿಟಿಶರ ಆರ್ಥಿಕ ವ್ಯವಸ್ಥೆ**, ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು ಮತ್ತು ಪೌರಸ್ತ್ಯ ಪ್ರಕಾಶನ, ತಿಪಟೂರು, ಪು. ೧-೪

೮. ಅಂತೋನವ ಕೆ. ಕತೋವ್‌ಸ್ಕಿ ಜಿ, (ಮೂಲ), ಗೋಪಾಲರಾವ್ ಕೆ.ಎಲ್., (ಅನು), ೧೯೮೮, **ಭಾರತೀಯ ಇತಿಹಾಸ**, ಪ್ರಗತಿ ಪ್ರಕಾಶನ ಮಾಸ್ಕೋ, ನವಕರ್ನಾಟಕ, ಬೆಂಗಳೂರು, ಪು.೧೫-೧೬

೯. ಅದೇ, ಪು.೩೪-೩೫

೧೦. ರಘುನಾಥರಾವ್ ಪಿ, **ಪೂರ್ವೋಕ್ತ**, ಪು.೧೮೩-೧೮೪

೧೧. ಅದೇ, ಪು.೧೬೪-೧೬೫

೧೨. ಶಂಕರನಾರಾಯಣರಾವ್ ಎನ್.ಪಿ, ೧೯೯೧, **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೬೫-೬೬

೧೩. ಮೋಹನ್‌ಕೃಷ್ಣ ರೈ ಕೆ., ೨೦೦೭, **ವಸಾಹತುಶಾಹಿ ಮತ್ತು ನಗರೀಕರಣ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧

೧೪. ಅಂತೋನವ ಕೆ., ಕತೋವ್‌ಸ್ಕಿ ಜಿ, **ಪೂರ್ವೋಕ್ತ**, ಪು.೬೨-೬೩

೧೫. ರಾಮಕೃಷ್ಣ ರೆಡ್ಡಿ ವಿ., ೧೯೮೭, **ಎಕನಾಮಿಕ್ ಹಿಸ್ಟರಿ ಆಫ್ ಹೈದರಾಬಾದ್ ಸ್ಟೇಟ್**, ಗಾಯನ ಪಬ್ಲಿಕೇಷನ್, ದೆಹಲಿ, ಪು.೧೮೭

೧೬. ವೈಕುಂಠಮ್ ವೈ, ೨೦೦೨, **ಸ್ಟೇಟ್ ಎಕನಾಮಿಕ್ ಆ್ಯಂಡ್ ಸೋಶ್ಯಯಲ್ ಟ್ರಾನ್ಸ್‌ಫಾರ್ಮೇಶನ್ ಇನ್ ಹೈದರಾಬಾದ್,** ಮನೋಹರ, ಪು.೩೪-೩೫

೧೭. ಅಮರೇಶ ಹನುಮಂತ, ೨೦೧೪, **ರಾಯಚೂರು ದೋ-ಅಬ್ ಪ್ರದೇಶ ಅಧಿಕಾರ ಮತ್ತು ಹೋರಾಟ, ಪಿಎಚ್.ಡಿ.ಮಹಾಪ್ರಬಂಧ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೨-೮೩

೧೮. ವೈಕುಂಠಮ್ ವೈ., **ಪೂರ್ವೋಕ್ತ,** ಪು.೧೧೭-೧೧೮

೧೯. ಭಾನುಮತಿ ರಂಗರಾವ್, ೧೯೯೨, **ಲ್ಯಾಂಡ್ ರಿವ್ಯೂನಿವ್ ಅಡ್ಮಿನಿಸ್ಟ್ರೇಷನ್ ಇನ್ ದಿ ನಿಜಾಮ್ ಡೊಮಿನಿಯನ್ಸ್, ೧೮೫೩-೧೯೪೮,** ಉಸ್ಮಾನಿಯ ಯುನಿವರ್ಸಿಟಿ, ಹೈದರಾಬಾದ್, ಪು. ೨೧

೨೦. ಅನಿಸ್ ಸಿರಾಜ್ ಎಸ್, (ಮು.ಸಂ), ೨೦೧೧, **ಇಂಪೀರಿಯಲ್ ಗ್ಯಾಸೆಟಿಯರ್ ಆಫ್ ಇಂಡಿಯಾ ಪ್ರಾವಿನ್ಸಿಯಲ್ ಸೀರೀಸ್, ಹೈದರಾಬಾದ್ ಸ್ಟೇಟ್ ಗುಲಬರ್ಗಾ,** ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, ಪು. ೮೪-೮೫

೨೧. ಜಾಗಿರದಾರ ಆರ್.ಜಿ, ಲಿಂಗಸಗೂರ್ ವಿಠಲರಾವ್, ೧೯೪೧, **ಹೈದರಾಬಾದ್ ಕರ್ನಾಟಕ,** ಪ್ರೇಮಸಾಗರ ಮುದ್ರಣಾಲಯ, ಹೈದರಾಬಾದ್, ಪು.೭೧

೨೨. ಷೇಕ್ ಅಲಿ ಬಿ, (ಪ್ರ.ಸಂ), ಸೆಬಾಸ್ಟಿಯನ್ ಜೋಸೆಫ್(ಸಂ.ಸಂ), ೧೯೯೭, **ಕರ್ನಾಟಕ ಚರಿತ್ರೆ, ಸಂಪುಟ ೬,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೭೦

೨೩. ಜಾಗಿರದಾರ ಆರ್.ಜಿ., ಲಿಂಗಸೂರ ವಿಠಲರಾವ, **ಪೂರ್ವೋಕ್ತ,** ಪು.೭೧

೨೪. ಅಮರೇಶ ಹನುಮಂತ, **ಪೂರ್ವೋಕ್ತ,** ಪು.೨೨೫

೨೫. ರಾಮಕೃಷ್ಣ ರೆಡ್ಡಿ ವಿ, ೧೯೮೭, **ಎಕನಾಮಿಕ್ ಹಿಸ್ಟರಿ ಆಫ್ ಹೈದರಾಬಾದ್ ಸ್ಟೇಟ್-ವಾರಂಗಲ್ ಸುಬಾ ೧೯೧೧-೧೯೫೦,** ಗಿಯಾನ ಪಬ್ಲಿಕೇಶನ್, ದೆಹಲಿ, ಪು.೮೩

೨೬. ವೈಕುಂಠಮ್ ವಿ., ೨೦೦೨, **ಸ್ಟೇಟ್ ಎಕನಾಮಿಕ್ ಆ್ಯಂಡ್ ಸೋಶ್ಯಯಲ್ ಟ್ರಾನ್ಸ್‌ಫಾರ್ಮೆಶನ್ ಹೈದರಾಬಾದ್ ಸ್ಟೇಟ್,** ೧೭೨೪-೧೯೪೮, ಮನೋಹರ, ದೆಹಲಿ, ಪು.೩೪-೩೫

೨೭. ಅದೇ ಪು.೩೫-೩೬

೨೮. ಭಾನುಮತಿ ರಂಗರಾವ್, **ಪೂರ್ವೋಕ್ತ,** ಪು.೬೩-೬೪

೨೯. ಅನಿಸ್ ಸಿರಾಜ್ ಎಸ್, **ಪೂರ್ವೋಕ್ತ,** ಪು.೧೫೦

೩೦. ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ, ೨೦೧೫, **ಇತಿಹಾಸ ದರ್ಶನ**, ಸಂಪುಟ ೩೦, ಪು.೩೮೬-೩೮೭

೩೧. ಅನಿಸ್ ಸಿರಾಜ್ ಎಸ್., **ಪೂರ್ವೋಕ್ತ**, ಪು.೨೧೪-೨೧೫

೩೨. ಭಾನುಮತಿ ರಂಗರಾವ್, **ಪೂರ್ವೋಕ್ತ**, ಪು. ೪೩-೪೪

೩೩. ಅದೇ ಪು.೪೪-೪೫

೩೪. **ಇತಿಹಾಸ ಜರ್ನಲ್ ಆಫ್ ದಿ ಆಂಧ್ರಪ್ರದೇಶ ಸ್ಟೇಟ್ ಆರ್ಕೈವ್ಸ್ ಆ್ಯಂಡ್ ರಿಸರ್ಚ ಇನ್ಸ್ಟ್ಯೂಶನ್ ಹೈದರಾಬಾದ್**, ೨೦೦೩, ಜನವರಿ ಮತ್ತು ಡಿಸೆಂಬರ್, ವ್ಯಾಲಿಮ್ ೨೯, ಪು. ೧೮೩-೧೮೪

೩೫. ಪಾಟೀಲ್ ಎಂ.ಬಿ, ೧೯೯೭, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಗುಲಬರ್ಗಾ ಜಿಲ್ಲೆ**, ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, ಪು.೨೦೪-೨೦೫

೩೬. ಮಜ್‌ರ ಹುಸೇನ, ೧೯೪೦, **ಹೈದರಾಬಾದ್ ಡಿಸ್ಟ್ರೀಕ್ ಗ್ಯಾಜಿಟಿಯರ್ ಗುಲಬರ್ಗಾ**, ೧೯೩೧-೧೯೩೬, ಹೈದರಾಬಾದ್ ಡೆಕ್ಕನ್ ಗೌರ್ನಮೆಂಟ್ ಪ್ರೆಸ್, ಹೈದರಾಬಾದ್, ಪು.೩೭೪-೩೭೫

೩೭. ಮಜ್‌ರ್ ಹುಸೇನ, ೧೯೪೦, **ಹೈದರಾಬಾದ್ ಡಿಸ್ಟ್ರಿಕ್ ಗ್ಯಾಸೆಟಿಯರ್ ಬೀದರ**, ೧೯೩೧-೧೯೩೬, ಹೈದರಾಬಾದ್ ಡೆಕ್ಕನ್ ಗೌರ್ನಮೆಂಟ್ ಪ್ರೆಸ್, ಹೈದರಾಬಾದ್, ಪು.೩೬೪-೩೬೫

೩೮. ಮಜ್‌ರ ಹುಸೇನ, ೧೯೪೦, **ಹೈದರಾಬಾದ್ ಡಿಸ್ಟ್ರಿಕ್ ಗ್ಯಾಸೆಟಿಯರ್ ರಾಯಚೂರು**, ೧೯೩೧-೧೯೩೬, ಹೈದರಾಬಾದ್ ಡೆಕ್ಕನ್ ಗೌರ್ನಮೆಂಟ್ ಪ್ರೆಸ್, ಹೈದರಾಬಾದ್, ಪು. ೩೭೦-೩೭೧

೩೯. ಅನಿಸ್ ಸಿರಾಜ್ ಎಸ್., **ಪೂರ್ವೋಕ್ತ**, ಪು. ೪೯-೫೦

೪೦. ದೇವು ಪತ್ತಾರ, ೨೦೧೫, **ಬಹಮನಿ ಸಾಮ್ರಾಜ್ಯ**, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೧೧೨

೪೧. ಅನಿಸ್ ಸಿರಾಜ್, **ಪೂರ್ವೋಕ್ತ**, ಪು.೨೦೫

೪೨. ಅದೇ ಪು. ೪೮-೪೯

೪೩. **ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಪಬ್ಲಿಕ್‌ವರ್ಕ್ ಡಿಪಾರ್ಟ್‌ಮೆಂಟ್**, ೧೩೪೪ ಫಸಲಿ, ಪು. ೧೧-೧೨

೪೪. ದೇವು ಪತ್ತಾರ, **ಅಣೆಕಟ್ಟುಗಳಿದ್ದರೂ ಹಸಿರಾಗದೆ ಬರಡಾದ ನೆಲೆ**, ವಿಜಯ ಕರ್ನಾಟಕ, ದಿನಾಂಕ ೧೪.೦೮.೨೦೧೭, ಪು.೬

೪೫. ರಾಮಣ್ಣ ಹೊಳೆ, ೨೦೧೦, **ಹೈದ್ರಾಬಾದ್ ಸಂಸ್ಥಾನದ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆಯ ಹೋರಾಟ**, ಶ್ರೀ ಪಬ್ಲಿಕೇಶನ್ಸ್, ರಾಯಚೂರು, ಪು.೮೧

೪೬. ಸಿದ್ಧನಗೌಡ ಜೆ.ಬಿ., ೨೦೦೭, **ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು**, ಎಂ.ಫಿಲ್. ನಿಬಂಧ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೭. ಅಮರೇಶ ನುಗಡೋಣಿ, ೨೦೦೩, **ಹೈದರಾಬಾದ್ ಕರ್ನಾಟಕ ಹಾಡುಪಾಡು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೧೧೭

೪೮. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು. ೪೦೧

೪೯. ಷೇಕ್ ಅಲಿ ಬಿ.(ಪ್ರ.ಸಂ), ಸೆಬಾಸ್ಟಿಯನ್ ಜೋಸೆಫ್(ಸಂ.ಸಂ), **ಪೂರ್ವೋಕ್ತ**, ಪು. ೧೭೨–೧೭೩

೫೦. ಅದೇ ಪು.೧೩೩

೫೧. ಭಾನುಮತಿ ರಂಗರಾವ್, **ಪೂರ್ವೋಕ್ತ**, ಪು.೧೩೮

೫೨. ಅದೇ ಪು.೧೩೩

೫೩. ಷೇಕ್ ಅಲಿ ಬಿ(ಮು.ಸಂ)., ಸೆಬಾಸ್ಟಿಯನ್ ಜೊಸೆಫ್(ಸಂ.ಸಂ), **ಪೂರ್ವೋಕ್ತ**, ಪು.೧೭೨

೫೪. ಅದೇ, ಪು. ೧೭೨–೧೭೩

೫೫. ವಸಂತಕುಮಾರ ಬಾವಾ, ೧೯೯೬, **ಹೈದರಾಬಾದ್ ಅಂಡರ್ ಸಾಲಾರಜಂಗ್**, ಚಾಂದ್ ಆ್ಯಂಡ್ ಕಂಪನಿ ಲಿಮಿಟೆಡ್, ನ್ಯೂ ದೆಹಲಿ, ಪು.೬೭–೬೮

೫೬. ಷೇಕ್ ಅಲಿ ಬಿ.(ಪ್ರ.ಸಂ), ಸೆಬಾಸ್ಟಿಯನ್ ಜೋಸೆಫ್(ಸಂ.ಸಂ), **ಪೂರ್ವೋಕ್ತ**, ಪು.೧೭೩

೫೭. ಮಧನಮೋಹನ್ ರೆಡ್ಡಿ ಎಂ., (ಸಂ), ೧೯೯೬, **ಇತಿಹಾಸ ಜರ್ನಲ್ ಆಫ್ ದಿ ಆಂಧ್ರಪ್ರದೇಶ ಸ್ಟೇಟ್ ಅರ್ಕೈವ್ಸ್ ರಿಸರ್ಚ್ ಇನ್ಸ್ಟ್ಯೂಟ್ಯೂಶನ್**, ಹೈದರಾಬಾದ್, ಪು.೯೨

೫೮. ಗೋಪಾಲರಾವ್ ಹೇಜಿಬ್, ೨೦೦೧, **ಹೈದರಾಬಾದ್ ಮುಕ್ತಿ ಸಂಘರ್ಷ**, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ಪು.೧೩–೧೪

೫೯. ಮೋಹನ್‌ಕೃಷ್ಣ ರೈ ಕೆ., ೨೦೦೬, **ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೮–೯

೬೦. ಅದೇ ಪು.೧೬-೧೭

೬೧. ಮುಜುಮದಾರ್ ಆರ್.ಸಿ., ರಾಯಚೌದುರಿ ಎಚ್.ಸಿ, ಕಾಲೀಕಿಂಕರದತ್ತ (ಮೂಲ), ಶಾರದಾ ಪ್ರಸಾದ್ ಎನ್.ಎಸ್ (ಅನು), ಪೂರ್ವೋಕ್ತ, ಪು.೫೦೧

೬೨. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೩೦೮

೬೩. ಮೋಹನ್‌ಕೃಷ್ಣ ರೈ ಕೆ., ೨೦೦೭, ಪೂರ್ವೋಕ್ತ, ಪು.೧-೨

೬೪. ಇತಿಹಾಸ ಜರ್ನಲ್ ಆಫ್ ದಿ ಆಂಧ್ರಪ್ರದೇಶ ಸ್ಟೇಟ್ ಆರ್ಕೈವ್ಸ್ ಆ್ಯಂಡ್ ರಿಸರ್ಚ್ ಇನ್ಸ್ಟ್ಯೂಟ್, ವ್ಯಾಲಿಮ್ ಜನವರಿ ಟು ಡಿಸೆಂಬರ್ ೨೦೦೭, ಪು.೨-೩

೬೫. ಶೀಲಾರಾಜ, ೧೯೮೭, ಮೆಡಿವಲಿಸಮ್ ಟು ಮಾರ್ಡನಿಸಮ್ ಸೋಶಿಯೋ ಎಕನಾಮಿಕ್ಸ್ ಆ್ಯಂಡ್ ಕಲ್ಚರಲ್ ಹಿಸ್ಟರಿ ಆಫ್ ಹೈದರಾಬಾದ್ ೧೮೬೯-೧೯೧೧, ಬಾಂಬೆ ಪಾಪುಲರ್ ಪಬ್ಲಿಕೇಷನ್, ಪು.೨೨೨

೬೬. ಮೋಹನ್‌ಕೃಷ್ಣ ರೈ ಕೆ., ೨೦೦೦, ಪೂರ್ವೋಕ್ತ, ಪು.೪೬-೪೭

೬೭. ವೈಕುಂಠಮ್ ವೈ, ಪೂರ್ವೋಕ್ತ, ಪು.೧೫೭

೬೮. ಮೋಹನ್‌ಕೃಷ್ಣ ರೈ ಕೆ., ೨೦೦೭, ಪೂರ್ವೋಕ್ತ, ಪು.೪೦

೬೯. ಶೀಲರಾಜ, ಪೂರ್ವೋಕ್ತ, ಪು.೨೨೨

೭೦. ಪಾಟೀಲ್ ಎಂ.ಬಿ, ಪೂರ್ವೋಕ್ತ, ಪು.೩೧೨

೭೧. ವೈಕುಂಠಮ್ ವೈ, ಪೂರ್ವೋಕ್ತ, ಪು.೧೫೮-೧೫೯

೭೨. ರಿಪೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ದಿ ಅಗ್ರಿಕಲ್ಚರ್ ಮಾರ್ಕೆಟ್ ಆಕ್ಟ್ ಫಾರ್ ೧೩೪೪ ಫಸಲಿ

೭೩. ಅನಿಸ್ ಸಿರಾಜ್ ಎಸ್., ಪೂರ್ವೋಕ್ತ, ಪು.೯೨

೭೪. ಮೋಹನ್‌ಕೃಷ್ಣ ರೈ ಕೆ., ೨೦೦೭, ಪೂರ್ವೋಕ್ತ, ಪು.೨೭

೭೫. ಅನಿಸ್ ಸಿರಾಜ್ ಎಸ್, ಪೂರ್ವೋಕ್ತ, ಪು.೯೨

೭೬. ಪಾಟೀಲ್ ಎಂ.ಬಿ, ಪೂರ್ವೋಕ್ತ, ಪು.೩೧೩

೭೭. ಅದೇ ಪು.೩೧೩-೩೧೫

೭೮. ರಿಪೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ದಿ ಅಗ್ರಿಕಲ್ಚರ್ ಮಾರ್ಕೆಟ್ ಆಕ್ಟ್ ಫಾರ್ ೧೩೪೪ ಫಸಲಿ

೭೯. ವೈಕುಂಠಮ್ ವೈ., ಪೂರ್ವೋಕ್ತ, ಪು.೧೬೧

೮೦. ಶೀಲಾರಾಜ, ಪೂರ್ವೋಕ್ತ, ಪು.೨೨೧

೮೧. ವೈಕುಂಠಮ್ ವೈ, ಪೂರ್ವೋಕ್ತ, ಪು.೧೬೪-೧೬೫

೮೨. ಅನಿಸ್ ಸಿರಾಜ್ ಎಸ್., ಪೂರ್ವೋಕ್ತ, ಪು.೧೯೨

೮೩. ಅದೇ ಪು.೧೫೩-೧೫೪

೮೪. ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೩೦೩ ಫಸಲಿ, ಪು.೧೫೧

೮೫. ಅನಿಸ ಸಿರಾಜ್ ಎಸ್., ಪೂರ್ವೋಕ್ತ, ಪು.೨೦೭

೮೬. ಪಾಟೀಲ್ ಎಂ.ಬಿ, ಪೂರ್ವೋಕ್ತ, ಪು.೩೨೭

೮೭. ಶೀಲಾರಾಜ, ಪೂರ್ವೋಕ್ತ, ಪು.೧೪೫

೮೮. ವೈಕುಂಠಮ್ ವೈ, ಪೂರ್ವೋಕ್ತ, ಪು.೧೧೨

೮೯. ಮೋಹನ್‌ಕೃಷ್ಣ ರೈ ಕೆ, ೨೦೦೭, ಪೂರ್ವೋಕ್ತ, ಪು.೮೦

೯೦. ಪಾಟೀಲ್ ಎಂ.ಬಿ, ಪೂರ್ವೋಕ್ತ, ಪು.೩೨೭

೯೧. ಹೈದರಾಬಾದ್ ಅಫೇರ್ಸ್, ವ್ಯಾಲಿಮ್ ರಿಪೋರ್ಟ್ ಆನ್ ಫೆಮಿನ ರಿಲೀಫ್ ಇನ್ ದಿ ನಿಜಾಮ್ಸ್ ಡೋಮಿನಿಯನ್, ಪು.೧೦೫

೯೨. ವೈಕುಂಠಮ್ ವೈ, ಪೂರ್ವೋಕ್ತ, ಪು.೧೪೨

೯೩. ಅದೇ ಪು.೧೪೨-೧೪೩

೯೪. ಅದೇ ಪು.೧೪೪

೯೫. ಶಿಲಾರಾಜ, ಪೂರ್ವೋಕ್ತ, ಪು.೧೫೪

೯೬. ಅದೇ ಪು.೧೫೪-೧೫೫

೯೭. ವಸಂತಕುಮಾರ ಬಾವಾ, ೧೯೮೬, ದಿ ನಿಜಾಮ್ ಬಿಟ್ವಿನ್ ಮೊಗಲ್ಸ್ ಆ್ಯಂಡ್ ಬ್ರಿಟಿಶ್ ಹೈದರಾಬಾದ್ ಅಂಡರ್ ಸಾಲಾರಜಂಗ್ ೧, ದೆಹಲಿ, ಪು.೯೨

೯೮. ಭಾರತಿ ರೇ., ೧೯೮೮, ಹೈದರಾಬಾದ್ ಆ್ಯಂಡ್ ಬ್ರಿಟಿಶ್ ಪರ್ಮೋನಿಟ್ ೧೮೫೫–೧೮೮೩, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಬಾಂಬೆ, ಪು.೧೩೮–೧೪೦

೯೯. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು. ೩೪೬

೧೦೦. ಅದೇ ಪು. ೨೭೪

೧೦೧. ಅಶೋಕ ಶೆಟ್ಟರ(ಸಂ), ೨೦೦೫, ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಆ್ಯಂಡ್ ಕಲ್ಚರ್, ಕರ್ನಾಟಕ ಹಿಸ್ಟರಿ ಕಾಂಗ್ರೆಸ್, ವ್ಯಾಲಿಮ್ ೫, ಪು.೧೧೦

೧೦೨. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೨೯೩

೧೦೩. ಅಶೋಕ ಶೆಟ್ಟರ್ (ಸಂ), ಪೂರ್ವೋಕ್ತ, ಪು. ೧೧೦–೧೧೧

೧೦೪. ವಸಂತಕುಮಾರ ಬಾವಾ, ೧೯೯೬, ಹೈದರಾಬಾದ್ ಅಂಡರ್ ಸಾಲಾರಜಂಗ್ ೧, ಚಾಂದ ಆ್ಯಂಡ್ ಕಂಪನಿ ಲಿಮಿಟೆಡ್, ನ್ಯೂ ದೆಹಲಿ, ಪು. ೬೭

೧೦೫. ಫತುಲ್ಲಾಖಾನ್ ಎಂ., ೧೯೩೫, ಎ ಹಿಸ್ಟರಿ ಆಫ್ ಅಡ್ಮಿನಿಸ್ಟ್ರೇಷನ್ ರಿಫಾರ್ಮ್ಸ್ ಇನ್ ಹೈದರಾಬಾದ್ ಸ್ಟೇಟ್, ನ್ಯೂ ಹೈದರಾಬಾದ್ ಪ್ರೆಸ್ ಸಿಕಿಂದ್ರಬಾದ್, ಪು. ೮೨

೧೦೬. ಇತಿಹಾಸ ಜನರಲ್ ಆಫ್ ದಿ ಆಂಧ್ರಪ್ರದೇಶ ಸ್ಟೇಟ್ ಆರ್ಕೈವ್ಸ್ ಆ್ಯಂಡ್ ರಿಸರ್ಚ್ ಇನ್ಸ್ಟ್ಯೂಟ್, ೨೦೦೭, ವ್ಯಾಪಿಮ್, ಪು.೨

೧೦೭. ಷೇಕ ಅಲಿ ಬಿ.(ಮು.ಸಂ), ಸೆಬಾಸ್ಟಿಯನ್ ಜೋಸೆಫ್(ಸಂ.ಸಂ) ಪೂರ್ವೋಕ್ತ, ಪು. ೧೭೩–೧೭೪

೧೦೮. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೪೦೨–೪೦೩

೧೦೯. ದೇವರಾಜು ಸಿ.ಬಿ, ೨೦೧೩, ಹೈದರಾಬಾದ್ ರಾಜ್ಯದ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳು ಬಿದರ ಜಿಲ್ಲೆಯ ಒಂದು ಅಧ್ಯಯನ ೧೯೦೫–೧೯೫೬, ಪಿಎಚ್.ಡಿ.ಮಹಾಪ್ರಬಂಧ, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.೮೮

೧೧೦. ಅನಿವೆಲ್ ರಿಪೋರ್ಟ್ ಆಫ್ ರಿಸರ್ಚ್ ಲ್ಯಾಂಡ್ ಎಕ್ಸ್‌ಪರ್ಮೆಂಟಲ್ ವರ್ಕ್ ಆಫ್ ದಿ ಡಿಪಾರ್ಟಮೆಂಟ್ ಆಫ್ ಅಗ್ರಿಕಲ್ಚರ್ ನಿಜಾಮ್ ಗೌರ್‍ನಮೆಂಟ್ ೧೩೪೬–೧೩೪೭ ಫಸಲಿ, ಪು.೪೬೩–೪೮೫

೧೧೧. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೨೭೬

೧೧೨. ರಿಪೋರ್ಟ್ ಆಫ್ ದಿ ಅಗ್ರೇರಿಯನ್ ರೀಫಾರ್ಮ್ ಕಮಿಟಿ, ೧೯೪೯ ಪು.೧

೧೧೩. ಅದೇ ಪು.೧೯೮

೧೧೪. ಅದೇ ಪು.೨೦೦-೨೦೧

೧೧೫. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು. ೨೯೪

೧೧೬. **ಸೆಕೆಂಡ್ ಅನಿವಾಲ್ ರಿಪೋರ್ಟ್ ಆನ್ ದಿ ವರ್ಕಿಂಗ್ ಆಫ್ ದಿ ಕೋ-ಆಪರೇಟಿವ್ ಸೊಸೈಟಿ ಆಕ್ಟ್ ೧೩೨೩ ಫಸಲಿ**, ಪು.೪-೫

೧೧೭. ಅದೇ ಪು. ೭-೮

೧೧೮. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು. ೨೯೪

೧೧೯. ರೆಡ್ಡಿ ವಿ.ಆರ್.ಕೆ, ೧೯೮೪, **ಎಸ್ಸೆಡಿ ಇನ್ ಅಗ್ರಿಕಲ್ಚರ್ ಇಚಿಡಿಬ್ಲೆಟೆನ್ ಇನ್ ನಿಜಾಮ್ ಡೊಮಿನಿಯಮ್ ೧೯೧೧-೧೯೫೦**, ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಪ್ರೊಸಿಡಿಂಗ್ಸ್ ಆಫ್ ಪೊರ್ಥ್ ಕಾನ್ಫರೇನ್ಸ್, ತಿರುಪತಿ, ಪು. ೧೫೦-೧೫೧

೧೨೦. ಪಾಟೀಲ್ ಎಂ.ಬಿ., **ಪೂರ್ವೋಕ್ತ**, ಪು. ೨೭೮

೧೨೧. **ಆನಿವೆಲ್ ರಿಪೋರ್ಟ್ ಆಫ್ ರಿಸರ್ಚ್ ಆ್ಯಂಡ್ ಎಕ್ಸ್‌ಪರ್ಮೆಂಟಲ್ ವರ್ಕ್ ಆಫ್ ದಿ ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರ್ ದಿ ನಿಜಾಮ್ ಗೌರ್ನಮೆಂಟ್ ೧೩೪೬-೧೩೪೭ ಫಸಲಿ**, ಪು.೪೮೦-೪೮೯

೧೨೨. ಷೇಕ ಅಲಿ ಬಿ, (ಮು.ಸಂ), ಸೆಬಾಸ್ಟಿಯನ್ ಜೊಸೇಫ್ (ಸಂ.ಸಂ), **ಪೂರ್ವೋಕ್ತ**, ಪು. ೧೭೬-೧೭೭

೧೨೩. ವೈಕುಂಠಮ್ ವೈ., **ಪೂರ್ವೋಕ್ತ**, ಪು.೧೧೫-೧೧೪

೧೨೪. ಷೇಕ ಅಲಿ ಬಿ, (ಮು.ಸಂ), ಸೆಬಾಸ್ಟಿಯನ್ ಜೊಸೇಫ್ (ಸಂ.ಸಂ), **ಪೂರ್ವೋಕ್ತ**, ಪು. ೧೭೬-೧೭೭

೧೨೫. ಅದೇ ಪು.೧೭೭-೧೭೬

೧೨೬. ಪಾಟೀಲ್ ಎಂ.ಬಿ, **ಪೂರ್ವೋಕ್ತ**, ಪು.೨೨೫

೧೨೭. ಜಾಗೀರದಾರ ಆರ್.ಜಿ, ವಿಠಲರಾವ್ ಲಿಂಗಸುಗೂರು, **ಪೂರ್ವೋಕ್ತ**, ಪು.೫೫-೫೬

೧೨೮. ಶೀಲಾರಾಜ, **ಪೂರ್ವೋಕ್ತ**, ಪು.೧೭೭-೧೭೮

೧೨೯. ಪಾಟೀಲ್ ಎಂ.ಬಿ., **ಪೂರ್ವೋಕ್ತ,** ಪು.೨೪೨-೨೪೩

೧೩೦. ಮಜ್‌ರ ಹುಸೇನ, ೧೯೪೦, **ಹೈದರಾಬಾದ್ ಡಿಸ್ಟ್ರಿಕ್ ಗ್ಯಾಸಟಿಯರ್ ಬೀದರ,** ಪು. ೪೦೪, ೪೦೫

೧೩೧. ಮಜ್‌ರ ಹುಸೇನ, **ಪೂರ್ವೋಕ್ತ,** ಪು. ೪೦೧-೪೦೨

೧೩೨. ಮಹೇಶಕುಮಾರ ಸುಂಕನೂರು ಎಂ., ೨೦೦೬, **ಗುಲಬರ್ಗಾ ಎಂ.ಎಸ್.ಕೆ.ಮಿಲ್: ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ, ಎಂ.ಫಿಲ್.ನಿಬಂಧ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೪

೧೩೩. ಮೋಹನ್‌ಕೃಷ್ಣ ರೈ ಕೆ., ೨೦೦೭, **ಪೂರ್ವೋಕ್ತ,** ಪು. ೬೦

೧೩೪. ಮಹೇಶಕುಮಾರ ಸುಂಕನೂರು ಎಂ., ೨೦೦೬, **ಪೂರ್ವೋಕ್ತ,** ಪು.೧೭-೧೮

೧೩೫. ಅದೇ, ಪು.೧೭-೧೮

೧೩೬. ಅದೇ, ಪು.೩೪-೩೬

೧೩೭. ವಿಜಯಲಕ್ಷ್ಮೀ, ೨೦೦೬, **ಹಟ್ಟಿ ಚಿನ್ನದ ಗಣಿ: ಚಾರಿತ್ರಿಕ ಹಾಗೂ ಸಮಾಜೋ-ಆರ್ಥಿಕ ಅಧ್ಯಯನ, ಎಂ.ಫಿಲ್.ಚರಿತ್ರೆ ವಿಭಾಗ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೧-೧೨

೧೩೮. ಅದೇ ಪು.೧೩-೧೪

೧೩೯. ಮೋಹನ್‌ಕೃಷ್ಣ ರೈ, **ಪೂರ್ವೋಕ್ತ,** ಪು.೬೧-೬೨

೧೪೦. ವಿಜಯಲಕ್ಷ್ಮೀ, ೨೦೦೬, **ಪೂರ್ವೋಕ್ತ,** ಪು.೧೬-೧೮

೧೪೧. ಅನಿಸ್ ಸಿರಾಜ್ ಎಸ್ (ಸಂ), **ಪೂರ್ವೋಕ್ತ,** ಪು. ೭೦-೭೧

೧೪೨. ವೈಕುಂಠಮ್ ವೈ., **ಪೂರ್ವೋಕ್ತ,** ಪು.೯೦

೧೪೩. ಅನಿಸ್ ಸಿರಾಜ್ ಎಸ್ (ಸಂ), **ಪೂರ್ವೋಕ್ತ,** ಪು. ೭೪-೭೫

೧೪೪. ವೈಕುಂಠಮ್ ವೈ., **ಪೂರ್ವೋಕ್ತ,** ಪು.೯೧

೧೪೫. **ರಿಪೋರ್ಟ್ ಆಫ್ ಫಮೀನ್ ರಿಲೀಫ್ ಆಪರೇಶನ್ ಇನ್ ದಿ ನಿಜಾಮ್ಸ್ ಡೊಮಿನಿಯನ್ಸ್,** ೧೮೯೯-೧೯೦೦

೧೪೬. ಚಂದ್ರಶೇಖರ ಎಸ್., ಸುರೇಂದ್ರರಾವ್ ಬಿ.(ಸಂ), ರಾಜೇಶ ಹಂ.ಗು.(ಸ.ಸಂ), ೨೦೦೬, **ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು,** ಸಂಪುಟ ೧೨, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಪು.೨೧-೨೨

೧೪೭. ಚಂದ್ರಶೇಖರ ಎಸ್., ಸುರೇಂದ್ರರಾವ್ ಬಿ.(ಸಂ), ರಾಜೇಶ ಹಂ.ಗು.(ಸ.ಸಂ), ೨೦೦೬, **ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು,** ಸಂಪುಟ ೧೦, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಪು.೬೩-೬೪

೧೪೮. ಅದೇ, ಪು.೬೫-೬೬

ಅಧ್ಯಾಯ: ಎಂಟು

ಸಮಾರೋಪ

ಅಧ್ಯಾಯ: ಎಂಟು

ಸಮಾರೋಪ

ಚರಿತ್ರೆ ಎಂದರೆ ಮಾನವ ಬದುಕಿನ ವಿವಿಧ ಆಯಾಮಗಳನ್ನು ಲಿಖಿತವಾಗಿ ಅಥವಾ ಮೌಖಿಕವಾಗಿ ದಾಖಲಿಸುತ್ತಾ ಹೋಗುವ ಒಂದು ಶಿಸ್ತು. ಮಾನವ ಬದುಕು ಏಕರೂಪವಾದುದ್ದಲ್ಲ. ಅದು ಬಹುತ್ವದ ನೆಲೆಯಿಂದ ರೂಪುಗೊಂಡಿರುವಂಥದ್ದು. ಅಲ್ಲಿರುವ ಸ್ತರಗಳನ್ನು ಅಧ್ಯಯನ ನಡೆಸಲು ಹಲವಾರು ಮಾದರಿಗಳು ಹುಟ್ಟಿಕೊಂಡವು. ಚಾರಿತ್ರಿಕ ಪಂಥಗಳು ಹುಟ್ಟಿಕೊಂಡವು. ಅವು ತಾವು ಗುರುತಿಸಿಕೊಂಡಿರುವ ಸೈದ್ಧಾಂತಿಕ ಚೌಕಟ್ಟಿನೊಳಗೆ ಚರಿತ್ರೆಯನ್ನು ಅಧ್ಯಯನಿಸುವ ಪ್ರಯತ್ನವನ್ನು ಮಾಡಿದವು. ಈ ಪ್ರಯತ್ನದಲ್ಲಿ ಪೂರ್ವಗ್ರಹಗಳು ನುಸುಳಿ ಅಚಾರಿತ್ರಿಕ ನಿಲುವುಗಳು ವ್ಯಕ್ತವಾಗಿರುವ ಸಂದರ್ಭವೇ ಹೆಚ್ಚು. ಹೈದರಾಬಾದ್ ಕರ್ನಾಟಕದ ಚರಿತ್ರೆಯೂ ಇದರಿಂದ ಹೊರತಾಗಿಲ್ಲ. ಈ ಅಪಾಯಗಳನ್ನು ಹಾಗೂ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು ನಿಜಾಮ್ ಆಳ್ವಿಕೆಯ ಸಂದರ್ಭದ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಹಾಗೂ ಆರ್ಥಿಕ ಚರಿತ್ರೆಯನ್ನು ನಿರ್ಮಿಸುವ ಪ್ರಯತ್ನ ಈ ಮಹಾಪ್ರಬಂಧದ್ದು.

ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದ ಚರಿತ್ರೆಯನ್ನು ರಚಿಸಲು ಸಿದ್ಧ ಆಕರಗಳ ಜೊತೆಗೆ ಮೌಖಿಕ ಆಕರಗಳನ್ನು ಅವಲಂಬಿಸಲಾಗಿದೆ. ಬಹುಮುಖ್ಯವಾಗಿ ಪ್ರಾಥಮಿಕ ಆಕರಗಳಾದ ಪತ್ರಾಗಾರ ದಾಖಲೆಗಳು ಹಾಗೂ ವರದಿಗಳನ್ನು ಪ್ರಭಾವಿಯಾಗಿ ಬಳಸಿಕೊಳ್ಳಲಾಗಿದೆ. ಆ ಮೂಲಕ ಚರಿತ್ರೆ ಬರವಣಿಗೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಸ್ಥಳೀಯ ಚರಿತ್ರೆಯ ವಿವಿಧ ಆಯಾಮ ಗಳನ್ನು ಚರ್ಚಿಸಿ, ಹೈದರಾಬಾದ್ ಕರ್ನಾಟಕ ಪ್ರದೇಶದ ಚರಿತ್ರೆಯನ್ನು ಪುನರ್‌ರಚಿಸಲು ಪ್ರಯತ್ನಿಸಲಾಗಿದೆ. ಆ ಮೂಲಕ ಕರ್ನಾಟಕ ಚರಿತ್ರೆಯು ಬರವಣಿಗೆಯಲ್ಲಿ ಸ್ಥಳೀಯ ಚರಿತ್ರೆಯನ್ನು ವಿಶ್ಲೇಷಿಸುವ ಸಣ್ಣ ಪ್ರಯತ್ನವನ್ನು ಮಾಡಲಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶದ ಭೌಗೋಳಿಕ ಪರಿಸರವು ಇಲ್ಲಿನ ಜನರ ಚರಿತ್ರೆಯನ್ನು ರೂಪಿಸುವಲ್ಲಿ ವಹಿಸಿರುವ ಪಾತ್ರ ಗಮನಾರ್ಹವಾಗಿದೆ. ಭೌಗೋಳಿಕ ಪರಿಸರ ಮತ್ತು ಮಾನವ

ಪರಿಸರ ಒಂದಕ್ಕೊಂದು ಪೂರಕವಾಗಿದ್ದ ಕಾರಣಕ್ಕಾಗಿಯೇ ಮಾನವ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಯಿತು. ಹಾಗೇ ರಾಜ್ಯ ನಿರ್ಮಾಣ ಪ್ರಕ್ರಿಯೆಗಳು ಕೂಡ ಈ ಹಿನ್ನೆಲೆಯಿಂದಲೇ ನಡೆಯಿತು. ಭೂಮಿಯ ಮೇಲಿನ ಒಡೆತನವನ್ನು ಸಾಧಿಸಿದ ಪ್ರಬಲ ವರ್ಗಗಳು ಅಧಿಕಾರ ಮತ್ತು ಸವಲತ್ತುಗಳನ್ನು ಹೊಂದುವ ಮೂಲಕ ಮಾನವ ಪರಿಸರದ ಮೇಲೆ ನಿಯಂತ್ರಣ ಸಾಧಿಸಿದವು. ಪ್ರತಿಯೊಂದು ಪ್ರಭುತ್ವವೂ ತನ್ನ ರಾಜಧಾನಿ ಕೇಂದ್ರವನ್ನು ಆಯ್ಕೆ ಮಾಡುವಾಗ ಪ್ರದೇಶದ ಭೌಗೋಳಿಕತೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತಿತ್ತು. ಆದರೆ ಹೈದರಾಬಾದ್ ಕರ್ನಾಟಕದ ಭೌಗೋಳಿಕತೆಯು ಕೃಷಿಗೆ ಪೂರಕವಾದ ವಾತಾವರಣವನ್ನು ಹೊಂದಿರಲಿಲ್ಲ. ನೈಸರ್ಗಿಕ ಸಂಪನ್ಮೂಲಗಳು ಇದ್ದವಾದರೂ ಅವು ಈ ಪ್ರದೇಶದ ಅಭಿವೃದ್ಧಿಗೆ ಬಳಕೆಯಾಗಲಿಲ್ಲ. ಈ ಪ್ರದೇಶವನ್ನು ಆಳ್ವಿಕೆ ಮಾಡಿದ ಪ್ರಭುತ್ವಗಳು ಕೂಡ ಭೌಗೋಳಿಕತೆಗೆ ಹೊಂದಾಣಿಕೆಯಾಗುವ ಹೊಸ ಯೋಜನೆಗಳನ್ನು ರೂಪಿಸುವಲ್ಲಿ ವಿಫಲವಾಗಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿ ಹರಿಯುವ ಕೃಷ್ಣಾ, ಮಾಂಜ್ರಾ, ಭೀಮಾ ಮತ್ತು ತುಂಗಭದ್ರ ನದಿಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಲ್ಲಿಯೂ ಪ್ರಭುತ್ವಗಳು ಯಶಸ್ವಿಯಾಗಲಿಲ್ಲ. ಈ ಅಂಶವು ಕೂಡ ಪ್ರದೇಶದ ಅಭಿವೃದ್ಧಿಗೆ ಹಿನ್ನಡೆಯಾಗಿಯೇ ಪರಿಣಮಿಸಿತು.

ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಮೌರ್ಯರಿಂದ ಹೈದರಾಬಾದ್ ನಿಜಾಮರವರೆಗೆ ವಿವಿಧ ಅರಸು ಮನೆತನಗಳು ಆಳ್ವಿಕೆ ನಡೆಸಿವೆ. ಈ ಪ್ರದೇಶದಲ್ಲಿ ರಾಜಪ್ರಭುತ್ವ ವ್ಯವಸ್ಥೆ ಆರಂಭಗೊಂಡ ದಿನದಿಂದ ವ್ಯವಸ್ಥಿತ ಆಡಳಿತ ವ್ಯವಸ್ಥೆಯೊಂದು ಕಂಡುಬಂದಿತ್ತಾದರೂ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳು ಇನ್ನಷ್ಟು ಗಟ್ಟಿಯಾಗಿ ವರ್ತಮಾನದವರೆಗೂ ಮುಂದುವರಿದುಕೊಂಡು ಬಂದವು. ಈ ಪ್ರದೇಶದಲ್ಲಿ ಬರುವ ದೋ–ಅಬ್ ಪ್ರದೇಶದ ಫಲವತ್ತತೆಗಾಗಿ ವಿಜಯನಗರ ಮತ್ತು ಬಹಮನಿಗಳು ಹೋರಾಟ ನಡೆಸಿದರು. ಅಲ್ಲದೆ ಈ ಪ್ರದೇಶಕ್ಕಾಗಿ ಅನೇಕ ಸ್ಥಳೀಯ ಮನೆತನಗಳು ಕೂಡ ಹೋರಾಡಿದವು. ನಂತರ ಅಧಿಕಾರಕ್ಕೆ ಬಂದ ನಿಜಾಮರು ಕೂಡ ಈ ಪ್ರದೇಶವನ್ನು ಉಳಿಸಿಕೊಳ್ಳಲು ಮರಾಠ ಮತ್ತು ಹೈದರಾಲಿಯ ಜೊತೆ ಯುದ್ಧಗಳನ್ನು ನಡೆಸಿ ಒಪ್ಪಂದಗಳನ್ನು ಮಾಡಿಕೊಂಡರು.

ಮೊಗಲರ ಅಧೀನರಾಗಿ ಅಧಿಕಾರವನ್ನು ಸ್ಥಾಪಿಸಿಕೊಂಡ ನಿಜಾಮ್ ಕಮುರೋದ್ದಿನ ಕಿಲಿಚಖಾನನು ನಂತರ ಮೊಗಲ ದೊರೆಗಳ ಅಸಮರ್ಥಯ ಲಾಭವನ್ನು ಪಡೆದುಕೊಂಡು ಸ್ವಾತಂತ್ರ್ಯ ಘೋಷಿಸಿಕೊಂಡನು. ಕಿಲಿಚಖಾನನ ಮರಣದ ನಂತರ ಉತ್ತರಾಧಿಕಾರಕ್ಕೆ ನಡೆದ ಹೋರಾಟದ ಲಾಭವನ್ನು ಪಡೆದ ಫ್ರೆಂಚರು ಮತ್ತು ಬ್ರಿಟಿಶರು ತಮ್ಮ ವಸಾಹತುಶಾಹಿತ್ವವನ್ನು ಸ್ಥಾಪಿಸುವುದಕ್ಕಾಗಿ ನಿಜಾಮರ ಎರಡು ಬಣಗಳನ್ನು ಬೆಂಬಲಿಸುವ ನೆಪದಲ್ಲಿ ಉತ್ತರಾಧಿಕಾರತ್ವಕ್ಕಾಗಿ ನಡೆದ ಹೋರಾಟದ ಸ್ವರೂಪವನ್ನು ಬದಲಾಯಿಸಿದರು. ಹೀಗೆ ಆರಂಭವಾದ ಈ ಯುದ್ಧವನ್ನು ಚರಿತ್ರೆಯಲ್ಲಿ ಕರ್ನಾಟಿಕ್

ಯುದ್ಧಗಳೆಂದು ಕರೆಯಲಾಗಿದೆ. ನಿಜಾಮರ ಅಭದ್ರತೆಯ ಲಾಭವನ್ನು ಪಡೆದ ಈ ಎರಡು ವಸಾಹತುಶಾಹಿ ರಾಷ್ಟ್ರಗಳು ದಕ್ಷಿಣ ಭಾರತದಲ್ಲಿ ತಮ್ಮ ಅಸ್ತಿತ್ವವನ್ನು ರೂಪಿಸಲು ಹೈದರಾಬಾದ್ ಸಂಸ್ಥಾನವನ್ನು ಕೇಂದ್ರಬಿಂದುವಾಗಿ ಮಾಡಿಕೊಂಡರು. ಕೊನೆಗೂ ಈ ಯುದ್ಧದಲ್ಲಿ ಮೇಲುಗೈ ಸಾಧಿಸಿದ ಬ್ರಿಟಿಶರು ಅಂದಿನಿಂದ ಕೊನೆಗೆ ಭಾರತ ಸ್ವಾತಂತ್ರ್ಯವಾಗುವವರೆಗೂ ಭದ್ರವಾಗಿ ನೆಲೆ ಊರಿರುವುದು ಕಂಡುಬರುತ್ತದೆ.

ಹೀಗೆ ಹೈದರಾಬಾದ್ ನಿಜಾಮರು ಸಾಮ್ರಾಜ್ಯವನ್ನು ವಿಸ್ತರಿಸುತ್ತಾ ಆರಂಭದಲ್ಲಿ ಮೊಗಲ್ ಪ್ರಭಾವಿತ ಆಡಳಿತ ಪದ್ಧತಿಯಂತೆ ಸ್ಥಾನಿಕ ಆಡಳಿತ ಪದ್ಧತಿಯನ್ನು ಮುಂದುವರೆಸಿದರು. ನಂತರ ಇಂಗ್ಲಿಶ್ ಈಸ್ಟ್ ಇಂಡಿಯಾ ಕಂಪನಿಯ ಪ್ರಭಾವಕ್ಕೂ ಈ ಪ್ರದೇಶ ಒಳಗಾಗಬೇಕಾಯಿತು. ಬ್ರಿಟಿಶ್ ಮಾದರಿಯ ಕೆಲವೊಂದು ಸುಧಾರಣಾ ಕ್ರಮಗಳೂ ಸಂಸ್ಥಾನದಲ್ಲಿ ಜಾರಿಗೊಂಡವು. ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ನಿಜಾಮ್ ಅಲಿಖಾನನು ಆಡಳಿತದಲ್ಲಿ ಅನೇಕ ಬದಲಾವಣೆಗಳನ್ನು ತಂದು ವಿಕೇಂದ್ರಿಕೃತವಾದ ಆಡಳಿತ ಪದ್ಧತಿಯನ್ನು ಜಾರಿಗೊಳಿಸಿದನು. ಮೊದಲನೆ ನಿಜಾಮನು ಸ್ಥಾಪಿಸಿದ ಆರು ಸುಬಾಗಳ ಬದಲಾಗಿ ಐದು ಸುಬಾಗಳನ್ನು ಸ್ಥಾಪಿಸಿ, ಆ ಸುಬಾಗಳಿಗೆ ಸಮರ್ಥವಾದ ಅಧಿಕಾರಿಗಳನ್ನು ನೇಮಿಸಿದನು. ಹೀಗೆ ಸ್ಥಾಪನೆಯಾದ ಸುಬಾಗಳಲ್ಲಿ ಗುಲಬರ್ಗಾ ಮತ್ತು ಬೀದರ್ ಜಿಲ್ಲಾ ಪ್ರದೇಶಗಳು ಸುಬಾ ಸ್ಥಾನವನ್ನು ಪಡೆದುಕೊಂಡಿದ್ದವು. ಸುಬಾದ ನಂತರದ ಸ್ಥಾನವನ್ನು ಸರ್ಕಾರ, ಪರಗಣ, ಮಹಲ ಮತ್ತು ತಾಜ್‌ಗಳನ್ನಾಗಿ ವಿಭಾಗಿಸಿಕೊಂಡು ಆಡಳಿತವನ್ನು ಕೇಂದ್ರೀಕರಿಸಿಕೊಂಡರು. ನಂತರ ಅಧಿಕಾರಕ್ಕೆ ಬಂದ ನಿಜಾಮರು ಕೂಡ ಇದೇ ಪದ್ಧತಿಯನ್ನು ಮುಂದುವರೆಸಿದರು. ಆದರೆ ನಿಜಾಮ್ ಆಫಜಲದೌಲ ಬಹಾದ್ದೂರನ ಆಳ್ವಿಕೆಯಲ್ಲಿ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಒಂದನೆಯ ಸಾಲಾರಜಂಗನು ನಿಜಾಮನ ಆದೇಶದಂತೆ ಬ್ರಿಟಿಶರ ಆಡಳಿತ ಪದ್ಧತಿಯನ್ನು ಅನುಸರಿಸಿ ಆಡಳಿತ ಪದ್ಧತಿಯಲ್ಲಿ ಮಹತ್ವದ ಬದಲಾವಣೆಯನ್ನು ಜಾರಿಗೆ ತಂದನು. ಈಗಾಗಲೇ ಜಾರಿಗೆ ಬಂದಿದ್ದ ಪಿರಮಿಡ್ ಆಕಾರದ ಆಡಳಿತ ವಿಭಾಗವನ್ನು ಬದಲಾಯಿಸಿ ಸುಬಾ, ಜಿಲ್ಲಾ, ತಾಲ್ಲೂಕು ಮತ್ತು ಸ್ಥಳೀಯ ಆಡಳಿತ ಎಂಬ ಘಟಕಗಳನ್ನು ಜಾರಿಗೆ ತರಲಾಯಿತು. ಸುಬಾಕ್ಕೆ ಸುಬೇದಾರ, ಜಿಲ್ಲಾ ಪ್ರದೇಶಗಳಿಗೆ ತಾಲ್ಲೂಕುದಾರ, ತಾಲ್ಲೂಕುಗಳಿಗೆ ತಹಶೀಲ್ದಾರ ಮತ್ತು ಸ್ಥಳೀಯ ಆಡಳಿತದಲ್ಲಿ ನಾಡಗೌಡ, ಕುಲಕರ್ಣಿ, ಪೊಲೀಸ್ ಪಾಟೀಲ್, ಮಾಲಿ ಪಾಟೀಲ್, ದೇಸಾಯಿ, ದೇಶಮುಖ ಎಂಬ ಅಧಿಕಾರಿ ವರ್ಗಗಳನ್ನು ನೇಮಿಸಿದನು. ನಂತರ ಅಧಿಕಾರಕ್ಕೆ ಬಂದ ನಿಜಾಮ್ ಮಿರ್ ಮೆಹಬೂಬ ಅಲಿಖಾನನು ಪ್ರಗತಿಪರ ಆಲೋಚನೆಯುಳ್ಳ ಸುಲ್ತಾನನಾಗಿದ್ದನು. ಸಂಸ್ಥಾನದಲ್ಲಿದ್ದ ಸಾಂಪ್ರದಾಯಿಕ ಆಡಳಿತ ಪದ್ಧತಿಯನ್ನೆಲ್ಲಾ ಪರಿವರ್ತನೆಗೆ ಒಳಪಡಿಸಿ, ಆಡಳಿತಕ್ಕೆ ಒಂದು ಹೊಸ ಚಹರೆಯನ್ನು ನೀಡುವ ಮೂಲಕ ಆಡಳಿತದಲ್ಲಿ ಪ್ರಜೆಗಳು

ಭಾಗವಹಿಸುವುದಕ್ಕಾಗಿ ಅವಕಾಶ ಮಾಡಿಕೊಟ್ಟನು. ಹೀಗೆ ಸಂದರ್ಭಕ್ಕೆ ಅನುಗುಣವಾಗಿ ಆಡಳಿತದಲ್ಲಿ ಬದಲಾವಣೆಗಳು ಆಗುತ್ತಾ ಮಂತ್ರಿ ಮಂಡಲ, ಕಾರ್ಯಕಾರಿ ಮಂಡಳಿ, ಕಾನೂನ್ಚೆ ಮುಬಾರಕ, ಸಂವಿಧಾನ ಮತ್ತು ವಿಧಾನ ಸಭೆಗಳು ಬ್ರಿಟಿಶ್ ಮಾದರಿಯ ನೆಲೆಯಲ್ಲಿ ರಚನೆಗೊಂಡವು.

ನಿಜಾಮರ ಆಳ್ವಿಕೆಯಲ್ಲಿ ಆರ್ಥಿಕತೆಗೆ ಹೆಚ್ಚಿನ ಮಹತ್ವವನ್ನು ನೀಡಿರುವುದನ್ನು ಗಮನಿಸ ಬಹುದಾಗಿದೆ. ಏಕೆಂದರೆ ಯಾವುದೇ ಮನೆತನವಾದರೂ ಸದೃಢವಾದ ಆರ್ಥಿಕತೆಯನ್ನು ಹೊಂದಿದ್ದರೆ ಮಾತ್ರ ಪರಿಣಾಮಕಾರಿಯಾಗಿ ಆಡಳಿತ ನಡೆಸಲು ಸಾಧ್ಯ. ನಿಜಾಮರು ಕೂಡ ಈ ಪ್ರಯತ್ನದಲ್ಲಿ ಹಿಂದಕ್ಕೆ ಬೀಳಲಿಲ್ಲ. ತಮಗಿಂತ ಹಿಂದಿನ ಮುಸ್ಲಿಂ ಅರಸುಮನೆತನಗಳ ಆರ್ಥಿಕ ನೀತಿಗಳನ್ನು ಒಳಗೊಂಡಂತೆ ಬ್ರಿಟಿಶ್ ಆರ್ಥಿಕ ನೀತಿಗಳಿಂದಲೂ ಪ್ರಭಾವಿತರಾಗಿ ನಿಜಾಮರು ತಮ್ಮ ಪ್ರದೇಶಕ್ಕೆ ಹೊಂದಾಣಿಕೆಯಾಗುವ ರೀತಿಯಲ್ಲಿ ಬದಲಾವಣೆಯನ್ನು ಮಾಡಿಕೊಂಡು ತಮ್ಮದೇಯಾದ ಆರ್ಥಿಕ ನೀತಿಯನ್ನು ಜಾರಿಗೆ ತಂದರು. ಇದರಿಂದಾಗಿ ಕೃಷಿ ಹಾಗೂ ನಗರ ವ್ಯವಸ್ಥೆಗಳೆರಡೂ ಸ್ಪಷ್ಟ ರೂಪವನ್ನು ಪಡೆದುಕೊಂಡವು. ಕೆರೆ, ಬಾವಿ, ಕಾಲುವೆಗಳ ಮೂಲಕ ನೀರಾವರಿ ಭೂಮಿಯನ್ನು ವಿಸ್ತರಿಸುತ್ತಾ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿರುವುದು ಕಂಡುಬರುತ್ತದೆ. ಹಾಗೆ ಸಂಸ್ಥಾನದ ಆರ್ಥಿಕತೆಯನ್ನು ವೃದ್ಧಿಗೊಳಿಸುವುದಕ್ಕಾಗಿ ದೇಶೀಯ ಮತ್ತು ವಿದೇಶಿಯ ಮಾರುಕಟ್ಟೆಗೆ ಹೆಚ್ಚಿನ ಒತ್ತನ್ನು ನೀಡುತ್ತಾ ಸಂಸ್ಥಾನದಲ್ಲಿ ದೇಶಿಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆ ಸ್ಥಾಪಿಸಿದರು. ಇಲ್ಲಿ ಉತ್ಪಾದನೆಗೊಂಡ ವಸ್ತುಗಳನ್ನು ಇತರ ರಾಜ್ಯ ಮತ್ತು ದೇಶಗಳಿಗೆ ರಫ್ತು ಮಾಡುತ್ತಾ ತಮಗೆ ಬೇಕಾದ ವಸ್ತುಗಳನ್ನು, ಆಮದು ಮಾಡಿಕೊಳ್ಳುವ ಮೂಲಕ ತಮ್ಮ ಆರ್ಥಿಕತೆಯನ್ನು ವಿಸ್ತರಿಸಿಕೊಂಡರು.

ಸಂಸ್ಥಾನದಲ್ಲಿ ಹೇರಳವಾಗಿ ಸಿಗುವ ಸಂಪನ್ಮೂಲಗಳಿಗೆ ಅನುಗುಣವಾಗಿ ಕೈಗಾರಿಕೆಗಳನ್ನು ಆರಂಭಿಸಿದರು. ಬಟ್ಟೆ ಕೈಗಾರಿಕೆ, ಸಿಮೆಂಟ್, ಸಕ್ಕರೆ ಮುಂತಾದ ಕೈಗಾರಿಕೆಗಳನ್ನು ಸ್ಥಾಪಿಸುವುದಲ್ಲದೆ ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ಗ್ರಾಮೀಣ ಮಟ್ಟದ ಆರ್ಥಿಕತೆಯನ್ನು ಪ್ರೋತ್ಸಾಹಿಸಿದರು. ಗ್ರಾಮೀಣ ಮಟ್ಟದಲ್ಲಿ ಗೃಹ ಕೈಗಾರಿಕೆಗೆ ಹೆಸರು ಮಾಡಿರುವ ಬಟ್ಟೆ ನೂಲು ತಯಾರಿಸುವ ಗೃಹ ಕೈಗಾರಿಕೆಯಿಂದಲೇ ನೂಲನ್ನು ಖರೀದಿಸುವ ಮೂಲಕ ಬಟ್ಟೆ ತಯಾರಿಸಲಾಗುತ್ತಿತ್ತು. ಜೊತೆಗೆ ನೂಲನ್ನು ಮುಂಬಯಿ ಮತ್ತು ಅಹಮದಾಬಾದ್‌ಗೆ ರಫ್ತು ಮಾಡಲಾಗುತ್ತಿತ್ತು. ಆದರೆ ಗುಲಬರ್ಗಾದಲ್ಲಿ ಸ್ಥಾಪನೆಯಾದ ಬೃಹತ್ ಬಟ್ಟೆ ಮಿಲ್ಲಿನಿಂದಾಗಿ ಗೃಹ ಕೈಗಾರಿಕೆಗಳಿಗೆ ಹಿನ್ನಡೆಯಾಯಿತು. ಹಾಗೆಯೇ ವಸಾಹತುಶಾಹಿಗಳಾದ ಬ್ರಿಟಿಶರ ಧೋರಣೆಯಿಂದಾಗಿ ಕೂಡ ಗೃಹಕೈಗಾರಿಕೆಗಳಿಗೆ ಹಿನ್ನಡೆಯಾಯಿತು.

ನಿಜಾಮರ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದ ಸಮಾಜವು ಸಂಕೀರ್ಣತೆ ಯಿಂದ ಕೂಡಿತ್ತು. ಬಹಮನಿ ಸುಲ್ತಾನರ ಆಳ್ವಿಕೆಯಿಂದ ಈ ಪ್ರದೇಶದಲ್ಲಿ ಮುಸ್ಲಿಮ್ ಸಮುದಾಯದ

ವಲಸೆಯಿಂದಾಗಿ ಇಸ್ಲಾಂ ಸಂಸ್ಕೃತಿಯು ಕೂಡ ಪ್ರವೇಶ ಪಡೆಯಿತು. ಹಿಂದೂ ಮತ್ತು ಮುಸ್ಲಿಮ್ ಧರ್ಮೀಯರು ಸಾಂಸ್ಕೃತಿಕವಾಗಿ ಸಾಮರಸ್ಯದಿಂದಿದ್ದು, ಒಂದರ ಮೇಲೆ ಮತ್ತೊಂದರ ಆರಾಧನೆ, ಆಚರಣೆ ಮತ್ತು ಸಂಪ್ರದಾಯಗಳು ಪ್ರಭಾವಿಸುವುದರ ಮೂಲಕ ಸಮ್ಮಿಶ್ರ ಸಂಸ್ಕೃತಿಯ ಉಗಮವಾಯಿತು. ಈ ಎರಡು ಧರ್ಮೀಯರಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯು ಕಂಡುಬರುತ್ತಿತ್ತು. ತದನಂತರ ಭೂ ಹಿಡುವಳಿಯಲ್ಲಿ ಚಿಕ್ಕ ಚಿಕ್ಕ ಹಿಡುವಳಿಯಾಗಿ ರೂಪುಗೊಂಡಿದ್ದರಿಂದಾಗಿ ವಿಭಕ್ತ ಕುಟುಂಬಗಳು ಅಸ್ತಿತ್ವಕ್ಕೆ ಬಂದವು. ಈ ಪ್ರದೇಶದಲ್ಲಿನ ಸ್ತ್ರೀಯರ ಸ್ಥಾನಮಾನವು ಅತ್ಯಂತ ಕೆಳಮಟ್ಟದಲ್ಲಿರುವುದನ್ನು ಗಮನಿಸಬಹುದಾಗಿದೆ. ಕುಟುಂಬದ ನಿರ್ವಹಣೆಯಲ್ಲಿ ಹೆಣ್ಣು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿದರೂ, ರಾಜಕೀಯ ಅಧಿಕಾರ ಹಾಗೂ ಸವಲತ್ತುಗಳ ವಿಚಾರದಲ್ಲಿ ಅಲಕ್ಷಿತವಾಗಿಯೇ ಉಳಿಯಬೇಕಾಯಿತು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಬಹುದಾಗಿತ್ತು. ಆದರೆ ಮಾಧ್ಯಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಕಡ್ಡಾಯವಾಗಿ ಉರ್ದು ಮಾಧ್ಯಮದಲ್ಲಿಯೇ ಶಿಕ್ಷಣ ಪಡೆಯುವಂತೆ ಮಾಡಲಾಗಿತ್ತು. ಇದರಿಂದಾಗಿ ಸ್ಥಳೀಯವಾಗಿ ಕನ್ನಡ ಮಾತನಾಡುವ ಬಹುತೇಕ ಜನರು ಶಿಕ್ಷಣದಿಂದ ದೂರವೇ ಉಳಿಯಬೇಕಾಯಿತು. ಪ್ರಭುತ್ವದ ಜೊತೆಗೆ ಗುರುತಿಸಿಕೊಂಡ ಮೇಲ್ವರ್ಗದ ಸಮುದಾಯದವರು ಉರ್ದು ಮಾಧ್ಯಮದಲ್ಲಿ ಶಿಕ್ಷಣ ಪಡೆದು ಉನ್ನತವಾದ ಹುದ್ದೆಗಳನ್ನು ಪಡೆದುಕೊಂಡರು. ಆದರೆ ದುಡಿಯುವ ಮತ್ತು ಕೆಳವರ್ಗದ ಜನರು ಇದರಿಂದ ವಂಚಿತರಾದರು.

ಸಂಸ್ಥಾನದಲ್ಲಿ ಭೂಮಿಯ ಒಡೆತನವನ್ನು ಸಾಧಿಸಿದ ಪ್ರಬಲ ವರ್ಗಗಳು ಗೇಣಿ ಪದ್ಧತಿಗೆ ಭೂಮಿಯನ್ನು ಮಧ್ಯಮ ವರ್ಗದವರಿಗೆ ನೀಡುತ್ತಾ, ಮಾಧ್ಯಮ ವರ್ಗದವರು ಹೊಸ ಭೂಮಾಲೀಕರ ಉದಯಕ್ಕೆ ಕಾರಣವಾಯಿತು. ಈ ಭೂ ಮಾಲೀಕರು ಭೂರಹಿತ ರೈತರನ್ನು ಶೋಷಣೆಗೆ ಒಳಪಡಿಸುತ್ತಾ ಗುಲಾಮಗಿರಿ, ಜೀತ ಪದ್ಧತಿಯಂಥ ಸಾಮಾಜಿಕ ಅನಿಷ್ಟಗಳನ್ನು ಮುಂದುವರೆಸಿದರು.

ಫಲಿತಗಳು

ಪ್ರಸ್ತುತ ಮಹಾಪ್ರಬಂಧದಲ್ಲಿ ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಬದುಕಿನ ವಿವಿಧ ನೆಲೆಗಳನ್ನು ಜನಮುಖಿ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಅಧ್ಯಯನದ ಆರಂಭದಲ್ಲಿ ಇಟ್ಟುಕೊಳ್ಳಲಾಗಿದ್ದ ಉದ್ದೇಶಗಳನ್ವಯ ಆಯಾ ಅಧ್ಯಾಯಗಳಲ್ಲಿ ಚರ್ಚಿಸಿ ಕೆಳಕಂಡ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

೧. ನಿಜಾಮ್ ಆಳ್ವಿಕೆಯ ಕುರಿತಾದ ರಾಷ್ಟ್ರೀಯವಾದಿ ಹಾಗೂ ಸಾಮ್ರಾಜ್ಯಶಾಹಿ ಚರಿತ್ರೆಕಾರರ ಪೂರ್ವಗ್ರಹಿತ ನಿಲುವುಗಳನ್ನು ವಿಮರ್ಶಿಸುವ ಹಾಗೂ ನಿಜಾಮ್ ಆಳ್ವಿಕೆಯನ್ನು ವಸ್ತುನಿಷ್ಠವಾಗಿ ಅಧ್ಯಯನ ನಡೆಸುವ ಪ್ರಯತ್ನವನ್ನು ಮಾಡಲಾಗಿದೆ. ಲಭ್ಯವಿರುವ ಸ್ಥಳೀಯ ಆಕರಗಳ ಮೂಲಕ ನಿಜಾಮ್ ಆಳ್ವಿಕೆಯ ಸಂದರ್ಭದ ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಮಾಜಿಕ ಹಾಗೂ ಆರ್ಥಿಕ ಚರಿತ್ರೆಯನ್ನು ತಲಸ್ಪರ್ಶಿಯಾಗಿ ನೋಡಲಾಗಿದೆ.

೨. ಹೈದರಾಬಾದ್ ಕರ್ನಾಟಕ ಪ್ರದೇಶದ ಭೌಗೋಳಿಕ ಪರಿಸರ ಮತ್ತು ಮಾನವ ಪರಿಸರ ಒಂದಕ್ಕೊಂದು ಪೂರಕವಾಗಿದ್ದು, ಮಾನವನ ಬದುಕು ಕಟ್ಟಿಕೊಳ್ಳುವಲ್ಲಿ ಭೌಗೋಳಿಕತೆಯ ಪಾತ್ರ ಮಹತ್ವವಾಗಿದೆ. ಈ ಪ್ರದೇಶದ ಭೌಗೋಳಿಕತೆಯೂ ಕೃಷಿಗೆ ಪೂರಕವಾಗಿಲ್ಲದ ಕಾರಣ ಜನರ ಆರ್ಥಿಕ ಬದುಕಿನ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತಿರುವುದನ್ನು ಕಂಡುಕೊಳ್ಳಲಾಗಿದೆ.

೩. ಈ ಅಧ್ಯಯನದಲ್ಲಿ ಚಾರಿತ್ರಿಕವಾದ ಘಟನೆಗಳನ್ನು ಬಿಡಿ ಬಿಡಿಯಾಗಿ ನೋಡಿ ಅವುಗಳ ಮಹತ್ವವನ್ನು ಅರ್ಥೈಸಿಕೊಳ್ಳಲಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಲ್ಲಿನ ಸ್ಥಿತ್ಯಂತರಗಳನ್ನು ವಿವಿಧ ಅರಸು ಮನೆತನಗಳ ಆಳ್ವಿಕೆಯ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲಾಗಿದೆ. ಆಯಾ ಚಾರಿತ್ರಿಕ ಕಾಲಘಟ್ಟದ ಬದಲಾವಣೆಗಳನ್ನು ಗುರುತಿಸಲಾಗಿದೆ.

೪. ದಕ್ಷಿಣ ಭಾರತದ ರಾಜಕಾರಣದಲ್ಲಿ ನಿಜಾಮರು ವಹಿಸಿದ ಪಾತ್ರ, ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಒಪ್ಪಂದ ಹಾಗೂ ಯುದ್ಧ ಲಾಭ ಮತ್ತು ನಷ್ಟದ ಲೆಕ್ಕಾಚಾರದಲ್ಲಿ ತೆಗೆದುಕೊಂಡ ನಿರ್ಧಾರಗಳು ಹಾಗೂ ಅವುಗಳ ಪರಿಣಾಮಗಳನ್ನು ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

೫. ಈಸ್ಟ್ ಇಂಡಿಯಾ ಕಂಪನಿಗಳು ಆರ್ಥಿಕ ಕ್ರೋಢೀಕರಣದ ಉದ್ದೇಶಕ್ಕಾಗಿ ಹುಟ್ಟು ಹಾಕಿದ ಯುದ್ಧಗಳ ಯುಗದಲ್ಲಿ ನಿಜಾಮರು ವಹಿಸಿದ ನಿರ್ಣಾಯಕವಾದ ಪಾತ್ರವನ್ನು ಮಹಾ ಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

೬. ನಿಜಾಮರು ಪರ್ಶಿಯನ್, ಆರೇಬಿಕ್ ಆಡಳಿತ ವ್ಯವಸ್ಥೆಯಿಂದ ಪ್ರಭಾವಿತರಾಗಿ, ಬ್ರಿಟಿಶರ ಆಧುನಿಕ ಆಡಳಿತ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ದೇಶೀಯ ತತ್ವಗಳ ಆಧಾರದ ಮೇಲೆ ತಮ್ಮದೇ ಆದ ಆಡಳಿತವನ್ನು ರೂಪಿಸಿಕೊಂಡಿರುವುದನ್ನು ಕಂಡುಕೊಳ್ಳಲಾಗಿದೆ.

೭. ಸ್ಥಳೀಯ ಮಟ್ಟದಲ್ಲಿ ಗುರುತಿಸಿಕೊಂಡ ಪ್ರಬಲ ಮೇಲ್ವರ್ಗದ ಸಮುದಾಯಗಳಿಗೆ ಅಧಿಕಾರವನ್ನು ನೀಡುವ ಮೂಲಕ ಅವರಿಂದಲೇ ಸ್ಥಳೀಯ ವ್ಯವಸ್ಥೆಯನ್ನು ನಿಯಂತ್ರಿಸುತ್ತಾ ತಮ್ಮ ಪ್ರಭುತ್ವವನ್ನು ಗಟ್ಟಿಗೊಳಿಸಿಕೊಂಡಿರುವುದನ್ನು ಈ ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

೮. ಭಾರತದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಅನುಗುಣವಾಗಿ ತಮ್ಮ ಆಡಳಿತದಲ್ಲಿ ಕೂಡ ಬದಲಾವಣೆಯನ್ನು ಜಾರಿಗೆ ತರುವ ಮೂಲಕ ಆಡಳಿತದಲ್ಲಿ ಜನರು ಭಾಗವಹಿಸುವಿಕೆಗೆ ಅವಕಾಶ ಮಾಡಿಕೊಳ್ಳುತ್ತಾ ಹೊಸ ಸಂವಿಧಾನ, ಕಾನೂನ್ಚೆ ಮುಬಾರಕ, ಕಾರ್ಯಕಾರಿ ಮಂಡಳಿ ಮತ್ತು ವಿಧಾನ ಸಭೆಯನ್ನು ಸ್ಥಾಪಿಸಿ, ಅಲಕ್ಷಿತ ಸಮುದಾಯಗಳಿಗೆ ಕೂಡ ಪ್ರಾತಿನಿಧ್ಯ ನೀಡುವ ಮೂಲಕ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಕಂಡುಕೊಳ್ಳಲಾಗಿದೆ.

೯. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದ ಶ್ರೇಣೀಕೃತ ಸಾಮಾಜಿಕ ರಚನೆಯು ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಹಾಗೆಯೇ ಮುಂದುವರೆಯಿತು. ಅದರೊಂದಿಗೆ ಮುಸ್ಲಿಮ್ ಆಳ್ವಿಕೆ ಪ್ರವೇಶದ ಮೂಲಕ ಹುಟ್ಟುಕೊಂಡ ಹೊಸ ಸಾಮಾಜಿಕ ರಚನೆಯು ಹುಟ್ಟು ಹಾಕಿದ ಸಂಕೀರ್ಣ ಸ್ಥಿತಿಗತಿಗಳನ್ನು ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

೧೦. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಊಳಿಗಮಾನ್ಯತೆಯ ಸ್ವರೂಪ ಭೀಕರವಾಗಿ ಕಂಡುಬರುತ್ತದೆ. ದಾಸ್ಯರೂಪಿ ಸಂಬಂಧ ಹಾಗೂ ಅರಸು ಆರಾಧನೆಯ ಮೂಲಕ ತನ್ನ ವ್ಯಾಪ್ತಿ ವಿಸ್ತರಿಸಿಕೊಳ್ಳುತ್ತಾ, ಭೂಮಾಲೀಕರ ಅಧೀನದಲ್ಲಿಯೇ ಹೊಸ ಭೂಮಾಲೀಕ ವರ್ಗ ಹುಟ್ಟುಕೊಂಡು ಭೂರಹಿತ ವರ್ಗದ ಜನರ ಮೇಲೆ ಗುಲಾಮಗಿರಿ, ಜೀತಪದ್ದತಿಯಂತೆ ಅನಿಷ್ಠ ಪದ್ಧತಿಗಳು ಹುಟ್ಟು ಹಾಕಿರುವುದಲ್ಲದೆ, ಈ ಪದ್ಧತಿಗಳು ಇವತ್ತಿನವರೆಗೂ ಮುಂದುವರೆದುಕೊಂಡು ಬರುತ್ತಿರುವುದು ಕಂಡುಕೊಳ್ಳಲಾಗಿದೆ.

೧೧. ಆರಾಧನೆ ಮತ್ತು ಸಂಪ್ರದಾಯಗಳನ್ನು ಹಿಂದೂ ಮತ್ತು ಮುಸ್ಲಿಮ್ ಧರ್ಮಗಳ ಪುರೋಹಿತಶಾಹಿ ಶಕ್ತಿಗಳು ಇದನ್ನೆ ಬಂಡವಾಳವನ್ನಾಗಿಸಿಕೊಂಡು ಬಹುಸಂಖ್ಯಾತ ಹಿಂದುಳಿದ ಹಾಗೂ ದಲಿತ ವರ್ಗವನ್ನು ನಿಯಂತ್ರಿಸಲು ಪ್ರಯತ್ನಿಸಿರುವುದನ್ನು ಈ ಮಹಾಪ್ರಬಂಧದಲ್ಲಿ ಕಂಡು ಕೊಳ್ಳಲಾಗಿದೆ.

೧೨. ನಿಜಾಮ್ ಆಳ್ವಿಕೆ ಸಂದರ್ಭದಲ್ಲಿನ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಧಾರ್ಮಿಕ ಸಾಮರಸ್ಯವನ್ನು ಸೂಫಿ ಚಿಂತನೆಗಳು, ಉರುಸು ಹಾಗೂ ಮೊಹರಂ ಆಚರಣೆಗಳ ಮೂಲಕ ಕಂಡುಕೊಳ್ಳಲಾಗಿದೆ.

೧೩. ನಿಜಾಮ್ ಆಳ್ವಿಕೆಯ ಮಹತ್ವದ ಸಾಧನೆಯಂದರೆ ಸ್ಥಳೀಯ ಭಾಷೆಯೊಂದನ್ನು ರಾಜ್ಯಮಟ್ಟದ ಭಾಷೆಯಾಗಿ ಬೆಳೆಸಿರುವುದು. ಉರ್ದು ಭಾಷೆ ರಾಜ್ಯ ಭಾಷೆಯ ಮನ್ನಣೆಯನ್ನು ಪಡೆದು ಕೊಂಡಿತು. ಆಡಳಿತ ಭಾಷೆಯಾದ ಉರ್ದು ಸಂಸ್ಥಾನದ ಇತರ ಭಾಷೆಗಳೊಂದಿಗೆ ಹೊಂದಿದ

ಸಂಬಂಧಗಳನ್ನು ಹಾಗೂ ನಿಜಾಮರ ಭಾಷಿಕ ಧೋರಣೆಗಳನ್ನು ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

೧೪. ಸಂಸ್ಥಾನದ ಆಡಳಿತದಲ್ಲಿ ಸ್ಥಳೀಯ ಹಾಗೂ ಸ್ಥಳೀಯೇತರ ಎಂಬ ಅಧಿಕಾರಿಗಳ ಮಧ್ಯದ ಅಸಮಾನತೆ ಯನ್ನು ಮುಲ್ಕಿ ಕಾನೂನನ್ನು ಜಾರಿಗೊಳಿಸುವುದರ ಮೂಲಕ ಹೋಗಲಾಡಿಸುವ ನಿಟ್ಟಿನಲ್ಲಿ ಮಾಡಿರುವ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಯಿತು.

೧೫. ನಿಜಾಮರ ಆರ್ಥಿಕ ನೀತಿಯಲ್ಲಿ ಮೊಗಲ್, ಬಹಮನಿ ಹಾಗೂ ಆದಿಲ್‌ಶಾಹಿ ಸಂದರ್ಭದ ಆರ್ಥಿಕ ನೀತಿಗಳ ಮುಂದುವರಿಕೆಯನ್ನು ಕಂಡುಕೊಳ್ಳಲಾಗಿದೆ.

೧೬. ನಿಜಾಮರ ಆಳ್ವಿಕೆಯಲ್ಲಿ ಕೃಷಿಭೂಮಿ ವಿಸ್ತರಣೆಗೊಳಿಸುವ ನಿಟ್ಟಿನಲ್ಲಿ ನೀರಾವರಿ ವ್ಯವಸ್ಥೆಗೆ ನೀಡಿರುವ ಆದ್ಯತೆ ಹಿನ್ನೆಲೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನೀರಾವರಿಗಾಗಿ ಕೆರೆ, ಕಾಲುವೆ ಹಾಗೂ ಅಣೆಕಟ್ಟುಗಳ ನಿರ್ಮಾಣ ಕಾಮಗಾರಿಕೆಯನ್ನು ಅಧ್ಯಯನ ನಡೆಸುವ ಮೂಲಕ ಕೃಷಿಗೆ ನೀಡಿರುವ ಆದ್ಯತೆಯನ್ನು ಕಂಡುಕೊಳ್ಳಲಾಗಿದೆ.

೧೭. ಸಂಸ್ಥಾನದ ಆರ್ಥಿಕತೆಯನ್ನು ವಿಸ್ತರಿಸುವುದಕ್ಕಾಗಿ ರಸ್ತೆ ಸಾರಿಗೆ, ರೈಲ್ವೆ ಸಾರಿಗೆ, ಸಂಪರ್ಕ ಮತ್ತು ಬ್ಯಾಂಕ್ ಕ್ಷೇತ್ರಗಳಲ್ಲಿ ಬ್ರಿಟಿಶ್ ಮಾದರಿಯನ್ನು ಅಳವಡಿಸಿಕೊಂಡು ಅಭಿವೃದ್ಧಿಯತ್ತ ದಾಪುಗಾಲು ಹಾಕಿರುವ ಅಂಶಗಳನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೧೮. ಈ ಪ್ರದೇಶದ ಅಭಿವೃದ್ಧಿಗಾಗಿ ನಿಜಾಮ್ ಪ್ರಭುತ್ವವು ಕೈಗೊಂಡ ಕಾರ್ಯಗಳ ಬಗೆಗೆ ಮತ್ತು ಕ್ಷಾಮ ಪರಿಹಾರ ಕ್ರಮಕ್ಕಾಗಿ ಕೈಗೊಂಡ ಪರಿಹಾರ ವಿಷಯಗಳನ್ನು ಕಂಡುಕೊಳ್ಳಲಾಗಿದೆ.

೧೯. ಹೈದರಾಬಾದ್ ಸಂಸ್ಥಾನವು ಹಿಂದುಳಿಯುವುದಕ್ಕೆ ಅಲ್ಲಿನ ಭೌಗೋಳಿಕ ಹಾಗೂ ಸಾಮಾಜಿಕ ರಚನೆಯ ಜೊತೆಗೆ ಬ್ರಿಟಿಶ್ ವಸಾಹತುಶಾಹಿ ಆಳ್ವಿಕೆಗೆ ನೇರವಾಗಿ ಒಳಗಾಗದೆ ಇರುವುದು ಕೂಡ ಒಂದು ಕಾರಣವಾಗಿದೆ ಎನ್ನುವ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಬ್ರಿಟಿಶರು ನಿಜಾಮ್ ಸಂಸ್ಥಾನಕ್ಕೆ ತಮ್ಮ ಆಧುನಿಕ ಅಭಿವೃದ್ಧಿ ಮಾದರಿಯನ್ನು ಅಳವಡಿಸದೆ, ಕೇವಲ ತಮ್ಮ ವಸಾಹತುಶಾಹಿ ನೀತಿಯ ವಿಸ್ತರಣೆಗೆ ಮಾತ್ರ ನಿಜಾಮ್ ಸಂಸ್ಥಾನವನ್ನು ಬಳಸಿಕೊಂಡ ಧೋರಣೆಯನ್ನು ಮಹಾಪ್ರಬಂಧದಲ್ಲಿ ಕಂಡು ಕೊಳ್ಳಲಾಗಿದೆ.

೨೦. ನಿಜಾಮ್ ಅರಸರು ಅಭಿವೃದ್ಧಿಗಾಗಿ ರೂಪಿಸಿದ ಯೋಜನಗಳು, ಕಾಯಿದೆ ಹಾಗೂ ಕಾನೂನು ಗಳ ಕಾರ್ಯ ವೈಖರಿಯನ್ನು ಗುರುತಿಸುವುದಲ್ಲದೆ, ಅನಭಿವೃದ್ಧಿಗೆ ಕಾರಣವಾದ ಅಂಶಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೨೧. ಪ್ರಜಾಪ್ರಭುತ್ವ ಸರ್ಕಾರವು ಹೈದರಾಬಾದ್ ಕರ್ನಾಟಕ ಪ್ರದೇಶ ಹಿಂದುಳಿದಿದೆ ಎಂಬ ಉದ್ದೇಶದಿಂದ ಅದಕ್ಕೆ ವಿಶೇಷ ಪ್ಯಾಕೇಜ್‌ಗಳನ್ನು ನೀಡುವುದಲ್ಲದೆ ವಿಶೇಷವಾದ ಕಾಯಿದೆಗಳನ್ನು ಜಾರಿಗೆ ತರುವುದರ ಮೂಲಕ ಅಭಿವೃದ್ಧಿ ಮಾಡಲು ಹೊರಟಿರುವ ಕ್ರಮವನ್ನು, ಅದು ಅನುಷ್ಠಾನಗೊಂಡಿರುವ ರೀತಿಯನ್ನು ಹಾಗೂ ಅದರ ಮಿತಿಗಳನ್ನು ರಾಜಕೀಯ ಭರವಸೆಗಳ ಬಗೆಗಿನ ಜನರ ಅಭಿಪ್ರಾಯಗಳನ್ನು ಹಾಗೂ ವಿರೋಧವನ್ನು ಗುರುತಿಸಲಾಗಿದೆ. ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ. ನಿಜಾಮ್ ಸರ್ಕಾರ ಜಾರಿಗೊಳಿಸಿದ ಮುಲ್ಕಿ ಕಾನೂನಿನ ಹಲವಾರು ಅಂಶಗಳು ೩೭೧(ಜೆ)ಯಲ್ಲಿ ಮುಂದುವರೆದಿರುವುದನ್ನು ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

ಅನುಬಂಧ

೧. ಪರಾಮರ್ಶನ ಗ್ರಂಥಗಳು
೨. ನಕಾಶೆಗಳು
೩. ಛಾಯಾಚಿತ್ರಗಳು
೪. ನಿಜಾಮರ ಪತ್ರಗಳು

ಪರಾಮರ್ಶನ ಗ್ರಂಥಗಳು

ಕನ್ನಡ ಕೃತಿಗಳು

೧. ಅಮರೇಶ ನುಗಡೋಣಿ, ೨೦೦೩, **ಹೈದರಾಬಾದು ಕರ್ನಾಟಕ ಹಾಡು ಪಾಡು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಮರೇಶ ನುಗಡೋಣಿ, ೨೦೧೧, **ನುಡಿಯುವ-ಪಾಡು,** ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

೩. ಅಮರೇಶ ನುಗಡೋಣಿ, ೨೦೧೬, **ಸಾಮಾಜಿಕ ವಾಸ್ತವ ಹೈದರಾಬಾದು ಕರ್ನಾಟಕ ಕಥಾ ಸಾಹಿತ್ಯ ಅನುಲಕ್ಷಿಸಿ,** ವಿಜಯ- ಕಲ್ಯಾಣ ಪ್ರಕಾಶನ, ಹೊಸಪೇಟೆ.

೪. ಅಮರೇಶ ನುಗಡೋಣಿ, ೨೦೦೦, **ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನ ಚಳುವಳಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಅಮರೇಶ ಯತಗಲ್, ೨೦೦೭, **ಇತಿಹಾಸ ಇಂಚರ,** ಅದಿತಿ ಪ್ರಕಾಶನ ಲಿಂಗಸೂಗೂರು.

೬. ಅಮರೇಶ ಯತಗಲ್, ೨೦೦೭, **ಇತಿಹಾಸ ಮಂಥನ,** ಅದಿತಿ ಪ್ರಕಾಶನ ಲಿಂಗಸೂಗೂರು.

೭. ಅಮರೇಶ ಯತಗಲ್ (ಸಂಪಾದಕರು), ೨೦೧೦, **ದೋ-ಅಬ್ ರಾಯಚೂರು ಇತಿಹಾಸ,** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮. ಅಮರೇಶ ಯತಗಲ್ (ಸಂಪಾದಕರು), ೨೦೦೭, **ಸ್ವರ್ಣ ಪ್ರಭ ಸ್ಮರಣೆ ಸಂಪುಟ ವಜ್ರ ಮಹೋತ್ಸವ,** ಮಹೋತ್ಸವ ಸಮಿತಿ, ಲಿಂಗಸೂಗೂರು.

೯. ಅಮರೇಶ ಅಲ್ಕೋಡ, ೨೦೧೨, **ದೇವದುರ್ಗದ ಚಾರಿತ್ರಿಕ ಅಧ್ಯಯನ,** ಕ್ರಿಯಾ ಪ್ರಕಾಶನ, ಬೆಂಗಳೂರು.

೧೦. ಅಂತೋನವ ಕೆ. ಕತೋವಸ್ಕಿ ಜಿ., ೧೯೮೮, **ಭಾರತದ ಇತಿಹಾಸ,** ಪ್ರಗತಿ ಪ್ರಕಾಶನ, ಮಾಸ್ಕೊ, ನವಕರ್ನಾಟಕ ಪ್ರಕಾಶನ ಬೆಂಗಳೂರು.

೧೧. ಇರ್ಫಾನ್ ಹಬೀಬ್(ಮೂಲ), ಅಬ್ದುಲ್ ರೆಹಮಾನ್ ಪಾಷಾ ಎಂ.(ಅನು)., ೨೦೧೨, **ರಾಷ್ಟ್ರೀಯ ಆಂದೋಲನ ಸಿದ್ಧಾಂತದ ಮತ್ತು ಇತಿಹಾಸದ ಅಧ್ಯಯನಗಳು,** ನವಕರ್ನಾಟಕ ಪ್ರಕಾಶನ ಬೆಂಗಳೂರು.

೧೨. ಇರ್ಫಾನ್ ಹಬೀಬ್(ಮೂಲ), ಕಕ್ಕಿಲಾಯ ಬಿ.ವಿ., ೨೦೧೩, **ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ,** ನವಕರ್ನಾಟಕ ಪ್ರಕಾಶನ ಬೆಂಗಳೂರು.

೧೩. ಇಬ್ರಾಹಿಂ ಮುಲ್ಲಾ ಎಂ., ೨೦೦೮ **ಕರ್ನಾಟಕ ಉರುಸುಗಳು,** ಕರ್ನಾಟಕ ಇತಿಹಾಸ ಸಂಶೋಧನೆ, ಮಂಡಲ, ಧಾರವಾಡ.

೧೪. ಇಂಧುಮತಿ ಪಾಟೀಲ್, ೨೦೦೬, **ಬೀದರ ಜಿಲ್ಲೆಯ ಅರಸುಮನೆತನಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೫. ಈಶ್ವರ ಚಂದ್ರ(ಅನು), ೨೦೦೬, **ಕೋಮುವಾರು ಸಾಮರಸ್ಯ,** ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ.

೧೬. ಕುಲಕರ್ಣಿ ಎಲ್.ಆರ್., ೧೯೭೨, **ಬಹಮನಿ ರಾಜ್ಯ,** ಐಬಿಎಚ್ ಪ್ರಕಾಶನ, ಬೆಂಗಳೂರು.

೧೭. ಕೃಷ್ಣ ಕೊಲ್ಹಾರ ಕುಲಕರ್ಣಿ, ೨೦೦೬, **ಅಖಂಡ ಕರ್ನಾಟಕ,** ಹೆಜ್ಜೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೮. ಕೃಷ್ಣ ಕೊಲ್ಹಾರ ಕುಲಕರ್ಣಿ, ೨೦೦೨, **ಬಿಜಾಪುರ ಆದಿಲ್‌ಶಾಹಿ,** ಸಿಕ್ಯಾಬ ಅದಿಲ್‌ಶಾಹಿ ಅಧ್ಯಯನ ಸಂಸ್ಥೆ ಬಿಜಾಪೂರ.

೧೯. ಕೊಟ್ರೇಶ್ ಎಂ.(ಸಂ)., ೨೦೧೦, **ಕಲ್ಯಾಣ ಕರ್ನಾಟಕದ ಅರಸು ಮನೆತನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಗೋಪಾಲರಾವ್ ಹೆಜೀಬ್, ೨೦೦೧, **ಹೈದರಾಬಾದ್ ಮುಕ್ತಿ ಸಂಘರ್ಷ,** ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು.

೨೧. ಗೋಪಾಲರಾವ್ ಹೆಚ್.ಎಸ್., ೧೯೯೫, **ನಮ್ಮ ನಾಡು ಕರ್ನಾಟಕ,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೨. ಗೋಪಾಲರಾವ್ ಹೆಚ್.ಎಸ್.(ಅನು), ೨೦೧೨, **ಆಧುನಿಕ ಭಾರತದ ಇತಿಹಾಸ,** ಬಿಪನ್ ಚಂದ್ರ(ಮೂಲ), ನವಕರ್ನಾಟಕ ಪ್ರಕಾಶನ ಬೆಂಗಳೂರು.

೨೩. ಗೋಪಾಲ್ ಆರ್.(ಸಂ)., ೨೦೦೭, **ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೨೪. ಗೋವಿಂದರಾಜು ಸಿ.ಆರ್., ೨೦೦೬, **ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨೫. ಗೋವಿಂದರಾಜು ಸಿ.ಆರ್.(ಸಂ), ೨೧೧೦, **ಚಾರಿತ್ರಿಕ ಕರ್ನಾಟಕ,** ಗ್ರಂಥಾಲಯ ಸಮಿತಿ, ಕರ್ನಾಟಕ ವಿಧಾನ ಮಂಡಲ, ಬೆಂಗಳೂರು

೨೬. ಚಂದ್ರಶೇಖರ ಎಸ್., ೨೦೦೨, **ಆಧುನಿಕ ಕರ್ನಾಟಕದ ಆಂದೋಲನಗಳು,** ನಮ್ಮ ಪ್ರಕಾಶನ ಬಿಳಿಗೆರೆ, ತಿಪಟೂರು.

೨೭. ಚಂದ್ರಶೇಖರ ಎಸ್., ೨೦೦೬, **ವಸಾಹತುಕಾಲೀನ ಕರ್ನಾಟಕ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨೮. ಚಂದ್ರಶೇಖರ ಟಿ.ಆರ್., ೨೦೧೧, **ಹಕ್ಕು-ಹಂಗು ಅಭಿವೃದ್ಧಿ ಅಧ್ಯಯನ ಪ್ರಬಂಧಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೯. ಚಂದ್ರಶೇಖರ ಟಿ.ಆರ್. ೨೦೧೦, **ಧರೆ ಹತ್ತಿ ಉರಿದರೆ-ಪ್ರಚಲಿತ ಕರ್ನಾಟಕ ಕುರಿತ ಬರಹಗಳು,** ಪಲ್ಲವ ಪ್ರಕಾಶನ ಚನ್ನಪಟ್ಟಣ.

೩೦. ಚಂದ್ರಶೇಖರ ಎಸ್.(ಮೂಲ), ನಾಗಣ್ಣ ಸಿ.(ಅನು), ೨೦೦೦, **ದಕ್ಷಿಣ ಭಾರತ-ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ಚೆನ್ನಸ್ವಾಮಿ ಸೋಸಲೆ ಎನ್., ೨೦೦೧, **ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ,** ಸಿವಿಜಿ ಪಬ್ಲಿಕೇಷನ್ ಬೆಂಗಳೂರು.

೩೨. ಚೆನ್ನಸ್ವಾಮಿ ಸೋಸಲೆ ಎನ್., ೨೦೦೪, **ಸಾಮ್ರಾಜ್ಯ ಮತ್ತು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೩. ಚೆನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೨, **ದಿವಾನ್ ಸರ್ ಮಿರ್ಜಾ ಎಂ.ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. ಚೆನ್ನಣ್ಣ ವಾಲೀಕಾರ, ೧೯೯೮, **ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ,** ವಾಲೀಕಾರ ವಿರಸಂ, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲ್ಬರ್ಗಾ.

೩೫. ಚೆನ್ನಣ್ಣ ವಾಲೀಕಾರ, ೨೦೦೧, **ಕರ್ನಾಟಕ ದೇವದಾಸಿಯರ ಸಮಾಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ,** ವಾಲೀಕಾರ ವಿರಸಂ ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲ್ಬರ್ಗಾ.

೩೬. ಜಗನ್ನಾಥ ಹೆಬ್ಬಾಳೆ, ೧೯೯೫, **ವೀರಭದ್ರ,** ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಬೆಂಗಳೂರು.

೩೭. ಜಾಗಿರದಾರ ಆರ್.ಜಿ., ಲಿಂಗಸುಗೂರ ವಿಠಲರಾವ್, ೧೯೪೫, **ಹೈದರಾಬಾದ್ ಕರ್ನಾಟಕ,** ಪ್ರೇಮಸಾಗರ ಮುದ್ರಣಾಲಯ, ಹೈದರಾಬಾದ್.

೩೮. ದೇವು ಪತ್ತಾರ, ೨೦೧೫, **ಬಹಮನಿ ಸಾಮ್ರಾಜ್ಯ-ಪರ್ಷಿಯಾ ಪ್ರಭಾವ-ಪ್ರೇರಣೆ,** ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

೩೯. ದೇಸಾಯಿ ವಿ.ಹೆಚ್., ೧೯೯೨, **ವಂದೇ ಮಾತರಂದಿಂದ ಜನಗಣ ಮನದವರೆಗೆ,** ಲೋಕಶಿಕ್ಷಣ ಟ್ರಸ್ಟ್ ಗ್ರಂಥಮಾಲೆ, ಹುಬ್ಬಳ್ಳಿ.

೪೦. ದೇವೇಂದ್ರಕುಮಾರ ಹಕಾರಿ(ಸಂ), ೨೦೦೦, **ಡಿ.ಕೆ.ಭೀಮಸೇನ ರಾವ್ ಅವಲೋಕನ ಸಂಶೋಧನೆ,** ಕನ್ನಡ ಪುಸ್ತಕ ಪ್ರಾಧಿಕಾರಿ ಬೆಂಗಳೂರು,

೪೧. ಧ್ರುವನಾರಾಯಣ ಎಂ., ೨೦೦೨, **ಹೈದರಾಬಾದ್ ಕರ್ನಾಟಕದಲ್ಲಿನ ಖಾದಿ ಇತಿಹಾಸ,** ಕರ್ನಾಟಕ ಗ್ರಾಮ ಸೇವಾ ಸಂಘ ಹಾಗೂ ಖಾದಿ ಗ್ರಾಮೋದ್ಯೋಗ ಸಂಘ, ರಾಯಚೂರು.

೪೨. ಧ್ರುವನಾರಾಯಣ ಎಂ.(ಸಂ), ೨೦೧೧, **ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಟ್ಟಿದವರು,** ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

೪೩. ಧ್ರುವನಾರಾಯಣ ಎಂ.(ಸಂ) ೨೦೦೫, **ಕಪಟರಾಳ ಕೃಷ್ಣರಾಯರ ಸುರಪುರ ಸಂಸ್ಥಾನದ ಇತಿಹಾಸ,** ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು.

೪೪. ಧ್ರುವನಾರಾಯಣ ಎಂ.(ಸಂಪಾದಕರು), ೨೦೦೬, **ಪಂಡಿತ ತಾರಾನಾಥರು-ಬದುಕು ಮತ್ತು ಬರಹ,** ಸಾಹಿತ್ಯ ಆಕಾಡೆಮಿ, ದೆಹಲಿ.

೪೫. ಧ್ರುವನಾರಾಯಣ ಎಂ., ೧೯೭೧, **ಸ್ವಾತಂತ್ರ್ಯಾಂದೋಲನ ರಾಯಚೂರು ಜಿಲ್ಲೆ,** ಕರ್ನಾಟಕ ಸಂಘ, ರಾಯಚೂರು.

೪೬. ನಲವಡಿ ಶ್ರೀಕಂಠಶಾಸ್ತ್ರಿ, ೧೯೯೮, **ಹೈದರಾಬಾದ್ ರಜಾಕಾರರ ಲಾವಣಿಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೭. ನಾರಾಯಣರಾವ್ ಜೋಶಿ(ಮೂಲ), ಶಿವಶರಣಪ್ಪ(ಅನು), ೧೯೬೮, **ಹೈದರಾಬಾದ್ ಕರ್ನಾಟಕ,** ಹೈದರಾಬಾದ್.

೪೮. ಪಾಟೀಲ್ ಬಿ.ಸಿ.,೧೯೯೮, **ಕೊಪ್ಪಳ: ಸಾಂಸ್ಕೃತಿಕ ಪರಂಪರೆ,** ಬಿ.ಸಿ.ಪಾಟೀಲ್ ಹರಿಹರ ಪ್ರಕಾಶನ, ಕೊಪ್ಪಳ.

೪೯. ಪಾಟೀಲ್ ಹೆಚ್.ಎಸ್.(ಸಂ). ೧೯೯೯, **ವಿಮೋಚನೆ-ಕೊಪ್ಪಳ ಜಿಲ್ಲೆಯ ಹೈದರಾಬಾದ್ ವಿಮೋಚನಾ ಹೋರಾಟ,** ಜಿಲ್ಲಾ ಆಡಳಿತ, ಕೊಪ್ಪಳ.

೫೦. ಪಾಟೀಲ ಎಸ್.ಎ., ೨೦೦೭, **ಹೈದರಾಬಾದ್ ಕರ್ನಾಟಕ ಕೃಷಿ ಬೆಳೆಗಳು,** ಬೆಂಗಳೂರು.

೫೧. ಪ್ರಭು ಖಾನಾಪುರೆ(ಸಂಪಾದಕರು), ೧೯೯೯, **ಶಾಂತಶ್ರೀ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫೨. ಬಂಜಗೆರೆ ಜಯಪ್ರಕಾಶ(ಅನು), ೨೦೧೧, **ಮಧ್ಯಯುಗೀನ ಭಾರತ-ಅಂತ್ಯಜರ ತತ್ವ ಚಿಂತನೆ,** ಶಂಕರ ಮೊಕಾಶಿ ಪುಣೇಕರ(ಮೂಲ), ಚಾರು ಪ್ರಕಾಶನ, ಬೆಂಗಳೂರು.

೫೩. ಬರಗೂರು ರಾಮಚಂದ್ರಪ್ಪ(ಪ್ರ.ಸಂ.), ೨೦೦೨, **ಕರ್ನಾಟಕ ಸಂಗಾತಿ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

೫೪. ಬಸವರಾಜ ಪೊಲೀಸ್ ಪಾಟೀಲ(ಸಂ), ೨೦೦೨, **ಬಿಡುಗಡೆ,** ಅಮರ ಪ್ರಕಾಶನ ಗುಲಬರ್ಗಾ.

೫೫. ಬಸವರಾಜ ಸಬರದ(ಸಂ), ೨೦೦೦, **ಹೈದರಾಬಾದ್ ಕರ್ನಾಟಕದ ತತ್ವಪದಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೬. ಬಸವರಾಜ ಟಿ.ಕುಮ್ನೂರ್, ೨೦೦೭, **ಡಾ.ನಂಜುಂಡಪ್ಪನವರ ವರದಿ ಮತ್ತು ಅನುಷ್ಠಾನ,** ಶುಭಕಿರಣ ಪ್ರಕಾಶನ, ಗುಲ್ಬರ್ಗಾ.

೫೭. ಬಸವರಾಜು ಎಚ್.ಎಂ., ೨೦೦೭, **ಉತ್ತರ ಭಾರತ ಹಾಗೂ ದಕ್ಷಿಣ ಭಾರತದ ಸಮಗ್ರ ಇತಿಹಾಸ,** ಉಮಾ ಪ್ರಕಾಶನ, ಬೆಂಗಳೂರು.

೫೮. ಬಸವರಾಜ ಕೋಡಗುಂಟಿ(ಸಂ), ೨೦೧೬, **ಹಯ್ದರಾಬಾದ ಕರ್ನಾಟಕ ಸಾಲು: ಸಂಪುಟ-೨, ದರಗಾ,** ಬಂಡಾರ ಪ್ರಕಾಶನ, ಮಸ್ಕಿ.

೫೯. ಬಸವರಾಜ ಕೋಡಗುಂಟಿ(ಸಂ), ೨೦೧೫, **ದರಗಾ,** ಬಂಡಾಯ ಪ್ರಕಾಶನ, ಮಸ್ಕಿ.

೬೦. ಬಸವರಾಜ ಕೋಡಗುಂಟಿ(ಸಂ) ೨೦೧೬, **ಹಯ್ದರಾಬಾದ ಕರ್‍ನಾಟಕ ಸಾಲು: ಸಂಪುಟ–೧, ಊರು,** ಬಂಡಾರ ಪ್ರಕಾಶನ, ಮಸ್ಕಿ.

೬೧. ಬಸವರಾಜ ಕೋಡಗುಂಟಿ(ಸಂ), ೨೦೧೫, **ಊರು,** ಬಂಡಾರ ಪ್ರಕಾಶನ, ಮಸ್ಕಿ.

೬೨. ಬಸವರಾಜ ಕೋಡಗುಂಟಿ, ೨೦೧೬, **ಹಯ್ದರಾಬಾದ ಕರ್‍ನಾಟಕ,** ಬಂಡಾರ ಪ್ರಕಾಶನ, ಮಸ್ಕಿ.

೬೩. ಬಸವರಾಜ ನಾಗೂರ, ೧೯೮೪, **ಹದಗೆಟ್ಟ ಹೈದರಾಬಾದ್,** ರಾಧಾ ಪ್ರಿಂಟರ್ಸ್, ಬಿಜಾಪುರ.

೬೪. ಬಸವರಾಜ ಸಬರದ(ಪ್ರ.ಸಂ), ೨೦೦೫, **ಬೀದರ ಜಿಲ್ಲಾ ದರ್ಶನ,** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೬೫. ಬಸವರಾಜ ಸಬರದ(ಪ್ರ.ಸಂ), ೨೦೦೫, **ಕೊಪ್ಪಳ ಜಿಲ್ಲಾ ದರ್ಶನ,** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೬೬. ಬಸವರಾಜ ಸಬರದ(ಪ್ರ.ಸಂ), ೨೦೦೫, **ರಾಯಚೂರು ಜಿಲ್ಲಾ ದರ್ಶನ,** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೬೭. ಬಸವರಾಜ ಸಬರದ(ಪ್ರ.ಸಂ), ೨೦೦೫, **ಗುಲಬರ್ಗಾ ಜಿಲ್ಲಾ ದರ್ಶನ,** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೬೮. ಬಾಲಚಂದ್ರ ಜಯಶೆಟ್ಟಿ, ೨೦೦೬, **ಹೈದರಾಬಾದ್ ಕರ್ನಾಟಕದ ವಿಮೋಚನಾ ಚಳುವಳಿ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೯. ಮಹಾಬಲೇಶ್ವರಪ್ಪ ಬಿ.ಸಿ., ೨೦೦೮, **ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು,** ೧೯೪೬–೨೦೦೦, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೭೦. ಮಹಾದೇವಿ ಮುಲಗಿ, ೨೦೧೧, **ಬೀದರ ಜಿಲ್ಲೆಯ ದೇವರೋತ್ಸವಗಳು,** ಅಖಿಲ ಭಾರತ ಜಾನಪದ, ಬೀದರ.

೭೧. ಮಂಜುನಾಥ ಬೇವಿನಕಟ್ಟಿ, ೨೦೦೭, **ಕನ್ನಡ ಜನಪದ ನಂಬಿಕೆಗಳು,** ಜ್ಯೋತಿ ಪ್ರಕಾಶನ, ಮೈಸೂರು.

೭೨. ಮೈತ್ರಿ ಕೆ.ಎಂ., ೧೯೯೪, **ಸುಲ್ತಾನ ಸುರಳಿ,** ಮೈತ್ರಿ ಪ್ರಕಾಶನ, ಬೀದರ.

೭೩. ಮೋಹನ್‌ಕೃಷ್ಣ ರೈ ಕೆ., ೨೦೦೪, **ಪ್ರಭುತ್ವ ಮತ್ತು ಜನತೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೪. ಮೋಹನ್‌ಕೃಷ್ಣ ರೈ ಕೆ., ೨೦೦೭, **ವಸಾಹತುಶಾಹಿ ಮತ್ತು ನಗರೀಕರಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೫. ಮೋಹನ್‌ಕೃಷ್ಣ ರೈ ಕೆ., ೨೦೦೯, **ಚರಿತ್ರೆ ಕಥನ,** ಪಲ್ಲವ ಪ್ರಕಾಶನ, ಚನ್ನಪಟ್ಟಣ.

೭೬. ಮೋಹನ್‌ಕೃಷ್ಣ ರೈ ಕೆ., ೨೦೧೦, **ಕೆನರಾದ ವಿಭಜನೆ: ಹತ್ತಿ ರಾಜಕೀಯದ ವಿಶ್ಲೇಷಣೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೭. ರಹಮತ್ ತರೀಕೆರೆ, ೨೦೧೧, **ಕರ್ನಾಟಕದ ಸೂಫಿಗಳು,** ಅಭಿನವ ಪ್ರಕಾಶನ, ಬೆಂಗಳೂರು.

೭೮. ರಝಾಕ ಉಸ್ತಾದ, ೨೦೧೧, **ಹೈದರಾಬಾದ್ ಕರ್ನಾಟಕ ಕಥೆ-ವ್ಯಥೆ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭೯. ರಾಘವೇಂದ್ರರಾವ್ ಕೆ., ೨೦೦೧, **ಪ್ರೊ.ಡಿ.ಕೆ.ಭೀಮಸೇನರಾಯರ ಬದುಕು-ಬರಹ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮೦. ರಾಮೇಶ್ವರ, ೧೯೮೬, **ಚಿಂಚೋಳ್ಳಿ ತಾಲ್ಲೂಕು ದರ್ಶನ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೮೧. ರಾಮಸ್ವಾಮಿ ಎಸ್.ಆರ್., ೨೦೦೦, **ಸರ್ದಾರ್ ವಲ್ಲಬಾಯಿ ಪಟೇಲ್,** ಸ್ವಪ್ನ ಬುಕ್ ಹೌಸ್, ಬೆಂಗಳೂರು.

೮೨. ರಾಮಯ್ಯಂಗಾರ್ ಹೆಚ್.ಜೆ., ೧೯೯೬, **ಮುಸಲ್ಮಾನರ ಆಳ್ವಿಕೆಯಲ್ಲಿ ಭಾರತ,** ಹೆಚ್.ಜಿ. ರಾಮಯ್ಯಂಗಾರ್, ಪ್ರಕಾಶನ ಬೆಂಗಳೂರು.

೮೩. ರಾಮಣ್ಣ ಹವಳೆ, ೨೦೧೦, **ಹೈದರಾಬಾದ್ ಸಂಸ್ಥಾನ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆಯ ಹೋರಾಟ,** ರಾಯಚೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಹಾಗೂ ಉತ್ತರಾಧಿಕಾರಿಗಳ ಸಂಘ, ರಾಯಚೂರು.

೮೪. ರಾಮಣ್ಣ ಹವಳೆ, ೧೯೯೬, **ಸ್ವಾತಂತ್ರ್ಯ ಸೇನಾನಿ ಪುಂಡಲಿಕಪ್ಪ ಜ್ಞಾನ ಮೋರೆ,** ಚೇತನ ಪ್ರಕಾಶನ, ರಾಯಚೂರು.

೮೫. ರಾಮಣ್ಣ ಹವಳೆ, ೧೯೯೬, **ಹೈದರಾಬಾದ್ ಸ್ವಾತಂತ್ರ್ಯ ಹೋರಾಟದಲ್ಲಿ ಗಜೇಂದ್ರಗಡ ಶಿಬಿರ,** ಚೇತನ ಪ್ರಕಾಶನ, ರಾಯಚೂರು.

೮೬. ರೋಮಿಲಾ ಥಾಪರ್ ಮತ್ತು ಇತರರು, ೧೯೯೮, **ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೮೭. ಲಕ್ಷ್ಮಣ್ ತೆಲಗಾವಿ(ಸಂಪಾದಕರು), ೨೦೦೩, **ಸ್ಥಳೀಯ ಚರಿತ್ರೆ–ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೮. ಲಕ್ಷ್ಮಣ್ ತೆಲಗಾವಿ, ೨೦೦೪, **ಮೌರ್ಯ ಮತ್ತು ಶಾತವಾಹನರ ಯುಗ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೯. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೯, **ವಸಾಹತುಕಾಲೀನ ಬಳ್ಳಾರಿ ಜಿಲ್ಲೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೦. ವೀರಭದ್ರಪ್ಪ ಕುಂ., ೧೯೯೩, **ಜಮೀನ್ದಾರಿ ವ್ಯವಸ್ಥೆ ಮತ್ತು ತೆಲುಗು ಸಾಹಿತ್ಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೧. ವೆಂಕಟೇಶ ಕೆ., ಸರೋಜಾ ಬಿ(ಸಂ), ೨೦೦೬, **ಹೈದರಾಬಾದ್ ಕರ್ನಾಟಕ ವರ್ತಮಾನ ತಲ್ಲಣಗಳು,** ಪಲ್ಲವ ಪ್ರಕಾಶನ, ಚನ್ನಪಟ್ಟಣ.

೯೨. ಶಂಕರನಾರಾಯಣರಾವ್ ಎನ್.ಪಿ., ೧೯೯೧, **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೯೩. ಶಾಂತರಸ, ೨೦೦೬, **ಉಳಿವ ಮರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೪. ಶರಣಪ್ಪ ಗುಡ್ಡದಿನ್ನಿ, ೨೦೦೮, **ದೇವದುರ್ಗ,** ಸಿದ್ದಲಿಂಗೇಶ್ವರ ಬುಕ್ ಡೀಪೋ ಮತ್ತು ಪ್ರಕಾಶನ, ಗುಲಬರ್ಗಾ.

೯೫. ಶಾಶ್ವತಸ್ವಾಮಿ ಮುಕ್ಕುಂದಿಮಠ, ೨೦೦೮, **ಕೃಷ್ಣತುಂಗೆ ನೆಲದ ಸಿರಿ,** ಸುಮುಖ ಪ್ರಕಾಶನ, ಬೆಂಗಳೂರು.

೯೬. ಶಿವರಾಮ ಅಸುಂಡಿ, ೨೦೧೦, **ಹೈದರಾಬಾದ್ ಕರ್ನಾಟಕ ಸಮೂಹ ಮಾಧ್ಯಮ,** ಶ್ರೀಸಿದ್ಧಲಿಂಗೇಶ್ವರ ಬುಕ್‌ಡಿಪೋ, ಗುಲಬರ್ಗಾ.

೯೭. ಶ್ರೀನಿವಾಸ ಹಾವನೂರ(ಸಂ), ೨೦೦೮, **ತುಂಗಭದ್ರ ನಾಡಿಗೆ ವರವೋ ಶಾಪವೋ,** ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು.

೯೮. ಶ್ರೀನಿವಾಸ ಹಾವನೂರು, ೨೦೦೦, **ಹೊಸಗನ್ನಡ ಅರುಣೋದಯ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೯೯. ಶ್ರೀನಿವಾಸರಾವ್ ಬಿ.ವಿ., ೧೯೫೬, **ರಾಯಚೂರು ಇತಿಹಾಸ,** ಡಿ.ಎಂ.ಸೂಗವೀರ ಶರ್ಮ ಪ್ರಕಾಶನ, ರಾಯಚೂರು.

೧೦೦. ಸೂರ್ಯನಾಥ ಕಾಮತ್ ಯು, ೧೯೭೭, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಭಾಗ ೧, ೨, ೩,** ಗೀತಾ ಬುಕ್‌ಹೌಸ್, ಮೈಸೂರು.

೧೦೧. ಹಳೆಮನೆ ರಾಜಶೇಖರ, ೨೦೦೬, **ಹೈದರಾಬಾದ್ ಕರ್ನಾಟಕ ಸಾಹಿತ್ಯ ಮತ್ತು ರಜಾಕಾರರು,** ಸ್ನೇಹಾ ಪ್ರಿಂಟರ್ಸ್, ಬೆಂಗಳೂರು.

೧೦೨. ಹಿರೇಮಠ ಎಸ್.ಎಸ್., ೨೦೦೦, **ಕೊಪ್ಪಳ ಜಿಲ್ಲೆಯ ಜಾತ್ರೆಗಳು,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೦೩. ಹಿರೇಮಠ ಎಸ್.ಎಸ್., ೧೯೯೩, **ಜಾತ್ರೆಗಳು ಭಾಗ-೨,** ಸಮತಾ ಪ್ರಕಾಶನ, ಹೊಸಪೇಟೆ.

೧೦೪. ಹಿರೇಮಠ ಎಸ್.ಎಂ., ೨೦೦೫, **ಮಹಾದಾಸೋಹ,** ದೊಡ್ಡಪ್ಪ ಅಪ್ಪ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೦೫. ಸಿದ್ದಲಿಂಗಯ್ಯ, ೨೦೦೫, **ಗ್ರಾಮದೇವತೆಗಳು-ಜಾನಪದೀಯ ಅಧ್ಯಯನ,** ಅಂಕಿತ ಪುಸ್ತಕ, ಬೆಂಗಳೂರು.

ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧಗಳು

೧. ಅಜ್ಜಯ್ಯ ಸಿ., ೨೦೦೬, **ಹೈದರಾಬಾದ್ ಕರ್ನಾಟಕ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಮರೇಶ ಎನ್., ೧೯೯೮, **ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಅಮರೇಶ ಯತಗಲ್, ೨೦೦೫, **ಕರ್ನಾಟಕ ನಾಯಕ ಅರಸುಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು: ಚಾರಿತ್ರಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಅಶ್ವಥ್ ಡಿ.ಎಸ್., ೨೦೦೧, **ಕೊಪ್ಪಳ: ಒಂದು ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಅಮರೇಶ ಹನುಮಂತ, ೨೦೧೪, **ರಾಯಚೂರು ದೋ-ಅಬ್ ಪ್ರದೇಶ: ಅಧಿಕಾರ ಮತ್ತು ಹೋರಾಟ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಉಮೇಶ ಗುರಿಕಾರ ೨೦೦೭, **ಹೈದರಾಬಾದ್ ಕರ್ನಾಟಕದ ಕುರುಬರ ಚಾರಿತ್ರಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಕೊಟ್ರೇಶ್ ಎಂ., ೨೦೦೮, **ಹೈದರಾಬಾದ್ ಕರ್ನಾಟಕದ ವೈಶ್ಯರ ಜಾನಪದ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ತುಕಾರಾಮ, ೨೦೧೦, **ಸ್ವಾತಂತ್ರ್ಯ ಪೂರ್ವ ಹೈದರಾಬಾದ್ ಕರ್ನಾಟಕದ ಸಾಹಿತ್ಯ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ದೇವರಾಜು ಸಿ.ಬಿ., ೨೦೧೩, **ಹೈದರಾಬಾದ್ ರಾಜ್ಯದ ಸಾಮಾಜಿಕ-ಆರ್ಥಿಕ ಸ್ಥಿತಿಗತಿ ಬೀದರ ಜಿಲ್ಲೆಯ ಒಂದು ಅಧ್ಯಯನ(೧೯೧೫-೧೯೫೬),** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೦. ದೊಡ್ಡನಗೌಡ ಪಾಟೀಲ, ೨೦೦೨, **ಭೌತಿಕ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ: ಒಂದು ಅಧ್ಯಯನ(ಹೈದರಾಬಾದ್ ಕರ್ನಾಟಕ ಪ್ರದೇಶ ಅನುಲಕ್ಷಿಸಿ),** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಬಿದರಿ ಚಂದ್ರಭಾಗಾ, ೨೦೦೭, **ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಮಹಾದೇವಪ್ಪ, ೨೦೧೧, **ಮುದಗಲ್ಲ: ಒಂದು ಸಾಂಸ್ಕೃತಿಕ ಅಧ್ಯಯನ, ಸ್ನಾತಕೋತ್ತರ ಕೇಂದ್ರ ರಾಯಚೂರು,** ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೩. ಬಸವರಾಜ ಸಬರದ, ೧೯೭೬, **ಬೀದರ್ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪. ಮುಸ್ತಾಕ ಅಹಮ್ಮದ್, ೨೦೧೨, **ಮಹಮ್ಮದ್ ಆದಿಲ್‌ಶಾಹಿ ಜೀವನ ಮತ್ತು ಸಾಧನೆಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ರಮೇಶ ಮುಲಗಿ, ೨೦೧೨, **ಹೈದರಾಬಾದ್ ಕರ್ನಾಟಕ ವೀರಶೈವ ಮಠಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ರಮೇಶ ನಾಯಕ, ೨೦೧೪, **ಯಾದಗಿರಿ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಸಂತೋಷಕುಮಾರ ಹೆಚ್.ಬಿ., ೨೦೧೨, **ಹೈದರಾಬಾದ್ ಕರ್ನಾಟಕದಲ್ಲಿ ಸಾಮಾಜಿಕ ಚಳುವಳಿಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಸಿದ್ದಲಿಂಗಪ್ಪ ಕೊಟ್ನೆಕಲ್, ೨೦೧೦, **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೯. ಸುಮನ್, ೨೦೧೨, **ವಸಾಹತುಶಾಹಿ ಕಾಲಘಟ್ಟದ ಕನ್ನಡ ಭೂಪ್ರದೇಶಗಳ ಗ್ಯಾಸೆಟಿಯರ್‌ಗಳ ಚಾರಿತ್ರಿಕ ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಎಂ.ಫಿಲ್.ನಿಬಂಧಗಳು

೧. ಕವಿರತ್ನ ಬಾಬುರಾವ್, ೨೦೦೯, **ಬಹಮನಿ ಕಾಳಗಗಳು**, ಕ.ರಾ.ಸಿ.ಸ್ನಾತಕೋತ್ತರ ಕೇಂದ್ರ, ಬೀದರ್.

೨. ಚನ್ನಬಸಪ್ಪ ಬಿ., ೨೦೦೦, **ದೇವದುರ್ಗ ತಾಲೂಕು: ಒಂದು ಸಾಂಸ್ಕೃತಿಕ ಅಧ್ಯಯನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರಾವಾಡ.

೩. ತಿಪ್ಪಣ್ಣ, ೨೦೧೨, **ಹೈದರಾಬಾದ್ ಸಂಸ್ಥಾನದಲ್ಲಿ ದಿವಾನರಾಗಿ ಮಿರ್ಜಾ ಎಂ. ಇಸ್ಮಾಯಿಲ್**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ನಲ್ಲಾರೆಡ್ಡಿ, ೨೦೦೪, **ದೇವದುರ್ಗ ತಾಲೂಕಿನ ಹಗಲು ವೇಷಗಾರರು, ಸಬಾಲ್ಟರ್ನ್ ಅಧ್ಯಯನ ಹಿನ್ನೆಲೆಯಲ್ಲಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಪ್ರಕಾಶ್ ಬಳ್ಳಾರಿ, ೨೦೧೧, **ಕೊಪ್ಪಳ್ಳ ಜಿಲ್ಲೆಯ ಮೊಹರಂ ಪದಗಳ ಒಂದು ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಬಸವರಾಜ ಮಲ್ಲಪ, ೨೦೧೨, **ಗೋರ್ಟಾ ಹತ್ಯಾಕಾಂಡ**, ಕ.ರಾ.ಸಿ.ಸ್ನಾತಕೋತ್ತರ ಕೇಂದ್ರ, ಬೀದರ

೭. ಮಹೇಶ ಕುಮಾರ ಸಂಕುನೂರ ಎಂ., ೨೦೦೬, **ಗುಲಬರ್ಗಾ ಎಂ.ಎಸ್.ಕೆ.ಮಿಲ್: ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಮಲ್ಲಿಕಾರ್ಜುನ ಸೂಗಪ್ಪ, ೨೦೧೧, **ಕೃಷ್ಣಾ ಮೇಲ್ದಂಡೆ ಯೋಜನೆ: ಒಂದು ಸಮೀಕ್ಷೆ (ರಾಯಚೂರು ಜಿಲ್ಲೆ ನಾರಾಯಣಪುರ ಬಲದಂಡೆ ಕಾಲುವೆಯನ್ನು ಅನುಲಕ್ಷಿಸಿ)** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಯರಿಯಪ್ಪ, ೨೦೦೮, **ರಾಯಚೂರು ಪರಿಸರದ ಕನ್ನಡ-ತೆಲುಗು ದ್ವಿಭಾಷಿಕತೆ, ಸಮಾಜೋ-ಭಾಷಿಕ ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ರವಿ ಗೋವ್ಯ, ೨೦೧೫, **ಯಾದಗಿರಿ ಪರಿಸರದ ಮೊಹರಂ ಪದಗಳ ಅನ್ಯನತೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ರಜನಿಕಾಂತ, ೨೦೦೯, **ದೇವದುರ್ಗ ತಾಲೂಕಿನ ಮಹಿಳಾ ಕೂಲಿಕಾರರು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ರಾಜಶೇಖರ, ೨೦೧೦, **ಚರಿತ್ರ ಲೇಖನಶಾಸ್ತ್ರ ಗುಲಬರ್ಗಾ ಪ್ರದೇಶದ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ವಿಜಯಲಕ್ಷ್ಮಿ, ೨೦೦೬, **ಹಟ್ಟಿ ಚಿನ್ನದ ಗಣಿ, ಚಾರಿತ್ರಿಕ ಹಾಗೂ ಸಮಾಜೋ-ಆರ್ಥಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಶಶಿಕಾಂತ ಬಿಲ್ಲವ, ೨೦೦೭, **ರಾಯಚೂರು ಪ್ರದೇಶದ ಸಾಮಾಜಿಕ ಚಳವಳಿ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಶಶಿಧರ ಮಲ್ಲಪ ೨೦೦೭, **ಕೃಷ್ಣಾನದಿ ಪ್ರವಾಹದಲ್ಲಿ ಮುಳುಗಡೆಯಾದ ಗ್ರಾಮಗಳ ಸಮಾಜೋ-ಆರ್ಥಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಶರಣಪ್ಪ ಉಮಚಗಿ, ೨೦೦೬, **ಹೈದರಾಬಾದ್ ಕರ್ನಾಟಕ ವಿಮೋಚನ ಹೋರಾಟದಲ್ಲಿ ಕೊಪ್ಪಳ ಜಿಲ್ಲೆಯ ಶಿಬಿರಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಶುಭಾ, ೨೦೦೬, **ಸುರಪುರ: ವಿಮೋಚನಾ ಹೋರಾಟ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಸಂತೋಷಕುಮಾರ್, ೨೦೧೨, **ಖಾಜಾ ಬಂದೇನವಾಜ್ ಮತ್ತು ಶರಣಬಸವೇಶ್ವರ ಜಾತ್ರೆಗಳು: ಒಂದು ಸಾಂಸ್ಕೃತಿಕ ಅಧ್ಯಯನ,** ಕನ್ನಡ ವಿಶ್ವವಿದಾಲಯ, ಹಂಪಿ.

೧೯. ಸಿದ್ಧನಗೌಡ ಜೆ.ಜಿ., ೨೦೦೭, **ತುಂಗಭದ್ರ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಸುಭಾಷ ದೊಡ್ಡಮನಿ, ೨೦೦೬, **ಹೈದರಾಬಾದ್ ವಿಮೋಚನ ಆಂದೋಲನದಲ್ಲಿ ಕಲಬುರ್ಗಿ ಜಿಲ್ಲೆ ಶಿಬಿರಗಳ ಪಾತ್ರ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧. ಹನುಮಂತರಾಯ, ೨೦೦೫, **ಗುಲಬರ್ಗಾ ಜಿಲ್ಲೆಯ ರೈತ ಚಳುವಳಿಗಳು: ಚಾರಿತ್ರಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗ್ಯಾಸೆಟಿಯರ್‌ಗಳು

೧. ಅಭಿಶಂಕರ ಕೆ.(ಸಂ), ೧೯೭೦, **ರಾಯಚೂರು ಜಿಲ್ಲೆ ಗ್ಯಾಜಿಟಿಯರ್,** ಮೈಸೂರು ರಾಜ್ಯ ಸರ್ಕಾರ, ಮೈಸೂರು.

೨. ಪಾಟೀಲ್ ಎಂ.ಬಿ.(ಮು.ಸಂ), ೧೯೯೭, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲಬರ್ಗಾ ಜಿಲ್ಲೆ,** ಕರ್ನಾಟಕ ಸರ್ಕಾರ, ಬೆಂಗಳೂರು.

೩. ಭೀಮಶಂಕರ ಕೆ.(ಸಂ), ೧೯೭೬, **ಬೀದರ ಜಿಲ್ಲೆ ಗ್ಯಾಸೆಟಿಯರ್,** ಬೆಂಗಳೂರು.

ವಿಶ್ವಕೋಶಗಳು

೧. ಅರವಿಂದ ಮಾಲಗತ್ತಿ(ಸಂ), ೨೦೦೫, **ಕನ್ನಡ ವಿಷಯ ವಿಶ್ವಕೋಶ ಸಂ.೧,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದಾನಿಲಯ, ಮೈಸೂರು.

೨. ರಾಮಚಂದ್ರೇಗೌಡ ಹಿ.ಶಿ.(ಸಂ), ೨೦೦೭, **ಕನ್ನಡ ವಿಷಯ ವಿಶ್ವಕೋಶ ಸಂ.೨,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. ವಿಜಯ್ ಪೂಣಚ್ಚ ತಂಬಂಡ(ಸಂ), ೨೦೦೧, **ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–೪, ಚರಿತ್ರೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಪುಟಗಳು

೧. ಚಂದ್ರಶೇಖರ ಎಸ್. ಸುರೇಂದ್ರರಾವ್ ಬಿ.(ಸಂ), ರಾಜೇಶ ಹಂ.ಗು(ಸಹಾಯಕ ಸಂಪಾದಕರು), ೨೦೧೬, **ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಸಂಪುಟ ೧ ರಿಂದ ೧೨ ಸಂಪುಟಗಳು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

೨. ನರಸಿಂಹಮೂರ್ತಿ ಎ.ವಿ.(ಪ್ರ.ಸಂ.), ೨೦೦೪, **ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂಪುಟ ೧ ರಿಂದ ೨೫,** ಭಾರತೀಯ ವಿದ್ಯಾಭವನ, ಬೆಂಗಳೂರು.

೩. ವಿಜಯ್ ಪೂಣಚ್ಚ ತಂಬಂಡ(ಪ್ರ.ಸಂ.), ೨೦೧೦, **ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟ ೧ ರಿಂದ ೮ ಸಂಪುಟಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಷೇಕ್ ಅಲಿ ಬಿ.(ಪ್ರ.ಸಂ.) ೧೯೯೭, **ಕರ್ನಾಟಕ ಚರಿತ್ರೆ ಸಂಪುಟ ೧ ರಿಂದ ೭ ಸಂಪುಟ ಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. **ಕರ್ನಾಟಕ ಪರಂಪರೆ ಸಂಪುಟ ೧ ಮತ್ತು ೨, ೨೦೦೬,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ನಿಯತಕಾಲಿಕೆಗಳು

೧. ಇತಿಹಾಸ ದರ್ಪಣ

೨. ಚರಿತ್ರೆ ಅಧ್ಯಯನ

೩. ಹೊಸತು

೪. ಸಮಾಜ ವಿಜ್ಞಾನ

೫. ಅಭಿವೃದ್ಧಿ ಅಧ್ಯಯನ

ದಿನಪತ್ರಿಕೆಗಳು

೧. ಪ್ರಜಾವಾಣಿ

೨. ಉದಯವಾಣಿ

೩. ವಿಜಯ ಕರ್ನಾಟಕ

೪. ಸಂಯುಕ್ತ ಕರ್ನಾಟಕ

೫. ಸುದ್ದಿಮೂಲ–ರಾಯಚೂರು

Primary Sources

Andhra Pradesh State Archives, Hyderabad

Unpublished

1. File No.462/CCCLXII, Confidential, H.E.H. The Nizam's Political Department Mulki Rule, Regulation
2. File No.2606/ee, Constitutional Affairs-Secretariat Department-1939
3. File No.3320/ee, Confidential and Urgent Political Secretary, 1939
4. Judicial Report, 1922
5. Hyderabad Residency Correspondence 1795-1858, Andhra Pradesh Archives, Hyderabad
6. Dafatar-I-Diwani, 1721-1894
7. Hyderabad-ke-Political Waqayat Chahal sala-1839-1879

Published Government Reports

1. Administration Report of His Highness the Nizam`s' Dominions for The year 1294 Fasli.
2. Report on the Administration of Revenue and Allied Departments of H.H.The Nizam`s' Government During the year 1324, Fasli
3. Report on the Administration of H.E.H. The Nizam`s' Dominions, 1354, Fasli
4. Administration Report of the Commerce and Industries Department of His Exalted Highness the Nizam`s' Dominions 1341, Fasli

5. Administrction Report of H.H.The Nizam`s' P.W.D Department
6. Report on the Supplementary Scheme for the water Supply of Gulbarga Town 1350, Fasli
7. Report of the Administration of the Agricultural Market Act, 1344, Fasli
8. Reports of the Tenancy committee 1348, Fasli
9. Reports of the Royal commission on Jagir Administration and Reforms Nizam Government, 1356, Fasli
10. Reports of Public works Allied Departments for H.H.The Nizam`s' 1277 to 1293 Fasli
11. Administration Report of His Exalted Highness the Nizam`s' Public Works Department Irrigation Branch, 1327, Fasli
12. Administration report of His Exalted Highenes the Nizam`s' Public Workes Department Irrigation Branch 1327 Fasli
13. Annual report on the Administration of the Department of Industries and Commerce-1921
14. H.E.H. The Niazm's P.W.Department Administration Report of Public works Department for the year 1344 to 1935
15. Annual Administration Report of the Department of Agriculture for the year Ending 1323 Fasli 1914
16. Tour of His Excellency the Minister in the Raichur and Lingsagur District 1304 Fasli 1895
17. Administration Report of the Public works Departtment H.E.H.The Niam's Government for the year 1350 Fasli 1941
18. Administration Report of His Highness the Nizam's Public Wokrs Department 1323 Fasli 1915
19. Administration Report of the Forest Department in His Highness the Niazm's Dominions 1308 Fasli 1899
20. Annual Administration Report of the Marketing Department H.E.H. the Niazm's Government for 1354-1355 Fasli 1945-1948

21. H.E.H. The Niazm's Government Report on the working of the Department under the Director General of Revenu 1329 Fasli 1915-16

22. Report of the Tenancy Enquiry Committee Government of the Nizam Hyderabad 1940

23. H.E.M.The Nizam's Government Report on the wokring of the Departments under the Revenue Secretariat 1329 Fasli 1918

24. Companion Volume of the Administrative Report 1311 Fasli

25 Report on the Administration of H.E.H. The Niazm's Dominion 1336

26 Agricultural Statistic Estimate of Area and Yield of Principal Crops in Hyderbad State From 1925-26

27 Annual Administration Reports of Agricultural of the H.E.H.The Nizam Dominions for the years 1323 to 1348

28 Annual Report on the Administration of the Hyderbad companies Act IV of 1320-1339 to 1349 Fasli

29 Report on the prags tools corporation Hyderbad

30 Report on the working on the Revenue Department under the Director Genral of Revenue 1323-1336

31. Report on the Revenue Department from 1324 Fasli

32. Report on the Administration of the Court of words H.E.H.The Nizam's Government from 134 to 1357 Fasli

33. Report on the Administration of factories and Boilers Inspection Department from 1334-1357

Acts and Regulation

1. Qanunch Mubarik
2. The Hyderbad Land Acquisition Act No.IX of 1309 Fasli
3. The Hyderabad workmens' compensation Act No.VI of 1349 Fansli
4. Co-operative Societes Act 1375
5. The Hyderbad Land Revenue Act 1310
6. Constitutional Rules of H.E.H.The Nizam's Govrnment

7. Mulki Role Regulation
8. The Hindu Window's Remarriage Act No.I of 1347 Fasli 1938
9. The Maternity Benefit Act VII of 1349 Fasli H.E.M.The Nizam's Dominions
10. Census Act No.III of 1340 (1931 AD) of H.E.M.the Nizam's Dominions
11. The Hyderbad Record of Right Act 1340 Fasli 1936-37
12. The Hyderbad Asami Shikm's Act 1354, 1944-45
13. Government of Hyderbad, The Hyderbad Jagirs(Commutation) Regulation 1349-1949
14. The Hyderbad Revenue Code 1318-1908

Gazetteer

1. Anees Siraj S.(Chief Editor), 2011, **Provincial Series Hyderbad State Gulbarga,** Karnataka Gazetteer Department, Bangalor
2. Anees Siraj S.(Chief Editor), 2011, **Provincial Series Hyderbad State Bidar,** Karnataka Gazetteer Department, Bangalor
3. Anees Siraj S.(Chief Editor), 2011, **Provincial Series Hyderbad State Raichur,** Karnataka Gazetteer Department, Bangalor
4. Mazhar Husain, 1940, **H.E.H.The Nizam's Government Hyderbad District Gazetteer Gulbarga 1340-1345 Fasli,** Hyderabad Deccan Government Central Press
5. Mazhar Husain, 1940, **H.E.H.The Nizam's Government Hyderbad District Gazetteer Bidar 1340-1345 Fasli,** Hyderabad Deccan Government Central Press
6. Mazhar Husain, 1940, **H.E.H.The Nizam's Government Hyderbad District Gazetteer Raichur 1340-1345 Fasli,** Hyderabad Deccan Government Central Press

Census Reports

1. Mazahar Husain, 1945, **Census of India 1941 Volume XXI, H.E.H.The Nizam's Dominions Hyderbad State Part I and II,** Government Central Press, Hyderbad

2. Divtia M.V., Census of India 1951, **Hyderbad State District Census Hand Book, Raichur District Part II**

3. Gulam Ahmad Khan, 1931, **Cenus of India, Vol.XXII, H.E.H. The Nizams Dominions Hyderbad State, Part I and II,** Government Central Press Hyderbad

Secondary Sources

1. Alhoyut Khodwer, 1947, **The Peoples Movement in Hyderbad,** Poon Publisher, Bombay.

2. AJit Niyogi K., 1979, **The Paramount Power and Princey States of India 1858-1881,** Calcutta

3. Aloka Parasher Sen, 1993, **Social and Economic History of Early Deccan Some Interpretations,** Manohar New Delhi

4. Alam Shab Manzoor, 1965, **Hyderbad-Secunderabad: A Study in Urban Geograpy,** Osmania University Press, Hyderbad

5. Abmad Raza Khan, 1982, **Subha of Bihar under the Mughals 1562-1707,** Delhi

6. Bawa V.K., 1991, **The Last Nizams: The Life and Times of Mir Osman Ali khan,** Delhi

7. Bawa V.K., 1986, **The Nizam between Mugals and British: Hyderbad under Salarjung,** Delhi

8. Benichou Lucian D., 2000, **Form Autocracy to Integration Political Development in Hyderbad State 1936-1948,** Hyderbad

9. Bhaskar Rao, 1985, **Agrarian and Industrial Relational in Hyderbad State,** Delhi

10. Bilgrami Syed Hussain, 1970, **A Memore of Sir Salarjung,** Bombay

11. Briggs H.G., 1985, **Niazm: History and Relations with the British Government Vol.2,** Delhi

12. Bhanumathi Ranga Rao S., 1992, **Land Revenue Administration in the Nizams Dominions 1853-1848,** Osmania University Press, Hyderbad

13. Bharucha S.M., 1937, **Agricultural Indebtedness in the H.E.H.The Nizam's Dominions,** Hyderbad

14. Bharati Ray, 1988, **Hyderbad and British Paramountey 1856-1883,** Oxford University Press, Bombay

15. Bari S.A., 1992, **History Historians and Historiography in South India,** Kuvempu Universty, Shimogha
16. Bayly C.A., 1996, **Empire and Information: Intelligenee Gathering and Social Communication in India 1780-1870,** Cambridge University Press, Bombay
17. Bipan Chandra, 2013, **History of Modern India,** Orient Blackswan Private Limited, New Delhi
18. Chhabra Harisharan, 1954, **Hyderbad Personalities,** New Publishers, Delhi
19. Chaturved B.N., 1956, **Hyderbad State(A Regional Economic Survey),** Hyderbad
20. Chiragh Ali, 1886, **Hyderbad Under Sir SalarJung, Vol.3,** Education Soceity Press, Bombay
21. Dhengle B.S., 1998, **Hyderabad Freedom Struggle: The Role of Marathwad,** Kalpan Prakashan, Nanded
22. Eric Lewis Beverley, 2016, **Hyderabad, British India and The World Muslim Networks and Minor Sovereignty 1850-1950,** Combridge University, Delhi
23. Fathulla Khan H., 1935, **A History of Administrative Reforms in Hyderbad State,** Secunderabad
24. Gurmukh Nihal Singh, 1930, **Indian States and British India,** Their Future Relational, Banares
25. Hastings, 1885, **The Nizam: Our Faithful Ally,** London
26. Habib Irfan, 1963, **The Agrarian System of Moghal India, 1536-1707,** Bombay
27. Harbans Mukhia, 2004, **The Mughals of India,** London
28. Hiroshi Fukazawa, 1998, **The Medieval Deccan Peasants Social System and States Sixteenth to Eighteenth Centuries,** Oxford University Press, Bomby
29. Ishwari Prasad 1986, **A Short History of Muslim Rule in India,** The Indian Press Ltd., Allahabad
30. Jayaram R., 1998, **Adminstration System Under the Nizams 1853-1935,** Ultra Publications, Bangalore
31. Jawad Razvi S.M., 1998, **Political Awakening in Hyderbad Role of Youth and Students 1936-1956,** Visalandhra Publishing, Hyderbad
32. Janardhan Rao Desai, 1948, **The Hyderbad Reforms,** Hyderbad
33. Krishnaswamy Mudiraj K., 1934, **Pictoral Hyderabad, Vol.2,** Hyderbad

34. Khusro A.M., 1958, **Economic and Social Effects of Jagirdari Abolition and Land Reforms in Hyderbad,** Osmania University Press, Hyderbad
35. Kesava Iyangar S., 1949, **Rural Economic Enguiries in Hyderbad State,** Hyderbad
36. Kate P.V., 1987, **Marathwada Under The Nizams 1724-1948,** Mital Publications, Delhi
37. Khan Yusuf Hussain, 1980, **Farmans and Sanada of Deccan Sultans,** Andhra Pradesh State Archives, Hyderbad
38. Khalidi Omar, 2008, **A Guide to Architecture in Hyderbad, Deccan India,** Combridge
39. Khalidi Oma(Ed), 1991, **Memories of Cyril Fories: People Soceity and Railroadi in Hyderbad,** Manohar, New Delhi
40. Krishnaswami Aiyangar, 1991, **South India and Her Muhammadan Invaders,** Asain Edcuational Services, New Delhi
41. Munshi K.M., 1957, **The end of an Era Hyderabad Memories,** Bombay
42. Muttalib M.A., 1988, **Administration of Justice Under the Nizams 1724-1948,** State Archives Andhra Pradesh
43. Munis Faruqui D., 2012, **The Princes of the Mughal Empire,** Cambridge University Press, Delhi
44. Muzaffar Alan, Sanjay Subrahamanyam, 2001, **Writing the Mugal World: Studies in Political Culture,** Orients Blackswan Private Ltd. Delhi
45. Nayeem M.A., 1970, **History of Postal Administration in Hyderbad,** Bright Publishers, Hyderabad
46. Nayeem M.A., 1994, **Mughal Administration of Deccan Under Nizamul Mulk Asaf Jah 1720-48,** Saico Publishing House, Bombay
47. Nayeem M.A., 2010, **Nizam Palaces,** Hyderbad Publisher, Hyderbad
48. Qureshi Anwar Iqbal, 1947, **The Economics Development of Hyderbad-Rural Economy, Vol.2,** G.S.Press, Madras
49. Regani Sarojini, 1963, **Nizam-British Relation 1724-1847,** Secunderabad Swarayya Printing
50. Regani Sarojini, 1972, **Highlights of Freedom Movement in Andhra Pradesh,** Hyderbad

51. Ramakrishna Reddy V., 1987, **Economic History of Hyderabad State Warangal Subha: 1911-1950**, Gian Publishing House, Delhi

52. Rajendra Prasad, 1984, **The Asif Jahs of Hyderbad-Their Rise and Decline,** Vikas Publishing House Privite Litd, Delhi

53. Raghunadha Rao, 2004, **History and Culture of Andhra Pradesh,** Sterling Publishers Private Litd.

54. Ramesan N.(Ed), 1966, **Freedom Struggle in Hyderabad State, Vol.4,** 1921-1947, Hyderabad

55. Ranjana Kaul, 1998, **Constitutional Development in the Indian Princely State,** Bombay

56. Rama Rao M., 1953, **Glimpses of Deccan History,** Culcutta

57. Rao C.V.S., 1951, **A Review of Hyderabad Finance,** Government Press, Hyderbad

58. Raghavender Rao(Ed), 1996, **Misrule of The Nizam,** Madras

59. Richards John F.(Ed), 2000, **The Imperial Monetary System of Mughal India,** Oxford University Press, Delhi

60. Sheela Raj, 1987, **Mediaevlism to Modernism Socio-Economic and Cultural History of Hyderbad 1869-1911,** Popular Prakashan, Bombay

61. Salma Ahmed Farooqui, 2008, **Multicutural Dimensions of Medieval Deccan,** Sundeep Prakashna, New Delhi

62. Seshan K.S.S.(Ed), 1993, **Hyderbad-400 Saga of City, Association of British Council Scholars,** Andhra Pradesh, Hyderbad

63. Satish Chandra, 2002, **Parties and Politics at The Mughal Court 1707-1740,** Oxford University Press, Delhi

64. Sahu A.C., 1985, **Aspect of British Trade Policy in India,** New Delhi

65. Shalini Rajinish, Chay Dewangkar, Sangeeta Kattimani, 2011, **Encoleews Growth, Artical 371 in Hyderbad Karnataka Region,** Prasaranga, Gulbarga Universtiy, Gulbarga

66. Setu Madhava Rao Pagadi, 1963, **Eighteeth Century** Deccan, Bombay

67. Thomas Trantman R.(Ed), 2009, **The Madras School of Orientalism Priducing Knowledge in Colonial South India,** Oxford University, New Delhi

68. Uma Joseph T. 2006, **Accession of Hyderbad: The Inside Story,** Sandeep Prakashan, Delhi

69. Vaikuntham Y., 2002, **State-Economy and Social Transformation Hyderbad State 1724-1948,** Manohar
70. Vaikuntham Y., 2004, **Studies in Socio-Economic and Political History: Hyderbad State,** Hyderbad
71. Vasant Kumar Bawa, 1996, **Hyderbad Under Salar Jung,** Chand and Comany Ltd, New Delhi
72. Yusuf Husain, 1986, **The First Niazm: The Life and Times of Nizam Mulk Asaf Jah I,** Asia Publising House, Bombay
73. Yar Jung Mendi, 1937, **Economic Life of Hyderbasd,** Hyderbad
74. Yazdani Zubaidi, 1976, **Hyderabad during the Residency of Henry Russel 1811-1820: A Case Study of the Subsidiary Alliance System,** Oxford
75. Yazdani, 1947, **Bidar its History Monuments**, Oxford University, London
76. Yazdani, 1992, **The Early History of The Deccan, Part VIII-IX,** Oriental Books, New Delhi
77. Zakia Khanum Ansari, 1998, **Some Fuedatory families of Medieval Karnataka, A Study,** Shrahari Prakashan, Dharwad

Ph.D and M.Phil Thesis

Ph.D Thesis

1. Asgher Ali Ansari, 1971, **The Relations Between South Arabia and The Deccan,** Osmania University, Hyderbad
2. Bhaskara Rao, 1983, **Agrarian and Industrial Relations in Hyderbad State,** Kakatiya University, Warangal
3. Bhimashankar R., 2012, **The Role of Dalit Freedom Fighnters in Hyderbad,** Gulbarga University, Gulbarga
4. Bhanumathi, 1980, **The Development of Local Government in The Nizam's Dominions 1809-1948,** Osmania University, Hyderbad
5. Krishna Penta, 2001, **Social Reform Movement in Hyderbad State: Contribution of Ramaswamy**, Osmania University, Hyderbad
6. Laxma Reddy, 1996, **Growth of Urbanisation in Hyderbad State 1891-1950,** Osmania University, Hyderbad
7. Malikarjun D., 2013, **Socio-Culture Ressainance in Hyderbad Karnataka,** Gulbarga Universtiy, Gulbarga

8. Manjual B., Chincholi, 2005, **Depressed Classes in Hyderbad Karnataka Area under Nizam's Dominion 1724-1948(Published),** Gulbarga University, Gulbarga
9. Narayan B.K., 1958, **The Economic Development of The Hyderbad State,** Mysore University, Mysore
10. Nagabushan Gouda, 1999, **Princly State of Hyderbad and Mysore: Political Movement for Intergration in to the Union and The State,** Gulbarga Univesity, Gulbarga
11. Prabhat Nain, 1992, **Freedom Movment in Hyderbad Karnataka Area,** Gulbarga University, Gulbarga
12. Ratna M., 1960, **Co-oparative Movement in the Hyderbad State,** Mysore University Mysore
13. Raja M., 2006, **Freedom Fighters in Bidar District,** Gulbarga University, Gulbarga
14. Venkat Rao Palati, 2002, **Role of Freedom Fighters in Bidar District,** Gulbarga University, Gulbarga
15. Vinod M., 2008, **Police action and Merger of Hyderbad Karnatka State in to Indian Union,** Gulbarga University, Gulbarga

M.Phil Thesis

1. Basavaraj M., 2004, **History of Surapur Raja Venkatappa Nayak,** Gulbarga University, Gulbarga
2. Geeta B.Yadrami, 2003, **Profile of Sri Veerendra Patil,** Gulbarga University, Gulbarga
3. Praveen Manik, 2006, **Hsitorical Study of Bidar City,** Gulbarga University, Gulbarga
4. Majunal Dandin, 2010, **Life and Achievements of Mir Usaman Ali Khan,** Gulbarga University, Gulbarga
5. Suman Bai Sinde, 2001, **Arya Samaj Movement in Hyderbad Karntaka,** Gulbarga University, Gulbarga
6. Vinod Muktedar M., 2000, **Profile of Jagannath Rao Chandarki,** Gulbarga University, Gulbarga

Journal and Proceedings


1. Proceedings of Indian History Congress
2. South Indian History Congress Proceedings
3. Proceedings of Karnataka History Congress
4. Andhra Pradesh History Congress Proceedings
5. Paradigms in Indian History
6. Studies in Indian History and Culture
7. Itihas Journal
8. Quarterly Journal of the Mythic Society
9. Glimpses of our pasts Historical Researchs

೨. ನಕಾಶೆಗಳು


ನಿಜಾಮನ ಕಾಲದ ಹೈದರಾಬಾದ ಸಂಸ್ಥಾನದ ನಕ್ಷೆ.



ನಿಜಾಮರ ಕಾಲದ ಹೈದರಾಬಾದ್ ಸಂಸ್ಥಾನದ ಜಿಲ್ಲೆಗಳ ನಕ್ಷೆ



ನಿಜಾಮ್ ಕಾಲದ ಹೈದರಾಬಾದ ಕರ್ನಾಟಕದ ನಕ್ಷೆ



ಕರ್ನಾಟಕ ರಾಜ್ಯದ ನಕ್ಷೆ



೩. ಛಾಯಾಚಿತ್ರಗಳು

ಹೈದರಾಬಾದ್ ಸಂಸ್ಥಾನದ ಆಳ್ವಿಕೆ ಮಾಡಿದ ನಿಜಾಮರು



ಮೀರ್ ಕಮುರೋದ್ದಿನ್ ಕಿಲಿಚಖಾನ್ (೧೭೨೪-೧೭೪೮)



ನವಾಬ್ ನಿಜಾಮ್ ಅಲಿಖಾನ್ (೧೭೬೧-೧೮೦೩)



ನವಾಬ್ ಸಿಕಂದರ್ ಬಹದ್ದೂರ್ (೧೮೦೪-೧೮೨೮)



ನಾಸಿರುದ್ದೌಲ್ ಬಹದ್ದೂರ್ (೧೮೨೯-೧೮೫೭)




ಅಫಜುಲುದ್ದೌಲ್ ಬಹದ್ದೂರ್ (೧೮೫೭-೧೮೬೯)



ಮೀರ್ ಮೆಹಬೂಬ್ ಅಲಿಖಾನ್ (೧೮೬೯-೧೯೧೧)



ಮೀರ್ ಉಸ್ಮಾನ್ ಅಲಿಖಾನ್ (೧೯೧೧-೧೯೪೮)



ನಿಜಾಮ್ ಆಳ್ವಿಕೆಯ ಲಾಂಛನ



ನಿಜಾಮ್ ಆಡಳಿತದ ಧ್ವಜ



ನಿಜಾಮ್ ಆಳ್ವಿಕೆಯ ಬೆಳ್ಳಿಹಬ್ಬದ ಸವಿನೆನಪಿನ ಸ್ಟ್ಯಾಂಪ್



ಹೈದರಾಬಾದನಲ್ಲಿರುವ ನಿಜಾಮ್ ಚೌಮಲ್ ಮಹಲ್ ದರ್ಬಾರ್ ಹಾಲ್



ಹೈದರಾಬಾದನಲ್ಲಿರುವ ನಿಜಾಮ್ ಆಡಳಿತ ಕಛೇರಿ



ಹೈದರಾಬಾದನಲ್ಲಿರುವ ನಿಜಾಮ್ ಚೌಮಲ್ ಮಹಲ್ ಆಡಳಿತ ಕಛೇರಿ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಆಡಳಿತ ಕಛೇರಿ



ಗುಲಬರ್ಗಾ: ನಿಜಾಮ್ ಕಾಲದ ಆಡಳಿತ ಕಛೇರಿ



ಲಿಂಗಸಗೂರು: ನಿಜಾಮ್ ಕಾಲದ ನೂರಬಂದು ಮಹಲ್ ಆಡಳಿತ ಕಛೇರಿ



ರಾಯಚೂರು: ನಿಜಾಮ್ ಕಾಲದ ಸಾತ್ ಆಡಳಿತ ಕಛೇರಿ



ರಾಯಚೂರು: ನಿಜಾಮ್ ಕಾಲದ ಆಸ್ಪತ್ರೆ



ರಾಯಚೂರು: ನಿಜಾಮ್ ಕಾಲದ ಆಸ್ಪತ್ರೆ



ಗುಲಬರ್ಗಾ: ನಿಜಾಮ್ ಕಾಲದ ಅತಿಥಿಗೃಹ

ಗುಲಬರ್ಗಾದಲ್ಲಿನ ನಿಜಾಮ್ ಕಾಲದ ಕಾರಾಗೃಹ



ಗುಲಬರ್ಗಾದಲ್ಲಿನ ನಿಜಾಮ್ ಕಾಲದ ಕಾರಾಗೃಹ



ಗುಲಬರ್ಗಾದಲ್ಲಿನ ನಿಜಾಮ್ ಕಾಲದ ಕಾರಾಗೃಹದಲ್ಲಿನ
ಖೈದಿಗಳಿಗೆ ಕುಡಿಯುವ ನೀರಿನ ಬಾವಿ



ಗುಲಬರ್ಗಾದಲ್ಲಿನ ನಿಜಾಮ್ ಕಾಲದ ಕಾರಾಗೃಹದಲ್ಲಿನ ಖೈದಿಗಳ ಕೊಠಡಿ

ನಿಜಾಮ್ ಕಾಲದ ನಾಣ್ಯಗಳು



ಒಂದು ಆಣೆ ನಾಣ್ಯ



ಎರಡು ಆಣೆ ನಾಣ್ಯ



ಒಂದು ರೂಪಾಯಿ ನಾಣ್ಯ

ನಿಜಾಮ್ ಕಾಲದ ನೋಟುಗಳು



ಒಂದು ರೂಪಾಯಿ ನೋಟು



ಒಂದು ರೂಪಾಯಿ ನೋಟು



ಒಂದುನೂರು ರೂಪಾಯಿ ನೋಟು


ನಿಜಾಮ್ ಕಾಲದ ಮಾರುಕಟ್ಟೆಗಳು



ರಾಯಚೂರಿನಲ್ಲಿನ ನಿಜಾಮ್ ಕಾಲದ ಉಸ್ಮಾನ್ ಸಬ್ಜಿ ಮಾರುಕಟ್ಟೆ



ರಾಯಚೂರಿನಲ್ಲಿನ ನಿಜಾಮ್ ಕಾಲದ ಉಸ್ಮಾನ್ ಸಬ್ಜಿ ಮಾರುಕಟ್ಟೆ ಒಳಾಂಗಣ



ರಾಯಚೂರಿನಲ್ಲಿನ ನಿಜಾಮ್ ಕಾಲದ ಮುಕರಮ್ ಗಂಜ್

ಹೈದರಾಬಾದ್ ಕರ್ನಾಟಕ ನಿಜಾಮ್ ಕಾಲದ ಕಟ್ಟಡಗಳು



ಗುಲಬರ್ಗಾ: ನಿಜಾಮ್ ಕಾಲದ ಎಂ.ಎಸ್.ಕೆ. ಮಿಲ್



ಕುರಕೋಟಿ: ನಿಜಾಮ್ ಕಾಲದ ರಸ್ತೆ ಸೇತುವೆ



ಲಿಂಗಸುಗೂರು: ನಿಜಾಮ್ ಕಾಲದಲ್ಲಿನ ಕುಡಿಯುವ ನಿರಿನ ಬಾವಿ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ನಿಜಾಮ್ ಕಾಲದ ಕಟ್ಟಡಗಳು



ಬೀದರ್: ನಿಜಾಮ್ ಕಾಲದ ಇಂಜಿನಿಯರ್ ಕಛೇರಿ



ಬೀದರ್: ನಿಜಾಮ್ ಕಾಲದ ಆಸ್ಪತ್ರೆ



ಬೀದರ್: ನಿಜಾಮ್ ಕಾಲದ ಪೋಲಿಸ್ ಕಛೇರಿ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಸೌಹಾರ್ದತೆ ಮೂಡಿಸುವ ಸ್ಥಳಗಳು



ರಾಯಚೂರಿನಲ್ಲಿ ಉಸ್ಮಾನ್ ಅಲಿಖಾನ್ ಕಟ್ಟಿಸಿದ ಉಸ್ಮಾನ್ ಮಸಿದಿ




ಗುಲಬರ್ಗಾದಲ್ಲಿನ ಶ್ರೀ ಶರಣಬಸವೇಶ್ವರ ದೇವಾಲಯ



ಗುಲಬರ್ಗಾದಲ್ಲಿನ ಖಾಜಾಬಂದೇ ನವಾಜ್ ದರ್ಗಾ

೪. ನಿಜಾಮ್‌ರ ಪತ್ರಗಳು



Letter of John Macpherson, the Governor General, dated 24th Rajab, 1200 H/23rd May, 1786 A.D. addressed to Mir Nizam Ali Khan, Nizam the II. The Governor General has forwarded a copy of the letter sent to the Peshwa and assures the Nizam that the terms of the treaty with Rao Pandit Pardhan, would not be concluded until consultations are made between the Nizam and the authorities of the Company.


Calcutta

13. March 1884

My dear Nizam,

Mr Cordery will already have told you with what deep and sincere regret I learnt that Your Highness had been attacked with so dangerous an illness as the cholera. This sad intelligence caused me the greatest anxiety and it was with the most lively feelings of pleasure that I received after a few days the news that you

The first page of the letter of Lord Ripon, Viceroy and Governor General of India, dated 3rd March, 1884 A.D. addressed to Nawab Mir Mahboob Ali Khan, Nizam the VI about Nizam's dangerous illness from Cholera and recovery from it. Ripon writes that he is most thankful to God for having saved the life of Nizam which is so valuable to the State.


Indore Palace
24th January 1891

My dear Friend,
I beg to send herewith a bag containing sugared Tilli Seeds and request you will kindly accept it and taste the contents of the same in honor

Letter of Shivaji Rao Holkar dated 24th January, 1891 A.D. addressed to Mir Mahboob Ali Khan, Nizam the VI requesting him to accept the bag containing sugared tilli seeds and taste the contents of the same in honour of makar Sankrant festival.

کنگ کوٹھی

۱۵

فرمان

بملاحظہ :- عرضداشت صدر اعظم معروضہ یکم محرم الحرام ۱۳۳۹ھ جو اجنٹہ کے تصاویر کی حفاظت و درستی کی نسبت ہے -

حکم :- صدر اعظم و صدر المہام فینانس کی رائے مناسب ہے حسبۂ تصاویر مذکور کی درستی و تحفظ کے متعلق تجاویز پیش کرنے کے لئے اٹلی کے ماہر فن پروفیسر سیچونی بشروط محولہ عرضداشت (۸) ماہ کے لئے طلب کئے جائیں -

۲ محرم الحرام ۱۳۳۹ھ - یکشنبہ

Farman dated Ist Muharram, 1339 H/3rd October, 1920 A.D. - order to invite Professor Cecconi, an Italian expert for a period of eight months to submit proposals for repair and preservation of "Ajanta" paintings.

کنگ کوٹھی

مدار المہام سالار جنگ بہادر

تمہاری عرضداشت کے معروضہ امور کے مطابق مبلغ ایک لاکھ روپیہ کلدار بابتہ چندہ لیڈی ہارڈنگ میڈیکل کالج فار ویمن "دہلی" شملہ کے بنک میں جمع کرا کے اس کی اطلاع ریذیڈنٹ کو بذریعہ تار دیدی جائے۔

۸ رجب المرجب ۱۳۳۱ھ شنبہ

Farman dated 8th Rajab, 1331 H/14th June, 1913 A.D. granting Rs. One lakh for Lady Hardinge Medical College for Women, Delhi. It is ordered that after depositing the donation in Shimla Bank, the Resident should be informed through a telegram.

Shanti Nikitan,
Bolpur.
Jan. 9. 1918.

Dear Sir,

I have long been waiting for the day when, freed from the shackle of a foreign language, our education becomes naturally accessible to all our people. As it is our countrymen are being punished for the original sin of being born to their mother tongue. They are deprived of their opportunity of higher education because of an accident of which they must not have cause to be ashamed or sorry. So long as the present condition prevails in India there can be no hope of our country ever finding its true place in the commonwealth of culture.

It is a problem for the solution of which we look to our Native States and it gives me great joy to know that your State proposes to found a university in which instructions are to be given through the medium of Urdu. It is needless to say that your scheme has my fullest apprevation, especially, as I know, that your example will be of great help to those, outside your State, who cry in the wilderness despised by the prudent. The only sentence to which I can take objection in the Resolution is the one describing your proposed University as "obviously of the nature of experiment." Your institution must not be handicapped with any the least doubt in the beginning of its career, and you must be fully determined to lead it through difficulties and failures to ultimate fulfilment. Our faith has to be strong because our obstacles are great.

Yours sincerely,
Sd. Rabindranath Tagore.

Letter of Rabindranath Tagore dated 9th January, 1918 A.D., congratulating Sir Akbar Hyderi, the then Prime Minister of the State, on the proposal of imparting instructions in the Osmania University through the medium of Urdu.

فرمان

بملاحظہ:- عرضداشت صیغہ تعلیمات معروضہ ۲۴- ربیع الثانی شریف سنہ ۱۳۵۱ھ جو پونہ کے بھنڈارکر اورینٹل
ریسرچ انسٹیٹیوٹ کی امداد کی نسبت ہے۔

حکم:- کونسل کی رائے مناسب ہے حسبہٗ مذکور انسٹیٹیوٹ مین ایک گسٹ ہاؤس تعمیر کرنے کیلئے جو
میرے نام سے موسوم ہوگا (یعنے نظام گسٹ ہاؤس) پچیس ہزار روپیہ (۲۵۰۰۰) کلدار
یکمشت دئے جائین اور مہابھارت کی اشاعت کے لئے دس سال تک ایکہزار روپیہ (۱۰۰۰)
کلدار سالانہ کی امداد دی جائے۔

۴- جمادی الاول سنہ ۱۳۵۱ھ

Farman dated 4th Jamadi I, 1351 H/6th September, 1932 A.D. sanctioning Rs. twenty five thousand to Bhandarkar Oriental Research Institute, Poona for the construction of a guest house which will be named as Nizam Guest House. It is also ordered to release financial aid of Rs. one thousand per annum for a period of ten years for the publication of Mahabharat by the said institution.

کنگ کوٹھی

حکم

بملاحظہ: — عرضداشت صیغہ فینانس معروضہ ۲۴ رجب المرجب ۱۳۳۵ھ جو بنگلور کے
انڈین انسٹیٹوٹ آف سائنس کو چندہ دینے کے نسبت ہے ۔

حکم: — معین المہام فینانس کی رائے مناسب ہے حسبہ بنگلور کے انڈین انسٹیٹوٹ آف
سائنس کو جہاں اسوقت حیدرآباد کے طلبہ تعلیم پارہے ہیں تین سال تک ہماری گورنمنٹ کیطرف سے
دس ہزار روپیہ سالانہ چندہ دیا جائے (غالباً دس ہزار روپیہ کلدار مراد ہے) ۔

۲۵ رجب المرجب ۱۳۳۵ھ ۔ پنجشنبہ

۲۶۴

Farman dated 25th Rajab, 1335 H/17th May, 1917 A.D. granting Rs.ten thousand per annum for a period of three years to Indian Institute of Bangalore, wherein some students of Hyderabad were then studying.

پولیٹیکل ڈپارٹمنٹ

نقل روبکاری

حکم

خلاصہ: - عرضداشت پولیٹیکل ڈپارٹمنٹ مورخہ ۴ شعبان المعظم ۱۳۳۳ھ جس میں گوکھلے میموریل فنڈ کمیٹی کی
درخواست چندہ دربارہ ارسال زر عرض کی گئی ہے -

حکم: - سر فیروز شاہ مہتہ بہادر اور مسٹر گوکھلے کی متفقہ رائے مناسب ہے کہ باہر کی کسی یادگار میں چندہ دینے کے
عوض خاص ممالک محروسہ میں گوکھلے میموریل اسکالرشپ دینے سے ایک وظیفہ تعلیمی جاری کیا جائے چنانچہ
اسکی اطلاع مسٹر جہانگیر بہمن جی جیٹ کو دیکر لکھا جائے کہ وجوہ مذکورہ سے اونکی استدعا حسب منشا چندہ
دیا جانا متعذر ہے - (تحریر دستخط مبارک اعلیحضرت ظلہ)

۴ شعبان المعظم ۱۳۳۳ھ - جمعہ


(دستخط) مولوی احمد حسین صاحب

Farman dated 4th Shaban, 1333 H/18th June, 1915 A.D. - order to establish an educational scholarship in the state in the name of Gokhale Memorial Scholarship instead of sending any donation for the outside memorial. It is therefore ordered that Mr. Jahangir Bahmanji, should be informed that the donation cannot be given for the above mentioned reasons.

فرمان

ملاحظہ: ۔ عرضداشت صیغۂ عدالت وامور عامہ معروضہ ۲۹ رجب المرجب ۱۳۵۸ھ جو خالصہ شدہ سمستان
کولاس کے متعلقہ دیول اننت گیری کی معاش کے بقایا کے ادائی کی نسبت ہے ۔
حکم: ۔ کونسل کی رائے کے مطابق دیول کی معاش کے بقایا (۲۰۴۹۵ [illegible]) کی دو ثلث رقم تعمیر و ترمیم
دیول کیلئے محفوظ کر کے بقیہ ایک ثلث پشکرداس کو ایصال کیاجائے جو شرط خدمت ادا کر رہا ہے
۴ شعبان المعظم ۱۳۵۸ھ

Farman dated 4th Shaban, 1358 H/18th September, 1939 A.D. granting payment of arrears of Rs.20,495/-, to Anantagiri and Balaji temples, in Nanded district (now in Maharashtra State). 2/3 of this amount was ear-marked for repairs and maintenance of the temples and 1/3 for Pushkardas, priest of the temples.



ಚರಿತ್ರೆ ವಿಭಾಗ